1953

ಸಾಹಿತ್ಯ ಸೇವಾ ಮಂದಿರ

ಹಬ್ಬಿದ ಬಳ್ಳಿ

ಸಾಮಾಜಿಕ ಕಾದಂಬರಿ

ಕೃಷ್ಣಮೂರ್ತಿ ಪುರಾಣಿಕ

ಸಾಹಿತ್ಯ ಸೇವಾ ಮಂದಿರ
ಗೋಕಾಕ

ಹಬ್ಬಿದ ಬಳ್ಳಿ

ಕೃಷ್ಣಮೂರ್ತಿ ಪುರಾಣಿಕ

ಸಾಹಿತ್ಯ ಸೇವಾ ಮಂದಿರ
ಗೋಕಾಕ

HABBIDA BAḶḶI—A Novel. By Krishnamurti Puranika. Published by Sahitya Seva Mandira, Gokak (Dist. Belgaum). Third Printing with corrections, 1968.

ಪ್ರಥಮ ಮುದ್ರಣ : ೧೯೫೩
ದ್ವಿತೀಯ ಮುದ್ರಣ : ೧೯೬೪
ತಿದ್ದಿದ ತೃತೀಯ ಮುದ್ರಣ : ೧೯೬೮

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಅರಿಕೆ

ಕಾದಂಬರಿಯು ಕಥಾಪ್ರಪಂಚವು ವಿಸ್ತಾರವಾದುದು, ಬಹುಮುಖ ವಾದುದು. ಅಂತೆಯೇ ವೈವಿಧ್ಯಪೂರ್ಣವಾಗಿರುವುದು. ಈ ಸಾಹಿತ್ಯ ಪ್ರಭೇದವು ಜೀವನದ ಸಂಪರ್ಕದಿಂದಲೇ ಬೆಳೆಯಬೇಕಾಗಿರುವುದರಿಂದಲೂ, ಮಾನವ ಜೀವನದಲ್ಲಿ ವಿವಿಧತೆಯು ಹಾಸು-ಹೊಕ್ಕಾಗಿರುವುದರಿಂದಲೂ ವೈವಿಧ್ಯವು ಕಾದಂಬರಿಯ ಜೀವ-ಜೀವಾಳಾಗಿ ಕಂಗೊಳಿಸುವುದು. ಇದರಲ್ಲಿ ಒಂದು ಜೀವಿಯ ಜೀವಮಾನದಲ್ಲಿಯ ಕೆಲವು ಸಮಸ್ಯೆಗಳ ಚರ್ಚೆ ನಡೆಯ ಬಹುದು. ಇಲ್ಲವೆ ಒಂದು ಜೀವನದ ಸಮಗ್ರ ಚಿತ್ರವೇ ರೂಪುಗೊಂಡು ಅರಳ ಬಹುದು. ಕಥೆಯ ಪರಿಸರವು ವಿಸ್ತಾರವಾಗಿದ್ದರೆ ಅದು ಒಂದು ತಲೆಮಾರಿ ನಲ್ಲಿಯೇ ಮುಗಿಯದೆ ಮೂರು ನಾಲ್ಕು ತಲೆಮಾರುಗಳಲ್ಲಿಯೂ ಬಳಸಿ ನಿಲ್ಲಬಹುದು. ಯೋಗ್ಯವಾದ ಸಾಮಾಜಿಕ ಹಿನ್ನೆಲೆ, ರಾಜಕೀಯ ಪ್ರಭಾವ, ತುಲನಾತ್ಮಕವಾದ ನಿರೂಪಣೆಗಳಿಂದ ಒಂದುಗೂಡಿದ ಕಥಾಸೃಷ್ಟಿಯು ಬರಹಗಾರನ ದೃಷ್ಟಿ-ದರ್ಶನಗಳನ್ನು ಪಡೆದುಕೊಂಡು, ಪರಿಪುಷ್ಟಿಯನ್ನು ಹೊಂದಿ ಕಲೆಯ ಹನಿಯಾಗಿ ಪರಿಣಮಿಸುವುದು.

ನಾಡಿನ ಪ್ರಗತಿಯಲ್ಲಿ ವ್ಯಕ್ತಿ ಮಾಡುವ ಕೆಲಸ ಬಹಳ ದೊಡ್ಡದು. ಸಮಾಜದ ಪ್ರಗತಿಗೆ ಸಮಾಜನಿಷ್ಠ ವ್ಯಕ್ತಿಗಳೇ ಕಾರಣರು. ಈ ಪ್ರಗತಿ ಕಾರ್ಯವು ಕ್ರಾಂತಿಖಡ್ಗವನ್ನು ಝಳಪಿಸಿ, ಒಮ್ಮೆಲೇ ಮಿಂಚಿನಂತೆ ಹೊಳೆಯ ಲಾರದು. ಅದು ಸಾವಧಾನವಾಗಿ, ದೃಢತೆಯಿಂದ ಸಾಗಬೇಕಾಗುವುದು. ಇದು ಸಾಮಾಜಿಕ ವ್ಯಕ್ತಿಗಳ ದೃಢತೆ, ನಿಷ್ಠೆಗಳನ್ನೇ ಅವಲಂಬಿಸಿರುವುದು. ಒಂದು ತಲೆಮಾರಿನಲ್ಲಿ ಈ ಕೆಲಸವಾಗದಿದ್ದರೆ, ಇನ್ನೊಂದು ತಲೆಮಾರಿ ನಲ್ಲಿಯೂ ಈ ಕೆಲಸ ಮುಂದುವರೆಯುವುದು. ಉತ್ಕ್ರಾಂತಿಯ ಹೆಜ್ಜೆ ಸಾವಧಾನದಿಂದಲೇ ಸಾಗುವುದು. ಈ ಪ್ರಗತಿಯನ್ನು ಸಾಧಿಸುವ ವ್ಯಕ್ತಿಯ ರಕ್ತನಾಳಗಳಲ್ಲಿ ಆನುವಂಶಿಕ ಶಕ್ತಿಯ ಸಂಚಯವಿರುವುದರಿಂದ ಆ ವ್ಯಕ್ತಿಯ ಮನೆತನದ ಹಿರಿಮೆಯನ್ನು ಅಲಕ್ಷಿಸಲಾಗುವುದಿಲ್ಲ. ಅವನ ಸಾಹಸಕ್ಕೆ ಅವನ ಮನೆತನದ ಪುಣ್ಯಶಕ್ತಿಯೇ ಬಲವನ್ನು ಕೊಡುವುದು. ರಾಜಕೀಯ ಆಂದೋಲನದಲ್ಲಿ ಕೂಡ ಈ ಮಾತು ಅನ್ವಯಿಸುವುದು. ಸಾಮಾಜಿಕ ಪ್ರಗತಿಗೆ ರಾಜಕೀಯ ಪ್ರಗತಿಯು ಬೆನ್ನೆಲುವಾಗಿರುವುದರಿಂದ ಇವುಗಳು ಅಭಿನ್ನವಾಗಿಯೇ ಸಾಗುವುವು. ಆಯಾ ಕಾಲದ ವಾತಾವರಣವನ್ನು ಅರಗಿಸಿ

ಕೊಂಡು ಮುನ್ನುಗ್ಗುವ ಸಾಹಸಿಯ ಶಕ್ತಿಯಲ್ಲಿ ಅವನ ಆನುವಂಶಿಕ ಕೀರ್ತಿಯನ್ನು ನಾವು ಗುರುತಿಸಬಹುದಾಗಿದೆ.

ಇದು ಹೀಗೆಯೇ ಎಂದು ಹೇಳಬರದಿದ್ದರೂ, ಹೀಗಿರುವುದೇ ಹೆಚ್ಚು ಎಂದು ಹೇಳಬಹುದು.

ಈ ಕಾದಂಬರಿಯಲ್ಲಿ ಗಂಗನಹಳ್ಳಿಯು ಸರ್ವಾಂಗೀಣ ಉನ್ನತಿಗೆ ಕಾರಣರಾದ ನಿಃಸ್ವಾರ್ಥಮೂರ್ತಿ ವಿಶ್ವೇಶ್ವರಭಟ್ಟರ ಪುಣ್ಯ ರಕ್ತವು, ಅವರ ಮಕ್ಕಳು ಮೊಮ್ಮಕ್ಕಳಲ್ಲಿ ಹರಿದಿದೆ. ಆ ಶಕ್ತಿ ವಿವಿಧಾಕಾರವನ್ನು ತಳೆದು ನಾಡ ಪ್ರಗೊಂದು ದಾರಿ ತೋರಿದೆ. ಜೀವನದಲ್ಲಿ ಬರುವ—ಬರಬೇಕಾದ—ಸೋಲು, ಗೆಲವುಗಳಿಗೆ ಮೂಲ ಶಕ್ತಿಯು ಮಾರ್ಗದರ್ಶನ ಮಾಡಿದೆ. ಹರಿದ ಕಣ್ಣೀರು ಹೃದಯಗಳನ್ನು ತೊಳೆದು ಶುದ್ಧಮಾಡಿದೆ. ವಿಶ್ವೇಶ್ವರಭಟ್ಟರ ಸ್ಫೂರ್ತಿ ನಿತ್ಯ ನೂತನವಾಗಿ ಪರಿಣಮಿಸಿದೆ. ವಿಶುದ್ಧ ಗಂಗಾಜಲದಲ್ಲಿ ಮಿಂದು ಪರಿಶುದ್ಧರಾದ ಅವರ ವಂಶೀಯರು ಧನ್ಯರಾಗಿದ್ದಾರೆ. ಈ ಧನ್ಯತೆಯನ್ನು ಪಡೆದ ಅವರ ಮನೆತನದ ಇತಿಹಾಸವು ಅವರ ಆದರ್ಶದ ಬಾವುಟವಾಗಿ ನಿಂತಿದೆ.

ವಿಶ್ವೇಶ್ವರಭಟ್ಟರ ಕಾಲದಲ್ಲಿ ಗಂಗನಹಳ್ಳಿಯಲ್ಲಿ ಚಿಗುರೊಡೆದ ಈ 'ಬಳ್ಳಿ'ಯು ಮುಂಬರುವ ಕಾಲದಲ್ಲಿ 'ಹಬ್ಬಿದ ಬಳ್ಳಿ'ಯಾಗಿ ಹರವಾಗಿ ನಿಂತಿದೆ.

ಸಾಹಿತ್ಯ ಸೇವಾ ಮಂದಿರ
ಗೋಕಾಕ, ಮೇ ೩೦, ೧೯೫೩

ಕೃಷ್ಣಮೂರ್ತಿ ಪುರಾಣಿಕ

ತೃತೀಯ ಮುದ್ರಣ

ಈ ಕಾದಂಬರಿಯನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಿ-ಯೂನಿವರ್ಸಿಟಿ ತರಗತಿಗಳಿಗೆ ೧೯೬೮-೬೯ನೇ ಸಾಲಿಗೆ ಪಠ್ಯಪುಸ್ತಕವನ್ನಾಗಿ ನಿಯಮಿಸಿ, ಇದರ ಪುನರ್ಮುದ್ರಣಕ್ಕೆ ಅವಕಾಶವನ್ನೊದಗಿಸಿದ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪಠ್ಯಪುಸ್ತಕ ನಿಯಾಮಕ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ನಾನು ಕೃತಜ್ಞನಾಗಿದ್ದೇನೆ. ಪ್ರಸ್ತುತ ಮುದ್ರಣದಲ್ಲಿ ಈ ಹಿಂದಿನ ಮುದ್ರಣಗಳಲ್ಲಿನ ಅಚ್ಚಿನ ಮತ್ತಿತರ ದೋಷಗಳನ್ನು ನಿವಾರಿಸಲು ಸಾಧ್ಯವಿದ್ದಷ್ಟು ಪ್ರಯತ್ನಿಸಿದ್ದೇನೆ.

ಸಾಹಿತ್ಯ ಸೇವಾ ಮಂದಿರ
ಗೋಕಾಕ, ಮೇ ೩೦, ೧೯೬೮

ಕೃಷ್ಣಮೂರ್ತಿ ಪುರಾಣಿಕ

೧

ಅಂದು ಗಂಗನಹಳ್ಳಿಯಲ್ಲಿ ಗದ್ದಲವೋ ಗದ್ದಲ. ಊರ ಹನುಮಂತನ ಕಾರ್ತಿಕದ ದಿನವೆಂದ ಮೇಲೆ ಸಂಭ್ರಮವನ್ನು ಕೇಳಬೇಕೆ ? ಹಳ್ಳಿಯವರೆಲ್ಲ ಕೂಡಿ ಮಾರುತಿಯ ಗುಡಿಯನ್ನು ಸಿಂಗರಿಸಿದ್ದರು. ಮಾವಿನ ತೋರಣಗಳನ್ನು ಆವಾರದ ತುಂಬೆಲ್ಲ ತೂಗಿಬಿಟ್ಟಿದ್ದರು. ಕಂಬಗಳಿಗೆಲ್ಲ ಬಾಳೆಯ ಗಿಡಗಳ ಅಲಂಕಾರವಾಗಿದ್ದಿತು. ಸುಣ್ಣ, ಕೆಮ್ಮಣ್ಣುಗಳ ಸಾರಣೆಯಿಂದ ಗುಡಿಯೆಲ್ಲ ಕಂಗೊಳಿಸುತ್ತಿತ್ತು. ಹೆಬ್ಬಾಗಿಲದ ಎರಡೂ ಗೋಡೆಗಳ ಮೇಲೆ ನಿಂತ ಕಲ್ಲಿನ ದ್ವಾರಪಾಲಕರಿಗೆ ಆ ದಿನ ಗೇಣಂಚಿನ ಧೋತರ, ಕಪ್ಪಾಗಿ ಕೊರೆದ ಮೀಸೆಗಳಿಂದ ಆ ಗೊಂಬೆಗಳು ಸಜೀವವಾಗಿ ಕಂಡು ಜನರನ್ನು ಹೆದರಿಸುತ್ತಿದ್ದವು. ಗರ್ಭಗುಡಿಯಲ್ಲಿ ಧೂಪದೀಪಗಳ ಸುವಾಸನೆಯಲ್ಲಿ ಮಾರುತಿಯು ಮುಳುಗಿ ಏಳತೊಡಗಿದ. ಸಾವಿರ ಚಿಗುರೆಲೆಗಳ ಚೌಕಟ್ಟಿನ ಮಧ್ಯದಲ್ಲಿ ನಿಂತ ಮಾರುತಿಯ ಮುಖಕ್ಕೆ ಬೆಳ್ಳಿಯ ಮುಖವಾಡದ ಗಂಭೀರತೆ ಭವ್ಯತೆಯನ್ನೇ ತಂದುಕೊಟ್ಟಿತ್ತು. ರೂಪದಲ್ಲಿ ಮಾರುತಿಯನ್ನೂ ಮೀರಿಸಿದ ಪೂಜಾರ ಗಂಗಪ್ಪನ ಉತ್ಸಾಹವಂತೂ ಮೇರೆದಪ್ಪಿ ಹರಿಯತೊಡಗಿತ್ತು. ಇದೀಗ ನೈವೇದ್ಯ ಬರುವ ಸಮಯ, ಸಾವಿರಾರು ಹೋಳಿಗೆಗಳಿಗೆ ಸಾಲುವ ಜಲ್ಲರಿ ಮಾರುತಿಯ ಸಮೀಪದಲ್ಲಿಯೇ ವಿರಾಜಮಾನವಾಗಿತ್ತು. ಅನ್ನದ ರಾಸಿಗಾಗಿ ದೊಡ್ಡ ಬುಟ್ಟಿ ಬಾಯಿ ತೆರೆದು ನಿಂತಿತ್ತು. ಸಾರಿಗಾಗಿ ಇಳಿಸಿದ ಕೊಳಗ ಮಾರುತಿಯ ನಡುವಿನ ಎತ್ತರ ಬೆಳೆದು ನಿಂತಿತ್ತು.

ಮಾರುತಿಗೆ ನೈವೇದ್ಯ ತೋರಿಸದೆ ಯಾರೂ ಆ ದಿನ ಊಟ ಮಾಡುವಂತಿಲ್ಲ. ಎಲ್ಲ ಮನೆಗಳಲ್ಲಿಯೂ ಹೋಳಿಗೆಯ ಅಡಿಗೆಯಾಗಬೇಕು. ಬ್ರಾಹ್ಮಣರನ್ನು ಉಣ್ಣಿಸಬೇಕು. ಜಂಗಮರ ತೃಪ್ತಿಯಾಗಬೇಕು. ತದನಂತರವೇ ಮನೆಯವರ ಊಟ. ಮಧ್ಯಾಹ್ನದ ಹೊತ್ತಿಗೆ ಜನ ಸಾಲು ಸಾಲಾಗಿ ಗುಡಿಯ ಕಡೆಗೆ ಬರತೊಡಗಿದರು. ಆ ದೃಶ್ಯ ಪ್ರೇಕ್ಷಣೀಯವಾಗಿತ್ತು. ಹಣೆಯ ಮೇಲೆ ವಿಭೂತಿಯನ್ನು ಧರಿಸಿ ಮಡಿ ವಸ್ತ್ರಗಳನ್ನುಟ್ಟ ಅನೇಕ ಭಕ್ತರು ಎಡೆಯ ತಳಿಗೆಯನ್ನು ಮೇಲ್ವಾಸಿನಿಂದ ಮುಚ್ಚಿಕೊಂಡು ಕೈಯಲ್ಲಿ ಊದುಬತ್ತಿಗಳನ್ನೋ, ಕಪ್ಪುರದ ಒಡೆಗಳನ್ನೋ ಹಿಡಿದುಕೊಂಡು ಬರತೊಡಗಿದರು. ಮುತ್ತೈದೆಯರು ಕುಂಕುಮಾಂಕಿತರಾಗಿ

ಎಡೆಗಳನ್ನು ಸೆರಗಿನಲ್ಲಿ ಮುಚ್ಚಿಕೊಂಡು ಬಲಗೈಯಲ್ಲಿ ನೀರಿನ ಗಿಂಡಿಯನ್ನು ಹಿಡಿದುಕೊಂಡು ಬರುವಾಗ ಭಕ್ತಿಯ ಕುಸುಮಗಳಂತೆ ಕಾಣತೊಡಗಿದರು. ನೇರವಾಗಿ ಬಾಚಿಕೊಂಡ ಏಣಿ ತುರುಬಿನ ಸುಮಂಗಲೆಯರು ಮಾರುತಿಗೆ ತೋರುವ ಭಕ್ತಿ ಅಪಾರವಾಗಿ ಶೋಭಿಸುತ್ತಿತ್ತು. ಈ ಗಲಭೆಯಲ್ಲಿ ಚಿಕ್ಕ ಮಕ್ಕಳ ಚೀರಾಟವು ಮಾರುತಿಗೆ ಉತ್ಸಾಹಭರಿತವಾಗುವಂತೆ ಕೇಸರಿಟ್ಟಿತ್ತು. ಒಂದೊಂದು ಮಗುವಿನ ಕೈಯಲ್ಲಿ ಒಂದೊದು ತೆಂಗಿನಕಾಯಿ. ಎಡೆ ಮುಚ್ಚು ವಂತೆ ಮಡಿಯ ವಸ್ತ್ರ. ಜಾರಿ ಬೀಳದಂತೆ ಎದೆಯ ಹತ್ತಿರವೇ ಗಂಟು. ನೈವೇದ್ಯ ಸಮರ್ಪಣೆಯ ಕಾಲವೆಂದರೆ ಅಷ್ಟು ಪ್ರಿಯವಾಗಿತ್ತು ಗಂಗನ ಹಳ್ಳಿಯ ಹನುಮಭಕ್ತರಿಗೆ.

ಶಾನುಭೋಗ ಶೀನಪ್ಪನ ಮನೆಯಲ್ಲಿ ಅಂದು ಬ್ರಾಹ್ಮಣರಿಗೆ ಸಂತರ್ಪಣೆ. ಆ ಗಡಿಬಿಡಿಯಲ್ಲಿ ಶಾನುಭೋಗರಿಗೆ ಬಿಡುವೇ ಇಲ್ಲ.

ಮಧ್ಯಾಹ್ನ ಹನ್ನೆರಡು ಗಂಟೆ ಅದೇ ಮೀರಿ ಹೋಗಿರಬಹುದು. ಮಾರುತಿಯ ಬೀದಿಯಲ್ಲಿ ಜನದಟ್ಟಣೆ ಆಗಲೇ ಪ್ರಾರಂಭವಾಗಿಬಿಟ್ಟಿತು. ಅಲ್ಲಿ ತಿರುಗಾಡುವದೂ ಪ್ರಯಾಸವಾಗಿಬಿಟ್ಟಿತು.

"ಓಂ ಭವತಿ ಭಿಕ್ಷಾಂ ದೇಹಿ !"

ಊಟದ ಮಣೆಯ ಮೇಲೆ ಕುಳಿತ ದೇಶಪಾಂಡೆ ಕೇಶವರಾಯರು ಕೈಯಲ್ಲಿ ಬೆಳ್ಳಿಯ ಥಾಲಿಯನ್ನು ಹಿಡಿದುಕೊಂಡೇ ಹೊರಗೆ ಬಂದರು. ಬಾಗಿ ಲಲ್ಲಿ ಶ್ವೇತವಸ್ತ್ರವನ್ನು ಉಟ್ಟುಕೊಂಡು ಹಣೆಯಮೇಲೆ ಭವ್ಯವಾದ ವಿಭೂತಿ ಯನ್ನು ಧರಿಸಿದ ಬ್ರಾಹ್ಮಣ ಯುವಕನೊಬ್ಬನು ಜೋಳಿಗೆಯನ್ನು ಚಾಚಿ ನಿಂತಿದ್ದಾನೆ. ಅವನ ಹಿಂದೆ ಅವನ ಪತ್ನಿ ಬಗಲಲ್ಲಿ ಕೂಸಿನೊಡನೆ ನಿಂತಿ ದ್ದಾಳೆ. ಅವಳ ಕೈಯಲ್ಲಿ ನೀರಿನ ದೊಡ್ಡ ತಂಬಿಗೆಯಿದೆ. ಯುವಕನ ಗಂಭೀರ ವಾದ ಮುಃಖಮುದ್ರೆ ಅವನು ಸಾದಾ ಭಿಕ್ಷುಕನಲ್ಲವೆಂಬುದನ್ನು ಕೇಶವರಾಯ ರಿಗೆ ಸಾರಿ ಹೇಳಿತು. ಅವನ ಬಗ್ಗೆ ಅವರಲ್ಲಿ ಪೂಜ್ಯತೆ ತುಂಬಿ ನಿಂತಿತು.

"ಬಾಗಿಲಲ್ಲೇ ಏಕೆ ನಿಂತಿರಿ ಸ್ವಾಮಿ, ಒಳಗೆ ಬರಬಾರದೆ ?"

"ಓಂ ಭವತಿ ಭಿಕ್ಷಾಂ ದೇಹಿ !" ಕೇಶವರಾಯರಿಗೆ ಆ ಯುವಕನು ಕೊಟ್ಟ ಉತ್ತರವಿದು.

"ಇಂದು ಕಾರ್ತಿಕದ ದಿನ. ದೇವರ ಹಾಗೆ ಬಂದಿದ್ದೀರಿ. ದಂಪತಿ ಸಮೇತರಾಗಿ ಭೋಜನವನ್ನು ನನ್ನ ಮನೆಯಲ್ಲಿಯೇ ತೀರಿಸಿಕೊಂಡು ಹೋಗಬಾರದೆ ?"

ಅದೇ ಹನುಮಂತದೇವರಿಗೆ ನೈವೇದ್ಯವನ್ನು ಸಮರ್ಪಿಸಿ ಬಂದ

ಕೇಶವರಾಯರ ಧರ್ಮಪತ್ನಿ ಈ ಮಾತುಗಳನ್ನು ಕೇಳಿ ಹೊರಗೆ ಬಂದಳು. ಶ್ರೀಮಂತನ ಹರೆಯದ ಮಡದಿ. ಧರ್ಮವಂತೆ. ಊರ ಉತ್ಸವದ ಕಳೆ ಅವಳ ಮುಖದ ಮೇಲೂ ಮಿನುಗುತ್ತಿದೆ. ಉಟ್ಟದ್ದು ಬೆಲೆಯುಳ್ಳ ಪೀತಾಂಬರ. ಹಣೆಯ ತುಂಬಾ ಕುಂಕುಮ. ಕೊರಳಲ್ಲಿ ಭಾರವಾದ ಗೆಜ್ಜೆಯ ಟಿಕ್ಕೆ. ಬಂಗಾರದ ಗಟ್ಟಿ ಪದಕಗಳ ಮಾಲೆ. ಓರಣವಾಗಿ ಬಾಚಿಕೊಂಡು ಹಿಂದೆ ಕಟ್ಟಿದ ಏಣಿ ತುರುಬಿನ ಹಿಂದೆ ಕಮಲದಂತಹ ಒಂದೇ ಒಂದು ಬಂಗಾರದ ಹೂ.

ಈ ದಂಪತಿಗಳನ್ನು ಕಂಡು ಅವಳಿಗೆ ಭಕ್ತಿಯೇ ತುಂಬಿತು. ಅವಳು ಗಂಡನ ಮುಖವನ್ನು ನೋಡಿದಳು. ಆ ನೋಟದಲ್ಲಿ ಅಡಕವಾದ ಇಂಗಿತವನ್ನು ಕೇಶವರಾಯರು ಆಗಲೇ ತಿಳಿದುಕೊಂಡರು.

"ನನ್ನ ಬಿನ್ನಹವನ್ನು ಮನ್ನಿಸುವಿರಲ್ಲವೆ?"

"ಈ ಭಿಕ್ಷೆಯ ಅನ್ನವೇ ಇಂದು ಪವಿತ್ರವಾಗಿದೆ. ದಯವಿಟ್ಟು ನೀಡಿ ಕಳುಹಿಸಿಬಿಡಿರಿ ತಾಯಿ! ಈ ಹೊತ್ತು ಇವರು ಎಲ್ಲಿಯೂ ಉಣ್ಣಬಾರದು." ಮಾತು ಕೇಶವರಾಯರನ್ನು ಉದ್ದೇಶಿಸಿ ಇದ್ದರೂ ಆ ಪತ್ನಿ ರಾಯರ ಮಡದಿಗೆ ಹೇಳಿದಳು.

ಮಧ್ಯಾಹ್ನದ ಸಮಯದಲ್ಲಿ ಅನ್ನಕ್ಕಾಗಿ ಅತಿಥಿಯನ್ನು ತಡೆದು ನಿಲ್ಲಿಸುವದು ಯೋಗ್ಯವಲ್ಲವೆಂದು ತಿಳಿದ ಕೇಶವರಾಯರು ಪತ್ನಿಗೆ ಹೇಳಿದರು: "ಹೋಗು. ಅವರ ಭಿಕ್ಷಾಪಾತ್ರೆಯನ್ನು ತುಂಬು."

ರಾಯರ ಧರ್ಮಪತ್ನಿ ಚಂಗನೆ ನೆಗೆದು ಒಳಗೆ ಹೋದಳು.

"ತಾವು ಇಳಿದುಕೊಂಡ ಸ್ಥಳವಾವುದು ಹೇಳಬಹುದೆ?"

"ಸಧ್ಯಕ್ಕೆ 'ಆರುಯಾತ'ದ ಬಾವಿಯ ಕಮಾನಿನಲ್ಲಿ ಇಳಿದುಕೊಂಡಾಗಿದೆ."

"ಸಂಜೆಯ ಸಮಯದಲ್ಲಿ ನೀವು ಅಲ್ಲಿಯೇ ಇರುವಿರಾ?"

"ದೇವರ ಇಚ್ಛೆ."

"ದಯವಿಟ್ಟು ನನ್ನ ಮಾರ್ಗಪ್ರತೀಕ್ಷೆ ಮಾಡುತ್ತಿರಬೇಕು. ನಾನು ಗೆಳೆಯರೊಂದಿಗೆ ಬಂದು ಕಾಣುತ್ತೇನೆ."

ಆ ಯುವಕ ಬ್ರಾಹ್ಮಣನ ಮುಖದಲ್ಲಿ ನಗೆಯ ತೆರೆಯೊಂದು ತೇಲಿ ಬಂದಿತು.

"ನೀವು ಬರುವಿರೆಂದು ನನಗೆ ಗೊತ್ತು—ಗುರುಗಳ ಇಚ್ಛೆಯೇ ಹಾಗಿದೆ. ಅವರ ಇಚ್ಛೆ ನೆರವೇರಲೇಬೇಕು."

ಆ ಹೊತ್ತಿಗೆ ಕೇಶವರಾಯರ ಮಡದಿ ಎರಡೂ ಕೈಗಳಲ್ಲಿ ತಳಿಗೆಯನ್ನು

ಹೊತ್ತು ತಂದರು. ಭಿಕ್ಷೆ ಬ್ರಾಹ್ಮಣರ ಜೋಳಿಗೆಯನ್ನು ಸೇರಿತು.

'ಅನ್ನದಾತಾ ಸುಖೀಭವ' ಎನ್ನುತ್ತ ಬ್ರಾಹ್ಮಣನು ಹೆಜ್ಜೆ ತಿರುಗಿಸಿದನು. ಅವನ ಪತ್ನಿ ಹಿಂಬಾಲಿಸಿದಳು.

ಕೇಶವರಾಯರ ಮಡದಿ ಸರಸ್ವತಿಗೆ ಏನು ಹೊಳೆಯಿತೋ "ಸ್ವಲ್ಪ ತಡೆಯಿರಿ," ಎಂದು ಕೂಗಿ ಸರ್‍ರನೆ ಒಳಗೆ ಹೋಗಿ ಒಂದು ತಂಬಿಗೆ ಹಾಲನ್ನು ತಂದು 'ಇದು ಆ ಮಗುವಿಗೆ' ಎಂದು ನೀಡಿದಳು. ಬ್ರಾಹ್ಮಣನ ಪತ್ನಿ ಕೃತಜ್ಞತೆಯಿಂದ ಹಾಲನ್ನು ಸ್ವೀಕರಿಸಿದಳು. "ಹಬ್ಬಿದ ಬಳ್ಳಿಗೆ ಹಾಲೆರೆ ತಾಯೀ ! ನಿನಗೆ ಮಗುವಾಗಲಮ್ಮಾ" ಎಂದು ಹರಸಿದಳು.

ತನಗೆ ಮಕ್ಕಳಿಲ್ಲವೆಂದು ಇವಳು ಹೇಗೆ ಗ್ರಹಿಸಿದಳೋ ಎಂಬುದು ಸರಸ್ವತಿಗೆ ಅಚ್ಚರಿಯ ಮಾತಾಯಿತು. ಅವಳು ಹೇಳಿದ ಆಶೀರ್ವಾದದ ಮಾತು ಅವಳಲ್ಲಿ ನವಿರನ್ನೆಬ್ಬಿಸಿತು.

ಕೇಶವರಾಯರ ಮುಖ ಅರಳಿತು. ಸರಸ್ವತಿಯ ಮುಖ ಚಿಗಿತ ಬಳ್ಳಿ ಬಿಟ್ಟ ಹೂವಿನಂತಾಯಿತು.

ಅಂದು ಸಾಯಂಕಾಲ ಇನ್ನೂ ಎರಡು ತಾಸು ಹೊತ್ತು ಇರುವಾಗ ಶಾನುಭೋಗ ಶೀನಪ್ಪನವರೂ, ಗುರುಲಿಂಗಶೆಟ್ಟರೂ, ಊರ ಪಾಟೀಲರಾದ ಹೇಮಂತಗೌಡರೂ, ಅಂದೇ ಆ ಹಳ್ಳಿಗೆ ಬಂದ ಗಂಗಪ್ಪ ದೇಸಾಯರೂ, ದರ್ಗಾದ ವಸ್ತಾದ ಅಲ್ಲಿಯವರೂ ದೇಶಪಾಂಡೆ ಕೇಶವರಾಯರೊಡನೆ 'ಆರು ಯಾತ'ದ ಬಾವಿಯ ಮಾರ್ಗವಾಗಿ ನಡೆದರು. ಅವರ ಮುಂದೆ ಮುಂದೆ ಮಾದರ ಚನ್ನಪ್ಪನು ಲುಟುಲುಟು ಹೆಜ್ಜೆ ಹಾಕುತ್ತಿದ್ದನು. ದಾರಿಯಲ್ಲಿ ಬಡಿಗರ ಮಾನಪ್ಪನೂ, ಉಪ್ಪಾರ ನೀಲಪ್ಪನೂ ಕೂಡಿಕೊಂಡರು. ಅವರೆಲ್ಲ ಬಾವಿಯನ್ನು ತಲುಪುವ ವೇಳೆಗೆ ಪಾದ್ರಿ ಅರಳಿಮನೆ ಬಂದುಬಿಟ್ಟನು.

ಆ ಹಳ್ಳಿಯ ದಕ್ಷಿಣ ತುದಿಗೆ ಕಟ್ಟಿದ ಕಲ್ಲಿನ ಬಾವಿಯದು. ವಿಸ್ತೀರ್ಣವಾದ ಕೊಳದಂತೆ ಶೋಭಿಸುತ್ತದೆ. ನೂರಾರು ಪಾವಟಿಗೆಗಳನ್ನು ಇಳಿದ ಬಳಿಕ ಆ ಬಾವಿಯ ಎರಡೂ ಮಗ್ಗಲಿಗೆ ಬಂಕಗಳಿವೆ. ಆ ಬಂಕಗಳಿಗೆ ಹೋಗಲು ಒಂದು ಕತ್ತಲೆಯ ಮಾರ್ಗ. ಆ ಬಂಕಗಳಲ್ಲಿ ಒಂದೊಂದು ಈಶ್ವರ ಲಿಂಗವೂ ಮುಂದೆ ನಂದಿಕೇಶ್ವರನೂ ಇದ್ದಾರೆ.

ಈ ಬಂಕಗಳ ಉಪಯೋಗವನ್ನು ಭಿಕ್ಷುಕರು, ಬಾವಾ ಬೈರಾಗಿಗಳು ಇನ್ನೂ ಮಾಡಿಕೊಳ್ಳುತ್ತಾರೆ. ಅವರು ಇಳಿದುಕೊಳ್ಳುವ ಸ್ಥಳವೇ ಅದು. ಅವರ ಅನುಕೂಲತೆಗಳನ್ನು ಹೂಗಾರ ಶಿವಪ್ಪನು ನೋಡಿಕೊಳ್ಳುತ್ತಾನೆ.

ಇಂಥ ಪ್ರಸಿದ್ಧವಾದ ಈ ಭಾವಿಯ ಬಂಕದಲ್ಲಿಯೇ ತರುಣ ಬ್ರಾಹ್ಮ

ಣನು ಕುಟುಂಬ ಸಮೇತನಾಗಿ ಇಳಿದುಕೊಂಡಿದ್ದಾನೆ. ಕೇಶವರಾಯರಿಂದ ತಂದ ಭಿಕ್ಷಾನ್ನವನ್ನುಂಡು ಕೂಸಿನೊಡನೆ ಆಟವಾಡುತ್ತಿರುವ ಸಮಯ ದಲ್ಲಿಯೇ ಈ ಜನ ಭೆಟ್ಟಿಗೆ ಬಂದಿದೆ. ಬಂದವರು ಹಣ್ಣು ಕಾಯಿ ತಂದಿದ್ದಾರೆ. ಅವರ ಮುಖದಲ್ಲಿ ಒಂದು ಪೂಜ್ಯಭಾವ ಮೂಡಿ ನಿಂತಿದೆ.

"'ನೀವು ಬರುವಿರೆಂದು ನನಗೆ ಗೊತ್ತು—ಗುರುಗಳ ಇಚ್ಛೆಯೇ ಹಾಗಿದೆ. ಅವರ ಇಚ್ಛೆ ನೆರವೇರಲೇಬೇಕು' ಎಂದಿರಲ್ಲ, ಈ ಮಧ್ಯಾಹ್ನ, ಇದರ ಗುಟ್ಟೇನು ಸ್ವಾಮೀ!" ಎಂದು ಕೇಶವರಾಯರು ತಮ್ಮ ಉಪ್ಪರಣಿ ಯನ್ನು ಸರಿಮಾಡಿಕೊಳ್ಳುತ್ತ ವಿನೀತರಾಗಿ ಕೇಳಿದರು.

"ಮುಧೋಳದ ಆಚಾರ್ಯರನ್ನು ಬಲ್ಲಿರಷ್ಟೆ. ಅವರೇ ನನ್ನ ಗುರುಗಳು. ನನ್ನ ವಿದ್ಯೆ ಅಲ್ಲಿಯೇ ಮುಗಿಯಿತು. ಅವರು ನನಗೆ ಜೀವನವನ್ನು ಕಳೆಯಲು ಧರ್ಮೋಪದೇಶ ಮಾಡಲು ಈ ಸ್ಥಳವನ್ನೇ ಹೇಳಿ ಕಳುಹಿಸಿದರು. 'ವಿಶ್ವೇ ಶ್ವರಾ! ನಿನಗೆ ಅಲ್ಲಿ ಎಲ್ಲ ಅನುಕೂಲವೂ ಆಗುತ್ತದೆ. ನಿನ್ನ ಬಳ್ಳಿ ಹಬ್ಬುತ್ತದೆ. ಧಾರ್ಮಿಕನಾಗಿ ಬಾಳು' ಎಂದು ಹರಸಿ ಕಳಿಸಿದರು. ಅವರ ಮಾತು ಸುಳ್ಳಾಗ ಲಾರದೆಂದು ಇಲ್ಲಿಯೇ ಬಂದೆ. ಈಗ ನೀವು ಬಂದಿದ್ದೀರಿ" ಎಂದು ಮುಗುಳು ನಗೆಯೊಂದಿಗೆ ವಿಶ್ವೇಶ್ವರಭಟ್ಟರು ನೇರವಾಗಿ ಹೇಳಿದರು.

"ಹಾಗಾದರೆ ನೀವು ಇಲ್ಲಿಯೇ ಉಳಿಯುವಿರಷ್ಟೆ. ನಿಮಗೆ ಎಲ್ಲ ಅನು ಕೂಲತೆಗಳನ್ನೂ ಮಾಡಿಕೊಡುತ್ತೇವೆ." ಗುರುಲಿಂಗಶೆಟ್ಟರು ಬಗಲಕಸಿಯ ಅಂಗಿಯ ಗಂಟುಗಳ ಮೇಲೆ ಕೈಯಾಡಿಸುತ್ತ ಕೇಳಿದರು.

"ನಿಮ್ಮಂತಹ ಕರ್ಮಠ ಬ್ರಾಹ್ಮಣರು ನಮ್ಮೂರಿಗೊಂದು ಭೂಷಣ. ಇದ್ದು ಬಿಡಿರಿ" ಎಂದು ಶಾನುಭೋಗರ ಶೀನಪ್ಪನವರು ನಶ್ಯದ ಚಿಟಿಕೆಯನ್ನು ಮೂಗಿಗೆ ತುಂಬಿಕೊಳ್ಳುತ್ತ ಹೇಳಿದರು.

"ಹೇಮಂತಗೌಡರ ಮನೆ ತೆರವಾಗಿಯೇ ಇದೆ. ಅದು ದೊಡ್ಡ ಮನೆಯಾದರೂ ಮುಂದಿನ ಕೋಣೆಗಳಲ್ಲಿ ನೀವು ಇರಬಹುದು." ವಸ್ತಾದ ಅಲ್ಲಿ ಗೌಡರ ಮುಖ ನೋಡುತ್ತ ಹೇಳಿದನು.

"ನಾನು ನನ್ನ ಮನೆಯಲ್ಲಿಯೇ ಇರಬೇಕು ಬಂಧುಗಳೇ!" ಭಟ್ಟರು ಎಲ್ಲರನ್ನೂ ಸೂಕ್ಷ್ಮವಾಗಿ ನೋಡುತ್ತಾ ತಮ್ಮ ಮನೋಗತವನ್ನು ತಿಳಿಸಿದರು.

"ನನ್ನ ಮನೆಯು ನಿಮ್ಮದೇ ಆಗಿದೆ. ದಯಮಾಡಿಸಿರಿ ಸ್ವಾಮಿ!" ಎನ್ನುತ್ತ ಹೇಮಂತಗೌಡರು ಅಭಿಮಾನದುಂಬಿದರು.

ಅಲ್ಲಿಯೇ ಕುಳಿತ ಸೇತೂರಾಮಾಚಾರ್ಯರು ಚಟ್ಟನೆ ಎದ್ದು ಒಂದು ತಂಬಿಗೆಯಲ್ಲಿ ನೀರು ತಂದರು. ಗೌಡರು ಆ ನೀರನ್ನು ಆಗಂತುಕ ಬ್ರಾಹ್ಮಣನ

ಬೊಗಸೆಯಲ್ಲಿ ಹನಿಹಸಿಯಾಗಿ ಬಿಡುತ್ತ ತಮ್ಮ ಮನೆಯ ದಾನವನ್ನು ಮಾಡಿದರು. ಅಲ್ಲಿ ಕುಳಿತ ಜನರ ಕಣ್ಣು ಒದ್ದೆಯಾದವು.

"ಹೇಮಂತಗೌಡ ಪುಣ್ಯವಂತ" ಎಂದು ಗಂಗಪ್ಪ ದೇಸಾಯಿ ಸಂತೋಷಭರಿತರಾದರು.

ಅಂದಿನಿಂದ ವಿಶ್ವೇಶ್ವರಭಟ್ಟರು ಗಂಗನಹಳ್ಳಿಯ ಪೂಜ್ಯ ನಾಗರಿಕರಾದರು. ಅವರಲ್ಲಿ ವಿದ್ಯೆ ಕಲಿಯಲು ಶಿಷ್ಯಸಮುದಾಯವೇ ಬರತೊಡಗಿತು. ಹೇಮಂತಗೌಡರ ಕೋಣೆಗಳು ಸಾಲದೆ ಇಡೀ ಮನೆಯನ್ನೇ ಭಟ್ಟರು ಬಳಕೆಗೆ ಉಪಯೋಗಿಸಬೇಕಾಯಿತು. ಹೇಮಂತಗೌಡರು ಇದನ್ನು ಉಬ್ಬಿನಿಂದ ಸ್ವಾಗತಿಸಿದರು.

ಶಿಷ್ಯರು ಹೆಚ್ಚಾಗತೊಡಗಿದಂತೆ ಭಟ್ಟರ ಹೊಣೆಯೂ ಹೆಚ್ಚಾಗತೊಡಗಿತು. ಅದಕ್ಕಾಗಿ ಅವರು ವ್ಯವಸ್ಥಿತ ಕಾರ್ಯಕ್ರಮವನ್ನು ಹಾಕಿಕೊಂಡರು. ಮುಂಜಾವಿನಲ್ಲಿ ಶಿಷ್ಯರು ಮನೆಯನ್ನೆಲ್ಲ ಗುಡಿಸಿ ಗೋಮಯದಿಂದ ಶುದ್ಧಗೊಳಿಸಬೇಕು. ಮನೆಯಲ್ಲಿಯ 'ಗೌಡರ ಬಾವಿ'ಯಲ್ಲಿ ಎಲ್ಲರೂ ತಣ್ಣೀರಸ್ನಾನ ಮಾಡಿ ಸಂಧ್ಯಾವಂದನೆಯನ್ನು ಪೂರೈಸಿಕೊಳ್ಳಬೇಕು. ಆಮೇಲೆ ಅಧ್ಯಯನ. ಅಧ್ಯಯನ ಮುಗಿದ ಕೂಡಲೇ ಎಲ್ಲರೂ ತಮ್ಮ ಊಟಕ್ಕೆ ಬೇಕಾಗುವ ಎಲೆಗಳನ್ನು ತಾವೇ ಹಚ್ಚಿಕೊಳ್ಳಬೇಕು. ಮಧ್ಯಾಹ್ನದ ಹೊತ್ತಿಗೆ ಮತ್ತೆ ಎಲ್ಲರೂ ಸ್ನಾನಮಾಡಿ 'ಮಧುಕರಿ'ಗಾಗಿ ಹೊರಡಬೇಕು. ಬೇರೆ ಬೇರೆ ಶಿಷ್ಯರಿಗೆ ಬೇರೆ ಬೇರೆ ಮನೆಗಳನ್ನು ಹಂಚಿಕೊಡಲಾಗಿದ್ದಿತು. ಅವರು ಐದು ಮನೆಗಳಿಗೆ ಮಾತ್ರ ಹೋಗಬೇಕು. ಎಲ್ಲರೂ ಪವಿತ್ರವಾದ ಮಧುಕರಿ ಅನ್ನವನ್ನು ಒತ್ತಟ್ಟಿಗೆ ಸಂಗ್ರಹಿಸಿ ಇಟ್ಟನಂತರ ಭಟ್ಟರ ಧರ್ಮಪತ್ನಿ ಎಲ್ಲ ಶಿಷ್ಯರಿಗೂ ನೀಡಬೇಕು. ಮನೆಯಲ್ಲಿ ಮಾಡಿದ ಬಿಸಿ ಹುಳಿ, ಭಕ್ತರು ದಯಪಾಲಿಸಿದ ಕಾಯಿಪಲ್ಯೆಗಳ ಅಡಿಗೆ ಮೊದಲಾದುವುಗಳೆಲ್ಲ ಎಲ್ಲ ಶಿಷ್ಯರಿಗೂ ಬರಬೇಕು. ಊಟವಾದ ನಂತರ ಎಲ್ಲರೂ ತಮ್ಮ ಎಂಜಲ ಮುಸುರೆಯನ್ನು ಬಳಿದುಕೊಂಡು, ಗೋಮಯದಿಂದ ಸಾರಣೆ ಮಾಡಬೇಕು. ಒಂದು ತಾಸು ವಿಶ್ರಾಂತಿಯಾದ ಮೇಲೆ ಮತ್ತೆ ಅಧ್ಯಯನ. ಸಂಜೆಯ ನಾಲ್ಕು ಗಂಟೆಯ ಸುಮಾರಿಗೆ ಭಟ್ಟರ ಪುರಾಣ ಪ್ರವಚನ. ಅದು ಸಂಜೆಯ ಆರು ಗಂಟೆಯವರೆಗೂ ಸಾಗಬೇಕು. ಊರೊಳಗಿನ ಧಾರ್ಮಿಕರೂ, ಹೆಂಗಳೆಯರೂ ಈ ಪುರಾಣ ಶ್ರವಣಕ್ಕೆ ಬರುವುದು ಪರಿಪಾಠವಾಗಿ ಬಿಟ್ಟಿತು. ಆಮೇಲೆ ಶಿಷ್ಯರೆಲ್ಲ ವಾಯು ಸೇವನೆಗಾಗಿ ಸಿದ್ಧೇಶ್ವರ ಗುಡಿಯ ಮಾರ್ಗದಲ್ಲಿ ಸುತ್ತಾಡಿ ಬರಬೇಕು. ರಾತ್ರಿಯ ಭೋಜನಕ್ಕೆ ಹೆಚ್ಚಿನದೇನಿಲ್ಲ. ಮುಂಜಾವು ಉಳಿದ ತಂಗಳವೇ

ರಾತ್ರಿಯ ಊಟಕ್ಕೆ ಆಗಬೇಕು. ಭಟ್ಟರ ಊಟ ಮಾತ್ರ ಒಂದು ಹೊತ್ತೇ. ಒಂದು ಥಾಲಿ ಆಕಳ ಹಾಲೇ ಅವರ ರಾತ್ರಿಯ ಆಹಾರ. ಇದಾದ ಮೇಲೆ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅಭ್ಯಾಸ ಮಾಡಬೇಕು. ರಾತ್ರಿ ಹತ್ತು ಗಂಟೆಗೆ ಎಲ್ಲರೂ ಮಲಗಲೇಬೇಕು. ಮುಂಜಾವು ನಾಲ್ಕುಗಂಟೆಗೆ ಎಲ್ಲರೂ ಏಳಲೇ ಬೇಕು. ಆಗ ಮತ್ತೆ ವೈಯಕ್ತಿಕ ಅಭ್ಯಾಸ ಪಾಠ ಮಾಡುವದು. ಮತ್ತೆ ಮುಂಜಾವಿನ ಕಾರ್ಯಕ್ರಮಗಳು. ಹೀಗೆ ಭಟ್ಟರ ಜೀವನವು ಒಳ್ಳೇ ವ್ಯವಸ್ಥಿತವಾಗಿ ಸಾಗತೊಡಗಿತು. ಈ ಜೀವನವನ್ನು ಹಳ್ಳಿಯ ಜನ ಮೆಚ್ಚಿತು. ಅವಕ್ಕಾಗಿ ಭಟ್ಟರಿಗೆ ಬೇಕಾಗುವ ಯಾವ ಸಹಾಯವನ್ನು ನೀಡಲೂ ಅವರು ಸಿದ್ಧರಾದರು. ಗಂಗನಹಳ್ಳಿಯ ಪುಣ್ಯದಿಂದಲೇ ಇಂತಹ ಕರ್ಮಠ ಬ್ರಾಹ್ಮಣನು ದೊರೆತನೆಂದು ಜನರು ಅಭಿಮಾನದಿಂದ ನುಡಿಯ ತೊಡಗಿದರು.

ಒಂದು ವರುಷದ ಹಿಂದೆ ಭಟ್ಟರ ಧರ್ಮಪತ್ನಿ 'ಹಬ್ಬಿದ ಬಳ್ಳಿಗೆ ಹಾಲೆರೆದ ತಾಯೀ! ನಿನಗೆ ಮಗುವಾಗಲಮ್ಮಾ!' ಎಂದು ಬಾಯಿತುಂಬಾ ಹರಸಿದ ಮಾತು ಇಂದು ಸತ್ಯವಾಯಿತು. ಕೇಶವರಾಯರ ಮಡದಿ ಸರಸ್ವತಿ ಪುತ್ರವತಿಯಾದಳು. ಇದರಿಂದಲಂತೂ ಭಟ್ಟರ ಪ್ರತಿಷ್ಠೆ ಹಳ್ಳಿಯಲ್ಲಿ ಇನ್ನೂ ಹೆಚ್ಚಾಯಿತು.

ಅಂದು ಮೂರು ವರುಷದ ನೀಲಕಂಠನನ್ನು ಕರೆದುಕೊಂಡು ಭಟ್ಟರ ಧರ್ಮಪತ್ನಿ ಸರಸ್ವತಿಯ ಮಗುವಿಗೆ ಹೆಸರಿಟ್ಟು ಬರಲು ಹೋದಾಗ ಅಲ್ಲಿ ಕೂಡಿದ ಹೆಣ್ಣುಮಕ್ಕಳು ತೋರಿಸಿದ ಆದರವು ಅವರ್ಣನೀಯವಾಗಿತ್ತು. ಸರಸ್ವತಿ ಕೂಸನ್ನು ಉಡಿಯಲ್ಲಿ ಹಾಕಿ ಕಣ್ಣುತುಂಬಿ,

"ಇದು ನಿಮ್ಮ ಆಶೀರ್ವಾದದ ಫಲ, ತಾಯಿ!" ಎಂದಾಗ ಭಟ್ಟರ ಧರ್ಮಪತ್ನಿ ಕುಲುಕುಲು ನಗುತ್ತ,

"ಇದು ಸ್ವಾಮಿಯ ಆಶೀರ್ವಾದ ಸರಸ್ವತೀ! ನನ್ನದೇನು ಬಂತು? ನಾನು ಎಷ್ಟಂದರೂ ಹೆಣ್ಣಲ್ಲವೆ?" ಎಂದುಬಿಟ್ಟರು.

ಸರಸ್ವತಿ ಭಟ್ಟರನ್ನು ಮನಸ್ಸಿನಲ್ಲಿಯೇ ವಂದಿಸಿದಳು.

ಊರ ದೇಶಪಾಂಡೆಗೆ ಇಷ್ಟು ದಿನಗಳ ಮೇಲೆ ಸಂತಾನಲಾಭವಾದ ಸಂಭ್ರಮದಲ್ಲಿ ಗಂಗನಹಳ್ಳಿಯೇ ಭಾಗವಹಿಸಿತು. ಈ ಸಂತೋಷ ಇಡಿಯ ಹಳ್ಳಿಯನ್ನು ಸಂಭ್ರಮದಲ್ಲಿ ತೇಲಿಸಿಬಿಟ್ಟಿತು. ಈ ಸಂಭ್ರಮದ ಸಾರ್ವಜನಿಕ ಪ್ರದರ್ಶನವಾಗುವಂತೆ ಕೇಶವರಾಯರು ಎಲ್ಲ ಏರ್ಪಾಡುಗಳನ್ನೂ ಮಾಡಿದರು. ಮಗುವಿಗೆ ಹೆಸರಿಡುವ ದಿನ ವಿಶ್ವೇಶ್ವರಭಟ್ಟರ ನೇತೃತ್ವದಲ್ಲಿ ರಾಮೇ

ಶ್ವರನಿಗೆ ರುದ್ರಾಭಿಷೇಕವು ನಡೆದು ಸಮಸ್ತ ಹಿರಿಯ ಸಮಾಜವು ಹೋಳಿಗೆಯುಂಡಿತು. ಮಾರುತಿಗೆ 'ಬುತ್ತಿಯ ಪೂಜೆ'ಯಾಗಿ ಕಲ್ಲುಮಠದಲ್ಲಿ ಬೇರೆ ಸಮಾಜದವರಿಗೆ ಸಮಾರಾಧನೆಯಾಯಿತು. ಗುಡ್ಡದ ಮೇಲಿನ 'ದುರುಗವ್ವ'ನ ಮುಂದೆ ಕುರುಬರು 'ಡೊಳ್ಳು' ಬಾರಿಸಿ ನೈವೇದ್ಯವನ್ನಿಟ್ಟು ಮನದಣಿಯೆ ಉಂಡರು. ಆಚೆಯ ಗುಡ್ಡದ 'ಮಾರುಕಂಬ'ದಲ್ಲಿ ಆದ ದೀಪೋತ್ಸವದ ಬೆಳಕು ಗಂಗನಹಳ್ಳಿಯನ್ನು ಬೆಳಗಿಸಿತು. ಊರ ಜಂಗಮರಾದ ಪಂಚಾಚಾರ್ಯರ ಮನೆಯಲ್ಲಿ ಗುರುಲಿಂಗಶೆಟ್ಟರ ನೇತೃತ್ವದಲ್ಲಿ ಭಾರೀ ಭೋಜನ ಸಮಾರಂಭವು ನಡೆದುಹೋಯಿತು. ಆ ಹೊತ್ತು ಮಸೀದಿಗಳೆಲ್ಲ ಗಮಗಮಿಸಿದವು. ಹೀಗೆ ಹಳ್ಳಿಗೆ ಹಳ್ಳಿಯೇ ಈ ಸಮಾರಂಭವನ್ನು ಆಚರಿಸುತ್ತಿರುವಾಗ ಕೇಶವರಾಯರ ಆತ್ಮ ತೃಪ್ತಿಗೊಂಡಿತು. ಅವರಿಗೆ ಸ್ವರ್ಗವು ಮೂರೇ ಗೇಣು.

ಇದಕ್ಕೆಲ್ಲ ಭಟ್ಟರ ಆಶೀರ್ವಾದವೇ ಕಾರಣವೆಂದು ತಿಳಿದ ಹಳ್ಳಿಯ ಮುಂದಾಳುಗಳು ಆ ದಿನ ಸಾಯಂಕಾಲ ಪುರಾಣಪ್ರವಚನವನ್ನು ಕೇಳಲು ಭಟ್ಟರ ಮನೆಗೆ ಬಂದರು. ಎಲ್ಲರ ಮುಖದಲ್ಲಿಯೂ ಪೂಜ್ಯತೆ ನೆಲೆಗೊಂಡಿತ್ತು. ಪ್ರವಚನ ಮುಗಿದ ಮೇಲೆ ಕೇಶವರಾಯರು ಕೂಡಿದ ಜನಕ್ಕೆಲ್ಲ ಬಾಳೆಯ ಹಣ್ಣುಗಳನ್ನು ಹಂಚಿದರು. ಅವರ ಆನಂದವೇ ಆನಂದ.

ಬಂದ ಜನರೆಲ್ಲ ಚದುರಿದ ಮೇಲೆ ಮುಂದಾಳುಗಳು ಭಟ್ಟರನ್ನು ಮುಕ್ತಕಂಠದಿಂದ ಹೊಗಳಲು ನಿಂತರು.

"ಇದೆಲ್ಲ ದೇವರ ಕೃಪೆ. ನನ್ನನ್ನು ಸುಮ್ಮನೆ ಹೊಗಳಬೇಡಿರಿ. ನಾವೆಲ್ಲಾ ಅವನ ಕೃಪಾಪ್ರಸಾದದಲ್ಲಿ ಬೆಳೆಯುವವರು. ನಿಮಗೆಲ್ಲಾ ದೇವರು ಕಲ್ಯಾಣ ಮಾಡಲಿ" ಎಂದು ಭಟ್ಟರು ಮುಗುಳುನಗೆ ಸೂಸುತ್ತ ಮಾತನಾಡಿದರು. ಭಟ್ಟರ ಆಶೀರ್ವಚನವನ್ನು ಕೇಳಿ ಕೇಶವರಾಯರ ಕಣ್ಣು ಒದ್ದೆಯಾದುವು.

"ನಿಮ್ಮ ಮಾತು ನಿಜ ಭಟ್ಟರೆ! ಶಿವನ ಕೃಪೆಯೇ ನಮ್ಮನ್ನು ಕಾಯುತ್ತದೆ. ಆದರೆ ಶಿವನನ್ನು ನಾವು ಕಾಣಲಾರೆವು. ಅವನ ಜ್ಯೋತಿಯನ್ನು ಮಾತ್ರ ನಮ್ಮ ಕಣ್ಣುಗಳಲ್ಲಿ ಕಾಣುತ್ತೇವೆ." ಎಂದು ಗುರುಲಿಂಗಶೆಟ್ಟರು ಮನಃಪೂರ್ವಕವಾಗಿ ಹೇಳಿದರು.

"ಇದು ತಪ್ಪು ಶೆಟ್ಟರೇ! ಶಿವನ ಜ್ಯೋತಿ ನನಗೊಬ್ಬನಿಗೆ ವಿಾಸಲಾಗಿಲ್ಲ. ಸಮಸ್ತ ಜೀವಿಗಳಲ್ಲಿ ಅದು ಬೆಳಗುತ್ತಿರುತ್ತದೆ. ನಾವು ಜನತಾ ಜನಾರ್ದನನನ್ನು ಕಂಡುಕೊಳ್ಳಬೇಕು. ಜನಸೇವೆಯೇ ದೇವಪೂಜೆ, ಜನರ

ಆನಂದವೇ ಶಿವನಿಗೆ ಸಂತೋಷ. ಕೇಶವರಾಯರಿಂದ ಒಂದು ಕೆಲಸವಾಗ ಬೇಕಾಗಿದೆ ಶೆಟ್ಟರೇ! ಈ ಸಂತೋಷದ ಸಮಯದಲ್ಲಿ ಶಿವನಿಗೂ ಸಂತೋಷ ವಾಗಬೇಡವೇ?" ಭಟ್ಟರು ನೇರವಾಗಿ ಕೇಶವರಾಯರನ್ನು ನೋಡಿದರು.

"ನಿಮ್ಮ ಆಜ್ಞೆ ನನಗೆ ಶಿರಸಾ ಮಾನ್ಯವಾಗಿದೆ, ನಿಮ್ಮ ಮಾತನ್ನು ತೆಗೆದುಹಾಕುವ ಧೈರ್ಯ ಯಾರಿಗಿದೆ? ನನ್ನಿಂದ ಯಾವ ಕೆಲಸವಾಗ ಬೇಕೆಂಬುದನ್ನು ಹೇಳಿಬಿಡಿರಿ." ಕೇಶವರಾಯರು ಭಾವಾವೇಶದಿಂದ ನುಡಿದರು.

"ಶಿವನಿಗೆ ಸಂತೋಷವಾಗುವ ಕಾರ್ಯವನ್ನು ಕೇಶವನು ಮಾಡದೇ ಬಿಟ್ಟಾನೆಯೇ? ಹೇಳಿಬಿಡಿ ಭಟ್ಟರೆ!" ಗುರುಲಿಂಗಶೆಟ್ಟರು ವಿಶ್ವಾಸದಿಂದ ನುಡಿದರು.

"ಹೇಗೂ ಹಳ್ಳಿಯ ಮುಂದಾಳುಗಳೆಲ್ಲ ಕೂಡಿದ್ದೀರಿ. ಈ ಹಳ್ಳಿಗೆ ನೀರಿನ ತಾಪತ್ರಯವೆಷ್ಟೆಂಬುದನ್ನು ನೀವು ಬಲ್ಲಿರಿ. 'ಹುಣಸೀ ಗಿಡ'ದ ಬಾವಿಯೊಂದೇ ಒಳ್ಳೆಯ ಬಾವಿ. ಹಳ್ಳಿಯ ಜನವೆಲ್ಲ ಅಲ್ಲಿಂದಲೇ ನೀರು ತರ ಬೇಕು. ಬೇಸಿಗೆಯಲ್ಲಿ ಅಲ್ಲಿಯೂ ನೀರನ್ನು ಪರಟೆಯಿಂದ ಕೆರೆಯಬೇಕು."

"ಈ ಗೋಳನ್ನು ತಪ್ಪಿಸಲು ಬಹಳ ಪ್ರಯತ್ನಮಾಡಿದ್ದೇವೆ, ಭಟ್ಟರೆ! ಇಲ್ಲಿ ನೀರಿನ ಸೆಲೆಯೇ ಇಲ್ಲವೆಂದು ಹೇಳುತ್ತಾರೆ." ಶಾನುಭೋಗ ಶೀನಪ್ಪ ನವರು ತಮ್ಮ ಜವಾಬ್ದಾರಿಯನ್ನರಿತು ಹೇಳಿದರು.

"ಇನ್ನೊಮ್ಮೆ ಪ್ರಯತ್ನ ಮಾಡುವಾ. ತೇರದಾಳದ ಫಕೀರಸ್ವಾಮಿ ನೀರನ್ನು ಚೆನ್ನಾಗಿ ಗುರುತಿಸುತ್ತಾನಂತೆ. ಅವನನ್ನು ಕರೆಯಿಸುವಾ. ಕೇಶವ ರಾಯರು ವೆಚ್ಚವನ್ನು ವಹಿಸುವರಷ್ಟೆ."

"ಸಂತೋಷದಿಂದ ಖರ್ಚು ಮಾಡುತ್ತೇನೆ. ನಿಮ್ಮ ಪುಣ್ಯದಿಂದ ಇನ್ನೊಂದು ಬಾವಿಯಾದರೆ ನನ್ನ ಸಂತೋಷ ಕಡಿಮೆಯದಲ್ಲ." ಕೇಶವ ರಾಯರು ಅಭಿಮಾನದಿಂದ ಹೇಳಿದರು.

"ನೀನು ಧನ್ಯನಪ್ಪಾ ಕೇಶವರಾಯ!" ಎಂದು ಭಟ್ಟರು ಉದ್ಗಾರ ತೆಗೆದು ಸಂತೋಷಭರಿತರಾದರು.

ಗಂಗನಹಳ್ಳಿಯ ಪೂರ್ವ ದಿಶೆಯಲ್ಲಿರುವ ಮಾವಿನ ತೋಪಿನ ಮಧ್ಯದ ನೆಲದಲ್ಲಿ ಸವಿನೀರಿನ ಸೆಲೆಯಿದೆ ಎಂದು ಫಕೀರಸ್ವಾಮಿ ನಿರ್ಣಯ ಕೊಟ್ಟಾಗ ಹಳ್ಳಿಯ ಜನರಿಗಾದ ಆನಂದವೂ ಆಶ್ಚರ್ಯವೂ ಅಷ್ಟಿಷ್ಟಲ್ಲ.

ಎರಡು ವರುಷಗಳಲ್ಲಿ ವಿಸ್ತಾರವಾದ ಸವಿನೀರಿನ ಬಾವಿ ಸಿದ್ಧ ವಾಯಿತು. ಕೇಶವರಾಯರು ಹೇರಳವಾಗಿ ಹಣ ಖರ್ಚು ಮಾಡಿ ಇಡಿಯ

ಬಾವಿಯನ್ನು ಹೊಡೆದ ಕಲ್ಲುಗಳಿಂದ ಕಟ್ಟಿಸಿದರು. ನೀರನ್ನು ತುಂಬುವ ಮೊದಲ ದಿನ ಸ್ವತಃ ಭಟ್ಟರು ದಂಪತಿ ಸಮೇತರಾಗಿ ಅಲ್ಲಿ ಬಂದು ಕೇಶವ ರಾಯರಿಂದ ಪೂಜೆ ಮಾಡಿಸಿದರು. ಊರ ಮುತ್ತೈದೆಯರು ಕಲಶಪೂಜೆ ಮಾಡಿ ನೀರನ್ನು ತುಂಬಿಕೊಂಡರು. ಭಟ್ಟರ ಮಗ ನೀಲಕಂಠನು ತಂದೆಯ ಕೈಹಿಡಿದು ನಿಂತುಕೊಂಡು ಎಲ್ಲವನ್ನೂ ನೋಡುತ್ತಿದ್ದನು. ಭಟ್ಟರ ಎರಡನೆಯ ಮಗುವನ್ನು ಸರಸ್ವತಿ ಸಂಭ್ರಮದಿಂದ ಎತ್ತಿಕೊಂಡಿದ್ದಳು. "ಇದೆಲ್ಲ ನಿನ್ನ ತಾತನ ಪುಣ್ಯ ನರಹರೀ!" ಎನ್ನುತ್ತ ಲಟಲಟ ಮುದ್ದು ಕೊಟ್ಟಳು.

ಭಟ್ಟರ ಧರ್ಮಪತ್ನಿ ಸರಸ್ವತಿಯು ಮಗುವನ್ನು ಪತಿಯ ಕಡೆಗೆ ಚಾಚಿ "ಈ ನೀರು ಮೋಹನನ ಪುಣ್ಯ" ಎಂದಾಗ ಭಟ್ಟರು ಆಕಾಶದ ಕಡೆಗೆ ಮುಖವನ್ನೆತ್ತಿ "ಇದು ಅವನ ಕೃಪೆ" ಎಂದರು.

ಗಂಗನಹಳ್ಳಿಯ ಸವಿನೀರಿನ ಕೊರತೆ ನೀಗುವಂತೆ 'ರಾಯರ ಬಾವಿ' ಯನ್ನು ದೊರಕಿಸಿಕೊಟ್ಟ ಭಟ್ಟರು ಆ ಹಳ್ಳಿಯ ಕಣ್ಣುಮಣಿಗಳಾದರು. ಅವರ ಕೀರ್ತಿ ಪ್ರಭಾವಗಳು ಎಲ್ಲರ ನಾಲಿಗೆಯ ಮೇಲೆ ಕುಣಿಯತೊಡಗಿದವು. ಜನಾದರಣೆ ತುಂಬಿ ನಿಂತಿತು. ಹಳ್ಳಿಯೇ ಅವರ ಸಹಾಯಕ್ಕೆ ಸಿದ್ಧವಾಯಿತು.

ಇತ್ತೀಚೆಗೆ ಭಟ್ಟರು ರಾತ್ರಿ ಬಹಳ ಹೊತ್ತಿನಲ್ಲಿ ಎದ್ದು ವೈದ್ಯಕೀಯ ಗ್ರಂಥಗಳನ್ನು ಅಭ್ಯಾಸ ಮಾಡತೊಡಗಿದರು. ಜನಸೇವೆಗೆ ಈ ಜ್ಞಾನವು ಅತ್ಯಾವಶ್ಯಕವೆಂದು ಕಂಡುಬಂದದ್ದರಿಂದ ಅವರು ಈ ವಿದ್ಯೆಯನ್ನು ಗಳಿಸಿಕೊಳ್ಳಲು ಸಾಹಸ ಮಾಡತೊಡಗಿದರು. ಅವರ ಪರಿಚಯದ ಮಿತ್ರನಾದ ಸಾಂಗಲಿಯ ಮಹಾವೈದ್ಯನೊಬ್ಬನನ್ನು ಆರು ತಿಂಗಳವರೆಗೆ ಮನೆಯಲ್ಲಿಟ್ಟುಕೊಂಡು ಅವನಿಂದ ಆ ಶಾಸ್ತ್ರವನ್ನು ಕಲಿತರಲ್ಲದೆ ಎಲ್ಲ ವಿಧಾನವನ್ನೂ ತಿಳಿದುಕೊಂಡರು. ರೋಗ ಚಿಕಿತ್ಸೆ, ರೋಗನಿದಾನ, ಔಷಧ-ಉಪಚಾರ, ಪಥ್ಯ, ನಾಡಿಯ ಜ್ಞಾನ ಮೊದಲಾದವುಗಳನ್ನು ಕರತಲಾಮಲಕ ಮಾಡಿಕೊಂಡರು. ಅವರು ಅಲ್ಪಾವಧಿಯಲ್ಲಿ ದೊರಕಿಸಿಕೊಂಡ ಈ ವಿದ್ಯೆಯನ್ನು ನೋಡಿ ಸ್ವತಃ ವೈದ್ಯರೇ ಬೆರಳುಕಚ್ಚಿದರು. "ನೀನು ಮಹಾಮಹಿಮನಪ್ಪ!" ಅನ್ನುವಂತಾಯಿತು ಆ ವೈದ್ಯರಿಗೆ. ಅವರು ಮರಳುವಾಗ ಸಂಪೂರ್ಣ ತೃಪ್ತಿಯಿಂದಲೇ ಮರಳಿದರು.

ಭಟ್ಟರು ವೈದ್ಯರೂ ಆದ ಸಂಗತಿಯನ್ನು ತಿಳಿದ ಜನ "ಅವರಿಗೆ ಅಸಾಧ್ಯವಾದುದು ಯಾವುದಿದೆ?" ಎಂದು ಹೊಗಳತೊಡಗಿದರು. ಭಟ್ಟರು ಇತ್ತೀಚೆಗೆ ತಮ್ಮ ದೈನಂದಿನ ಕಾರ್ಯದಲ್ಲಿ ರೋಗಿಗಳನ್ನು ನೋಡುವುದ

ಕ್ಕಾಗಿ ಎರಡು ತಾಸುಗಳನ್ನು ಮೀಸಲಿಡಬೇಕಾಯಿತು. ಈ ಕಾರ್ಯಕ್ರಮ ದಲ್ಲಿ ಅವರಿಗಾಗುವ ನೆಮ್ಮದಿ ಅಷ್ಟಿಷ್ಟಲ್ಲ. ಅವರು ರೋಗನಿದಾನ ಮಾಡಿ ಕಾಡೆ-ಕಷಾಯಗಳನ್ನು ಹೇಳುತ್ತಿದ್ದರು. ಯಾರಿಂದಲೂ ಒಂದು ಕಾಸನ್ನೂ ಅಪೇಕ್ಷಿಸುತ್ತಿರಲಿಲ್ಲ. ಇದು ಕೂಡ ದೇವರ ಸೇವೆಯೆಂದು ನಂಬಿದರು. ಅವರ ಧರ್ಮಪತ್ನಿ ಅವರಿಗೆ ಈ ಕಾರ್ಯದಲ್ಲಿ ತುಂಬಾ ಸಹಾಯ ಮಾಡ ತೊಡಗಿದರು. ಎರಡು ಮಕ್ಕಳ ತಾಯಿ ಮನೆಗೆಲಸಗಳ ಜೊತೆಗೆ ಈ ಕಾರ್ಯವನ್ನೂ ಹೊತ್ತುಕೊಂಡಳು. ರೋಗಿಗಳನ್ನು ಕಂಡು ಅವಳ ಮನ ಕರಗುತ್ತಿತ್ತು. ಆ ರೋಗ ಮಾಯವಾದಾಗ ಅವಳು ಹೊಸ ಜೀವನವನ್ನು ಕಾಣುತ್ತಿದ್ದಳು.

೨

ಸೋಮವಾರ ಭಟ್ಟರಿಗೊಂದು ವಿಶೇಷ ದಿನ. ಆ ದಿನ ಅವರು ದೈನಂದಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಎಲ್ಲವನ್ನೂ ಧರ್ಮಪತ್ನಿಗೆ ಒಪ್ಪಿಸಿ ಶಿಷ್ಯರಿಗೆ ಎಲ್ಲವನ್ನೂ ಚಾಚೂ ತಪ್ಪದಂತೆ ನೆರವೇರಿಸಲು ಹೇಳಿ ತಾವು ಆ ದಿನದ ಧ್ಯಾನಕ್ಕೆ ತೆರಳುತ್ತಿದ್ದರು. ಅವರು ತಮ್ಮ ಧ್ಯಾನವನ್ನು ಮುಗಿಸಿ ಕೊಂಡು ಮಧ್ಯಾಹ್ನದ ಸಮಯಕ್ಕೆ ಬರುವುದು ಪರಿಪಾಠವಾಗಿಬಿಟ್ಟಿತು. ಆ ದಿನ ಶಿಷ್ಯರಿಗೂ ಒಂದು ವಿಶೇಷ ದಿನ. ಅದಕ್ಕೆ ಕಾರಣವಿಲ್ಲದಿರಲಿಲ್ಲ. ಗುರುಗಳ ಪ್ರಸಾದ ಸಿಗುವ ದಿನವೇ ಅದು. ಆ ಹೊತ್ತು ಶಿಷ್ಯರು ಮಧುಕರಿ ಗಾಗಿ ಹೋಗಬೇಕಾಗುತ್ತಿರಲಿಲ್ಲ. ಆ ಕೆಲಸವನ್ನು ಭಟ್ಟರೇ ಮಾಡುತ್ತಿದ್ದರು.

ಸೋಮವಾರ ಪ್ರಾತಃಕಾಲ ಭಟ್ಟರು ಸೂರ್ಯೋದಯಕ್ಕೆ ಬಹಳ ಮೊದಲೇ ಎದ್ದು ದೇವರ ಮನೆಯನ್ನು ಸ್ವಚ್ಛವಾಗಿ ಗುಡಿಸಿ ಒಂದು ಕೊಡ ವನ್ನೂ ಎರಡು ತಂಬಿಗೆಗಳನ್ನೂ, ಒಂದು ಸಂಧ್ಯಾವಂದನೆಯ ತಟ್ಟೆಯನ್ನೂ, ಥಾಲಿತೀರ್ಥದ ಸವುಟನ್ನೂ ತೆಗೆದುಕೊಂಡು ಒಗೆದ ಪಂಚೆಗಳೊಂದಿಗೆ 'ರಾಯರ ಬಾವಿ'ಯ ಮಾರ್ಗವಾಗಿ ತೆರಳುತ್ತಿದ್ದರು. ಅಲ್ಲಿ ಆ ಪಾತ್ರೆ ಗಳನ್ನೆಲ್ಲಾ ಸ್ವಚ್ಛವಾಗಿ ಬೆಳಗಿ ಪಂಚೆಗಳನ್ನು ಒದ್ದೆ ಮಾಡುವ ಹೊತ್ತಿಗೆ ಸೂರ್ಯೋದಯವಾಗುತ್ತಿತ್ತು. ಕೂಡಲೇ ಜಳಕ ಮಾಡಿ ಒದ್ದೆಯ ಮೈಯ ಲ್ಲಿಯೇ ನೀರನ್ನು ತುಂಬಿಕೊಂಡು ರಾಮೇಶ್ವರ ಗುಡಿಗೆ ತೆರಳುತ್ತಿದ್ದರು. ಮಾರ್ಗದಲ್ಲಿ ಸಾಲಾಗಿ ನಿಂತು ನೀರಿನ ಪ್ರತೀಕ್ಷೆಮಾಡುತ್ತಿದ್ದ ಹೊಲೆಯರ ಹೆಂಗಳೆಯರಿಗೆ ಐದು ಕೊಡ ನೀರು ಹಣಿಸಿ ಮತ್ತೊಮ್ಮೆ ಸ್ನಾನಮಾಡಿ

ಗುಡಿಗೆ ತಲುಪುತ್ತಿದ್ದರು. ಅಲ್ಲಿ ರಾಮೇಶ್ವರನಿಗೆ ಅಭಿಷೇಕ ಸಲ್ಲಿಸಿ ಪೂಜೆ ಮಾಡಿ ಮಧ್ಯಾಹ್ನದವರೆಗೆ ಧ್ಯಾನಾಸಕ್ತರಾಗುತ್ತಿದ್ದರು. ಅಲ್ಲಿಂದ ನೇರವಾಗಿ ಮನೆಗೆ ಬಂದು ಮನೆಯ ದೇವರ ಪೂಜೆ ಮಾಡಿ ಸ್ವಚ್ಛವಾದ ಜೋಳಿಗೆ ಯನ್ನು ಹಿಡಿದುಕೊಂಡು 'ಮಧುಕರಿ'ಗಾಗಿ ತೆರಳುತ್ತಿದ್ದರು. ಭಟ್ಟರ ಬರ ವನ್ನೇ ಹಾರೈಸುತ್ತ ನಿಂತ ಜನ ಅವರು ಬಂದು 'ಭವತಿ ಭಿಕ್ಷಾಂ ದೇಹಿ' ಎನ್ನುವಾಗಲೇ ಜೋಳಿಗೆಯನ್ನು ತುಂಬಿಬಿಡುತ್ತಿದ್ದರು. ಅವರಿಗೆ ಭಿಕ್ಷೆ ನೀಡಿದ ಬಳಿಕವೇ ಆ ಓಣಿಯ ಜನರಿಗೆ ಊಟ. ಭಾರವಾದ ಜೋಳಿಗೆಯನ್ನು ಹೊತ್ತುಕೊಂಡು ಭಟ್ಟರು ಮನೆಗೆ ಬರುವ ಹೊತ್ತಿಗೆ ಶಿಷ್ಯರೆಲ್ಲ ಎಲೆ ಹಾಕಿ ಕೊಂಡು ಸಿದ್ಧವಾಗುತ್ತಿದ್ದರು. ಅಂದು ಎಲ್ಲರಿಗೂ ಆ ಜೋಳಿಗೆಯೇ ಅಕ್ಷಯ ಪಾತ್ರೆ. ಅನೇಕ ಭಕ್ತರು ಆ ಜೋಳಿಗೆಯ ಪ್ರಸಾದವನ್ನು ತೆಗೆದುಕೊಂಡು ಮನೆಗೆ ಹೋಗಿ ತಮ್ಮ ಊಟದಲ್ಲಿ ಬೆರಸಿಕೊಂಡು ಊಟ ಮಾಡುತ್ತಿದ್ದರು. ಆ ಪವಿತ್ರ ಅನ್ನ ಅವರಿಗೆ ಪರಮ ಪಾವನವಾಗುತ್ತಿತ್ತು. ಊಟವಾದಮೇಲೆ ಒಂದು ತಾಸು ವಿಶ್ರಾಂತಿ. ಕೂಡಲೇ ಭಜನೆಗೆ ಆರಂಭ. ಆ ಭಜನೆ ಸಂಗೀತ ಮಯವಾಗಿ ಸಾಗುತ್ತಿತ್ತು. ಭಜನೆಯ ಕಾರ್ಯಕ್ರಮ ಸಂಜೆಯವರೆಗೂ ಸಾಗುತ್ತಿತ್ತು. ಆಮೇಲೆ ಭಟ್ಟರು ಎಲ್ಲರನ್ನೂ ಬಿಟ್ಟು ತಾವೊಬ್ಬರೇ ಜಗು ಲಿಯ ಮೇಲೆ ಧ್ಯಾನಾಸಕ್ತರಾಗುತ್ತಿದ್ದರು. ಮರುದಿನದ ವರೆಗೆ ಯಾರೂ ದೇವರ ಮನೆಯ ಕಡೆಗೆ ಹೋಗುತ್ತಿರಲಿಲ್ಲ. ಈ ಸೋಮವಾರಗಳು ಭಟ್ಟರಿಗೆ ಸ್ಫೂರ್ತಿಯನ್ನು ಕೊಡುತ್ತಿದ್ದುವು. ಇಡಿಯ ವಾರದ ದೈನಂದಿನ ಕಾರ್ಯ ಗಳಿಗೆ ಈ ಸೋಮವಾರಗಳು ಸಂಜೀವಿನಿಗಳಾಗುತ್ತಿದ್ದುವು.

ಈ ಸೋಮವಾರವೂ ಭಟ್ಟರು ನಸುಕಿನಲ್ಲಿ ಎದ್ದು 'ರಾಯರ ಬಾವಿ'ಯ ಕಡೆಗೆ ನಡೆದರು. ನೀರನ್ನು ತುಂಬಿಕೊಂಡು ಬರುವಾಗ ದಾರಿಯಲ್ಲಿ ನಿಂತ ಹೊಲೆಯರ ಹಣ್ಣುಮುದುಕಿಯನ್ನು ಕಂಡಾಗ ಅವರ ಕರುಳು ಕಿವಿಚಿತು. "ನನ್ನ ಕೊಡಕ್ಕೆ ಮೊದಲು ಹಾಕು ನನ್ನಪ್ಪಾ!" ಎಂಬ ಆ ದನಿ ಭಟ್ಟರ ನರ ವನ್ನು ಹಿಡಿದು ಜಗ್ಗಿತು. ಅವಳ ಸಾಲಿನಲ್ಲಿ ಐವತ್ತು ಅರವತ್ತು ಜನ ಬರಿ ದಾದ ಕೊಡಗಳನ್ನು ಇಟ್ಟುಕೊಂಡು ಕುಳಿತಿದ್ದರು. ಕುಡಿಯುವ ನೀರಿಗಾಗಿ ಅವರ ನಾಲಿಗೆ ಕುಣಿಯುತ್ತಿತ್ತು. "ಈ ಜನಕ್ಕೆ ನೀರಿಗಾಗಿ ಈ ಪಾಡೇ? ಇದನ್ನು ಹೋಗಲಾಡಿಸಲು ಸಾಧ್ಯವಿಲ್ಲವೆ ? ದುರ್ದೈವಿ ಜೀವಿಗಳು ಹೊಲೆ ಯರ ಹೊಟ್ಟೆಯಲ್ಲಿ ಜನ್ಮತಾಳಿವೆ. ಆಗಲಿ, ಶಿವನ ಸೇವೆ" ಎನ್ನುತ್ತ ಭಟ್ಟರು ಎಲ್ಲರಿಗೂ ನೀರು ಹಣಿಸತೊಡಗಿದರು.

ಆ ದಿನ ಭಟ್ಟರಿಗೆ ರಾಮೇಶ್ವರ ಗುಡಿಯಲ್ಲಿ ಧ್ಯಾನಕ್ಕೆ ಬೇಕಾಗುವ

ಏಕಾಗ್ರತೆ ನೆಲೆನಿಲ್ಲದಾಯಿತು. ಅವರ ಕಣ್ಣು ಮುಂದೆ ಹೊಲೆಯರ ಮುಖಗಳು ತೇಲಿ ತೇಲಿ ಬರತೊಡಗಿದುವು. ಅವರ ಚಿತ್ತ ಭ್ರಮಣೆಗೊಳ್ಳಹತ್ತಿತು. 'ಮುಂದಿನ ದಾರಿಯನ್ನು ತೋರು ತಂದೆ!' ಎಂದು ದೇವರನ್ನು ಕೇಳಿಕೊಳ್ಳಹತ್ತಿದರು.

ಮಂಗಳವಾರ ಸಂಜೆ ಕೇಶವರಾಯರು ಭಟ್ಟರ ಮನೆಗೆ ಬಂದಾಗ ಭಟ್ಟರು "ಗುರುಲಿಂಗಶೆಟ್ಟಿ ಕಾಣುವುದಿಲ್ಲವಲ್ಲ. ಎರಡು ದಿನವಾಯಿತು. ಅವರ ಸುಳಿವೇ ಇಲ್ಲ" ಎಂದು ವಿಚಾರಿಸಿದರು.

"ನಾನು ಈಗ ಅಲ್ಲಿಂದಲೇ ಬಂದೆ ಭಟ್ಟರೆ! ಗುರುಲಿಂಗಶೆಟ್ಟಿ ಮಹಾ ಚಿಂತೆಯಲ್ಲಿ ಮುಳುಗಿಬಿಟ್ಟಿದ್ದಾನೆ. ಅವನ ಹೆಂಡತಿಗೆ ತುಂಬಾ ಖಾಯಿಲೆ. ಕ್ಷೀಣಳಾಗಿ ಹೋಗಿದ್ದಾಳೆ. ಹುಟ್ಟಿದ ಕೂಸೂ ಹಾಗೆಯೇ. ಎಲುಬಿನ ಗೂಡಾಗಿಬಿಟ್ಟಿದೆ. ಆರು ತಿಂಗಳಾದರೂ ಬೇನೆ ಸರಿಯದ್ದರಿಂದ ಮೊನ್ನೆ ಹೋಗಿ ತವರುಮನೆಯಿಂದ ಕರೆದುಕೊಂಡು ಬಂದಿದ್ದಾನೆ. ಅವಳ ತವರಿನವರು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಔಷಧ ಕೊಡಿಸಿದರೂ ರೋಗ ಜಗ್ಗಲಿಲ್ಲವಂತೆ. ಕ್ಷಯದ ವಿಕಾರವಾಗಿರುವುದೇನೋ ಎಂಬ ಭಯ. ನೀವೇ ಕೃಪೆಮಾಡಬೇಕು ಭಟ್ಟರೆ!"

ಕೇಶವರಾಯರ ಮಾತುಗಳನ್ನು ಕೇಳಿ ವಿಶ್ವೇಶ್ವರಭಟ್ಟರು ಚಟ್ಟನೆ ಎದ್ದು ನಿಂತರು. ಧೋತರವನ್ನು ಹೊದ್ದುಕೊಂಡು "ಶೆಟ್ಟಿಯ ಮನೆಗೆ ಹೋಗೋಣ ನಡೆಯಿರಿ" ಎಂದು ಪಡಸಾಲೆಯಿಂದ ಕೆಳಗೆ ಇಳಿದೇಬಿಟ್ಟರು.

"ಶೆಟ್ಟೀ!"

ಭಟ್ಟರ ದನಿಯನ್ನು ಕೇಳಿ ಶೆಟ್ಟರು ಗಡಬಡಿಸಿದರು.

"ಇಲ್ಲದ ಚಿಂತೆಯನ್ನು ಹೊತ್ತುಕೊಂಡು ನೀನೊಬ್ಬನೇ ಕೊರಗಬೇಕೇ? ಒಂದು ಸುದ್ದಿಯನ್ನೂ ನನಗೆ ತಿಳಿಸಬಾರದಾಗಿತ್ತೇ? ಎಂತಹ ಮನುಷ್ಯನಪ್ಪಾ ನೀನು" ಎಂದು ಭಟ್ಟರು ನಡುಮನೆಯ ಮಧ್ಯದಲ್ಲಿ ನಿಂತರು.

"ಹೆರಿಗೆಗೆ ಹೋಗಿ ರೋಗವನ್ನು ಹೊತ್ತು ತಂದಿದಾಳೆ ಭಟ್ಟರೆ. ಆರು ತಿಂಗಳಾಯಿತು. ಯಾವ ಔಷಧವೂ ಆರೋಗ್ಯವನ್ನು ಮರಳಿ ತಾರದಾಗಿದೆ. ಏನು ಮಾಡಲಿ ಹೇಳಿರಿ." ಶೆಟ್ಟಿಯ ಕಣ್ಣುಗಳಲ್ಲಿ ನೀರು ತುಳುಕಾಡಿತು.

"ನೀವು ವೈದ್ಯರನ್ನು ನಂಬುತ್ತೀರಿ. ದೇವರನ್ನು ನಂಬುವುದಿಲ್ಲವಲ್ಲಪ್ಪಾ. ನೋಡೋಣ, ರಾಮೇಶ್ವರನ ಇಚ್ಛೆ ಹೇಗಿದೆ ಹಾಗಾಗುತ್ತದೆ" ಎಂದೆನ್ನುತ್ತ ಭಟ್ಟರು ರೋಗಿಯ ನಾಡಿ ಪರೀಕ್ಷೆ ಮಾಡಿದರು. ಮುಖಲಕ್ಷಣವನ್ನು ನೋಡಿದರು.

"ಈ ತಾಯಿಗೆ ಏನಾಗಿದೆಯೆಂದು ಇಷ್ಟು ಚಿಂತೆ ಶೆಟ್ಟಿ! ಮೂರು ತಿಂಗಳಲ್ಲಿ ಇವಳಿಗೆ ಕಡಿಮೆಯಾಗದಿದ್ದರೆ ಆಮೇಲೆ ಹೇಳು. ದಿನಾಲು ನಾನು ಕೊಡುವ ಪುಡಿಗಳನ್ನು ಜೇನುತುಪ್ಪದಲ್ಲಿ ಬೆರಸಿ ಕೊಡು. ಇದು ಒಂದು ಸಪ್ತಕ ಸಾಗಲಿ. ಆಮೇಲೆ ಅವಳು ದಿನಾಲು ಮಾರುತಿಯ ಗುಡಿಗೆ ಹೋಗಿ ಬರಲಿ. ಇದು ಒಂದು ತಿಂಗಳು ಸಾಗಿದಮೇಲೆ ಊರ ಹೊರಗಿರುವ ಸಿದ್ಧೇಶ್ವರ ದೇವಾಲಯಕ್ಕೆ ಪ್ರತಿದಿನ ಮುಂಜಾನೆ ತಪ್ಪದೆ ಹೋಗಿ ಬರಲಿ. ಆಮೇಲೆ ರೋಗ ಹೇಗೆ ಉಳಿಯುತ್ತದೋ ನೋಡೋಣ. ಕೂಸಿನ ಚಿಂತೆಯೇ ಬೇಡ. ನನ್ನವಳು ಅದರ ಶುಶ್ರೂಷಣೆ ಮಾಡುತ್ತಾಳೆ. ನನ್ನ ಮಗು ಬೇರೆ, ನಿನ್ನ ಮಗು ಬೇರೆಯೆ ?"

ಶೆಟ್ಟಿಯ ಕಣ್ಣುಗಳೊಳಗಿಂದ ಪಳಕ್ಕನೆ ನೀರು ಚಿಮ್ಮಿತು.

"ನಿಮ್ಮ ದಯೆ ನನ್ನ ಪಾರುಮಾಡಬೇಕು ಭಟ್ಟರೆ!"

"ದೇವರ ದಯೆ ಎಲ್ಲರನ್ನೂ ರಕ್ಷಿಸುತ್ತದೆ."

ಭಟ್ಟರ ಧರ್ಮಪತ್ನಿ ದಿನಾಲೂ ಶೆಟ್ಟರ ಕೂಸಿನ ಶುಶ್ರೂಷಣೆಗಾಗಿ ಹೋಗಿ ಬರತೊಡಗಿದರು. ಭಟ್ಟರ ಉಪಚಾರದಿಂದ ಶೆಟ್ಟರ ಪತ್ನಿ ಏಳು ದಿನಗಳಲ್ಲಿ ಮಾರುತಿಗೆ ಹೋಗಿ ಬರುವಂತಾದಳು. ಮುಂದೆ ಮೂರು ತಿಂಗಳಲ್ಲಿ ಅವಳು ಸಿದ್ಧೇಶ್ವರನಿಗೆ ತಪ್ಪದೆ ಮುಂಜಾನೆ ಹೋಗಿ ಬರತೊಡಗಿದಳು. ಆರು ತಿಂಗಳಲ್ಲಿ ಶೆಟ್ಟರ ಮಡದಿ ತುಂಬಿಕೊಂಡ ಕೂಸನ್ನು ಬಗಲಲ್ಲಿ ಹೊತ್ತುಕೊಂಡು ಭಟ್ಟರ ಮನೆಗೆ ಪುರಾಣ ಕೇಳಲು ಬರತೊಡಗಿದಳು.

ಗಂಗನಹಳ್ಳಿಯ ಜನರಿಗೆ ಇದೊಂದು ಪವಾಡವೇ ಆಯಿತು ಶೆಟ್ಟರಿಗಂತೂ ಇದೊಂದು ಅದ್ಭುತವೇ ಅನ್ನಿಸಿತು. ಅವರು ಕೃತಜ್ಞತಾಭಾವದಲ್ಲಿ ಮುಳುಗಿ ಏಳತೊಡಗಿದರು. ಈ ಉಪಕಾರವನ್ನು ಹೇಗೆ ತೀರಿಸಲಿ ಎಂದು ಅವರು ಚಿಂತಿಸತೊಡಗಿದರು.

ಶೆಟ್ಟರ ಮನಸ್ಸಿನಲ್ಲಿ ಒಂದು ಶಿವಾಲಯವನ್ನು ಕಟ್ಟಿಸಬೇಕೆಂಬ ಇಚ್ಛೆ ಮೊದಲಿನಿಂದಲೂ ಇತ್ತು. ಈಗ ತಮ್ಮ ಒಂದು ಆಪತ್ತು ಕಳಚಿ ಹೋದದ್ದರಿಂದ ಆ ಸಂತೋಷದ ಸ್ಮರಣಾರ್ಥವಾಗಿ ಆ ಕಾರ್ಯವನ್ನು ಕೂಡಲೇ ನೆರವೇರಿಸಬೇಕೆಂದು ಅನ್ನಿಸಿತು. ಈ ಮಾತನ್ನು ಭಟ್ಟರ ಕಿವಿಯ ಮೇಲೆ ಹಾಕಿ ಕಾರ್ಯಪ್ರವೃತ್ತರಾಗಬೇಕೆಂದು ನಿಶ್ಚಯಿಸಿದರು. ಅಂತೆಯೇ ಆ ದಿನ ಅವರು ಗೆಳೆಯರೊಂದಿಗೆ ಭಟ್ಟರ ಮನೆಗೆ ಬಂದುಬಿಟ್ಟರು.

"ನಿಮ್ಮನ್ನೊಂದು ಮಾತು ಕೇಳಲು ಶೆಟ್ಟರು ಬಂದಿದ್ದಾರೆ ಭಟ್ಟರೆ!" ಎಂದು ಶಾನುಭೋಗ ಶೀನಪ್ಪನವರು ಮಾತು ತೆಗೆದರು.

"ಮತ್ತಾವ ವಿಚಾರ ಬಂದಿತು ಶೆಟ್ಟರಿಗೆ?" ಭಟ್ಟರು ಮುಗುಳುನಗೆಯೊಂದಿಗೆ ಕೇಳಿದರು.

"ನೀವು ಒಪ್ಪಿದರೆ ನಾನೊಂದು ಶಿವಾಲಯವನ್ನು ಕಟ್ಟಿಸಬೇಕೆಂದು ಮಾಡಿದ್ದೇನೆ." ಶೆಟ್ಟರು ತಮ್ಮ ಮನೋಗತವನ್ನು ಸೂಚಿಸಿದರು.

ಶೆಟ್ಟರ ಮಾತುಗಳನ್ನು ಕೇಳಿ ಭಟ್ಟರು ಗಂಭೀರರಾದರು. ಅವರ ಬಾಯಿಂದ ಕೂಡಲೇ ಮಾತುಗಳೇ ಹೊರಡಲಿಲ್ಲ. "ಗಂಗನಹಳ್ಳಿಯಲ್ಲಿ ದೇವಾಲಯಗಳಿಗೇನು ಕೊರತೆಯಾಗಿದೆ. ಓಣಿಗೊಂದು ಗುಡಿಯಿಲ್ಲವೆ?" ಭಟ್ಟರ ಮಾತಿನ ರೀತಿ ವಿಚಿತ್ರವಾಗಿ ಹರಿಯಿತು.

"ದೇವರ ಪ್ರೀತ್ಯರ್ಥವಾಗಿ ಇನ್ನೊಂದು ದೇವಾಲಯುವನ್ನು ಕಟ್ಟಿಸಿದರೆ ಅದರಿಂದ ಕೇಡೇನು ಭಟ್ಟರೆ?" ಬಡಿಗರ ಮಾನಪ್ಪನು ನಡುವೆ ಬಾಯಿ ಹಾಕಿ ಕೇಳಿದನು.

"ದೇವಾಲಯುಗಳನ್ನು ಕಟ್ಟಿಸಿದರೆ ಮಾತ್ರ ದೇವರು ಪ್ರೀತಿಯಾಗುವನೆಂದು ನೀವು ನಂಬಿದ್ದರೆ ಅದು ತಪ್ಪು. ಹೀಗೆಂದ ಮಾತ್ರಕ್ಕೆ ದೇವಾಲಯಗಳು ಬೇಡವೆಂದು ನನ್ನ ಅಭಿಪ್ರಾಯವಲ್ಲ. ದೇವಾಲಯುಗಳು ನಮ್ಮ ಧರ್ಮದ ಜೀವನಾಡಿಗಳಾಗಿವೆ—ನಿಜ. ಆದರೆ ಇದ್ದ ದೇವಾಲಯುಗಳನ್ನು ನಾವು ಕಾಪಾಡಬೇಕಾಗಿದೆ. ಸುವ್ಯವಸ್ಥಿತವಾಗಿ ಅಲ್ಲಿ ಪೂಜೆ ನಡೆಯಬೇಕಾಗಿದೆ. ದೇವಾಲಯುಗಳ ಗಾಂಭೀರ್ಯವನ್ನು ನಾವು ಕಡೆಗಣಿಸಹತ್ತಿದ್ದೇವೆ. ಅಲ್ಲಿಯ ವಾತಾವರಣವು ಭಕ್ತಿಭಾವವನ್ನು ಅರಳಿಸುವಂತೆ ಆಗಬೇಕು. ನಮ್ಮ ಗುಡಿಗಳನ್ನು ಇಲಿ ಹೆಗ್ಗಣಗಳಿಂದ ಪಾರುಮಾಡಬೇಕಾಗಿದೆ. ಈ ಕೆಲಸವು ಗಂಗನಹಳ್ಳಿಯಲ್ಲಿ ನಡೆಯಬೇಕಾಗಿದೆ. ಅದಕ್ಕೆ ತಕ್ಕ ಏರ್ಪಾಡು ಶಾಶ್ವತವಾಗಿ ನಿಲ್ಲಬೇಕಾಗಿದೆ. ದೇವರ ಪ್ರೀತಿಸಂಪಾದನೆಗಾಗಿ ಗುಡಿಯನ್ನು ಕಟ್ಟಿಸುತ್ತಿದ್ದರೆ ಸದ್ಯಕ್ಕೆ ಆ ಮಾತು ಬೇಡ ಶೆಟ್ಟರೆ! ದೇವರ ಪ್ರೀತಿಸಂಪಾದನೆಗೆ ಮಾಡುವ ಬೇರೆ ಕೆಲಸವೊಂದಿದೆ. ಅದನ್ನು ವರುಷವೆಲ್ಲ ನಾನು ಯೋಚಿಸಿದ್ದೇನೆ. ಶೆಟ್ಟರ ಬಳ್ಳಿ ದೇವರ ದಯೆಯಿಂದ ಹಬ್ಬಿದೆ. ದೇವರ ಬಳ್ಳಿ ಅದು. ಆ ಬಳ್ಳಿ ಹೂ ಬಿಡುತ್ತದೆ. ಆ ಬಳ್ಳಿಗೆ ಸವಿನೀರನ್ನು ಹನಿಸುವ ಕಾರ್ಯವೊಂದು ಶೆಟ್ಟರಿಗೆ ಮೀಸಲಾಗಿದೆ." ಭಟ್ಟರ ಮಾತುಗಳನ್ನು ಕೂಡಿದ ಗೆಳೆಯರು ಭಕ್ತಿಭಾವದಿಂದ ಕೇಳಿದರು. ಅವರಿಗೆ ಭಟ್ಟರ ಮನಸ್ಸಿನಲ್ಲಿ ಯಾವುದೋ ಒಂದು ಪುಣ್ಯಕಾರ್ಯದ ಹೊಳಪು ಮೂಡಿದೆ ಎಂದು ನಿರ್ಧಾರವಾಯಿತು.

"ದೇವರ ಪ್ರೀತಿಗಾಗಿ ನಾನು ಮಾಡುವ ಕಾರ್ಯವಾದರೂ ಯಾವುದು ಹೇಳಿರಿ ಭಟ್ಟರೆ. ಅದನ್ನು ಪಾಲಿಸಲು ನಾನು ಸಿದ್ಧನಾಗಿದ್ದೇನೆ." ಗುರುಲಿಂಗ

ಶೆಟ್ಟರು ಭಯಭಕ್ತಿಯಿಂದ ಕೇಳಿದರು.

"ರಾಯರ ಬಾವಿಯ ಕಡೆಗೆ ನೀವು ಹೋಗಿದ್ದೀರಾ? ಅಲ್ಲಿ ನೀರಿಗಾಗಿ ಸಾಲುಸಾಲಾಗಿ ನಿಲ್ಲುವ ಹೊಲೆಮಕ್ಕಳನ್ನು ಕಂಡಿದ್ದೀರಾ? ಅವರ ಪರಿತಾಪ ವನ್ನು ನೋಡಿ ಮರುಗಿದ್ದೀರಾ ?"

"ಸಾವಿರ ವರುಷಗಳಿಂದಲೂ ಇದು ನಡೆದು ಬಂದಿದೆ ಭಟ್ಟರೆ! ಈ ಪರಂಪರೆಯನ್ನು ಹೊಲೆಯರೂ ಒಪ್ಪಿದ್ದಾರೆ."

"ಎಂದಮಾತ್ರಕ್ಕೆ ನಾವು ಕಟುಕರಾಗಬೇಕೆ? ಒಂದು ಮಾತು. ಅನೇಕ ವರುಷಗಳಿಂದ ನಡೆದ ಮಾತ್ರಕ್ಕೆ ಅದರಲ್ಲಿ ಸುಧಾರಣೆಯಾಗಲೇಬಾರದೆಂದು ನಿಯಮವೆಲ್ಲಿದೆ? ಅವರು ಅಜ್ಞರು. ಪರಂಪರೆಯನ್ನು ಒಪ್ಪಿದ್ದಾರೆ. ಸಮಾಜ ವನ್ನು ನಂಬಿದ್ದಾರೆ. ನಂಬಿದವರ ಹಿತವನ್ನು ನಾವು ಮಾಡಬೇಕು. ಈ ಹಿತ ದಲ್ಲಿ ದೇವಪ್ರೀತಿಯಿದೆ."

"ಏನಾಗಬೇಕೆಂದು ಸ್ಪಷ್ಟವಾಗಿ ಹೇಳಿಬಿಡಿರಿ."

"ಹೊಲೆಯರ ಓಣಿಯಲ್ಲಿ 'ಶೆಟ್ಟರ ಬಾವಿ'ಯ ನಿರ್ಮಾಣವಾಗಬೇಕು. ಆ ಸಮೃದ್ಧವಾದ ನೀರು ಅವರಿಗೆ ಮೀಸಲಾಗಿರಬೇಕು. ಇದು ಈ ವರುಷ ದಲ್ಲಿಯೇ ಸಾಧ್ಯವಾಗಬೇಕು. ನೀವು ಈ ಕಾರ್ಯವನ್ನು ವಹಿಸಿಕೊಳ್ಳು ತ್ತೀರಾ? ಶೆಟ್ಟರೆ!" ಭಟ್ಟರ ದನಿಯಲ್ಲಿ ವಿಶ್ವಾಸವಿತ್ತು.

"ಈ ವರುಷದ ಕೊನೆಯಲ್ಲಿ ಹೊಲೆಯರು ತಮ್ಮ ಬಾವಿಯಲ್ಲಿಯೇ ನೀರು ಕುಡಿಯುವಂತೆ ಮಾಡುವ ಕೆಲಸ ನನ್ನದು. ನಿಮ್ಮ ಅನುಗ್ರಹದಿಂದ ಈ ಕಾರ್ಯ ನೆರವೇರುವುದು." ಶೆಟ್ಟರು ಸಂತೋಷದಿಂದ ಒಪ್ಪಿಕೊಂಡರು.

"ಹತ್ತು ಶಿವಾಲಯಗಳನ್ನು ಕಟ್ಟಿಸಿದ ಪುಣ್ಯ ನಿನ್ನದಾಯಿತು, ಶೆಟ್ಟಿ! ನಿನ್ನ ಹೆಸರಿನಲ್ಲಿ ದೇವರಿಗೆ ಈ ದಿನ ಸಾಲುದೀಪ ಹಚ್ಚುತ್ತೇನೆ" ಎಂದು ಭಟ್ಟರು ಎದ್ದವರೇ ದೇವರಮನೆಗೆ ನಡೆದರು.

ಒಂದು ವರುಷದಲ್ಲಿಯೇ ಹೊಲೆಯರ ಓಣಿಯಲ್ಲಿ 'ಶೆಟ್ಟರ ಬಾವಿ'ಯ ನಿರ್ಮಾಣವಾಯಿತು. ಹೊಡೆದ ಕಲ್ಲುಗಳಿಂದ ಕಟ್ಟಿದ ಬಾವಿ ಕಂಗೊಳಿಸ ಹತ್ತಿತು. ಹೊಲೆಯರ ದನಗಳಿಗಾಗಿ ಕಲ್ಲಿನ ಡೋಣಿಗಳನ್ನು ಮಗ್ಗುಲಲ್ಲಿಯೇ ಕಟ್ಟಿಸಲಾಯಿತು. ಒಗೆಯುವ ಸೌಕರ್ಯಕ್ಕಾಗಿ ನಾಲ್ಕು ದೊಡ್ಡ ಬಂಡೆಗಲ್ಲು ಗಳನ್ನೂ ಹತ್ತಿರದಲ್ಲಿ ಚಿಕ್ಕಚಿಕ್ಕ ಕಲ್ಲಿನ ಡೋಣಿಗಳನ್ನೂ ಇಡಲಾಯಿತು.

ಚಿಕ್ಕ ಪುಟ್ಟ ರೋಗಗಳಿಗೆ ಔಷಧ ಬೇಡಲು ಬಂದ ಜನಕ್ಕೆಲ್ಲ ಭಟ್ಟರವೇ ಸಿದ್ಧೌಷಧಿ. ಅವರದೇ ಪಥ್ಯ. ಅವರು ಬೇಸರ ಮಾಡಿಕೊಳ್ಳದೆ ಎಲ್ಲರಿಗೂ ಔಷಧ ಕೊಟ್ಟು ಕಳಿಸುತ್ತಿದ್ದರು. ಹೊಲ ಬಿತ್ತಲು ಮುಹೂರ್ತ ತೆಗೆದು

ಕೊಡುವವರು ಭಟ್ಟರೇ. ಪ್ರಯಾಣಕ್ಕಾಗಿ ಒಳ್ಳೇ ದಿನವನ್ನು ಇವರೇ ಹುಡುಕಿ ಕೊಡಬೇಕು. ಯಾವ ಮಂಗಲಕಾರ್ಯ ನಡೆದರೂ ಅದು ಭಟ್ಟರ ಸಲಹೆ ಯಿಂದಲೇ ನಡೆಯಬೇಕು. ಪೂಜೆ ಕಥೆಗಳನ್ನು ನೆರವೇರಿಸುವವರು ಅವರೇ! ಇದು ಕೇವಲ ಒಂದು ಜಾತಿಯವರಿಗೆ ಮೀಸಲಾಗಿರಲಿಲ್ಲ. ಆ ಹಳ್ಳಿಯ ಸಮಸ್ತ ಜನರೂ ಭಟ್ಟರನ್ನು ಗೌರವದಿಂದ ಕಾಣುತ್ತಿದ್ದರು. ಎಲ್ಲ ಜಾತಿಯ ವರೂ ಇಲ್ಲಿ ಸಮಾನವಾದ ಸಲಹೆಯನ್ನು ಪಡೆಯುತ್ತಿದ್ದರು. ತಾರತಮ್ಯವು ಭಟ್ಟರಿಗೆ ಗೊತ್ತಿರಲಿಲ್ಲ. ಅಡವಿಗೆ ಹೋದ ದನವು ತಪ್ಪಿಸಿಕೊಂಡರೆ, ರೈತನು ಭಟ್ಟರ ಕಡೆಗೆ ಬಂದು ಹೇಳಲು ಅವರು ಒಂದು ಹಲಿಗೆಯ ಮೇಲೆ ಒಂದು ಶ್ಲೋಕವನ್ನು ಬರೆದುಕೊಡುತ್ತಿದ್ದರು. ರೈತನು ಆ ಹಲಿಗೆಯನ್ನು ಆ ದನದ ಕಣ್ಣಿಯಲ್ಲಿ ತೊಡಕಿಸಿದರಾಯಿತು. ಆ ದನ ಇದ್ದಲ್ಲಿಂದ ಓಡಿ ಬರುತ್ತಿತ್ತು. ಇದು ಎಲ್ಲ ರೈತರ ನಂಬಿಗೆಯ ಮಾತಾಗಿತ್ತು. ದನಗಳಿಗೆ ಬೇನೆ ಬಂದರೆ ಭಟ್ಟರ ಅಂಗಾರದಿಂದ ಅವಕ್ಕೆ ಗುಣವಾಗುತ್ತಿತ್ತು. ಕೂಸು ಅತ್ತು ಕಿರಿಕಿರಿ ಮಾಡತೊಡಗಿದರೆ ಭಟ್ಟರ 'ರಾಮರಕ್ಷಾ' ಅಂಗಾರವು ಅದನ್ನು ಶಾಂತ ಮಾಡುತ್ತಿತ್ತು. ಕೂಸು ಬೆದರಿ ಬೀಳುತ್ತಿದ್ದರೆ ಭಟ್ಟರ 'ಶಿವಕವಚ'ದ ಅಂಗಾರವು ಅದನ್ನು ಸಾಂತ್ವನಗೊಳಿಸುತ್ತಿತ್ತು. ಭಟ್ಟರು ಬೇರೆ ಬೇರೆ ಜನ ರಿಗೆ ಬೇರೆ ಬೇರೆ ಉಪಚಾರಗಳನ್ನು ಹೇಳುತ್ತಿದ್ದರು. ಕೆಲವರಿಗೆ ಉಪವಾಸ ಮಾಡಲು, ಕೆಲವರಿಗೆ ಮೂಕವಾಗಿ ದೇವರ ಗುಡಿಗೆ ಹೋಗಿಬರಲು, ಕೆಲವರಿಗೆ ದಾನಮಾಡಲು, ಮತ್ತೆ ಕೆಲವರಿಗೆ ಪೂಜೆ ಮಾಡಲು ಹೇಳು ತ್ತಿದ್ದರು. ಜನರಿಗೆ ಭಟ್ಟರ ಮೇಲೆ ಅದ್ಭುತವಾದ ವಿಶ್ವಾಸ. ಆ ವಿಶ್ವಾಸವು ಏನೆಲ್ಲ ಕೆಲಸಗಳನ್ನೂ ಮಾಡಿಸತೊಡಗಿತು. ಅವರ ನಿಃಸ್ವಾರ್ಥ ಸೇವೆಯೇ ಇದಕ್ಕೆ ಕಾರಣವಾಗಿದ್ದಿತು.

ಭಟ್ಟರ ಧರ್ಮಪತ್ನಿ ಅವರಿಗೆ ನೆಳಲಾಗಿ ಬಾಳತೊಡಗಿದರು. ತಮ್ಮ ವ್ಯಕ್ತಿತ್ವವನ್ನೆಲ್ಲ ಅವರು ಭಟ್ಟರ ಕಾರ್ಯದಲ್ಲಿ ಸಮಾವೇಶ ಮಾಡಿಬಿಟ್ಟಿ ದ್ದರು. ಅವರು ತಮ್ಮ ಮಕ್ಕಳಿಗೆ ಮಾತ್ರ ತಾಯಿಯಾಗಿರಲಿಲ್ಲ. ಶಿಷ್ಯರಿಗೂ ತಾಯಿಯಾಗಿದ್ದರು. ನೆರೆಹೊರೆಯವರಿಗೂ ತಾಯಿಯಾಗಿ ಬಾಳುತ್ತಿದ್ದರು. ಯಾರ ಕೂಸಿಗೇ ದೇಹಾಲಸ್ಯವಾಗಲಿ, ಈ ಧರ್ಮಪತ್ನಿ ಅವರ ಮನೆಗೆ ಹೋಗಿ ಉಪಚಾರ ಮಾಡಿ ಬರುತ್ತಿದ್ದರು. ಹೆರಿಗೆಯ ಕಾಲದಲ್ಲಿ ಭಟ್ಟರ ಪತ್ನಿ ಯದೇ ಧೈರ್ಯ. ಈ ಕೆಲಸದಲ್ಲಿ ಅವರು ಎಂದೂ ಹಿಂದುಮುಂದೆ ನೋಡು ತ್ತಿರಲಿಲ್ಲ. ಯಾವ ಜಾತಿಯವರೇ ಇರಲಿ, ಹೆರಿಗೆಯ ಸಮಯದಲ್ಲಿ ಇವರು ಹೋಗಿ ನಿಲ್ಲುತ್ತಿದ್ದರು. ಸಮಯ ಬಂದರೆ ತಮ್ಮ ನೆರವನ್ನು ನೀಡುತ್ತಿದ್ದರು.

ಒಂದು ದಿನ ಮಧ್ಯರಾತ್ರಿಯ ಸಮಯದಲ್ಲಿ ಭಟ್ಟರನ್ನು ಯಾರೋ ಒಂದೇ ಸಮನೆ ಕೂಗಿಕೊಳ್ಳಹತ್ತಿದರು. ಬಾಗಿಲು ತೆರೆದಾಗ ಮಾದರ ಚೆನ್ನಪ್ಪ ಗಾಬರಿಯಾಗಿ ನಿಂತಿದ್ದನು.

"ನಿನಗಾವ ತೊಂದರೆಯೋ ಚೆನ್ನ!"

"ಏನು ಹೇಳಲಿ ದೇವರೆ, ಮೂರು ದಿನಗಳಾಯಿತು. ಒಂದೇ ಸಮನೆ ಇವಳಿಗೆ ಬೇನೆ. ಆದರೂ ಹೆರಿಗೆ ಕಾಣದಾಗಿದೆ. ಅಮ್ಮನವರು ಬಂದರೆ...." ಚೆನ್ನಪ್ಪ ಸಂಶಯದಿಂದ ಕಾತರನಾದನು. ಅವನ ಬಾಯಿಂದ ಮಾತೇ ಹೊರಡಲಿಲ್ಲ.

"ಹುಚ್ಚಪ್ಪ. ನೀನೇನು ಹೊರಗಿನವನೇ ? ಈ ಮೊದಲೇ ಏಕೆ ತಿಳಿಸ ಲಿಲ್ಲ?" ಎಂದೆನ್ನುತ್ತ ಭಟ್ಟರು ಧರ್ಮಪತ್ನಿಗೆ ಸುದ್ದಿಯನ್ನು ತಿಳಿಸಲು ಅವರು ಒಂದೇ ನೆಗೆತಕ್ಕೆ ಹೊರಗೆ ಬಂದು ಚೆನ್ನಪ್ಪನನ್ನು ಹಿಂಬಾಲಿಸಿದರು.

ಧರ್ಮಪತ್ನಿ ಚೆನ್ನಪ್ಪನ ಗುಡಿಸಿಲಿಗೆ ಹೋದಾಗ ಅವನ ಐದು ಮಕ್ಕಳು ಗಾಬರಿಯಾಗಿ ಕುಳಿತಿದ್ದುವು. ಹರಕು ಚಿಂದಿಯೇ ಆಭರಣವಾದ ಮಕ್ಕಳವು. ಧರ್ಮಪತ್ನಿ "ಗಾಬರಿಯಾಗಬೇಡಿರಿ ಮಕ್ಕಳೇ! ನಿಮಗೆ ಇನ್ನೊಬ್ಬ ತಮ್ಮ ಬರುತ್ತಾನೆ" ಎಂದು ಹೇಳಲು ಚೆನ್ನಪ್ಪ "ನಿನ್ನ ಪುಣ್ಯ ನನ್ನ ತಾಯಿ! ಈ ಮಕ್ಕಳ ತಾಯಿಯನ್ನು ಬದುಕಿಸಿರಿ" ಎಂದು ಬಿಕ್ಕಳಿಸಿ ದನು.

ಬೆಳಗು ಮುಂಜಾನೆ ಚೆನ್ನಪ್ಪನ ಹೆಂಡತಿ ಗಂಡುಮಗುವನ್ನು ಹೆತ್ತಳು. ಆ ತಾಯಿ ಸುಖರೂಪದಿಂದ ಪಾರಾದಳು. ಧರ್ಮಪತ್ನಿ ಕೂಸನ್ನು ಹೊರಗಿನ ಅಂಗಳಕ್ಕೆ ತಂದು "ಏ ಚೆನ್ನಾ! ನಾನು ಹೇಳಿದ್ದಿಲ್ಲವೇ ಈ ಮುಟ್ಠಾಳ ಬರುವ ನೆಂದು" ಎಂದು ಕುಲುಕುಲು ನಕ್ಕಾಗ ಚೆನ್ನನ ಕಣ್ಣಾಲಿ ತುಂಬಿ ನಿಂತಿತು.

"ತಾಯಿ! ತಾಯಿ!" ಎಂದು ಚೆನ್ನ ಅಡ್ಡಬಿದ್ದನು.

ಧರ್ಮಪತ್ನಿ ಮನೆಗೆ ಹೊರಟು ನಿಂತಾಗ ಹೊಲೆಯರ ಕೇರಿಯೇ ಅವ ರನ್ನು ಅಭಿಮಾನದಿಂದ ನೋಡತೊಡಗಿತು. ಈ ಕೇರಿಯಲ್ಲಿ ಯಾರೂ ಹೀಗೆ ಬಂದು ಸಹಾಯ ನೀಡಿರಲಿಲ್ಲ. ಭಟ್ಟರ ಪತ್ನಿ ಅವರ ಪಾಲಿನ ದೇವತೆಯಾಗಿ ಪರಿಣಮಿಸಿದರು.

ಧರ್ಮಪತ್ನಿ ಮೈ ತೊಳೆದುಕೊಂಡು ಮನೆಗೆ ಹೋದಾಗ ಭಟ್ಟರಿಗೆ ಬಹಳ ತೃಪ್ತಿಯಾಯಿತು. "ಆ ಕೂಸಿನ ಹೆಸರಿನಲ್ಲಿ ಒಂದು ದೀಪ ಹಚ್ಚು" ಎಂದು ಹೇಳಿದರು.

೨

ಪ್ರತಿ ಗುರುವಾರಕ್ಕೊಮ್ಮೆ ಭಟ್ಟರು ಹಳ್ಳಿಯ ಗುಡಿಗಳಿಗೆಲ್ಲ ಶಿಷ್ಯರೊಂದಿಗೆ ಹೋಗಿ ಬರುತ್ತಿದ್ದರು. ಆ ಗುಡಿಗಳಲ್ಲಿ ಕಂಡುಬರುವ ಅನಾವಸ್ಥೆಯನ್ನು ಕಂಡು ಅವರು ಮರಮರನೆ ಮರುಗುತ್ತಿದ್ದರು. ಆ ಗುಡಿಗಳ ಪೂಜಾರಿಗಳು ಮೇಲ್ವಿಚಾರಣೆಯನ್ನು ಚನ್ನಾಗಿ ಮಾಡುತ್ತಿರಲಿಲ್ಲ. ಇದು ಪೂಜಾರಿಯ ಕೆಲಸವೆಂದು ಹಳ್ಳಿಯವರೂ ಕಡೆಗಣಿಸುತ್ತಿದ್ದರು. ಹೀಗಾಗಿ ಅನೇಕ ಗುಡಿಗಳಲ್ಲಿ ಕಸಗುಡಿಸುವುದೂ ನಿಂತುಹೋಗಿತ್ತು. ಆ ಗುರುವಾರ ಅವರು ಕಾಳಿಕಾದೇವಿಯ ಗುಡಿಯಲ್ಲಿ ನಿಂತಾಗ ಅವರಿಗೊಂದು ಯೋಚನೆ ಹೊಳೆಯಿತು. ಅವರು ಶಿಷ್ಯರನ್ನು ಉದ್ದೇಶಿಸಿ ಮಾತು ಹೇಳತೊಡಗಿದರು :

"ಶಿಷ್ಯರೆ! ಈ ದೇವಾಲಯಗಳು ನಮ್ಮ ಧರ್ಮದ ಸ್ಫೂರ್ತಿಗಳಾಗಿವೆ. ನಮ್ಮ ಧರ್ಮಬುದ್ಧಿಯನ್ನು ಜಾಗೃತವಾಗಿಡುವ ನಿತ್ಯ ನಂದಾದೀಪಗಳಾಗಿವೆ. ಇವುಗಳನ್ನು ಕಟ್ಟಿಸಿದ ಹಿರಿಯರು ಈ ಬುದ್ಧಿಯಿಂದಲೇ ಇವನ್ನು ನಿರ್ಮಿಸಿ ಈ ಗುಡಿಗಳಲ್ಲಿ ಪವಿತ್ರವಾದ ವಾತಾವರಣವನ್ನು ಕಾಯ್ದುಕೊಂಡು ಹೋಗಲು ಒಬ್ಬ ಮೇಲ್ವಿಚಾರಕನನ್ನು ನಿಯಮಿಸಿ ಅವನಿಗೆ 'ದತ್ತಿ'ಗಳನ್ನು ಕೊಡಮಾಡಿದರು. ಗುಡಿಯ ಕೆಲಸವೇ ಅವನ ಕೆಲಸವಾಗಬೇಕೆಂದು ಅವರ ಇಚ್ಛೆಯಾಗಿದ್ದಿತು. ಈ ಆಸ್ತಿ ಇದಕ್ಕಾಗಿಯೇ ಅವನಿಗೆ ಮೀಸಲಾಗಿದ್ದಿತು. ಆದರೆ ಅವನು ಆಸ್ತಿಯನ್ನು ಅನುಭೋಗಿಸತೊಡಗಿದನೇ ಹೊರತು ತನ್ನ ನಿಜವಾದ ಕರ್ತವ್ಯವನ್ನು ಮರೆತುಬಿಟ್ಟನು. ದೇವಾಲಯವು ಕೂಡ ತನ್ನ ಆಸ್ತಿಯೆಂದೇ ಅವನು ತಿಳಿಯತೊಡಗಿದನು. ಇದರಿಂದ ಆದ ಅನರ್ಥವು ಅಷ್ಟಿಷ್ಟಲ್ಲ. ಮುಖ್ಯವಾದ ಉದ್ದೇಶವು ದೂರ ಉಳಿದು ಗುಡಿಗಳ ಪೂಜ್ಯ ವಾತಾವರಣವು ದೂರ ಸರಿಯಿತು. ಶಿಷ್ಯರೆ! ದೇವಾಲಯಗಳು ವ್ಯಕ್ತಿಯ ಆಸ್ತಿಗಳಲ್ಲ; ಸಮಾಜದ ಸೊತ್ತುಗಳು. ವ್ಯಕ್ತಿಯೊಬ್ಬನು ಕರ್ತವ್ಯಚ್ಯುತನಾದರೆ ಸಮಾಜವು ಕಣ್ಣು ಮುಚ್ಚಬಾರದು. ದೇವಾಲಯಗಳ ಪವಿತ್ರತೆಯನ್ನು ಕಾಪಾಡುವ ಹೊಣೆಯು ಒಬ್ಬ ಪೂಜಾರಿಯದಲ್ಲ, ಸಮಸ್ತ ಸಮಾಜದ್ದು. ಇಂದು ಗುಡಿಗಳಿಗೆ ಬಂದ ಈ ಅವಸ್ಥೆಯನ್ನು ನೋಡಿದರೆ ನನ್ನ ಎದೆಯೇ ಬಿರಿಯುತ್ತದೆ. ಪೂಜಾರಿ ಕರ್ತವ್ಯಭ್ರಷ್ಟನಾದರೆ ಅವನನ್ನು ದೇವರು ಶಿಕ್ಷಿಸುತ್ತಾನೆ. ಅವನ ಗೊಡವೆ ನಮಗೆ ಬೇಡ. ನಾವು ನಮ್ಮ ಪಾಲಿನ ಕೆಲಸವನ್ನು ಮಾಡಿ ಧರ್ಮದ ಬಾವುಟವನ್ನು ಎತ್ತಿ ಹಿಡಿಯೋಣ.

ನೀವೆಲ್ಲ ಇಲ್ಲಿ ಪ್ರತಿ ಗುರುವಾರದ ದಿನ ಬರಬೇಕು. ಕೇವಲ ದೇವರ ವಿಗ್ರಹಕ್ಕೆ ಕೈ ಜೋಡಿಸಿ ಹೋದರೆ ಆಗಲಿಲ್ಲ. ಈ ಗುಡಿಗಳನ್ನು ಹಸನ ಮಾಡಬೇಕು. ಗುಡಿಸಬೇಕು. ಇಲ್ಲಿ ಸಾರಣೆ-ಕಾರಣೆಗಳು ನಡೆಯಬೇಕು. ಧೂಪ-ದೀಪಗಳು ಬೆಳಗಬೇಕು. ಗುಡಿಗಳ ಮುಂದಿನ ಬೈಲು ಜಾಗದಲ್ಲಿ ಹೂದೋಟಗಳ ನಿರ್ಮಾಣವಾಗಬೇಕು. ಈ ಕೆಲಸವನ್ನು ನಾವು ಪ್ರಾರಂಭಿಸೋಣ. ಸಮಾಜದವರು ನಮಗೆ ಸಹಾಯ ಸಲ್ಲಿಸಲು ಹಿಂದೆ ಮುಂದೆ ನೋಡುವುದಿಲ್ಲ. ಈ ಕೆಲಸವು ಮುಂದಿನ ಗುರುವಾರದಿಂದ ಪ್ರಾರಂಭವಾಗಲೇಬೇಕು."

ಭಟ್ಟರ ಮಾತುಗಳನ್ನು ಶಿಷ್ಯರು ಶಿರಸಾ ವಹಿಸಿದರು. ಮೂರು ತಿಂಗಳಲ್ಲಿಯೇ ಗಂಗನಹಳ್ಳಿಯ ದೇವಾಲಯಗಳು ಕಳಕಳಿಸಿದವು. ಆಯಾ ಓಣಿಗಳ ಜನರೆಲ್ಲ ಈ ಕಾರ್ಯದಲ್ಲಿ ನೆರವಾದರು. ಸ್ವತಃ ಭಟ್ಟರೇ ಕಸ ಗುಡಿಸುತ್ತಿರುವಾಗ ನಿಂತು ನೋಡುವವರಾರು? ಪೂಜಾರಿಗಳು ತಮ್ಮ ಪೂಜೆಗಳನ್ನು ವ್ಯವಸ್ಥಿತವಾಗಿ ಮಾಡತೊಡಗಿದರು. ಹರಟೆಯ ಮಂದಿರಗಳಾಗಿದ್ದ ಗುಡಿಗಳಲ್ಲಿ ಪೂಜ್ಯತೆ ನೆಲೆಯಿತು.

ಭಟ್ಟರ ಕಾರ್ಯನಿರ್ವಹಣಶಕ್ತಿಯನ್ನು ಕಂಡು ಹಳ್ಳಿಯ ಜನ ತಲೆದೂಗಿದರು. ಗುರುಲಿಂಗಶೆಟ್ಟಿಯಂತೂ ಭಟ್ಟರ ಕೈವಾರಿಯಾಗಿಬಿಟ್ಟನು. ಅವನು ಭಟ್ಟರನ್ನು ಬಿಟ್ಟು ಒಂದು ಕ್ಷಣ ಸಹ ಇರುತ್ತಿರಲಿಲ್ಲ. ಅವರ ಮಿತ್ರತ್ವ ಗಾಢವಾಗಿ ಬೆಳೆಯಿತು. 'ಭಟ್ಟರೇ' ಎನ್ನುವ ಗೌರವಸೂಚಕ ಪದವು ಸ್ನೇಹದಲ್ಲಿ ಪರ್ಯವಸಾನಹೊಂದಿ ವಿಶ್ವೇಶ್ವರಭಟ್ಟರು 'ಭಟ್ಟ'ರಾಗಿ ಬಿಟ್ಟರು. 'ಭಟ್ಟಾ!' ಎಂದು ಕರೆಯುವಾಗ ಗುರುಲಿಂಗಶೆಟ್ಟರಲ್ಲಿ ಆತ್ಮೀಯತೆಯು ಮೂಡತೊಡಗಿತ್ತು. ಅನೇಕ ದಿನಗಳಿಂದಲೂ ಗಂಗನಹಳ್ಳಿ ಒಂದು ರೀತಿಯಲ್ಲಿ ಸಾಗಿದ್ದಿತು. ಆದರೆ ಭಟ್ಟರು ಬಂದು ನೆಲೆಯಾಗಿ ನಿಂತ ಹತ್ತು ವರುಷಗಳಲ್ಲಿ ಅದರ ಸ್ವರೂಪವೇ ಬದಲಾಗಿಬಿಟ್ಟಿತು. ಅದೊಂದು ಏಕಸೂತ್ರತೆಯಲ್ಲಿ ಸಾಗುವ ಮಾದರಿಯ ಹಳ್ಳಿಯಾಗಿಬಿಟ್ಟಿತು. ಇದಕ್ಕೆ ವಿಶ್ವೇಶ್ವರಭಟ್ಟರೇ ಮೂಲಕಾರಣವಾದರೂ ಗುರುಲಿಂಗಶೆಟ್ಟಿ, ದೇಶಪಾಂಡೆ ಕೇಶವರಾಯ, ಹೇಮಂತಗೌಡ ಮೊದಲಾದವರು ಮಾಡಿದ ಕೆಲಸ ಸಾಮಾನ್ಯವಾಗಿರಲಿಲ್ಲ. ಭಟ್ಟರ ಆದರ್ಶವನ್ನು ಎತ್ತಿಹಿಡಿಯಲು, ಊರ ಧರ್ಮವನ್ನು ಕಾಯ್ದುಕೊಳ್ಳಲು, ಸಮಾಜದಲ್ಲಿ ನೆಮ್ಮದಿಯನ್ನು ಸ್ಥಿರಗೊಳಿಸಲು ಅವರು ಬದ್ಧಕಂಕಣರಾದರು. ಅವರ ಪಾಲಿಗೆ ಜಾತಿ ಮುಖ್ಯವಾಗಿರಲಿಲ್ಲ. ಗಂಗನಹಳ್ಳಿ ಮುಖ್ಯವಾಗಿದ್ದಿತು. ವಿಶ್ವೇಶ್ವರಭಟ್ಟರ ಮಾರ್ಗದರ್ಶನದಲ್ಲಿ ಹಳ್ಳಿಯ ಭವಿಷ್ಯ ಉಜ್ವಲವಾಗುವುದೆಂದು ಅವರೆಲ್ಲ ಮನಃಪೂರ್ವಕವಾಗಿ ನಂಬಿ

ದ್ದರು. ಅವರೆಲ್ಲ ಒಂದೇ ಬಳಗದವರಾಗಿ ಕೆಲಸ ಮಾಡುತ್ತಿದ್ದರು. ಒಟ್ಟು ಕುಟುಂಬದ ಜನರು ಆಡಳಿತ ಸೌಕರ್ಯಕ್ಕಾಗಿ ಬೇರೆಯಾಗುವಂತೆ ಆ ಹಳ್ಳಿಯ ಜೀವನಾಡಿ ಮಿಡಿಯತೊಡಗಿತು.

ಭಟ್ಟರ ಧರ್ಮಪತ್ನಿ ದೇಹದ ಪರಿವೆಯಿಲ್ಲದೆ ದುಡಿಯುತ್ತಿದ್ದರು. ಅವರ ಮನೆಯೊಂದೇ ಅವರಿಗೆ ಮನೆಯಾಗಿರಲಿಲ್ಲ. ಅವರ ಮನೆ ವ್ಯಾಪಕ ವಾಗಿತ್ತು. ಜನಜೀವನದ ಕಲ್ಯಾಣದಲ್ಲಿ ಅವರ ಮನೋಭಾವ ತುಂಬಿ ಕೊಂಡಿತ್ತು. ಈ ದುಡಿತದ ಪರಿಣಾಮದಿಂದಲೋ ಎಂಬಂತೆ ಅವರ ಮೂರ ನೆಯ ಹೆರಿಗೆ ತೊಂದರೆಯಿಂದಲೇ ಆಯಿತು. ಇದಕ್ಕೆ ಅವರ ಶರೀರಕ್ಷೀಣ ತೆಯೇ ಕಾರಣವಾಗಿದ್ದಿತು. ಮೂರು ದಿನಗಳಿಂದಲೂ ಪ್ರಸವವೇದನೆಯನ್ನು ಹೊಂದುತ್ತಿದ್ದ ಅವರಿಗೆ ಬೇಗನೇ ಪ್ರಸವವಾಗದಿರಲು ಎಲ್ಲರಲ್ಲಿಯೂ ಚಿಂತೆ ಮೂಡತೊಡಗಿತು. ವಿಶ್ವೇಶ್ವರಭಟ್ಟರು ಹೌಹಾರಿದರು. ಶಿಷ್ಯರು ಗಾಬರಿ ಯಾದರು. ಸಮಾಜದವರಿಗೆ ಇದೊಂದು ಮಹಾ ಸಮಸ್ಯೆಯೇ ಆಗಿಬಿಟ್ಟಿತು. ಯಾವ ಉಪಾಯವನ್ನು ಮಾಡಬೇಕೆಂಬುದೇ ತಿಳಿಯದಾಯಿತು.

ಅಲ್ಲಿಯೇ ನಿಂತ ಹಣ್ಣುಮುದುಕಿ ಅಂಬಿಗರ ಗಂಗವ್ವ ವಿಶ್ವೇಶ್ವರಭಟ್ಟ ರಿಗೆ ಅಡ್ಡಬಿದ್ದು ಹೇಳಿದಳು: “ಇದು ನೀರಿನ ತೊಡಕು ದೇವರೆ! ಇದ ಕ್ಕೊಂದು ಉಪಾಯವಿದೆ. ಊರ ಗರತಿ ಮುತ್ತೈದೆಯೊಬ್ಬಳು ಸನಿಯದ ಕೃಷ್ಣಾ ನದಿಯಲ್ಲಿ ಮಿಂದು ತಾಮ್ರದ ತಂಬಿಗೆಯಲ್ಲಿ ನೀರು ತುಂಬಬೇಕು. ಆ ನೀರು ಕೈಯಿಂದ ಕೈಗೆ ಅಂತರವಾಗಿ ಇಲ್ಲಿಗೆ ಬರಬೇಕು. ಆ ನೀರನ್ನು ಈ ತಾಯಿಯ ಮೇಲೆ ನಿವಾಳಿಸಿ ಚಲ್ಲಬೇಕು. ಇದು ಐದು ಸಾರೆ ನಡೆಯ ಬೇಕು. ಕೊನೆಯ ತಂಬಿಗೆಯ ನೀರನ್ನು ಕಣ್ಣಿಗೆ ಹಚ್ಚಿಕೊಳ್ಳುವದರಲ್ಲಿಯೇ ಈ ತಾಯಿ ಗಂಡುಮಗುವನ್ನು ಹೆರುತ್ತಾಳೆ. ಈ ಮುದುಕಿಯ ಮಾತನ್ನಷ್ಟು ನಡೆಯಿಸಿಕೊಡಿರಿ.” ಹೀಗೆ ಹೇಳಿದ ಗಂಗವ್ವ ಸುತ್ತಲೂ ನೋಡಿದಳು. ಅವಳ ಕಣ್ಣುಗಳಲ್ಲಿ ವಿಶ್ವಾಸ ತುಂಬಿತ್ತು.

ಈ ಮಾತುಗಳನ್ನು ಕೇಳಿದ ಸರಸ್ವತಿ ಮುಂದೆ ಬಂದು “ಗಂಗವ್ವ, ನಾನು ಸಿದ್ಧಳಾಗಿದ್ದೇನೆ. ಜನರನ್ನು ಕೂಡಿಸಲು ಹೇಮಂತಗೌಡರಿಗೆ ಹೇಳು” ಎಂದು ಅಡ್ಡಸೆರಗನ್ನು ಕಟ್ಟಿದಳು.

“ನೀನು ಈ ಕೆಲಸಕ್ಕೆ ಯೋಗ್ಯಳಲ್ಲ ತಾಯಿ! ಗರ್ಭಿಣಿಯಾದವರಿಂದ ಈ ಕೆಲಸ ನಡೆಯಕೂಡದು” ಎಂದು ಗಂಗವ್ವ ನುಡಿದಾಗ ಸರಸ್ವತಿ ನಾಚಿ ಹಿಂದೆ ಸರಿದಳು. ಅವಳಲ್ಲಿ ಆ ಮಟ್ಟಿಗೆ ನಿರಾಶೆಯೇ ಮೂಡಿತು.

ಅಲ್ಲಿಯೇ ನಿಂತ ಪತ್ನಿಯ ಮುಖವನ್ನು ಗುರುಲಿಂಗಶೆಟ್ಟರು ನೋಡುವ

ಮೊದಲೇ ಆ ಮಡದಿ "ನನ್ನಿಂದ ಈ ಕೆಲಸವಾಗಲಾರದೆ?" ಎಂದು ನಗುತ್ತ ಕೇಳಿದಳು.

"ಗರತಿ ಗಂಗವ್ವನಂತಿದ್ದ ನೀನು ಯೋಗ್ಯಳೇ ತಾಯಿ! ನೀನು ಭಾಗ್ಯಶಾಲಿ" ಎಂದಳು ಅಂಬಿಗರ ಗಂಗವ್ವ.

ಈ ಎಲ್ಲ ಮಾತುಗಳನ್ನು ಕೇಳುತ್ತ ನಿಂತಿದ್ದ ವಿಶ್ವೇಶ್ವರಭಟ್ಟರು ಹಸನ್ಮುಖರಾಗಿ ಗಂಗವ್ವನಿಗೆ,

"ನಿನ್ನ ಮಾತನ್ನು ತೆಗೆದು ಹಾಕುವ ಇಚ್ಛೆ ನನಗಿಲ್ಲ ಗಂಗವ್ವ! ಆದರೆ ನಮ್ಮ 'ರಾಯರ ಬಾವಿ'ಗೆ ಕೃಷ್ಣಾ ನದಿಯ ಶೆಲೆಯೇ ಇರುವಾಗ ನದೀ ತೀರಕ್ಕೇ ಹೋಗಬೇಕೆಂಬ ಹಟವೇಕೆ? ಈ ಕೆಲಸ ಇಲ್ಲಿಯೇ ನಡೆಯಲಿ" ಎಂದರು.

ಗಂಗವ್ವ ಈ ಮಾತನ್ನು ಒಪ್ಪಿದಳು.

ಕ್ಷಣಹೊತ್ತಿನಲ್ಲಿಯೇ ಹೇಮಂತಗೌಡರ ಮನೆಯನ್ನು ಮನ್ನಿಸಿ ರೈತಾಳುಗಳೆಲ್ಲ ರಾಯರ ಬಾವಿಯಿಂದ ಭಟ್ಟರ ಮನೆಯವರೆಗೆ ಸಾಲಾಗಿ ನಿಂತರು.

ಶೆಟ್ಟರ ಮಡದಿ ಬಾವಿಯಲ್ಲಿ ಮಿಂದು ವಿಭೂತಿಯನ್ನು ಧರಿಸಿ ಕುಂಕುಮದ ಬಟ್ಟನ್ನಿಟ್ಟುಕೊಂಡಳು. ಸರಸ್ವತಿ ತಂದುಕೊಟ್ಟ ತಾಮ್ರದ ತಂಬಿಗೆಯಲ್ಲಿ ನೀರನ್ನು ತುಂಬಿದಳು. "ಸದಾಶಿವಾ! ನಾನು ಗರತಿಯಾಗಿರುವದು ನಿಜವಾದರೆ ಈ ನೀರು ಕೊನೆಯ ಬಾರಿ ಭಟ್ಟರ ಧರ್ಮಪತ್ನಿಯ ಕಣ್ಣಿಗೆ ಹತ್ತುವ ಮೊದಲು ಆ ತಾಯಿ ಗಂಡುಮಗುವನ್ನು ಹಡೆಯಲಿ" ಎಂದು ಅನನ್ಯಭಾವದಿಂದ ಬೇಡಿಕೊಂಡಳು.

ತುಂಬಿದ ತಂಬಿಗೆ ಕೈಯಿಂದ ಕೈಗೆ ಸಾಗಿ ತುದಿಯಲ್ಲಿ ನಿಂತ ಅಂಬಿಗರ ಗಂಗವ್ವನ ಕೈಗೆ ಸೇರಿತು. ಆ ನೀರನ್ನವಳು ನಿವಾಳಿಸಿ ಚಲ್ಲಿದಳು. ನಾಲ್ಕನೆಯ ಬಾರಿ ಗಂಗವ್ವ ನೀರು ತಿರುವಿದಾಗ ಭಟ್ಟರ ಧರ್ಮಪತ್ನಿಯ ಪ್ರಸವವೇದನೆ ಹೆಚ್ಚಾಗತೊಡಗಿತೆಂದು ಅಲ್ಲಿಯೇ ಕುಳಿತ ಸೂಲಗಿತ್ತಿ ಸಾವಿತ್ರಿ ಹೇಳತೊಡಗಿದಳು. ಕೊನೆಯ ಬಾರಿ ಗಂಗವ್ವ ನೀರನ್ನು ನಿವಾಳಿಸಿ ಕಣ್ಣಿಗೆ ನೀರು ಹಚ್ಚುತ್ತಿರುವಾಗ ಸಾವಿತ್ರಿ ಎಲ್ಲರಿಗೂ ಹೊರಗೆ ಹೋಗಲು ಹೇಳಿದಳು.

ಶೆಟ್ಟರ ಮಡದಿ ಆತುರದಿಂದ ಮನೆಗೆ ಬರುವಾಗ ಪಡಸಾಲೆಯಲ್ಲಿಯೇ ಕೂಸಿನ ದನಿಯಾಗಲು ಅವಳ ಕಣ್ಣೊಳಗಿಂದ ಪಳಕ್ಕನೇ ನೀರು ಚಿಮ್ಮಿದವು. 'ಸದಾಶಿವಾ!' ಎಂದು ಆ ಗರತಿ ಕುಣಿದಾಡಿದಳು.

ದೇವರ ಮನೆಯಿಂದ ಹೊರಗೆ ಬಂದ ಭಟ್ಟರು ಶೆಟ್ಟರ ಪತ್ನಿಯನ್ನು

ಉದ್ದೇಶಿಸಿ "ಈಗಲೇ ನಾಮಕರಣ ಮಾಡಿಬಿಟ್ಟೆಯಲ್ಲ ತಾಯಿ!"

ಎಂದಾಗ ಶೆಟ್ಟರು ಬಾಯಿತುಂಬಾ ನಕ್ಕು ಹೆಂಡತಿಯನ್ನು ಅಭಿಮಾನ ದಿಂದ ನೋಡಿದರು.

"ನಾನು ಹೇಳಿದಂತೆ ಆಯಿತಲ್ಲವೇ!" ಎಂದು ಗಂಗವ್ವ ಬಚ್ಚಬಾಯಿ ಯಿಂದ ನುಡಿದಾಗ,

"ನಿನ್ನ ಅನುಭವದ ಮುಂದೆ ಯಾವ ಉಪಚಾರ ನಡೆದೀತು ಗಂಗವ್ವ! ನಿನ್ನ ಅನುಭವವೇ ವೇದವಾಕ್ಯ" ಎಂದು ಗಂಗವ್ವನನ್ನು ಕೃತಜ್ಞತಾಭಾವ ದಿಂದ ನೋಡಿದರು.

ಬಂದ ಗಂಡಾಂತರವು ಪಾರಾದ್ದರಿಂದ ಎಲ್ಲರೂ ಸ್ವತಂತ್ರರಾಗಿ ಮನೆಗೆ ನಡೆದರು. ಹೆಸರಿಡುವ ದಿನ ರುದ್ರಾಭಿಷೇಕವಾಯಿತು. ಶೆಟ್ಟರ ಮಡದಿ ನುಡಿದ ನಾಮವೇ ಕೂಸಿನ ಹೆಸರಾಯಿತು. ಸದಾಶಿವನು ಬೆಳೆಯತೊಡಗಿ ದನು.

ಆದರೆ ಆ ಹೆರಿಗೆಯಾದಂದಿನಿಂದ ಭಟ್ಟರ ಪತ್ನಿಯಲ್ಲಿ ಮೊದಲಿನ ಆರೋಗ್ಯ ಉಳಿಯಲಿಲ್ಲ. ಅವರಲ್ಲಿ ಕ್ಷೀಣತೆ ಬರತೊಡಗಿತು. ಇದಾವ ಪರಿವೆ ಯಿಲ್ಲದೆ ಆ ಧರ್ಮಪತ್ನಿ ಮತ್ತೆ ತನ್ನ ದೈನಂದಿನ ಕಾರ್ಯಗಳಲ್ಲಿ ನಿರತರಾಗಿ ಬಿಟ್ಟರು. ಹೆಂಡತಿಯ ಈ ಅಶಕ್ತತೆಯ ಅರಿವು ಭಟ್ಟರಿಗೂ ಆಯಿತು. ಅವರು ಒಂದು ದಿನ ಜೀವ ನಿಲ್ಲಲಾರದೆ,

"ನಿನ್ನ ದೇಹ ಹೆಚ್ಚಿನ ಕೆಲಸಗಳನ್ನು ಮಾಡಗೊಡುವದಿಲ್ಲ. ಸ್ವಲ್ಪ ಎಚ್ಚರಿಕೆಯಿಂದಲೇ ಕೆಲಸ ಮಾಡುತ್ತಿರು. ಬಳಲಿದ ದೇಹಕ್ಕೆ ವಿಶ್ರಾಂತಿಯ ಅವಶ್ಯಕತೆ ಇರುತ್ತದೆ" ಎಂದಾಗ,

"ನನಗೇನಾಗಿದೆ ಮಣ್ಣು. ನಾನು ಮಾಡುತ್ತಿರುವದೂ ಅಷ್ಟರಲ್ಲಿಯೇ ಇದೆ. ಹುಡುಗರ ಮೈತೊಳಿಸುವದು, ಮಜ್ಜಿಗೆ ಮಾಡುವದು ಇವೆಲ್ಲ ಕೆಲಸ ಗಳೇ? ಎಲ್ಲ ಕೆಲಸಗಳನ್ನು ಶಿಷ್ಯರೇ ಮಾಡುತ್ತಾರೆ. ಒಂದೆರಡು ತಿಂಗಳಲ್ಲಿ ತುಂಬಿಕೊಳ್ಳುತ್ತೇನೆ. ಅದಕ್ಕೇನು?" ಎಂದು ಮಾತು ಜಾರಿಸಿದರು.

ವಿಶ್ವೇಶ್ವರಭಟ್ಟರು ಹೆಂಡತಿಯನ್ನು ಅಭಿಮಾನದಿಂದ ನೋಡಿದರು. ಅವರ ಕಣ್ಣಾಲಿಯಲ್ಲಿ ನೀರಾಡಿತು.

ಅಂದು ಸಾಯಂಕಾಲದ ಆಹ್ನೀಕಗಳನ್ನು ತೀರಿಸಿಕೊಂಡು ಭಟ್ಟರು ದೇವರ ಮನೆಯಲ್ಲಿ ಕುಳಿತಿದ್ದರು. ರಾತ್ರಿಯ ಹಾಲನ್ನು ಇಲ್ಲಿಯೇ ಕುಡಿಯು ವುದು ಪರಿಪಾಠವಾಗಿತ್ತು. ಸದಾಶಿವನನ್ನು ಮಲಗಿಸಿ ಭಟ್ಟರ ಧರ್ಮಪತ್ನಿ ಕಾಯಿಸಿದ ಹಾಲನ್ನು ತೆಗೆದುಕೊಂಡು ಮನೆಗೆ ನಡೆದರು.

"ಸದಾಶಿವನು ಮಲಗಿದನೆ? ಬಹಳ ಉಡಾಳನಾಗಿದ್ದಾನೆ ಅಲ್ಲವೆ?"

"ಮನೆ ತುಂಬ ಓಡಾಡುತ್ತಾನೆ. ಅವನ ಕೆಲಸವೇ ಕೆಲಸ" ಎಂದು ಧರ್ಮಪತ್ನಿ ಹಸನ್ಮುಖರಾಗಿ ಹೇಳಿದರು.

"ಈ ಮಕ್ಕಳ ಚಿಂತೆಯಲ್ಲಿ ನೀನು ಮಾತ್ರ ಬಳಲಿ ಹೋಗಿದ್ದೀ. ನೀನು ವಿಶ್ರಾಂತಿಯನ್ನೇ ತೆಗೆದುಕೊಳ್ಳುವದಿಲ್ಲ."

"ನನಗೆ ಮಕ್ಕಳ ಕೆಲಸದ ಚಿಂತೆಯಿಲ್ಲ. ಆದರೆ...."

"ಆದರೆ ಏನು ಮತ್ತೆ?"

"ಅವರ ಭವಿಷ್ಯವನ್ನು ಕುರಿತು ನಾವು ಯೋಚಿಸಬೇಡವೆ?" ಭಟ್ಟರ ಧರ್ಮಪತ್ನಿ ಧೈರ್ಯ ಮಾಡಿದರು.

"ಅವರ ಭವಿಷ್ಯ ಅವರ ವಿದ್ಯೆಯಲ್ಲಿದೆ. ಅವರ ಸಂಪತ್ತು ಅವರ ಸದಾಚಾರದಲ್ಲಿದೆ. ಈ ದೃಷ್ಟಿಯಿಂದ ನೋಡಿದರೆ ಅವರ ಭವಿಷ್ಯಕ್ಕಾಗಿ ನಾವು ಚಿಂತಿಸುವ ಕಾರಣವೇ ಇಲ್ಲ. ಅವರೆಲ್ಲ ನಿನ್ನ ಮಕ್ಕಳು ತಾನೆ" ಭಟ್ಟರು ಧರ್ಮಪತ್ನಿಯನ್ನು ಅಭಿಮಾನದಿಂದ ನೋಡಿದರು.

"ಹೀಗೆಂದ ಮಾತ್ರಕ್ಕೆ ನಾವು ಸುಮ್ಮನಿರುವದೆ? ಅವರಿಗೆ ಬಾಳಿನಲ್ಲಿ ಒಂದು ಆಸರ ಬೇಡವೆ?"

"ಸಮಾಜವೇ ಅವರ ಆಸರ. ಅದನ್ನವರು ಗಳಿಸಿಕೊಳ್ಳಬೇಕು."

"ಆದರೂ ಆ ಮಕ್ಕಳಿಗೆ ಹಿರಿಯರಾದ ನಾವು...."

"ಏನಾದರೂ ಆಸ್ತಿಯನ್ನು ಮಾಡಿಡಬೇಕೆಂದು ನಿನ್ನ ಅಭಿಲಾಷೆಯೆ?"

"ಹೆಚ್ಚಾಗಿ ಅಲ್ಲದಿದ್ದರೂ ತುಸುವಾಗಿಯಾದರೂ ಮಾಡಬೇಕಷ್ಟೆ."

ಧರ್ಮಪತ್ನಿ ಜೀವಮಾನದಲ್ಲಿ ಯಾವ ಬೇಡಿಕೆಯನ್ನೂ ಮುಂಡಿಸಿರಲಿಲ್ಲ. ಈ ಬೇಡಿಕೆಯನ್ನು ಮುಂಡಿಸುವ ಪೂರ್ವದಲ್ಲಿ ಅವಳು ಬಹಳ ವಿಚಾರ ಮಾಡಿರಬೇಕೆಂಬುದನ್ನೂ ಭಟ್ಟರು ತಿಳಿದರು. ಆದರೆ ಈ ಬೇಡಿಕೆ ಅವರಿಗೆ ಅರ್ಥವೇ ಆಗಲಿಲ್ಲ. ಎಂತಲೇ ಅವರು ನೇರವಾಗಿ ನೋಡಿ ಕೇಳಿದರು:

"ನನ್ನ ತಂದೆ ನನಗೆ ಯಾವ ಆಸ್ತಿಯನ್ನು ಬಿಟ್ಟಿದ್ದರು? ನಾನು ಬೆಳೆಯುತ್ತಿರುವದು ಯಾವ ಆಸ್ತಿಯ ಪುಣ್ಯ ಹೇಳಬಹುದೆ?"

"ನಮ್ಮ ಮಾತು ಹಾಗಿರಲಿ. ಮಕ್ಕಳು ನಿರಾಧಾರರಾಗಬಾರದಷ್ಟೆ?"

"ನೀನು ತಪ್ಪಾಗಿ ಯೋಚಿಸುತ್ತಿರುವಿ. ನಮ್ಮೆಲ್ಲರಿಗೂ ಒಂದಿಲ್ಲೊಂದು ಆಧಾರವನ್ನು ದೇವರು ಕಲ್ಪಿಸಿಯೇ ಇಟ್ಟಿರುತ್ತಾನೆ. ಮೇಲಾಗಿ ಮಕ್ಕಳಿಗೆ ಆಸ್ತಿಯನ್ನು ಮಾಡಿಡುವದೆಂದರೆ ಅವರನ್ನು ಆಲಸ್ಯರನ್ನಾಗಿ ಮಾಡಿದಂತೆ. ಅವರಲ್ಲಿ ಬದುಕುವ ಶಕ್ತಿ ಇದ್ದರೆ ,ಬದುಕಬೇಕು. ಬದುಕು ಕೈಗಡ ತಂದ

ವಸ್ತುವಿನ ಮೇಲೆ ಎಂದಿಗೂ ಸಾಗಲಾರದು. ಅವರಿಗೆ ನಾನು ಆಸ್ತಿಯನ್ನು ಮಾಡಿಡುವುದಿಲ್ಲವೆಂದು ನಿನಗಾರು ಹೇಳಿದರು? ನಾನು ಕೊಡುವ ಆಸ್ತಿ ಸವೆಯದಂತಿದೆ. ಅವರಿಗೆ ವಿದ್ಯೆ ಕೊಡುತ್ತೇನೆ. ಈ ಆಸ್ತಿ ಸಾಮಾನ್ಯವಾದ ಆಸ್ತಿಯಲ್ಲ. ಹೊಲ ಮನೆಗಳ ಆಸ್ತಿ ಹೆಡ್ಡರಿಗೆ. ನನಗೆ ಮಕ್ಕಳ ಚಿಂತೆಯಿಲ್ಲ ವೆಂದು ತಿಳಿದುಕೊಳ್ಳಬೇಡ, ಈಗಾಗಲೇ ನೀಲಕಂಠನ ಆಸ್ತಿ ಬೆಳೆದುನಿಂತಿದೆ." ಭಟ್ಟರು ಗಂಭೀರಭಾವದಿಂದ ಹೇಳಿದರು.

"ನಾನು ಹೆಣ್ಣು. ನನಗೆ ಹೆಚ್ಚಿನ ಯೋಗ್ಯತೆಯಿಲ್ಲ. ಏನೋ ಕೇಳಿದೆ, ಕ್ಷಮಿಸಿರಿ" ಎಂದು ಧರ್ಮಪತ್ನಿ ಬಾಗಿ ನುಡಿದರು.

"ನೀನು ನನ್ನ ಶಕ್ತಿಯ ಸ್ಫೂರ್ತಿ. ನನ್ನ ದೈನಂದಿನ ಜೀವನದ ನಿತ್ಯ ನಂದಾದೀಪವೇ ನೀನು. ನಿನ್ನ ಮಾತು ತಾಯಿತನದ ದೌರ್ಬಲ್ಯವಾಗಿದೆ. ಅದು ಸಹಜವಾಗಿದೆ" ಎಂದು ಭಟ್ಟರು ನುಡಿದು ಬಾಯಿತುಂಬಾ ನಕ್ಕರು.

ಧರ್ಮಪತ್ನಿ ಹೋದರೂ ಭಟ್ಟರ ಹೃದಯದಲ್ಲಿ ಅವರ ಮಾತು ನೆಲೆ ನಿಂತಿತು. ಅವರ ಒಂದು ಬೇಡಿಕೆಯನ್ನಾದರೂ ಪೂರೈಸಬೇಕೆಂದು ಅವರಿಗೆ ಅನ್ನಿಸಿತು. ಈ ಭಾವದಲ್ಲಿ ಅವರಿಗೆ ಹೆಂಡತಿಯನ್ನು ಸಂತೈಸಬೇಕೆಂಬ ವಿಚಾರದ ಹೊರತು ಮತ್ತಾವ ವಿಚಾರವೂ ಇರಲಿಲ್ಲ.

ಈ ವಿಚಾರವನ್ನು ಅವರು ಹೆಚ್ಚು ವೇಳೆಯವರೆಗೆ ಬೆಳೆಯಗೊಡಲಿಲ್ಲ. ತಮ್ಮ ಗೆಳೆಯರ ಬಳಗವು ಈ ವಿಚಾರವನ್ನು ಮಾಡುತ್ತದೆ. ತಮಗೆ ಸಂಸಾರ ದಲ್ಲಿ ಯಾವ ತಾಪತ್ರಯಗಳೂ ಉಂಟಾಗದಂತೆ ಅವರು ದಕ್ಷತೆ ವಹಿಸಿ ದ್ದಾರೆ. ಶಿಷ್ಯರ ಭಿಕ್ಷಾನ್ನದ ಪವಿತ್ರತೆ ಕಾದುಕೊಂಡು ಹೋಗುತ್ತದೆ. ಈ ಜೀವನಕ್ಕೆ ಸಮಾನವಾದ ಜೀವನವಿಲ್ಲದಿರುವಾಗ ತಾವೇಕೆ ಚಿಂತಿಸಬೇಕು? ಭಗವಂತನಿದ್ದಾನೆ. ಅವನಿಗೆ ನಮ್ಮ ಸಂಸಾರದ ಚಿಂತೆಯೂ ಇದೆ. ಹೀಗೆಂದು ಕೊಂಡು ಭಟ್ಟರು ತೇಲಿಬಂದ ಭಾವವನ್ನು ತಳ್ಳಿಹಾಕಿದರು.

'ಆದರೆ ಧರ್ಮಪತ್ನಿ ಹೇಳಿದ ಮಾತುಗಳಲ್ಲಿ ಯಾವ ಅರ್ಥವೂ ಇಲ್ಲವೆ? ಆ ಹೆಣ್ಣುಜೀವ ಮಿಡಿಯುವದರಲ್ಲಿ ಯಾವ ಸ್ವಾರ್ಥವಿದೆ? ನನ್ನ ಷಡಿನೆಳಲಾಗಿ ಬಾಳಿದ. ಅವಳು ಇಂತಹ ಮಾತುಗಳನ್ನು ಹೇಳಬೇಕೆಂದರೆ ಅದರಲ್ಲಿ ಭಗವಂತನ ಸೂಚನೆಯೇ ಇರಬೇಕು. ಆದರೆ ನನಗೆ ಆಸ್ತಿ ಬೇಡ. ನನ್ನ ಮಕ್ಕಳಿಗಾಗಿ ನಾನು ಆಸ್ತಿ ಬಿಡುವದೆಂದರೇನು? ಆಸ್ತಿ ಬೇಡವೆಂದರೂ ಈ ಧರ್ಮಕಾರ್ಯಕ್ಕಾದರೂ ಒಂದು ಗತಿ ಬೇಕಲ್ಲ! ಇದನ್ನಾದರೂ ಹೇಗೆ ಬಗೆಹರಿಸುವದು?' ಭಟ್ಟರ ವಿಚಾರಪ್ರಣಾಲಿ ಮುಂದೆ ಹರಿಯಲಿಲ್ಲ. ಅವರು ಚಟ್ಟನೆ ಎದ್ದು,

"ಭಗವಂತಾ! ನಿನ್ನ ಇಷ್ಟವು ನೆರವೇರಲಿ" ಎಂದು ಹೊರಬಿದ್ದರು. ದಿನಗಳೆದಂತೆ ಭಟ್ಟರ ಮನಸ್ಸಿನಲ್ಲಿ ಬಂದ ಈ ವಿಚಾರವು ಹೇಳಹೆಸರಿಲ್ಲದೆ ಮಾಯವಾಗಿಬಿಟ್ಟಿತು.

೪

ಜನರ ವಿಶ್ವಾಸವನ್ನು ಗಳಿಸಿಕೊಂಡು ಅವರಿಂದಲೇ ಸಮಾಜದ ಕೆಲಸಗಳನ್ನು ಮಾಡಿಸಿಕೊಳ್ಳುವ ರೀತಿ ಭಟ್ಟರಿಗೆ ಮಾಸಲಾಗಿದ್ದಿತು. ಇದಕ್ಕೆ ಅವರಲ್ಲಿ ಸ್ವಾರ್ಥಬುದ್ಧಿ ಲವಲೇಶವಾದರೂ ಇಲ್ಲದಿರುವದು ಮುಖ್ಯ ಕಾರಣವಾಗಿತ್ತು. ನಿಃಸ್ವಾರ್ಥಸೇವೆಯೇ ಅವರ ಬಾಳಿನ ಗುಟ್ಟಾಗಿದ್ದರಿಂದ ಜನರಲ್ಲಿ ಅವರ ಬಗ್ಗೆ ಪೂಜ್ಯಭಾವವು ನೆಲೆಸಿತ್ತು. ಈ ಪ್ರಭಾವದಿಂದಲೇ ಅವರ ಮಾತಿಗೊಂದು ಬೆಲೆಯಿತ್ತು. ಅವರು ಹೇಳುವ ಮಾತನ್ನು ಮೀರುವ ಸಾಹಸವು ಗಂಗನಹಳ್ಳಿಯಲ್ಲಿ ಯಾರಿಗೂ ಇರಲಿಲ್ಲ. ಅಣ್ಣತಮ್ಮಂದಿರ ವ್ಯಾಜ್ಯದಲ್ಲಿ ಭಟ್ಟರ ನಿರ್ಣಯವೇ ಕೊನೆಯದು. ಗಂಡಹೆಂಡಿರಲ್ಲಿ ಭಿನ್ನಾಭಿಪ್ರಾಯ ಬಂದರೂ ಅದನ್ನು ಭಟ್ಟರೇ ಬಗೆಹರಿಸುತ್ತಿದ್ದರು. ಹೀಗಾಗಿ ಗಂಗನಹಳ್ಳಿಯಲ್ಲಿ ವ್ಯಾಜ್ಯಗಳು ತಲೆ ಎತ್ತದಾದುವು. ಬಹಳ ದಿನಗಳಿಂದ ಗಂಗನಹಳ್ಳಿಯಲ್ಲಿ ತಲೆ ತಿನ್ನುತ್ತಿದ್ದ 'ಕರಡೀ ಮಜಲಿ'ನ ಪ್ರಕರಣವೂ ಭಟ್ಟರ ಮಧ್ಯಸ್ತಿಕೆಯಿಂದ ಸರ್ವಸಮ್ಮತವಾಗಿ ಬಗೆಹರಿಯಿತು. ಗಂಗನಹಳ್ಳಿಯಲ್ಲಿ ಈ ಕರಡೀಮಜಲನ್ನು ಎರಡು ಮನೆತನದವರು ಮಾಡುತ್ತಿದ್ದರು. ಜಾಡರ ಮನೆತನಗಳಿಗೆ ಇದು ಮಾಸಲಾಗಿದ್ದರೂ ಆ ಮನೆತನಗಳಲ್ಲಿ ಬಣಗಳಾಗಿ ಒಂದು ಮನೆತನದವರು ಇದನ್ನು ಬಾರಿಸತೊಡಗಿದರೆ ಇನ್ನೊಂದು ಮನೆತನದವರು ಅತ್ತ ಸುಳಿಯುತ್ತಿದ್ದಿಲ್ಲ. ಒಮ್ಮೊಮ್ಮೆ ಅಡ್ಡಗಾಲು ಹಾಕಲು ಪ್ರಯತ್ನಿಸುತ್ತಿದ್ದರು. ಈ ಕಲೆಯಲ್ಲಿ ನಿಸ್ಸೀಮರಾದ 'ಹೊಟ್ಟೇ' ಮನೆತನದವರು ಇದು ತಮಗೇ ಮಾಸಲೆಂದು ಭಾವಿಸಿ ಅಷ್ಟೇ ಕುಶಲರಾದ 'ಲಾಳೀ' ಮನೆತನದವರನ್ನು ಅಲಕ್ಷ್ಯದಿಂದ ನೋಡುತ್ತಿದ್ದರು. ಪ್ರತಿಯಾಗಿ ಈ ಮನೆತನದವರು ಆ ಮನೆತನದವರೆಂದರೆ ಕೆಂಡವಾಗುತ್ತಿದ್ದರು.

ಸದಾಶಿವನ ವ್ರತಬಂಧವಾದ ದಿನ ದೇವರಿಗೆ ಹೋಗಲು ವಾದ್ಯಗಾರರನ್ನು ಕರೆಯಿಸಬೇಕೆಂದು ಶೆಟ್ಟರು ನಿರ್ಣಯಿಸಿದರು. ಇದರ ಇತಿಹಾಸವನ್ನು ಬಲ್ಲ ಭಟ್ಟರು ಹೊಟ್ಟೇ ಬಸಪ್ಪನನ್ನು ಕರೆಯಿಸಿ "ನಿನ್ನ ಸೇವೆಯಾಗಬೇಕಲ್ಲ ಬಸಪ್ಪಾ" ಎಂದರು.

"ಅದಕ್ಕೇನು ಗುರುಗಳೇ! ನಾವು ಸಿದ್ಧರಾಗಿ ಬರುತ್ತೇವೆ. ಆದರೆ ನೀವು ಆ ಮನೆತನದವರಿಗೆ ಹೇಳಕೂಡದು."

"ಆದರೆ ನಾನು ಈಗಾಗಲೇ ಅವರಿಗೂ ಹೇಳಿಬಿಟ್ಟಿದ್ದೇನಲ್ಲ!"

ಭಟ್ಟರು ಮುಗುಳು ಸೂಸುತ್ತ ಹೇಳಿದರು.

"ಆಗಲಿ, ಹಾಗಾದರೆ. ಅವರ ಸೇವೆಯೇ ನಡೆಯಲಿ. ಅವರಿರುವಾಗ ನಮ್ಮ ಮೇಳದವರ ಕೆಲಸವೇ ಇಲ್ಲ." ಬಸಪ್ಪನು ನಿಷ್ಠುರವಾಗಿ ಹೇಳಿದನು.

"ಇಲ್ಲಿ ಕೇಳು ಬಸಪ್ಪ. ಈ ಕಲೆ ಅಮೋಘವಾದ ಕಲೆ. ಇದು ಯಾರೊಬ್ಬರಿಗೂ ಮೀಸಲಾಗಿರಬಾರದು. ನೀವಿಬ್ಬರೂ ಕೂಡಿದರೆ ದಿಗ್ವಿಜಯ ಮಾಡಬಹುದು. ನಿಮ್ಮಲ್ಲಿ ಪ್ರವೀಣರಾದವರು ಹೆಸರು ಪಡೆಯಬಹುದು. ಹೀಗೆ ನೀವು ಸಂಕುಚಿತ ಭಾವ ತೋರಿ ಕಲೆಯ ಕುತ್ತಿಗೆಯನ್ನು ಹಿಚುಕುತ್ತಿರುವಿರಿ. ಇದು ದೇವರು ಮೆಚ್ಚುವ ಮಾತಲ್ಲ. ವಿಚಾರಿಸು." ಭಟ್ಟರು ಸಮಾಧಾನ ಹೇಳಿದರು.

"ಇದು ನಮ್ಮ ಮನೆತನಕ್ಕೆ ಮಾತ್ರ ಮೀಸಲಾದ ಕಲೆ ಗುರುಗಳೇ. ಈ ಪುಂಡರು ಇತ್ತೀಚೆ ಬಂದವರು."

"ಮಾನವ ಜಾತಿಯ ಇತಿಹಾಸವೇ ಹೀಗೆ. ಮೊದಲು ನಾವೆಲ್ಲ ಒಂದೆ. ದಿನಗಳೆದಂತೆ ಅನುಕೂಲಕ್ಕಾಗಿ ಬೇರೆಬೇರೆಯಾಗಿದ್ದೇವೆ. ನಾವು ಬೇರೆಯಾದರೆ ಏನಾಯಿತು? ನಾವೆಲ್ಲರೂ ಒಂದೇ ಅಲ್ಲವೇ?"

"ಈ ಮಾತು ನನಗೆ ಒಪ್ಪಿಗೆಯಾಗದು ಗುರುಗಳೆ! ನೀವು ಅವರನ್ನು ಕರೆಯಿಸಿಕೊಳ್ಳಬಹುದು."

"ಹಾಗಾದರೆ ನಮ್ಮ ಮನೆಯ ಮಂಗಲ ಕಾರ್ಯದಲ್ಲಿ ವಾದ್ಯಗಳೇ ಬೇಡ" ಎಂದು ಹೇಳಿ ಭಟ್ಟರು ಅಲ್ಲಿ ನಿಲ್ಲದೆ ದೇವರಮನೆಗೆ ನಡೆದುಬಿಟ್ಟರು.

ಅಲ್ಲಿ ಕೂಡಿದವರೆಲ್ಲ ಬಸಪ್ಪನಿಗೆ ಛೀ ಹಾಕಿದರು. 'ಗುರುಗಳ ಮನಸ್ಸನ್ನು ನೋಯಿಸಿ ನೀನು ಬಾಳಲಾರಿ'ಯೆಂದು ಖಂಡಿತವಾಗಿ ಹೇಳಿದರು. ಬಸಪ್ಪನಿಗೆ ತನ್ನ ಮಾತು ತನಗೆ ಸೇರದಾಯಿತೇನೊ? "ಆಗಲಿ, ಹಾಗಾದರೆ, ನಾನೇ ಅವರನ್ನು ಕರೆದುಕೊಂಡು ಬರುತ್ತೇನೆ. ಭಟ್ಟರಿಗೆ ಸಿದ್ಧವಾಗಿರಲು ಹೇಳಿರಿ" ಎನ್ನುತ್ತ ಗಡಿಬಿಡಿಯಿಂದ ಹೊರಟುಬಿಟ್ಟನು.

ಜನ್ಮತಃ ಹಟಮಾರಿಯಾದ ಬಸಪ್ಪನು ಹೀಗೆ ಒಮ್ಮೆಲೇ ಹಾದಿಗೆ ಬರಬಹುದೆಂದು ಯಾರಿಗೂ ಅನ್ನಿಸಿರಲಿಲ್ಲ. ಊರವರು ಈ ಮೊದಲು ಪ್ರಯತ್ನ ಮಾಡಿ ಸೋತಿದ್ದರು.

ಕ್ಷಣಹೊತ್ತಿನಲ್ಲಿಯೇ ಭಟ್ಟರ ಮನೆಯ ಮುಂದೆ ಕರಡೀಮಜಲಿನ

ಕಡಕಡಾಟವು ಪ್ರಾರಂಭವಾಗಿಬಿಟ್ಟಿತು. ಲಾಳಿಯ ಗಂಗಪ್ಪನೇ ಮದ್ದಳೆಯನ್ನು ಹೆಗಲಿಗೇರಿಸಿ ಗುಣಿಗಳನ್ನು ಆಡಿಸುತ್ತಿದ್ದರೆ ಹೊಟ್ಟೀ ಬಸಪ್ಪನು ಉತ್ಸಾಹದಿಂದ 'ಚಯ್ಯಾಳ'ಯ ಗತ್ತನ್ನು ಹಿಡಿಯತೊಡಗಿದನು. ಎರಡೂ ಮನೆತನದ ಉತ್ಸಾಹಿಗಳು ಪಕ್ಕದ ಮದ್ದಳೆಗಳನ್ನು ಬಾರಿಸತೊಡಗಿದರು. ಆ ದಿನ ಕೊರವರ ಹನುಮನ ಸನಾದಿಯು ಅಪ್ರತಿಮವಾಗಿ ಗಗನಮಂಡಲವನ್ನೆಲ್ಲ ವ್ಯಾಪಿಸಿತು. ಎಲ್ಲ ಕಾರ್ಯವೂ ಮುಗಿದ ಮೇಲೆ ಭಟ್ಟರು ಒಂದು ತಟ್ಟೆಯಲ್ಲಿ ಎರಡು ಕಾಯಿಗಳನ್ನು ತಂದು ಬಸಪ್ಪ ಗಂಗಪ್ಪ ಇಬ್ಬರ ಹೆಗಲ ಮೇಲೂ ಕೈಹಾಕಿ ಅವರನ್ನು ಅಪ್ಪಿಕೊಂಡು ಅವುಗಳನ್ನು ನೀಡಿದರು. ಅವರ ಕಣ್ಣುಗಳು ಒದ್ದೆಯಾಗಿದ್ದುವು. ಅಂದಿನಿಂದ ಗಂಗನಹಳ್ಳಿಯಲ್ಲಿ ಯಾವ ಶುಭಕಾರ್ಯವೇ ಆಗಲಿ ಕರಡೀಮಜಲು ಸಿದ್ಧ! ಇದೊಂದು ಆ ಹಳ್ಳಿಯ ಸಮಸ್ಯೆಯಾಗಿತ್ತು. ಭಟ್ಟರ ಪ್ರಭಾವದಿಂದ ಈ ತೊಡಕು ಬಿಡಲು ಹಳ್ಳಿಯ ಜನರಿಗಾದ ಆನಂದ ಅಷ್ಟಿಷ್ಟಲ್ಲ.

ಈ ಸಮಸ್ಯೆ ಬಿಡಲು ಎಲ್ಲ ಕೆಲಸಗಳೂ ಸುಸೂತ್ರವಾಗಿ ಸಾಗತೊಡಗಿದುವು. ಊರ ಜಾತ್ರೆಯಾಗಲಿ, ಹನುಮಂತನ ಓಕಳಿಯಾಗಲಿ, ಎಲ್ಲವೂ ಸರಾಗವಾಗಿ ನಡೆಯತೊಡಗಿದುವು.

ಇದೆಲ್ಲದಕ್ಕೂ ಭಟ್ಟರ ಪ್ರತಿದಿನದ ಪ್ರವಚನವೇ ಬಹುಮಟ್ಟಿಗೆ ಕಾರಣವಾಗಿದ್ದಿತು. ಅವರು ಕೇವಲ ಧಾರ್ಮಿಕ ಪುರಾಣವನ್ನು ಮಾತ್ರ ಹೇಳುತ್ತಿರಲಿಲ್ಲ. ಅದರ ಜೊತೆಗೆ ಸಮಾಜತತ್ವಗಳನ್ನು ವಿವರಿಸುತ್ತಿದ್ದರು. ಒಗ್ಗಟ್ಟಿನ ಮಹತ್ವವನ್ನು ಬಿಂಬಿಸುತ್ತಿದ್ದರು. ಈ ತತ್ವಗಳನ್ನು ಬಿಂಬಿಸುವಾಗ ಅವರು ಅನೇಕ ಚತುರವಾದ ಕತೆಗಳನ್ನು ಹೇಳಿ ಜನರ ಮನಸ್ಸನ್ನು ಹಿಡಿಯುತ್ತಿದ್ದರು. ಈ ಕಲೆ ಅವರಿಗೆ ಅದ್ಭುತವಾಗಿ ಸಾಧಿಸಿತ್ತು. ಅಂತೆಯೇ ಈಗ ಪುರಾಣಪ್ರವಚನಕ್ಕೆ ಜನ ಗುಂಪುಗುಂಪಾಗಿ ಬರತೊಡಗಿದರು. ಹೇಮಂತ ಗೌಡರ ದೊಡ್ಡ ಪಡಸಾಲೆ ಸಾಲದಾಯಿತು. ಪ್ರತಿದಿನದ ಹಾಡೇ ಹೀಗಾದಾಗ ಶ್ರಾವಣಮಾಸದ ಪುರಾಣಕ್ಕೆ ಈ ಸ್ಥಳ ಎಷ್ಟೆಷ್ಟೂ ಸಾಲದೆಂಬ ನಿರ್ಣಯಕ್ಕೆ ಬಂದಿತು. ಆಗಲಂತೂ ಬೇರೆ ಹಳ್ಳಿಯ ಜನರು ಬರುವವರೆ.

ಶ್ರಾವಣದ ಪುರಾಣಕ್ಕೆ ಯೋಗ್ಯ ಸ್ಥಳವನ್ನು ಗೊತ್ತುಮಾಡುವುದಕ್ಕಾಗಿ ಆ ದಿನ ಭಟ್ಟರ ಗೆಳೆಯರೆಲ್ಲ ಕೂಡಿದಾಗ ಭಟ್ಟರು ಇದಕ್ಕೆ 'ಆರುಯಾತ'ದ ಬಾವಿಯ ಕಮಾನಿನ ವಿಶಾಲವಾದ ಸ್ಥಳವೇ ಯೋಗ್ಯವಾಗುವುದೆಂದು ಸೂಚನೆ ಕೊಟ್ಟರು. ಇದನ್ನು ಎಲ್ಲರೂ ಒಮ್ಮನಸ್ಸಿನಿಂದ ಒಪ್ಪಿದರು. ಆಷಾಢದ ಕೊನೆಯಲ್ಲಿ ಅಲ್ಲಿ ಚಪ್ಪರ ಸಿದ್ಧವಾಗಬೇಕೆಂದು ಎಲ್ಲರೂ

ನಿರ್ಣಯಿಸಿಕೊಂಡರು. ಶ್ರಾವಣ ಇನ್ನೂ ಎರಡು ತಿಂಗಳಿರುವಾಗ ಮತ್ತೊಮ್ಮೆ ಎಲ್ಲರೂ ಕೂಡಿ ವಿಚಾರಿಸಬೇಕೆಂದು ಗೊತ್ತುಮಾಡಿಕೊಂಡರು. ಭಟ್ಟರ ನಿರ್ಣಯವೇ ಅವರಿಗೆ ಯೋಗ್ಯವೆನಿಸಿತು.

ಈ ಮಧ್ಯೆ ಗಂಗನಹಳ್ಳಿಯಲ್ಲಿ ಒಂದು ಬಿರುಗಾಳಿ ಎದ್ದಿತು. ಈ ಬಿರುಗಾಳಿ ಹಳ್ಳಿಯ ಹಿಂದೂ-ಮುಸಲ್ಮಾನರಲ್ಲಿ ಕಿಡಿಯನ್ನು ಹೊತ್ತಿಸತೊಡಗಿತು. ಭಟ್ಟರ ಯೋಗ್ಯ ಮಧ್ಯಸ್ತಿಕೆ ನಡೆಯದಿದ್ದರೆ ಅನರ್ಥವೂ ಸಂಭವಿಸಬಹುದಾಗಿತ್ತು.

ಗಂಗನಹಳ್ಳಿಯಿಂದ ಒಂದು ಮೈಲಿನ ಮೇಲೆ 'ಯಮನೂರ ಪೀರ'ನ ದರ್ಗಾ ಸರ್ಕಾರಿ ರಸ್ತೆಯ ಮಗ್ಗುಲಲ್ಲಿ ಬಹಳ ದಿನಗಳಿಂದಲೂ ಪ್ರಸಿದ್ಧವಾಗಿದೆ. ವರುಷಕ್ಕೊಮ್ಮೆ ಆಗುವ 'ಉರುಸಿ'ಗೆ ಸುತ್ತಲಿನ ಹಳ್ಳಿಯ ಜನ ಬಂದು ಹೋಗುವುದುಂಟು. ಹೀಗೆ ಬರುವ ಜನರಲ್ಲಿ ಹಿಂದುಗಳೇ ಹೆಚ್ಚು. ಈ ಪೀರನ ದಯೆಯಿಂದ ಎಲ್ಲ ಚರ್ಮರೋಗಗಳೂ ವಾಸಿಯಾಗುತ್ತವೆಂದು ತಿಳಿದ ಜನ ಗುಂಪುಗುಂಪಾಗಿ ಬರುತ್ತಿದ್ದರು. ಮೂರು ದಿನಗಳ ಪರಸೆಯಲ್ಲಿ ಕುರಿ-ಕೋಳಿಗಳ ವಧೆ ಸಾಗುತ್ತಿತ್ತು. ಕೆಂಪುಸಕ್ಕರೆಯ ರಾಸಿ ಪೀರನಿಗೆ ಸಲ್ಲುತ್ತಿತ್ತು. ಆ ಪೀರನ ಗುಡಿ ಊದುಬತ್ತಿ, ಗುಗ್ಗುಳಗಳ ಹೊಗೆಯಲ್ಲಿ ಗಮಗಮಿಸುತ್ತಿತ್ತು.

ಈ ಗುಡಿಯ ಪೂಜಾರಿ ಹಿಂದು. ಪರಂಪರೆಯಿಂದ ಅವನ ಮನೆತನದವರಿಗೆ ಈ ಸ್ಥಾನ ನಡೆದುಬಂದಿತ್ತು. ಇಲ್ಲಿಯ ಇನ್ನೊಂದು ವಿಚಿತ್ರವೆಂದರೆ ಪೀರನಿಗೆ ದಿನಾಲು ಪೂಜೆ ನಡೆಯುವುದು. ಈ ಪೂಜೆಗಾಗಿ ದಿನಾಲು ಸನಿಯದ ಕೃಷ್ಣಾನದಿಯಿಂದ ನೀರು ಬರಬೇಕು. ಇದಕ್ಕಾಗಿ ಪೂಜಾರಿ ತನ್ನ ಒಂದು ಎತ್ತನ್ನು ಮೀಸಲಾಗಿಡುತ್ತಿದ್ದನು. ಈ ಪೂಜೆಯ ವಿಧಿಯನ್ನಾಗಲಿ, ಪೂಜಾರಿಯ ಇರುವಿಕೆಯನ್ನಾಗಲಿ ಸಾಬಣ್ಣ ಜೀವಂತವಿರುವವರೆಗೆ ಮುಸಲ್ಮಾನರು ಆಕ್ಷೇಪಿಸಿರಲಿಲ್ಲ. ಮೊನ್ನೆ ಮೊನ್ನೆ ಸಾಬಣ್ಣನು ಕಣ್ಣುಮುಚ್ಚಲು ಈ ಸ್ಥಳವನ್ನು ತಾನೇ ಆಕ್ರಮಿಸಬೇಕೆಂದು ಶಮಸುದ್ದೀನ ಸಾಹೇಬನು ಹೊಂಚು ಹಾಕಿ ತನ್ನ ಸಮಾಜದಲ್ಲಿ ವಿಷದ ಬೀಜವನ್ನು ಬಿತ್ತತೊಡಗಿದನು. ಹಿರಿಯನಾದ ವಸ್ತಾದ ಅಲ್ಲಿಸಾಹೇಬನು ಕೂಡ ಶಮಸುದ್ದೀನನ ಮಾತಿಗೆ ತಾಳ ಹಾಕತೊಡಗಿದ್ದರಿಂದ ಅದಕ್ಕೊಂದು ಸ್ವರೂಪ ಬರತೊಡಗಿತು. ಈ ಮಾತು ಹಿಂದುಗಳ ಕಿವಿಗೆ ಬಿದ್ದಾಗ ಅವರು ಕೆಂಡ ಕಾರತೊಡಗಿದರು. ಪ್ರಸಂಗ ಬಂದರೆ ಒಂದು ಕೈ ನೋಡಿಬಿಡಬೇಕೆಂಬ ಮನೋಭಾವವು ಇಬ್ಬಣಗಳಲ್ಲಿಯೂ ಮೂಡತೊಡಗಿತು.

ಈ ಪರಿಸ್ಥಿತಿಯನ್ನು ತಿಳಿದ ಊರಗೌಡರಾದ ಹೇಮಂತಗೌಡರು ಶಾನುಭೋಗ ಶೀನಪ್ಪನನ್ನೂ, ದೇಶಪಾಂಡೆ ಕೇಶವರಾಯನನ್ನೂ, ಗುರುಲಿಂಗ ಶೆಟ್ಟರನ್ನೂ ಕರೆದುಕೊಂಡು ಭಟ್ಟರ ಮನೆಗೆ ಸ್ವಲ್ಪ ಗಾಬರಿಯಿಂದಲೇ ಬಂದರು. ಅವರು ಬರುತ್ತಿರುವಾಗ ದಾರಿಯಲ್ಲಿ ಮಾದರ ಚೆನ್ನನೂ "ಪಾಪ! ಬಹಳ ದಿನಗಳಿಂದಲೂ ಪೀರನ ಸೇವೆ ಮಾಡುತ್ತ ಬಂದ ಬಸವನನ್ನು ಈ ಜನ ಏನು ಮಾಡಿತೋ ತಿಳಿಯದು ಒಡೆಯರೆ! ಮುಂಜಾವಿನಿಂದ ಆ ಪ್ರಾಣಿ ಒದ್ದಾಡುತ್ತಿದೆ. ಏನೋ ಔಷಧ ಕುಡಿಸಿರಬೇಕು ಮಕ್ಕಳು" ಎಂಬ ದುಷ್ಟ ಸಮಾಚಾರವನ್ನು ತಿಳಿಸಿದನು. ಇದರಿಂದಲಂತೂ ಇವರು ಹೌಹಾರಿ ಹೋದರು. 'ಮುಯ್ಯಕ್ಕೆ ಮುಯ್ಯ' ತೀರಿಸದೆ ಬಿಡುವದಿಲ್ಲ ನಮ್ಮ ಜನ ಎಂಬುದೇ ಅವರ ಚಿಂತೆಯಾಯಿತು.

ಭಟ್ಟರು ಎಲ್ಲವನ್ನೂ ಕೇಳಿಕೊಂಡರು. ಆ ಹೊತ್ತಿಗೆ ಭಟ್ಟರ ಮನೆಯ ಮುಂದೆ ಯುವಕರ ಒಂದು ಜಾತ್ರೆಯೇ ನೆರೆದಿತ್ತು. ಭಟ್ಟರು ಈ ಜನವನ್ನು ನೋಡಿ ಗಾಬರಿಯಾಗದೆ "ನಿಮಗೆ ನನ್ನಲ್ಲಿ ವಿಶ್ವಾಸವಿದ್ದರೆ ನೀವೆಲ್ಲ ಕೂಡಲೇ ಮನೆಗೆ ಹೋಗಬೇಕು. ಅದರ ಹೊಣೆ ನನ್ನದು" ಎಂದರು.

ಕೂಡಿದವರಲ್ಲಿ ಒಬ್ಬ,

"ನಮ್ಮ ಪೂಜೆಯ ಎತ್ತನ್ನು ಕೊಂದಿದ್ದಾರೆ. ಅವಕ್ಕೇನು ಹೇಳುವಿರಿ?" ಎಂದು ಗಟ್ಟಿಯಾಗಿ ಕೂಗಿದ.

"ದಯವಿಟ್ಟು ಕೂಗಾಡಬೇಡಿರಿ. ಆದ ಮಾತನ್ನು ನೆನೆದು ಉದ್ರಿಕ್ತರಾಗಬೇಡಿರಿ. ನಾವೆಲ್ಲ ಕೂಡಿಯೇ ಬಾಳಬೇಕಾಗಿದೆ. ಸುಮ್ಮನೆ ಮನೆಗೆ ಹೋಗಿರಿ. ಸಂಜೆಯ ಮುಂದೆ ನೀವೆಲ್ಲ ಮತ್ತೆ ಬರಬೇಕಾದೀತು. ಅಲ್ಲಿಯವರೆಗೆ ಸಮಾಧಾನದಿಂದ ಹೋಗಿರಿ."

ಜನ ಕದಲದಾಯಿತು.

"ಭಟ್ಟರು ಹೇಳಿದುದನ್ನು ಕೇಳಲಿಲ್ಲವೇ ಮುಟ್ಠಾಳ ಮಕ್ಕಳೇ! ಸುಮ್ಮನೆ ಹೋಗುವಿರೋ ಇಲ್ಲವೋ?" ಎಂದು ಶೆಟ್ಟರು ಗುಡುಗಲು ನಿಂತ ಜನ ಮನಸ್ಸಿಲ್ಲದೆ ಹಿಂದೆ ಸರಿದುಹೋದರು.

"ಗೌಡರೇ, ವಸ್ತಾದ ಅಲ್ಲಿಯು ಹುಸೇನ ಪೀರನ ಗುಡಿಯಲ್ಲಿ ಇರಬಹುದಲ್ಲವೇ? ಶಮುಸುದ್ದೀನನೂ ಅಲ್ಲಿಯೇ ಇರಬಹುದು. ನಾವೆಲ್ಲ ಅಲ್ಲಿಯೇ ಹೋಗೋಣ. ಅವರೊಡನೆ ನಾನು ಮಾತನಾಡಬೇಕು" ಎಂದರು.

"ಅವರನ್ನು ಎಳೆದು ಇಲ್ಲಿಯೇ ತರುತ್ತೇನೆ. ನೀವು ಅಲ್ಲಿ ಹೋಗುವದೆಂದರೇನು?" ಹೇಮಂತಗೌಡರು ಅಬ್ಬರಿಸಿದರು.

"ಇದರಲ್ಲಿ ಅಭಿಮಾನದ ಪ್ರಶ್ನೆಯನ್ನು ತರಬಾರದು ಗೌಡರೆ! ಶಾಂತ ಚಿತ್ತದಿಂದ ಇದನ್ನು ವಿಚಾರಿಸೋಣ. ನಾವೆಲ್ಲ ಅಲ್ಲಿಯೇ ಹೋಗಬೇಕು, ತಿಳಿಯಿತೆ?" ಎಂದ ಭಟ್ಟರ ದನಿಯಲ್ಲಿನ ನಿರ್ಧಾರವನ್ನು ಕಂಡು ಎಲ್ಲರೂ ಒಪ್ಪಬೇಕಾಯಿತು.

ಆ ಹೊತ್ತಿಗೆ ಆ ಎತ್ತು ಸತ್ತುಹೋಯಿತೆಂಬ ಸುದ್ದಿ ಕಾಳ್ಗಿಚ್ಚಿನಂತೆ ಊರಲ್ಲಿ ಹರಡಿಬಿಟ್ಟಿತು. ಇದರಿಂದ ಜನರಲ್ಲಿ ತೀಕ್ಷ್ಣವಾದ ಉದ್ವೇಗ ಉಂಟಾಗುವುದು ಖಂಡಿತವೆಂದು ತಿಳಿದ ಭಟ್ಟರು 'ಕೂಡಲೇ ನಡೆಯಿರಿ. ಸಮಯ ಕಳೆದರೆ ಅನರ್ಥವಾದೀತು' ಎಂದು ಹೊರಟುಬಿಟ್ಟರು.

ಭಟ್ಟರ ಅನುಮಾನದಂತೆ ಮುಸಲ್ಮಾನ ಬಾಂಧವರೆಲ್ಲ ಹುಸೇನ ಪೀರನ ಗುಡಿಯಲ್ಲಿ ಕೂಡಿದ್ದರು. ಅವರಲ್ಲಿಯೂ ಬಿಸಿಬಿಸಿಯಾದ ಚರ್ಚೆಯು ನಡೆದಿದ್ದಿತು. ಊರ ಮುಂದಾಳುಗಳೊಡನೆ ಸ್ವತಃ ಭಟ್ಟರೇ ಬರುತ್ತಿರುವುದನ್ನು ನೋಡಿ ಅವರಲ್ಲಿ ಗಡಿಬಿಡಿಯಾಯಿತು. ಅವರು ಕೂಡಲೇ ಚರ್ಚೆಯನ್ನು ನಿಲ್ಲಿಸಿ ಭಟ್ಟರನ್ನು ಬರಮಾಡಿಕೊಂಡರು. ಮುಂದಾಳುಗಳಿಗೆಲ್ಲ ಆಸನ ಮಾಡಿಕೊಟ್ಟರು.

ಭಟ್ಟರು ಅಲ್ಲಿ ಕೂಡಿದ ಜನರನ್ನೆಲ್ಲ ಒಮ್ಮೆ ತೀಕ್ಷ್ಣವಾಗಿ ನೋಡಿ "ಈ ಹಗರಣದ ಅರ್ಥವೇನು?" ಎಂದು ಕೇಳಿದರು.

ಕೂಡಿದ ಮುಸಲ್ಮಾನ ಬಂಧುಗಳು ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು. ಕೊನೆಗೆ ಶಮಸುದ್ದೀನ ಸಾಹೇಬನೇ ಬಾಯಿ ತೆಗೆದ.

"ನಮ್ಮ ದೇವರ ಪೂಜೆಗೆ ನಮ್ಮ ಪೂಜಾರಿಯೇ ಆಗಬೇಕು. ಇದೇ ನಮ್ಮ ಸಮಾಜದ ಬೇಡಿಕೆ."

ಭಟ್ಟರು ಮಂದಸ್ಮಿತರಾಗಿ ಹೇಳಿದರು.

"ಈಗಿರುವ ಪೂಜಾರಿ ನಿಮ್ಮವನಲ್ಲವೆಂದು ನಿಮಗಾರು ಹೇಳಿದರು? ನಿಮ್ಮ ದೇವರು ಬೇರೆ, ನಮ್ಮ ದೇವರು ಬೇರೆಯೆ? ದೇವರಲ್ಲಿ ಭೇದವೆಣಿಸುವದು ನ್ಯಾಯವೆ?"

"ಅದೇನೇ ಇದ್ದರೂ ಮುಸಲ್ಮಾನ ದೇವರ ಪೂಜಾರಿ ಮುಸಲ್ಮಾನನೇ ಇರಬೇಕೆಂದು ನಮ್ಮ ಅಭಿಪ್ರಾಯವಾಗಿದೆ. ಇದನ್ನು ನೀವು ಪೂರೈಸಿ ಕೊಡಬೇಕು."

"ಇದರಲ್ಲಿ ನಿಮ್ಮ ಅಭಿಪ್ರಾಯದ ಪ್ರಶ್ನೆಯೇ ಇಲ್ಲ ಬಂಧುಗಳೇ. ಈ ಪ್ರಶ್ನೆಯನ್ನು ಆಳವಾಗಿ ವಿಚಾರಿಸಿಯೇ ನಿಮ್ಮ ಹಿರಿಯರು ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಅವರು ಮೂರ್ಖರಲ್ಲ. ಅವರಲ್ಲಿ ಮುನ್ನೋಟವಿತ್ತು.

ನಿಮ್ಮ ತರ್ಕದಲ್ಲಿಯೇ ನಾನು ಮಾತು ಸಾಗಿಸುತ್ತೇನೆಂದು ತಿಳಿಯಿರಿ. ನಿಮ್ಮ ದೇವರಿಗೆ ನಡೆದುಕೊಳ್ಳುವ ಜನರಲ್ಲಿ ಹೆಚ್ಚು ಜನ ಯಾರು? ವಿಚಾರಿಸಿರುವಿರಾ? ಕೇವಲ ಮುಸಲ್ಮಾನರಷ್ಟೇ ಈ ದೇವರಿಗೆ ಭಕ್ತರಾಗಿಲ್ಲ. ನಿಮ್ಮ ಜನದ ನೂರು ಪಟ್ಟು ಹೆಚ್ಚು ಹಿಂದುಗಳು ಈ ದೇವರ ಭಕ್ತರಾಗಿದ್ದಾರೆ. ಈ ಜನರ ವಿಶ್ವಾಸವನ್ನು ಗಳಿಸಿಕೊಳ್ಳಲು ನಿಮ್ಮ ಹಿರಿಯರು ಬೇಕೆಂದೇ ಹಿಂದೂ ಪೂಜಾರಿಯನ್ನು ನಿಯಮಿಸಿದ್ದಾರೆ. ನಿಮ್ಮ ಬೇಡಿಕೆಯನ್ನು ನಾವು ಮನ್ನಿಸಿದರೆ ಈ ಗುಡಿಯು ಕೇವಲ ಮುಸಲ್ಮಾನರದಾಗುವದು. ನೀವು ಹಿಂದುಗಳ ವಿಶ್ವಾಸದಿಂದ ವಂಚಿತರಾಗುವಿರಿ. ಇದನ್ನು ನೀವು ವಿಚಾರಿಸಬೇಡವೆ? ಈ ದೇವಾಲಯಕ್ಕೆ 'ಗುಡಿ' ಎಂದು ನಿಮ್ಮ ಹಿರಿಯರು ಕರೆದಿದ್ದಾರೆ. ಇದು ಯಾವ ಉದ್ದೇಶದಿಂದ ಇರಬಹುದು ತಿಳಿದುಕೊಳ್ಳಿರಿ. ಈ ಗುಡಿಯು ಹಿಂದೂ ಜನರ ವಿಶ್ವಾಸದ ಪ್ರತೀಕವಾಗಿದೆ. ನಾವೆಲ್ಲ ಒಬ್ಬ ದೇವರ ಮಕ್ಕಳೆಂದು ಸಾರುವ ದಿವ್ಯ ದೇವಾಲಯವಾಗಿದೆ. ಈ ನೆಮ್ಮದಿಯನ್ನು ನೀವು ಕಲಕಬೇಕೆ? ನಾವು ಬೇರೆ ನೀವು ಬೇರೆಯೆ?"

"ಹಾಗಾದರೆ ಹಿಂದೂ ಗುಡಿಗಳಲ್ಲಿ ಮಹಮ್ಮದೀಯ ಪೂಜಾರಿ ಏಕಿಲ್ಲವೆಂಬುದನ್ನು ಗುರುಗಳು ಹೇಳಬಹುದೇ?"

ಶಮಸುದ್ದೀನನು ವ್ಯಂಗ್ಯವಾಗಿ ಬೇಕೆಂದೇ ಕೇಳಿದ.

"ಇದಕ್ಕೆ ಕಾರಣವಿಲ್ಲದಿಲ್ಲ ಸಾಹೇಬರೆ! ಪೂಜಾರಿಯು ಬಹುಜನ ಭಕ್ತರ ಪ್ರತಿನಿಧಿಯಾಗಿರಬೇಕಾಗಿರುತ್ತದೆ. ಈ ಮಾತನ್ನು ವಿಚಾರಿಸಿಯೇ ನನ್ನ ನಿಮ್ಮ ಹಿರಿಯರು ಒಂದು ಯೋಗ್ಯವಾದ ವ್ಯವಸ್ಥೆ ಮಾಡಿರುತ್ತಾರೆ. ಹಿಂದೂ ದೇವರಿಗೆ ಮುಸಲ್ಮಾನ ಭಕ್ತರೆಷ್ಟು ಜನ? ನಮ್ಮ ದೇವರಿಗೆ ನೀವು ನಡೆದುಕೊಳ್ಳುತ್ತಿರುವಿರಾ? ನಮ್ಮ ಗುಡಿಯಲ್ಲಿ ನೀವು ಬರುತ್ತಿರುವಿರಾ? ಬರುತ್ತಿರುವದಿಲ್ಲ ಎಂದ ಬಳಿಕ ಇದರಲ್ಲಿ ಮುಸಲ್ಮಾನ ಪೂಜಾರಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಿಮ್ಮ ತರ್ಕ ಶುದ್ಧವಾಗಿಲ್ಲ. ನೀವು ವಿಚಾರ ಮಾಡದೆ ದುಡುಕಿ ಮಾತನಾಡುತ್ತಿದ್ದೀರಿ. ನಿಮ್ಮಲ್ಲಿ ಯಾವ ಮಾತಿನಲ್ಲಿ ವಿಶ್ವಾಸವಿಲ್ಲವೋ ಯಾವ ವ್ಯವಸ್ಥೆ ನಿಮಗೆ ಸರಿಯೆನಿಸುವುದಿಲ್ಲವೋ ಅಲ್ಲಿ ಅಧಿಕಾರವನ್ನು ಕೇಳುವದು ಕುಚೋದ್ಯವಾಗಿದೆ. ಈಗಲಾದರೂ ಹೇಳಿರಿ. ಹಿಂದೂ ದೇವರಿಗೆ ನಡೆದುಕೊಳ್ಳುವ ಮುಸಲ್ಮಾನರು ಹೆಚ್ಚೋ, ಮುಸಲ್ಮಾನ ದೇವರಿಗೆ ನಡೆದುಕೊಳ್ಳುತ್ತಿರುವ ಹಿಂದೂ ಜನ ಹೆಚ್ಚೋ? ಸಮಾಜದ ನೆಮ್ಮದಿಯನ್ನು ಕಾಯ್ದುಕೊಳ್ಳಬೇಕಾದರೆ ಬಹುಜನ ಸಮಾಜದ ವಿಶ್ವಾಸ ಬೇಕು. ಎಂತಲೇ ಯಮನೂರು ದೇವರ ಪೂಜಾರಿ ಹಿಂದು. ಈ ಮಾತನ್ನು ನಿಮ್ಮ ಹಿರಿಯರು

ಅರಿತುಕೊಂಡಷ್ಟು ನೀವು ಅರಿತುಕೊಂಡಿಲ್ಲ. ಈಗಲಾದರೂ ಅರ್ಥವಾಯಿತೆ? ಹಿಂದೂ ಗುಡಿಗಳಲ್ಲಿ ಮುಸಲ್ಮಾನ ಪೂಜಾರಿ ಏಕಿಲ್ಲವೆಂಬುದು ?"

ಭಟ್ಟರ ಮಾತುಗಳನ್ನು ಮುಸಲ್ಮಾನ ಬಂಧುಗಳು ಕಿವಿದೆರೆದು ಕೇಳಿದರು. "ನಮ್ಮ ದೇವರಿಗೆ ನೀವು ನಡೆದುಕೊಳ್ಳುವಿರಾ?" ಎಂದು ಕೇಳಿದ ಭಟ್ಟರ ಮಾತು ಶಮುಸುದ್ದೀನನ ಮುಖ ಕೆಳಗೆ ಮಾಡಿತು. ಅವನು ನಿರುತ್ತರನಾದನು. ಹಿರಿಯನಾದ ವಸ್ತಾದ ಅಲ್ಲೀ ಸಾಹೇಬನ ತಲೆಯಲ್ಲಿ ಪ್ರಕಾಶ ಬೀಳತೊಡಗಿತು. ಆಗಲೇ ಅವನಲ್ಲಿ ಪಶ್ಚಾತ್ತಾಪ ಮೂಡಿಬಿಟ್ಟಿತು. ಅವನು ಕರಗಿ ನೀರಾಗಿದ್ದನು.

ತಮ್ಮ ಮಾತಿನ ಪರಿಣಾಮವು ಮುಸಲ್ಮಾನ ಬಾಂಧವರಲ್ಲಿ ಯೋಗ್ಯ ರೀತಿಯಿಂದ ಆಗಹತ್ತಿರುವುದನ್ನು ಕಂಡ ಭಟ್ಟರು ಉತ್ತೇಜಿತರಾಗಿ,

"ಗಂಗನಹಳ್ಳಿಯಲ್ಲಿ ಇರುವದು ಒಂದೇ ಸಮಾಜ. ಅದರಲ್ಲಿ ಹಿಂದೂ ಮುಸಲ್ಮಾನನೆಂಬ ಭೇದಕ್ಕೆ ಆಸ್ಪದವಿಲ್ಲ. ಇದು ಮೊದಲಿನಿಂದಲೂ ನಡೆದು ಬಂದಿದೆ. ಮುಂದೆಯೂ ಸಾಗಬೇಕಾಗಿದೆ. ನಮ್ಮ ಹಿರಿಯರು ದಾರ್ಶನಿಕರಾಗಿದ್ದರು. ಅವರಲ್ಲಿ ಮುನ್ನೋಟದ ಅರಿವಿತ್ತು. ಸಮಾಜದ ನೆಮ್ಮದಿಯನ್ನು ಕಾಯ್ದುಕೊಂಡು ಹೋಗುವ ವ್ಯವಸ್ಥೆ ಅವರದಾಗಿತ್ತು. ಇದನ್ನು ಅನುಲಕ್ಷಿಸಿಯೇ ತಮ್ಮ ಧರ್ಮಮಂದಿರಗಳ ವ್ಯವಸ್ಥೆ ಮಾಡಿದರು. ಅಲ್ಪಸಂಖ್ಯಾತರಾದ ಮುಸಲ್ಮಾನರಿಗೆ ಬಹುಜನ ಸಮಾಜದ ಬೆಂಬಲ ಸಿಗುವಂತೆ ಏರ್ಪಾಡನ್ನು ಮಾಡಿದರು. ನಾವು ಅವರಿಗಿಂತ ಹೆಚ್ಚು ಪಾಂಡಿತ್ಯವನ್ನು ತೋರಿಸಿ ಸಮಾಜರಚನೆಯಲ್ಲಿ ಭಂಗ ತರುವದು ಹುಚ್ಚಾಟವಾದೀತು, ಅನರ್ಥವಾದೀತು. ಪರಂಪರೆಯಿಂದ ಬಂದ ವ್ಯವಸ್ಥೆ ಅನವರತವೂ ಸಾಗಬೇಕು. ಇದರಲ್ಲಿಯೇ ಸಮಾಜದ ಸೌಖ್ಯವಿದೆ. ವಸ್ತಾದ ಅಲ್ಲೀ ಸುಮ್ಮನಿರುವ ಅವಶ್ಯಕತೆ ಇಲ್ಲ. ನಾವೆಲ್ಲ ಅಲ್ಲಾನ ಮಕ್ಕಳು. ನಾವೆಲ್ಲ ಶಿವನ ಮಕ್ಕಳು. ನಾವೆಲ್ಲ ರಹೀಮನ ಭಕ್ತರು, ನಾವೆಲ್ಲ ರಾಮನ ಭಕ್ತರು. ರಾಮನೆಂದರೂ ಒಂದೇ. ರಹೀಮನೆಂದರೂ ಒಂದೇ."

ಆ ವೇಳೆಗೆ ಆಗಲೇ ಹೊತ್ತು ತಿರುಗಿತ್ತು. ಗಂಗನಹಳ್ಳಿಯ ಹಿಂದೂ ಯುವಕ ಜನಾಂಗವು ಒಂದು ಇತ್ಯರ್ಥ ಮಾಡಿಕೊಂಡುಬಿಡಬೇಕೆಂದು ಹುಸೇನ ಪೀರನ ಗುಡಿಯ ಮುಂದೆ ತಂಡತಂಡವಾಗಿ ನೆರೆಯತೊಡಗಿತು.

ತನ್ನ ಹಸುರು ಪೇಟಾದ ಮೇಲೆ ಕೈಯಾಡಿಸುತ್ತ ಕಂಗೆಟ್ಟು ನಿಂತ ಶಮುಸುದ್ದೀನನು ಈ ಜನಜಂಗುಳಿಯನ್ನು ನೋಡಿ ಬೆದರಿದನೋ, ಇಲ್ಲವೆ ಭಟ್ಟರ ಮಾತಿನ ಪರಿಣಾಮವು ಅವನ ಮೇಲಾಯಿತೋ ಅವನು ಒಮ್ಮೆಲೆ

ಕೈಜೋಡಿಸಿ ಭಟ್ಟರಿಗೆ "ನನ್ನಿಂದ ಪ್ರಮಾದವಾಯಿತು ಗುರುಗಳೇ. ನಿಮ್ಮ ಮಾತನ್ನು ನಾನು ವಿಶ್ವಾಸದಿಂದ ಪಾಲಿಸುತ್ತೇನೆ" ಎಂದು ಅಧೋವದನನಾದನು.

"ಶಾಹಬ್ಬಾಶ್ ಶಮಸುದ್ದೀನ! ನೀನು ಗಂಗನಹಳ್ಳಿಯಲ್ಲಿ ನಡೆಯಬಹುದಾದ ಅನಾಹುತವನ್ನು ತಪ್ಪಿಸಿದಿ" ಎಂದು ಭಟ್ಟರು ಅವನ ಬೆನ್ನು ಚಪ್ಪರಿಸಿದರು.

"ಆದರೆ ಗುರುಗಳೇ! ನನ್ನಿಂದ ಒಂದು ಪಾಪದ ಕೆಲಸವಾಗಿದೆ. ಪೀರನ ಸೇವೆ ಮಾಡುತ್ತಿದ್ದ ಆ ಎತ್ತಿನ ಅಪಾಯಕ್ಕೆ, ಅದರ ಸಾವಿಗೆ ನಾನೇ ಕಾರಣನಾಗಿದ್ದೇನೆ. ನಿಮ್ಮ ಜನ ನನ್ನನ್ನು ಹರಿದು ತಿಂದರೂ ಸರಿ. ಈ ತಪ್ಪನ್ನು ಒಪ್ಪಿಕೊಳ್ಳುತ್ತೇನೆ" ಎಂದಾಗ ಹೇಮಂತಗೌಡರು ಕರಕರನೇ ಹಲ್ಲು ಕಡಿದು,

"ಆ ಮೂಕ ಪ್ರಾಣಿ ನಿನಗಾವ ಅನ್ಯಾಯ ಮಾಡಿತ್ತೋ ಮುಟ್ಠಾಳಾ! ನಿನ್ನ ಎಲುಬು ಪುಡಿಮಾಡಬೇಕು. ಆ ಎತ್ತನ್ನು ಹುಗಿಯುವ ಬದಲು ನಿನ್ನನ್ನೇ ಹುಗಿಯಬೇಕು" ಎಂದು ಅಬ್ಬರಿಸಿದರು. ಮನಸ್ಸು ಮಾಡಿದ್ದರೆ ಹೇಮಂತಗೌಡರಿಗೆ ಇದು ಅಸಾಧ್ಯವಾದ ಕೆಲಸವಾಗಿರಲಿಲ್ಲ. ಹೊರಗಿನ ಪ್ರಚಂಡ ರೈತರ ಸಮುದಾಯವು ಗೌಡರ ಆಜ್ಞೆಯನ್ನು ಕೂಡಲೇ ಅಮಲಿನಲ್ಲಿ ತರಬಹುದಾಗಿತ್ತು. ಈ ಭಾವವನ್ನು ಭಟ್ಟರು ತಿಳಿದುಕೊಳ್ಳದೇ ಇರಲಿಲ್ಲ. ಅವರು ಸಮಾಧಾನದಿಂದ ಹೇಮಂತಗೌಡರ ಬೆನ್ನಮೇಲೆ ಕೈಯಿಟ್ಟು ಹೇಳಿದರು :

"ಗೌಡರೆ! ಆದ ಮಾತನ್ನು ನೆನೆದು ಉದ್ರೇಕಗೊಳ್ಳುವದರಿಂದ ಯಾವ ಲಾಭವೂ ಆಗದು. ಅದರಿಂದ ಹಾನಿಯೇ ಹೆಚ್ಚು. ಶಮಸುದ್ದೀನನು ಇಂತಹ ಗಂಡಾಂತರದ ಪ್ರಸಂಗದಲ್ಲಿಯೂ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ. ಸಾರ್ವಜನಿಕವಾಗಿ ತಪ್ಪನ್ನು ಒಪ್ಪಿಕೊಳ್ಳುವದು ಸಂಸ್ಕೃತಿವಂತರ ಲಕ್ಷಣ. ಈ ತಪ್ಪನ್ನು ಮನ್ನಿಸದಿರುವದು ಸದ್ಗೃಹಸ್ಥರ ಲಕ್ಷಣವಲ್ಲ. ನೀವು ಸಾವಧಾನದಿಂದ ಇರಬೇಕು. ನಾನೆಲ್ಲವನ್ನೂ ನೋಡಿಕೊಳ್ಳುತ್ತೇನೆ."

"ಹೊರಗೆ ನಿಂತ ರೈತರಿಗೆ ಸಮಾಧಾನ ಹೇಳುವದು ಕಠಿಣ ಭಟ್ಟರೆ!"

"ಆ ಮಾತು ನನಗಿರಲಿ."

ಹೀಗೆಂದ ಭಟ್ಟರು ನೇರವಾಗಿ ಹೊರಗೆ ಬಂದು ಎತ್ತರವಾದ ಕಟ್ಟೆಯ ಮೇಲೆ ಮಂದಸ್ಮಿತರಾಗಿ ನಿಂತರು. ಭಟ್ಟರ ಆಗಮನವನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಯುವಕರು ಅವರ ಆಕೃತಿಯನ್ನು ನೋಡಿ ಸ್ತಬ್ಧರಾದರು.

ಎಲ್ಲ ಕಡೆಗೂ ಶಾಂತತೆ ನೆಲೆಗೊಂಡಿತು. ಅಷ್ಟರಲ್ಲಿ ನಾವಲಿಗ ನಿಂಗಪ್ಪನ ಮಗ ಮಲ್ಲನು ಮುಂದೆ ಬಂದು,

"ದೇವರ ಎತ್ತನ್ನು ಶಮುಸುದ್ದೀನನೇ ಕೊಂದಿದ್ದಾನೆ. ಅವನನ್ನು ನಮಗೆ ಒಪ್ಪಿಸಿರಿ. ಅವನನ್ನು ಬೇಟೆಯ ಮೊಲದಂತೆ ಮಾಡಬೇಕಾಗಿದೆ" ಎಂದು ಚೀರಿದನು. ಅನೇಕ ದನಿಗಳು ಮಲ್ಲನ ಮಾತಿಗೆ ಬೆಂಬಲ ಕೊಟ್ಟವು. ಒಂದು ನಿಮಿಷ ಎಲ್ಲ ಕಡೆಗೂ ಈ ದನಿಗಳ ಗೊಂದಲವಾಗಿಬಿಟ್ಟಿತು. ಭಟ್ಟರು ಎತ್ತರವಾದ ದನಿಯಲ್ಲಿ "ನೀವೆಲ್ಲ ನನ್ನ ಮಾತು ಕೇಳುತ್ತೀರಾ ?" ಎಂದು ಕೂಗಲು ಎಲ್ಲ ಕಡೆಗೂ ಸ್ತಬ್ಧವಾಯಿತು.

ಮುಂದೆ ಬಂದು ನಿಂತ ಮಲ್ಲನನ್ನು ಭಟ್ಟರು ನೋಡಿ "ಮಲ್ಲಪ್ಪ, ನಿನ್ನ ಮಾತು ಸತ್ಯವಾಗಿದೆ. ದೇವರ ಎತ್ತಿಗೆ ಶಮುಸುದ್ದೀನನೇ ಅಪಾಯ ಮಾಡಿದ್ದು ನಿಜ."

"ನಮಗೆಲ್ಲ ಗೊತ್ತಾಗಿದೆ ಭಟ್ಟರೇ !" ಮಲ್ಲ ಮತ್ತೆ ಕೂಗಿದ.

"ಇದರಲ್ಲಿ ಯಾರಿಗೂ ಗೊತ್ತಾಗುವ ಪ್ರಶ್ನೆಯೇ ಇಲ್ಲ. ಈ ತಪ್ಪನ್ನು ಮಾಡಿದವನೇ ಒಪ್ಪಿಕೊಂಡುಬಿಟ್ಟಿದ್ದಾನೆ. ಆದರೆ ಒಂದು ಮಾತು. ನಿಮಗೆ ನನ್ನಲ್ಲಿ ವಿಶ್ವಾಸವಿದ್ದರೆ ಆ ಮಾತನ್ನು ಹೇಳುತ್ತೇನೆ. ನಾನು ಹೇಳುವ ಮಾತುಗಳನ್ನು ಕೇಳಿಕೊಳ್ಳಿರಿ. ಆಮೇಲೆ ಮನಬಂದಂತೆ ಮಾಡಿರಿ. ನಿಮಗೆ ನನ್ನ ಮೇಲೆ ವಿಶ್ವಾಸವಿದೆಯಲ್ಲವೆ ?"

"ಎಂತಹ ಮಾತು ಭಟ್ಟರೆ ? ನಿಮ್ಮ ವಿಶ್ವಾಸವಿಲ್ಲದಿದ್ದರೆ ಈಗಾಗಲೇ ಏನೋ ಮಾಡಿಬಿಡುತ್ತಿದ್ದೆವು. ನಿಮ್ಮ ಮೇಲೆ ನಮ್ಮ ದೃಢವಿಶ್ವಾಸವಿದೆ. ಹೇಳಿರಿ." ಎಂದು ಮಾನಿಂಗನು ಮುಂದೆ ಬಂದು ಹೇಳಿದನು.

"ಹಾಗಾದರೆ ಕೇಳಿರಿ. ಅಪರಾಧವನ್ನು ಶಮುಸುದ್ದೀನನು ಮಾಡಿದ್ದು ನಿಜ. ಅವನಿಗೆ ಈಗ ಸಂಪೂರ್ಣ ಪಶ್ಚಾತ್ತಾಪವಾಗಿರುವುದರಿಂದ ಅವನನ್ನು ದಂಡಿಸುವದು ಅನಾಗರಿಕತನವಾಗುವದು. ವಿಷಮ ವೇಳೆಯಲ್ಲಿ ಆಗಬಾರದ್ದು ಆಗಿಹೋಗಿದೆ. ಅದನ್ನು ನಾವು ತಿರುಗಿ ತರಲಾರೆವು. ಅಪರಾಧಿಯನ್ನು ದಂಡಿಸಿ ನಾವು ಎತ್ತಿನ ಪ್ರಾಣವನ್ನು ಉಳಿಸಲಾರೆವು. ಇದರಿಂದ ಮನಸ್ತಾಪವೇ ಹೆಚ್ಚಾಗುವದು. ಮೊದಲಿನಿಂದಲೂ ನಾವೆಲ್ಲರೂ ಒಂದಾಗಿ ಗಂಗನ ಹಳ್ಳಿಯಲ್ಲಿ ಬಾಳಿದ್ದೇವೆ. ಇನ್ನೂ ಬಾಳುತ್ತೇವೆ. ಮೊಹರಮ್ಮವು ಹೆಸರಿಗೆ ಮುಸಲ್ಮಾನರ ಹಬ್ಬ. ಅದರಲ್ಲಿ ಭಾಗವಹಿಸುವವರು ಹಿಂದುಗಳೇ. ಮುಸಲ್ಮಾನ ದೇವರಿಗೆ ಸಲ್ಲುವ ಸಕ್ಕರೆ ನಮ್ಮದೇ ಹೆಚ್ಚು. ಅವರ ದೇವರ 'ಡೋಲಿ'ಗಳನ್ನು ಹೊರುವವರು ನಾವು. ಕಾಲಿಗೆ ಗೆಜ್ಜೆಕಟ್ಟಿಕೊಂಡು

ಮೊಹರಮ್ಮದಲ್ಲಿ ಹೆಜ್ಜೆ ಹಾಕುವವರು ನಾವು. ಕವ್ವಾಲಿಗಳನ್ನು ಅನ್ನುವವರು ನಾವು. ಹುಲಿಯ ಸೋಗು ಹಾಕಿಕೊಂಡು ಕುಣಿಯುವವರು ನಾವು. ಹಬ್ಬದ ಮರುದಿನ 'ಪಾರಿಜಾತ'ವನ್ನು ಆಡಿ ಮನರಂಜನೆ ಮಾಡುವವರು ನಾವು. ಯಮನೂರು ಪೀರನಿಗೆ ಅಸಂಖ್ಯವಾದ ಕೋಳಿ-ಕುರಿಗಳನ್ನು ಕೊಡುವವರು ಯಾರು ಹೇಳಿರಿ? ಅವರ ದೇವರೆಂದು ನಾವು ಸುಮ್ಮನಿರುವೆವೆ? ದೇವರಲ್ಲಿ ನಮಗೆ ವೈಷಮ್ಯವಿಲ್ಲ. ಇದು ಮಹತ್ತರವಾದ ಗುಣ. ನಮ್ಮ ಸಮಾಜದ ನೆಮ್ಮದಿಗೆ ಇದು ಆಧಾರಸ್ತಂಭವಾಗಿದೆ. ಯಾವುದೋ ಒಂದು ಹೊರಗಿನ ವಾತಾವರಣದಿಂದ ಗಂಗನಹಳ್ಳಿಯಲ್ಲಿ ವಿಷದ ಗಾಳಿ ಬೀಸಿಹೋಯಿತು. ಇದು ಕೂಡ ಒಳ್ಳೆಯದೆಂದೇ ನನ್ನ ಮತ. ಇದರಿಂದ ಇನ್ನು ಮುಂದೆ ನಮ್ಮ ಮೈತ್ರಿ ಗಾಢವಾಗಿ ನಿಲ್ಲಲು ಹಾದಿಯಾಯಿತು. ನಾನು ಈಗಾಗಲೇ ಮುಸಲ್ಮಾನ ಹಿರಿಯರೊಡನೆ ಅಖಂಡ ನಾಲ್ಕು ತಾಸು ಚರ್ಚಿಸಿದ್ದೇನೆ. ಮೊದಲಿನ ವ್ಯವಸ್ಥೆಯೇ ಮುಂದೆ ಸಾಗುವದು. ಸಾಬಣ್ಣನ ಮಗನೇ ಪೂಜಾರಿಯಾಗುವನು. ನೀವೆಲ್ಲ ಶಮಸುದ್ದೀನನನ್ನು ಕ್ಷಮಿಸಬೇಕು. ನಮ್ಮ ಹೃದಯದಲ್ಲಿ ಸಂಕುಚಿತ ಭಾವಕ್ಕೆ ಆಸ್ಪದ ಕೊಡಬಾರದು. ಅಜ್ಞಾನಕ್ಕೆ ನಾವು ಮರುಗಬೇಕು. ತಪ್ಪಿಗೆ ದಂಡವೇ ಉಪಾಯವಲ್ಲ ತಿಳಿಯಿತೆ? ನೀವು ನನ್ನ ಮಾತನ್ನು ನಡೆಸಿ ಕೊಡಬೇಕು. ಕೂಡಲೇ ಕರಡಿಯಮಜಲನ್ನು ತನ್ನಿರಿ, ಬಾಜಾ ಬಂಜಂತ್ರಿಗಳನ್ನು ತನ್ನಿರಿ, ಹಲಗಿ-ಮದ್ದಳೆಗಳನ್ನು ತನ್ನಿರಿ. ಕಾಳಿಯ ಕಾಳಪ್ಪನೂ ಬರಲಿ. ಎಲ್ಲರೂ ಕೂಡಿ ವೈಭವದಿಂದ ಆ ಶಿವನ ಎತ್ತಿನ ಅಂತ್ಯಕ್ರಿಯೆಯನ್ನು ಜರುಗಿಸೋಣ. ವಸ್ತಾದ ಅಲ್ಲೀಸಾಹೇಬರು ಮೆರವಣಿಗೆಯನ್ನು ಸಾಗಿಸಲಿ. ಶಮಸುದ್ದೀನನು ಆ ಎತ್ತಿನ ಮುಂದೆ ಮೊಣಕಾಲೂರಿ ಅದಕ್ಕೆ ತನ್ನದೊಂದು ಹಿಡಿ ಮಣ್ಣನ್ನು ಹಾಕುತ್ತಾನೆ. ಈ ವ್ಯವಸ್ಥೆಯಲ್ಲಿ ನಮ್ಮ ಸಮಾಜದ ಹಿತವಿದೆ. ಈ ಮಾತನ್ನು ನೀವು ಮನ್ನಿಸಿರಿ. ಇದಕ್ಕೆ ನನ್ನ ಆಶೀರ್ವಾದವಿದೆ." ಎಂದು ಭಟ್ಟರು ಒಂದೇ ಸಮನೆ ಮಾತನಾಡಿದಾಗ ಜನರ ಹೃದಯದಲ್ಲಿ ಹೊಸ ಬೆಳಕು ಕಾಣಿಸಿತು.

ಅಷ್ಟು ಪ್ರಚಂಡವಾದ ಹಿಂದೂ-ಮುಸಲ್ಮಾನರ ಮೆರವಣಿಗೆಯು ಗಂಗನಹಳ್ಳಿಯ ಇತಿಹಾಸದಲ್ಲಿಯೇ ಹೊಸದು. ಬಯಲುಗಾಡಿಯಲ್ಲಿ ಅಟ್ಟವನ್ನು ಹಾಕಿ ಎತ್ತಿನ ದೇಹವನ್ನೆಲ್ಲ ಕುಂಕುಮ-ವಿಭೂತಿಗಳಿಂದ ಅಲಂಕರಿಸಿ ಇರಿಸಿದರು. ಹಿಂದೂ-ಮುಸಲ್ಮಾನರ ಒಗ್ಗಟ್ಟಿನ ಪ್ರತೀಕವಾದಂತೆ, ಅವರ ವೈಷಮ್ಯಗಳೂ ಸಮಾಧಿಯಾದಂತೆ, ಆ ಎತ್ತನ್ನು ಯಮನೂರ ಪೀರನ ಆವಾರದಲ್ಲಿಯೇ ಹೂಳಲಾಯಿತು. ಎಂಟು ದಿನಗಳಲ್ಲಿ ಅಲ್ಲಿಯೊಂದು

ಕಲ್ಲಿನ ಕಟ್ಟೆಯು ನಿರ್ಮಾಣವಾಗಿ ನಟ್ಟನಡುವೆ ಆಲದ ಗಿಡವನ್ನು ಹಚ್ಚಲಾಯಿತು. ವಡ್ಡರ ಭೀಮನು ಕಟೆದುಕೊಟ್ಟ ಬಸವಣ್ಣನ ವಿಗ್ರಹವನ್ನು ಒಂದು ತಿಂಗಳ ಮೇಲೆ ಅಲ್ಲಿ ಇಡಲಾಯಿತು. ಪೀರನ ಪೂಜಾರಿಯೇ ಈ ನಂದಿಕೇಶ್ವರನಿಗೆ ಪೂಜೆಮಾಡುವ ಹೊಣೆ ಹೊತ್ತುಕೊಂಡನು.

ಭಟ್ಟರ ಮಧ್ಯಸ್ಥಿಕೆಯಿಂದ ಗುಡ್ಡದಂತೆ ಬಂದ ಗಂಡಾಂತರವು ಮಂಜಿನಂತೆ ಸರಿದುಹೋಯಿತು. ಅಂದಿನಿಂದ ಮುಸಲ್ಮಾನ ಬಾಂಧವರು ಭಟ್ಟರನ್ನು ಹೆಚ್ಚಿನ ಗೌರವದಿಂದ ಕಾಣತೊಡಗಿದರು. ವಸ್ತಾದ ಅಲ್ಲೀ ಭಟ್ಟರ ಜೀವದ 'ದೋಸ್ತ'ನಾದನು.

ಹಳ್ಳಿಯ ನೆಮ್ಮದಿಗೆ ಕಾರಣರಾದ ಭಟ್ಟರ ಕರ್ತೃತ್ವಶಕ್ತಿಯನ್ನು ಹಳ್ಳಿಯ ಮುಂದಾಳುಗಳು ಕೊಂಡಾಡತೊಡಗಿದರು. ಅಂದಿನ ಹದಗೆಟ್ಟ ವಾತಾವರಣದಲ್ಲಿ ಯಾವ ಅನರ್ಥ ಸಂಭವಿಸುವುದೋ ಎಂದು ಗಾಬರಿಯಾಗಿದ್ದ ಊರ ಜನರು ಪರಿಣಾಮವನ್ನು ಸಂಶಯದಿಂದಲೇ ನೋಡತೊಡಗಿದ್ದರು. ಬೆಣ್ಣೆಯೊಳಗಿನ ಕೂದಲೆಳೆಯನ್ನು ತೆಗೆದಂತೆ ಈ ಸಮಸ್ಯೆಯನ್ನು ಬಿಡಿಸಿದ ಭಟ್ಟರು ಅವರಿಗೆ ಪೂಜನೀಯರಾದರು.

"ಜನರ ತಿಳುವಳಿಕೆಯ ಶಕ್ತಿಯನ್ನು ನಾವು ನಂಬಬೇಕು ಶಾನುಭೋಗರೆ! ಅಜ್ಞಾನವನ್ನು ಕೆರಳಿಸಬಾರದು. ಉದ್ವೇಗವನ್ನು ಸಾವಧಾನದಿಂದ ಹತ್ತಿಕ್ಕಬೇಕು. ಇದರಲ್ಲಿ ನಾನು ಮಾಡಿದ್ದು ಹೆಚ್ಚೇನಿಲ್ಲ. ಜನರ ಆಚರಣೆಯ ಬಗ್ಗೆ ನನಗೆ ವಿಶ್ವಾಸವಿದೆ. ಆ ವಿಶ್ವಾಸವೇ ನನ್ನಿಂದ ಎರಡು ಮಾತುಗಳನ್ನು ಹೇಳಿಸಿತು, ಅಷ್ಟೆ. ನನ್ನ ಮಾತುಗಳಿಂದ ಜನರ ವಿವೇಕ ಬುದ್ಧಿಯು ಜಾಗ್ರತವಾಗಿದ್ದು ನನ್ನ ಭಾಗ್ಯ, ಹಳ್ಳಿಯ ಪುಣ್ಯ. ಇದರಲ್ಲಿ ದೇವರ ಕೃಪಾಡವೇ ಹೆಚ್ಚು. ನಾನು ಅವನ ಊಳಿಗದ ಆಳಾಗಿ ನನ್ನ ಕರ್ತವ್ಯವನ್ನು ಮಾತ್ರ ಮಾಡಿದೆನು. ಇದರ ಯಶಸ್ಸು ಅವನಿಗೆ ಸಲ್ಲುವದು" ಎಂದು ಭಟ್ಟರು ನಿರ್ವಿಕಾರ ಮನಸ್ಸಿನಿಂದ ಹೇಳಿದರು.

"ನಮಗೆ ದೇವರು ಕಾಣುವದಿಲ್ಲ ಭಟ್ಟರೆ! ಆದರೆ ಅವನ ಪ್ರತಿನಿಧಿಯನ್ನು ಮಾತ್ರ ದಿನಾಲು ನೋಡುವದು ನಮ್ಮ ಪುಣ್ಯವಾಗಿದೆ" ಎಂದು ಕೇಶವರಾಯರು ಹೇಳಲು ಭಟ್ಟರು "ನನ್ನ ಬಗ್ಗೆ ದೊಡ್ಡ ಮಾತುಗಳನ್ನು ಹೇಳುವದು ನಿಮ್ಮೆಲ್ಲರ ಚಟವೇ ಆಗಿದೆ" ಎಂದು ಮಂದಸ್ಮಿತರಾದರು.

ಶ್ರಾವಣಮಾಸ ಬರುತ್ತಲೇ 'ಆರು ಯಾತ'ದ ಬಾವಿಯ ಕಮಾನಿನ ಮೇಲೆ ಚಪ್ಪರವು ಸಿದ್ಧವಾಗತೊಡಗಿತು.

ಗಂಗನಹಳ್ಳಿಯ ಸುತ್ತಮುತ್ತಲಿರುವ ಪ್ರತಿಷ್ಠಿತರಿಗೆ ಔತಣ ಪತ್ರಗಳು ಹೋದವು. ಸಮಯಕ್ಕೆ ಸರಿಯಾಗಿ ಅಮಲಾಪುರದ ಗಂಗಪ್ಪ ದೇಸಾಯಿರೂ ನಾಗರಹಳ್ಳಿಯ ನಾಡಗೌಡರೂ, ಶಿವಾಪುರದ ಹಿರಿಯ ರೈತ ಈರಣ್ಣನೂ ಬಂದರು.

ಮೊದಲನೆಯ ದಿನವೇ ಚಪ್ಪರವು ಕಿಕ್ಕಿರಿದು ತುಂಬಿಬಿಟ್ಟಿತು. ಭಟ್ಟರು ಸಾಯಂಕಾಲ ನಾಲ್ಕು ಗಂಟೆಗೆ ಪುರಾಣವನ್ನು ಪ್ರಾರಂಭಿಸಿ ಒಂದು ತಾಸಿನ ವರೆಗೆ ಅದನ್ನು ಸಾಗಿಸಿ, ಆಮೇಲೆ ಶಿಷ್ಯರಿಂದ ಪ್ರವಚನಗಳನ್ನು ಹೇಳಿಸಿ ಕೊನೆಗೆ ಪುರಾಣ ಪುಸ್ತಕಕ್ಕೆ ಮಂಗಳಾರತಿಯನ್ನು ಮಾಡಿ ಪನಿವಾರ ಹಂಚಿ ಕಾರ್ಯಕ್ರಮವನ್ನು ಮುಗಿಸತೊಡಗಿದರು. ಅಖಂಡ ಒಂದು ತಿಂಗಳವರೆಗೆ ಈ ಕಾರ್ಯಕ್ರಮವು ತಡೆಯಿಲ್ಲದೆ ಸಾಗಿತು. ಭಟ್ಟರು ಈ ಸಮಯದಲ್ಲಿ ಕೇವಲ ಧಾರ್ಮಿಕ ಪುರಾಣವನ್ನು ಮಾತ್ರ ಹೇಳುತ್ತಿರಲಿಲ್ಲ. ಸಮಾಜದ ಪ್ರಶ್ನೆಗಳನ್ನು ಎತ್ತಿಕೊಂಡು ಚರ್ಚಿಸುತ್ತಿದ್ದರು. ಒಗ್ಗಟ್ಟಿನ ಪ್ರತಿಪಾದನೆಯನ್ನು ಮಾಡುತ್ತಿದ್ದರು. ಜಾತಿ-ಜಾತಿಗಳಲ್ಲಿ ಇರಬೇಕಾದ ಏಕಸೂತ್ರತೆಯನ್ನು ಬಿಂಬಿಸುತ್ತಿದ್ದರು. ನಾವೆಲ್ಲರೂ ಒಂದು ಎಂದು ಘಂಟಾಘೋಷವಾಗಿ ಸಾರುತ್ತಿದ್ದರು. ಶೀಲದ ಮಹತ್ವವನ್ನು ತಿಳಿಸಿ ನಾಗರಿಕ ಜೀವನಕ್ಕೆ ಅದೇ ಜೀವಜೀವಾಳವೆಂದು ಪದೇ ಪದೇ ಹೇಳುತ್ತಿದ್ದರು. ಪುರಾಣಗಳಿಂದ, ಇತಿಹಾಸಗಳಿಂದ ಉದಾಹರಣೆಗಳನ್ನು ನಿರರ್ಗಳವಾಗಿ ಹೇಳುತ್ತಿದ್ದರು. ಬಸವೇಶ್ವರ, ಗುರು ನಾನಕ, ವಿವೇಕಾನಂದ ಮೊದಲಾದ ಧಾರ್ಮಿಕ ಅವತಾರೀ ಪುರುಷರ ಜೀವನ ಚರಿತ್ರೆಗಳನ್ನು ಸಮಯೋಚಿತವಾಗಿ ಹೇಳುತ್ತಿದ್ದರು. ಹೀಗೆ ಶ್ರಾವಣಮಾಸದಲ್ಲಿ ಹೇಳುವ ಭಟ್ಟರ ಪುರಾಣವು ಸಾಂಸ್ಕೃತಿಕ ಸಂವರ್ಧನೆಯ ಹೆಗ್ಗುರುತಾಗಿ ಸಾಗತೊಡಗಿತ್ತು. ಕೇಳಿದಷ್ಟೂ ಜನರಿಗೆ ಇನ್ನಷ್ಟು ಕೇಳಬೇಕೆಂಬ ಕುತೂಹಲ. ಅವರ ಮುಕ್ತಾಫಲಗಳಂತಿರುವ ಮಾತಿನ ಮೋಡಿ ಎಲ್ಲರನ್ನೂ ಮುಗ್ಧ ಮಾಡಿತು. ಅವರ ಜೀವನದಲ್ಲಿ ಒಂದು ರೀತಿಯ ಸಂಸ್ಕಾರವು ತನ್ನ ತಾನೇ ಆಗತೊಡಗಿತು.

ಕೊನೆಯ ದಿನ ಭಟ್ಟರು ಪುರಾಣವನ್ನು ಮುಗಿಸಿ ಧರ್ಮಪತ್ನಿಯೊಂದಿಗೆ ಮಂಗಳಾರತಿ ಎತ್ತಿದರು. ಶಿಷ್ಯರು ಆರತಿ ಪದಗಳನ್ನು ಹೇಳಿದರು. ಕೂಡಿದ ಜನರೆಲ್ಲ ಭಕ್ತಿಭಾವದಿಂದ ಕರಜೋಡಿಸಿದರು.

ಭಟ್ಟರಿಗೆ ಕಾಣಿಕೆ ಕೊಡಲು ಆತುರರಾದ ಜನ ನುಗ್ಗಿ ನುಗ್ಗಿ ಬರತೊಡ

ಗಿತು. ರೂಪಾಯಿಗಳ ರಾಶಿ ಬಿದ್ದಿತು. ಹಣ್ಣುಕಾಯಿಗಳಿಗೆ ಲೆಕ್ಕವಿರಲಿಲ್ಲ.

ಈ ಮಧ್ಯೆ ಊರ ಮುಂದಾಳುಗಳು ತಮ್ಮಲ್ಲಿ ಏನೋ ನಿರ್ಣಯಿಸಿಕೊಂಡು ಗಂಗಪ್ಪ ದೇಸಾಯಿಯೊಡನೆ ಅಲ್ಲಿ ಬಂದರು. ಅವರ ಮುಖಗಳಲ್ಲಿ ಪೂಜ್ಯತಾಭಾವವು ನೆಲೆಸಿತ್ತು. ಜನರೆಲ್ಲ ತಮ್ಮ ಕಾಣಿಕೆಗಳನ್ನು ಸಲ್ಲಿಸಿ ತಮ್ಮ ತಮ್ಮ ಸ್ಥಳಗಳಲ್ಲೇ ಕುಳಿತುಕೊಂಡರು. ಪ್ರಸಾದ ಪನಿವಾರಗಳನ್ನು ತೆಗೆದುಕೊಳ್ಳದೇ ಅವರು ಹೋಗುವಂತಿರಲಿಲ್ಲ. ಆ ಕಾರ್ಯ ಕೂಡಲೇ ನಡೆಯಬೇಕಾಗಿದ್ದಿತು. ಅಷ್ಟರಲ್ಲಿ ಅಮಲಾಪುರದ ಗಂಗಪ್ಪ ದೇಸಾಯಿ ಭಟ್ಟರ ಮುಂದೆ ಅಡ್ಡಬಿದ್ದು "ನನ್ನ ಕಾಣಿಕೆಗಳನ್ನು ಸ್ವೀಕರಿಸಬೇಕು ಗುರುಗಳೇ!" ಎಂದು ಒಂದು ಕಾಶಿಯ ಪೀತಾಂಬರವನ್ನೂ, ಒಂದು ಗೇಣಂಚಿನ 'ಕರವತ ಕಾಟೇ' ಧೋತರದ ಜೋಡನ್ನೂ ಮುಂದಿಟ್ಟನು. ಅಲ್ಲಿಯೇ ನಿಂತ ಗುರುಲಿಂಗ ಶೆಟ್ಟರು ಅವುಗಳನ್ನು ಸ್ವೀಕರಿಸುತ್ತ "ಅಲ್ಲ ದೇಸಾಯಿ, ಈ ಹಚ್ಚಡಗಳಿಂದ ಗುರುಗಳಿಗೆ ಏನಾಗಬೇಕು ಹೇಳು. ಕೊಡುವಂತಿದ್ದರೆ 'ಹರಿಯದ ಹಚ್ಚಡ' ವನ್ನು ಹೊದಿಸಬೇಕಾಗಿತ್ತು." ಎಂದು ಗಂಭೀರನಾಗಲು, ದೇಸಾಯಿ ಕರ ಜೋಡಿಸಿ, "ಹರಿಯದ ಹಚ್ಚಡ! ಅದನ್ನು ನಾನು ಸಲ್ಲಿಸಬೇಕು. ಆಗಲಿ ಶೆಟ್ಟರೆ, ನನಗೆ ಬಹಳ ಸಂತೋಷ. ಕೃಷ್ಣಾತೀರದಲ್ಲಿನ ನದೀ ಮುಳುಗುವ ಜಮೀನು ಇನ್ನು ಮೇಲೆ ಭಟ್ಟರದು" ಎಂದು ನುಡಿದಾಗ ಶಾನುಭೋಗರು ದೇಸಾಯಿಯ ಬೆನ್ನು ಚಪ್ಪರಿಸಿದರು. ಅಲ್ಲಿಯೇ ಇರುವ ನೀರಿನ ತಂಬಿಗೆಯನ್ನು ತೆಗೆದುಕೊಂಡು ದೇಸಾಯಿಯು ಎಲ್ಲರ ಸಮಕ್ಷಮ ಬೊಗಸೆಯಲ್ಲಿ ನೀರು ತುಂಬಿಕೊಂಡು ತನ್ನ ಜಮೀನನ್ನು ದತ್ತಿಯಾಗಿ ಕೊಟ್ಟುದಾಗಿ ಸಾರಿದನು. ಕೂಡಿದ ಜನ ಹರುಷದಿಂದ ಪುಳಕಿತವಾಯಿತು. ದೇಸಾಯರ ದತ್ತಿಯ ಸ್ವೀಕಾರವಾದ ಕೂಡಲೇ ನಾಗರಹಳ್ಳಿಯ ನಾಡಗೌಡನು ತನ್ನ 'ಮಡಿ ಗದ್ದೆ'ಯನ್ನು ಎಲ್ಲರ ಸಮಕ್ಷಮ ದಾನಮಾಡಿದನು. ಇದರಿಂದಲಂತೂ ಜನರ ಹರುಷ ಮೇರೆದಪ್ಪಿತು. ಅವರೆಲ್ಲ ಜಯಘೋಷ ಮಾಡಿದರು. ದೇಶಪಾಂಡೆ ಕೇಶವರಾಯರು ಮುಂದೆ ಬಂದು 'ನನ್ನ ಬಳ್ಳಿಗೆ ಹಾಲೆರೆದ ತಾಯಿಗೆ ಊರ ಮುಂದಿನ ಐದೂ ಮಾವಿನ ಗಿಡಗಳನ್ನು ಈ ಶುಭದಿನದ ಮುಹೂರ್ತದಲ್ಲಿ ಸಲ್ಲಿಸಲು ಭಟ್ಟರು ಅನುಮತಿ ಕೊಡಬೇಕೆಂದು ಹೇಳಿ ಅಡ್ಡಬಿದ್ದರು.

ಈ ಆಕಸ್ಮಿಕ 'ದತ್ತಿ'ಗಳನ್ನು ನೋಡಿ ಭಟ್ಟರ ಕಣ್ಣುಗಳು ಒದ್ದೆಯಾದವು. ಅವರ ಕಂಠ ತುಂಬಿಬಂದಿತು. ಅವರು ಎಲ್ಲರಿಗೂ ಸನ್ನೆಯಿಂದ ಸಮಾಧಾನವಾಗಿ ಕುಳ್ಳಿರಲು ಹೇಳಿದರು. ಶಿಷ್ಯನೊಬ್ಬನಿಗೆ ಅಲ್ಲಿ ಬಿದ್ದ ರೂಪಾಯಿಗಳರಾಶಿಯನ್ನು ತಟ್ಟೆಯಲ್ಲಿ ತುಂಬಲು ಹೇಳಿದರು. ಆ ರೂಪಾಯಿ

ಗಳ ಮೇಲೆ ಸರಸ್ವತಿ ಧರ್ಮಪತ್ನಿಗೆ ಕೊಟ್ಟ ಬಂಗಾರ ಸರಿಗೆಯೂ ಶೋಭಿಸು ತ್ತಿತ್ತು. ಶಾನುಭೋಗರು ದಯಪಾಲಿಸಿದ ಸುತ್ತಿನ ಬಂಗಾರದ ಉಂಗುರವೂ ಕಂಗೊಳಿಸಿತು. ಭಟ್ಟರು ಆ ತಟ್ಟೆಯನ್ನು ತೆಗೆದುಕೊಂಡು ಎದ್ದು ನಿಲ್ಲಲು ಎಲ್ಲರೂ ಸ್ತಬ್ಧರಾಗಿ ಅವರ ಮಾತುಗಳನ್ನು ಕೇಳಲು ಆತುರರಾದರು.

"ಭಕ್ತರೆ! ನಿಮ್ಮ ಅಭಿಮಾನವು ನನ್ನ ಕಂಠ ತುಂಬಿಸಿದೆ. ನನಗೆ ಮಾತನಾಡಲು ಸಾಧ್ಯವಿಲ್ಲದಾಗಿದೆ. ಬಹಳ ದಿನಗಳಿಂದಲೂ ನನ್ನ ಧರ್ಮ ಪತ್ನಿಗೆ ಆಸ್ತಿಯ ಹಂಬಲವಿತ್ತು. ಈ ದಿನ ನೀವು ಅವಳ ಆಸೆಯನ್ನು ಪೂರ್ತಿ ಮಾಡಿದ್ದೀರಿ. ಅವಳ ಸಂತೋಷವೇ ನನ್ನ ಸಂತೋಷವಾಗಿದೆ, ನಿಮ್ಮ ಸಂತೋಷವಾಗಿದೆ. ನಾನೇನು ಹೇಳಲಿ. ಈ ಗಂಗನಹಳ್ಳಿಯ ಬಳ್ಳಿ ಹಬ್ಬಲಿ. ನನ್ನ ಜನದ ಬಾಳುವೆ ಬೆಳೆಯಲಿ. ನನ್ನ ಬಳ್ಳಿಯೇ ಬೆಳೆದಂತೆ ನನಗೆ ಸಂತೋಷವಾಗಲಿ. ಹಬ್ಬಿದ ಬಳ್ಳಿ ಕುಡಿದುಂಬಲಿ..." ಭಟ್ಟರಿಗೆ ಮುಂದೆ ಮಾತಾಡಲು ಸಾಧ್ಯವಾಗಲಿಲ್ಲ. ಅವರ ಕಣ್ಣು ಒದ್ದೆಯಾಗಿಬಿಟ್ಟವು. ಕುತ್ತಿ ಗೆಯ ಸಿರಗಳು ಉಬ್ಬಿ ನಿಂತವು. ಅವರು ಮತ್ತೆ ಸಾವರಿಸಿಕೊಂಡು ಹೇಳ ತೊಡಗಿದರು. ಹಿಡಿದ ತಟ್ಟೆಯನ್ನು ಮುಂದೆ ಚಾಚಿ ಮಾತು ಮುಂದುವರಿಸಿ ದರು.

"ಈ ಅಪಾರವಾದ ಹಣದಿಂದ ನನಗೆ ಯಾವ ಪ್ರಯೋಜನವೂ ಇಲ್ಲ. ಇದು ಒಂದು ಒಳ್ಳೆಯ ಕೆಲಸಕ್ಕೆ ವಿನಿಯೋಗವಾಗಬೇಕೆಂದು ನನ್ನ ಅಪೇಕ್ಷೆ ಇದೆ. 'ಸದ್ದನ ಗುಡ್ಡ'ದಿಂದ ಹಳ್ಳವಾಗಿ ಹರಿದು ಬರುವ ನೀರು ವ್ಯರ್ಥವಾಗಿ ಹರಿದು ಹೋಗುತ್ತದೆ. ಗಂಗನಹಳ್ಳಿಗೆ ಈ ನೀರಿನ ಉಪಯೋಗವಾಗುವಂತೆ ಮಾಡಲು ಸಾಧ್ಯವಿದೆ. ಊರ ಆಚೆಯ ತುದಿಗೆ ಒಂದು ಕೆರೆಯನ್ನು ತೋಡಿ ಕಟ್ಟಿದರೆ ಈ ನೀರು ಅಲ್ಲಿ ಆಳವಾಗಿ ನಿಲ್ಲುತ್ತದೆ. ದನಕರುಗಳಿಗೆ ಈ ನೀರು ಬಹಳವಾಗಿ ಉಪಯೋಗವಾಗುತ್ತದೆ. ನಮಗಾದರೂ ಇದರ ಪ್ರಯೋಜನ ಕಡಿಮೆಯೇನಲ್ಲ. ಆದುದರಿಂದ ಈ ಹಣದ ಉಪಯೋಗವು ಅದಕ್ಕೆ ಆಗಲಿ. ಈ ಊರ ಗೌಡರಾದ ಹೇಮಂತಗೌಡರು ಈ ಕಾರ್ಯವನ್ನು ಕೈಕೊಳ್ಳಲಿ. ಅವರು ಮುಂದೆ ಬಂದು ಈ ಹಣವನ್ನು ಸ್ವೀಕರಿಸಲಿ. ನಾಳಿನಿಂದಲೇ ಕಾರ್ಯಾರಂಭವಾಗಲಿ" ಎಂದು ನುಡಿದು ಭಟ್ಟರು ಸುತ್ತಲೂ ನೋಡಿದರು.

"ಭಟ್ಟರೆ! ನಿಮ್ಮ ಅಪೇಕ್ಷೆಯಂತೆ ಕೆರೆಯನ್ನು ಕಟ್ಟಿಸಲಾಗುವದು, ಆದರೆ ಅದಕ್ಕೆ ಈ ಹಣದ ವಿನಿಯೋಗವಾಗಬೇಕೆಂಬ ಹಟವನ್ನು ಮಾತ್ರ ಹಿಡಿಯಬೇಡಿರಿ. ಈ ಹಣ ನಿಮ್ಮದು, ನಿಮ್ಮದಾಗಿಯೇ ಇರಬೇಕು" ಎಂದು ಪತ್ತಾರ ಮಹಾರುದ್ರಪ್ಪನು ಎತ್ತರವಾದ ದನಿಯಲ್ಲಿ ಹೇಳಿ ಕರಜೋಡಿಸಿದನು.

"ಮಹಾರುದ್ರಪ್ಪನ ಮಾತು ಮುತ್ತಿನಂತಹುದು. ಅದನ್ನು ಭಟ್ಟರು ನಡೆಯಿಸಿಕೊಡಬೇಕು" ಎಂದು ಸಿಂಪಿ ಶಿವರುದ್ರನು ಅನುಮೋದನವನ್ನು ಕೊಟ್ಟನು.

ಭಟ್ಟರು ಗಂಭೀರವಾಗಿ ಹೇಳಿದರು :

"ನೀವೆಲ್ಲ ನನ್ನನ್ನು ಪೂರಾ ಕ್ಷಮಿಸಬೇಕು. ನಿಮ್ಮ ಮಾತನ್ನು ನಾನು ನಡೆಯಿಸಿಕೊಡುವದು ನನಗೆ ಸಾಧ್ಯವಿಲ್ಲದಾಗಿದೆ. ಈ ಹಣ ನನ್ನದೆಂದು ನೀವು ಹೇಳುತ್ತೀರಿ. ನಾನೂ ಒಪ್ಪುತ್ತೇನೆ. ಇದೆಲ್ಲ ನಿಮ್ಮ ದಿವ್ಯ ಕಾಣಿಕೆ. ಇದು ನನಗೆ ಅಮೂಲ್ಯವಾಗಿದೆ. ಆದರೆ ಇದರಿಂದ ನನಗೆ ಪ್ರಯೋಜನವಿಲ್ಲ. ಊರಿಗೆ ಪ್ರಯೋಜನವಾಗುತ್ತದೆ. ಗಂಗನಹಳ್ಳಿಯ ಕೆರೆಗೆ ಈ ಹಣವು ಮೀಸಲಾಗಿದೆ. ನನ್ನಲ್ಲಿ ಭೇದಭಾವವೆಣಿಸುವ ನಿಮ್ಮ ಮಾತು ಬೇಡ. ನನ್ನ ಜೀವನವು ಗಂಗನಹಳ್ಳಿಗೆ ಮೀಸಲಾಗಿದೆ. ನಾನು ಬೇರೆ ಗಂಗನಹಳ್ಳಿ ಬೇರೆಯೆ ? ಗಂಗನಹಳ್ಳಿಯ ಕೆರೆಗಾಗಿ ವೆಚ್ಚವಾಗುವ ಈ ಹಣವು ಒಂದಕ್ಕೆ ಹತ್ತಾಗುತ್ತದೆ, ನೂರಾಗುತ್ತದೆ, ಸಾವಿರವಾಗುತ್ತದೆ. ನೀವು ಈ ಹಣವನ್ನು ಸ್ವೀಕರಿಸದೆ ನಾನು ತಟ್ಟೆಯನ್ನು ಕೆಳಗಿಡಲು ಸಿದ್ಧನಿಲ್ಲ. ನೀವು ಇದನ್ನು ನಿರಾಕರಿಸಿದರೆ ನನಗೆ ವ್ಯಸನವಾಗುತ್ತದೆ. ನನ್ನ ಧರ್ಮಪತ್ನಿಗೆ ನೋವಾಗುತ್ತದೆ."

ಭಟ್ಟರ ಕೊನೆಯ ವಾಕ್ಯವನ್ನು ಕೇಳಿ ಹೇಮಂತಗೌಡರು ಮೆಲ್ಲನೆ ಮೇಲಕ್ಕೆದ್ದರು. ಅವರ ಕಣ್ಣಾಲಿ ತುಂಬಿ ನಿಂತಿದ್ದವು. ಅವರು ಭಯಭಕ್ತಿ ಪೂರಿತರಾಗಿ ತಮ್ಮ ಧೋತರವನ್ನು ಒಡ್ಡಿದರು. ಝಣಝಣ ಸಪ್ಪಳದೊಂದಿಗೆ ಹಣವೆಲ್ಲ ಗೌಡರ ಉಡಿಯನ್ನು ಸೇರಿತು. ಭಟ್ಟರು ಕೆಳಗಿಳಿದು ಬಂದು ಗೌಡರನ್ನು ಅಪ್ಪಿಕೊಂಡರು. ಆ ದೃಶ್ಯ ಅಪೂರ್ವವಾಗಿತ್ತು.

ಪ್ರಸಾದ ಪನಿವಾರಗಳ ಹಂಚಿಕೆಯಾಯಿತು. ಮರುದಿನ ಊರ ಜನರಿಗೆಲ್ಲ ಹೋಳಿಗೆಯ ಊಟವಾಯಿತು. ಗಂಗನಹಳ್ಳಿಯ ಜನರು ಭಟ್ಟರನ್ನು ವಂದಿಸಿದರು.

ಒಂದು ವರುಷದಲ್ಲಿ ಕೆರೆ ಸಿದ್ಧವಾದಾಗ ಊರ ಜನರೆಲ್ಲ ಆ ಕೆರೆಗೆ 'ಭಟ್ಟರ ಕೆರೆ'ಯೆಂದಾಗಲಿ 'ಧರ್ಮಪತ್ನಿಯ ಕೆರೆ'ಯೆಂದಾಗಲಿ ನಾಮಕರಣ ಮಾಡಬೇಕೆಂದು ಬಹಳ ಹೆಣಗಿದರು. ಆದರೆ ಆ ಸೂಚನೆಯನ್ನು ಭಟ್ಟರು ಮನ್ನಿಸಲಿಲ್ಲ. ಕೊನೆಗೆ ಭಟ್ಟರ ಮಾತೇ ಗೆದ್ದಿತು. ಕೆರೆಗೆ 'ಗಂಗನಹಳ್ಳಿಯ ಕೆರೆ'ಯೆಂದೇ ನಾಮಕರಣವಾಯಿತು.

೭

ನಾಲ್ಕನೆಯ ಹೆರಿಗೆ ಸುಸೂತ್ರವಾಗಿ ಆದರೂ ಧರ್ಮಪತ್ನಿಗೆ ಅದರಿಂದ ಬಹಳ ನಿಶ್ಯಕ್ತತೆಯುಂಟಾಯಿತು. ಮೂರು ಗಂಡುಗಳ ಮೇಲೆ ಹುಟ್ಟಿದ ಈ ಹೆಣ್ಣು ಕೂಸು ಅವರಿಗೆ ಬೇಡಿ ಬಯಸಿದ ಫಲವಾಗಿತ್ತೆಂಬುದೇನೋ ನಿಜ. ಇದರಿಂದ ಅವರ ಮನಸ್ಸಿಗೊಂದು ತೃಪ್ತಿಯುಂಟಾದದ್ದೂ ನಿಜ. ಆದರೆ ಅವರ ದೇಹ ಈ ಹೆರಿಗೆಯ ನಂತರ ಕುಸಿಯತೊಡಗಿತು. ಮೊದಲಿನ ಉತ್ಸಾಹ ನಿಲ್ಲದಾಯಿತು. ಪಾರ್ವತಿ ಮುದ್ದಾಗಿ ಬೆಳೆಯತೊಡಗಿದಂತೆ ಅವರಲ್ಲಿ ಹೆಚ್ಚಿನ ಉತ್ಸಾಹ ಕಂಡುಬರತೊಡಗಿದರೂ ಮೊದಲಿನ ಶಕ್ತಿ ಮಾಯವಾಗಿಬಿಟ್ಟಿತು. ಅದಕ್ಕಾಗಿ ಅವರು ಚಿಂತಿಸದಿದ್ದರೂ ಅವರ ಬೆಳೆದ ಸಂಸಾರಕ್ಕೆ ದುಡಿತವು ಅನಿವಾರ್ಯವಾಗಿತ್ತಾದ್ದರಿಂದ ಧರ್ಮಪತ್ನಿಗೆ ಬೇಕಾದ ವಿಶ್ರಾಂತಿಯು ಸಿಗದಾಯಿತು. ಶಿಷ್ಯರ ಯೋಗಕ್ಷೇಮವಿಚಾರದಲ್ಲಿ, ಅವರ ಹೊಟ್ಟೆ ನೆತ್ತಿಗಳ ಸಂರಕ್ಷಣೆಯಲ್ಲಿ, ಮನೆಯಲ್ಲಿ ಜರುಗುತ್ತಿರುವ ಧಾರ್ಮಿಕ ಕೆಲಸಗಳಲ್ಲಿ, ನೆರೆಹೊರೆಯವರ ಕ್ಷೇಮಚಿಂತನೆಯಲ್ಲಿ, ಮಕ್ಕಳ ಶುಶ್ರೂಷಣೆಯಲ್ಲಿ ಅವರು ತುಂಬಾ ದಣಿಯತೊಡಗಿದರು. ಹೆಂಡತಿಯ ಈ ದೌರ್ಬಲ್ಯವನ್ನು ಕಂಡು ಹಿಡಿದು ಭಟ್ಟರು ಮನೆಗೆಲಸಗಳ ಮೇಲ್ವಿಚಾರಣೆಯನ್ನು ನೋಡತೊಡಗಿದರೇನೋ ನಿಜ. ಆದರೆ ಅವರ ಮೇಲ್ವಿಚಾರಣೆಯಿಂದ ಧರ್ಮಪತ್ನಿಗೆ ತೃಪ್ತಿಯಾಗುತ್ತಿರಲಿಲ್ಲ. ಅಲ್ಲದೆ ಭಟ್ಟರು ತಮ್ಮ ಅಮೂಲ್ಯವಾದ ವೇಳೆಯನ್ನು ಸಂಸಾರಕ್ಕಾಗಿ ವಿನಿಯೋಗಿಸುವುದು ಅವರಿಗೆ ಬೇಡವಾಗುತ್ತಿತ್ತು. ಹೀಗಾಗಿ ಧರ್ಮಪತ್ನಿ ಕೃತಕ ಉತ್ಸಾಹವನ್ನು ತೋರಿಸುತ್ತ ಮನೆಗೆಲಸವನ್ನು ತಾವೇ ಮಾಡತೊಡಗಿದರು. ಕೆಲವು ದಿನಗಳಲ್ಲಿ ಅವರ ಅಶಕ್ತತೆಯು ಕೂಡ ಎಲ್ಲರಿಗೂ ದಿನದ ಮಾತಾಗಿಬಿಟ್ಟದ್ದರಿಂದ ಅವರ ಬಗ್ಗೆ ಹೆಚ್ಚು ವಿಚಾರ ನಿಂತು ಹೋಯಿತು. ನಿತ್ಯಜೀವನದ ನಿರ್ವಹಣದಲ್ಲಿ ಧರ್ಮಪತ್ನಿ ತಮ್ಮ ದೇಹ ದೌರ್ಬಲ್ಯವನ್ನು ಕೂಡ ಅಳವಡಿಸಿಕೊಂಡುಬಿಟ್ಟರು.

ಒಂದು ದಿನ ಮುಂಜಾನೆ ಭಟ್ಟರು ಸ್ವಲ್ಪ ಗಡಿಬಿಡಿಯಿಂದಲೇ ಎದ್ದರು. ಅವರ ಮುಖದಲ್ಲಿ ವಿಪ್ಪಲತೆ ಸ್ಪಷ್ಟವಾಗಿ ಮೂಡಿತು. ಅಸಮಾಧಾನ ತುಂಬಿ ತುಳುಕುತ್ತಿತ್ತು. "ದರಿದ್ರ ಕನಸನ್ನು ಕಂಡೆ ಧರ್ಮಪತ್ನಿ—ಗಂಗನಹಳ್ಳಿಗೆ ಯಾವ ಕೇಡೋ ತಿಳಿಯದು" ಎನ್ನುತ್ತ ಅಡಿಗೆಯ ಮನೆಗೆ ಹೋದಾಗ ಅಲ್ಲಿ ಧರ್ಮಪತ್ನಿ ಪಾರ್ವತಿಗೆ ಮೊಲೆಯೂಡಿಸುತ್ತಿದ್ದರು.

ಭಟ್ಟರ ಮಾತುಗಳನ್ನು ಕೇಳಿ ಗಾಬರಿಯಾದ ಧರ್ಮಪತ್ನಿ "ಎಂತಹ ಕನಸು ಹೇಳಬಾರದೇ ?" ಎಂದು ಕೇಳಿದರು.

"ಗಂಗನಹಳ್ಳಿಯ ಪಶ್ಚಿಮದ ಭಾಗಕ್ಕೆ ಉರಿತಾಗಿ ಆ ಉರಿ ದಕ್ಷಿಣಾಭಿಮುಖವಾಗಿ ತನ್ನ ಪ್ರಚಂಡವಾದ ಕೆನ್ನಾಲಿಗೆಯನ್ನು ಚಾಚಿತ್ತು. ಆ ಉರಿಯಲ್ಲಿ ಹಳ್ಳಿಯ ಜನ ಬೇಯತೊಡಗಿರುವದನ್ನು ಕಣ್ಣಾರೆ ಕಂಡೆ. ಬಹಳ ಹೊತ್ತಿನ ಮೇಲೆ ಉರಿಯೇನೋ ಶಾಂತವಾಯಿತು. ಆದರೆ ನೊಂದ ಜನಕ್ಕೆ ಅಳತೆಯಿಲ್ಲ. ದುರ್ಗಾದೇವಿ ಸಿಡುಕು ತುಂಬಿದಂತೆ ಕಾಣುತ್ತದೆ" ಎಂದು ಭಟ್ಟರು ಉಸುರುಗರೆದರು.

"ಈ ಕನಸು ಅನಿಷ್ಟ ಸೂಚನೆಯಾಗಿದೆ. ಇದಕ್ಕೆ ಏನಾದರೂ ಶಾಂತಿಯನ್ನು ಮಾಡಲೇಬೇಕು" ಎಂದು ಧರ್ಮಪತ್ನಿ ಹೇಳುವ ಹೊತ್ತಿಗೆ ಗೋಡೆಯ ಮೇಲಿನ ಹಲ್ಲಿಯೊಂದು 'ಚಿಪ್-ಚಿಪ್-ಚಿಪ್' ಎಂದು ಲೊಟಗುಟ್ಟಿತು.

"ಈ ಹಲ್ಲಿಗೇನು ಧಾಡಿಯಾಯಿತು" ಎಂದು ಧರ್ಮಪತ್ನಿ ಅದರ ಕಡೆಗೆ ಸಿಡುಕಿನಿಂದ ನೋಡಿದರು.

"ದೇವಿಯ ಇಚ್ಛೆ ಏನಿದೆಯೊ ಯಾರು ಬಲ್ಲರು? ಆ ಮಹಾಮಾಯೆಯ ಇಚ್ಛೆಗೆ ನಾವು ಅಡ್ಡ ಬರಲಾರೆವು. ಈ ಮಾತನ್ನು ಗೆಳೆಯರ ಮುಂದೆ ತೆಗೆಯುತ್ತೇನೆ" ಎಂದು ಭಟ್ಟರು ಮತ್ತೊಮ್ಮೆ ನೀಳವಾದ ಉಸಿರುಬಿಟ್ಟರು.

ಧರ್ಮಪತ್ನಿಯ ಸಂಶಯ ನಿಜವಾಯಿತು. ಭಟ್ಟರ ಕನಸು ಸತ್ಯವಾಗಿ ಪರಿಣಮಿಸತೊಡಗಿತು. ಎಂಟು ದಿನಗಳಲ್ಲಿಯೇ ಗಂಗನಹಳ್ಳಿಯ ಪಶ್ಚಿಮ ಭಾಗದಲ್ಲಿ ವಾಸಿಸುತ್ತಿರುವ ವಡ್ಡರ ಓಣಿಯಲ್ಲಿ 'ಕಾಲರಾ' ಬೇನೆ ಪ್ರಾರಂಭವಾಗಿಬಿಟ್ಟಿತು. ಅದು ಅಲ್ಲಿಯೇ ಉಳಿಯದೆ ದಕ್ಷಿಣದಲ್ಲಿ ವಾಸಿಸುತ್ತಿರುವ ಕುರುಬರ ಓಣಿಯಲ್ಲಿಯೂ ತನ್ನ ಕರಾಳವಾದ ನಾಲಿಗೆಯನ್ನು ಚಾಚತೊಡಗಿತು. ದಿನಾಲು ಮೂರು ನಾಲ್ಕು ಜನ ಪಟಪಟನೆ ಸಾಯತೊಡಗಿದರು. ಜನರು ಹೌಹಾರಿದರು.

ಕಲ್ಲಿನಂತೆ ಗಟ್ಟಿಮುಟ್ಟಾಗಿದ್ದ ಕುರುಬರ ಮಾಯಪ್ಪನ ಮಗನನ್ನು ದೇವಿ ಕೊಂಡೊಯ್ದಳೆಂಬ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವಷ್ಟರಲ್ಲಿಯೇ ವಡ್ಡರ ಭೀಮನ ಹೆಂಡತಿಗೆ ಎಂತಿ ಪ್ರಾರಂಭವಾಗಿದೆಯೆಂದು ಮತ್ತೊಂದು ಸುದ್ದಿ. ಸಂಜೆಯ ಸುಮಾರಿಗೆ ಅವಳೂ ಹೋದ ವಾರ್ತೆ. ಒಂದು ಮನೆಯಲ್ಲಿ ರೋದನ, ಇನ್ನೊಂದು ಮನೆಯಲ್ಲಿ ರೋಗ ಬಂದವನಿಗಾಗಿ ಗಡಿಬಿಡಿ. ಮಗದೊಂದು ಮನೆಯಲ್ಲಿ ಎದೆಯೊಡೆಯುವಂತಹ ಆರ್ತಸ್ವರ. ಹೀಗೆ ಗಂಗನಹಳ್ಳಿ ಸಾವುನೋವುಗಳ ಮಧ್ಯದಲ್ಲಿ ಗಾಸಿಯಾಗತೊಡಗಿತು. ಈ ದುರ್ಧರ ಪ್ರಸಂಗ

ದಲ್ಲಿ ಭಟ್ಟರಿಗೆ ವಿಶ್ರಾಂತಿಯಿಲ್ಲ. ಒಂದು ಜೋಗುಣಿಯಲ್ಲಿ ಕಷಾಯವನ್ನು ಕಾಸಿಕೊಂಡು ಮುಂಜಾನೆಯಿಂದ ಸಂಜೆಯವರೆಗೆ ಮನೆಮನೆಗೆ ತಿರುಗುವುದೇ ಅವರ ನಿತ್ಯದ ಕೆಲಸವಾಗಿಬಿಟ್ಟಿತು. ಹೋದಲ್ಲೆಲ್ಲ ಅವರು 'ದುರ್ದೈವಿಗಳೇ, ತಾಯಿ ಸಿಟ್ಟಗೆದ್ದಿದ್ದಾಳೆ. ಅವಳನ್ನು ಶಾಂತಪಡಿಸಿರಿ. ಊರ ದುರುಗವ್ವನಿಗೆ ನೀರು ಹಣಿಸಿರಿ. ದ್ಯಾಮವ್ವನ ಉಡಿ ತುಂಬಿರಿ. ಉಪವಾಸಮಾಡಿರಿ' ಎಂದು ಉಪದೇಶಿಸುವ ಜೊತೆಗೆ 'ಬಿಸಿ ನೀರನ್ನು ಕುಡಿಯಿರಿ. ನೀರು ಕಾಯಿಸದೆ ಕುಡಿಯಬೇಡಿರಿ. ತಂಗಳವನ್ನು ತಿನ್ನಬೇಡಿರಿ' ಎಂದು ಉಪಚಾರವನ್ನೂ ಪ್ರತಿಬಂಧಕ ಉಪಾಯವನ್ನೂ ಹೇಳುತ್ತಿದ್ದರು. ಏನೆಲ್ಲ ಮಾಡಿದರೂ ರೋಗವನ್ನು ಹಿಡಿತದಲ್ಲಿ ತರುವುದು ಅಸಾಧ್ಯವಾಯಿತು. ಕುರುಬರೆಲ್ಲ ದುರುಗವ್ವನಿಗೆ 'ಜಗಂಝುಳ್ಳು' ಹಾಕಿದರು. ಸಾವಿರ ಕೊಡ ನೀರು ದುರುಗವ್ವನ ಹೊಸ್ತಿಲಲ್ಲಿ ಹರಿಯತೊಡಗಿತು. ನೆನೆದ ಕಡಲೆಗಳ ನೈವೇದ್ಯ ರಾಸಿರಾಸಿಯಾಗಿ ಬೀಳತೊಡಗಿತು. ಆದರೂ ದುರುಗವ್ವನಿಗೆ ಶಾಂತಿಯಿಲ್ಲ. ರೋಗ ಇನ್ನೂ ಪ್ರಕೋಪವಾಗಿಯೇ ಉರಿಯತೊಡಗಿತು. ಹದಿನೈದು ದಿನಗಳಲ್ಲಿ ಗಂಗನಹಳ್ಳಿಯಲ್ಲಿಯ ನೂರು ಜನರು ಮಾರಿಗೆ ಬಲಿಯಾದರು. ವಿಶ್ವೇಶ್ವರಭಟ್ಟರು ಸಂಕಟಪಡುತ್ತ 'ತಾಯೀ, ಇಡೀ ಗಂಗನಹಳ್ಳಿಯನ್ನೇ ಕಬಳಿಸಬೇಕೆಂದು ನಿನ್ನ ಇಚ್ಛೆಯೇ? ಸಾಕು ಮಾಡಮ್ಮ! ನಾವು ಮಾಡಿದ ಅನ್ಯಾಯವಾದರೂ ಏನು? ಈ ಮಕ್ಕಳನ್ನು ಉಗುಳಿ ಬಿಡು' ಎಂದು ದಿನಾಲು ಮೊರೆಯಿಡತೊಡಗಿದರು. ಕೂಳಿನ ಪರಿವೆಯಿಲ್ಲದೆ ಮನೆಮನೆಗೆ ಹೋಗಿ ಬರುತ್ತಿದ್ದ ಭಟ್ಟರು ದಿನಗಳೆದಂತೆ ಕಂಗಾಲರಾಗತೊಡಗಿದರು. ಏನು ಮಾಡಿದರೂ ಪರಿಹಾರವಿಲ್ಲದೇ ಹೋಯಿತಲ್ಲ ಎಂದು ಮರಮರನೆ ಮರುಗತೊಡಗಿದರು. ಆ ಹಳ್ಳಿಯ ಭಕ್ತರು ಪಡುತ್ತಿರುವ ಗೋಳನ್ನು ಕಂಡು ಅವರ ಕಣ್ಣೀರು ಧಾರಾಳವಾಗಿ ಉರುಳತೊಡಗಿತು.

ಭಟ್ಟರ ಮನಸ್ಸಿನಲ್ಲಿನ ಸಂಕಟ ಮುಖದ ಮೇಲೆ ಒಡೆದು ಕಾಣುತ್ತಿತ್ತು. ಅವರು ಸಂಕಟದ ದನಿಯಲ್ಲಿಯೇ "ಈ ವಾರದಲ್ಲಿ ಇದು ಕಡಿಮೆಯಾಗಬೇಕು, ಇಲ್ಲವೇ ನಾನು ತಾಯಿಗೆ ಆಹುತಿಯಾಗಬೇಕು" ಎಂದು ನುಡಿದು ದಿಗ್ಗನೇ ಎದ್ದರು. ಔಷಧದ ಸೀಸೆಯನ್ನು ತೆಗೆದುಕೊಂಡು ಎಲ್ಲರೊಡನೆ ಹೊರಬಿದ್ದುಬಿಟ್ಟರು.

"ನಿಮ್ಮ ಪುಣ್ಯ ಭಟ್ಟರೆ! ನಮ್ಮ ಊರು ಶಾಂತವಾಗಲಿ" ಎಂದು ಬಂದವರೆಲ್ಲ ಭಟ್ಟರ ಬೆನ್ನ ಹಿಂದೆ ಸಾಗಿದರು.

ಮರುದಿನ ಇನ್ನೂ ಒಂದು ತಾಸು ರಾತ್ರಿಯಿರುವಾಗ ಗುರುಲಿಂಗ

ಶೆಟ್ಟರು ಧಾವಿಸುತ್ತ ಭಟ್ಟರ ಮನೆಗೆ ಬಂದಾಗ ಕದ ತೆರೆದಿತ್ತು. ಅವರು ಗಾಬರಿಯ ದನಿಯಲ್ಲಿ "ಕೇಶವರಾಯರ ಹೆಂಡತಿಗೆ ವಾಂತಿ ಪ್ರಾರಂಭವಾಗಿದೆ ಭಟ್ಟಾ! ನಮ್ಮ ಹಳ್ಳಿಗೆ ಉಳಿಗಾಲವಿಲ್ಲ" ಎಂದು ಕೂಗಿದರು.

ಅವರ ಕೂಗನ್ನು ಕೇಳಿ ಬಂದವರು ಭಟ್ಟರಾಗಿರಲಿಲ್ಲ. ಧರ್ಮಪತ್ನಿಯಾಗಿದ್ದರು.

"ಅಯ್ಯೋ! ಸರಸ್ವತಿಗೂ ಹೀಗಾಯಿತೇ?" ಎಂದು ಗಾಬರಿಬಿದ್ದು ಕೇಳಿದರು. ಅವರ ಮುಖ ಅದನ್ನು ಕೇಳಿ ಹೀರಿಹೋಯಿತು.

"ಭಟ್ಟನೆಲ್ಲಿ ತಾಯಿ?"

"ಇದೀಗ ಎಲ್ಲಿಯೋ ಹೋದಂತೆ ಕಾಣುತ್ತಿದೆ. ರಾತ್ರಿಯೆಲ್ಲ ಅವರು ಎಚ್ಚರವಾಗಿಯೇ ದೇವರ ಮುಂದೆ ಕುಳಿತಿದ್ದರು. ಈಗಲೇ ಬಂದಾರು!" ಎಂದು ಹೇಳಿದ ಧರ್ಮಪತ್ನಿ ಶಿಷ್ಯನೊಬ್ಬನನ್ನು ಎಬ್ಬಿಸಿ ಪಾರ್ವತಿಯನ್ನು ನೋಡಿಕೊಳ್ಳಲು ಹೇಳಿ ಬಿರಬಿರನೆ ದೇಶಪಾಂಡೆಯ ಮನೆಯ ಕಡೆಗೆ ನಡೆದುಬಿಟ್ಟರು.

ಗುರುಲಿಂಗಶೆಟ್ಟರು ಒಂದು ತಾಸಿನವರೆಗೆ ದಾರಿ ಕಾದರೂ ಭಟ್ಟರು ಬರಲೇ ಇಲ್ಲ. ಶಿಷ್ಯರನ್ನು ಅತ್ತ ಇತ್ತ ಕಳಿಸಿದರೂ ಅವರ ಸುಳಿವೇ ಇಲ್ಲ. ಶೆಟ್ಟರಿಗೆ ಗಾಬರಿಯಾಯಿತು. ನಿನ್ನೆಯ ದಿನ ಭಟ್ಟರು "....ನಾನಾದರೂ ತಾಯಿಗೆ ಆಹುತಿಯಾಗಬೇಕು" ಎಂದ ಮಾತು ನೆನಪಾಗಿ ಅವರು ನಡುಗಿದರು. ಅವರ ಅಂತರಂಗವೂ ಭಟ್ಟರಿಗಾಗಿ ಹುಚ್ಚೆದ್ದು ಹರಿಯತೊಡಗಿತು. 'ಅಯ್ಯೋ ಭಟ್ಟನೆಲ್ಲಿ? ಅವನು ಹೋಗಿರುವದಾದರೂ ಎಲ್ಲಿ?' ಎಂದು ತಮ್ಮಲ್ಲಿಯೇ ನುಡಿಯತೊಡಗಿದರು.

ಭಟ್ಟರೆಲ್ಲಿ?

ಭಟ್ಟರು ಆ ಹೊತ್ತಿಗಾಗಲೇ ದುರ್ಗಾದೇವಿಯ ಗುಡ್ಡವನ್ನು ಅರ್ಧ ಹತ್ತಿದ್ದರು. ಸುತ್ತಲೂ ಪಡಗಳ್ಳಿ. ನಡುವೆ ಮಾತ್ರ ತುಸುವೇ ಕಾಲುದಾರಿ. ಅದಕ್ಕೆ ದಾರಿಯೆನ್ನುವುದು ಕೇವಲ ವಾಡಿಕೆಯ ಮಾತಾಗಿತ್ತು. ಕಲ್ಲುಗುಂಡುಗಳನ್ನು ಏರಿ ಇಳಿದು ದಾರಿಯಲ್ಲಿ ಬರುವ ಕಂಟಿಗಳನ್ನು ಸರಿಸಿ ಮಾರ್ಗ ಕ್ರಮಣ ಮಾಡಬೇಕು. ಗಂಗನಹಳ್ಳಿಯ ಜನ ದುರ್ಗಾಷ್ಟಮಿಯ ದಿನ ಮಾತ್ರ ಆ ಗುಡ್ಡದ ನೆತ್ತಿಯ ಮೇಲಿರುವ ದುರ್ಗಾದೇವತೆಯನ್ನು ಕಂಡುಬರುವುದು ಸಂಪ್ರದಾಯ. ಅಲ್ಲಿಯವರೆಗೆ ಗುಡ್ಡದ ಪೂಜಾರಿಯೊಬ್ಬನೇ ಆ ದೇವತೆಗೆ ಜೋಡು.

ದೇವಿಯ ಸಿಡುಕಿಗೆ ಗಂಗನಹಳ್ಳಿ ಹುರಪಳಿಸಿ ಹೋಗುವುದನ್ನು ತಾಳ

ಲಾರದೆ ಆ ದಿನ ಭಟ್ಟರು ಇಡಿಯ ರಾತ್ರಿ ತಮ್ಮ ಮನೆಯಲ್ಲಿ ಜಾಗರಣೆಯಿದ್ದು ದೇವಿಯನ್ನು ಧ್ಯಾನಿಸಿದರು. ಇನ್ನೂ ಎರಡು ತಾಸು ರಾತ್ರಿ ಇರುವಾಗಲೇ ದುರ್ಗಾದೇವಿಯ ದರ್ಶನ ಮಾಡಿಕೊಂಡು ಬರಬೇಕೆಂದು ಹೊರಟುಬಿಟ್ಟಿದ್ದರು.

ರಾತ್ರಿಯ ಹೊತ್ತಿನಲ್ಲಿ ಎಂತಹ ಕಟ್ಟಾಳುವಿಗೂ ಹೆದರಿಕೆ ಬರುವ ಸ್ಥಳವಿದು. ಏಕಾಂಗಿಯಾಗಿ ಹೋಗಿಬರುವ ಎದೆಗಾರಿಕೆ ಯಾರಿಗೆ? ಭಟ್ಟರಿಗೆ ಈ ಅಂಜಿಕೆ ಸುಳಿಯಲಿಲ್ಲ. ದೇವಿಯಿಂದ ಅಭಯವನ್ನು ಪಡೆದುಕೊಂಡೇ ಬರುವ ನಿರ್ಧಾರದಲ್ಲಿ ಅವರು ಮೆಲ್ಲನೆ ಹೆಜ್ಜೆ ಹಾಕತೊಡಗಿದರು. ಅರ್ಧ ಗುಡ್ಡವನ್ನು ಏರುತ್ತಿರುವಾಗಲೇ ನಸಕು ಹರಿಯಿತು. ಭಟ್ಟರೊಮ್ಮೆ ನಿಂತು ಗಂಗನಹಳ್ಳಿಯನ್ನು ನೋಡಿದರು. ಅವರ ಮನಸ್ಸು ಕಲಕಿತು. ಈ ಹಳ್ಳಿಗೆ ನೆಮ್ಮದಿ ಬರಲೇಬೇಕು. ಈಗಾಗಲೇ ಸಾಕಷ್ಟು ಆಹುತಿಗಳನ್ನು ತೆಗೆದುಕೊಂಡಿದ್ದಾಳೆ. ಇದು ಕೂಡಲೇ ನಿಲ್ಲಬೇಕು ಎಂದೆನ್ನುತ್ತ ಮತ್ತೆ ಮುಂದುವರೆದರು. ಸೂರ್ಯನ ಕಿರಣಗಳು ಬಂಡೆಗಳನ್ನು ಮೀಯಿಸುವ ಹೊತ್ತಿಗೆ ಭಟ್ಟರು ದುರ್ಗಾದೇವಿಯ ಹೊಸ್ತಿಲಲ್ಲಿ ಕಾಲಿಟ್ಟರು. ಅವರು ಭಕ್ತಿಪರವಶರಾದರು, ಉದ್ವೇಗಪೂರ್ಣರಾಗಿ ಅಡ್ಡ ಬಿದ್ದರು. "ತಾಯಿ! ಈ ಭಕ್ತನಿಗೆ ಅಭಯವನ್ನು ಕೊಡು. ನಿನ್ನ ಕೆಂಗಣ್ಣುಗಳು ಶಾಂತವಾಗಲಿ. ಈ ಜೀವಹರಣವನ್ನು ನಿಲ್ಲಿಸು." ಎಂದು ಬೇಡಿಕೊಳ್ಳುತ್ತ ಬಹಳ ಹೊತ್ತಿನವರೆಗೆ ಹಾಗೆಯೇ ದೇವಿಯ ಪಾದಗಳನ್ನು ಹಿಡಿದು ಬಿದ್ದುಬಿಟ್ಟರು. ಅವರು ತಿರುಗಿ ಎದ್ದಾಗ ಸುಮಾರು ಹೊತ್ತು ಏರಿತ್ತು. ಎದ್ದವರೇ ಭಟ್ಟರು ದೇವಿಗೆ ಏಳು ಪ್ರದಕ್ಷಿಣೆಗಳನ್ನು ಹಾಕಿ ಉಡಿಯಲ್ಲಿ ತಂದ ಹೂ, ಕಾಯಿ ಹಣ್ಣುಗಳನ್ನು ಸಮರ್ಪಿಸಿದರು. ಮತ್ತೆ ಮತ್ತೆ ನಮಸ್ಕರಿಸಿದರು. "ತಾಯಿ! ಇಂದಿನಿಂದ ಮೂರು ದಿನಗಳವರೆಗೆ ನಾನು ಗಂಗನಹಳ್ಳಿಯ ರೋಗನಿವಾರಣಾರ್ಥವಾಗಿ ಉಪವಾಸ ಪ್ರಾರಂಭಿಸುತ್ತೇನೆ. ಈ ದಿನಗಳಲ್ಲಿ ರೋಗವಳಿಯಬೇಕು. ಇಲ್ಲದಿದ್ದರೆ ಈ ಉಪವಾಸ ಮರಣಪರ್ಯಂತರವೂ ಸಾಗುವದು. ನನ್ನ ಮರಣದಿಂದ ನಿನಗೆ ಸಂತೋಷವಾಗುತ್ತಿದ್ದರೆ ನನ್ನನ್ನು ಕರೆದುಕೋ ತಾಯಿ! ಗಂಗನಹಳ್ಳಿಯನ್ನು ಮಾತ್ರ ಉಳಿಸು" ಎಂದು ಮತ್ತೊಮ್ಮೆ ಅಡ್ಡ ಬಿದ್ದಾಗ ಅವರ ಮೈ ಜುಮ್ಮೆಂದಿತು.

ಗರ್ಭಗುಡಿಯಲ್ಲಿ ಹಸುಗೂಸು ಪಾರ್ವತಿಯ ದನಿಯಾದಂತಾಯಿತು. ಅವರು ಗಡಬಡಿಸಿದರು. ಅವರಿಗೆ ಈ ದನಿಯಲ್ಲಿ ದೇವಿಯ ಯಾವುದೋ ಸೂಚನೆಯಾದಂತಾಯಿತು. ಅವರ ಕಣ್ಣಾಲಿ ತುಂಬಿ ಬಂದವು. "ನಿನ್ನ ಇಚ್ಛೆ ತಾಯಿ! ನಿನಗೆ ಅಡ್ಡ ಬರುವ ಮನಸ್ಸಿಲ್ಲ. ಗಂಗನಹಳ್ಳಿಯ ಸುಖದ ಸಲು

ವಾಗಿ ನಾನು ನಿನಗೆ ಬೇಕಾದ ಮುಡುಪನ್ನೂ ಕೊಡಬಲ್ಲೆ ತಾಯಿ!" ಎನ್ನುತ್ತ ಅಡ್ಡಬಿದ್ದ ಭಟ್ಟರ ಕಣ್ಣುಗಳೊಳಗಿಂದ ನೀರು ಧಾರಾಕಾರವಾಗಿ ಹರಿಯತೊಡಗಿದವು. ಅವರ ಅಂತರಂಗದ ದುಗುಡವೇ ಕಣ್ಣೀರ ಹೊನಲಾಗಿ ಹರಿಯತೊಡಗಿದಂತೆ ಹೃದಯದ ಭಾರವು ಕಡಿಮೆಯಾಗತೊಡಗಿತು. ಆ ಹೃದಯದಲ್ಲಿ ಒಂದು ಹೊಸ ಭಾವವಂಕುರಿಸಿತು. ಇದು ಶುಭಲಕ್ಷಣವೆಂದು ತಿಳಿದ ಭಟ್ಟರು ದೇವಿಗೆ ಕೊನೆಯ ವಂದನೆಗಳನ್ನು ಸಲ್ಲಿಸಿ ಹೊರಡಲು ಸಿದ್ಧವಾದರು. ಜೊಗಸೆ ತುಂಬಾ ಅಂಗಾರವನ್ನು ತೆಗೆದುಕೊಂಡು ಧೋತರದ ಚುಂಗಿನಲ್ಲಿ ಕಟ್ಟಿಕೊಂಡರು.

ಭಟ್ಟರಿಗೆ ಬಂದ ಹಾದಿಯಿಂದಲೇ ಇಳಿದು ಹೋಗುವ ಮನಸ್ಸಾಗಲಿಲ್ಲ. ಹೇಗೂ ಇಲ್ಲಿಯವರೆಗೆ ಬಂದಿದ್ದೇನೆ. ಸಿದ್ಧೇಶ್ವರನ ದರ್ಶನ ಮಾಡಿಕೊಂಡು ಹೋದರಾಗದೇ ಎನ್ನುತ್ತ ಗುಡ್ಡದ ಬಲಪಾರ್ಶ್ವವನ್ನು ಬಳಸಿ ನಡೆಯತೊಡಗಿದರು. ಗುಡ್ಡದ ನೆತ್ತಿಯಮೇಲೆ ಬೀಸುವ ತಂಗಾಳಿ ಅವರಲ್ಲಿ ಹೊಸ ಚೈತನ್ಯವನ್ನೇ ತಂದಿತು. ಮೇಲಾಗಿ ದೇವಿ ಅನುಭವವನ್ನು ಕೊಟ್ಟಂತೆ ಅವರಿಗನ್ನಿಸಿದ್ದರಿಂದ ಅವರ ಹುರುಪು ಇನ್ನೂ ಹೆಚ್ಚಾಗಿ ಲುಟುಲುಟು ಹೆಜ್ಜೆ ಹಾಕತೊಡಗಿದರು. ಅವರು ಗುಡ್ಡವನ್ನು ತುಳಿದು ಸಿದ್ಧೇಶ್ವರನ ಗುಡಿಯನ್ನು ತಲುಪುವ ಹೊತ್ತಿಗೆ ಸಮಯ ಹತ್ತು ಗಂಟೆಯನ್ನು ಮೀರಿಹೋಗಿತ್ತು. ಭಟ್ಟರು ನೇರವಾಗಿ ಗುಡಿಯ ಮಗ್ಗುಲಿಗೆ ಹರಿದುಬರುವ 'ಆಕಳ ಖುರ'ದ ನೀರಿನಲ್ಲಿ ಮುಖ ತೊಳೆದುಕೊಂಡು ಕೈಕಾಲುಗಳಿಗೆಲ್ಲ ತಣ್ಣೀರಿನ ಲೇಪನ ಮಾಡಿ ಗರ್ಭಗುಡಿಯನ್ನು ಹೊಕ್ಕರು. ಅಲ್ಲಿ ಸಿದ್ಧೇಶ್ವರನ ಮುಂದೆ ಅಡ್ಡ ಬಿದ್ದು "ಗಂಗನಹಳ್ಳಿಯನ್ನು ರಕ್ಷಿಸು ತಂದೆ!" ಎಂದು ಬೇಡಿಕೊಂಡರು. ವೀರಭದ್ರನ ಗುಡಿಯಲ್ಲಿ ಇದೇ ಮಾತನ್ನು ಉಚ್ಚರಿಸಿ ಪಾರ್ವತೀ ದೇವಿಯನ್ನು ಮನಸಾ ವಂದಿಸಿ ಅಲ್ಲಿರುವ ಅಶ್ವತ್ಥವೃಕ್ಷವನ್ನು ಬಲವಲದು ನೇರವಾಗಿ 'ಮೇಲುಸಿದ್ದಪ್ಪ'ನ ಗುಡ್ಡವನ್ನು ಹತ್ತತೊಡಗಿದರು. ಅಲ್ಲಿ ಆ ದೇವರಿಗೂ ಪ್ರಾರ್ಥನೆ ಸಲ್ಲಿಸಿ ನಾಲುಗಂಬದ ದಾರಿ ಹಿಡಿದರು. ಆ ಎತ್ತರವಾದ ಕಂಬಕ್ಕೆ ನಮಿಸಿ 'ಗಂಗನಹಳ್ಳಿಯ ಕೀರ್ತಿಪತಾಕೆಯಂತೆ ನಿಂತು ನೀನು ಗಂಗನಹಳ್ಳಿಯನ್ನು ರಕ್ಷಿಸಬೇಕೆಂ'ದು ಬೇಡಿಕೊಂಡು ಗುಡ್ಡವನ್ನು ಇಳಿಯತೊಡಗಿದರು. ಅರ್ಧದಾರಿಯಲ್ಲಿಯೇ ಪಡಗಳ್ಳಿಯಲ್ಲಿ ಮುಚ್ಚಿಹೋದ ಏಳು ಮಠವನ್ನು ಬಳಸಿ ಮುಂದುವರೆದು ಜಾರುಬಂಡೆಯನ್ನು ತಲುಪಿದರು. ಅಲ್ಲಿಯೇ ಆದಿಯಿಂದಲೂ ಬಿದ್ದ 'ಭೀಮನು ಕಣಕ ಕುಟ್ಟಿದ ಕಲ್ಲ'ನ್ನು ಬೆರಗುಗಣ್ಣುಗಳಿಂದ ನೋಡಿಕೊಂಡು ಹತ್ತಿರದಲ್ಲಿರುವ ಘಟ್ಟೇ ಬಸವಣ್ಣನ ದೇವಾಲಯವನ್ನು

ಹೊಕ್ಕು 'ಬಸವಣ್ಣ! ಗಂಗನಹಳ್ಳಿಯನ್ನು ರಕ್ಷಿಸು!' ಎಂದು ಬೇಡಿಕೊಂಡರು. ಆ ಗುಡಿಯು ಎದುರಿಗೆ ಏಳು ಎಣ್ಣೆ ಮಜ್ಜನವಾದ ಗುಂಡುಕಲ್ಲುಗಳಿದ್ದವು. ಅವುಗಳ ಹಣೆಗಳಲ್ಲಿ ವಿಭೂತಿ ರಾರಾಜಿಸುತ್ತಿತ್ತು. ತೊಂದರೆಗೀಡಾದವರಾಗಲಿ, ಯಾವುದಾದರೂ ಒಂದು ಕೆಲಸವಾಗುತ್ತದೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವವರಾಗಲಿ ಅಲ್ಲಿ ಬಂದು ಆ ಕಲ್ಲುಗಳನ್ನು ಪೂಜಿಸಿ ಎತ್ತುವುದು ಸಂಪ್ರದಾಯವಾಗಿತ್ತು. ಆ ಕಲ್ಲು ಭಾರವಾಗಿ ಬಂದರೆ ಕೆಲಸವಾಗುವದಿಲ್ಲವೆಂತಲೂ, ಹಗುರಾಗಿ ಬಂದರೆ ಕೆಲಸವಾಗುವದೆಂದೂ ತಿಳಿದುಕೊಳ್ಳುವುದು ಹಳ್ಳಿಗರ ನಂಬಿಗೆಯಾಗಿತ್ತು. ಭಟ್ಟರಿಗೆ ಈ ಶಕುನವನ್ನು ಕೇಳಿಯೇ ಬಿಡಬೇಕೆಂದು ಹಂಬಲವಾಗಲು ಅವರು ಆ ಗುಂಡುಕಲ್ಲುಗಳನ್ನು ಪ್ರದಕ್ಷಿಣೆ ಮಾಡಿ "ಹೇ! ಕಲ್ಲುಗುಂಡೇಶ್ವರ! ಗಂಗನಹಳ್ಳಿಯ ರೋಗ ನಾಶವಾಗುವದೆಂದು ಅನ್ನಿಸಿದರೆ ಹಗುರಾಗಿ ಬಾ. ಇಲ್ಲದಿದ್ದರೆ ಭಾರವಾಗಿ ಬಿಡು" ಎಂದು ಆ ಗುಂಡುಗಳನ್ನು ಎತ್ತತೊಡಗಿದರು. ಅವೆಲ್ಲ ಹಗುರಾಗಿ ಬಂದವೆಂದು ಭಟ್ಟರಿಗೆ ಅನಿಸಿದ್ದರಿಂದ ಅವರು ಕುಣಿದಾಡಿದರು. ಅವರ ಕಣ್ಣು ಒದ್ದೆಯಾದವು. "ದೇವರ ಕೃಪೆ ಅನಂತವಾಗಿದೆ" ಎನ್ನುತ್ತ ಭಟ್ಟರು ಆ ಗುಂಡುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಹಳ್ಳಿಗಭಿಮುಖವಾಗಿ ನಡೆಯತೊಡಗಿದರು. ಅವರು ಊರ ಅಗಸೆಯನ್ನು ಪ್ರವೇಶಿಸುವಾಗ ಮಧ್ಯಾಹ್ನ ಹನ್ನೆರಡು ಗಂಟೆ ಮಿಾರಿಹೋಗಿತ್ತು.

ಧರ್ಮಪತ್ನಿ ಅಡಿಗೆ ಮಾಡಿ ಪತಿಯ ದಾರಿಯನ್ನು ಕಾಯುತ್ತ ನಿಂತಿದ್ದರು.

"ನನಗೆ ಇನ್ನು ಮೂರು ದಿನ ಊಟವಿಲ್ಲ ಧರ್ಮಪತ್ನಿ! ವ್ರತವನ್ನು ಹಿಡಿದಿದ್ದೇನೆ. ಜಳಕ ಮಾಡಿ ತೀರ್ಥವನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ಗಂಗನಹಳ್ಳಿಯ ಉದ್ಧಾರಕ್ಕೆ ನನ್ನ ವ್ರತದಿಂದ ಉಪಯೋಗವಾದರೆ ನಾನೇ ಧನ್ಯ" ಎಂದು ಹೇಳಲು, ಕೂಡಿದವರೆಲ್ಲ "ಭಟ್ಟರೆ! ಭಟ್ಟರೆ!" ಎಂದು ಉದ್ಗಾರ ತೆಗೆದರು.

"ತಾಯಿ! ನೀವು ಊಟ ಮಾಡಿಬಿಡಿರಮ್ಮಾ. ಮುಂಜಾವಿನಿಂದ ಬಾಯಲ್ಲಿ ನೀರು ಕೂಡ ಹಾಕಿಲ್ಲ" ಎಂದು ಶೆಟ್ಟರು ಎನ್ನಲು,

"ಅವರ ವ್ರತವೇ ನನ್ನ ವ್ರತ" ಎಂದುಬಿಟ್ಟರು ಧರ್ಮಪತ್ನಿ.

"ಅದಕ್ಕೆ ನಾನು ಅಡ್ಡ ಬರುವದಿಲ್ಲ" ಎಂದು ಭಟ್ಟರು ಮುಗುಳುನಗೆಯಿಂದ ಧರ್ಮಪತ್ನಿಯನ್ನು ಅಭಿಮಾನದಿಂದ ನೋಡಿದರು.

ಮೂರು ದಿನಗಳಲ್ಲಿ ಸರಸ್ವತಿ ಚೇತರಿಸಿಕೊಂಡಳು. ಗಂಗನಹಳ್ಳಿಯಲ್ಲಿ

ಹೊಸದಾಗಿ ಯಾರಿಗೂ ರೋಗ ಬರಲಿಲ್ಲ. ಬಂದವರ ರೋಗವೂ ಮರಣ ವನ್ನು ತರದೆ ಗುಣಮುಖವಾಗತೊಡಗಿತು. ಊರವರಲ್ಲಿ ಒಂದು ಹೊಸ ಚೇತನ ಬರತೊಡಗಿತು. ಇದಕ್ಕೆಲ್ಲ ಕಾರಣರಾದ ಭಟ್ಟರನ್ನು ಅವರು ಹಾಡಿ ಹರಸತೊಡಗಿದರು.

ಮರುದಿನ ಪಾರಣೆ. ಅದಕ್ಕಾಗಿ ಊರ ಮುಂದಾಳುಗಳು ಭಟ್ಟರ ಮನೆಗೆ ಹಣ್ಣುಗಳನ್ನು ಕಳಿಸಿದರು. ರಾಸಿರಾಸಿಯಾಗಿ ಹೂಗಳನ್ನು ದೇವರ ಪೂಜೆಗೆ ಕಳಿಸಿದರು. ಉಪವಾಸದಿಂದ ಹೈರಾಣವಾದ ದಂಪತಿಗಳ ಬಗ್ಗೆ ಅವರಲ್ಲಿ ಮೂಡಿದ ಪೂಜ್ಯ ಭಾವವನ್ನು ಬಣ್ಣಿಸುವುದು ಸಾಧ್ಯವಾದೀತೆ? ಗಂಗನಹಳ್ಳಿಗೆ ಹೊಸಜೀವ ತಂದುಕೊಟ್ಟವರು ಅವರಿಗೆ ಪ್ರತ್ಯಕ್ಷ ಪರಮಾತ್ಮ ನಂತೆ ಕಾಣತೊಡಗಿದರು.

ಆ ರಾತ್ರಿ ಪಾರ್ವತಿಯ ಮೈ ಬೆಚ್ಚಗಾಗಲು ಧರ್ಮಪತ್ನಿ ಗಾಬರಿ ಯಿಂದ ಭಟ್ಟರಿಗೆ ಸುದ್ದಿ ಹೇಳಿದರು. "ನಾಳೆ ಪಾರಣೆ ಧರ್ಮಪತ್ನಿ. ದೇವರಿಗೆ ನೈವೇದ್ಯವಾಗಬೇಕು. ನಿನಗೆ ಹೈರಾಣವಾಗಿದೆಯೆ!" ಭಟ್ಟರು ಧರ್ಮ ಪತ್ನಿಯ ಸುದ್ದಿಯನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಮುಖ ಕಿವಿಚಿ ಕೊಂಡು ಹೀಗೆ ಹೇಳಲು, ಧರ್ಮಪತ್ನಿ ಹಸನ್ಮುಖಳಾಗಿ,

"ನನಗೆಲ್ಲಿ ಆಗಿದೆ ದಣಿವು? ಏಕೋ ಪಾರ್ವತಿ ಬಳಲುತ್ತಿದ್ದಾಳೆ." ಧರ್ಮಪತ್ನಿ ಅದೇ ಮಾತನ್ನು ಹೇಳಿದರು.

"ದೇವಿಯ ಅಂಗಾರವನ್ನು ಹಚ್ಚು. ಅವಳ ಮಗಳ ಆರೋಗ್ಯ ಅವಳಿಗೇ ಸೇರಿದ್ದು" ಎಂದು ಭಟ್ಟರು ಅಂಗಾರವನ್ನು ದಯಪಾಲಿಸಿದರು. ಅಂಗಾರವನ್ನು ಕೊಡುವಾಗ ಕೈ ನಡುಗಿತು. ಮೂರು ದಿನಗಳ ಹಿಂದೆ ದುರ್ಗಾದೇವಿಯ ಗುಡಿಯಲ್ಲಿ ಕೇಳಿದ ಹಸುಗೂಸು ಪಾರ್ವತಿಯ ದನಿಯ ನೆನಪು ಇದಕ್ಕೆ ಕಾರಣವಾಗಿದ್ದಿತೇನೊ?

ಮರುದಿನ ಪಾರಣೆಯಾಯಿತು. ಪಾರ್ವತಿಯನ್ನು ತೊಡೆಯ ಮೇಲೆ ಹಾಕಿಕೊಂಡೇ ಧರ್ಮಪತ್ನಿ ಎರಡು ತುತ್ತುಗಳನ್ನು ಹಾಕಿಕೊಂಡರು. ಪಾರ್ವ ತಿಯ ಮೈ ಕೆಂಡವಾಗಿತ್ತು.

ಸಾಯಂಕಾಲ ಪಾರ್ವತಿಯ ಆರೋಗ್ಯ ಪೂರಾ ಕೆಟ್ಟಿತು. ಧರ್ಮ ಪತ್ನಿ ಪೂರಾ ಕಂಗೆಟ್ಟರು.

ಮರುದಿನ ಮುಂಜಾವು ಗಂಗನಹಳ್ಳಿಯ ರೋಗಿಗಳೆಲ್ಲ ಚೇತರಿಸಿ ಕೊಂಡರು.

ಈ ಸುದ್ದಿಯನ್ನು ತಂದ ಮುಂದಾಳುಗಳು ಭಟ್ಟರ ಮನೆಯಲ್ಲಿಯ

ಪಾರ್ವತಿಯ ಪರಿಸ್ಥಿತಿಯನ್ನು ಕಂಡು ಹೌಹಾರಿದರು. ಅವರ ಸಂಕಟ ಮಿತಿ ಮೀರಿತು.

ಆ ವೇಳೆಗೆ ದೇವರಮನೆಯಿಂದ ಹೊರಗೆ ಬಂದ ಭಟ್ಟರು ಗಂಭೀರ ವಾಗಿ ಧರ್ಮಪತ್ನಿಯನ್ನು ಕುರಿತು,

"ಪಾರ್ವತಿಯ ಮೇಲೆ ದೇವಿಯ ಮಮತೆ ಬಹಳವೆಂದು ತೋರುತ್ತದೆ. ಗಂಗನಹಳ್ಳಿಯನ್ನು ದೇವಿಯು ಉಗುಳಿಬಿಟ್ಟಳು. ಪಾರ್ವತಿಯನ್ನು ಮಾತ್ರ..."

"ಹಾಂ!" ಧರ್ಮಪತ್ನಿ ಚೀರಿದರು.

"ಪಾರ್ವತಿ ದೇವಿಗೆ ಪೂರ್ಣಾಹುತಿ ಧರ್ಮಪತ್ನಿ. ಅದನ್ನು ಕೊಡುವ ಭಾಗ್ಯ ನಿನ್ನದು" ಎಂದು ಭಟ್ಟರೆನ್ನಲು ಕೂಡಿದವರು,

"ಏನು ಹೇಳುವಿರಿ ಭಟ್ಟರೆ!" ಎಂದು ಕಂಗೆಟ್ಟರು.

"ಪಾರ್ವತಿಯ ಪುಣ್ಯ ನಮಗಿಲ್ಲ, ಬಂಧುಗಳೆ!" ಎಂದು ಭಟ್ಟರು ಕಣ್ಣೀರು ತುಂಬಿದರು.

ಕೂಡಿದವರ ಕಣ್ಣಾಲಿ ತುಂಬಿ ನೀರು ಚಿಮ್ಮಿದವು.

ಸಾಯಂಕಾಲ ಪಾರ್ವತಿಯನ್ನು ದುರ್ಗಾದೇವಿ ಕರೆದುಕೊಂಡು ಬಿಟ್ಟಳು.

ಧರ್ಮಪತ್ನಿ ಎದೆ ಎದೆ ಹೊಡೆದುಕೊಂಡು ಗೋಳಾಡತೊಡಗಲು ಭಟ್ಟರು ಅವರ ಹತ್ತಿರ ಬಂದು ಬೆನ್ನಮೇಲೆ ಕೈಯಾಡಿಸುತ್ತ "ಹುಚ್ಚಿಯ ಹಾಗೆ ಮಾಡುತ್ತೀ ಧರ್ಮಪತ್ನಿ! ಕೊಟ್ಟವರು ತೆಗೆದುಕೊಂಡು ಹೋದರೆ ನಿನಗೆ ಇಷ್ಟು ವ್ಯಥೆಯಾಗಬಾರದು. ಪಾರ್ವತಿ ಈಗ ನಿನ್ನ ಮಗಳಲ್ಲ, ದೇವಿಯ ಮಗಳು. ಅವಳನ್ನು ಆನಂದದಿಂದ ಕಳಿಸಿಬಿಡು. ಅವಳು ಕೆಳಗೆ ಮಲಗಲಿ. ಭೂಮಿತಾಯಿಯ ತೊಡೆ ನಿನ್ನ ತಾಯಿತೊಟ್ಟಿಲಕ್ಕಿಂತ ಮೇಲು ಅಲ್ಲವೆ? ನಮ್ಮ ಕಂದಮ್ಮ ಇಂದು ಭಾಗ್ಯವಂತಳು. ಬಿಕ್ಕಳಿಸಬೇಡ ಧರ್ಮ ಪತ್ನಿ. ನನ್ನ ಮಗಳ ಕಾರ್ಯವನ್ನು ನೋಡಿದಿಯಾ? ಗಂಗನಹಳ್ಳಿಯ ಹಿತಚಿಂತನೆಯನ್ನು ಸಾಧಿಸಲು ಅವಳು ಹೊರಟುಬಿಟ್ಟಿರುವಳು. ಅವಳ ದಾರಿಗೆ ಕಲ್ಯಾಣವನ್ನು ಚಿಂತಿಸು." ಎಂದು ಹೇಳಲು ಧರ್ಮಪತ್ನಿ ತುಟಿ ಕಚ್ಚಿಕೊಂಡು ಪಾರ್ವತಿಯನ್ನು ಎರಡೂ ಕೈಗಳಿಂದ ಎತ್ತಿಕೊಂಡು ಅನೇಕ ಸಲ ಮುದ್ದಿಟ್ಟು, ಕೆಳಗೆ ಮಲಗಿಸಿ ಗಟ್ಟಿಯಾಗಿ ಭಟ್ಟರ ಪಾದಗಳನ್ನು ಹಿಡಿದು ಬಿಕ್ಕಿಬಿಕ್ಕಿ ಅಳತೊಡಗಿದರು.

ಕೂಡಿದ ಜನಕ್ಕೆ ಈ ದೃಶ್ಯವನ್ನು ನೋಡುವುದು ಅಸಾಧ್ಯವಾಯಿತು.

ಅವರ ರೋದನ ಹರಿಯತೊಡಗಿತು.

ಭಟ್ಟರ ಕಣ್ಣೊಳಗಿಂದ ತಟಕಿಕ್ಕಿದ ಎರಡು ದೊಡ್ಡ ಕಣ್ಣೀರ ಹನಿಗಳು ಧರ್ಮಪತ್ನಿಯ ಬೆನ್ನಮೇಲೆ ಉರುಳಿದುವು.

ಗಂಗನಹಳ್ಳಿಯ ಕೆರೆಯ ಮಗ್ಗುಲಲ್ಲಿರುವ ಸ್ಮಶಾನ ಭೂಮಿಯಲ್ಲಿ ಪಾರ್ವತಿ ಶಾಶ್ವತವಾಗಿ ಮಲಗಿದಳು. ಅವಳ ಕೊನೆಯ ದರ್ಶನಕ್ಕೆ ಗಂಗನ ಹಳ್ಳಿಯೇ ಬಂದಿತ್ತು. ಧರ್ಮಪತ್ನಿ ಒಂದು ಬೊಗಸೆ ಮಣ್ಣನ್ನು ಪಾರ್ವತಿಯ ಮೇಲಿರಿಸಿ "ಪಾರ್ವತಿ! ಇದು ನಿನ್ನ ತಾಯಿ ನಿನಗೆ ಕೊಟ್ಟ ಕೊನೆಯ ಉಡುಗೊರೆ" ಎಂದಾಗ ಜನರ ಎದೆ ಬಿರಿದುಬಿಟ್ಟಿತು. ಎಲ್ಲರೂ ಗೊಳೋ ಎಂದು ಅತ್ತರು.

ಕೂಡಿದವರೆಲ್ಲ ಕೆರೆಯಲ್ಲಿ ಸ್ನಾನ ಮಾಡಿ ತಮ್ಮ ತಮ್ಮ ಮನೆಗಳಿಗೆ ಹೋಗಲು ಭಟ್ಟರು ಆಜ್ಞಾಪಿಸಿದರು. ತಾವೂ ಅಲ್ಲಿ ಸ್ನಾನ ಮಾಡಿ ಇಳೀ ಒದ್ದೆಯಲ್ಲಿ ಮನೆಗೆ ಬಂದು ಒಂದು ದೀವಿಗೆಯನ್ನು ಹಚ್ಚಿದರು. ಧರ್ಮಪತ್ನಿ ಯನ್ನು ಹತ್ತಿರ ಕರೆದು "ಈ ನಂದಾದೀಪಕ್ಕೆ ತುಪ್ಪ ಹಾಕು. ಇದು ಹತ್ತು ದಿನ ಉರಿಯಲಿ. ಹತ್ತುದಿನಗಳ ಮೇಲೆ ಈ ದೀಪ ಆರಬಹುದು, ಧರ್ಮ ಪತ್ನಿ! ಆದರೆ ಪಾರ್ವತಿಯು ಗಂಗನಹಳ್ಳಿಯಲ್ಲಿ ನಿತ್ಯನಂದಾದೀಪವಾಗಿ ಬಾಳುವಳು" ಎನ್ನಲು ಧರ್ಮಪತ್ನಿ ತುಟಿ ಎರಡು ಮಾಡದೆ ಪಣತಿಯಲ್ಲಿ ತುಪ್ಪ ಸುರುವಿದಳು. ದೀಪ ಬೆಳಗಿತು.

"ದೀಪ ಬೆಳಗಿತು ಧರ್ಮಪತ್ನಿ!"

"ನನ್ನ ದೀಪ ಮಾತ್ರ........"

"ಹುಚ್ಚಿ! ಈಗ ಬೆಳಗುತ್ತಿರುವುದು ನಿನ್ನದೇ ದೀಪ. ನಿನ್ನ ದೀಪವಾರ ಲಿಲ್ಲ. ಜಗ್ಗಜಗ್ಗನೆ ಬೆಳಗಿತು."

ಭಟ್ಟರ ಮಾತಿಗೆ ಧರ್ಮಪತ್ನಿ ಕೊಟ್ಟ ಉತ್ತರ ಧಾರಾಕಾರವಾಗಿ ಬರುವ ಕಣ್ಣೀರ ಹೊನಲೇ ಆಗಿತ್ತು.

ದೇವರ ಮನೆಯಲ್ಲಿ ಭಟ್ಟರು ಸಂಧ್ಯಾವಂದನೆ ಮುಗಿಸಿ ದೇವರಿಗೆ ಮಂಗಳಾರತಿ ಎತ್ತಿ ಕೈ ಜೋಡಿಸುವ ಹೊತ್ತಿಗೆ ಧರ್ಮಪತ್ನಿ ಹಾಲನ್ನು ತೆಗೆದುಕೊಂಡು ಬಂದು ಅಲ್ಲಿಯೇ ಕುಳಿತರು. ಈ ದಿನಗಳಲ್ಲಿ ಧರ್ಮಪತ್ನಿ ಹೀಗೆ ಕುಳಿತುಕೊಳ್ಳುವುದು ಅಪರೂಪವಾಗಿತ್ತು. ಇಂದೇನೋ ಭಾಗ್ಯ ತೆರೆಯಲಿದೆ ಎಂದು ಭಟ್ಟರು ಮಂದಸ್ಮಿತರಾದರು. "ದೇವಿ ಶಾಂತಳಾದಳು. ಊರಲ್ಲಿ ರೋಗದ ಹಾವಳಿ ನಿಂತು ಬಹಳ ದಿನಗಳು ಸಂದುಹೋದವು. ದೇವಿಯ ಆರಾಧನೆ ನಡೆಯಬೇಡವೇ?" ಎಂದು ಧರ್ಮಪತ್ನಿ ಅವರಿಗೆ

ಬೇಕಾದ ಮಾತನ್ನೇ ತೆಗೆದರು.

"ಮನೆಯ ದೇವತೆಯೇ ಸಂತೋಷದಲ್ಲಿ ಇಲ್ಲದಿರುವಾಗ ನನ್ನಿಂದ ಏನು ಮಾಡಲು ಸಾಧ್ಯ? ಆರಾಧನೆ ನಡೆಯಬೇಕು, ನಿಜ." ಭಟ್ಟರು ನಿರುತ್ಸಾಹ ದಿಂದಲೇ ನುಡಿದರು.

"ನನ್ನ ಪಾರ್ವತಿಯನ್ನು ಮರೆತುಬಿಟ್ಟದ್ದೇನೆ. ನನ್ನ ದುಃಖ ಶಾಂತ ವಾಗಿದೆ. ನನ್ನಿಂದ ಇನ್ನು ಯಾವ ಅಡ್ಡಿಯೂ ಆಗಲಾರದು." ಈ ಮಾತು ಗಳು ಎಳೆದು ತಂದ ಮಾತುಗಳಾಗಿದ್ದರೂ ಅವುಗಳಲ್ಲಿ ದೃಢತೆಯಿತ್ತು. ಈ ಮಾತುಗಳನ್ನು ಮುಗಿಸಿದಾಗ ಧರ್ಮಪತ್ನಿಯ ಕಣ್ಣುಗಳಲ್ಲಿ ಹನಿಗಳು ಕಾಣಿಸಿಕೊಂಡವು.

"ನೀನು ಪಾರ್ವತಿಯನ್ನು ಮರೆತುಬಿಡಬೇಕೆಂದು ಹೇಳುವಷ್ಟು ಕಟುಕತನ ನನ್ನಲ್ಲಿಲ್ಲ ಧರ್ಮಪತ್ನಿ. ನೀನು ಪಾರ್ವತಿಯನ್ನು ಮರೆಯು ವದು ಎಂದಿಗೂ ಸಾಧ್ಯವಿಲ್ಲ. ಅದು ನನಗೂ ಸಾಧ್ಯವಿಲ್ಲ. ಆದರೆ ದೇವರು ತಂದ ಆಪತ್ತನ್ನು ಎದುರಿಸಲೇ ಬೇಕು. ಜೀವನದಲ್ಲಿ ಈ ದುಃಖಗಳು ಬರತಕ್ಕವುಗಳೇ. ಈ ದುಃಖಗಳನ್ನೇ ನಾವು ಮೆಲಕು ಹಾಕುತ್ತ ಕುಳಿತರೆ ಸಂಸಾರರಥ ಹೇಗೆ ಸಾಗಬೇಕು ಹೇಳು. ಮೇಲಾಗಿ ಇದು ನಮ್ಮಿಂದ ನೀಗುವ ಕೆಲಸವೂ ಅಲ್ಲ, ದೇವರ ಕೆಲಸ. ಅವನು ಇಟ್ಟಂತೆ ನಾವು ಇರಬೇಕು. ನಾವೆಲ್ಲ ಅವನ ಸೂತ್ರದ ಗೊಂಬೆಗಳಷ್ಟೆ." ಭಟ್ಟರು ಈ ಮಾತುಗಳನ್ನು ಉಗುಳು ನುಂಗುತ್ತ ಹೇಳಿದರು.

"ಆರಾಧನೆಯ ಕೆಲಸಕ್ಕೆ ಬೇಗನೇ ಪ್ರಾರಂಭಿಸಿಬಿಡಿರಿ. ಊರ ಜನರೂ ಆತುರರಾಗಿದ್ದಾರೆ. ಪಾಪ! ನಮಗಾಗಿ ಅವರು ಯಾವ ಮಾತನ್ನೂ ಆಡಲೊಲ್ಲರು. ಈ ಕೆಲಸ ನಾಳೆಯಿಂದಲೇ ಪ್ರಾರಂಭವಾಗಿಬಿಡಲಿ" ಎನ್ನುತ್ತ ಧರ್ಮಪತ್ನಿ ಭಟ್ಟರಿಗೆ ಹಾಲಿನ ಬಟ್ಟಲವನ್ನು ನೀಡಿದರು.

ಭಟ್ಟರು ಅತ್ಯಾದರದಿಂದ ಹಾಲನ್ನು ಸ್ವೀಕರಿಸಿದರು. "ನಿನ್ನಂತಹ ಹೆಂಡತಿಯನ್ನು ಪಡೆಯಲು ನೂರು ಜನ್ಮಗಳ ಪುಣ್ಯ ಬೇಕು" ಎನ್ನುವ ಭಾವ ಅವರ ಕಣ್ಣುಗಳಲ್ಲಿ ಮಿನುಗುತ್ತಿತ್ತು.

೭

ಗಂಗನಹಳ್ಳಿಯ ಕಟ್ಟಾಳುಗಳಾದ ನಾಲ್ಕು ನೂರು ಜನರು ಒಮ್ಮೆಲೆ ಕೆಲಸಕ್ಕೆ ಆರಂಭಿಸಿದಾಗ ಯಾವ ಕೆಲಸ ಅಸಾಧ್ಯವಾದೀತು? ದುರಗವ್ವನ

ಗುಡ್ಡದ ಹಾದಿಯಲ್ಲಿ ಬೆಳೆದು ನಿಂತ ಫಡಗಳ್ಳಿ ಉರುಳಿ ಬಿದ್ದಿತು. ಮೂರು ತಿಂಗಳಲ್ಲಿಯೇ ಪಾವಟಿಗೆಗಳೆಲ್ಲ ಗಗನಕ್ಕೇರುವಂತೆ ಸಿದ್ಧವಾದವು. ಗುಡ್ಡದ ಬುಡದಲ್ಲಿ ಹೊಂಡದ ನಿರ್ಮಾಣವಾಗಿ ಬಿಟ್ಟಿತು. ಇಲ್ಲಿ ಕೆಲಸ ಮಾಡುವವರು ಕೂಲಿಯ ಆಳುಗಳಾಗಿರದೆ ದೇವಿಯ ಭಕ್ತರಾಗಿದ್ದರಿಂದ ಹಾ ಹಾ ಅನ್ನು ವಷ್ಟರಲ್ಲಿ ಗುಡ್ಡದಂತಹ ಕೆಲಸ ಕಡ್ಡಿಯಂತೆ ಆಯಿತು. ಭಟ್ಟರು ಈ 'ಮಾಯಾ ಬಾಜಾರ'ವನ್ನು ನೋಡಿ ಆನಂದಪುಳುಕಿತರಾದರು. 'ನೀವು ಧನ್ಯರಪ್ಪಾ!' ಎಂದು ಅವರು ಹಳ್ಳಿಗರನ್ನುದ್ದೇಶಿಸಿ ಆಗಾಗ ಬೆನ್ನು ಚಪ್ಪರಿಸತೊಡಗಿದರು. "ನಿಮ್ಮ ದಯೆ ಗುರುಗಳೇ!" ಎಂದು ಜನ ಹಿಗ್ಗಿನಿಂದ ನುಡಿದರು.

ಬಡಿಗರ ಮಾನಪ್ಪನು ತನ್ನ ವ್ಯವಸಾಯ ಬಂಧುಗಳನ್ನು ಕೂಡಿ ಕೊಂಡು ಒಂದು ಕಾಡು ಕಟ್ಟಿಗೆಯ ತೇರನ್ನು ಸುಂದರವಾಗಿ ಜೋಡಿಸಿದನು. ಜಾತ್ರೆಯ ದಿನ ಎಳೆಯಬೇಕಾದ ರಥವದು.

ಹಳ್ಳಿಗರಲ್ಲಿ ದುರುಗವ್ವನ ಜಾತ್ರೆಯ ಉತ್ಸಾಹವು ತುಂಬಿ ಸೂಸತೊಡ ಗಿತು. ಮನೆಮನೆಯಿಂದ ಕಾಳುಗಳನ್ನು ಶೇಖರಿಸತೊಡಗಿದರು. ಬೇಕಾದಷ್ಟು ಹಣವೂ ಕೂಡಿತು. ಊರ ಮುಂದಾಳುಗಳೆಲ್ಲ ಭಟ್ಟರ ನೇತೃತ್ವದಲ್ಲಿ ಕೆಲಸ ಮಾಡಹತ್ತಿದಾಗ ಯಾವುದು ತಾನೆ ಅಸಾಧ್ಯವಾದೀತು?

ಗಂಗನಹಳ್ಳಿಯಿಂದ ಏಳು ಹಳ್ಳಿಗಳ ಡೊಳ್ಳಿನ ಮೇಳದವರಿಗೆ ಔತಣ ಹೋಯಿತು. ದೇವಿಯ ಭಕ್ತೆಯರಾದ ಜೋಗತಿಯರಿಗೆ ಹೇಳಿ ಕಳಿಸಲಾ ಯಿತು. ಊರ ಕರಡೀಮಜಲುಗಳನ್ನು ಚನ್ನಾಗಿ ತರಬೇತು ಮಾಡಲಾ ಯಿತು. ಸನಾದಿಯ ಹನುಮಂತನಂತೂ ತನ್ನ ಸನಾದಿಯನ್ನು ಉಜ್ಜಿ ಲಕ ಲಕ ಮಾಡಿದನು. ಅವನ ಉತ್ಸಾಹವೇ ಉತ್ಸಾಹ.

ಭಟ್ಟರು ತೆಗೆದುಕೊಟ್ಟ ಮುಹೂರ್ತದ ದಿನ ಈ ಜಾತ್ರೆ ನೆರವೇರ ಬೇಕೆಂದು ನಿಶ್ಚಯವಾಯಿತು. ಇದಕ್ಕೆ ಮೊದಲು ಐದು ಮಂಗಳವಾರ ಹಳ್ಳಿ ಯಲ್ಲಿ ಯಾರೂ ರೊಟ್ಟಿಯನ್ನು ಸುಡದಂತೆ ಡಂಗುರ ಹೊಯ್ಯಿಸಲಾಯಿತು. ಪ್ರತಿ ಮಂಗಳವಾರ ಹಳ್ಳಿಗರೆಲ್ಲ ದೇವಿಗೆ ನೀರಿನ ನೈವೇದ್ಯ ಸಲ್ಲಿಸುವಂತೆ ಹೇಳಲಾಯಿತು. ಕೊನೆಯ ಮಂಗಳವಾರದ ದಿನವೇ ಜಾತ್ರೆ.

ಗಂಗನಹಳ್ಳಿಯ ಜಾತ್ರೆಯ ಅಬ್ಬರವನ್ನು ನೋಡಲು ಜನ ಗುಂಪು ಗುಂಪಾಗಿ ಕೂಡತೊಡಗಿತು. ಹೆಣ್ಣುಮಕ್ಕಳು ಅತ್ತೆಯ ಮನೆಯಿಂದ ತವರಿಗೆ ಬರತೊಡಗಿದರು. ಆಪ್ತೇಷ್ಟರು ಕೂಡತೊಡಗಿದರು. ಗಂಗನಹಳ್ಳಿಯ ಪ್ರತಿ ಯೊಂದು ಮನೆಯಲ್ಲಿ ಅತಿಥಿಗಳ ಗುಂಪು ಗಜಬಜಿಸಲಾಯಿತು. ಸಣಗಿನ ವ್ಯಾಪಾರಸ್ಥರು ಸಾವಿರಗಟ್ಲೆ ಬಣ್ಣಬಣ್ಣದ ದಟ್ಟಿಗಳನ್ನು ತರಿಸಿ ಅಂಗಡೀ

ಹಚ್ಚಿದರು. ಚಿಕ್ಕಮಕ್ಕಳ ಬಣ್ಣದ ಸಾಮಾನುಗಳ ಚಿತ್ರವಿಚಿತ್ರವಾದ ಅಂಗಡಿಗಳು ಸಾಲಿಟ್ಟವು. ಮಿಠಾಯಿ ಮಾದೇವನ ಅಂಗಡಿಯಲ್ಲಿ 'ಲಡ್ಡುಗೆ'ಗಳ ರಾಸಿಯೇ ನಿಂತಿತು. ಸಕ್ಕರೆಯ ಬೆಂಡು-ಬತ್ತಾಸಗಳ ಪರ್ವತವೇ ಬಿದ್ದಿತು. ಅಂಡಿಗೆಗಟ್ಟಲೆ ಚುನಮುರಿಗಳನ್ನು ತರಿಸಿ ಇರಿಸಲಾಯಿತು. ತೆಂಗಿನಕಾಯಿ ಶಿವರುದ್ರಪ್ಪನು ಅಸಂಖ್ಯ ತೆಂಗಿನಕಾಯಿಗಳನ್ನು ಒಂದು ತಿಂಗಳ ಮೊದಲೇ ತರಿಸಿ ಅವುಗಳನ್ನು ಆಕಾರದಂತೆ ವಿಂಗಡಿಸಿ ಇಟ್ಟನು. ಉತ್ತತ್ತಿಗಳ ಚೀಲಗಳು ಎಲ್ಲ ಅಂಗಡಿಗಳಲ್ಲಿ ಬಾಯಿ ತೆರೆದು ನಿಂತುಬಿಟ್ಟವು. ಜಾತ್ರೆಯ ಉತ್ಸಾಹವು ಎಲ್ಲರಲ್ಲಿಯೂ ಉತ್ಸಾಹದ ಹೊಳೆಯನ್ನೇ ಹರಿಯಿಸತೊಡಗಿತು.

ಆ ಸೋಮವಾರ ಬೆಳಗಿನ ಜಾವದಲ್ಲಿಯೇ 'ಜಗಂ ಝುಳ್ಳು! ಜಗಂ ಝುಳ್ಳು!' ಎಂಬ ಡೊಳ್ಳುಗಳ ನಿನಾದವು ಗಂಗನಹಳ್ಳಿಯನ್ನು ಜಾಗ್ರತಗೊಳಿಸಿತು. ಏಳು ಹಳ್ಳಿಗಳಿಂದ ಬಂದ ಕುರುಬರ ಡೊಳ್ಳುಗಳ ಮೇಳಸ್ವರವು ಗಗನವನ್ನು ಭೇದಿಸತೊಡಗಿತು. ಕಟ್ಟಾಳುಗಳಾದ ಕುರುಬ ಯುವಕರು ಹೊತ್ತುಕೊಂಡ ಭಾರವಾದ ಡೊಳ್ಳಿನ ದಪ್ಪ ತೊಗಲಿನ ಮೇಲೆ ಭಾರವಾದ ಗುಣಕದಿಂದ ಬೀಳುವ ಪೆಟ್ಟು ಏಕತಾನವನ್ನು ಪಡೆದು ಸುಗಂಭೀರವಾಗಿ ತೆರೆಗಳನ್ನು ಎಬ್ಬಿಸತೊಡಗಿತು. ಕಿವಿ ಗಡಚಿಕ್ಕುವಂತಹ ಸಪ್ಪಳವಾದರೂ ಅದರಲ್ಲಿ ತುಂಬಿನಿಂತ ಧ್ವನಿಸಮುದ್ರವು ಕೇಳುವವರ ಕಿವಿದೆರೆಗೆ ಬಡಿದಾಗ ಅದರಲ್ಲೊಂದು ಪ್ರಭಾವಪೂರ್ಣವಾದ ರಸಸಾಮ್ಯತೆಯು ಕಂಡುಬರತೊಡಗಿತು. ಆಗಲೇ ಆರುಯಾತದ ಬಾವಿಯ ಕಮಾನಿನ ಮೇಲೆ ಸಿಂಗರಿಸಿ ಕುಳ್ಳಿರಿಸಿದ ದೇವೀ ಮೂರ್ತಿಗಳನ್ನು ವಿಜೃಂಭಣೆಯಿಂದ ಕರೆತರಬೇಕಾಗಿತ್ತು. ಆ ವಿಗ್ರಹಗಳ ಸೌಂದರ್ಯವನ್ನು ನೋಡಿ ಜನರು ಬೆರಗಾಗತೊಡಗಿದರು. ಸಜೀವ ಪ್ರತಿಮೆಗಳೇ ಅವು. ಗೋಕಾವಿಯ ಸುಪ್ರಸಿದ್ಧ ಕಲಾವಿದನಾದ ಸಾಂಬಶಿವನಿಂದ ಬಣ್ಣ ತುಂಬಿಕೊಂಡು ವಿಲಕ್ಷಣ ಕಳೆ ತುಂಬಿಕೊಂಡಿದ್ದವು. ಈ ಮೂರ್ತಿಗಳನ್ನು ತರುವಾಗ ಜನರ ಸಮುದ್ರವೇ ನೆರೆಯಿತು. ಆ ಗುಂಪನ್ನು ಚದುರಿಸುವಂತೆ 'ಇಂಗಳೋಬಾ'ನ ಮುಖವಾಡ ಮೂರ್ತಿಯನ್ನು ಹೊತ್ತುಕೊಂಡ ತಳವಾರನು ಅತ್ತಿಂದ ಇತ್ತ, ಇತ್ತಿಂದ ಅತ್ತ ಓಡಾಡತೊಡಗಿದನು.

ಮಹಾವಾದ್ಯಗಳ ಸಂಭ್ರಮದೊಂದಿಗೆ ಮೂರ್ತಿಗಳನ್ನು ದೇವಿಯ ಮಂದಿರದಲ್ಲಿ ಪ್ರತಿಷ್ಠಾಪಿಸಲಾಯಿತು. ಆ ದಿನ ಊರಿಗೆ ಊರೇ ದೇವಿಗೆ ಕಾಣಿಕೆಗಳನ್ನರ್ಪಿಸಿದರು. ನೆನೆದ ಕಡಲೆಗಳ ರಾಸಿಯೇ ಬಿದ್ದಿತು. ಸುಮಂಗಲೆಯರು ಖಣಗಳನ್ನು ಅರ್ಪಿಸಿ ಕಾಯಿಹಣ್ಣುಗಳಿಂದ ದೇವಿಯ ಉಡಿ ತುಂಬಿ

ದರು. ಹೋಳಿಗೆ ಹುಗ್ಗಿಗಳ ನೈವೇದ್ಯ ಮಾಡಿದರು.

ರಥೋತ್ಸವವು ಸಾಂಗವಾಗಿ ನೆರವೇರಿತು. ಕೂಟಕೂಟಗಳಲ್ಲಿ ಅನೇಕ ಕಾಯಿಗಳನ್ನು ಒಡೆಯಲಾಯಿತು. ಅಲ್ಲಲ್ಲಿ ಕೆಲವರು ಆ ತೇರು ತಡೆದಾಗ ಕೋಳಿಯ ಬಲಿಯನ್ನೂ ಕೊಟ್ಟರು. ಆ ಬಲಿಯಾದ ಮೇಲೆ ರಥವು ಸುಗಮವಾಗಿ ಸಾಗುವುದೆಂದು ಅವರ ತಿಳುವಳಿಕೆ. ಹಾರಿಸುವ ಉತ್ತತ್ತಿಗಳು ಆಕಾಶದಿಂದ ಬರುವಂತೆ ಬೀಳತೊಡಗಿದವು. ತೇರಿನಲ್ಲಿ ಕುಳಿತ ಪೂಜಾರಿಗಳಿಗೆ 'ಬುಗುಟೆ'ಗಳೂ ಎದ್ದವು. ತೇರು ಪಾದಗಟ್ಟೆಗೆ ಹತ್ತಿದಾಗ ಸಂಧ್ಯಾಕಾಲವಾಗಿಬಿಟ್ಟಿದ್ದರಿಂದ, ದೀಪೋತ್ಸವವು ಬೆಳಗತೊಡಗಿತು. ದೀವಟಿಗೆಗಳು ಸಾಲು ಸಾಲಾಗಿ ಉರಿಯತೊಡಗಿದುವು. ಆ ದೀವಟಿಗೆಗಳ ಬೆಳಕಿನಲ್ಲಿ ಹಳ್ಳಿಯ ಜನರು ಮೋಜು ಮಾಡಿದರು. ಲಾವಣಿಗಳನ್ನು ಹಾಡಿದರು. ಜೋಗುತಿಗಳ ಕುಣಿತದ ಕಾರ್ಯಕ್ರಮವೂ ಆ ಬೆಳಕಿನಲ್ಲಿಯೇ ಸಾಗತೊಡಗಿತು.

ಶುಕ್ರವಾರದ ದಿನ ಚಾವಡಿಯಿಂದ ಹಳ್ಳಿಗಳ ಮೆರವಣಿಗೆಯೊಂದು ಹೊರಟು ಭಟ್ಟರ ಮನೆಯ ಕಡೆಗೆ ಸಾಗತೊಡಗಿತು. ಈ ಮೆರವಣಿಗೆಯ ಸುಳಿವೇ ಭಟ್ಟರಿಗಿರಲಿಲ್ಲ. ಮೆರವಣಿಗೆ ಬಂದು ಮನೆಯ ಮುಂದೆ ನಿಂತಾಗ ಭಟ್ಟರು ಕುತೂಹಲರಾಗಿ ಹೊರಬಂದರು. ಹೇಮಂತಗೌಡರು ಮುಂದೆ ಬಂದು 'ಹಳ್ಳಿಗರು ನಿಮಗೆ ಕಾಣಿಕೆ ತಂದಿದ್ದಾರೆ. ನಿಮಗೆ ನಿರಾಕರಿಸುವ ಸಾತಂತ್ರ್ಯವಿಲ್ಲ' ಎಂದು ಎರಡು ಮಣೆಗಳನ್ನು ಹಾಕಿದರು. 'ತಾಯಿ! ನೀವೂ ಬರಬೇಕಮ್ಮ!' ಎಂದು ಹೇಳಲು ಧರ್ಮಪತ್ನಿ ಬಂದರು. ಹಳ್ಳಿಗರು ಒಂದು ಜರದ ಸೀರೆಯನ್ನು ಧರ್ಮಪತ್ನಿಗೆ ಹೊದಿಸಿದರು. ನಾಗಪೂರ ಅಂಚಿನ ಧೋತರವನ್ನು ಭಟ್ಟರಿಗೆ ಹೊದಿಸಿದರು. ಹೇಮಂತಗೌಡರು ಕರಜೋಡಿಸಿ 'ನೀವು ಇವುಗಳನ್ನು ಧರಿಸಿಕೊಂಡು ಮೆರವಣಿಗೆಯಲ್ಲಿ ಬರಬೇಕು' ಎಂದರು.

"ನಮಗೇಕಪ್ಪಾ ಮೆರವಣಿಗೆ ?" ಎಂದು ಭಟ್ಟರೆಂದಾಗ ಅವರ ಕಣ್ಣು ಒದ್ದೆಯಾಗಿದ್ದವು. "ನಮ್ಮನ್ನು ಬದುಕಿಸಿದ ಪಾರ್ವತಿಯನ್ನು ನಾವು ನೆನೆಯಬೇಡವೇ ? ಆಗಾಗಲೇ ಅವಳ ಸಮಾಧಿಯ ಮೇಲೆ ವಿಸ್ತಾರವಾದ ಕಟ್ಟೆಯನ್ನು ಕಟ್ಟಿಸಲಾಗಿದೆ. ನಡುವೆ ಸ್ಥಳವನ್ನು ಬಿಡಲಾಗಿದೆ. ಅಲ್ಲಿ ಈಗ ತಂದಿರುವ ಆಲದ ಸಸಿಯನ್ನು ನೀವು ಊರಬೇಕು. ಅವಳ ನೆನಪು ನೆರಳಾಗಿ ನಮ್ಮನ್ನು ತಂಪು ಮಾಡಬೇಡವೇ ?" ಎಂದಾಗ ಧರ್ಮಪತ್ನಿಯ ಕಣ್ಣೊಳಗಿಂದ ಪಳಕ್ಕನೆ ನೀರು ಚಿಮ್ಮಿದವು.

ಮೆರವಣಿಗೆ ಗಂಗನಹಳ್ಳಿಯ ಕೆರೆಯ ಬಲಭಾಗದಲ್ಲಿ ಸಿದ್ಧವಾದ ಕಟ್ಟೆಯ ಹತ್ತಿರ ನಿಂತಿತು. ಧರ್ಮಪತ್ನಿ ಕಣ್ಣೀರ ಹೊಳೆಯಾಗಿ ತುಂಬಿದ

ತಂಬಿಗೆಯಿಂದ ಸಸಿಯನ್ನು ನೆಡುವ ಸ್ಥಳದಲ್ಲಿ ಹಾಲನ್ನು ಸುರುವಿದರು.

"ಪಾರೂ! ಪಾರೂ!" ಎಂದು ಬಿಕ್ಕಳಿಸುತ್ತ "ಸುಖವಾಗಿ ನಿದ್ರೆ ಮಾಡು ಮಗೂ! ನಿನ್ನ ನೆರಳು ತಂಪಾಗಿ ಬೀಳಲಿ ತಾಯಿ! ನೀನು ಭಾಗ್ಯ ವಂತೆ" ಎನ್ನಬೇಕಾದರೆ ಅವರಿಗೆ ಸಾಕುಸಾಕಾಯಿತು. ಭಟ್ಟರು ಸಸಿಯನ್ನು ನೆಟ್ಟರು. ಅವರು ಬಾಗಿ ನೆಡುವಾಗ ಅವರ ಕಣ್ಣೀರಿನ ಹನಿಗಳು ಆ ಸಸಿಯ ಮೇಲೆ ಪಟಪಟನೆ ಬೀಳತೊಡಗಿದವು.

ಬಂದ ಹಳ್ಳಿಗರೆಲ್ಲ ಮೂಕವಾಗಿ ನಮಿಸಿದರು. ಶೆಟ್ಟರು ಗದ್ಗದಿತರಾಗಿ 'ಇದು ಪಾರ್ವತಿಯ ಕಟ್ಟೆ' ಎಂದರು. ಧರ್ಮಪತ್ನಿ ಆ ಮಾತನ್ನು ಕೇಳಿದಾಗ ಅವರ ಅಂತಃಕರಣ ಕದಡಿತು.

೮

ವಿಶ್ವೇಶ್ವರಭಟ್ಟರ ವಯಸ್ಸು ಮಾಗುತ್ತ ಬಂದಂತೆ ಅವರಲ್ಲಿ ಸಂಪೂರ್ಣ ತೃಪ್ತಿಭಾವವು ನೆಲೆಗೊಳ್ಳಹತ್ತಿತು. ಹಿರಿಯಮಗ ನೀಲಕಂಠನು ಈಗಾಗಲೇ ಪಂಚಗ್ರಂಥಗಳ ಅಧ್ಯಯನವನ್ನು ಪೂರ್ತಿಗೊಳಿಸಿ ಜ್ಯೋತಿಷ್ಯವನ್ನು ಕೂಡ ಅಭ್ಯಾಸಮಾಡಿ ಮುಗಿಸಿದನು. ಭಟ್ಟರ ಹೆಜ್ಜೆಯಲ್ಲಿಯೇ ಅವನೂ ಹೆಜ್ಜೆ ಇಡ ತೊಡಗಿದನು. ಶಿಷ್ಯರ ವಿದ್ಯಾಭ್ಯಾಸದಲ್ಲಿ ಅವನೂ ಹಿರಿಯನಾಗಿ ಕೆಲಸ ಮಾಡತೊಡಗಿದನು. ಮನೆಯ ಮೇಲ್ವಿಚಾರಣೆಯು ಕೂಡ ಅವನಿಂದ ಸರಾಗ ವಾಗಿ ಸಾಗತೊಡಗಿತು. ವಾರದಲ್ಲಿ ಎರಡು ದಿನ ಭಟ್ಟರು ಅವನಿಂದಲೇ ಪುರಾಣ ಹೇಳಿಸತೊಡಗಿದರು. ಅವನ ವಾಣಿ ಅವರಿಗೆ ಬಹಳ ತೃಪ್ತಿ ಯನ್ನುಂಟು ಮಾಡತೊಡಗಿತು. ನರಹರಿಯ ವಿದ್ಯಾಭ್ಯಾಸವೂ ಸಮರ್ಪಕ ವಾಗಿ ಸಾಗತೊಡಗಿದ್ದು ಭಟ್ಟರಲ್ಲಿ ಇನ್ನಷ್ಟು ಸಂತೋಷವನ್ನು ತುಂಬ ಹತ್ತಿತು. ವ್ಯವಹಾರಕೌಶಲ್ಯದಲ್ಲಿ ನರಹರಿಯು ನೀಲಕಂಠನನ್ನು ಮೀರಿಸಿ ದನು. ಮನೆಯ ಆಗುಹೋಗುಗಳಲ್ಲಿ ಹೆಚ್ಚಿನ ಆಸ್ಥೆ ವಹಿಸುವವನು ನರ ಹರಿಯೇ. ಸದಾಶಿವನ ವಯಸ್ಸು ಚಿಕ್ಕದಾದರೂ ಅವನು ಪ್ರತಿಭಾವಂತನಾಗಿ ಬೆಳೆಯತೊಡಗಿದನು. ಕಾವ್ಯಾಭ್ಯಾಸಗಳಲ್ಲಿ ಅವನ ಆಸಕ್ತಿ ಹೆಚ್ಚು. ಆಗಾಗ ಅವನು ಸ್ವತಃ ಸಂಸ್ಕೃತ ಶ್ಲೋಕಗಳನ್ನು ರಚಿಸಿ ಭಟ್ಟರ ಮುಂದೆ ಅಂದು ತೋರಿಸತೊಡಗಿದಾಗ ಅವರ ಆನಂದಕ್ಕೆ ಅಳತೆ ಇರುತ್ತಿರಲಿಲ್ಲ. ಮಕ್ಕಳ ವಿಷಯದಲ್ಲಿ ಭಟ್ಟರಲ್ಲಿ ಸಂಪೂರ್ಣವಾದ ನೆಮ್ಮದಿ ನೆಲೆಯೂರಿತು. ಅವರು ಆ ಮಾತನ್ನು ಧರ್ಮಪತ್ನಿಯ ಮುಂದೆ ಆಗಾಗ ಅನ್ನತೊಡಗಿದರು.

"ಸುಶೀಲ ಸಂಪನ್ನರಾದ ಮಕ್ಕಳನ್ನು ಪಡೆಯುವುದು ಪುಣ್ಯವಂತರ ಭಾಗ್ಯ ಧರ್ಮಪತ್ನಿ! ಈ ಪುಣ್ಯ ನಿನ್ನದಾಗಿದೆ. ನಿನ್ನ ಮಕ್ಕಳು ಸಂಪನ್ನರಾಗಿದ್ದಾರೆ.

"ನನ್ನ ಮಕ್ಕಳು ಕೇವಲ ಸುಶೀಲರಾಗಿಲ್ಲ, ಬುದ್ಧಿವಂತರೂ ಆಗಿದ್ದಾರೆ. ಮಕ್ಕಳ ಬುದ್ಧಿಗೆ ತಂದೆಯ ಪುಣ್ಯವೇ ಕಾರಣವಂತೆ. ನಿಮ್ಮ ಮಕ್ಕಳು ಬುದ್ಧಿವಂತರಾಗಿದ್ದಾರೆ. ಈ ಪುಣ್ಯ ನಿಮ್ಮದು." ಧರ್ಮಪತ್ನಿ ಉಲ್ಲಸಿತಳಾಗಿ ಹೇಳಿದಳು.

"ಈ ಪುಣ್ಯ ಹಿರಿಯರದು. ಈ ಪುಣ್ಯ ದೇವರು ದಯಪಾಲಿಸಿದ ದೇಣಿಗೆ. ನಾವು ಅವನನ್ನೇ ಕೊಂಡಾಡಬೇಕು."

ಹೀಗೆ ಮಾತನಾಡಿದ ಭಟ್ಟರಲ್ಲಿ ಸಂತೃಪ್ತಿಭಾವ ನೆಲೆಗೊಂಡಿತು.

ಭಟ್ಟರ ವ್ಯಕ್ತಿತ್ವವು ಇಷ್ಟು ವಿಕಾಸವಾಗಿ ನಿಲ್ಲಲು ಅವರ ನಿಸ್ವಾರ್ಥ ಸೇವೆಯೇ ಕಾರಣವಾಗಿದ್ದಿತು. ಅವರ ಧರ್ಮಬುದ್ಧಿ ಪೋಷಕವಾಗಿದ್ದಿತು. ಇತ್ತೀಚೆಗೆ ಭಟ್ಟರ ಶಿಷ್ಯಸಮುದಾಯವು ಇನ್ನೂ ಹೆಚ್ಚಾಗತೊಡಗಿತು. ಅಧ್ಯಯನವನ್ನು ಪೂರ್ತಿಗೊಳಿಸಿ ಒಬ್ಬ ಶಿಷ್ಯನು ಹೋದರೆ ಅವನ ಸ್ಥಳದಲ್ಲಿ ಇಬ್ಬರು ಬರತೊಡಗಿದರು. ಈ ಭಾರವನ್ನು ಅವರು ಸಂತೋಷವಾಗಿಯೇ ಹೊರತೊಡಗಿದರು. ಅವರಿಗೆ ಈ ಕಾರ್ಯದಲ್ಲಿ ಸಮಾಜದ ಬೆಂಬಲ ಸಿದ್ಧವಾಗಿತ್ತು. ಅಲ್ಲದೆ ಈಗ 'ದತ್ತಿ'ಯ ಹೊಲಗಳಿಂದ ಬೇಕಾದಷ್ಟು ಕಾಳುಕಡಿಗಳು ಬರತೊಡಗಿದ್ದುವು. ಮಧುಕರಿಯ ಮೇಲೆಯೇ ಕೈಯೂರುವ ಪ್ರಸಂಗ ತಪ್ಪಿಹೋಯಿತು. ಬರುವ ಕಾಳುಗಳೆಲ್ಲ ಶಿಷ್ಯರ ಪೋಷಣೆಗೆ ಸಾಕಾಗಿ ಉಳಿಯತೊಡಗಿದುವು. ಮಿಕ್ಕ ಕಾಳುಗಳನ್ನು ಬಡಬಗ್ಗರಿಗೆ ದಾನ ಮಾಡತೊಡಗಿದರು. ಅವರು ವ್ಯಕ್ತಿಯಾಗಿ ಬಾಳದೆ ಸಂಸ್ಥೆಯಾಗಿ ಜೀವನ ಸಾಗಿಸತೊಡಗಿದರು. ಮಾವಿನ ಹಣ್ಣಿನ ಸುಗ್ಗಿಯಲ್ಲಿ ಭಟ್ಟರ ಮನೆಯ ಮುಂದೆ ಚಿಕ್ಕ ಮಕ್ಕಳ ಗುಂಪೇ ನೆರೆಯುತ್ತಿತ್ತು. 'ಅಡಿಕೆ' ಮಾವುಗಳನ್ನು ಚೀಪಿ ಚೀಪಿ ಗೊರಟೆಗಳನ್ನು ಒಗೆಯುತ್ತಿರುವ ಮಕ್ಕಳಲ್ಲಿ ಭಟ್ಟರು ಬಾಲಕೃಷ್ಣನ ರೂಪವನ್ನು ಕಾಣತೊಡಗಿದರು. ಮಕ್ಕಳು ತಿಂದಷ್ಟೂ ಕಡಿಮೆಯೇ. ಬುಟ್ಟಿಯಲ್ಲಿ ತುಂಬಿತುಂಬಿ ಧರ್ಮಪತ್ನಿ ಕೊಡುವರು. ಮಾವಿನ ಗಿಡವಿಲ್ಲದ ಮನೆಗಳಲ್ಲಿ ಭಟ್ಟರ 'ಸಬ್ಬಸಿಗಿ' ಮಾವಿನ ಉಪ್ಪಿನಕಾಯಿಗಳೇ. ಬಾಳೆ ಮಾವು ತಂಬಿಗೆಯಷ್ಟು ಗಾತ್ರದಲ್ಲಿ ಬೆಳೆಯುತ್ತಿತ್ತು. ಆ ಮಧುರ ರಸದ ಸೀಕರಣೆಯನ್ನು ಗಂಗನಹಳ್ಳಿಯಲ್ಲಿ ತಿನ್ನದ ಜನವಿಲ್ಲ. ಜನರು ತಿಂದಷ್ಟೂ ಹಣ್ಣು ಹುಲುಸಾಗುವದೆಂಬ ಭಾವ ಭಟ್ಟರಲ್ಲಿ ನೆಲೆಯೂರಿತು. ಹೀಗೆ ಭಟ್ಟರದೆಲ್ಲ

ಸೊತ್ತು ಜನರದಾಗಿತ್ತು. ಜನರೆಂದರೆ ಅವರ ಪ್ರಾಣಪದಕ. ಭಟ್ಟರೆಂದರೆ ಜನದ ಜೀವನಾಡಿ. ಈ ಭಾಗ್ಯ ಭಟ್ಟರಿಗೆ ಮೀಸಲಾಗಿತ್ತು.

ಅವರ ಜೀವನವಿಕಾಸವು ನೋಡುವಂತಹದಿತ್ತು. ಅವರಿಗೆ ಕೇವಲ ವ್ಯಕ್ತಿವಿಕಾಸದಲ್ಲಿ ನಂಬಿಕೆಯಿರಲಿಲ್ಲ. ಸಮಾಜವನ್ನು ಬಿಟ್ಟು ವ್ಯಕ್ತಿತ್ವ ಬೆಳೆಯಬಾರದೆಂದು ಅವರ ನಂಬಿಗೆ. ಹೀಗೆಂದ ಮಾತ್ರಕ್ಕೆ ಅವರು ವ್ಯಕ್ತಿ ವಿಕಾಸವನ್ನು ಕಡೆಗಣಿಸಿದರೆಂದಲ್ಲ. ಅವರ ವಿಕಾಸ ಸರ್ವತೋಮುಖ ವಾಗಿತ್ತು. ಸಂಸಾರಧರ್ಮವನ್ನು ಪಾಲಿಸಿ ಹಿರಿಯ ಸಂಸಾರಿಗರಾಗಿ ಬಾಳಿದರು. ಆಧ್ಯಾತ್ಮಜೀವನವನ್ನು ಅಳವಡಿಸಿಕೊಂಡು ವೇದಾಂತಿಗಳಾಗಿ ಬಾಳಿದರು. ಸಮಾಜಜೀವನವನ್ನು ಅರಿತುಕೊಂಡು ಸಮಾಜಧರ್ಮವನ್ನು ಪಾಲಿಸುತ್ತ ಸಮಾಜಸೇವೆಯನ್ನು ಮಾಡಿದರು. ಹೀಗಾಗಿ ಅವರ ವೈಯ ಕ್ತಿಕ ವಿಕಾಸವು ಸಮಾಜವಿಕಾಸದೊಡನೆ ಬೆಳೆದು ನಿಂತಿತು. ಸುತ್ತಲಿನ ಬದುಕು ಅವರಿಗೆ ಸ್ಫೂರ್ತಿದಾಯಕವಾಗಿ ಪರಿಣಮಿಸಿತು. ಈ ಸ್ಫೂರ್ತಿ ಜೀವನದುದ್ದಕ್ಕೂ ಬಲಿತು ನಿಂತಿತು. ಅವರಿಗೆ ಸಮಾಜಸೇವೆಯೇ ಕರ್ತವ್ಯ ವಾಗಿಬಿಟ್ಟಿತು.

ಒಮ್ಮೆ ಗುರುಲಿಂಗಶೆಟ್ಟರು "ಭಟ್ಟಾ! ನಮಗೂ ವಯಸ್ಸಾಗುತ್ತ ಬಂತು. ಈ ಸಂಸಾರದ ತಿರುಗಣಿಯಲ್ಲಿ ಸಾಕಷ್ಟು ತಿರುಗಿ ದಣಿದದ್ದಾಯಿತು. ಇದರಿಂದ ಬಿಡುಗಡೆಯೇ ಇಲ್ಲವೆಂದು ತೋರುತ್ತದೆ. ನೀನು ಒಪ್ಪಿದರೆ ಕಾಶೀ ವಿಶ್ವೇಶ್ವರನ ದರ್ಶನ ಮಾಡಿಕೊಂಡು ಬರಬೇಕೆಂದು ಮಾಡಿದ್ದೇನೆ. ನಿನ್ನ ಜತೆ ನನಗೆ ಬೇಕು. ಈ ಯಾತ್ರೆಯನ್ನು ಕೈಕೊಳ್ಳೋಣ" ಎಂದಾಗ ಭಟ್ಟರು "ಶೆಟ್ಟಿ! ನೀನೆಂತಹ ಹುಚ್ಚನಪ್ಪಾ! ವಿಶ್ವೇಶ್ವರನ ದರ್ಶನಕ್ಕಾಗಿ ಕಾಶಿಗೆ ಹೋಗಬೇಕೇ? ಗಂಗನಹಳ್ಳಿಯಲ್ಲಿ ಆ ವಿಶ್ವೇಶ್ವರನು ಇಲ್ಲವೆಂದು ನಿನ್ನ ಅಭಿ ಪ್ರಾಯವೆ? ದೇವರನ್ನು ನಾವು ಇಷ್ಟು ಸಂಕುಚಿತ ಭಾವದಿಂದ ನೋಡ ಬೇಕೆ? ವಿಶ್ವೇಶ್ವರನು ಇಲ್ಲಿಯೂ ಇದ್ದಾನೆ. ಜನತಾ ಹೃದಯವೇ ಅವನ ದೇಗುಲವಾಗಿದೆ. ಜನರ ಸೇವೆಯೇ ವಿಶ್ವೇಶ್ವರನ ಸೇವೆಯಾಗಿದೆ. ನಾವು ಸಾಯುವವರೆಗೆ ಈ ಸೇವೆಯಲ್ಲಿಯೇ ಈ ದೇಹವನ್ನು ಸವಿಸಬೇಕು. ಜನರ ಹೃದಯವೇ ಕಾಶಿ, ಅದೇ ರಾಮೇಶ್ವರ" ಎನ್ನಲು ಗುರುಲಿಂಗಶೆಟ್ಟರು ಈ ಯಾತ್ರೆಯ ಮಾತನ್ನು ಮುಂದೆ ಎಂದಿಗೂ ಎತ್ತಲಿಲ್ಲ.

ವಿಶ್ವೇಶ್ವರಭಟ್ಟರ ಹಿರಿಯ ವ್ಯಕ್ತಿತ್ವದ ಹೆಗ್ಗುರುತು ಇದು.

ಸಮಾಜದಲ್ಲಿ ಅಪಾರವಾದ ವರ್ಚಸ್ಸು, ಗಣ್ಯತೆ, ಸಂಸಾರದಲ್ಲಿ ಅನು ಕೂಲರಾದ ಮಕ್ಕಳು, ನೆಮ್ಮದಿಯ ಜೀವನ, ಎಲ್ಲಕ್ಕೂ ಹೆಚ್ಚಾಗಿ ಅನು

ಕೂಲಳಾದ ದೇವತೆ ಧರ್ಮಪತ್ನಿ. ಹೀಗಿರುವಾಗ ಭಟ್ಟರ ಜೀವನದಲ್ಲಿ ಕೊರತೆ ಎಲ್ಲಿಂದ ಬರಬೇಕು ? ಅವರು ಇಳಿವಯುಸ್ಸಿನಲ್ಲಿ ತೃಪ್ತಿವಂತರಾಗಿ ಬಾಳತೊಡಗಿದರು. ಅವರ ಜೀವನ ಅವರಲ್ಲಿ ಅಪೂರ್ವವಾದ ಶಾಂತಿಯನ್ನು ದಯಪಾಲಿಸಿತು. ಈ ಶಾಂತಿಯಲ್ಲಿ ಅವರು ತೇಲತೊಡಗಿದರು.

ಆದರೆ ಜೀವನದಲ್ಲಿ ಶಾತಿಯೆಂಬುದು ಕೇವಲ ಬುರುಗೆಂಬುದನ್ನು ತಿಳಿದ ಅನುಭಾವಿಗಳು ಹೇಳಿರುವುದು ಸುಳ್ಳಲ್ಲ. ಈ ಮಾತು ಭಟ್ಟರ ಪ್ರತ್ಯಯಕ್ಕೆ ಬಂದದ್ದು ದುರ್ದೈವ.

ನಾಗಪಂಚಮಿಯ ಮುನ್ನಾ ದಿನ ಧರ್ಮಪತ್ನಿ ನಾಗಮೂರ್ತಿಗಳಿಗೆ ಹಾಲೆರೆಯಲು 'ಪಾರ್ವತಿಯ ಕಟ್ಟೆ'ಯ ಕಡೆಗೆ ಪೂಜಾ ಸಾಮಗ್ರಿಗಳೊಡನೆ ಹೊರಟರು. ಅಂದು ನೆಟ್ಟ ಆಲದ ಸಸಿಯು ಇಂದು ಮರವಾಗಿತ್ತು. ಆ ಮರದ ಬುಡದಲ್ಲಿ ಐದು ಕಲ್ಲಿನ ನಾಗರಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಊರ ಜನವೆಲ್ಲ ಈ ಮೂರ್ತಿಗಳಿಗೆ ನಾಗಚವತಿಯ ದಿನ ಹಾಲೆರೆದು ಬರುವುದು ಪರಿಪಾಠವಾಗಿ ಬಿಟ್ಟಿತ್ತು. ಪಾರ್ವತಿಯ ನೆನಪಿಗಾಗಿ ಹಳ್ಳಿಯವರೇ ಈ ಪದ್ಧತಿಯನ್ನು ಅಮಲಿನಲ್ಲಿ ತಂದುದಾಗಿತ್ತು. ಮುತ್ತೈದೆಯರು ಈ ದಿನ ಈ ನಾಗಗಳ ಪೂಜೆಮಾಡಿ ಹಂಗನೂಲು, ಕುಬಸಗಳನ್ನು ಏರಿಸಿ, ಅಳ್ಳಿಟ್ಟು ತಂಬಿಟ್ಟುಗಳ ನೈವೇದ್ಯ ತೋರಿಸಿ ತಮ್ಮ ಆಪ್ತೇಷ್ಟರ ಹೆಸರಿನಲ್ಲಿ ಹಾಲನ್ನು ಸಮರ್ಪಿಸಿ ಬರುತ್ತಿದ್ದರು. ಹೀಗೆ ಮಾಡಿದರೆ ನಾಗದೇವರು ತೃಪ್ತರಾಗಿ ವರುಷಾನುವರುಷ ಕಾಯುವರೆಂದು ಅವರ ನಂಬಿಕೆಯಾಗಿತ್ತು.

ಆ ದಿನ ಧರ್ಮಪತ್ನಿ ಈ ನಾಗಗಳ ಪೂಜೆ ಮಾಡಿದರು. ನೈವೇದ್ಯ ಸಮರ್ಪಿಸಿದರು. ಬಂದ ಮುತ್ತೈದೆಯರಿಗೆ ಅರಿಶಿಣ ಕುಂಕುಮ ಹಚ್ಚಿದರು. ಮತ್ತೊಮ್ಮೆ ಮಂಡಿಯೂರಿ ನಾಗಗಳಿಗೆ ನಮಿಸಿದರು. ಕೊನೆಯಸಲ ನಮಿಸಿ ಏಳುವಾಗ ಆ ದಿನ ಅವರ ದುಃಖ ಒತ್ತರಿಸಿ ಬಂದಿತು. ಪಾರೂ! ಪಾರೂ!! ಎಂದು ಬಿಕ್ಕಳಿಸಿದರು. ಸರಸ್ವತಿಗೆ ಧರ್ಮಪತ್ನಿಯ ದುಃಖದ ಅರಿವಾಗಿ "ಈ ನೆನಪು ತಾಯಿಯನ್ನು ಸಾಯುವವರೆಗೂ ಕಾಡುತ್ತದೆ ನಮ್ಮವ್ವಾ. ಮಕ್ಕಳ ಸಾವೆಂದರೆ ನೊಣದ ಪಾಯಸ"ವೆಂದು ಸಮಾಧಾನ ಹೇಳಿದಳು.

"ಅಲ್ಲ ಸರಸ್ವತಿ ! ಈ ಮರ ಎಷ್ಟು ಬೆಳೆದು ನಿಂತಿದೆ ನೋಡು. ನನ್ನ ಪಾರ್ವತಿಯ ಮರ. ಈ ದಿನ ನಾನು ಅವಳನ್ನು ಕಂಡೆ. ಅವಳು ತಂಬಿಟ್ಟನ್ನು ಕಸಿದುಕೊಂಡು ಬಿಟ್ಟಳು" ಎಂದರು.

"ಇದು ನಿಮ್ಮ ಭ್ರಮೆ. ನಿಮ್ಮ ಪಾರ್ವತಿಗೆ ಸ್ವರ್ಗದಲ್ಲಿ ಅಮೃತದ ಉಣಸು ಸಿಗುತ್ತಿರುವಾಗ ಈ ತಂಬಿಟ್ಟನ್ನೇನು ಮಾಡಿಯಾಳು!"

"ತಾಯಿಯು ತಂಬಿಟ್ಟು ಸರಸ್ವತೀ! ಅವಳು ಕಿತ್ತುಕೊಂಡಳು. ನನ್ನನ್ನೂ ಜಗ್ಗಿದಳು. ಅವ್ವಯ್ಯಾ!" ಎಂದು ಧರ್ಮಪತ್ನಿ ಗಡಗುಟ್ಟಿ ನಡುಗತೊಡಗಿದರು.

ಈ ನಡುಕ ನಿಲ್ಲದಾಗಲು ಸರಸ್ವತಿ ಕೈಹಿಡಿದುಕೊಂಡು ಧರ್ಮಪತ್ನಿಯನ್ನು ಮನೆಗೆ ಬಿಟ್ಟುಹೋದಳು. ಧರ್ಮಪತ್ನಿ ತಲೆಶೂಲೆಯೆಂದು ಹಾಸಿಗೆ ಹಾಸಿ ಮಲಗಿಬಿಟ್ಟರು. ಮೈಯಲ್ಲಿ ಜ್ವರ ಕಾಣಿಸಿಕೊಂಡಿತು. ಜೋಳದ ಕಾಳು ಅರಳಾಗುವಂತೆ ಮೈ ಕಾದು ಕೆಂಡವಾಯಿತು.

ವಿಶ್ವೇಶ್ವರಭಟ್ಟರು ಗಡಬಡಿಸಿದರು. ಕೂಡಲೇ ಮೈತುಂಬ ಅಂಗಾರ ಹಚ್ಚಿ ಔಷಧೋಪಚಾರ ಮಾಡತೊಡಗಿದರು. ಜ್ವರ ನಿಲ್ಲದಾಯಿತು. ಇಡೀ ರಾತ್ರಿ ಬಡಬಡಿಕೆ. ಯಾರ ಕಣ್ಣಿಗೂ ನಿದ್ರೆ ತರಿಸಲಿಲ್ಲ. ಶಿಷ್ಯರು ಹೌಹಾರಿದರು. ಮಕ್ಕಳು ದಿಕ್ಕುಗಾಣದವರಾದರು. ಓಣಿಯ ಜನ ತತ್ತರಿಸಿದರು.

ಮರುದಿನವೂ ಹಾಗೆಯೇ. ಭಟ್ಟರು ದಿಙ್ಮೂಢರಾಗಿ ಸುಮ್ಮನೆ ಅತ್ತ ಇತ್ತ ಅಲೆಯತೊಡಗಿದರು. ಅವರಿಗೆ ಜಗತ್ತು ಶೂನ್ಯವಾದಂತೆ ಅನ್ನಿಸತೊಡಗಿತು.

"ಧರ್ಮಪತ್ನಿ ಬೆದರಿದ್ದಾರೆ" ಎಂದು ಸರಸ್ವತಿ ನಡೆದ ವೃತ್ತಾಂತವನ್ನು ಹೇಳಲು, ಭಟ್ಟರು 'ಹಾಂ!' ಎಂದು ಉಸುರುಗರೆದರು.

ಸಾಯಂಕಾಲವಾದರೂ ಧರ್ಮಪತ್ನಿಯ ಜ್ವರವಿಳಿಯಲಿಲ್ಲ. ಬಡಬಡಿಕೆ ಒಂದೇ ಸಮನೆ ಸಾಗಿತ್ತು. ಭಟ್ಟರು ದೇವರ ಮನೆಯನ್ನು ಪ್ರವೇಶಿಸಿ ಸಂಧ್ಯಾವಂದನೆಯನ್ನು ಮುಗಿಸಿದರು. ಧರ್ಮಪತ್ನಿ ಬೆದರಿದ್ದೇ ನಿಜವಾದರೆ ಅವರಿಗೆ ಶಿವಕವಚದ ಅಂಗಾರವನ್ನು ಮಾಡಬೇಕೆಂದು ನಿರ್ಧಾರಮಾಡಿ ಸನ್ನದ್ಧರಾದರು. ಮಂತ್ರಗಳಿಂದ ಭೂತಪತಿಯನ್ನು ಆಹ್ವಾನಿಸಿ ಪಾರಾಯಣ ಮಾಡತೊಡಗಿದರು.

ಮೂರು ದಿನಗಳ ಮೇಲೆ ಜ್ವರವೇನೋ ತುಸು ಇಳಿಮುಖವಾಯಿತು. ಆದರೆ ಸಂಪೂರ್ಣ ನಿಲ್ಲಲಿಲ್ಲ. ಆ ಮಟ್ಟಿಗೆ ಧರ್ಮಪತ್ನಿ ಕಣ್ಣು ತೆರೆದರು. ನೀಲಕಂಠ "ಅವ್ವಾ!" ಎಂದು ಬಾಯಿತುಂಬಾ ಕರೆದು ಹತ್ತಿರದಲ್ಲಿಯೇ ಕುಳಿತು ಹಣೆ ಮುಟ್ಟಿದ. ಜ್ವರ ಇನ್ನೂ ಸಾಕಷ್ಟು ಪ್ರಬಲವಾಗಿಯೇ ಇತ್ತು. ಧರ್ಮಪತ್ನಿ ತನ್ನ ಅಂತರಂಗದ ಕಳವಳವನ್ನು ಹತ್ತಿಕ್ಕಿಕೊಂಡು ಸುತ್ತಲೂ ನೋಡಿದರು. ನರಹರಿ ಗಾಬರಿಯಾಗಿ ನಿಂತಿದ್ದನು. ಸದಾಶಿವನು ಮುಗ್ಗುಲಲ್ಲಿಯೇ ಕುಳಿತಿದ್ದನು. ಭಟ್ಟರು ಎಡೆಯಾಡುತ್ತಿದ್ದರು. ಯಾರ ಮುಖದ ಮೇಲೂ ಕಳೆ ಇರಲಿಲ್ಲ.

ಧರ್ಮಪತ್ನಿ ನಾಲಗೆಯನ್ನು ಸವರಿಕೊಳ್ಳುತ್ತಿರುವದನ್ನು ನೋಡಿ ಭಟ್ಟರು "ನಿನಗೆ ಬಾಯಾರಿಕೆಯೇ? ಸ್ವಲ್ಪ ನೀರು ಕುಡಿಸಲೇ" ಎಂದು ಕೇಳಿದರು. ಧರ್ಮಪತ್ನಿ ಸಮ್ಮತಿಯನ್ನು ಸೂಚಿಸಲು ಸ್ವತಃ ಭಟ್ಟರೇ ತೀರ್ಥದ ಸೌಟಿನಿಂದ ಮುಗ್ಗುಲಲ್ಲಿ ಕುಳಿತು ಹನಿಹನಿಯಾಗಿ ನೀರು ಕುಡಿಸಿದರು. ಅವರು ಬಾಗಿ ನೀರು ಕುಡಿಸುತ್ತಿರುವಾಗ ಬಿಸಿಯಾದ ಎರಡು ಕಣ್ಣು ಹನಿಗಳು ಧರ್ಮಪತ್ನಿಯ ಮುಖದ ಮೇಲೆ ಬೀಳಲು ಅವರು ಪತಿಯ ಮುಖವನ್ನು ನೋಡಿದರು. ಅವರ ಕಣ್ಣುಗಳೂ ತೇವಗೊಂಡು ರೆಪ್ಪೆ ಬಡಿದಂತೆ ಹನಿಗಳು ಉದುರತೊಡಗಿದವು. ಇದನ್ನು ಭಟ್ಟರು ನೋಡಿದಾಗ ಅವರಿಗೆ ಕಸಿವಿಸಿಯಾಯಿತು. "ನಿನ್ನ ಆರೋಗ್ಯ ಚಿಂತನೆಯಲ್ಲಿ ಮಕ್ಕಳು ಗಾಬರಿಯಾಗಿದ್ದಾರೆ ಧರ್ಮಪತ್ನಿ! ಪಾಪ! ಮೂರು ದಿನಗಳಿಂದಲೂ ಒಂದು ಅಗಳನ್ನೂ ಮುಸುರೆ ಮಾಡಿಲ್ಲ" ಎಂದು ಭಟ್ಟರು ನುಡಿಯಲು ಧರ್ಮಪತ್ನಿ ಪಳಕ್ಕನೇ ಕಣ್ಣು ತೆರೆದು ಸುತ್ತಲೂ ನೋಡಿ ಮುಗುಳುನಗೆಯನ್ನು ಮುಖದಲ್ಲಿ ಎಳೆದು ತಂದು "ಹುಚ್ಚಮ್ಮಗಳು. ನನಗೇನಾಗುತ್ತದೆ? ನನಗೆ ಜ್ವರ ಬರಬಾರದೆಂದಿದೆಯೆ? ಇನ್ನೆರಡು ದಿನಗಳಲ್ಲಿ ಎದ್ದು ಓಡಾಡುವೆ" ಎಂದು ಮಂದವಾದ ದನಿಯಲ್ಲಿ ಹೇಳಿ ಸದಾಶಿವನನ್ನು ಬರಸೆಳೆದುಕೊಂಡರು. ಸದಾಶಿವನು ಬಿಕ್ಕಿ ಬಿಕ್ಕಿ ಅಳತೊಡಗಿದನು.

"ಹುಚ್ಚಪ್ಪಾ!" ಎಂದು ಧರ್ಮಪತ್ನಿ ಅವನ ಬೆನ್ನ ಮೇಲೆ ಕೈಯಾಡಿಸತೊಡಗಿದರು.

"ಶಿವಕವಚದ ಅಂಗಾರ ರಕ್ಷೆಯನ್ನು ಮಾಡಿದ್ದೇನೆ ಧರ್ಮಪತ್ನಿ! ಯಾವ ಭೂತವೂ ನಿನ್ನನ್ನು ಕಾಡಿಸಲಾರದು. ನೀನು ಧೈರ್ಯದಿಂದಿರು. ನಾನಿರುವಾಗ ನಿನಗೆ ಅಧೈರ್ಯವೇ" ಎಂದು ಭಟ್ಟರು ಪಿಸುಮಾತಿನಲ್ಲಿ ಹೇಳಲು,

"ನನಗೆ ಭೂತಚೇಷ್ಟೆಯಾಗಿದೆಯೆಂದು ನಿಮಗಾರು ಹೇಳಿದರು? ಭೂತಕ್ಕೆ ಆಶ್ರಯ ಕೊಡುವಷ್ಟು ಈ ದೇಹ ಅಪವಿತ್ರವೆ? ಸುಮ್ಮನೆ ಇಲ್ಲದ್ದನ್ನು ಹೇಳುವಿರಿ. ಬಂದ ಜಡ್ಡು ಒಮ್ಮೆಲೆ ಹೇಗೆ ಹೋದೀತು? ಈ ದಿನ ಸ್ವಲ್ಪ ಚೇತರಿಸಿಕೊಳ್ಳುವಂತಾಗಿದೆ. ಇನ್ನೆರಡು ದಿನ ಹೋಗಲಿ. ಎದ್ದು ಓಡಾಡುತ್ತೇನೆ."

ಈ ಮಾತುಗಳು ಬರಿಯ ಧೈರ್ಯದ ಮಾತುಗಳಾಗಿದ್ದವೆಂಬುದನ್ನು ವಿಶ್ವೇಶ್ವರಭಟ್ಟರು ಧರ್ಮಪತ್ನಿಯ ಸೊರಗಿದ ದೇಹವನ್ನು ನೋಡಿ ತಿಳಿದುಕೊಂಡರು. ಆದರೂ ಜೀವ ನಿಲ್ಲಲಾರದೆ,

"ಕುರುಡ ಬಯಸುವದು ಕಣ್ಣುಗಳನ್ನೇ ಧರ್ಮಪತ್ನಿ ! ನೀನು ಮಲಗಿ ದಂದಿನಿಂದ ನನ್ನ ಕೈಕಾಲುಗಳೇ ಆಡದಾಗಿವೆ. ನೀನು ಎದ್ದು ಓಡಾಡಿದರೆ ನಾನು...." ಭಟ್ಟರ ಕಂಠ ಉಬ್ಬಿ ನಿಂತಿತು.

"ನೀವೂ ಮಗುವಿನಂತೆ ಮಾಡುವಿರಲ್ಲ. ಈ ಕಣ್ಣುಹನಿಗಳನ್ನು ನಾನು ನೋಡಬಾರದು ತಾಯಿ ! ನೀವೇ ಕೈಕಾಲು ಕಳೆದುಕೊಂಡರೆ ಮಕ್ಕಳ ಗತಿ ಯೇನು ? ಶಿಷ್ಯರು ಹೌಹಾರಲಾರರೆ? ನಿಮಗೆ ನನ್ನ ಕೊರಳಾಣೆಯಾಗಿದೆ. ನೀವು ಕಣ್ಣೀರು ಹಾಕಬೇಡಿರಿ. ನನಗೇನೂ ಆಗುವದಿಲ್ಲ." ಇಷ್ಟು ಮಾತ ನಾಡಿ ಧರ್ಮಪತ್ನಿ ಮತ್ತೆ ಕಣ್ಣುಮುಚ್ಚಿದರು. ಉದ್ವೇಗದ ಪರಿಣಾಮ ವಾಗಿಯೋ ಎಂಬಂತೆ ಜ್ವರ ಮತ್ತೆ ಏರತೊಡಗಿತು. ಅಭ್ರಮ ಶುಭ್ರಮ ಮತ್ತೆ ಮೊದಲಾಯಿತು. ಬಡಬಡಿಕೆ ಜೋರಾಗತೊಡಗಿತು. ಈ ಅವಸ್ಥೆ ಯನ್ನು ನೋಡಿ ಭಟ್ಟರು ಮುಂದುಗಾಣದಾದರು.

ಧರ್ಮಪತ್ನಿಯ ಈ ಅವಸ್ಥೆಯು ಮುಂದೆ ಏಳು ದಿನಗಳವರೆಗೆ ಅಖಂಡ ವಾಗಿ ಸಾಗಿತು. ಅವರ ದೇಹಾರೋಗ್ಯದ ಪರಿಸ್ಥಿತಿ ತೀರಾ ಚಿಂತಾಜನಕವಾಗಿ ಬಿಟ್ಟಿತು. ಮಾಡಬೇಕಾದ ಉಪಾಯಗಳನ್ನು ಮಾಡಿಯಾಯಿತು. ಸಾಂಗ ಲಿಯ ಸುಪ್ರಸಿದ್ಧರಾದ ವೈದ್ಯರನ್ನು ಕರೆತರಲು ಆಗಲೇ ಕಳುಹಲಾಗಿತ್ತು. ಊರ ಜನರಿಗೆ ಧರ್ಮಪತ್ನಿಯ ಚಿಂತೆ ಹಿರಿದಾಗಿ ತೋರಿತು. ಶಿಷ್ಯಸಮೂ ಹವು ತಬ್ಬಲಿಗಳಂತೆ ಬಾಯಿಬಿಡಹತ್ತಿತು. ಮಕ್ಕಳ ಅವಸ್ಥೆಯನ್ನು ಬಣ್ಣಿಸು ವುದೇ ಬೇಡ. ಸದಾ ಚೇತನರಾದ ಭಟ್ಟರು ಧರ್ಮಪತ್ನಿಯ ಹಾಸಿಗೆಯ ಹತ್ತಿರ ನಿರಂತರ ಕುಳಿತುಬಿಟ್ಟರು. ಅವರ ನಿಟ್ಟುಸಿರು ಮರ್ಮಭೇದಕವಾಗಿ ಹೊರಸೂಸತೊಡಗಿತು.

ಹನ್ನೊಂದನೆಯ ದಿನ ಧರ್ಮಪತ್ನಿ ಬೆಳಗಿನ ಜಾವದಲ್ಲಿ ತಮ್ಮ ಭಾರ ವಾದ ರೆಪ್ಪೆಗಳನ್ನು ಮೆಲ್ಲನೆ ತೆರೆದು ಸುತ್ತಲೂ ನೋಡಿದರು. ಹಾಸಿಗೆಯ ಸುತ್ತಲೂ ಮಕ್ಕಳು, ಶಿಷ್ಯರು, ಕೈಹೊತ್ತುಕೊಂಡು ಕುಳಿತ ಪತಿದೇವ.

"ಬೆಳಗಾಯಿತೆ? ನೀವೇಕೆ ಎಲ್ಲರೂ ಹೀಗೆ ಕುಳಿತಿರುವಿರಿ? ಇವರೆಲ್ಲಿ?" ಧರ್ಮಪತ್ನಿಯ ಕಣ್ಣುಗಳು ಭಟ್ಟರನ್ನು ಅರಸತೊಡಗಿದವು.

"ನಾನಿಲ್ಲಿಯೇ ಇದ್ದೇನೆ ಧರ್ಮಪತ್ನಿ! ನೀನು ಮಾತನಾಡಿ ದಣಿದು ಕೊಳ್ಳಬೇಡ."

"ಈ ದಿನ ನನ್ನ ದಣಿವು ಮಾಯವಾಗಿಬಿಟ್ಟಿದೆ. ನನ್ನ ಜಡ್ಡು ಬಿಟ್ಟು ಹೋಗಿದೆ. ನೀವು ಗಾಬರಿಯಾಗುವ ಕಾರಣವಿಲ್ಲ."

"ನೀನು ಮಾತನಾಡಬೇಡ ಅವ್ವಾ!" ಸದಾಶಿವನು ತಾಯಿಯ

ಮುಗ್ಗುಲಿಂದಲೇ ಹೇಳಿದನು.

"ಇವರೆಲ್ಲಿ ಬಾಳಾ? ಸ್ವಲ್ಪ ಕರೆಯುವಿಯಾ?"

"ನಾನಿಲ್ಲಿಯೇ ಇದ್ದೇನೆ. ಸುಮ್ಮನೆ ದಣಿದುಕೊಳ್ಳಬೇಡ."

"ದೇವರ ಮನೆಯಿಂದ ಕುಂಕುಮದ ಕರಡಿಗೆಯನ್ನು ತಂದುಕೊಡು ನರಹರೀ!"

"ಹೀಗೇಕೆ ಮಾತನಾಡುವಿಯೇ ಅವ್ವಾ!" ಎನ್ನುತ್ತ ನರಹರಿಯು ಚಂಗನೇ ನೆಗೆದು ಹೋಗಿ ಕರಡಿಗೆಯನ್ನು ತೆಗೆದುಕೊಂಡು ಬಂದನು.

"ನನ್ನ ಮುದ್ದಿನ ಮಗ ನೀನು. ಅದನ್ನು ಅವರ ಕೈಯಲ್ಲಿ ಕೊಡು. ನನ್ನ ಹಣೆ ತುಂಬ ಪಟ್ಟಿಕುಂಕುಮ ಹಚ್ಚಲಿ."

ಮಾತಿನ ರೀತಿ ವಿಚಿತ್ರವಾಗಿತ್ತು. ಭಟ್ಟರು ತತ್ತರಿಸಿದರು.

"ಕೈಯನ್ನು ನಡುಗಿಸಬೇಡಿರಿ. ಹಣೆ ತುಂಬ ಹಚ್ಚಿರಿ. ಅಯ್ಯೋ! ಅಳುತ್ತಿರುವಿರೇಕೆ? ಈ ಕುಂಕುಮ ನನಗೆ ಪವಿತ್ರವಾಗಿದೆ. ಹಾಂ! ಹಾಗೆ ಹಚ್ಚಿರಿ. ಹಣೆಯ ಮೇಲೆ ಕಣ್ಣೀರು ಬೀಳಬಾರದು. ಕುಂಕುಮ ದೊಡ್ಡ ದಾದೀತು."

"ಅವ್ವಾ! ಹೀಗೆಲ್ಲ ಮಾತಾಡಬೇಡ ತಾಯಿ! ಇದೀಗ ಸಾಂಗಲಿಯ ವೈದ್ಯರು ಬರುತ್ತಾರೆ. ನಿನಗೆ ಔಷಧ ಕೊಡುತ್ತಾರೆ." ನೀಲಕಂಠ ತಡೆತಡೆದು ಹೇಳಿದ.

"ನೀನು ಪುಸ್ತಕಗಳನ್ನು ಓದಿದ್ದು ವ್ಯರ್ಥ ನೋಡು ನೀಲಕಂಠಾ! ವೈದ್ಯರಿಂದ ಜೀವ ಬದುಕುತ್ತಿದ್ದರೆ ಜಗತ್ತಿನಲ್ಲಿ ಯಾರೂ ಮರಣಹೊಂದುತ್ತಿರಲಿಲ್ಲ. ನಾನು ಧನ್ಯಳಾಗಿದ್ದೇನೆ. ಇವರ ಪತ್ನಿಯಾಗಿ ಬಾಳು ಸಾಗಿಸಿದ ನನ್ನ ಪುಣ್ಯವೇನು ಕಡಿಮೆಯದೆ? ಥಾಳವಾದ ಕುಂಕುಮ ಹಚ್ಚಿಕೊಂಡು ಇವರ ಮುಂದೆ ಹೋಗುವ ಮುತ್ತೈದೆಯಾಗುವ ಭಾಗ್ಯವೇನು ಸಾಮಾನ್ಯವೆ? ಹುಚ್ಚ ನೀನು. ಸುಮ್ಮನೇ ಕಣ್ಣೀರು ಹಾಕುತ್ತಿ!"

"ಅವ್ವಾ! ಅವ್ವಾ!" ನೀಲಕಂಠ ಬಿಕ್ಕಳಿಸಿದ.

"ಅವನನ್ನು ಹೊರಗೆ ಕಳಿಸಿಬಿಡಿರಿ. ಅವನು ತೀರಾ ಪುಕ್ಕ. ಅಯ್ಯೋ? ನೀವೆಲ್ಲಿ? ಹಾಂ! ಹೀಗೆ ನಿಮ್ಮ ಕೈಯನ್ನು ತನ್ನಿರಿ."

ಭಟ್ಟರ ನಡುಗುತ್ತಿರುವ ಕೈಯನ್ನು ಧರ್ಮಪತ್ನಿ ಕಣ್ಣುಗಳಿಗೆ ಒತ್ತಿಕೊಂಡರು. "ನೀವು ಅಳಬೇಡಿರಿ ಕಂಡಿರಾ? ನಾನು ದುರ್ಭಾಗ್ಯೆ! ನನ್ನಿಂದ ಹೆಚ್ಚಿನ ಸೇವೆಯಾಗಲಿಲ್ಲ. ನಿಮಗೆ ಇನ್ನು ಹಾಲು ಯಾರು ಕೊಡುವವರು? ನೀಲಕಂಠನಿಗೊಂದು ಮದುವೆ ಮಾಡಿಬಿಡಿರಿ. ನನ್ನ ಮುದ್ದು ಸೊಸೆ ಮನೆ

ತುಂಬ ಓಡಾಡಲಿ. ನನಗೂ ಸೊಸೆಯನ್ನು ಕಾಣಬೇಕೆಂಬ ಇಚ್ಛೆ ಇತ್ತು. ಆಗಲಿಲ್ಲ. ಈಗಲಾದರೂ ಏನಾಯಿತು! ನಾನು ಇದ್ದಲ್ಲಿಂದ ಅವಳ ತುಂಬು ಮುಖವನ್ನು ನೋಡಿ ಸಂತೋಷಿಸುತ್ತೇನೆ. ಈ ಮನೆಯ ನಂದಾದೀಪವನ್ನು ಅವಳು ಬೆಳಗುತ್ತಾಳೆ. ಅಯ್ಯೋ! ನೀವು ಥರಥರ ನಡುಗಹತ್ತಿರುವಿರಿ. ಇದೇನು? ಸದಾಶಿವನು ರೋದಿಸಹತ್ತಿರುವನಲ್ಲ! ಹುಚ್ಚಪ್ಪಗಳಿರಾ!"

ಧರ್ಮಪತ್ನಿ ನೀರವವಾದರು. ಕಣ್ಣು ಮುಚ್ಚಿದರು. ಮುಚ್ಚಿದ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತು.

"ಧರ್ಮಪತ್ನಿ! ಧರ್ಮಪತ್ನಿ!"

"ನಾನು ಎಚ್ಚರವಾಗಿದ್ದೇನೆ. ಎಚ್ಚರವಾಗಿಯೇ ಇರುತ್ತೇನೆ. ಈ ಮನೆ ನನ್ನ ಮನೆ....ಈ ಮನೆ....ಹೌದು....ಹಾಂ! ಏನೋ ಹೇಳುತ್ತಿದ್ದೆ...."

ಧರ್ಮಪತ್ನಿ ಭಟ್ಟರ ಕೈಗಳನ್ನು ಮೆಲ್ಲನೆ ಅದುಮುತೊಡಗಿದರು. ಭಟ್ಟರು ಸಾವಕಾಶವಾಗಿ ಆ ಕೈಗಳನ್ನು ಬಿಡಿಸಿಕೊಂಡು ದೇವರ ಮನೆಯಿಂದ ಗಂಗಾಜಲವನ್ನು ತಂದರು. ಧರ್ಮಪತ್ನಿ ಹಸಿಹಸಿಯಾಗಿ ಗಂಗಾಜಲವನ್ನು ಸೇವಿಸತೊಡಗಿದರು.

"ನಿಮ್ಮ ಪಾದಗಳೆಲ್ಲಿ?

"ಧರ್ಮಪತ್ನಿ! ಸ್ವಸ್ಥವಾಗಿ ಮಲಗಿಕೋ. ಆ ಪಾದಗಳು ಎಂದೋ ನಿನ್ನ ಹೃದಯದಲ್ಲಿ ಮೂಡಿಬಿಟ್ಟಿವೆ."

"ನನ್ನ ದೇವರೆ!"

ಧರ್ಮಪತ್ನಿ ಕಣ್ಣು ತೆರೆದು ಬಿರಬಿರನೆ ನೋಡಿದರು.

"ಮಕ್ಕಳನ್ನು ಕರೆಯಿರಿ. ಶಿಷ್ಯರೆಲ್ಲಿ? ಅವರನ್ನೂ ಕರೆಯಿರಿ. ಥೂ! ನಿಮ್ಮ ಬಾಯಿಯೇ ಏಳಲೊಲ್ಲದು....ಹಾಂ....ನನ್ನ ಕಂದಮ್ಮಗಳು ಬಂದರು ....ಶಿಷ್ಯರು....ಹಾಂ....ನಿಮ್ಮ ಗುರುಗಳು....ಹೌದು....ಅವರನ್ನು....ನಿಮ್ಮ ....ಉಡಿಯಲ್ಲಿ....ಅಲ್ಲ....ಹೌದು....ನನ್ನನ್ನು ಎದ್ದು ಕುಳ್ಳಿರಿಸಿ ನೋಡೋಣ ....ಹಾಗೆ....ಹಾಗೆ....ನೀವೆಲ್ಲಿ? ...ಸ್ವಲ್ಪ ನನ್ನ ಎದುರಿಗೆ ನಿಂತು ಇನ್ನೊಮ್ಮೆ ಕುಂಕುಮ ಹಚ್ಚುವಿರಾ? ಹಾಗೆ ಬನ್ನಿರಿ ನನ್ನ ದೇವರೆ...." ಒಮ್ಮೆಲೇ ಭಟ್ಟರ ಪಾದಗಳ ಮೇಲೆ ಬಿದ್ದ ಅವರ ತಲೆ ಹಾಗೆಯೇ ಉರುಳಿಬಿಟ್ಟಿತು.

"ನೀಲಕಂಠಾ! ನಿಮ್ಮ ತಾಯಿ! ನಿಮ್ಮ ತಾಯಿ!"

ಅದೇ ಸಮಯಕ್ಕೆ ದೇಶಪಾಂಡೆ ಕೇಶವರಾಯರೂ, ಗುರುಲಿಂಗಶೆಟ್ಟರೂ ಹೇಮಂತಗೌಡರೂ ಧಾವಿಸುತ್ತ ಬಂದು "ವೈದ್ಯರು ಬಂದರು ಭಟ್ಟರೇ!" ಎಂದು ಕೂಗಿದರು.

"ವೈದ್ಯರ ಉಪಚಾರದಿಂದ ಧರ್ಮಪತ್ನಿ ಈಗಲೇ ಪಾರಾಗಿ ಹೋದಳು ಗೆಳೆಯರೇ!" ಎಂದ ಭಟ್ಟರು ದೊಡ್ಡ ದನಿಯಲ್ಲಿ ರೋದಿಸತೊಡಗಿದರು.

"ಅಯ್ಯೋ! ಅಯ್ಯೋ!" ಗಂಗನಹಳ್ಳಿಯ ಮೂಲೆ ಮೂಲೆಗಳಲ್ಲಿ ಧರ್ಮಪತ್ನಿಯ ಸಾವು ಮಾರ್ದನಿಗೊಂಡಿತು.

"ನನ್ನ ಅರ್ಧ ಜೀವ ಶಿವನ ಸಾನ್ನಿಧ್ಯವನ್ನು ಸೇರಿತು ಶೆಟ್ಟಿ! ಉಳಿದದ್ದು ಇನ್ನರ್ಧ ಮಾತ್ರ" ಎಂದ ಭಟ್ಟರ ನೊಂದ ದನಿ ಎಲ್ಲರ ಕಣ್ಣುಗಳಲ್ಲಿ ನೀರು ತರಿಸಿತು.

ಶುಭ್ರವಾದ ಹೊಚ್ಚ ಹೊಸ ಬಟ್ಟೆಯನ್ನು ಧರ್ಮಪತ್ನಿಗೆ ಉಡಿಸಿ ಆದೀಗ ಸಿದ್ಧಗೊಳಿಸಿದ ಅರಳಿದ ಮಲ್ಲಿಗೆ ದಂಡೆಯನ್ನು ಸರಸ್ವತಿ ಮುಡಿಸಿ ದಳು. ಹಣೆ ತುಂಬ ಕುಂಕುಮ ಹಚ್ಚಿ ದೇಹದ ತುಂಬ ಸಿಂಪಡಿಸಿದಳು. "ನಿನ್ನ ಸಾವು ನನಗೂ ಬರಲಿ ತಾಯಿ! ನೀನು ಪುಣ್ಯವಂತೆ. ಕುಂಕುಮ ಹಚ್ಚಿಕೊಂಡು ಮುತ್ತೈದೆಯಾಗಿ ಯಾತ್ರೆ ಹೊರಟೆ" ಎಂದು ಸರಸ್ವತಿ ಕಣ್ಣೀರ ಹೊಳೆಯಾಗಿ ನುಡಿದಳು.

ಗಂಗನಹಳ್ಳಿಯ ಸುಮಂಗಲೆಯರೆಲ್ಲ ಪ್ರೇತಯಾತ್ರೆಯಲ್ಲಿ ಭಾಗವಹಿಸಿ ದರು. ಇಡೀ ಹಳ್ಳಿಯೇ ಅಲ್ಲಿ ನೆರೆಯಿತು. ಪಾರ್ವತೀ ಕಟ್ಟೆಯ ಮಗ್ಗುಲಲ್ಲಿ ಧರ್ಮಪತ್ನಿ ಚಿತೆಯ ಮೇಲೆ ಮಲಗಿದಳು. ಧರ್ಮಪತ್ನಿ ಕಳೇಬರವಾಗಿ ಯಾರಿಗೂ ಕಾಣಲಿಲ್ಲ. ಆ ಅದ್ಭುತ ಕಾಂತಿ ಎಲ್ಲರನ್ನೂ ಬೆರಗುಗೊಳಿಸಿತು.

ಭಟ್ಟರ ಕಣ್ಣೀರ ಹನಿಗಳು ಆಗಲೇ ಆಟ್ಟಿಸಿಹೋಗಿದ್ದವು. ಅವರು ಗಂಭೀರರಾಗಿ ಚಿತೆಯ ವ್ಯವಸ್ಥೆಯನ್ನು ಮಾಡತೊಡಗಿದರು. ಅಗ್ನಿಸಂಸ್ಕಾರದ ಕೊನೆಯ ಗಳಿಗೆ ಬರುತ್ತಲೇ "ನೀಲಕಂಠಾ! ನಿನ್ನ ತಾಯಿಯ ಕೊನೆಯ ಸೇವೆ...." ಭಟ್ಟರು ದೂರ ಸರಿದು ನಿಂತರು.

ಕ್ಷಣಾರ್ಧದಲ್ಲಿ ಅಗ್ನಿದೇವನ ಒಡಲಲ್ಲಿ ಧರ್ಮಪತ್ನಿ ಬೂದಿಯಾಗ ತೊಡಗಿದರು. ಭಟ್ಟರು ಈ ಅಗ್ನಿಜ್ವಾಲೆಯನ್ನು ರೆಪ್ಪೆ ಬಡಿಯದೆ ನೋಡ ತೊಡಗಿದರು. ಆ ದೃಷ್ಟಿ ಶೂನ್ಯವಾಗಿತ್ತು. ಅನಂತ ವೇದನೆಯ ಕುರು ಹಾಗಿತ್ತು.

೬

ಧರ್ಮಪತ್ನಿಯ ಮರಣದಿಂದುಂಟಾದ ಆಘಾತವನ್ನು ಸಹಿಸಿಕೊಂಡು ಚೇತ ರಿಸಿಕೊಳ್ಳಲು ಭಟ್ಟರಿಗೆ ಒಂದು ವರುಷವೇ ಹಿಡಿಯಿತು. ಈ ಅವಧಿಯಲ್ಲಿ

ಮನೆಯ ಮೇಲ್ವಿಚಾರಣೆಯೆಲ್ಲ ನೀಲಕಂಠನ ಪಾಲಿಗೆ ಬಂದಿತು. ಎಲ್ಲ ಕೆಲಸವನ್ನೂ ಅವನು ಬಹಳ ತೂಕದಿಂದ ನಿರ್ವಹಿಸತೊಡಗಿದನು. ತರುಬರುವ ಕೆಲಸಗಳನ್ನು ಸರಹರಿಯು ಸದಾಶಿವನ ಸಹಾಯದಿಂದ ನಡೆಯಿಸತೊಡಗಿದನು. ಆದರೆ ಇದೆಲ್ಲ ಯಾಂತ್ರಿಕವಾಗಿ ಸಾಗುತ್ತಿತ್ತು ಮಾತ್ರ. ಭಟ್ಟರು ಅಂತರ್ಮುಖಿಗಳಾಗತೊಡಗಿದ್ದರಿಂದ ಅವರನ್ನು ಮಾತನಾಡಿಸುವಂತೆಯೇ ಇರಲಿಲ್ಲ. ಅವರು ದೇವರ ಕೋಣೆಯನ್ನು ಬಿಟ್ಟು ಹೊರಬೀಳುವುದೇ ಅಪರೂಪವಾಗತೊಡಗಿತು. "ನನ್ನ ಬಳ್ಳಿ ಹಬ್ಬಬೇಡವೆ? ನಾನು ನಿತ್ಯ ನಂದಾದೀಪವೆಂದು ಆ ದಿನ ಹೇಳಿದ ಮಾತನ್ನು ನೀವು ಇಷ್ಟು ಬೇಗನೇ ಮರೆತು ಬಿಡಬೇಕೆ? ಗಂಗನಹಳ್ಳಿಯ ಸೇವೆಯಲ್ಲಿಯೇ ಈ ದೇಹ ಬಿದ್ದು ಹೋಗಬೇಕು ಎನ್ನುತ್ತಿದ್ದಿರಲ್ಲ, ಈಗ ಆ ಮಾತು ಎಲ್ಲಿ ಉಳಿಯಿತು? ನನ್ನ ಮರಣದಿಂದ ನಿಮ್ಮ ಜೀವನವೂ ತುಚ್ಛವಾಗಬೇಕೆ? ನಾನು ಇದನ್ನು ಬಯಸಿರಲಿಲ್ಲ. ದಯವಿಟ್ಟು ಕಾರ್ಯೋನ್ಮುಖರಾಗಿರಿ. ನನ್ನ ಬಳ್ಳಿ ಹಬ್ಬಲಿ." ಗಂಗನಹಳ್ಳಿಯ ಕೆರೆಯ ದಂಡೆಯ ಮೇಲಿರುವ ಪಾರ್ವತಿಯ ಕಟ್ಟೆಯಮೇಲೆ ಕುಳಿತು ಶೂನ್ಯ ದೃಷ್ಟಿಯಿಂದ ನೀರನ್ನು ನೋಡುತ್ತಿದ್ದ ಭಟ್ಟರು ಈ ಮಾತುಗಳನ್ನು ಕೇಳಿ ಗಡಬಡಿಸಿದರು. ಮಾತುಗಳು ನೀರಿನಿಂದ ತೇಲಿಬಂದವೇನೋ ಅನ್ನಿಸಿತು ಭಟ್ಟರಿಗೆ. ಆ ಕ್ಷಣ ಅವರಿಗೆ ತಮ್ಮ ಜೀವನದ ಸಮಗ್ರ ಚಿತ್ರವೇ ಕಣ್ಣಮುಂದೆ ಕಟ್ಟಿದಂತಾಯಿತು. ಗಂಗನಹಳ್ಳಿಗೆ ಬಂದ ದಿನದಿಂದ ಧರ್ಮಪತ್ನಿಯು ಸಾವಿನ ದಿನದವರೆಗಿನ ಕಾರ್ಯಗಳೆಲ್ಲ ತೆರೆತೆರೆಯಾಗಿ ತೇಲಿಬಂದವು. ನಿಷ್ಕ್ರಿಯವಾದ ಜೀವನವು ತಮ್ಮ ಬದುಕಲ್ಲವೆಂಬ ಭಾವವು ಮತ್ತೆ ಚಿಗುರೊಡೆಯಿತು. 'ಈ ಒಂದು ವರುಷದಲ್ಲಿ ನನಗೆ ಹತ್ತು ವರುಷಗಳ ಮುಪ್ಪು ಬಂದಂತಾಗಿರುವುದೇನೋ ನಿಜ. ಆದರೆ ಆ ಮುಪ್ಪು ನನ್ನ ಗುರಿಯನ್ನು ಭೇದಿಸಲಾರದು. ಬದುಕಿರುವಾಗ ಜೀವನದ ನಿತ್ಯ ಸ್ಫೂರ್ತಿಯಾಗಿದ್ದ ಧರ್ಮಪತ್ನಿ ಸತ್ತಮೇಲೂ ನನಗೆ ಸ್ಫೂರ್ತಿಯ ನೆಲೆಯಾಗಿದ್ದಾಳೆ. ಇದಕ್ಕೆ ಈ ಮಾತುಗಳೇ ನಿದರ್ಶನ. ಅವಳ ಬಳ್ಳಿಯನ್ನು ನಾನು ಹಬ್ಬಿಸಬೇಕು. ಅವಳ ಸ್ಫೂರ್ತಿಯ ಕಾರಂಜಿಯಲ್ಲಿ ಈ ದೇಹ ಮಿಂದು ಶುದ್ಧವಾಗಬೇಕು. ಈ ಮಾತೇ ಸರಿ."

ಭಟ್ಟರ ಹೃದಯದಲ್ಲಿ ವಿಲಕ್ಷಣ ಮಾರ್ಪಾಟು ತಲೆದೋರಿತು. ಅವರು ಚಟುವಟಿಕೆಯ ಹೆಜ್ಜೆಗಳನ್ನಿಡುತ್ತ ಲಟುಲುಟು ಮನೆಯ ಕಡೆಗೆ ಸಾಗಿದರು.

ಅಂದಿನಿಂದ ಮತ್ತೆ ಗಂಗನಹಳ್ಳಿಯೆಲ್ಲ ಚೇತನಪೂರ್ಣವಾಗತೊಡಗಿತು. ಭಟ್ಟರ ಪ್ರವಚನಗಳು ಮತ್ತೆ ಪ್ರಾರಂಭವಾದುವು. ಧಾರ್ಮಿಕ ಕಾರ್ಯಗಳಲ್ಲಿ, ಸಾಮಾಜಿಕ ವ್ಯವಹಾರಗಳಲ್ಲಿ, ಸಾರ್ವಜನಿಕ ಸಂದರ್ಭ

ಗಳಲ್ಲಿ ಭಟ್ಟರು ಮತ್ತೆ ತಮ್ಮ ಮಾರ್ಗದರ್ಶನ ಮಾಡತೊಡಗಿದರು. ಅವರ ಕಾರ್ಯಶಕ್ತಿಗೆ ಮತ್ತೆ ಉಕ್ಕು ಬರತೊಡಗಿತು. ಹಳ್ಳಿಯ ಜನ ಭಟ್ಟರ ಜೀವನ ದಲ್ಲಿ ಬಂದ ಈ ಉತ್ಸಾಹವನ್ನು ಕಂಡು 'ಭಟ್ಟರ ಮುಪ್ಪು ಹರೆಯದವರನ್ನು ನಾಚಿಸುತ್ತದೆ' ಎನ್ನತೊಡಗಿದರು. ಭಟ್ಟರೆಂದರೆ ಅಷ್ಟು ವಿಶ್ವಾಸ, ಅಷ್ಟು ಪ್ರೀತಿ ಆ ಹಳ್ಳಿಯ ಜನಕ್ಕೆ.

ಈ ಹತ್ತು ವರ್ಷಗಳಲ್ಲಿ ಭಟ್ಟರು ಮಾಡಿದ ಕಾರ್ಯ ಅಪೂರ್ವವಾಗಿತ್ತು. ಹಳ್ಳಿಯಲ್ಲಿ ಮತ್ತೆ ಎರಡು ಹೊಕ್ಕು ತುಂಬುವ ಬಾವಿಗಳಾದವು. ಸಿದ್ಧೇಶ್ವರ ಗುಡಿಯ ಮಾರ್ಗವನ್ನು ಸರಿಪಡಿಸಲಾಯಿತು. ಮುರಿದು ಬೀಳಲಿಕ್ಕಾದ ಗುಡಿಯ ಮಹಾದ್ವಾರವನ್ನು ದೇಸಾಯರ ಸಹಾಯದಿಂದ ಕಲ್ಲಿನಿಂದ ಕಟ್ಟಿಸಿದ ಶ್ರೇಯಸ್ಸು ಭಟ್ಟರದಾಯಿತು. ಊರಲ್ಲಿ ಇಳಿದುಕೊಳ್ಳಲು ಧರ್ಮಶಾಲೆಯಿರಲಿಲ್ಲ. ಊರ ಆಚೆಯ ಮಗ್ಗಲಿಗೆ ಹೇಮಂತಗೌಡರು ರೈತರ ಸಹಾಯದಿಂದ ಧರ್ಮಶಾಲೆಯನ್ನು ಕಟ್ಟಿಸಿದರು. ಗಂಗನಹಳ್ಳಿಯ ಕೆರೆಯ ಸುತ್ತಲೂ ಒಗೆಯುವ ಅನುಕೂಲಕ್ಕಾಗಿ ಅನೇಕ ಕಲ್ಲಿನ ಡೋಣಿಗಳನ್ನು ವಡ್ಡರ ಭೀಮನು ತನ್ನವರಿಂದ ಕಟ್ಟಿಸಿ ಇಟ್ಟನು. ಊರ ಎಲ್ಲ ಗುಡಿಗಳಲ್ಲಿಯೂ ಪೂಜೆ ಸರಾಗವಾಗಿ ಸಾಗುವಂತೆ ಪೂಜಾರಿಗಳನ್ನು ನಿಯಮಿಸಿ ಅವರ ಉದರ ನಿರ್ವಹಣಕ್ಕಾಗಿ 'ಪೂಜಾಹೊಲ' ಗಳನ್ನು ದತ್ತಿ ಕೊಡಿಸಿದರು. ಹೀಗೆ ಒಂದೇ ಎರಡೇ ಅನೇಕ ಕಾರ್ಯಗಳನ್ನು ಭಟ್ಟರು ಕಾರ್ಯಚತುರರಾಗಿ ಮಾಡಿ ಪೂರೈಸಿದರು. ಈ ಕಾರ್ಯಗಳಿಗಾಗಿ ಗಂಗನಹಳ್ಳಿಯ ಜನರು ಅವರನ್ನು ನಿತ್ಯವೂ ನೆನೆಯುವಂತಾಯಿತು. "ನಮ್ಮಪ್ಪನಿಗೆ ವಿಶ್ರಾಂತಿಯೇ ಇಲ್ಲ. ಅವನು ದೇವರ ಮನುಷ್ಯ" ಎಂದು ಹಳ್ಳಿಯ ಜನ ಭಟ್ಟರ ಗುಣಗಾನ ಮಾಡುವುದು ನಿತ್ಯನಿಯಮವಾಯಿತು.

ಆಗಲೇ ಧರ್ಮಪತ್ನಿಯ ಬಳ್ಳಿ ಹಬ್ಬತೊಡಗಿತು. ನೀಲಕಂಠನಿಗೆ ಎರಡು ಗಂಡುಮಕ್ಕಳಾಗಿ ಭಟ್ಟರ ಮೊಮ್ಮಕ್ಕಳು ಮನೆತುಂಬ ಓಡಾಡತೊಡಗಿದರು. ನರಹರಿಯ ಮಗು ತಪ್ಪು ಹೆಜ್ಜೆಗಳನ್ನಿಡುತ್ತ ಭಟ್ಟರ ತೊಡೆ ಏರತೊಡಗಿತು. ಸದಾಶಿವನೊಂದು ಮದುವೆಯಾದರೆ ಧರ್ಮಪತ್ನಿಯ ಬಯಕೆಯನ್ನು ಸಂಪೂರ್ಣ ಪಾಲಿಸಿದಂತಾಗುವುದು ಎಂದು ಭಟ್ಟರೆನ್ನುತ್ತಿರುವಾಗಲೇ ಶಿಷ್ಯ ಜನಾರ್ದನನ ತಂಗಿಯೊಡನೆ ಮದುವೆಯೂ ನಡೆದುಹೋಯಿತು. ಭಟ್ಟರಿಗೆ ಈಗ ಸಂಸಾರದ ಚಿಂತೆ ಉಳಿಯಲಿಲ್ಲ. ಹೊಲಗಳಿಂದ ಸಾಕಷ್ಟು ಕಾಳು ಕಡ್ಡಿಗಳು ಬರತೊಡಗಿದ್ದವು. ಶಿಷ್ಯರ ಪೋಷಣೆಗೆ ಸಮಾಜವು ಸಿದ್ಧವಾಗಿತ್ತು. ಹೀಗಾಗಿ ಭಟ್ಟರಿಗೆ ಶಿಷ್ಯಪರಂಪರೆಯನ್ನು ನಿರ್ವಹಿಸುವ ಶಕ್ತಿ

ಅಸಾಧ್ಯವಾಗಿಯೂ ಕಾಣಲಿಲ್ಲ. ಇದು ತಮ್ಮ ನಂತರವೂ ನಡೆಯಬೇಕೆಂದು ಮಾತ್ರ ಅವರು ನೀಲಕಂಠನಿಗೆ ಪದೇಪದೇ ಹೇಳತೊಡಗಿದರು. ನೀಲಕಂಠ ನಲ್ಲಿ ಅವರ ವಿಶ್ವಾಸವೂ ಬೇರೂರಿತ್ತು. ಈ ಕಾರ್ಯ ಅವನಿಂದ ಸಾಧ್ಯವಾಗು ವುದರಲ್ಲಿ ಸಂದೇಹವಿಲ್ಲವೆಂದು ಅವರು ನೆಮ್ಮದಿಯನ್ನು ತಾಳತೊಡಗಿದರು. ಇದಕ್ಕೆ ತಮ್ಮ ಮನೆತನದ ಮೇಲೆ ಜನರಿಟ್ಟ ಅದ್ಭುತ ವಿಶ್ವಾಸವೂ, ಅನಂತ ಶ್ರದ್ಧೆಯೂ ಕಾರಣವಾಗಿತ್ತು. ಈ ವಿಶ್ವಾಸವನ್ನು, ಈ ಶ್ರದ್ಧೆಯನ್ನು ಮಕ್ಕಳು ಉಳಿಸಿಕೊಂಡು ಹೋಗುವುದು ನಿಶ್ಚಿತವೆಂದು ಭಟ್ಟರಿಗೆ ಅನ್ನಿಸಿತ್ತು. ಅಂತೆಯೇ ಅವರು ತೃಪ್ತಭಾವದಿಂದಿರತೊಡಗಿದರು. ಅವರಿಗೆ ತಮ್ಮ ಜೀವನ ಸಾರ್ಥಕತೆಯನ್ನು ಹೊಂದಿತೆನ್ನಿಸಿತು.

ಈಗ ಭಟ್ಟರ ದೇಹ ಸಾವಕಾಶವಾಗಿ ಕುಸಿಯತೊಡಗಿತು. ತಮ್ಮ ಜೀವನದಲ್ಲಿ ಮಾಡಬೇಕಾದ ಕಾರ್ಯಗಳನ್ನೆಲ್ಲ ಮಾಡಿ ಮುಗಿಸಿದ ಮೇಲೆ ತಾವು ಇದ್ದರೂ ಸರಿ, ಬಿಟ್ಟರೂ ಸರಿ ಎಂಬ ನಿರ್ಲಕ್ಷ್ಯಭಾವವೂ ಇದಕ್ಕೆ ಕಾರಣವಾಗಿದ್ದಿತು. ಇತ್ತೀಚೆಗೆ ಅವರು ಈ ಮಾತುಗಳನ್ನು ಆಡಿಯೂ ತೋರಿಸಿದ್ದರು. "ನಾವೆಲ್ಲ ಒಮ್ಮೆಲೇ ಹೋಗಬೇಕು ಭಟ್ರಾ ! ನೀನೊಬ್ಬನೇ ಈ ವಿಚಾರವನ್ನು ತರಕೂಡದು" ಎಂದು ಗುರುಲಿಂಗಶೆಟ್ಟರೂ ನಗೆಯಾಡಿ ತೋರಿಸಿದ್ದರು.

ಅಂದು ಹನುಮಂತದೇವರ ಕಾರ್ತಿಕದ ದಿನ. ಆ ವರುಷ ಮಳೆಯೇ ಆಗದಿದ್ದರಿಂದ ಕಾರ್ತಿಕೋತ್ಸವದಲ್ಲಿ ಜನರಿಗೆ ಉತ್ಸಾಹವೇ ಇರಲಿಲ್ಲ. ಸುಮ್ಮನೆ ಸಾಂಪ್ರದಾಯಿಕವಾಗಿ ಕಾರ್ತಿಕವು ಜರುಗಿಹೋಯಿತು. ಭಟ್ಟ ರಿಗೆ ಇದರಿಂದ ಬರೆ ಎಳೆದಂತಾದರೂ ಜನರ ಉತ್ಸಾಹಕ್ಕೆ ಬಂದ ಅನಿ ವಾರ್ಯವಾದ ಗಂಡಾಂತರವನ್ನು ಅವರು ಗುರುತಿಸಿ ತೆಪ್ಪಗಿದ್ದರು. ಒಂದೆರಡು ತಿಂಗಳು ಕಳೆಯುವುದರಲ್ಲಿ ಭೀಕರ ಬರಗಾಲದ ಚಿಹ್ನೆಗಳು ತೋರಿಬಂದವು. ಬಡವರು ಹೌಹಾರಿದರು. ಅಲ್ಲಲ್ಲಿ ಜನರು ಉಪವಾಸ ಬೀಳತೊಡಗಿರುವ ಸುದ್ದಿ ಭಟ್ಟರ ಕರುಳನ್ನು ಕೊರೆಯತೊಡಗಿತು. ಕೆಲವರು ಗಂಗನಹಳ್ಳಿ ಯಿಂದ ಗುಳೇಕಟ್ಟಿಕೊಂಡು ಹೋಗಿ ಬೇರೆಕಡೆಗೂ ಅನ್ನ ಸಿಗದೆ ಹತಾಶರಾಗಿ ಮತ್ತೆ ಹಳ್ಳಿಗೆ ಬರತೊಡಗಿದರು. ಉಪವಾಸ ಸಾಯುವುದೇ ಆದರೆ ತಮ್ಮ ಹಳ್ಳಿಯಲ್ಲಿಯೇ ಏಕೆ ಸಾಯಬಾರದು ಎಂಬ ಯೋಚನೆ ಅವರಿಗೆ. ಸರ ಕಾರದವರೇನೋ ಕಾಮಗಾರಿಯನ್ನು ಪ್ರಾರಂಭಿಸಲು ಹೆಣಗಿದರು. ಆದರೆ ಅಲ್ಲಿ ಎಷ್ಟು ಜನ ದುಡಿದೀತು ? ವಯಸ್ಸಾದ ಮುದುಕರೂ, ಮಕ್ಕಳು ಮರಿ ಗಳೂ, ಬಾಣಂತಿಹೆಂಗಸರೂ, ಮರ್ಯಾದೆವಂತ ಗೃಹಸ್ಥರೂ ಅನ್ನಾನ್ನಗತಿಕ

ರಾಗಿ ಬೀದಿಗುಂಟೆ ತಿರುಗಹತ್ತಿರುವ ದೃಶ್ಯ ಭಟ್ಟರಲ್ಲಿ ಕಣ್ಣೀರನ್ನು ಚಿಮ್ಮಿಸ ಹತ್ತಿತು. ಹುಣಸೇಬೀಜಗಳನ್ನು ಅರೆದು ಪುಡಿಪುಡಿ ಮಾಡಿ ಹುರಿದು ತಿನ್ನುವ ಜನ, ಗಿಡದ ತೊಪ್ಪಲಗಳ ರಸವನ್ನು ಕುಡಿದು ದಿನಹಾಕುವ ಜನ ಭಟ್ಟರ ಮಾನವೀಯತೆಯನ್ನು ಕಲಕತೊಡಗಿತು. ಅಶಕ್ತ ದುರ್ಬಲರಿಗೆ ಸಾಹೇಬ ಸರಕಾರದವರು ಕೊಡುವ 'ಡೋಲ'ಅರ್ಧ ಹೊಟ್ಟೆಯನ್ನೂ ತುಂಬುತ್ತಿರಲಿಲ್ಲ. ಹೀಗಾಗಿ ಜನ ಎಲುಬಿನ ಹಂದರವಾಗತೊಡಗಿದರು. ಭಟ್ಟರಿಗೆ ಇನ್ನು ಮೇಲೆ ಸುಮ್ಮನೆ ಕೂಡುವುದು ಅಸಾಧ್ಯವಾಗತೊಡಗಿತು. ತಮ್ಮ ಮುಪ್ಪಿನ ದೇಹವನ್ನು ಎಳೆಯುತ್ತ ಸಿಕ್ಕಸಿಕ್ಕಲ್ಲಿ ಅಲೆಯತೊಡಗಿದರು.

ಸರಕಾರವು ಏನಾದರೂ ಮಾಡಬಹುದೆಂದು ದಾರಿ ನೋಡಿದ ಹೇಮಂತ ಗೌಡರಿಗೆ ನಿರಾಶೆಯಾಯಿತು. ದೇಶಪಾಂಡೆ ಶಾನುಭೋಗರು ಚಿಂತಾಕುಲ ರಾದರು. ಸುತ್ತಲಿನ ಹಳ್ಳಿಗಳಲ್ಲಿ ಓಣಿಓಣಿಗಳಲ್ಲಿ ಉಪವಾಸ ಸತ್ತುಬಿದ್ದ ಹೆಣಗಳಿಗೆ ಲೆಕ್ಕವಿಲ್ಲವೆಂಬ ಅತಿರಂಜಿತ ಸುದ್ದಿಯನ್ನು ಕೇಳಿ ಅವರ ಜೀವ ನೆತ್ತಿ ಯಿಂದಲೇ ಹೋಗುವಂತೆ ಅವರಿಗೆ ಅನ್ನಿಸತೊಡಗಿತು. ಈ 'ಡೋಗೀ' ಬರವು ತಮ್ಮ ಹಳ್ಳಿಯನ್ನೂ ಕೊಚ್ಚಿಕೊಂಡು ಹೋಗುವುದು. ಮುಂದೇನು ?

ಭಟ್ಟರ ನಿದ್ರೆ ಹಾರಿಹೋಯಿತು. ಗಂಗನಹಳ್ಳಿಯ ಜನ ಉಪವಾಸ ಸಾಯುವ ದುರ್ಧರ ಪ್ರಸಂಗವನ್ನು ಅವರು ಸಹಿಸದಾದರು. ಅವರು ಆ ದಿನ ಊರ ಮುಂದಾಳುಗಳ ಸಭೆ ಸೇರಿಸಿದರು.

"ಬಂಧುಗಳೇ, ಸಾಯುವುದಾದರೆ ಎಲ್ಲರೂ ಕೂಡಿಯೇ ಸಾಯೋಣ. ಯಾರಲ್ಲಿ ಕಾಳಿನ ಸಂಗ್ರಹವಿದೆಯೋ ಅವರು ಕೂಡಲೇ ಹೊರಗೆ ತನ್ನಿರಿ. ನಮ್ಮ ಬಡ ಬಂಧುಗಳು ಹೊಟ್ಟೆಗಿಲ್ಲದೇ ಪಟಪಟ ಸಾಯುತ್ತಿರುವಾಗ ಕೆಲವು ಜನರಾದರೂ ರೊಟ್ಟೀ ತಿಂದು ಬಾಳುವೆ ಮಾಡುವುದು ನಾಯಿಯ ಬಾಳು, ಹದ್ದಿನ ಬಾಳು. ಯಾರಲ್ಲಿ ಕಣವಿದೆ ಹೇಳಿರಿ. ಕಾಳು ಹೊರಗೆ ಬರದ ವಿನಃ ನಾನು ಊಟ ಮಾಡಲಾರೆ" ಎಂದು ಖಂಡಿತವಾಗಿ ಹೇಳಿದರು.

"ನಮ್ಮ ಹೊಲದಲ್ಲಿ ಒಂದು ಹಗೆಯಿದೆ ಭಟ್ಟರೆ! ಸರಕಾರದ ಕೈ ನಿಂತ ಮೇಲೆ ಅದನ್ನು ನಿಮ್ಮ ಪಾದಕ್ಕೆ ಅರ್ಪಿಸಬೇಕೆಂದು ಸುಮ್ಮನಿದ್ದೆ." ಎಂದು ಸಿದ್ದಪ್ಪನು ಹೇಳಿದನು.

"ಹಾಳಾಗಲಿ ಸರಕಾರ. ಮೊದಲು ನಾವೆಲ್ಲ ಬದುಕಬೇಕು."

"ನನ್ನ ಕಣಜಗಳನ್ನು ನಿಮ್ಮ ಸ್ವಾಧೀನ ಮಾಡುತ್ತೇನೆ ಭಟ್ಟರೆ. ಗಂಗನಹಳ್ಳಿ ಈ ಕಣಜಗಳಿಂದ ಒಂದು ತಿಂಗಳು ಎರಡು ಹೊತ್ತು ಉಣ್ಣ ಬಹುದು." ಎಂದು ಶಾನುಭೋಗರು ಹೇಳಿದರು. ಒಟ್ಟು ಎಲ್ಲ ಲೆಕ್ಕವಾದ

ಮೇಲೆ ಎರಡು ತಿಂಗಳು ಹೇಗಾದರೂ ಬದುಕಬಹುದೆಂಬ ಆಸೆ ಭಟ್ಟರಿಗೆ ತಲೆದೋರಿತು. ಅವರು ಆ ಮಟ್ಟಿಗೆ ಹರುಷದುಂಬಿ ಹೇಳಿದರು.

"ನಾವು ಎರಡು ತಿಂಗಳವರೆಗೆ ಬದುಕಿದರೆ ಮಾತ್ರ ಆಗದು. ಮುಂದಿನ ಸುಗ್ಗಿಯವರೆಗೆ ನಾವು ಜೀವ ಹಿಡಿಯಬೇಕು. ಅದಕ್ಕಾಗಿ ಇದ್ದ ಕಾಳುಗಳು ನಾಲ್ಕೈದು ತಿಂಗಳವರೆಗಾದರೂ ಸಾಲುವಂತೆ ನಾವು ಹಂಚಿಕೊಡಬೇಕು. ಇಂದಿನ ಗಂಗನಹಳ್ಳಿಯಲ್ಲಿ ಎಲ್ಲರೂ ಒಪ್ಪತ್ತು ಉಣ್ಣಬೇಕು. ಯಾರೂ ಹೊಟ್ಟೆ ತುಂಬ ಉಣ್ಣಕೂಡದು. ಹೀಗೆ ಇಲ್ಲಿಯೇ ಪ್ರತಿಜ್ಞೆ ಮಾಡಿರಿ" ಎಂದು ಹೇಳಲು ಎಲ್ಲರೂ ಒಪ್ಪಿದರು. ಸ್ವತಃ ಭಟ್ಟರೇ ನಿಂತು ಕಣಜಗಳ ಬಾಯಿ ತೆಗೆಸಿದರು. ತಲಾ ಇಷ್ಟಿಷ್ಟು ಹಂಚತೊಡಗಿದರು. ಓಣಿಓಣಿಗಳಲ್ಲಿ ಸುತ್ತಾಡಿ ಜನರಿಗೆ ಧೈರ್ಯ ಹೇಳತೊಡಗಿದರು.

ಜನರೇನೋ ಬದುಕಿದರು. ಆದರೆ ಅದೆಂತಹ ಬದುಕು? ಒಪ್ಪತ್ತು ಊಟದಲ್ಲಿ ಅವರ ದೇಹಗಳೆಲ್ಲ ಸೊರಗಿ ನಿಂತವು. ಉತ್ಸಾಹವೆಲ್ಲ ಕಮರಿ ಬಿಟ್ಟಿತು. ಭಟ್ಟರಿಗೆ ಗಂಗನಹಳ್ಳಿಯ ಜನರ ತ್ಯಾಗ ಅದ್ಭುತವೆನಿಸಿತು. ದೇವರ ಕೃಪೆ ಆಗಲೇಬೇಕೆಂದು ಅವರು ಕಾರು ಬರುವ ಮುನ್ನವೇ ಅನನ್ಯ ಭಾವದಿಂದ ಪ್ರಾರ್ಥನೆ ಮಾಡತೊಡಗಿದರು. ಮೃಗಶಿರ ನಕ್ಷತ್ರವು ಮೂಡಿ ಬಂದರೂ 'ಮಗ್ಗಿ' ಮಳೆ ಆಗುವ ಲಕ್ಷಣ ತೋರದಿದ್ದುದರಿಂದ ಜನರ ಬೆದರಿಕೆ ಹುಚ್ಚಾಗಿ ಹರಿಯತೊಡಗಿತು. ಆ ಕೂಗು ಕರುಳಿನ ಆಕ್ರಂದನವಾಗಿದ್ದಿತು.

ಕಣ್ಣುಗಳಲ್ಲಿ ಜೀವ ಹಿಡಿದು ನಿಂತ ಸಾವಿರ ಜನರೆದುರು ಭಟ್ಟರು ಹೇಳಿದರು "ಧೈರ್ಯವನ್ನು ಬಿಡಬೇಡಿರಿ ನನ್ನ ಮಕ್ಕಳೇ! ದೇವರು ನಿಮ್ಮ ಕೈ ಬಿಡಲಾರನೆಂಬುದನ್ನು ನಂಬಿರಿ. ನಾಳೆನಿಂದ ಏಳು ದಿನ ನಾನು ವರುಣ ದೇವರನ್ನು ಕುರಿತು ಸಿದ್ಧೇಶ್ವರ ಗುಡಿಯಲ್ಲಿ ತಪಸ್ಸು ಮಾಡಲು ನಿರ್ಧರಿಸಿದ್ದೇನೆ. ಈ ಏಳು ದಿನಗಳಲ್ಲಿ ಮಳೆಯಾದರೂ ಆಗಬೇಕು. ಇಲ್ಲವೇ ಗುಡಿಯಿಂದ ನನ್ನ ಹೆಣವನ್ನಾದರೂ ನೀವು ಹೊರಗೆ ತರಬೇಕು. ಮಳೆಯಾಗುವವರೆಗೆ ನಾನು ಬಾಯಲ್ಲಿ ಒಂದು ಹನಿಯನ್ನೂ ಹಾಕಿಕೊಳ್ಳುವುದಿಲ್ಲ. ಇದು ಖಂಡಿತ. ನೀವೆಲ್ಲ ಪ್ರಾರ್ಥನೆ ಸಲ್ಲಿಸಿರಿ."

"ಏಳು ದಿನದ ಉಪವಾಸ. ಎಂತಹ ಮಾತು ನನ್ನಪ್ಪಾ ಈ ವಯಸ್ಸಿನಲ್ಲಿ!" ಎಂದು ರೈತಾಳುವೊಬ್ಬನು ಕೂಗಿ ಹೇಳಿದನು.

"ಈ ದೇಹಕ್ಕೆ ಏನೂ ಆಗುವುದಿಲ್ಲ. ಒಂದು ವೇಳೆ ನಾನು ಬಿದ್ದು ಹೋದರೂ ಆಗುವ ಅನರ್ಥ ಅಷ್ಟರಲ್ಲಿಯೇ ಇದೆ. ಈ ವ್ರತವನ್ನು ನಾನು ಪಾಲಿಸಬೇಕು."

ಅಖಂಡ ಐದು ದಿನಗಳವರೆಗೆ ಭಟ್ಟರು ಸಿದ್ಧೇಶ್ವರ ಗುಡಿಯಲ್ಲಿ ತಪಸ್ಸನ್ನಾಚರಿಸತೊಡಗಿದ್ದರು. ದಿನಾಲು ಎತ್ತರವಾದ ದನಿಯಲ್ಲಿ 'ಪರ್ಜನ್ಯ ಸೂಕ್ತ'ವನ್ನು ಪಠಿಸುತ್ತ ಆಕಾಶದ ಕಡೆಗೆ ಕಣ್ಣೀರು ತುಂಬಿ ನೋಡುತ್ತಿದ್ದರು. ಊರ ಗುಡಿಗಳಲ್ಲಿ ಜನರೆಲ್ಲ ಕಲೆತು ಭಜನೆಗಳನ್ನಾರಂಭಿಸಿದ್ದರು. ಎಲ್ಲರ ಲಕ್ಷ್ಯ ಮುಗಿಲ ಕಡೆಗೆಯೇ. ಭಟ್ಟರ ತಪಸ್ಸಿನ ಕಡೆಗೆಯೇ!

ಆರನೆಯ ದಿನ ಮೋಡಗಳು ಕೂಡತೊಡಗಿದವು. ಕಪ್ಪಾದ ಮೋಡಗಳ ಆರ್ಭಟೆಯಲ್ಲಿ ಕೋಲ್ಮಿಂಚು ಕಟಕಟಿಸಹತ್ತಿತು. ಜನರ ಹೋದ ಜೀವ ಬಂದಂತಾಯಿತು.

ಏಳನೆಯ ದಿನ ಕ್ಷೀಣವಾದ ಸ್ವರದಲ್ಲಿ ಭಟ್ಟರು ತಮ್ಮ ಎರಡೂ ಕೈಗಳನ್ನು ಮೇಲೆತ್ತಿ 'ಪರ್ಜನ್ಯಸೂಕ್ತ' ವನ್ನು ಪಠಿಸುತ್ತಿರುವಾಗ ಮುಗಿಲೊಡ್ಡು ಹರಿದಂತೆ ಧೋಃ ಧೋಃ ಎಂದು ಮಳೆ ಬೀಳಹತ್ತಿತು. ಗುಡ್ಡದಲ್ಲಿ ಪ್ರವಾಹದ ಸಪ್ಪಳವಾಗತೊಡಗಿ ನೀರು ಪ್ರಬಲವಾಗಿ ಹರಿಯತೊಡಗಿತು. ಭಟ್ಟರು ಕುಣಿದಾಡತೊಡಗಿದರು. ಅಲ್ಲಿಯೇ ನಿಂತ ಅನೇಕ ಭಕ್ತರು ಅವರೊಡನೆ ನಲಿದಾಡತೊಡಗಿದರು. "ಕೊನೆಗೊಮ್ಮೆ ಕಣ್ಣು ತೆರೆದೆಯಪ್ಪಾ ಸಿದ್ಧೇಶ್ವರಾ!" ಎಂದ ಭಟ್ಟರು ಒಮ್ಮೆಲೆ ಕುಪ್ಪಳಿಸಿದರು. ಅವರ ತಲೆ ಸಿದ್ಧೇಶ್ವರನ ಪಾದದ ಮೇಲೆ ಒರಗಿತು. ಸಾಷ್ಟಾಂಗ ನಮಸ್ಕಾರ ಮಾಡಿದ ದೇಹ ಬಹಳ ಹೊತ್ತಿನವರೆಗೆ ಹಾಗೆಯೇ ಒರಗಿತು. ಅವರು ಸಾವಕಾಶವಾಗಿ ಎದ್ದು ಕುಳಿತಾಗ ಅವರ ಕಣ್ಣುಗಳಿಂದ ಧಾರಾಳವಾಗಿ ನೀರು ಹರಿಯುತ್ತಿತ್ತು.

ಬಂದ ಜನರೆಲ್ಲ ಭಟ್ಟರ ಕಾಲುಬಿದ್ದರು. 'ನಮ್ಮಪ್ಪ! ನಮ್ಮಪ್ಪ! ನಮ್ಮನ್ನು ಬದುಕಿಸಿದೆಯಪ್ಪಾ! ಸಾವಿರ ವರುಷ ಬಾಳು ತಂದೆ' ಎಂದು ರೈತರೆಲ್ಲ ಮಣಿಯಹತ್ತಿದರು.

"ಅವನ ಪುಣ್ಯ! ಸಿದ್ಧೇಶ್ವರನ ಕೃಪೆ!" ಎಂದು ಭಟ್ಟರು ಗುರುಲಿಂಗ ಶೆಟ್ಟಿಯನ್ನು ತಬ್ಬಿಕೊಂಡರು. ಅವರ ಆಯಾಸ ಅವರ್ಣನೀಯವಾಗಿತ್ತು. ಅವರು ಮತ್ತೆ ಸಿದ್ಧೇಶ್ವರನ ಪಾದಗಳಲ್ಲಿ ಹಣೆಯಿಟ್ಟರು. ಅವರನ್ನು ವೈಭವ ಪೂರ್ಣವಾಗಿ ಮನೆಗೆ ಕರೆತರುವಾಗ ಭಟ್ಟರಿಗೆ ಪ್ರಜ್ಞೆಯೇ ಇರಲಿಲ್ಲ. ಅಸಾಧ್ಯವಾದ ದಣಿವೇ ಇದಕ್ಕೆ ಕಾರಣವಾಗಿರಬೇಕೆಂದು ಜನ ಅವರನ್ನು ಹಾಸಿಗೆಯ ಮೇಲೆ ಮಲಗಿಸಿ ವಿಶ್ರಾಂತಿ ಹೊಂದಲೆಂದು ಹಾರೈಸಿದರು. ಆದರೆಆದರೆ....ವಿಶ್ವೇಶ್ವರಭಟ್ಟರು ಆಗಲೇ ದೀರ್ಘವಾದ ವಿಶ್ರಾಂತಿಯನ್ನು ಹೊಂದಿಬಿಟ್ಟದ್ದರು. ಅವರ ಪ್ರಾಣಪಕ್ಷಿ ಹಾರಿಹೋಗಿತ್ತು.

"ಭಟ್ಟಾ!" ಎಂದು ಕೂಗಿದ ಗುರುಲಿಂಗಶೆಟ್ಟರು ಧೊಪ್ಪನೆ ಬಿದ್ದು

ಬಿಟ್ಟರು. "ವಿಶೂ ಕಾಕಾ! ವಿಶೂ ಕಾಕಾ!" ಮಕ್ಕಳ ಕರುಳಿನ ಕೂಗು ಗಂಗನಹಳ್ಳಿಯ ಕರುಳನ್ನೇ ಕಿತ್ತಿತ್ತು. ಜನರು ತಂಡತಂಡವಾಗಿ ಧಾವಿಸಿ ಬರತೊಡಗಿದರು. ಕ್ಷಣಹೊತ್ತಿನಲ್ಲಿ ಸಾವಿರಾರು ಜನ ಸ್ತ್ರೀ ಪುರುಷರು ಭಟ್ಟರ ಮನೆಯ ಮುಂದೆ ನೆರೆದರು. ಭಟ್ಟರ ಕೊನೆಯ ದರ್ಶನಕ್ಕಾಗಿ ನುಗ್ಗಾಟವೇ ಪ್ರಾರಂಭವಾಯಿತು. "ನಮ್ಮಪ್ಪ ಹೋದ! ನಮ್ಮ ತಂದೆ ಮಾಯವಾದ! ನಮ್ಮ ದೇವರು ಅದೃಶ್ಯನಾದ! ನಮಗಾರು ಗತಿ?" ಎಂದು ಸಾವಿರ ಬಾಯಿಗಳು ಉದ್ಗಾರ ತೆಗೆದವು.

ವ್ಯಕ್ತಿಯಾಗಿ ಬಾಳದೆ ಸಂಸ್ಥೆಯಾಗಿ ಬಾಳಿದ ಭಟ್ಟರ ಜೀವನದ ಮಹಾಸಿದ್ಧಿಯ ಒಳಗುಟ್ಟಿನ ಇತಿಹಾಸವೇ ಇದು. ಸಮಾಜಜೀವನದಲ್ಲಿ ಭಟ್ಟರು ಜೀವನಸಿದ್ಧಿಯನ್ನು ಪಡೆದುಕೊಂಡರು. ಅವರಿಗೆ ಧಾರ್ಮಿಕ ಜೀವನವು ಸಮಾಜದ ಉದ್ಧಾರದ ಸಾಧನೆಯಾಗಿದ್ದಿತು. ಈ ಸಾಧನೆಯ ಯೋಗಸಿದ್ಧಿಯನ್ನು ಪರಿಪೂರ್ಣವಾಗಿ ಪಡೆದ ಭಟ್ಟರ ಕೀರ್ತಿ ಗಂಗನ ಹಳ್ಳಿಯ ಮನೆಯಮಾತಾಗಿ ಪರಿಣಮಿಸಿದುದರಲ್ಲಿ ಅಚ್ಚರಿಯೇನು? ಜನಾದರಣೆ ಪಡೆದುದರಲ್ಲಿ ಆಶ್ಚರ್ಯವೇನು?

ವಿಶ್ವೇಶ್ವರಭಟ್ಟರ ಮರಣದ ದುಃಖದಿಂದ ಗಂಗನಹಳ್ಳಿಯ ಜನರು ಚೇತರಿಸಿಕೊಳ್ಳುವಾಗಲೇ ಹಳ್ಳಿಯ ಸರ್ವಮಾನ್ಯ ಮುಂದಾಳುಗಳಾದ ಗುರುಲಿಂಗಶೆಟ್ಟರು ಶಿವನ ಪಾದವನ್ನು ಸಲ್ಲಿದ ವಾರ್ತೆಯು ಬರಸಿಡಿಲಿನಂತೆ ಎರಗಿತು. ಮೊದಲೇ ಅನಾಥರಾದ ಹಳ್ಳಿಯ ಜನರು ಈ ಸಾವಿನಿಂದ ಕಂಗೆಟ್ಟರು. ಹಳ್ಳಿಯ ದುಃಖ ಇಷ್ಟಕ್ಕೆ ನಿಲ್ಲಲಿಲ್ಲ. ಮುಂದೆ ಒಂದು ವಾರ ದಲ್ಲಿಯೇ ಶಾನುಭೋಗ ಶೀನಪ್ಪನವರೂ, ಹೇಮಂತಗೌಡರೂ ಗುರುಲಿಂಗ ಶೆಟ್ಟರನ್ನು ಕೂಡಿಕೊಂಡರು. ತಮಗಿನ್ನು ಗೆಳೆಯರಿಲ್ಲವೆಂದು ಭಾವಿಸಿದ ರೇನೋ ದೇಶಪಾಂಡೆ ಕೇಶವರಾಯರು! ಅವರೂ ಅಕಸ್ಮಾತ್ತಾಗಿ ನಿಧನ ಹೊಂದಿಬಿಟ್ಟರು. ವಸ್ತಾದ ಅಲ್ಲಿ ಕೂಡ ಆ ತಿಂಗಳಲ್ಲಿ 'ಅಲ್ಲಾ'ನ ಪಾದಕ್ಕೆ ತಲೆಯಿಟ್ಟುಬಿಟ್ಟರು.

ಗಂಗನಹಳ್ಳಿಯ ಜನರಿಗೆ ಇದೊಂದು ವಿಚಿತ್ರವೇ ಅನ್ನಿಸಹತ್ತಿತ್ತು. ಒಬ್ಬರ ಮೇಲೊಬ್ಬ ಹಿರಿಯರು ಮೊದಲೇ ಗೊತ್ತುಮಾಡಿದಂತೆ ಮಾಯ ವಾಗಹತ್ತಿದ್ದನ್ನು ನೋಡಿ ಅವರು ಹೌಹಾರತೊಡಗಿದರು. ಈ ಹಿರಿಯರ ಸಾವು ಹಳ್ಳಿಯ ಜನರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಹತ್ತಿತು. ಈ ಸಾವುಗಳಿಂದ ಗಂಗನಹಳ್ಳಿ ಅನಾಥವಾಗಿಬಿಟ್ಟಿತು.

ವಿಶ್ವೇಶ್ವರಭಟ್ಟರ ಮರಣದಿಂದ ಗಂಗನಹಳ್ಳಿಯ ಒಂದು ಮನ್ವಂತ

ರವೇ ಬದಲಾದಂತಾಯಿತು. ಹಿರಿಯರ ಸಾವಿನಿಂದ ಗಂಗನಹಳ್ಳಿಯಲ್ಲಿ ಒಂದು ಹೊಸ ಯುಗವೇ ಪ್ರಾರಂಭವಾದಂತಾಯಿತು. ಅಳಿದುಳಿದ ಹಿರಿಯರ ವರ್ಚಸ್ಸು ಅಷ್ಟಾಗಿ ಇರಲಿಲ್ಲವಾದ್ದರಿಂದ ಹೊಸ ಬಾಳಿನ ಹೊಸ ಜನರ ಆಳಿಕೆ ಪ್ರಾರಂಭವಾಯಿತು. ಬಸಪ್ಪಶೆಟ್ಟಿ, ಮೋಹನರಾಯ, ನೀಲಕಂಠಶಾಸ್ತ್ರಿಗಳು ಈ ಹೊಸ ಯುಗದ ದಾರಿಯನ್ನು ತುಳಿಯುವ ಶಿಷ್ಯರಾಗತೊಡಗಿದರು.

ಉರುಳುವ ಕಾಲಚಕ್ರಕ್ಕೆ ತಡೆ ಎಲ್ಲಿ? ಜೀವನದ ದಾರಿಗೆ ಕೊನೆ ಎಲ್ಲಿ ?

ವಿಶ್ವೇಶ್ವರಭಟ್ಟರ ಮಾತು ಇತಿಹಾಸವಾಗತೊಡಗಿತು. ಅವರ ಜೀವನದ ಇತಿಹಾಸ ಲಾವಣಿಗಳಲ್ಲಿ ಉಳಿಯತೊಡಗಿತು. ಆ ಭವ್ಯವಾದ ಜೀವನದ ಬೆಳಕಿನಲ್ಲಿ ಮಿಂದ ಜನ ದಿನದಿನವೂ ಮರೆಯಾಗತೊಡಗಿತು. ಹಳತು ಮಾಯವಾಗತೊಡಗಿತು. ಹೊಸತು ರಭಸದಿಂದ ಕಾಲಿಕ್ಕತೊಡಗಿತು.

ಜೀವನಪ್ರವಾಹದಲ್ಲಿ ಎಲ್ಲವೂ ಹೊಸತು. ಗಂಗನಹಳ್ಳಿ ಈ ಅನಂತ ಪ್ರವಾಹದ ಮುನ್ನಡೆಗೆ ಹೊರತಲ್ಲ.

ವಿಶ್ವದ ದಾರಿಗುಂಟ ಉರುಳುತ್ತಿರುವ ಕಾಲಚಕ್ರದ ಅನಂತ ಗತಿಗೆ ಮುಗಿತಾಯವಿದೆಯೆ ? ಮೂಡಿ ಮುಳುಗಿಸಿ, ಮುಳುಗಿ ಮೂಡಿ ವಿಶ್ವವನ್ನು ಬೆಳಗುತ್ತಿರುವ ಸೂರ್ಯ-ಚಂದ್ರರಿಗೆ ದಣಿವಿದೆಯೆ? ಸಾವಿರ ವರುಷಗಳಿಂದ ನಿಂತ ಪರ್ವತ ಅಲ್ಲಿಯೇ ಇದೆ. ಹರಿಯುವ ಹೊಳೆ ಹರಿಯುತ್ತಿದೆ. ಇದನ್ನು ಕಂಡು ಮರೆಯಾದ ಜನಕ್ಕೆ ಲೆಕ್ಕವಿದೆಯೆ ? ಕಾಣುತ್ತಿರುವ ಜನವೇನು ಕೊನೆಯದೇ ?

ಎರಡನೆಯ ಭಾಗ

೧

ವಿಶ್ವೇಶ್ವರಭಟ್ಟರ ಮರಣದಿಂದ ಗಂಗನಹಳ್ಳಿಯ ಜೀವನದಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತು. ನೀಲಕಂಠಶಾಸ್ತ್ರಿಗಳು ತಂದೆಯ ಹೆಜ್ಜೆಗಳಲ್ಲಿ ಹೆಜ್ಜೆಗಳನ್ನಿಡುತ್ತ ಅವರ ವಿದ್ಯಾಸತ್ರವನ್ನು ಸಾಗಿಸಿಕೊಂಡು ಕರ್ಮಠ ಬ್ರಾಹ್ಮಣರಾಗಿ ಆಚರಣಶೀಲರಾಗಿ ಹಳ್ಳಿಯ ಜನರ ವಿಶ್ವಾಸಕ್ಕೆ ಪಾತ್ರರಾಗಿ ಬಾಳತೊಡಗಿದರು. ಅವರ ಶಿಷ್ಯಸಮುದಾಯವು ಹೊಸ ಗುರುಗಳ ಹಿರಿಯತನವನ್ನು ಒಪ್ಪಿಕೊಂಡು ಮೊದಲಿನ ಸಂಪ್ರದಾಯದಂತೆ ಜೀವನ ಸಾಗಿಸತೊಡಗಿತು. ಸಮಾಜದ ಜೆಂಬಲವೂ ಮೊದಲಿನಂತೆ ಸಾಕಷ್ಟು ದೊರೆಯತೊಡಗಿತು.

ನೀಲಕಂಠಶಾಸ್ತ್ರಿಗಳದು ಮೊದಲಿನಿಂದಲೂ ಸೌಮ್ಯ ಪ್ರಕೃತಿ. ಅವರಿಗೆ ಹೆಚ್ಚಿನ ಜೊಂಜಾಟದಲ್ಲಿ ಆಸಕ್ತಿ ಇರಲಿಲ್ಲ. ತಾವಾಯಿತು ತಮ್ಮ ಆಚರಣೆಯಾಯಿತು, ಶಿಷ್ಯ ಸಮೂಹವಾಯಿತು. ಹೀಗಾಗಿ ಹೆಚ್ಚಿನ ಕಾರಭಾರಗಳೆಲ್ಲ ನರಹರಿಭಟ್ಟರ ಪಾಲಿಗೆ ಬರತೊಡಗಿದವು. ನರಹರಿಭಟ್ಟರು ಮೊದಲಿನಿಂದಲೂ ವ್ಯವಹಾರಕುಶಲರು. ಅವರಿಗೆ ಈ ವಿದ್ಯಾಸತ್ರವನ್ನು ನಡೆಸುವ ಹೊಣೆಗಾಗಿ ಅನೇಕ ಜನರ ಸಂಪರ್ಕ ಬೆಳಸಬೇಕಾಗಿ ಬರತೊಡಗಿತು. ಮನೆಯ ಸಂಸಾರವೂ ಈಗ ಸಾಕಷ್ಟು ಬೆಳೆದು ನಿಂತಿತ್ತು. ಕೇವಲ 'ಮಧುಕರಿ'ಯಿಂದ ಶಿಷ್ಯರ ಹೊಟ್ಟೆ ತುಂಬುವದು ಕಠಿಣವಾಗಿ ತೋರಹತ್ತಿದ್ದರಿಂದ ಅವರು ಸುತ್ತಲಿನ ಹಳ್ಳಿಗಳಲ್ಲಿ ತಿರುಗಾಡಿ ಕಾಳುಕಡಿಗಳ ದೇಶಾವರಿಯನ್ನು ಮಾಡಬೇಕಾಗಿ ಬರುತ್ತಿತ್ತು. ವಿಶ್ವೇಶ್ವರಭಟ್ಟರ ಕೀರ್ತಿಯ ನೆರಳಿನಲ್ಲಿ ಅವರಿಗೆ ಸಾಕಷ್ಟು ಹುಟ್ಟುತ್ತಿತ್ತು. ಆದರೆ ಇದೆಲ್ಲ ಸಂಸಾರಕ್ಕೆ ವಿನಿಯೋಗವಾಗತೊಡಗಿದ್ದರಿಂದ ಶಿಷ್ಯರ ಹೊಣೆಯು ಭಾರವಾಗತೊಡಗಿತು. ಆದರೂ ಅದನ್ನು ಸಾಗಿಸಲೇಬೇಕೆಂಬ ಹಟದಿಂದ ಅವರು ಏನೆಲ್ಲ ಸಾಹಸವನ್ನೂ ಮಾಡುತ್ತಿದ್ದರು.

ಸದಾಶಿವನ ರೀತಿಯೇ ಬೇರೆ. ಅವನಿಗೆ ಯಾವ ಜೊಂಜಾಟವೂ ಬೇಡ. ತಾನಾಯಿತು, ತನ್ನ ಕಾವ್ಯಸಾಮ್ರಾಜ್ಯವಾಯಿತು. ಮನೆಗೆ ಬಂದರೆ ಬಂದ, ಇಲ್ಲದಿದ್ದರೆ ಗೆಳೆಯರ ಮನೆಯಲ್ಲಿ ಎಲ್ಲಿಯಾದರೂ ನಿಂತರೂ ನಿಂತ. ಅವನಿಂದ ಮನೆತನಕ್ಕೆ ಯಾವ ಪ್ರಯೋಜನವೂ ಇಲ್ಲ. ನರಹರಿಭಟ್ಟರು

ಅವನನ್ನು ಒಮ್ಮೆ ಎಚ್ಚರಿಸಿದಾಗ 'ಒಂದು ಕೆಲಸಕ್ಕಾಗಿ ಎಷ್ಟು ಜನ ದುಡಿಯ ಬೇಕು? ನೀನು ಮಾಡುತ್ತಿರುವಾಗ ನನ್ನದೇನು ಕೆಲಸ'ವೆಂದು ಹೇಳಿಬಿಟ್ಟಿದ್ದನು. ನರಹರಿಭಟ್ಟರು 'ಇನ್ನೂ ಹುಡುಗುತನವಿದೆ ಓಡಾಡಲಿ ಪಾಪ. ಮುಂದೆ ತಾನೇ ದಾರಿಗೆ ಬರುತ್ತಾನೆ'ಂದು ಅವನನ್ನು ಪೂರಾ ಅಲಕ್ಷಿಸಿ ಬಿಡಬೇಕಾಯಿತು.

ಗಂಗನಹಳ್ಳಿಯಲ್ಲಿ ವಿಶ್ವೇಶ್ವರಭಟ್ಟರದೊಂದೇ 'ಗುರುಮನೆತನ'ವಾಗಿದ್ದರಿಂದ ಹಳ್ಳಿಗರ ಸೇವೆ ಆ ಮನೆತನಕ್ಕೆ ನಡೆದುಬರುವದು ಕ್ರಮಪ್ರಾಪ್ತವಾಗಿಬಿಟ್ಟಿತ್ತು. ಹಬ್ಬಹರಿದಿನಗಳಲ್ಲಿ, ಧಾರ್ಮಿಕ ಕಾರ್ಯಗಳಲ್ಲಿ, ಮದುವೆ ಮುಂಜಿಗಳಲ್ಲಿ ಹಳ್ಳಿಗರ 'ಸೀದಾ ಸಾಮಗ್ರಿ'ಯು ಭಟ್ಟರ ಮನೆಗೆ ಹುಲುಸಾಗಿ ಬರುತ್ತಿತ್ತು. ಒಂದು ಮರದ ತುಂಬ ಗೋಧಿಯ ಹಿಟ್ಟು, ಅದಕ್ಕೆ ಸರಿಯಾಗಿ ಬೆಲ್ಲ, ಅಕ್ಕಿ, ಒಂದು ಪಾತ್ರೆಯ ತುಂಬ ತುಪ್ಪ, ಕಾಯಿಪಲ್ಯಗಳು, ಮೇಲೆ ದಕ್ಷಿಣೆ. ಇವೆಲ್ಲವುಗಳನ್ನು ನರಹರಿಭಟ್ಟರ ಹೆಂಡತಿ ಒಳಗೆ ತೆಗೆದು ಇಡುತ್ತಿದ್ದಳು. ನೀಲಕಂಠಶಾಸ್ತ್ರಿಗಳ ಹೆಂಡತಿ ಮನೆಗೆ ಹಿರಿಯಳಾದರೂ ಹಿರಿಯತನವನ್ನೆಲ್ಲ ನರಹರಿಭಟ್ಟರ ಪತ್ನಿಯೇ ಮಾಡುತ್ತಿದ್ದಳು. ಮನೆಯ ಹಿರಿಯತನವನ್ನು ನರಹರಿಭಟ್ಟರೇ ಮಾಡುತ್ತಿರುವಾಗ ಅವರ ಪತ್ನಿ ಅವರಿಗೆ ಅನುಗುಣವಾಗಿ ವರ್ತಿಸಬೇಡವೆ? ಹೀಗಾಗಿ ಮನೆಯ ಸೂತ್ರಗಳೆಲ್ಲ ನರಹರಿಭಟ್ಟರ ಹೆಂಡತಿಯಲ್ಲಿಯೇ ಉಳಿಯತೊಡಗಿದವು. ಇದಕ್ಕೆ ನೀಲಕಂಠಶಾಸ್ತ್ರಿಗಳಾಗಲಿ, ಅವರ ಪತ್ನಿಯಾಗಲಿ ಅಡ್ಡ ಬರಲಿಲ್ಲ. ಯಾರು ಮಾಡಿದರೇನು? ಎಲ್ಲರೂ ಮಾಡುವದು ನಮ್ಮ ಮನೆಗಾಗಿಯಲ್ಲವೆ? ಎನ್ನುವ ಭಾವ ಅವರದಾಗಿತ್ತು. ಅವರು ತಮ್ಮ ಮಕ್ಕಳಾದ ನಾನಾಭಟ್ಟ ರಾಮಾಶಾಸ್ತ್ರಿಗಳ ಪೋಷಣೆಯನ್ನು ಕೂಡಾ ನರಹರಿಭಟ್ಟರ ಪತ್ನಿಗೆ ಬಿಟ್ಟುಕೊಟ್ಟಿದ್ದರು. ನರಹರಿಭಟ್ಟರ ಪತ್ನಿ ತಮ್ಮ ಐದು ಮಕ್ಕಳೊಡನೆ ಇವೆರಡನ್ನೂ ಸಾಕುತ್ತಿರುವಾಗ ನೀಲಕಂಠಶಾಸ್ತ್ರಿಗಳ ಪತ್ನಿ ಗೋದಾವರಿಗೆ ಯಾವ ಕಾಳಜಿಯೂ ಇದ್ದಿಲ್ಲ. ಅವರು ನಿಶ್ಚಿಂತರಾಗಿ ಗಂಡನ ಸೇವೆಯಲ್ಲಿ ಕಾಲ ಕಳೆಯುತ್ತಿದ್ದರು. ಮಧ್ಯಾಹ್ನದ ಅಡಿಗೆಯನ್ನು ಬಿಟ್ಟರೆ ಉಳಿದ ಕೆಲಸವೂ ಅವರಿಗಿರುತ್ತಿರಲಿಲ್ಲ.

ವಿಶ್ವೇಶ್ವರಭಟ್ಟರ ಮನೆತನವೊಂದೇ ಗಂಗನಹಳ್ಳಿಯಲ್ಲಿ ಗುರುಮನೆತನವಾಗಿತ್ತೆಂದು ಈಗ ಹೇಳಿದೆನಲ್ಲವೆ? ಆದರೆ ಪ್ರಗತಿಯ ಹೆಜ್ಜೆಯಲ್ಲಿ ಮಾರ್ಗಕ್ರಮಣ ಮಾಡುತ್ತಿರುವ ಗಂಗನಹಳ್ಳಿಯಲ್ಲಿ ಈ ಮಾತು ಕೊನೆಯುವರೆಗೂ ಉಳಿಯುವದು ಸಾಧ್ಯವಾಗಬೇಕೆಂತು? ಗಂಗನಹಳ್ಳಿಯ ಆದಿದೈವತರಾದ ವಿಶ್ವೇಶ್ವರಭಟ್ಟರು ಈ ಹಳ್ಳಿಯ ಪ್ರಗತಿಗಾಗಿ ಜೀವನವನ್ನು ಮೀಸಲಿಟ್ಟು

ದುಡಿದ ಶ್ರಮ ಸಾರ್ಥಕವಾಗಬೇಡವೆ ? ಅವರ ಬಳ್ಳಿ ಹಬ್ಬಬೇಡವೆ ? ಆ ಬಳ್ಳಿ ಒಂದು ಮನೆತನಕ್ಕೆ ಮಾತ್ರ ಮೀಸಲೆಂದು ಭಟ್ಟರು ಸರ್ವಥಾ ತಿಳಿದಿರ ಲಿಲ್ಲ. ಸಾರ್ವತ್ರಿಕ ಪ್ರಗತಿಯೇ ಅವರ ಹೆಗ್ಗುರಿಯಾಗಿದ್ದಿತು. ಅವರ ಜೀವ ಮಾನದಲ್ಲಿ ಇದನ್ನು ಕಾಣುವ ಯೋಗ ಅವರಿಗೆ ಇರದಿದ್ದರೂ ಅವರು ಬಿತ್ತಿದ ಬೀಜ ಬಂಜೆಯಾಗಲಿಲ್ಲ.

ಈಗ ಐದು ವರುಷಗಳ ಹಿಂದೆ ವಿದ್ಯಾಭ್ಯಾಸಕ್ಕಾಗಿ ಹೋಗಿದ್ದ ಸೇತೂ ರಾಮಾಚಾರ್ಯರ ಮಗ ಧೀರನು ಈಗ ವಿದ್ವನ್ಮಣಿ ಧೀರೇಂದ್ರಾಚಾರ್ಯ ನಾಗಿ ಗಂಗನಹಳ್ಳಿಗೆ ಮರಳಿದನು. ಅವನ ಮುಖದಲ್ಲಿ ಪಾಂಡಿತ್ಯದ ಕಳೆ ಉಕ್ಕುತ್ತಿತ್ತು. ಅದು ಇನ್ನೂ ಸ್ಪಷ್ಟವಾಗುವಂತೆ ಮುಖದ ಮೇಲೆ ನೀಳವಾದ ಗಡ್ಡಗಳು ಶೋಭಿಸುತ್ತಿದ್ದವು. ಅವನು ಹೊದೆಯುವದು ಯಾವಾಗಲೂ ಕಾಶ್ಮೀರೀ ಶಾಲು. ಶುಭ್ರವಾದ ಧೋತರ. ಅಷ್ಟೇ ಶುಭ್ರವಾದ ದಂತಪಂಕ್ತಿ. ನಗುವದೊಂದು ಅವನ ಸ್ವಭಾವ. ಆ ನಗೆ ಎಲ್ಲರನ್ನೂ ಮರಳುಮಾಡಿ ಅವನ ಕಡೆ ಸೆಳೆಯತೊಡಗಿತು. ಅವನು ಕರ್ಮಠ ಬ್ರಾಹ್ಮಣನೆಂಬ ನಂಬಿಗೆ ಊರವ ರಲ್ಲಿ ಬೇರೂರಿತು. ಅವನ ಆಚರಣೆ ಇದಕ್ಕೆ ಪೋಷಕವಾಗಿದ್ದಿತು

ಗಂಗನಹಳ್ಳಿಯ ಬ್ರಾಹ್ಮಣಸಮಾಜದಲ್ಲಿ ವೈಷ್ಣವರ ಸಂಖ್ಯೆಯೇ ಹೆಚ್ಚು. ಆದರೂ ಅವರೆಲ್ಲರಾಮೇಶ್ವರನಿಗೆ ನಡೆದುಕೊಳ್ಳುತ್ತಿದ್ದರು. ವಿಶ್ವೇಶ್ವರ ಭಟ್ಟರು ಜೀವಂತ ಇರುವವರೆಗೆ ಅವರನ್ನು ಗುರುಗಳೆಂದು ಭಾವಿಸಿದ್ದರು. ಅವರ ವ್ಯಕ್ತಿತ್ವವೇ ಅಂತಹುದು. ಅಲ್ಲಿ ಸ್ಮಾರ್ತ-ವೈಷ್ಣವ ಪ್ರಶ್ನೆಯೇ ಬರುತ್ತಿರ ಲಿಲ್ಲ. ಆಗಿನ ವೈಷ್ಣವ ಸಮಾಜದ ಮುಂದಾಳುವು ಭಟ್ಟರೇ ಆಗಿದ್ದರು. ಇದನ್ನು ಸೇತೂರಾಮಾಚಾರ್ಯರೂ ಒಪ್ಪಿಕೊಂಡಿದ್ದರು. ವಿಶ್ವೇಶ್ವರಭಟ್ಟರು ಮರೆಯಾದಾಗ ಈಗ ಆ ಪ್ರಶ್ನೆ ಉಳಿದಿರಲಿಲ್ಲ. ಮೇಲಾಗಿ ಧೀರೇಂದ್ರಾ ಚಾರ್ಯರದು ಆಡಂಬರದ ಪೂಜೆ. ಈ ಪೂಜೆ ವೈಷ್ಣವರನ್ನೆಲ್ಲ ಅತ್ತಕಡೆಗೆ ಎಳೆದುಕೊಂಡುಬಿಟ್ಟಿತು. ಇದು ಸ್ವಾಭಾವಿಕವಾಗಿಯೇ ಇದ್ದಿತು. ಇದರಿಂದ ನೀಲಕಂಠಶಾಸ್ತ್ರಿಗಳಿಗೆ ಬಲವಾದ ಪೆಟ್ಟು ಬಿದ್ದಿತೇನೋ ನಿಜ. ಆದರೆ ಇದು ಅನಿವಾರ್ಯವಾಗಿತ್ತು. ದೇಶಪಾಂಡೆ ಮೋಹನರಾಯರು ಧೀರೇಂದ್ರಾಚಾರ್ಯರ ಪರಮಶಿಷ್ಯರಾಗಿದ್ದರಿಂದ ಈ ಮಾತು ಇನ್ನೂ ಸ್ಪಷ್ಟವಾಗಿ ತೋರಹತ್ತಿತ್ತು. ನರಹರಿಭಟ್ಟನಿಗೆ ಮಾತ್ರ ಈ ಮಾತು ಅಸಹ್ಯವಾಗತೊಡಗಿತು. ಅವನಿಗೆ ಧೀರೇಂದ್ರಾಚಾರ್ಯರ ಬರುವು ಬರಸಿಡಿಲಿನಂತೆ ಎರಗಿದಂತಾಯಿತು. ಆದರೆ ಅದಕ್ಕೆ ಯಾವ ಉಪಾಯವೂ ಇರಲಿಲ್ಲ. ಒಳಗೊಳಗೇ ನರಹರಿಭಟ್ಟನು ಕುದಿಯತೊಡಗಿದನು. ಅವನ ಕುದಿಯು ಇನ್ನೂ ಹೆಚ್ಚಾಗುವಂತೆ ಇನ್ನೊಂದು

ಸಂದರ್ಭವು ನಡೆಯಿತು. ಶಿಷ್ಯರಾದವರಲ್ಲಿ ವೈಷ್ಣವ ಶಿಷ್ಯರು ಒಂದು ದಿನ ನೀಲಕಂಠಶಾಸ್ತ್ರಿಗಳಿಗೆ ಅಡ್ಡಬಿದ್ದು ತಮಗೆ ಧೀರೇಂದ್ರಾಚಾರ್ಯರಲ್ಲಿ ಅಧ್ಯಯನ ಮಾಡಲು ಒಪ್ಪಿಗೆ ಕೊಡಬೇಕೆಂದು ಕೇಳಿದರು. ಅವರು ಆಗಲೇ ಗಂಟುಗದಡಿಗಳನ್ನು ಕಟ್ಟಿಕೊಂಡು ಹೊರಡುವ ತಯಾರಿಯಲ್ಲಿಯೇ ಇದ್ದರು. ಈ ಮಾತನ್ನು ಕೇಳಿ ಕೆಂಡವಾದ ನರಹರಿಭಟ್ಟನು,

"ಕೂಳಿಗೆ ಮೆಚ್ಚಿ ಹೋಗುತ್ತಿದ್ದರೆ ಸಾಯಿರಿ. ಆದರೆ ವಿದ್ಯೆ ಕಲಿಯಲಿಕ್ಕೆಂದು ಮಾತ್ರ ಹೇಳಬೇಡಿರಿ. ಅವನಲ್ಲಿ ವಿದ್ಯೆಯಿದ್ದರಲ್ಲವೇ ನಿಮಗೆ ಕಲಿಸುವುದು? ಸುಮ್ಮನೆ ನನ್ನ ಮಾತು ಕೇಳಿ ಇಲ್ಲಿಯೇ ಇದ್ದುಬಿಡಿರಿ." ನರಹರಿಭಟ್ಟನ ಮಾತಿನಲ್ಲಿ ಒಂದು ರೀತಿಯ ಭಯವಿತ್ತು. ಅವನ ವ್ಯವಹಾರಕುಶಲತೆ ಈ ಮಾತನ್ನು ಆಡಿಸಿತ್ತು.

"ಅವರಿಗೆ ಅಡ್ಡ ಬರಬೇಡ ನರಹರೀ! ಅವರಿಗೆ ಈ 'ಗುರುಕುಲ'ವಾಸ ಬೇಡವಾಗಿದೆ. ಬೇಡವಾಗಿ ಅವರು ಇನ್ನು ಇಲ್ಲಿ ಏನನ್ನೂ ಕಲಿಯಲಾರರು. ಅವರು ಕಲಿತು ವಿದ್ಯಾವಂತರಾಗುವದೇ ನಮ್ಮ ಧ್ಯೇಯ. ಇದು ಇಲ್ಲಿಯೇ ಸಾಧಿಸಬೇಕೆಂಬ ನಿಯಮವಿಲ್ಲ. ಅವರಿಗೆ ನನ್ನ ಆಶೀರ್ವಾದವಿದೆ, ಹೋಗಲಿ." ನೀಲಕಂಠಶಾಸ್ತ್ರಿಗಳು ಮನಃಪೂರ್ವಕವಾಗಿ ಹೇಳಿದರು.

"ಆದರೆ ಅವರಿಗೆ ಅಲ್ಲಿ ವಿದ್ಯೆ ಸಿಗುವದಿಲ್ಲ ಅಣ್ಣ !"

"ಈ ಮಾತು ಅವರಿಗೆ ಗೊತ್ತಿದೆ. ಇದರಲ್ಲಿ ನಾವೇಕೆ ಕೈಹಾಕಬೇಕು? ಅಲ್ಲಿ ಅವರಿಗೆ ನಿರಾಶೆಯಾದರೆ ಅವರು ಮತ್ತೆ ಬರಲಿ. ಈ ಬಾಗಿಲು ಯಾವಾಗಲೂ ತೆರವಾಗಿಯೇ ಇರುತ್ತದೆ. ಧೀರೇಂದ್ರನೂ ಕಲಿತು ಬಂದಿದ್ದಾನೆ. ಸಾಕಷ್ಟು ಪಾಂಡಿತ್ಯವನ್ನೂ ಸಂಪಾದಿಸಿದ್ದಾನೆ. ಅವನಲ್ಲಿ ಸಾಕಷ್ಟು ಉತ್ಸಾಹವೂ ಇದೆ. ನಮ್ಮ ಕೆಲಸವನ್ನು ಅವನೂ ಮಾಡಿ ಪೂರೈಸಲಿ. ವಿಶ್ವೇಶ್ವರ ಭಟ್ಟರ ಬಳ್ಳಿ ಹಬ್ಬಲಿ. ಒಂದಕ್ಕೆ ಹತ್ತಾಗಲಿ. ಇದಕ್ಕೆ ನಾವು ಅಡ್ಡಿ ಮಾಡಬಾರದು ತಮ್ಮ!"

ದಿನಗಳು ಉರುಳಿದ ಹಾಗೆ ಗಂಗನಹಳ್ಳಿಯನ್ನು ಧೀರೇಂದ್ರಾಚಾರ್ಯರು ವ್ಯಾಪಿಸಹತ್ತಿದರು. ಅವರ ಶಿಷ್ಯ ಸಮುದಾಯವು ಬೆಳೆಯತೊಡಗಿತು. ಜನರ ಬೆಂಬಲವೂ ದೊರೆಯತೊಡಗಿತು. ಊರ ದೇಶಪಾಂಡೆ ಅವರ ಕೈವಾರಿಯಾಗಿಬಿಟ್ಟದ್ದರಿಂದ ಸ್ವಾಭಾವಿಕವಾಗಿ ಜನರ ಒಲವೂ ಅತ್ತ ಹರಿಯತೊಡಗಿತು. ದೇಶಪಾಂಡೆಯ ಜೀವದ ಗೆಳೆಯನಾದ ಬಸಪ್ಪಶೆಟ್ಟಿ ಮೊದಮೊದಲು ಧೀರೇಂದ್ರಾಚಾರ್ಯರನ್ನು ಕಡೆಗಣಿಸಿದರೂ ಗೆಳೆಯನ ಸ್ನೇಹಕ್ಕಾಗಿ ತನ್ನ ಸಹಾನುಭೂತಿಯನ್ನು ಅತ್ತ ಹೊರಳಿಸಿದನು. ಆದರೂ

ಅವನಿಗೆ ಭಟ್ಟರ ಮನೆತನದ ಮೇಲೆ ಪೂಜ್ಯಭಾವವಿತ್ತು. ಈಗಾಗಲೇ ಅವನಲ್ಲಿ ಒಂದು ಯೋಚನೆ ಮೊಳೆತು ನಿಂತಿತ್ತು. ಅದನ್ನು ಕಾರ್ಯಗತ ಮಾಡಲು ಒಂದೆರಡು ತಿಂಗಳು ಬೇಕಾಗಿತ್ತಾದ್ದರಿಂದ ಅವನು ಯಾರಿಗೂ ಕೆಡಕಾಗುವ ಹವ್ಯಾಸಕ್ಕೆ ಬೀಳಲಿಲ್ಲ. ಬಸಪ್ಪಶೆಟ್ಟಿಯ ಯೋಜನೆಯೂ ಫಲಿಸುವ ಕಾಲ ಬಂದಿತು.

ಕಲ್ಲುಮಠದ 'ಮರಿದೇವರು' ಕಾಶಿಯಲ್ಲಿ ವಿದ್ಯಾಸಂಪನ್ನರಾಗಿ ಗಂಗನ ಹಳ್ಳಿಯ ಪಟ್ಟದ ದೇವರಾಗಿ ಆ ದಿನ ಮರಳಿದರು. ಆ ದಿನ ಗಂಗನಹಳ್ಳಿಯಲ್ಲಿ ಸಂಭ್ರಮವೇ ಸಂಭ್ರಮ. ಊರವರೆಲ್ಲ ಒಂದುಗೂಡಿ ವೈಭವಪೂರ್ಣವಾದ ಮೆರವಣಿಗೆಯಲ್ಲಿ ಪಟ್ಟದ ದೇವರನ್ನು ಕರೆತಂದರು. ಈ ಮೆರವಣಿಗೆಯಲ್ಲಿ ನರಹರಿಭಟ್ಟರು ಹೆಚ್ಚಿನ ಆಸ್ಥೆಯನ್ನು ವಹಿಸಿ ಓಡಾಡತೊಡಗಿದರು. ಇದಕ್ಕೂ ಅವರ ವ್ಯವಹಾರಕೌಶಲ್ಯವೇ ಕಾರಣವಾಗಿದ್ದಿತು.

"ನಾವೆಲ್ಲ ಒಂದು ಬಸಪ್ಪ! ನಾವೆಲ್ಲ ಶೈವರು. ಶಿವಭಕ್ತರು. ಈ ಮಾಧ್ವರದೊಂದು ಜಾತಿಯೆ? ನೀವು ವೀರಶೈವರು. ನಾವು ಬ್ರಾಹ್ಮಣ ಶೈವರು. ಶೈವರೆಲ್ಲ ಒಂದು. ನೀನೇ ನೋಡುವಿಯಲ್ಲ. ಈ ಮೆರವಣಿಗೆಯಲ್ಲಿ ಆ ಧೀರೇಂದ್ರನ ಒಂದು ಪಿಳ್ಳೆಯಾದರೂ ಬಂದಿದೆಯೆ? ಎಷ್ಟೆಂದರೂ ಅವರು ದುರಭಿಮಾನಿಗಳು!" ಎಂದು ಆಗಾಗ ಬಸಪ್ಪಶೆಟ್ಟಿಯ ಕಿವಿಯನ್ನು ಊದ ತೊಡಗಿದನು ನರಹರಿಭಟ್ಟ.

"ಇದು ಹೀಗಿದೆಯೆ? ಆ ಆಚಾರಿಗೆ ಇಷ್ಟು ಬಂತೆ?" ಎನ್ನುವಂತಾ ಯಿತು ಬಸಪ್ಪಶೆಟ್ಟಿಗೆ.

"ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ಶೆಟ್ಟಿ?"

ಕಲ್ಲುಮಠದಲ್ಲಿ ಪಟ್ಟದ ದೇವರು ಬಂದು ನಿಂತಮೇಲೆ ಬಹುಜನ ಸಮಾಜದ ಸಹಾನುಭೂತಿ ಆ ಕಡೆಗೆ ಸ್ವಾಭಾವಿಕವಾಗಿಯೇ ಹರಿಯತೊಡ ಗಿತು. ಇದರಿಂದಲೂ 'ಭಟ್ಟ'ರ ಮನೆತನಕ್ಕೆ ಕೊಡಲಿಯ ಏಟೇ ಬಿದ್ದಂತಾ ಯಿತು. ಇದ್ದು ಬಿದ್ದವರ ಸೇವೆಸಹಾಯಗಳೆಲ್ಲ ಮಠದ ಕಡೆಗೆ ಹರಿಯಹತ್ತಿದ್ದ ರಿಂದ ಮುಖ್ಯವಾದ ಸಹಾಯದ ನೆರವನ್ನು ಈ ಮನೆತನ ತಪ್ಪಿಸಿಕೊಂಡು ಬಿಟ್ಟಿತು.

ಗಂಗನಹಳ್ಳಿ ಈಗ ಮೂರು ವಿಭಾಗವಾಗಿಬಿಟ್ಟಿತು. ಮೂರು ಪಂಗಡ ಗಳ ನಿರ್ಮಾಣವಾದವು. ಒಂದು ವೀರಶೈವರದು, ಇನ್ನೊಂದು ವೈಷ್ಣವರದು, ಉಳಿದದ್ದು ಸ್ಮಾರ್ತರದು. ಮೊದಲನೆಯ ಪಂಗಡಕ್ಕೆ ಬಹುಜನ ಸಮಾಜದ ಬೆಂಬಲವಿದ್ದದ್ದರಿಂದ ಅದು ಬೆಳೆದು ಪ್ರಬಲವಾಗಿಬಿಟ್ಟಿತು. ಬ್ರಾಹ್ಮಣ

ಸಮಾಜದಲ್ಲಿ ವೈಷ್ಣವ ಪಂಗಡಕ್ಕೆ ಬೆಂಬಲ ಹೆಚ್ಚು. ಬೆರಳಿನಿಂದ ಎಣಿಸು ವಷ್ಟು ಭಕ್ತರಿದ್ದ ಸ್ಮಾರ್ತ ಪಂಗಡವು ಜೋಪಾಪಿಯಂತೆ ಕಳೆಗುಂದಿ ಬಾಳ ತೊಡಗಿತು.

ವಿಶ್ವೇಶ್ವರಭಟ್ಟರ ಕಾಲದಲ್ಲಿದ್ದುದು ಒಂದೇ ಸಮಾಜ. ಅದು ಗಂಗನ ಹಳ್ಳಿಯ ಸಮಾಜ. ಆಗ ಒಂದೇ ಪಂಗಡವಿತ್ತು. ಅದು ಗಂಗನಹಳ್ಳಿಯ ಪಂಗಡ. ಈ ಸಮಾಜವನ್ನು ಏಕಸೂತ್ರತೆಯಲ್ಲಿಡುವ ಕರ್ತೃತ್ವಶಕ್ತಿ ಅವರದಾ ಗಿತ್ತು. ಒಮ್ಮೆ ಹಿಂದೂ ಮುಸಲ್ಮಾನರಲ್ಲಿ ವಿದ್ವೇಷಭಾವ ಬಂದಾಗ ಅದನ್ನು ಅವರು ಚತುರತೆಯಿಂದ ಹೋಗಲಾಡಿಸಿ ಏಕಸೂತ್ರತೆಯನ್ನು ಪ್ರಸ್ಥಾಪಿಸಿ ದ್ದರು. ಆಗಲೂ ವೈಷ್ಣವರಿದ್ದರು. ಆಗಲೂ ಸ್ಮಾರ್ತರಿದ್ದರು. ಆದರೆ ಅವರೆಲ್ಲ ಗಂಗನಹಳ್ಳಿಯಲ್ಲಿ ಸಮಾವೇಶವಾಗಿಬಿಟ್ಟಿದ್ದರು. ಇಂದು ಅವರ ಬಳ್ಳಿ ಹಬ್ಬಿ ಮರವಾಗಿ ನಿಂತಿದೆ. ಆದರೆ ಅದಕ್ಕೆ ಒಡೆದ ಟಿಸಿಲು ಅನಂತವಾಗಿಬಿಟ್ಟಿದೆ. ಅಂದಿನ ಏಕಸೂತ್ರತೆಯು ಇಂದು ಕ್ರಮವಾಗಿ ಮಾಯವಾಗತೊಡಗಿದೆ. ಇದಕ್ಕೆ ಪ್ರಗತಿಯೆಂದು ಕರೆಯುವ ಹವ್ಯಾಸದಲ್ಲಿ ಸಂಕುಚಿತಭಾವ ಬೆಳೆಯ ತೊಡಗಿದೆ. ನಾವೆಲ್ಲರೂ ಒಂದು ಎಂಬ ಭಾವಕ್ಕೆ ಬೆಲೆಯಿಲ್ಲದಾಗಿದೆ. ನಾವು ಅವರು, ನಾವು ಇವರು ಎಂಬ ಭಾವ ಬೆಳೆಯತೊಡಗಿದೆ. ಗಂಗನಹಳ್ಳಿ ಕಾಲನ ಅನಂತಚಕ್ರದಲ್ಲಿ ಸಿಕ್ಕು ಚಲಿಸಹತ್ತಿದೆ. ಹೊಸ ದಿನಗಳು ಬಂದಂತೆ ಹೊಸ ರೂಪಗಳು ಬರಬೇಡವೆ? ಹೊಸ ಮಾತುಗಳು ಹುಟ್ಟಬೇಡವೇ? ವಿಶ್ವದ ಗತಿಗೆ ವೈವಿಧ್ಯ ಬೇಕೇನೋ ಎಂಬಂತೆ ಗಂಗನಹಳ್ಳಿ ಕೂಡ ಇಂದು ವೈವಿಧ್ಯ ಪೂರ್ಣವಾಗಿದೆ. ವಿಶ್ವಜೀವನಕ್ಕೆ ಗಂಗನಹಳ್ಳಿಯೂ ಹೊರತಲ್ಲ.

ಊರಲ್ಲಿ ನಡೆಯುತ್ತಿರುವ ಯಾವ ಸಂಗತಿಗಳ ಅರಿವಿಲ್ಲದಂತೆ ಸದಾ ಶಿವನ ಜೀವನವು ಬೇರೆ ರೀತಿಯಿಂದಲೇ ಸಾಗತೊಡಗಿತು. ಊರೂರು ಅಲೆಯುವದು, ಜಾತ್ರೆಗಳಲ್ಲಿ ಮೋಜು ಮಾಡುವದು, ಲಾವಣಿಗಳನ್ನು ಹಾಡು ವದು, ಕವಿತೆಗಳನ್ನು ಕಟ್ಟುವದು ಅವನ ಕಾರ್ಯಕ್ರಮಗಳಾಗಿಬಿಟ್ಟವು. ಈ ಕೆಲಸವಿಲ್ಲದ ಕೆಲಸಗೇಡಿಗೆ ಈ ಕಾರ್ಯಕ್ರಮಗಳಲ್ಲಿ ಬಿಡುವೇ ಸಿಕ್ಕದಾ ಯಿತು. ಹಳ್ಳಿಯ 'ಉಂಡಾಡಿ'ಗಳೆಲ್ಲ ಅವನ ಗೆಳೆಯರಾಗಿಬಿಟ್ಟರು. ಅವರ ಮಧ್ಯದಲ್ಲಿ ಅವನು ಮನೆಯನ್ನೂ ಮರೆಯತೊಡಗಿದನು. ಒಮ್ಮೊಮ್ಮೆ ಅವನು ಮನೆಗೆ ಬಂದಾಗ ಅವನ ಕಣ್ಣು ಕೆಂಪಗಾಗಿರುತ್ತಿದ್ದವು. ರಾತ್ರೆಯೆಲ್ಲ ಜಾಗ ರಣೆ ಮಾಡಿದ ಚಿಹ್ನೆ ಸ್ಪಷ್ಟವಾಗಿ ಕಾಣುತ್ತಿತ್ತು. ತಮ್ಮನ ಈ ರೀತಿಯನ್ನು ನೋಡಿ ಸಹಿಸಲಾರದೆ ಸರಹರಿಭಟ್ಟರು,

"ನಿನಗೆ ಮನೆಯೆಂಬುದಿಲ್ಲವೆ?" ಎಂದು ಕೇಳಿದಾಗ,

"ಈ ಮನೆಯು ಯಾರದು ?" ಎಂದು ಕೇಳಿಬಿಡುವನು.

"ಈ ಜಾಗರಣೆಯ ಅರ್ಥವೇನು ಸದಾಶಿವ? ದಿನಾಲು ನೀನು ಅಲ್ಲದ ಮುಟ್ಠಾಳರನ್ನು ಕೂಡಿ 'ಗಂಜೀಫು' ಆಡುವದು ನಮ್ಮ ಮನೆತನಕ್ಕೆ ಕೀರ್ತಿ ತರುವಂತಹದಲ್ಲ. ಮನೆಯಲ್ಲಿ ಸಾಕಷ್ಟು ಕೆಲಸವಿರುವಾಗ ನೀನು ಅತ್ತಿತ್ತ ಅಲೆಯುವದೆಂದರೇನು ?" ನರಹರಿಭಟ್ಟರು ತಮ್ಮ ಕಿವಿಯವರೆಗೆ ಬಂದ ಮಾತುಗಳನ್ನು ಕೇಳಿಬಿಟ್ಟರು.

"ನಾನು 'ಗಂಜೀಫು' ಆಡುತ್ತಿರುವದಿಲ್ಲ ಅಣ್ಣಾ. ಆ ಆಟ ನನಗೆ ತೀರಾ ಹೊಸದು. ನಮ್ಮ ಮನೆತನದ ಕೀರ್ತಿಗೆ ಕಲಂಕ ತರುವ ಯಾವ ಕೆಲಸವನ್ನೂ ನಾನು ಮಾಡುತ್ತಿರುವದಿಲ್ಲ."

"ಹಾಗಾದರೆ ನೀನು ಮಾಡುತ್ತಿರುವದಾದರೂ ಏನು ?"

"ನಾನು ಮಾಡುತ್ತಿರುವ ಕೆಲಸ ಅಪಾರವಾಗಿದೆ."

"ಒಂದು ಬಿಡಿಕಾಸು ತರದ ನಿನ್ನ ಕೆಲಸವಾದರೂ ಯಾವುದು ?"

"ಸಮಯ ಬಂದಾಗ ನಿಮಗೆ ಗೊತ್ತಾದೀತು. ನೀವು ಸುಮ್ಮನೆ ನನ್ನ ಬಗ್ಗೆ ಇಲ್ಲದ ಸಂಶಯ ತೆಗೆದುಕೊಳ್ಳಬೇಡಿರಿ."

"ಅದೇನೇ ಇದ್ದರೂ ನೀನು ಮನೆಯಲ್ಲಿಯೇ ಇರಬೇಕು."

"ನನಗೆ ಮನೆಯಲ್ಲಿ ಬಿದ್ದುಕೊಳ್ಳುವುದು ಸಾಧ್ಯವಿಲ್ಲ ಅಣ್ಣ."

"ಹಾಗಾದರೆ ನಮ್ಮ ಮನೆತನ ನಡೆಯಲಾರದು. ನಿನ್ನ ಅನ್ನಕ್ಕಾಗಿ ಯೊದರೂ ನೀನು ದುಡಿಯಬೇಕು."

"ನನ್ನ ಅನ್ನ ನಿಮಗೆ ಭಾರವಾಗಿದ್ದರೆ ಹಾಗೆ ಹೇಳಿಬಿಡಿರಿ. ನಾನು ಮನೆಯನ್ನೇ ಬಿಟ್ಟುಬಿಡುತ್ತೇನೆ."

ಸದಾಶಿವನ ಮಾತುಗಳನ್ನು ಕೇಳಿ ನರಹರಿಭಟ್ಟರು ನಡುಗಿದರು. ಇನ್ನು ಹೆಚ್ಚು ಜಗ್ಗಿದರೆ ಹಗ್ಗ ಹರಿದುಹೋಗಬಹುದೆಂದು ತಿಳಿದು. "ನೀನು ದೊಡ್ಡವನಾಗಿದ್ದೀ ಸದಾಶಿವ! ಹೊಣೆಯನ್ನರಿತು ಕೆಲಸಮಾಡು. ನಿಮ್ಮ ತಂದೆಯ ಅಭಿಮಾನ ನಿನಗೂ ಇರಲಿ" ಎಂದು ಒಳಗೆ ನಡೆದುಬಿಟ್ಟರು.

ಅಂದಿನಿಂದ ಸದಾಶಿವನು ಮನೆಗೆ ಬರುವದು ತೀರಾ ಕಡಿಮೆಯಾಗಿ ಬಿಟ್ಟಿತು. ಅವನು ಮಾಡುತ್ತಿರುವದೇನು ? ಅವನು ಮಾಡುತ್ತಿರುವ ಕೆಲಸ ಬೇರೆಯೇ ಇದ್ದಿತು. ಅವನು ತನ್ನ ಓರಿಗೆಯ ಗೆಳೆಯರ ತಂಡದೊಂದಿಗೆ ಒಂದು 'ಬಯಲಾಟ'ವನ್ನು ಕೂಡಿಸಲು ಹೆಣಗತೊಡಗಿದ್ದನು. 'ಸಾವಿತ್ರಿ-ಸತ್ಯವಾನ್' ಎಂಬುದೇ ಆ ಆಟ. ಇದಕ್ಕಾಗಿ ಅವನು ಏನೆಲ್ಲ ಶ್ರಮ ವಹಿಸ ತೊಡಗಿದ್ದನು. ಈ ಕಾರ್ಯಪ್ರಚೋದನೆಗೆ ಅವನು ನಾಗರಹಳ್ಳಿಯ ಜಾತ್ರೆ

ಯಲ್ಲಿ ನೋಡಿದ ಮಾನಿಂಗಪುರದ 'ಪಾರಿಜಾತ'ವೇ ಕಾರಣವಾಗಿದ್ದಿತು. ಗೊಡ್ಡು ಹುಂಬರು ನಾಟಕವಾಡುತ್ತಿರುವಾಗ ನಾವೇಕೆ ನಾಟಕ ಕೂಡಿಸ ಬಾರದೆಂದು ಅವನು ಈ ಕಾರ್ಯಕ್ಕೆ ಪ್ರವೃತ್ತನಾದನು. ತಾನೇ ನಾಟಕವನ್ನು ಬರೆದು ಪಾತ್ರವರ್ಗವನ್ನು ಕೂಡಿಸಿ ಕೆಲಸವನ್ನು ಆರಂಭಿಸಿಯೇಬಿಟ್ಟನು.

ಈ ಮಾತು ನರಹರಿಭಟ್ಟರ ಕಿವಿಗೆ ಬಂದಾಗ ಅವರು ಕಿಡಿಕಿಡಿಯಾಗಿ ಬಿಟ್ಟರು. "ವಿಶ್ವೇಶ್ವರಭಟ್ಟರ ಮಗನು ಬಯಲಾಟದಲ್ಲಿ ಕುಣಿಯುವದೆಂದ ರೇನು? ಇದಕ್ಕೂ ಹೆಚ್ಚಿನ ಅಪಮಾನವಿರುವುದೇ? ಇದೆಂತಹ ಆಪತ್ತು!" ಎಂದು ಗೋಳಾಡತೊಡಗಿದರು. ಈ ಸುದ್ದಿಯನ್ನು ಕೇಳಿ ನೀಲಕಂಠಶಾಸ್ತ್ರಿ ಗಳೂ ದಿಕ್ಕುಗಾಣದವರಾದರು. 'ನಮ್ಮ ಮನೆತನದ ಪುಣ್ಯ ತೀರಿತೇನೋ' ಎಂದು ನಿಟ್ಟುಸಿರು ಸೂಸಿದರು.

ಸದಾಶಿವನನ್ನು ಹಿಡಿದು ತರಲು ನರಹರಿಭಟ್ಟರಿಗೆ ನಾಲ್ಕು ದಿನಗಳೇ ಹಿಡಿದವು. ಕೊನೆಗೊಮ್ಮೆ ಅವನು ಮೇಲಿನ ಮನೆಯ ಮೇಲಗಿರಿಯ ಮನೆಯಲ್ಲಿ ಸಿಕ್ಕಾಗ ಅವನನ್ನು ಕರೆದು ತಂದು ನೀಲಕಂಠಶಾಸ್ತ್ರಿಗಳ ಎದು ರಿಗೆ ನಿಲ್ಲಿಸಿ,

"ನಿಮ್ಮ ಪ್ರಚಂಡನಾದ ತಮ್ಮನು ಬಂದಿದ್ದಾನೆ. ಏನು ಹೇಳುವಿರೋ ಹೇಳಿರಿ" ಎಂದು ಗುಡುಗಿದರು.

ಸದಾಶಿವನಿಗೆ ತಾನು ಮಾಡುತ್ತಿರುವ ತಪ್ಪಾವುದೆಂದು ತಿಳಿಯದ್ದ ರಿಂದ ಅವನು ಸಮಾಧಾನದಿಂದಲೇ ನಿಂತನು.

"ನೀನು ಬಯಲಾಟವನ್ನು ಕೂಡಿಸುತ್ತಿರುವುದು ನಿಜವೇ ತಮ್ಮ!"

"ನಾನು ದೇವರ ಆಟವನ್ನು ಹೂಡಿರುವದು ನಿಜ ಅಣ್ಣ."

"ಅದರಲ್ಲಿ ನೀನೂ ಪಾತ್ರವಹಿಸುತ್ತೀಯಾ?"

"ನನ್ನದೇ ಮುಖ್ಯ ಪಾತ್ರ. ಸತ್ಯವಾನನ ಪಾತ್ರ ನನಗೆ ಬಹಳ ಮೆಚ್ಚು. ಅದರಿಂದ ನಾನೇ ಅದನ್ನು ಆರಿಸಿಕೊಂಡಿದ್ದೇನೆ."

"ನೀನು ವಿಶ್ವೇಶ್ವರಭಟ್ಟರ ಮಗನೆಂದು ಅರಿತಿರುವಿಯಷ್ಟೆ!"

"ಎಂತಹ ಮಾತನ್ನು ಕೇಳುವಿರಿ ಅಣ್ಣ!"

"ಕೇಳಬೇಕಾದ ಸಮಯ ಬಂದದ್ದರಿಂದಲೇ ಕೇಳುತ್ತೇನೆ ತಮ್ಮ! ಸುಪ್ರಸಿದ್ಧ ವೈದಿಕ ಮನೆತನದಲ್ಲಿ ಜನ್ಮತಾಳಿದ ನೀನು ಬಯಲಾಟದಲ್ಲಿ ಗೆಜ್ಜೆ ಕಟ್ಟಿಕೊಂಡು ಕುಣಿದರೆ ಮನೆತನದ ಮರ್ಯಾದೆ ಕಾಸಿಗೆ ಪಂಚೇರಾಗುವ ದೆಂಬುದನ್ನು ನೀನು ಅರಿಯಬೇಡವೆ? ನಾವು ವೈದಿಕರು. ನಾವು ಮಾಡುವ ಕೆಲಸ ಬೇರೆಯೇ ಇರುವಾಗ ಈ ಕ್ಷುದ್ರ ಕೆಲಸಕ್ಕೆ ನೀನು ಕೈಹಾಕಬೇಕೇ?"

"ನಾನು ಮಾಡುತ್ತಿರುವದು ಕ್ಷುದ್ರವಾದ ಕೆಲಸವೆಂದು ನಿಮ್ಮ ಅಭಿಪ್ರಾಯವೇ ಅಣ್ಣ? 'ನಾಟ್ಯಕಲೆಯು ಮಹಾಕಲೆ'ಯೆಂದು ಹೇಳುವ ಮಾತುಗಳಲ್ಲಿ ಯಾವ ಹುರುಳೂ ಇಲ್ಲವೆ? ಕಲೋಪಾಸನೆಯು ಮನೆತನದ ಮರ್ಯಾದೆಯನ್ನು ಕಳೆಯುವದೆಂದು ನಾನು ಹೇಗೆ ನಂಬಲಿ?"

"ನಾನು ನಾಟ್ಯಕಲೆಯನ್ನು ಹೀಯಾಳಿಸಿ ಈ ಮಾತುಗಳನ್ನು ಆಡುತ್ತಿರುವುದಿಲ್ಲ ತಮ್ಮ. ಆದರೆ ಈ ಕಲಾಸೇವೆಯನ್ನು ಯಾರು ಮಾಡಬೇಕೋ ಅವರು ಮಾಡಬೇಕು. ತಿಳಿಯಿತೇ?"

"ಕಲೆಗೂ ಜಾತಿಭೇದವಿರುವದೆಂದು ನಾನು ತಿಳಿದುಕೊಂಡಿಲ್ಲ ಅಣ್ಣ. ಕಲೆಯು ವಿಶ್ವದ ಸೊತ್ತು. ಕಲಾವಿದನು ಯಾವ ಜಾತಿಯವನಿದ್ದರೇನಾಯಿತು? ಅವನ ಸೇವೆ ಅಮೋಘವಾದ ಸೇವೆ. ಕಲಾಸೇವೆ ಮಾನವನ ಪ್ರಕೃತಿಸಿದ್ಧವಾದ ಹಕ್ಕು. ನಾವಿದನ್ನು ತಿಳಿದುಕೊಳ್ಳದೇ ಅದನ್ನು ಕೀಳುಜನರ ಕೈಯಲ್ಲಿ ಕೊಟ್ಟು ಅನ್ಯಾಯ ಮಾಡತೊಡಗಿದ್ದೇವೆ. ಇದರ ಉದ್ಧಾರವಾಗಬೇಕಾಗಿದೆ. ಈ ಉದ್ಧಾರಕಾರ್ಯವನ್ನು ಕೈಕೊಂಡದ್ದು ಅನುಚಿತವೇ ಅಣ್ಣ?"

."ನಿನ್ನ ಉಪನ್ಯಾಸವನ್ನು ಬಂದುಮಾಡು ಸದಾಶಿವಾ! ನಾಲ್ಕು ಕಾವ್ಯಗಳನ್ನು ಓದಿದ ಮಾತ್ರಕ್ಕೆ ನೀನು ದೊಡ್ಡ ಪಂಡಿತನಾಗಲಿಲ್ಲ. ಈ ಭ್ರಷ್ಟಾಚಾರವನ್ನು ನಾನು ಖಂಡಿತವಾಗಿ ನಡೆಯಗೊಡಲಾರೆ."

"ನಾನು ಮಾಡುತ್ತಿರುವದು ಭ್ರಷ್ಟಾಚಾರವಲ್ಲ ಅಣ್ಣ. ಇದು ತೂಕತಪ್ಪಿದ ಮಾತು."

"ಹೆಚ್ಚು ಮಾತಾಡಿ ನನ್ನ ತಲೆ ಕಾಯಿಸಬೇಡ. ನೀನು ಮಾಡುತ್ತಿರುವ ಕಾರ್ಯವು ನಿಲ್ಲಬೇಕು. ಇದು ನಮ್ಮ ಆಜ್ಞೆ."

"ಇದು ನನ್ನಿಂದ ಸಾಧ್ಯವಿಲ್ಲ ಅಣ್ಣ. ನೀವು ಸಾವಿರ ಹೇಳಿದರೂ ಈ ಕೆಲಸವನ್ನು ನಾನು ಬಿಡುವದಿಲ್ಲ. ಇದು ನನ್ನ ಪವಿತ್ರ ಕೆಲಸವಾಗಿದೆ."

"ಉದ್ಧಟ! ಹಿರಿಯರ ಮಾತನ್ನು ಮೀರುವಷ್ಟು ಔದ್ಧತ್ಯವೂ ನಿನಗೆ ಬಂತೆ?" ಎನ್ನುತ್ತ ನರಹರಿಭಟ್ಟರು ಸದಾಶಿವನ ಮೇಲೆ ಏರಿಹೋಗಲು ನೀಲಕಂಠಶಾಸ್ತ್ರಿಗಳು ಅವರನ್ನು ತಡೆದು,

"ಅವನ ಮೇಲೆ ಕೈಯೆತ್ತಬೇಡ ನರಹರಿ! ಅದರಿಂದ ಯಾವ ಪ್ರಯೋಜನವೂ ಆಗುವಂತಿಲ್ಲ. ಅವನ ಅಂತರಂಗದ ಆಶೆಯನ್ನು ಕುಗ್ಗಿಸುವುದು ನಮ್ಮಿಂದ ಸಾಧ್ಯವಿಲ್ಲ. ಒತ್ತಾಯದ ಹಿರಿಯತನದಿಂದ ಯಾವ ಪ್ರಯೋಜನವಾದೀತು ಹೇಳು. ಅವನಿಗೆ ಹೇಳಿ ಆಗಿದೆ. ಅವನಿಗೂ ನಮ್ಮಷ್ಟೇ ಮನೆತನದ

ಅಭಿಮಾನವಿದೆ. ಅವನು ಅದಕ್ಕಾಗಿ ಒಂದು ಕೆಲಸವನ್ನು ನಂಬಿರುವೆನೆಂದು ಹೇಳುತ್ತಾನೆ. ಇದರಿಂದ ನಮ್ಮ ಮನೆತನದ ಮರ್ಯಾದೆ ಹೋಗುವದೇ ಆದರೆ ಅವನನ್ನು ನಾವು ನಿಲ್ಲಿಸಲಾರೆವು. ಅವನು ಬೇಕಾದ್ದು ಮಾಡಿಕೊಳ್ಳಲಿ. ಅವನ ಹಾದಿಗೆ ನಾವು ಅಡ್ಡ ಬರುವದು ಬೇಡ. ಸುಮ್ಮನೆ ಹರಿ ಹಾಯುವದರಲ್ಲಿ ಅರ್ಥವಿಲ್ಲ. ಅದರಿಂದ ಮನಸ್ಸಿಗೆ ತಾಪವಾಗುತ್ತದೆ, ಹೊಗೆಯಾಡಿ ಮನಸ್ಸು ಕಲಕುತ್ತದೆ. ಅವನು ಹೋಗಲಿ ಬಿಡು." ಎಂದು ಸಮಾಧಾನದಿಂದ ಹೇಳಿದರು. ಈ ಮಾತುಗಳನ್ನೆಲ್ಲ ನೀಲಕಂಠಶಾಸ್ತ್ರಿಗಳು ವಿಚಾರ ಮಾಡಿಯೇ ಹೇಳಿದರು. ಇದನ್ನು ಕೇಳಿ ನರಹರಿಯು ಇನ್ನೂ ಉರಿಯತೊಡಗಿದ.

"ಇದಕ್ಕೆ ನಿಮ್ಮದೂ ಒಪ್ಪಿಗೆಯಿದೆಯೆ ?"

"ನಮ್ಮ ಒಪ್ಪಿಗೆಯ ಅವಶ್ಯಕತೆಯೇ ಸದಾಶಿವನಿಗಿಲ್ಲದಿರುವಾಗ ಆ ಮಾತನ್ನು ಮತ್ತೆ ಮತ್ತೆ ಜಗ್ಗುವದರಲ್ಲಿ ಅರ್ಥವಿಲ್ಲ. ನೀನು ಅವನಿಗೆ ಏನನ್ನೂ ಅನ್ನಬೇಡ ತಮ್ಮ!"

ನರಹರಿಭಟ್ಟರಿಗೆ ಅಣ್ಣನ ಮಾತುಗಳನ್ನು ಕೇಳಿ ಅವಮಾನವಾದಂತಾಯಿತು. ಅವರು ಬಿರುಸಾಗಿ, "ನೀವು ಮೂಗು ಹಿಡಿದುಕೊಂಡು ದೇವರ ಮನೆಯಲ್ಲಿ ಕುಳಿತುಕೊಳ್ಳಿರಿ. ಈ ಪುಂಡನು ಗೆಜ್ಜೆ ಕಟ್ಟಿಕೊಂಡು ಸೂಳೆಯರೊಡನೆ ಕುಣಿಯಲಿ. ನಾನು ಮಾತ್ರ ನಿಮ್ಮ ಸಂಸಾರಕ್ಕಾಗಿ ದುಡಿದು ಸಾಯುತ್ತೇನೆ" ಎಂದೆಂದು ಅಲ್ಲಿ ನಿಲ್ಲಲಾರದೆ ರಭಸದಿಂದ ಹೊರಟುಹೋದರು.

ಸಾತ್ವಿಕ ಜೀವಿಗಳಾದ ನೀಲಕಂಠಶಾಸ್ತ್ರಿಗಳ ಹೃದಯದ ಮೇಲೆ ನರಹರಿಭಟ್ಟರ ಮಾತುಗಳು ಕಾದ ಬರೆಯನ್ನೇ ಎಳೆದವು. ಅವರಿಗೆ ಮೊದಲ ಬಾರಿಗೆ ಸಂಸಾರದ ತಾಪತ್ರಯದ ಅರಿವಾಯಿತೇನೋ, ಅವರು ದೀರ್ಘವಾದ ನಿಟ್ಟುಸಿರುಬಿಟ್ಟರು. ನರಹರಿಭಟ್ಟರ ಮಾತಿನಲ್ಲಿ ಅಡಕವಾದ ದಾರಿದ್ರ್ಯದ ಕಲ್ಪನೆಯು ಸ್ಪಷ್ಟವಾದಾಗ ಅವರು ವಿಹ್ವಲರಾದರು.

ಹಿರಿಯಣ್ಣನ ವೇದನೆಯನ್ನು ಗ್ರಹಿಸಿದ ಸದಾಶಿವನು ಅವರ ಪಾದಗಳ ಮೇಲೆ ತನ್ನ ತಲೆಯನ್ನಿಟ್ಟು,

"ಈ ಸದಾಶಿವನು ಉಂಡಾಡಿಯಲ್ಲ ಅಣ್ಣ. ನನಗೂ ನನ್ನ ಮನೆತನದ ಅರಿವು ಇದೆ. ನೀವು ಚಿಂತಿಸಬೇಡಿರಿ. ನನ್ನ ಕಾರ್ಯದಿಂದ ನಿಮಗೆ ವ್ಯಥೆಯಾಗುತ್ತಿದ್ದರೆ...."

"ನಿನಗೆ ನನ್ನ ಆಶೀರ್ವಾದವಿದೆ. ಆದರೆ ಈ ಬಯಲಾಟವನ್ನು ಈ ಊರಿನಲ್ಲಿ ಆಡಬೇಡ. ಈ ಮಾತನ್ನಾದರೂ ನಡೆಸುವಿಯಷ್ಟೆ" ಎಂದು ಶಾಸ್ತ್ರಿ

ಗಳು ಕಣ್ಣೀರು ಮಿಡಿದು ಹೇಳಿದರು.

"ನಿಮ್ಮ ಆಜ್ಞೆ ನನಗೆ ಶಿರಸಾ ಮಾನ್ಯವಾಗಿದೆ. ನಿಮ್ಮ ಮಾತನ್ನು ನಾನು ಮೀರುವದಿಲ್ಲ" ಎಂದು ಸದಾಶಿವನು ಮಾತುಕೊಟ್ಟು ಸಾವಕಾಶವಾಗಿ ಸರಿದುಹೋದನು.

ನೀಲಕಂಠಶಾಸ್ತ್ರಿಗಳು ಮೂಕ ವೇದನೆಯಲ್ಲಿ ಆ ದಿನವನ್ನೆಲ್ಲ ಕಳೆದರು.

"ವಿಶೂ ಕಾಕಾ! ನಿನ್ನ ಇಚ್ಛೆ ನೆರವೇರಲಿ ತಂದೆ!" ಎಂದು ಅವರು ತಮ್ಮಷ್ಟಕ್ಕೆ ನುಡಿದಾಗ ಅವರ ಕಣ್ಣಾಲಿಗಳಲ್ಲಿ ನೀರು ಚಿಮ್ಮುತ್ತಿತ್ತು. ಮೂಕ ವೇದನೆಯ ಬಾಹ್ಯ ಪ್ರತೀಕಗಳೇ ಆ ಕಣ್ಣುಹನಿಗಳಾಗಿದ್ದವು.

೨

ಇದಾಗಿ ಹದಿನೈದು ದಿನ ಕಳೆದುಹೋದರೂ ಸದಾಶಿವನು ಮನೆಯ ಕಡೆ ಸುಳಿಯಲೇ ಇಲ್ಲ. ನೀಲಕಂಠಶಾಸ್ತ್ರಿಗಳ ಪತ್ನಿ ದಿನಾಲು ಪತಿಗೆ, "ಇನ್ನೂ ಸದಾಶಿವ ಮೈದುನರು ಬರಲೇ ಇಲ್ಲವಲ್ಲ! ಪಾಪ! ಅವರ ಹೆಂಡತಿ ಒಂದೇ ಸವನೇ ಹಲುಬಹತ್ತಿದ್ದಾಳೆ" ಎಂದು ಕೇಳತೊಡಗಿದರು. ನೀಲಕಂಠಶಾಸ್ತ್ರಿಗಳು ಆ ಮಾತಿಗೆ, "ಎಲ್ಲಿ ಹೋಗುತ್ತಾನೆ ಬಂದಾನು ಬಿಡು" ಎಂದು ಮಾತು ಹಾರಿಸುತ್ತಿದ್ದರು. ಒಳಗೊಳಗೆ ಅವರಿಗೂ ಇಲ್ಲದ ಭಯ ಮೂಡಿ ನಿಂತಿತ್ತು. ಒಂದು ತಿಂಗಳು ಕಳೆದರೂ ಅವನ ಸುಳಿವೇ ಇಲ್ಲ. ಊರಲ್ಲಿ ಹಾರಿಕೆಯ ಸುದ್ದಿಗಳು ತೇಲಿಬರಹತ್ತಿದವು. ಸದಾಶಿವನು ಗಂಗನಹಳ್ಳಿಯನ್ನು ತ್ಯಜಿಸಿ ದೇಶಾಂತರ ಹೋದನೆಂಬುದೇ ಆ ಮಾತು. ಮೊದಮೊದಲು ನೀಲಕಂಠಶಾಸ್ತ್ರಿಗಳಿಗೆ ಈ ಮಾತುಗಳಲ್ಲಿ ವಿಶ್ವಾಸ ಬರಲಿಲ್ಲ. ಆದರೆ ದಿನಗಳುರುಳಿದಂತೆ ಆ ಮಾತು ಸತ್ಯವಾಗಿಯೇ ಪರಿಣಮಿಸಿತೆಂದು ಅವರಿಗೆ ಸ್ಪಷ್ಟವಾದಾಗ ಅವರಿಗೆ ಬಹಳ ಸಂಕಟವಾಯಿತು ನಾಲ್ಕು ಜನರ ಮುಂದೆ ಮೋರೆ ತೋರಿಸುವದೂ ಅವರಿಗೆ ಅಸಾಧ್ಯವಾಗತೊಡಗಿತು. 'ಸದಾಶಿವನು ಹೀಗೆ ಎದ್ದುಹೋಗಬಾರದಾಗಿತ್ತು' ಎಂದು ಅವರು ಮರಮರನೆ ಮರುಗತೊಡಗಿದರು.

ಸದಾಶಿವನ ನಿರ್ಗಮನದಿಂದ ಸರಹರಿಭಟ್ಟರಿಗೂ ಮೂಗು ಕೊಯ್ದಷ್ಟು ಅವಮಾನವಾಗಿತ್ತು. ಅವರು ಒಳಗೊಳಗೆ ಬಹಳ ಕುದಿಯತೊಡಗಿದರು. ಗಂಗನಹಳ್ಳಿಯ ಸಮಾಜದಲ್ಲಿ ಈ ನಿರ್ಗಮನವು ತಮ್ಮ ಮನೆತನದ ಮರ್ಯಾದೆಯನ್ನು ಬಹಳ ಕೆಳಗಿಳಿಸಿತೆಂಬ ಭಾವವು ಬಲಿಯತೊಡಗಿದಂತೆ

ಅವರು ಸಿಡಿಸಿಡಿ ಮಾಡತೊಡಗಿದರು. ಸಂಸಾರದಲ್ಲಿ ಕೂಡ ಅವರ ಈ ಭಾವವು ನೆಮ್ಮದಿಯನ್ನು ತಪ್ಪಿಸಹತ್ತಿತು. ಅವರ ಒದರಾಟ ಚೀರಾಟಗಳು ಶಿಷ್ಯರನ್ನು ಕೂಡ ಬೆದರಿಸಹತ್ತಿದವು. ಮಕ್ಕಳು ಅವರ ಮುಂದೆ ನಿಲ್ಲುವ ಧೈರ್ಯವನ್ನು ಕಳೆದುಕೊಂಡುಬಿಟ್ಟವು. ಹೆಂಗಸರ ಪಾಡನ್ನು ಹೇಳಬೇಕೆ?

"ಸದಾಶಿವನ ಸುದ್ದಿ ಏನಾದರೂ ಬಂದಿತೇ ನರಹರಿ!" ಎಂದು ಆ ದಿನ ನೀಲಕಂಠಶಾಸ್ತ್ರಿಗಳು ಜೀವದಲ್ಲಿ ಜೀವವಿಲ್ಲದೆ ಕೇಳಿದಾಗ ನರಹರಿಭಟ್ಟರು ಸಿಡುಕಿನಿಂದ, "ಆಶೀರ್ವಾದ ಮಾಡಿ ಕಳುಹಿಸಿದ ನಿಮಗೇ ಅದು ಗೊತ್ತು" ಎಂದು ಕಟ್ಟಿಗೆ ಮುರಿದಂತೆ ಮಾತಾಡಲು ನೀಲಕಂಠಶಾಸ್ತ್ರಿಗಳ ಕಣ್ಣಲ್ಲಿ ನೀರು ಉಕ್ಕಿತು. ಅವರು ತೆಪ್ಪಗಾಗಿ ಮುಂದೆ ಆ ಮಾತನ್ನೇ ಎತ್ತದಾದರು. ಅವರ ವೇದನೆ ಸಹನಾತೀತವಾದರೂ ಅವರು ಅದನ್ನೆಲ್ಲ ತಾಳ್ಮೆಯಿಂದ ಹತ್ತಿಕ್ಕಿಕೊಂಡರು.

ಆ ವರುಷ ನೀಲಕಂಠಶಾಸ್ತ್ರಿಗಳ 'ಶ್ರಾವಣ'ದ ಪುರಾಣವು ತೀರಾ ಸಪ್ಪಗಾಗಿಬಿಟ್ಟಿತು. ಇದರಿಂದ ಆ ವರುಷದ ಆದಾಯವು ಪೂರಾ ಬಿದ್ದು ಹೋಯಿತು.

ನರಹರಿಭಟ್ಟರಿಗಂತೂ ಇದು ನುಂಗಲಾರದ ತುತ್ತಾಗಿಬಿಟ್ಟಿತು. ಆದರೆ ಯಾವ ಮಾತನ್ನೂ ಆಡುವಂತಿರಲಿಲ್ಲವಾದ್ದರಿಂದ ಅವರು ತೀರಾ ಹತಾಶರಾಗ ತೊಡಗಿದರು. ಇದು ಹೀಗೆಯೇ ಸಾಗಿದರೆ ತಮ್ಮ ಮನೆತನಕ್ಕೆ ಉಳಿಗಾಲವಿಲ್ಲ ವೆಂದು ತಿಳಿದುಕೊಂಡಾಗ ಅವರಿಗೆ ಮನೆಯನ್ನು ಸಾಗಿಸುವ ಹೊಣೆ ತೀರಾ ಭಾರವೆಂದೆನ್ನಿಸತೊಡಗಿತು.

ಇದಾದ ಕೆಲವು ದಿನಗಳ ನಂತರ ಧೀರೇಂದ್ರಾಚಾರ್ಯರು 'ಭಾಗವತ ಸಪ್ತಾಹ'ವನ್ನು ಆಚರಿಸಬೇಕೆಂದು ನಿರ್ಧರಿಸಿದರು. ಅವರಿಗೆ ಊರಬ್ರಾಹ್ಮಣ ಮುಖಂಡರಾದ ಮೋಹನರಾಯರ ಸಂಪೂರ್ಣ ಬೆಂಬಲವಿದ್ದದ್ದರಿಂದ ಆ ಉತ್ಸವವು ವಿಜೃಂಭಣೆಯಿಂದ ಜರುಗಬಹುದಾದ ಲಕ್ಷಣಗಳು ತೋರತೊಡಗಿದವು. ಸರ್ವಸಿದ್ಧತೆಯಾದ ಬಳಿಕ ಧೀರೇಂದ್ರಾಚಾರ್ಯರು ಹಿರಿಯರಾದ ನೀಲಕಂಠಶಾಸ್ತ್ರಿಗಳಿಗೆ ಆಮಂತ್ರಣ ಕೊಡಲು ಸ್ವತಃ ಶಾಸ್ತ್ರಿಗಳ ಮನೆಗೆ ಬಂದರು.

"ಇದೇನು ಧೀರೇಂದ್ರಾಚಾರ್ಯರ ಆಗಮನ?" ಎನ್ನುತ್ತ ಶಾಸ್ತ್ರಿಗಳು ಅವರನ್ನು ಮುಗುಳುನಗೆಯಿಂದ ಬರಮಾಡಿಕೊಂಡರು.

"ತಮ್ಮ ಅನುಗ್ರಹದಿಂದ 'ಭಾಗವತ ಸಪ್ತಾಹ'ವನ್ನು ಆಚರಿಸ ಬೇಕೆಂದಿದ್ದೇನೆ. ನಾಳೆನಿಂದಲೇ ಪುರಾಣ ಪ್ರಾರಂಭ. ಈ ಕೆಲಸವನ್ನು ತಾವು

ನಡೆಯಿಸಿಕೊಡಬೇಕು. ನಾಳೆ ಹಯವದನನನ್ನು ಕಳಿಸಿಕೊಡುತ್ತೇನೆ. ತಾವು ಬಂದು ಆಶೀರ್ವದಿಸಿ ಹೋಗಬೇಕು" ಎಂದು ಆಚಾರ್ಯರು ವಿನಯಪೂರ್ವಕ ವಾಗಿ ಕೇಳಿಕೊಂಡರು.

"ನೀನು ಪುಣ್ಯವಂತನಪ್ಪಾ ಧೀರೇಂದ್ರ! ನನ್ನ ಆಶೀರ್ವಾದವೇನು ಬಂತು. ನಾನು ಬರುವದು ಕರ್ತವ್ಯವೇ ಆಗಿದೆ. ಗಂಗನಹಳ್ಳಿಯಲ್ಲಿ ಇಂತಹ ಪುಣ್ಯಕಾರ್ಯಗಳು ಜರುಗಬೇಕು. ನಾನು ಖಂಡಿತವಾಗಿ ಬರುತ್ತೇನೆ."

"ವಿಶ್ವೇಶ್ವರಭಟ್ಟರ ಪುಣ್ಯ ಶಾಸ್ತ್ರಿಗಳೇ! ಗಂಗನಹಳ್ಳಿಯನ್ನು ತಿದ್ದಿ ತೀಡಿದ ಮಹಾನುಭಾವರವರು."

ಈ ಮಾತಿನಿಂದ ಶಾಸ್ತ್ರಿಗಳ ಕಣ್ಣಲ್ಲಿ ನೀರೂರಿತು. "ಅವರ ಪುಣ್ಯ ಇನ್ನೂ ಸರಿದಿಲ್ಲ ಧೀರೇಂದ್ರ! ಅವರು ಹಚ್ಚಿದ ಬಳ್ಳಿ ಹಬ್ಬಿ ನಿಂತಿದೆ. ಇದಕ್ಕೆ 'ಭಾಗವತ ಪುರಾಣ'ವೇ ಸಾಕ್ಷಿ. ನಿನ್ನ ಯೋಗ್ಯತೆಯೇ ಸಾಕ್ಷಿ."

"ಅವರ ಯೋಗ್ಯತೆಯ ಮುಂದೆ ನನ್ನ ಯೋಗ್ಯತೆಯೇ? ಅವರ ಪಾಸಂಗಕ್ಕೆ ನಾನೆಂದೂ ಹತ್ತಲಾರೆನು ಶಾಸ್ತ್ರಿಗಳೇ! ಅವರ ಕೃಪೆಯಿಂದ ಒಂದು ಯೋಗ್ಯತೆಯನ್ನು ಸಂಪಾದಿಸಿರುವೆನೇನೋ ನಿಜ. ಇದೂ ಅವರ ಕೃಪೆಯೇ."

"ಸರಿ. ಸರಿ. ಅವರ ಕೃಪೆ ಅಮೋಘವಾಗಿ ಹರಿಯಲಿ ಧೀರೇಂದ್ರ!" ಎಂದು ಶಾಸ್ತ್ರಿಗಳು ಕಣ್ಣೀರು ತೊಡೆದುಕೊಂಡರು.

ಈ ಮಾತುಗಳನ್ನೆಲ್ಲ ಕೇಳುತ್ತಲಿದ್ದ ನರಹರಿಗೆ ತಡೆಯದಾಯಿತು. ಅವನು ವ್ಯಂಗ್ಯವಾಗಿ ನಗೆ ಸೂಸುತ್ತ, "ಮೊನ್ನೆ ಮೊನ್ನೆ ಗೌಡರ ತೋಟದ ಮಾವಿನಕಾಯಿಗಳನ್ನು ಕದ್ದು ತಿನ್ನುತ್ತಿದ್ದ ನೀನು ಈಗ 'ಭಾಗವತ'ವನ್ನು ಹೇಳುವ ಧೈರ್ಯಮಾಡುತ್ತಿರುವದು ಸೋಜಿಗವೇ ಸರಿ" ಎಂದುಬಿಟ್ಟನು. ಈ ಮಾತುಗಳಲ್ಲಿ ಮತ್ಸರಭಾವ ತುಂಬಿ ತುಳುಕುತ್ತಿತ್ತು. ಈ ಮಾತುಗಳಿಂದ ಧೀರೇಂದ್ರಾಚಾರ್ಯರ ಅಭಿಮಾನಕ್ಕೆ ಮುಳ್ಳುಚುಚ್ಚಿದಂತಾಯಿತು. ಅವರೂ ಅದೇ ದನಿಯಲ್ಲಿ,

"ಹುಡುಗತನದಲ್ಲಿ ನಾನು ಅದನ್ನು ಮಾಡಿರಬಹುದು ನರಹರಿ! ಆದರೆ ಈಗ ವಿದ್ಯಾಸಂಪನ್ನನಾಗಿ ಭಾಗವತ ಹೇಳುವಂತಾಗಿದ್ದೇನೆ. ನಿಮ್ಮ ತಮ್ಮ ನಂತೆ ಓಡಿ ಮಾತ್ರ ಹೋಗಲಿಲ್ಲ." ಎಂದು ನಗುತ್ತಲೇ ಹೇಳಿದರು.

"ಓಹೋ! ನಿನ್ನ ವಿದ್ಯಾಸಂಪನ್ನತೆ ನನಗೆ ಅರಿಯದ ವಿಷಯವಲ್ಲ ಬಿಡು. ಗಡ್ಡಗಳನ್ನು ಬೆಳೆಯಿಸಿದ ಮಾತ್ರಕ್ಕೆ ಬುದ್ಧಿ ಬೆಳೆದಂತಾಗಲಿಲ್ಲ. ಈ ಡಬಡ್ಡಾಳಿಕೆಯ ಡಂಭಾಚಾರವನ್ನು ನನ್ನ ಮುಂದೆ ಹೇಳಬೇಡ. ನಿನ್ನ

ಭಾಗವತ ಸಪ್ತಾಹವು ದುಡ್ಡು ಸೆಳೆಯುವ ಧಾರ್ಮಿಕ ಯುಕ್ತಿ ಎಂಬುದನ್ನು ಮುಚ್ಚಿಡುವವರಲ್ಲಿ ಯಾವ ಅರ್ಥವೂ ಇಲ್ಲ" ಎಂದು ನರಹರಿಭಟ್ಟನು ಏರಿಕೆಯ ದನಿಯಲ್ಲಿಯೇ ಹೇಳಿದನು.

"ಹೋಗಲಿ ಬಿಡು ಧೀರೇಂದ್ರ! ನೀವಿಬ್ಬರೂ ಗೆಳೆಯರು. ಮಾತು ಬೆಳೆಯಿಸಿ ಹೊಗೆಯಾಗಗೊಡಬೇಡಿರಿ. ನನ್ನ ತಮ್ಮನು ನಿರಂತರವಾಗಿ ಓಡಿ ಹೋಗಿರುವನೆಂದು ನೀನೂ ತಿಳಿದುಕೊಳ್ಳಬೇಡ. ಅವನು ಬಂದೇಬರುತ್ತಾನೆ. ಆ ಮಾತು ಹೋಗಲಿ. ನಾಳೆ ಖಂಡಿತವಾಗಿ ಬರುತ್ತೇನೆ" ಎಂದು ಎದ್ದು ನಿಂತು ಧೀರೇಂದ್ರಾಚಾರ್ಯರನ್ನು ಶಾಸ್ತ್ರಿಗಳು ಸಾಗಹಾಕಿದರು.

"ನಾಳಿನ ದಿನ ಈ ಪುರಾಣಕ್ಕೆ ನೀನು ಖಂಡಿತವಾಗಿ ಹೋಗಕೂಡದು ಅಣ್ಣಾ!"

"ಇದೇನು ಮಾತು ತಮ್ಮಾ! ನಿನಗೆ ಹುಚ್ಚುಗಿಚ್ಚು ಹಿಡಿದಿಲ್ಲವಷ್ಟೆ."

"ಇದರಲ್ಲಿಯ ಸೂಕ್ಷ್ಮ ನಿನಗೆ ತಿಳಿಯಲಾರದು ಅಣ್ಣಾ. ಅವನು ಬೇಕೆಂದೇ ಈ ಹೊಂಚುಹಾಕಿದ್ದಾನೆ. ಸದಾಶಿವನ ನಿರ್ಗಮನವನ್ನೇ ಮುಂದೆ ಮಾಡಿ ಈಗಾಗಲೇ ಸಾಕಷ್ಟು ಅಪಪ್ರಚಾರ ನಡೆಸಿದ್ದಾನೆ. ಅಂಥವನ ಮನೆಗೆ ನಾವು ಹೋಗಕೂಡದು."

"ಈ ಮಾತಿನಲ್ಲಿ ಅರ್ಥವಿಲ್ಲ. ಸದಾಶಿವನು ಹೋದದ್ದು ಸತ್ಯಸಂಗತಿಯಾಗಿರುವಾಗ ಅವನು ಹರಲಿ ಮಾಡುವ ಪ್ರಶ್ನೆಯೇ ಇಲ್ಲ. ಈಗಾಗಲೇ ಇದು ಜನಜನಿತವಾಗಿಬಿಟ್ಟದೆ. ನಾವು ಈ ಪರಿಸ್ಥಿತಿಯನ್ನು ಎದುರಿಸಲೇಬೇಕು."

"ಆ ಮಾತು ಹೋಗಲಿ ಅಣ್ಣಾ! ಪುರಾಣ ಹೇಳುವ ನಾವೇ ಪುರಾಣ ಕೇಳಲು ಹೋಗಬಾರದಷ್ಟೆ."

"ನಿನ್ನ ಮಾತಿನ ರೀತಿಯೇ ವಿಚಿತ್ರವಾಗಿದೆ ತಮ್ಮಾ! ಪುರಾಣ ಹೇಳುವದು ಕೇವಲ ನಮ್ಮ ಮನೆತನಕ್ಕೆ ಮಾತ್ರ ಮೀಸಲಾಗಿ ನಿಂತಿಲ್ಲ. ಈ ಪುರಾಣಗಳು ಕೇವಲ ನಮ್ಮ ಮನೆತನದ ಸೊತ್ತುಗಳಲ್ಲ. ಜಗತ್ತು ವಿಶಾಲವಾಗಿದೆ. ಈ ಪುರಾಣಗಳು ಜಗತ್ತಿನ ಅಮೂಲ್ಯ ಸೊತ್ತುಗಳಾಗಿವೆ. ಇವನ್ನು ಯಾರು ಬೇಕಾದರೂ ಹೇಳಬಹುದು. ಯಾರು ಬೇಕಾದರೂ ಕೇಳಬಹುದು. ಈ ಪುಣ್ಯ ಕಾರ್ಯವನ್ನು ಅಲಕ್ಷ್ಯದಿಂದ ನೋಡುವದು ಕೂಡ ಪಾಪಮಯವಾಗಿದೆ. ನಿನ್ನ ಮಾತನ್ನು ಕೇಳಿ ಒಂದು ವೇಳೆ ನಾನು ಹೋಗಲಿಲ್ಲವೆಂದು ತಿಳಿದುಕೋ, ಇದರಿಂದ 'ಭಾಗವತ ಸಪ್ತಾಹ'ವೇನೂ ನಿಲ್ಲುವದಿಲ್ಲ. ಭಾಗವತಕ್ಕೆ ಅಸಡ್ಡೆ ತೋರಿಸಿದ ಪಾಪ ಮಾತ್ರ ನಮ್ಮದಾಗುತ್ತದೆ. ವೈದಿಕರಿಗೆ

ಇದಕ್ಕೂ ಹೆಚ್ಚಾದ ಅಪರಾಧವಿಲ್ಲ. ಈ ಮಾತನ್ನು ತಿಳಿದುಕೋ ನರಹರಿ! ಭಾಗವತಕ್ಕೆ ಹೋಗಲು ನನಗೆ ಅಡ್ಡಿಮಾಡಬೇಡ. ಪೂಜ್ಯ ತಂದೆಯವರು ಇದನ್ನು ಎಂದಿಗೂ ಮೆಚ್ಚಲಾರರು."

"ತಂದೆಯವರ ಕಾಲ ಇಂದು ಉಳಿದಿಲ್ಲ ಅಣ್ಣ, ಕಾಲ ಬದಲಾಗಿ ಬಿಟ್ಟದೆ. ಹಿಂದಿನ ಘನತೆಯನ್ನು ನಂಬಿ ಕೂಡ್ರುವದರಲ್ಲಿ ಯಾವ ಅರ್ಥವೂ ಇಲ್ಲ. ಕಾಲಕ್ಕೆ ತಕ್ಕಂತೆ ನಾವೂ ಕುಣಿಯಬೇಕು. ಧಾರ್ಮಿಕ ಕಾರ್ಯ ಗಳನ್ನು ನಾವು ಈಗ ವ್ಯವಹಾರದೃಷ್ಟಿಯಿಂದ ನೋಡಬೇಕಾಗಿದೆ. ಶ್ರಾವಣದ ಪುರಾಣದ ಗತಿ ಏನಾಯಿತೆಂಬುದು ನಿನಗೆ ತಿಳಿದ ವಿಷಯ. ಇನ್ನು ಈ ಪುರಾಣದ ಅಬ್ಬರದಿಂದ ನಮ್ಮ ವ್ಯವಸಾಯವೇ ನಿಂತುಹೋಗುವದು. ಇದಕ್ಕೆ ನಿಮ್ಮ ಆಶೀರ್ವಾದವಿದ್ದರಂತೂ ತೀರೇಹೋಯಿತು. ಬರುವ ಜನರು ಕೂಡ ಇನ್ನು ನಮ್ಮ ಮನೆಯ ಕಡೆಗೆ ಹಾಯಲಾರರು. ನಮ್ಮ ಸಂಸಾರಭಾರದ ಗತಿಯೇನು? ಈ ಶಿಷ್ಯರ ಪೋಷಣೆಯ ಮಾರ್ಗವಾವುದು? ಇದನ್ನು ನೀವು ಯೋಚಿಸಬೇಕು. ಸುಮ್ಮನೇ ಆ ಧೀರಾಚಾರಿ ಕುಣಿಸಿದಂತೆ ಕುಣಿಯುವದರಲ್ಲಿ ಯಾವ ಅರ್ಥವೂ ಇಲ್ಲ."

"ನಿನ್ನ ಮಾತುಗಳು ನನಗೆ ಅರ್ಥವಾಗುತ್ತಿವೆ ತಮ್ಮ! ಆದರೆ ಈ ಭಾಗವತ ಪುರಾಣವನ್ನು ತಪ್ಪಿಸುವದು ನನ್ನಿಂದ ಆಗದ ಮಾತು. ಭಾಗವತ ವನ್ನು ಕಡೆಗಣಿಸುವದು ದೇವರನ್ನು ಕಡೆಗಣಿಸಿದಂತೆ. ನಾವು ದೇವರನ್ನು ಅಲಕ್ಷ್ಯಮಾಡಿ ಬದುಕಲಾರೆವು. ನಾನು ಭಾಗವತ ಪುರಾಣಕ್ಕೆ ಹೋದ ಮಾತ್ರಕ್ಕೆ ನಮ್ಮ ಪುರಾಣ ನಿಲ್ಲುವದೆಂದು ಯಾಕೆ ತಿಳಿದುಕೊಳ್ಳಬೇಕು? ಜನರಿಗೆ ಎಲ್ಲಿ ವಿಶ್ವಾಸವೋ ಅಲ್ಲಿ ಹೋಗುತ್ತಾರೆ. ನಾಮಸಂಕೀರ್ತನೆಯು ಯಾರಿಂದ ಆದರೇನು? ನಮ್ಮಲ್ಲಿ ವಿಶ್ವಾಸವಿದ್ದರೆ ಜನರು ನಮ್ಮ ಕಡೆಗೆ ಬರುತ್ತಾರೆ. ನಾವು ವಿಶ್ವಾಸವನ್ನು ಎಳೆದು ತಂದು ಬದುಕಲಾರೆವು. ವಿಶ್ವಾಸ ಕೈಗಡದ ವಸ್ತುವಲ್ಲ ತಮ್ಮ! ಅದು ಅಂತರಂಗದ ಸೊತ್ತು. ಅವರವರ ಅಂತಃ ಪ್ರೇರಣೆಯಾದಂತೆ ಜನ ಆಚರಿಸಲಿ. ಅವರ ವ್ಯಕ್ತಿಸ್ವಾತಂತ್ರ್ಯವನ್ನು ಕಸಿದು ಕೊಳ್ಳುವದು ಯುಕ್ತವೂ ಅಲ್ಲ; ಸಾಧ್ಯವೂ ಅಲ್ಲ."

ಸಾತ್ವಿಕಗುಣಸಂಪನ್ನರಾದ ನೀಲಕಂಠಶಾಸ್ತ್ರಿಗಳಲ್ಲಿ ಗಂಗನಹಳ್ಳಿಯ ಜನರ ವಿಶ್ವಾಸವು ಕಡಿಮೆಯಾಗಿರಲಿಲ್ಲ. ಅವರನ್ನು ಜನ ತುಂಬಾ ಗೌರವ ದಿಂದ ಕಾಣುತ್ತಿದ್ದರು. ಆದರೆ ನರಹರಿಭಟ್ಟನನ್ನು ಕಂಡರೆ ಯಾರಿಗೂ ಆಗುತ್ತಿರಲಿಲ್ಲ. ಅವನ ಹರಿತವಾದ ನಾಲಿಗೆಯೇ ಇದಕ್ಕೆ ಕಾರಣವಾಗಿದ್ದಿತು. ಆ ನಾಲಿಗೆಯ ಎದುರು ನಿಂತು ಮುಖಭಂಗಮಾಡಿಕೊಳ್ಳುವ ಉತ್ಸಾಹ

ಯಾರಿಗೆ?

ಶಾಸ್ತ್ರಿಗಳಲ್ಲಿ ಗೌರವವಿದ್ದಿತಾದರೂ ಈ ಗೌರವದಿಂದ ಅವರಿಗೆ ಯಾವ ರೀತಿಯ ವ್ಯಾವಹಾರಿಕ ಸೌಲಭ್ಯವೂ ಸಿಗುತ್ತಿರಲಿಲ್ಲ. ಇದಕ್ಕೂ ನರಹರಿ ಭಟ್ಟನೇ ಕಾರಣವಾಗಿದ್ದನು. ಕೆಲವು ದಿನಗಳಲ್ಲಿ ಗಂಗನಹಳ್ಳಿಯ ಜನರಿಂದ ಈ ಮನೆತನಕ್ಕೆ ಯಾವ ರೀತಿಯ ನೆರವೂ ಸಿಕ್ಕದಂತಾಯಿತು. ಗಂಗನಹಳ್ಳಿ ಕೈ ಬಿಟ್ಟದ್ದರಿಂದ ನರಹರಿಭಟ್ಟನು ತನ್ನ ಸಂಸಾರಪೋಷಣೆಗಾಗಿ ಸುತ್ತಲಿನ ಹಳ್ಳಿಗಳನ್ನೇ ಆಶ್ರಯಿಸಬೇಕಾಯಿತು. ಮುಂಜಾವಿನಿಂದ ಸಂಜೆಯವರೆಗೆ ಹಳ್ಳಿಗಳನ್ನು ಸುತ್ತಾಡಿ ದೊಡ್ಡ ಗಂಟನ್ನು ಹೊತ್ತುಕೊಂಡು ಬರುವದು ನರಹರಿಭಟ್ಟನಿಗೆ ದಿನದ ಮಾತಾಗಿಬಿಟ್ಟಿತು. ಮೊದಮೊದಲು ಈ ಕೆಲಸವನ್ನು ನರಹರಿಭಟ್ಟನೊಬ್ಬನೇ ಮಾಡುತ್ತಿದ್ದನು. ಇತ್ತೀಚಿಗೆ ಈ ಸುತ್ತಾಟ ಶಿಷ್ಯರ ಪಾಲಿಗೂ ಬರಹತ್ತಿತು. ಪಾಳಿಯ ಪ್ರಕಾರ ಶಿಷ್ಯರು ಅವನನ್ನು ಬೆಂಬಲಿಸ ಬೇಕಾಯಿತು. ಅವರ ಅಧ್ಯಯನಕ್ಕೆ ಇದರಿಂದ ತಡೆಯುಂಟಾಗತೊಡಗಿದ್ದು ಅನಿವಾರ್ಯವಾಗಿಬಿಟ್ಟಿತು. ಇದನ್ನು ನೋಡುತ್ತಲಿದ್ದ ನೀಲಕಂಠಶಾಸ್ತ್ರಿಗಳಿಗೆ ಒಳಗೊಳಗೆ ಅತೀವ ವೇದನೆಯಾಗತೊಡಗಿತು.

"ಈ ಹಳ್ಳಿಯ ಸುತ್ತಾಟದಿಂದ ನಮ್ಮ ಶಿಷ್ಯರ ಅಧ್ಯಯನ ನಿಲ್ಲತೊಡ ಗಿದೆ ನರಹರಿ!"

"ಕೇವಲ ಅಧ್ಯಯನದಿಂದ ಹೊಟ್ಟೆ ತುಂಬಲಾರದಷ್ಟೆ. ಮೊದಲು ಅನ್ನ. ಆಮೇಲೆ ವಿದ್ಯೆ."

"ಆದರೆ ನಮ್ಮ ತಂದೆಯ ಮನಸ್ಸಿನಲ್ಲಿ ಈ ಶಿಷ್ಯಪರಂಪರೆ ಹೀಗೆ ಸಾಗ ಬೇಕೆಂದು ಇರಲಿಲ್ಲ ತಮ್ಮ! ವೇಳೆಯೆಲ್ಲ ಅಧ್ಯಯನಕ್ಕೆ ಮೀಸಲಾಗಬೇಕು."

"ಆ ಕಾಲ ಹೋಯಿತೆಂದು ನಿಮಗೆ ಅದೆಷ್ಟೋ ಸಲ ಹೇಳಿದರೂ ಮತ್ತೆ ಮತ್ತೆ ಅದೇ ಮಾತು. ಇವರನ್ನು ಹಾಗೆಯೇ ಕುಳ್ಳಿರಿಸಿ ಅನ್ನಹಾಕು ವದಕ್ಕೆ ಈಗ ಹೇಗೆ ಸಾಧ್ಯ? ವಾರದಲ್ಲಿ ಒಂದೆರಡು ದಿನ ಹಾಳಾದರೆ ಆಗುವ ಹಾನಿಯೂ ಅಷ್ಟರಲ್ಲಿಯೇ ಇದೆ. ಇವರನ್ನು ನಾವೇನು ಬೃಹಸ್ಪತಿಗಳನ್ನಾಗಿ ಮಾಡಬೇಕಾಗಿದೆಯೇ?"

"ಅವರನ್ನು ಬೃಹಸ್ಪತಿಗಳನ್ನಾಗಿ ಮಾಡುವದಾಗದಿದ್ದರೂ ಕೂಲಿಯ ಆಳುಗಳಂತೆ ದುಡಿಸಿಕೊಳ್ಳಬಾರದಷ್ಟೆ. ಈ ಗುರುಪರಂಪರೆ ಒಳ್ಳೆಯದಲ್ಲ ತಮ್ಮ! ಇದು ಮಹಾ ಪಾಪ. ಶಿಷ್ಯರಿಗೆ ನಾವು ಮಾಡುತ್ತಿರುವ ಘೋರ ಅನ್ಯಾಯ. ಇದು ನಿಲ್ಲಬೇಕು."

"ಹಾಗಾದರೆ ಇವರ ಹೊಟ್ಟೆಯ ಪಾಡನ್ನು ನೀವೇ ನೋಡಿಕೊಳ್ಳಿರಿ.

ಈಗ ಮಧುಕರಿಯೂ ಹುಟ್ಟುವದಿಲ್ಲವೆಂದು ನಿಮಗೆ ಗೊತ್ತಿದೆ. ಜನರ ಸಹಾಯವೂ ತಪ್ಪಿಹೋಗಿದೆ. ನಮ್ಮ ಸಂಸಾರವೇ ನಮಗೆ ಭಾರವಾಗತೊಡಗಿದೆ. ಇಂತಹ ಹೊತ್ತಿನಲ್ಲಿ ಹಿಂದಿನ ಮಾತನ್ನು ನೆನೆಯುತ್ತ ಕುಳ್ಳಿರುವಲ್ಲಿ ಯಾವ ಅರ್ಥವೂ ಇಲ್ಲ. ಈ ಶಿಷ್ಯರಿಗೆ ವಿದ್ಯೆ ಬೇಕಾದರೆ ಅವರು ನನ್ನೊಡನೆ ದುಡಿಯಲಿ. ಇಲ್ಲದಿದ್ದರೆ ನೀವು ಬೇಕಾದ್ದು ಮಾಡಿಕೊಳ್ಳಿರಿ. ನನ್ನೊಬ್ಬನಿಂದ ತಂದುಹಾಕುವದು ಸಾಧ್ಯವಿಲ್ಲ" ಎಂದು ನುಡಿದ ನರಹರಿಭಟ್ಟನು ಸ್ವಲ್ಪ ಸಿಡುಕಿನಿಂದಲೇ ಮರೆಯಾದನು.

ಶಾಸ್ತ್ರಿಗಳಿಗೆ ತಮ್ಮಿಂದ ಶಿಷ್ಯಪೋಷಣೆ ಸಾಧ್ಯವಿಲ್ಲವೆಂದು ಅನ್ನಿಸಿತು. ಅವರು ನರಹರಿಭಟ್ಟನ ಮಾತುಗಳನ್ನು ಕೇಳಿ ತೆಪ್ಪಗಾಗಿಬಿಟ್ಟರು.

ಅವರ ಅಂತರಾಳದಲ್ಲಿ ಮಾತ್ರ ತಳಮಳವೆದ್ದಿತು. ಈ ತಳಮಳವನ್ನು ಅವರು ಹತ್ತಿಕ್ಕಿಕೊಂಡರು.

ನರಹರಿಭಟ್ಟನ ದಬ್ಬಾಳಿಕೆಯು ಶಿಷ್ಯರಿಗೆ ಅಸಹನೀಯವಾಗತೊಡಗಿತು. ಅತ್ತೆಯಮನೆಯ ಸೊಸೆಯಂತೆ ಅವರ ಪಾಡಾಗಿಬಿಟ್ಟಿತು.

ಒಂದಿಲ್ಲೊಂದು ನೆವವೊಡ್ಡಿ ಶಿಷ್ಯರು ತಮ್ಮ ತಮ್ಮ ಮನೆಗಳಿಗೆ ಹೋಗತೊಡಗಿದರು. ನಾಲ್ಕೆಂಟು ದಿನ ಇದ್ದು ಬರುವೆವೆಂದು ಹೇಳಿ ಹೋದ ಶಿಷ್ಯರಲ್ಲಿ ಯಾರೂ ತಿರುಗಿ ಬರಲಿಲ್ಲ. ಈ ವರುಷ ಮುಗಿಯುವದರೊಳಗೆ ಭಟ್ಟರ 'ಶಿಷ್ಯ ಪರಂಪರೆ'ಯು ಪೂರಾ ನಿಂತುಬಿಟ್ಟಿತು.

ಇದನ್ನು ತಿಳಿದ ನೀಲಕಂಠಶಾಸ್ತ್ರಿಗಳು ಮರುಗಿದರು. "ತಂದೆಯವರ ಪುಣ್ಯವು ಸರಿದಂತಾಯಿತು ತಮ್ಮ! ನಮ್ಮ ವಿದ್ಯಾಸತ್ರವು ನಿಂತು ಹೋಯಿತು. ಇದು ಇಷ್ಟು ಬೇಗನೇ ಆಗಬಾರದಾಗಿತ್ತು" ಎಂದಾಗ ನರಹರಿ ಭಟ್ಟನು,

"ಇಂಥ ಶಿಷ್ಯರನ್ನು ಕಟ್ಟಿಕೊಂಡು ಮಾಡುವದಾದರೂ ಏನಿತ್ತು? ಅವರೇನು ವಿದ್ಯೆ ಕಲಿಯಲು ಇದ್ದರೇ ? ಕೂಳಿಗಾಗಿ ಬಿದ್ದಿದ್ದರು. ಅವರು ಬಾರದಿದ್ದುದೇ ಒಳಿತಾಯಿತು. ಅವರು ಬಿಟ್ಟರೇನಾಯಿತು? ಅವರ ಅಪ್ಪನಂತಹ ಹತ್ತು ಶಿಷ್ಯರನ್ನು ತರುತ್ತೇನೆ," ಎಂದು ಹಾರಾಡಿ ನುಡಿದನು. ಆ ಮಾತಿಗೆ ಶಾಸ್ತ್ರಿಗಳು,

"ಇನ್ನು ನಮ್ಮ ಮನೆಗೆ ಯಾವ ಶಿಷ್ಯನೂ ಬರಲಾರನು. ಶಿಷ್ಯಪರಂಪರೆಯನ್ನು ಕಾಯ್ದುಕೊಂಡು ಹೋಗುವ ಪುಣ್ಯ ನಮಗಿಲ್ಲ" ಎಂದು ಭಾರವಾದ ದನಿಯಲ್ಲಿ ಹೇಳುತ್ತಿರುವಾಗ ಅವರ ಕಣ್ಣಂಚಿನಲ್ಲಿ ನೀರೂರಿತು.

ಅಂದಿನಿಂದ ಶಾಸ್ತ್ರಿಗಳು ಮನೆಯ ಹೊರಗೆ ಕಾಲಿಡಲು ಸಂಕೋಚಪಡ

ಹತ್ತಿದರು. ಈಗ ಕಲಿಸಲು ಶಿಷ್ಯರೇ ಇಲ್ಲ. ಮನೆಯ ಮಕ್ಕಳಿಗೆ ಕಲಿಸುವ ದಾದರೂ ಎಷ್ಟು ವೇಳೆ? ಅವರು ಹೆಚ್ಚು ವೇಳೆಯನ್ನು ಗ್ರಂಥಾವಲೋಕನ ದಲ್ಲಿ ಕಳೆಯತೊಡಗಿದರು. ಸಂಸಾರದ ಸಣ್ಣಪುಟ್ಟ ಕೆಲಸಗಳನ್ನು ಮಾಡ ತೊಡಗಿದರು. ಆದರೆ ಈ ಕೆಲಸ ಮಾಡುವಾಗ ಅವರಿಗೆ ಯಾವ ಸಂತೋಷವೂ ಇರುತ್ತಿರಲಿಲ್ಲ. ಎಲ್ಲವೂ ಯಾಂತ್ರಿಕವಾಗಿ ಸಾಗತೊಡಗಿತು.

ಈ ಶಿಷ್ಯರ ಪಿಡುಗಿನಿಂದ ಪಾರಾದೆನೆಂದು ಹಾಯಾಗಿ ಉಸಿರಿಟ್ಟ ನರಹರಿಭಟ್ಟನು ಸಂಸಾರ ನಿರ್ವಹಣಕ್ಕಾಗಿ ಒಂದಕ್ಕೆ ಹತ್ತು ಸುಳ್ಳು ಹೇಳಿ ಹಳ್ಳಿಗಳಿಂದ ಸಾಮುಗ್ರಿಗಳನ್ನು ತರತೊಡಗಿದನು. ದತ್ತೀ ಹೊಲದ ಫಸಲಿ ನಿಂದಲೂ, ಈ ಸಾಮುಗ್ರಿಗಳ ಸಹಾಯದಿಂದಲೂ ಆ ದೊಡ್ಡ ಭಾರವನ್ನು ಹೊರುವಂತಾದರೂ ನರಹರಿಭಟ್ಟನಿಗೆ ಸೌಖ್ಯವಿರಲಿಲ್ಲ. ಅವನ ಮನಸ್ಸಿ ನಲ್ಲಿಯೂ ತಮ್ಮ ಮನೆತನದ ಗೌರವವು ಒಮ್ಮೊಮ್ಮೆ ಮುಳ್ಳು ಚುಚ್ಚು ತ್ತಿತ್ತು. ಆದರೆ ಕಾಲವೇ ಬದಲಾದಾಗ ಅದನ್ನು ಕುರಿತು ಯೋಚಿಸುವದರಲ್ಲಿ ಯಾವ ಅರ್ಥವೂ ಇಲ್ಲವೆಂದು ಅವನು ಆ ವಿಚಾರವನ್ನು ತೊಡೆದುಹಾಕು ತ್ತಿದ್ದನು. ಈ ಸಂಸಾರವೊಂದು ಒಳ್ಳೇ ರೀತಿಯಿಂದ ಸಾಗಿದರೆ ಸಾಕು, ಅದೇ ಗೌರವವೆಂದು ಅವನು ಮನಸಾ ತಿಳಿದನು. ಆದರೆ ದಿನ ಹೋದಂತೆ ಇದೂ ಭಾರವಾಗತೊಡಗಲು ನರಹರಿಭಟ್ಟನು ಕಕ್ಕಾವಿಕ್ಕಿಯಾಗತೊಡಗಿದನು.

೨

ಗಂಗನಹಳ್ಳಿಯಲ್ಲಿ ಈಗ ಸ್ಪಷ್ಟವಾಗಿ ಎರಡು ಬಣಗಳಾಗಿಬಿಟ್ಟವು. ಒಂದು ಬಸಪ್ಪಶೆಟ್ಟಿಯದು. ಇನ್ನೊಂದು ಮೋಹನರಾಯರದು. ಈ ಬಣಗಳ ಜಗಳ ದಲ್ಲಿ ಹಳ್ಳಿಯ ವಾತಾವರಣವು ದಿನದಿನವೂ ಪ್ರಕ್ಷುಬ್ಧವಾಗತೊಡಗಿತು. ಗಂಗನಹಳ್ಳಿಯಲ್ಲಿ ಹಿರಿಯರೇ ಇಲ್ಲದಾದರು. ಯಾರ ಮಾತನ್ನು ಯಾರೂ ಕೇಳುವಂತಿಲ್ಲ. ವಿಶ್ವೇಶ್ವರಭಟ್ಟರ ಕಾಲದಲ್ಲಿ ಅವರ ಮಾತು ನಡೆಯುತ್ತಿತ್ತು. ಹಳ್ಳಿಯ ಜೀವನವು ಏಕಸೂತ್ರತೆಯಲ್ಲಿ ಸಾಗುತ್ತಿತ್ತು. ಈಗ ಆ ನೂಲು ತುಕಡಿತುಕಡಿಯಾಗಿಬಿಟ್ಟಿತು. ಹಿರಿಯರಾದವರು ತಮ್ಮ ಬಣಗಳನ್ನು ಕಟ್ಟಿ ಮಾತಾಡುತ್ತಿದ್ದರೇ ವಿನಃ ಗಂಗನಹಳ್ಳಿಯ ಸಾರ್ವಜನಿಕ ಹಿತವನ್ನು ಲಕ್ಷಿಸು ತ್ತಿರಲಿಲ್ಲ. ಇಂದು ಗಂಗನಹಳ್ಳಿ ಸಾರ್ವಜನಿಕ ಜೀವನವನ್ನೂ ಕಳೆದುಕೊಂಡು ಬಿಟ್ಟಿತು. ಬಣಗಳ ಬೇಗೆಯಲ್ಲಿ ಹಳ್ಳಿಯ ಜೀವನವು ಉಧ್ವಸ್ತವಾಗಿಬಿಟ್ಟಿತು. ಗಂಗನಹಳ್ಳಿಯ ಸಾರ್ವಜನಿಕ ಕಾರ್ಯಗಳೆಲ್ಲ ನಿಂತುಬಿಟ್ಟವು. ದಿನಗಳುರುಳಿ

ದಂತೆ ಗಂಗನಹಳ್ಳಿ ನಿರ್ಜೀವವಾಗಿ ನಿಂತುಬಿಟ್ಟಿತು. ಮೊದಲಿನ ಉತ್ಸಾಹ-ಶಾಂತಿ-ಸಮಾಧಾನಗಳೆಲ್ಲ ಕನಸಿನ ಮಾತಾಗಿಬಿಟ್ಟವು. ಇಂದು ಆ ಹಳ್ಳಿಯಲ್ಲಿ ಎಲ್ಲರೂ ಹಿರಿಯರೇ. ಈ ಹಿರಿಯರು ಸ್ವಾರ್ಥಪೂರ್ಣರಾದ ಸಮಯ ಸಾಧಕರಾಗಿದ್ದರು. ಅವರ ಉದ್ದೇಶ ಹೇಯವಾಗಿತ್ತು. ಹೀಗಾಗಿ ಗಂಗನಹಳ್ಳಿ ಮೊದಲಿನ ಜೀವಸವನ್ನೂ ವೈಭವವನ್ನೂ ಕಳೆದುಕೊಂಡ ವಿಧವೆಯಂತೆ ಯಂತ್ರವತ್ತಾಗಿ ಜೀವನ ಸಾಗಿಸತೊಡಗಿತು.

ಗಂಗನಹಳ್ಳಿಯ ಈ ದುರಂತ ಜೀವನವನ್ನು ಕಂಡು ವಿಚಾರಿಸುವ ಜನರು ಅಲ್ಲಿ ಯಾರೂ ಇರದಿದ್ದರೂ ಒಂದು ವ್ಯಕ್ತಿ ಮಾತ್ರ ಇದನ್ನು ಮೂಕ ವೇದನೆಯಲ್ಲಿ ಕಾಣುತ್ತಿತ್ತು. ನೀಲಕಂಠಶಾಸ್ತ್ರಿಗಳೇ ಆ ವ್ಯಕ್ತಿ. ವಿಶ್ವೇಶ್ವರ ಭಟ್ಟರ ಭವ್ಯ ಜೀವನದ ಸವಿಯನ್ನುಂಡು ಬೆಳೆದ ಶಾಸ್ತ್ರಿಗಳಿಗೆ ಗಂಗನಹಳ್ಳಿಗೆ ಬಂದ ಈ ಪಾಡು ಅಸಹನೀಯವಾಗತೊಡಗಿತು. ಆದರೆ ಇದಕ್ಕೆ ಅವರು ಯಾವ ಉಪಾಯವನ್ನೂ ಸೂಚಿಸದ ನಿರ್ಬಲರಾಗಿದ್ದರು. ಅವರ ಜೀವನದಲ್ಲಿ ನಿರಾಶೆ ತಾಂಡವವಾಡತೊಡಗಿತು. ಶಿಷ್ಯಪರಂಪರೆ ನಿಂತ ದಿನದಿಂದ ಪ್ರಾರಂಭವಾದ ಈ ನಿರಾಶೆ ಅವರ ಜೀವನವನ್ನೆಲ್ಲ ಆಕ್ರಮಿಸಿಬಿಟ್ಟಿತು. ಪತ್ನಿಯ ವಿಯೋಗವಾದಂದಿನಿಂದ ಇದು ಇನ್ನೂ ಉಗ್ರವಾಯಿತು. ಅವರು ಜೀವನವನ್ನು ನೋಡುವ ರೀತಿಯೇ ಬದಲಾಗಿಬಿಟ್ಟಿತು. ತಮ್ಮ ಆಹ್ನೀಕ-ದೇವಪೂಜೆ, ತರ್ಪಣ ಮೊದಲಾದವುಗಳಲ್ಲಿ ವೇಳೆ ಕಳೆಯತೊಡಗಿದರು. ಆದರೂ ಒಮ್ಮೊಮ್ಮೆ ಹಿಂದಿನ ಜೀವನ ನೆನಪಾದಾಗ ಅವರ ಕಣ್ಣಂಚಿನಲ್ಲಿ ನೀರು ತುಳುಕುವುದು. ಅವರ ಸಾತ್ವಿಕತೆ ಹೊನಲಾಗಿ ಹರಿಯುತ್ತಿತ್ತು. ತಮ್ಮ ಅಸಾರ್ಥಕ ಜೀವನವೆತ್ತ? ತಂದೆಯ ತುಂಬು ಜೀವನವೆತ್ತ? ತಾವು ವಿಶ್ವೇಶ್ವರ ಭಟ್ಟರ ಮಗನಾಗಿ ಹುಟ್ಟಬಾರದಾಗಿತ್ತೆಂದು ಒಮ್ಮೊಮ್ಮೆ ನಿಟ್ಟುಸಿರು ಬಿಡುವರು. ಆ ಯೋಗ್ಯತಾಸಂಪನ್ನನಿಗೆ ಅಯೋಗ್ಯರಾದ ಮಕ್ಕಳು ಹುಟ್ಟಬಾರದಾಗಿತ್ತೆಂದು ಪದೇಪದೇ ವಿಚಾರಿಸುವರು. ಅವರ ಜೀವನವೆಲ್ಲ ನಿಟ್ಟುಸಿರಿನ ತಿದಿಯಾಗಿ ನಿರಾಶೆಯ ಮಂದಿರವಾಗಿಬಿಟ್ಟಿತು.

ಈ ದಿನ ಬೆಳಗಾಗಲು ಇನ್ನೂ ಸಮಯವಿರುವಾಗ ಶಾಸ್ತ್ರಿಗಳು 'ಅಯ್ಯನಬಾವಿ'ಯ ತೋಟದಿಂದ ತುಳಸಿಯ ದಳಗಳನ್ನೂ, ಬಿಲ್ವಪತ್ರಿಗಳನ್ನೂ ತರಲು ಹೊರಬಿದ್ದರು. ಹಳ್ಳಿ ಸ್ತಬ್ಧವಾಗಿತ್ತು. ಹಿಂದೆ ಅನೇಕ ಸಲ ಇಂತಹ ಸಮಯದಲ್ಲಿ ಶಾಸ್ತ್ರಿಗಳು ಹೊರಬಿದ್ದಾಗ ಗಂಗನಹಳ್ಳಿ ಚೇತನಾಪೂರ್ಣವಾಗಿ ಕಾಣುತ್ತಿತ್ತು. ಹಳ್ಳಿಯ ಹೆಂಗಳೆಯರು ತಮ್ಮದೇ ಆದ ಸ್ವರದಲ್ಲಿ ಬೀಸುವ ಕಲ್ಲಿನ ಪದಗಳನ್ನು ಹಾಡಿ ಸಂಭ್ರಮವನ್ನು ಸೂಸುತ್ತಿದ್ದರು.

ಆ ಸುಮಧುರವಾದ ಸಂಗೀತವನ್ನು ಕೇಳಿದಾಗ ಅವರ ಆನಂದ ಮೇರೆದಪ್ಪಿ ಹರಿಯುತ್ತಿತ್ತು. ಇಂದು ಆ ದನಿ ಮಾಯವಾಗಿದೆ. ಬೀಸುವ ಕಲ್ಲುಗಳು ಮೂಲೆಗುಂಪಾಗಿವೆ. ಇದಕ್ಕೆ ಬಸಪ್ಪಶೆಟ್ಟಿ ತಂದುಹಾಕಿದ ಹಿಟ್ಟಿನ ಗಿರಣಿಯೇ ಕಾರಣವಾಗಿದ್ದಿತು. ನೀರವ ನಿಶ್ಶಬ್ದವಾದ ಕೇರಿಗಳನ್ನು ದಾಟಿ ಶಾಸ್ತ್ರಿಗಳು ಆರುಯಾತದ ಬಾವಿಯ ಮೇಲೆ ನಿಂತಾಗ ಅವರಿಗೆ ಅನೇಕ ಆಗಿಹೋದ ಸ್ಮೃತಿಗಳು ಮೂಡಿ ಬರತೊಡಗಿದವು. ವಿಶ್ವೇಶ್ವರಭಟ್ಟರಿಗೆ ಮೊದಲಿಗೆ ಆಶ್ರಯ ಕೊಟ್ಟ ಬಾವಿ ಇಂದು ಹಾಳು ಬಿದ್ದಿದೆ. ಆ ಕಮಾನುಗಳಲ್ಲಿ ಇಂದು ಕಣ್ಣು ಕಪ್ಪಡಿಗಳು ಮನೆಮಾಡಿಕೊಂಡಿವೆ. ಕೊಳಚೆ ನೀರು ದುರ್ಗಂಧವನ್ನು ಬೀರತೊಡಗಿದೆ. ಇದನ್ನು ನೋಡಲಾರದೆ ಶಾಸ್ತ್ರಿಗಳು ಮುಂದೆ ಸಾಗಿ ಗಂಗನ ಹಳ್ಳಿಯ ಕೆರೆಯ ದಂಡೆಗುಂಟ ಸಾಗತೊಡಗಿದಾಗ ಅಲ್ಲಿ ಅವರಿಗೆ ಕಂಡು ದೇನು? ಎಲ್ಲಿಯೋ ಒತ್ತಟ್ಟಿಗೆ ನೀರು ಕೊಳಚೆಯಾಗಿ ನಿಂತಿದೆ. ಕೆರೆ ಹುಗಿದು ಹೋಗಿದೆ. ಅದನ್ನು ಅಗಿಸುವವರಾರು ? ಪಾರ್ವತಿಯ ಕಟ್ಟೆಯನ್ನು ನೋಡಿ ದಾಗಲಂತೂ ಅವರ ದುಃಖ ಉಮ್ಮಳಿಸಿಬಿಟ್ಟಿತು. ಈ ತಂಗಿಯ ಕಟ್ಟೆಗೆ ಈ ಪಾಡು ಆಗಬೇಕೆ ? ಸುತ್ತಲಿನ ಕಲ್ಲುಗಳು ಬಿದ್ದುಹೋಗಿವೆ. ಅಳಿದುಳಿದ ಕಲ್ಲು ಗಳು ಈಗಲೋ ಇನ್ನಾವಾಗಲೋ ಬಿದ್ದುಹೋಗುವ ಲಕ್ಷಣಗಳು ಕಾಣಬರು ತ್ತಿವೆ. ಗಂಗನಹಳ್ಳಿಯ ಹಿತಕ್ಕಾಗಿ ಆಹುತಿಯಾದ ಈ ದೇವಕನ್ನೆಯನ್ನು ಈ ಹಳ್ಳಿ ಹೀಗೆ ಮರೆತುಬಿಡಬೇಕೆ ? ಎಂತಹ ಅನ್ಯಾಯವಿದು ?

ಶಾಸ್ತ್ರಿಗಳಿಗೆ ಅಲ್ಲಿ ನಿಲ್ಲುವದಾಗಲಿಲ್ಲ. ಅಲ್ಲಿಯ ಮಣ್ಣನ್ನು ಹಿಡಿಯಲ್ಲಿ ತೆಗೆದುಕೊಂಡು ಪಾರ್ವತಿಯ ಕಟ್ಟೆಗೆ ನಮಿಸಿ ಮುಂದೆ ಸಾಗಿದರು. 'ಅಯ್ಯನ ಬಾವಿ'ಯನ್ನು ಬಳಸಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಗೃಹಾಭಿ ಮುಖವಾದರು. ದಾರಿಯಲ್ಲಿ ಹತ್ತುವ ಅನೇಕ ಗುಡಿಗಳಲ್ಲಿ ಜನರು ಗುಂಪು ಗುಂಪಾಗಿ ಕುಳಿತು ಹರಟೆ ಕೊಚ್ಚುತ್ತಿದ್ದರು. ಗುಡಿಗಳಲ್ಲಿ ಕಸ ಗುಂಪಾಗಿ ಬಿದ್ದರೂ ಅದನ್ನು ಗುಡಿಸುವವರಿಲ್ಲ. ತಂಬಾಕು ಬತ್ತಿಗಳ ಹೊಗೆಯಲ್ಲಿ ವಿಗ್ರಹ ಗಳು ಮುಚ್ಚಿ ಹೋಗಿರುವದನ್ನು ನೆನೆದು ಶಾಸ್ತ್ರಿಗಳು ತತ್ತರಿಸಿದರು. ಈ ಗುಡಿಗಳಿಗಾಗಿ ವಿಶ್ವೇಶ್ವರಭಟ್ಟರು ದೇಹ ಸವೆಸಿದ್ದರು. ಈಗ ಈ ಹಿಂದೂ ದೇವಾಲಯಗಳ ಪರಿಸ್ಥಿತಿ ಹೀಗಾಗಬೇಕೆ? ಇವು ಹರಟೆಯ ಚಾವಡಿಗಳಾಗ ಬೇಕೆ ? ಇಸ್ಪೀಟು ಆಟದ ಗೂಡುಗಳಾಗಬೇಕೆ ? ಶಾಸ್ತ್ರಿಗಳು ಮರಮರನೆ ಮರುಗಿದರು. ಮುಂದೆ ರಾಯರ ಬಾವಿಯನ್ನು ದಾಟಿ ತಮ್ಮ ಮಾವಿನ ಗಿಡ ಗಳನ್ನು ನೋಡಿದಾಗ ಮಾತ್ರ ಅವರಿಗೆ ತುಸು ಸಂತೋಷವಾಯಿತು. ಗಿಡ ಗಳೆಲ್ಲ ಫಲಭರಿತವಾಗಿದ್ದವು, ವಿಶ್ವೇಶ್ವರಭಟ್ಟರ ಪುಣ್ಯಪ್ರತೀಕಗಳಾಗಿ

ಕಂಗೊಳಿಸುತ್ತಿದ್ದವು. ಈ ಸಲ ಈ ಹಣ್ಣುಗಳಿಂದ ಬ್ರಾಹ್ಮಣರ ಭೋಜನವನ್ನೇಕೆ ಏರ್ಪಡಿಸಬಾರದು ಎಂದು ಆಗಲೇ ಯೋಚಿಸಿದರು. ಈ ಯೋಚನೆ ಬಂದಾಗ ಅವರಿಗೆ ಹಿಂದಿನ ದಿನಗಳ ನೆನಪಾಗದಿರಲಿಲ್ಲ. ಅನೇಕ ಮಕ್ಕಳು ಈ ಹಣ್ಣುಗಳನ್ನು ಚೀಪುತ್ತಿರುವದು, ಧರ್ಮಪತ್ನಿಯಾದ ತಾಯಿ ಬುಟ್ಟಿಗಳಲ್ಲಿ ಈ ಹಣ್ಣುಗಳನ್ನು ತುಂಬಿಕೊಡುವದು, ಈ ದೃಶ್ಯ ಅವರ ಕಣ್ಣಮುಂದೆ ಕಟ್ಟಿತು.

ಮನೆಗೆ ಬಂದಾಗ ಎರಡು ತಾಸು ಹೊತ್ತೇರಿತ್ತು. ನರಹರಿಭಟ್ಟರು ಮನೆಯಲ್ಲಿಯೇ ಕುಳಿತು ಜನಿವಾರಗಳಿಗಾಗಿ ದಾರವನ್ನು ನೂಲುತ್ತಿದ್ದರು. ತಮ್ಮನ ಮುಂದೆ ತಾವು ನೆನೆಸಿದ ಯೋಜನೆಯನ್ನಿಡಲು ಹಾತೊರೆದ ಭಟ್ಟರು ಮನೆಗೆ ಬಂದವರೇ ತಮ್ಮನನ್ನು ಕುರಿತು "ನರಹರೀ! ಈ ಸಲ ಮಾವಿನ ಹಣ್ಣಿನ ಸುಗ್ಗಿ ಒಳ್ಳೆಯದಾಗುವಂತೆ ತೋರುತ್ತದೆ. ಎಲೆಗೊಂದು ಕಾಯಿ ನೋಡು." ಎಂದರು. ನರಹರಿ ಆ ಮಾತುಗಳನ್ನು ನಿರ್ವಿಕಾರ ಮನಸ್ಸಿನಿಂದಲೇ ಕೇಳಿದನು. ನೂಲುವ ಬಗರಿ ತಿರುಗುತ್ತಲೇ ಇತ್ತು.

"ಈ ಸಲ ಬ್ರಾಹ್ಮಣರಿಗೆಲ್ಲ ಸೀಕರಣೆಯ ಸಮಾರಾಧನೆಯಾಗಬೇಕು ನರಹರಿ. ಹಣ್ಣು ಪುಷ್ಕಳವಾಗಿ ಬರುವಂತೆ ತೋರುತ್ತದೆ" ಎಂದು ಶಾಸ್ತ್ರಿಗಳು ಸಂತೋಷದಿಂದ ನುಡಿದರು.

ಹರಿದ ಎಳೆಯನ್ನು ಜೋಡಿಸುತ್ತ ನರಹರಿಭಟ್ಟನು "ಆ ಹಣ್ಣುಗಳೆಲ್ಲ ನಮ್ಮ ಪಾಲಿಗೆ ಬರುವಂತಿಲ್ಲ ಅಣ್ಣ. ಅವುಗಳನ್ನು ಬಾಗವಾನರಿಗೆ ಮುಂಗಡ ಹಣ ತೆಗೆದುಕೊಂಡು ಮಾರಿಬಿಟ್ಟಿದ್ದೇನೆ" ಎಂದಾಗ ಶಾಸ್ತ್ರಿಗಳಿಗೆ ಆಶ್ಚರ್ಯವಾಯಿತು.

"ಹಣ್ಣುಗಳನ್ನು ಮಾರಿಬಿಟ್ಟೆಯಾ ತಮ್ಮ? ನಮ್ಮ ಹಣ್ಣುಗಳನ್ನು ತಿನ್ನುವ ಭಾಗ್ಯ ನಮಗಿಲ್ಲವಾಯಿತೆ?"

"ಮಕ್ಕಳ ಸಲುವಾಗಿ ನೂರಕ್ಕೆ ಐದು ಹಣ್ಣುಗಳನ್ನು ಕೊಡಲು ಹೇಳಿದ್ದೇನೆ."

"ನೀನು ತಪ್ಪು ಮಾಡಿದಿ ತಮ್ಮ. ಈ ಹಣ್ಣುಗಳನ್ನು ಮಾರಬಾರದಾಗಿತ್ತು." ಶಾಸ್ತ್ರಿಗಳು ವೇದನಾಪೂರ್ಣವಾಗಿ ಹೇಳಿದರು.

"ಸದ್ಯದ ಅಡಚಣೆಯನ್ನು ನೀಗಿಕೊಳ್ಳಲು ಅದೊಂದೇ ಮಾರ್ಗವಿತ್ತು ಅಣ್ಣ. ನಾನಾದರೂ ಏನು ಮಾಡಲಿ?"

"ಈ ಗಿಡಗಳನ್ನು 'ದತ್ತಿ' ಕೊಟ್ಟವರು ಅವುಗಳನ್ನು ನಮ್ಮ ಉಪಜೀವನಕ್ಕಾಗಿ ಕೊಟ್ಟಿರಲಿಲ್ಲ ತಮ್ಮ! ಬ್ರಾಹ್ಮಣ ಸಂತರ್ಪಣೆಗಾಗಿ ಕೊಟ್ಟ

ದ್ದರು. ವಿಶ್ವೇಶ್ವರಭಟ್ಟರ ಮಕ್ಕಳು ಮರಿಗಳು ತಿನ್ನಬೇಕೆಂದು ನೀಡಿದ್ದರು."

"ಅಂದು ಆ ಮಾತು ಹಾಗಿತ್ತು. ಇಂದು ಎಲ್ಲವೂ ಬೇರೆಯಾಗಿದೆ. ನಮಗೆ ಕೊಟ್ಟ ಗಿಡಗಳ ಉಪಯೋಗವನ್ನು ನಾವು ಹೇಗೆ ಬೇಕಾದರೂ ಮಾಡಿಕೊಳ್ಳಬಹುದು. ಈ ಮಾರಾಟವನ್ನು ನಾನು ಅನಿವಾರ್ಯವಾಗಿ ಮಾಡಬೇಕಾಯಿತು. ನಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಲು ಬೇರೆ ಉಪಾಯವೇ ಇರಲಿಲ್ಲ."

"ಇದು 'ದತ್ತಿ'ಯ ದುರುಪಯೋಗ ತಮ್ಮ."

"ಇದು ದುರುಪಯೋಗವೋ ಸದುಪಯೋಗವೋ ನಾನೇನು ಹೇಳಲಿ? ಮಾರಾಟವನ್ನಂತೂ ಮಾಡಿಬಿಟ್ಟಿದ್ದೇನೆ. ಸಂಸಾರದ ನೊಗವನ್ನು ಹೊತ್ತ ನನ್ನ ಅಡಚಣೆಗಳು ನಿಮಗೆ ಗೊತ್ತಾಗುವದಿಲ್ಲ. ನಿಮ್ಮ ಸಂಧ್ಯಾವಂದನೆಯಲ್ಲಿ ಸಂಸಾರದ ಸಂಕಟವನ್ನು ನೀವು ಅನುಭವಿಸಲಾರಿರಿ. ಅದು ಮಾಡುವವನಿಗೇ ಗೊತ್ತು. ಒಂದು ದಿನವಾದರೂ ಈ ದೊಡ್ಡ ಸಂಸಾರದ ಚಿಂತೆ ಮಾಡಿರು ವಿರಾ ? ದುಡಿದು ದುಡಿದು ನನ್ನ ಜೀವ ಬೇಸರಗೊಂಡಿದೆ. ಆ ವೈದಿಕವೃತ್ತಿ ಭಿಕ್ಷುಕರ ವೃತ್ತಿ! ಈಗ ಭಿಕ್ಷವೂ ಸಿಗುವುದಿಲ್ಲ. ಆ ಎರಡು ಹೊಲಗಳಿಲ್ಲದಿದ್ದರೆ ನಾವು ಈಗಾಗಲೇ ಭಿಕಾರಿಗಳಂತೆ ಬೀದಿಬೀದಿ ತಿರುಗಬೇಕಾಗುತ್ತಿತ್ತೆಂಬು ದನ್ನು ನೀವು ಅರಿಯಬೇಕು. ಸುಮ್ಮನೆ ಹಳೆಯ ಉದ್ದೇಶ ಆದರ್ಶಗಳಿಂದ ತಲೆ ಕೆಡಿಸಿಕೊಂಡರೆ ಉಪಜೀವನ ಸಾಗಲಾರದು. ಒಜ್ಜೆಯ ಭಾರ ಹೊತ್ತವನಿಗೆ-ನಿಮಗೇನು ?" ಎಂದು ನರಹರಿಭಟ್ಟನು ಮಾತನಾಡಿ ತನ್ನ ಸಂಸಾರದ ಚಿತ್ರವನ್ನಿಡಲು ಶಾಸ್ತ್ರಿಗಳು ತೆಪ್ಪಗಾಗಿಬಿಟ್ಟರು. ಅವರಿಗೆ ಈ ಹಣ್ಣುಗಳ ಮಾರಾಟದಿಂದ ಜೀವನದ ಒಂದು ಅಂಶವೇ ಮಾರಾಟವಾಗಿಹೋದಂತೆ ಕಳವಳವಾಯಿತು. ವಿಶ್ವೇಶ್ವರಭಟ್ಟರ ಭವ್ಯಜೀವನೋದ್ದೇಶಗಳೆಲ್ಲ ಕ್ರಮಬದ್ಧ ವಾಗಿ ನುಚ್ಚುನೂರಾಗತೊಡಗಿದ ವೇದನೆಯು ಅವರ ಕಣ್ಣುಗಳಲ್ಲಿ ನೀರನ್ನು ಉಕ್ಕಿಸಿತು. 'ಇದು ಹೀಗಾಗಬಾರದಾಗಿತ್ತು. ನಾವು ಹಣ್ಣುಗಳನ್ನು ಮಾರಾ ಟಕ್ಕೆ ಇಡಬಾರದಾಗಿತ್ತು. ಇದನ್ನು ತಂದೆ ಕ್ಷಮಿಸಲಾರರು.' ಎಂದು ನಿಟ್ಟು ಸಿರು ಕರೆದರು. ಆ ನಿಟ್ಟುಸಿರು ಜೀವನದ ಅಸಾರ್ಥಕತೆಯನ್ನು ಕೂಗಿ ಹೇಳು ವಂತೆ ಶಾಸ್ತ್ರಿಗಳು ಸಂಕಟಪಟ್ಟರು. ಅವರ ಮನಸ್ಸಿನಲ್ಲಿ ಮೂಡಿಬಂದ ಬ್ರಾಹ್ಮಣ ಸಂತರ್ಪಣೆ ನಡೆಯಲಿಲ್ಲವಲ್ಲಾ ಎಂಬುದು ಈ ಕೊರಗಿಗೆ ಕಾರಣ ವಾಗಿತ್ತು.

ಈ ವೇಳೆಯಲ್ಲಿ ದೇಸಾಯರ ಗುಮಾಸ್ತನಾದ ರಂಗಪ್ಪನೂ, ನಾಗರ ಹಳ್ಳಿಯ ನಾಡಗೌಡನ ಮಗನೂ ಬರದಿದ್ದರೆ ಶಾಸ್ತ್ರಿಗಳು ಧಾರಾಳವಾಗಿ

ಕಣ್ಣೀರು ಹರಿಯಿಸುತ್ತಿದ್ದರೇನೋ. ಅವರು ಬಂದದ್ದರಿಂದ ಅವರು ಗಡಿಬಿಡಿಯಿಂದ ಕಣ್ಣುಗಳನ್ನು ಒರೆಸಿಕೊಂಡರು. ನರಹರಿಭಟ್ಟನು ಇವರನ್ನು ನೋಡಿ ಆದರದಿಂದ,

"ಓಹೋ ರಂಗಪ್ಪ! ಇದೇನು ಅಲಭ್ಯ ಲಾಭ. ಬಡವರ ಮನೆಗೆ ಬಂದುಬಿಟ್ಟೆ. ನಾಡಗೌಡರ ಮಗನನ್ನೂ ಕರೆದುಕೊಂಡು ಬಂದದ್ದು ಎಂತಹ ಸಂತೋಷ. ಮೇಲೆ ಬನ್ನಿರಿ ಮಾರಾಯರೇ!" ಎಂದು ಕಂಬಳಿಯನ್ನು ಹಾಸಿ ಕುಳ್ಳಿರಿಸಿದನು.

"ಬರಲೇಬೇಕಾದ ಸಂದರ್ಭ ಬಂದ ಮೇಲೆ ಬರದಿದ್ದರೆ ಹೇಗೆ ಭಟ್ಟರೆ?" ಎಂದು ರಂಗಪ್ಪ ಹಾಸಿಗೆಯ ಮೇಲೆ ಕುಳ್ಳಿರುತ್ತ ಹೇಳಿದ.

"ಯಾವ ಧಾರ್ಮಿಕ ಕೆಲಸ ನಮ್ಮಿಂದ ಆಗಬೇಕು ಹೇಳು ಮಾರಾಯಾ? ರುದ್ರಾಭಿಷೇಕವೆ ? ಬ್ರಾಹ್ಮಣ ಸಂತರ್ಪಣೆಯೆ ?"

"ಮಾತು ಬಹಳ ಸೂಕ್ಷ್ಮವಾಗಿದೆ ಭಟ್ಟರೆ. ನಾವು ಬಂದ ಕೆಲಸವೇ ಬೇರೆಯಾಗಿದೆ."

"ಅಂತಹದೇನಪ್ಪಾ ಸೂಕ್ಷ್ಮವಾದ ಕೆಲಸ ಮತ್ತೆ? ನಾಡಗೌಡರದೇನಾದರೂ ಕೆಲಸವಿದೆಯೇನು ಮತ್ತೆ."

"ನಾನು ಹೇಳಬೇಕಾದುದನ್ನೆಲ್ಲ ರಂಗಪ್ಪನೇ ಹೇಳುತ್ತಾನೆ" ಎಂದು ನಾಡಗೌಡನು ಹೇಳಿ ರಂಗಪ್ಪನ ಮುಖ ನೋಡಿದ.

ರಂಗಪ್ಪ ನೇರವಾಗಿ ಹೇಳತೊಡಗಿದ :

"ಮಾತು ಹೀಗಿದೆ ನೋಡಿರಿ ಶಾಸ್ತ್ರಿಗಳೇ, ನಮ್ಮ ಯಜಮಾನರಾದ ಗಂಗಪ್ಪ ದೇಸಾಯರೂ, ಇವರ ಹಿರಿಯರಾದ ನಾಡಗೌಡರೂ ವಿಶ್ವೇಶ್ವರ ಭಟ್ಟರಿಗೆ ಹೊಲಗಳನ್ನು ದತ್ತಿಯಾಗಿ ಕೊಟ್ಟಿದ್ದರಲ್ಲ...."

"ಅವರು ಪುಣ್ಯವಂತರು ರಂಗಪ್ಪ. ಆ ಪುಣ್ಯದ ಹಾಲನ್ನೇ ನಾವಿಂದು ಕುಡಿಯುತ್ತಿರುವದು." ಶಾಸ್ತ್ರಿಗಳು ಮನಃಪೂರ್ವಕವಾಗಿ ಹೇಳಿದರು.

"ಅದು ಸರಿ ಭಟ್ಟರೆ! ಆದರೆ ಈಗ ಆ ಹೊಲಗಳನ್ನು ತಿರುಗಿ ಪಡೆಯಬೇಕೆಂದು ನಮ್ಮ ಈಗಿನ ಯಜಮಾನರೂ, ನಾಡಗೌಡರೂ ಅಪೇಕ್ಷಿಸುತ್ತಾರೆ. ನಾವು ಬಂದ ಕೆಲಸವೇ ಇದು. ಇದನ್ನು ತಿಳಿಸಲೆಂದೇ ನಾವು ಬಂದದ್ದು."

ರಂಗಪ್ಪನ ಮಾತುಗಳನ್ನು ಕೇಳಿ ಶಾಸ್ತ್ರಿಗಳ ಮೇಲೆ ಆಕಾಶಕೊಡಲಿಯೇ ಬಿದ್ದಂತಾಗಿ ಅವರ ನಾಲಗೆಯೊಣಗಿಬಿಟ್ಟಿತು. ಅವರು ಒಂದೇ ಸಮನೆ ರಂಗಪ್ಪನನ್ನು ನೋಡತೊಡಗಿದರು. ನರಹರಿಭಟ್ಟನು ಹೌಹಾರಿದರೂ ಅದನ್ನು ತೋರಗೊಡದೆ ಪ್ರತಿಭಟಿಸುತ್ತ,

"ಇದು ಅನ್ಯಾಯ ರಂಗಪ್ಪ. ಕೊಟ್ಟುದನ್ನು ಕಸಿದುಕೊಳ್ಳುವ ಬಡತನ ಇವರಿಗೆ ಬಂತೆ?"

"ಇದರಲ್ಲಿ ಬಡತನದ ಪ್ರಶ್ನೆಯೇ ಇಲ್ಲ ಭಟ್ಟರೆ. ತಮ್ಮ ಆಸ್ತಿಯ ಹೊಲವನ್ನು ತಿರಿಗಿ ಪಡೆಯುವ ಅಪೇಕ್ಷೆ ಮಾತ್ರವಿದೆ. ಇದರಲ್ಲಿ ಅನ್ಯಾಯವೇ ಇಲ್ಲ. ಕೈಬಿಟ್ಟುಹೋದ ಹೊಲವನ್ನು ಮರಳಿ ಪಡೆಯುವದು ಅನ್ಯಾಯವೆ?"

"ಇದು ಹೇಗೆ ಸಾಧ್ಯವಾದೀತು ಹೇಳು ರಂಗಪ್ಪ! ಹೊಲಗಳನ್ನು ದಾನಮಾಡಿದವರು ವಿಶ್ವೇಶ್ವರಭಟ್ಟರಿಗೆ ಮಾತ್ರ ದಾನ ಮಾಡಿರಲಿಲ್ಲ. ಅವರ ಮನೆತನಕ್ಕೆ 'ದತ್ತಿ' ಕೊಟ್ಟಿರುವರು. ಈ ಪರಂಪರೆಯನ್ನು ಮುಳುಗಿಸುವದು ಸಾಧ್ಯವೇ ?"

"ಹಾಗೆ ಕಾಗದ ಪತ್ರಗಳಿಲ್ಲ ಭಟ್ಟರೆ. ನಿಮ್ಮ ಮಾತು ಕಾಯಿದೆಯಿಂದ ಸಿದ್ಧವಾಗಲಾರದು."

"ಧರ್ಮದತ್ತಿಗಳಿಗೆ ಕಾನೂನಿನ ಬೆಂಬಲ ಬೇಕಿಲ್ಲ ರಂಗಪ್ಪ. ವಿಶ್ವಾಸವೇ ಅದರ ಕಾಯಿದೆ. ನಮ್ಮ ಹಿರಿಯರು ಕಾಗದಪತ್ರ ಮಾಡಿಸಿಲ್ಲವೆಂಬ ಮಾತ್ರಕ್ಕೆ ಇವುಗಳನ್ನು ಮರಳಿ ಪಡೆಯುವದಕ್ಕಾಗುತ್ತದೆಯೆ ?"

"ಧರ್ಮವಂತರ ಪೀಳಿಗೆಯವರು ಈ ಧರ್ಮದತ್ತಿಗಳನ್ನು ಸಾಗಿಸುವುದು ಧರ್ಮದ ಕೆಲಸ ರಂಗಪ್ಪ. ಹಿರಿಯರ ಧಾರ್ಮಿಕ ಭಾವನೆಯನ್ನು ಕತ್ತರಿಸುವದು ಮಹಾಪಾಪ. ಇದು ದೇವರು ಮೆಚ್ಚುವ ವಿಷಯವಲ್ಲ. ಈ ಅನ್ಯಾಯಕ್ಕೆ ಹೋಗಬೇಡಿರಿ. ಪಾಪವನ್ನು ತುಂಬಿಕೊಳ್ಳಬೇಡಿರಿ. ಹಿರಿಯರಿಗೆ ಅವಮಾನ ಮಾಡಬೇಡಿರಿ. ಅವರ ಗೌರವವನ್ನು ಕಾಪಾಡಿರಿ. ತಪ್ಪು ವಿಚಾರದಿಂದ ಅನರ್ಥವಾದೀತು" ಎಂದು ಶಾಸ್ತ್ರಿಗಳು ಹೇಳುವಾಗ ಅವರ ದನಿ ನಡುಗುತ್ತಿತ್ತು.

"ಹಿರಿಯರ ಮಾತು ಹಿರಿಯರೊಡನೆ ಹೋಯಿತು ಭಟ್ಟರೆ! ಈಗ ಕಾಲ ಸಂಪೂರ್ಣ ಬದಲಾಗಿದೆ. ನಮಗೂ ಹಿರಿಯರನ್ನು ಅಗೌರವದಿಂದ ಕಾಣುವ ಇಚ್ಛೆಯಿಲ್ಲ. ಅವರ ಮಾತು ನಮಗೂ ಮಾನ್ಯವಾಗಿಯೇ ಇದೆ. ಆದರೆ ಅವರು ಈ ಹೊಲಗಳನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದರೋ ಆ ಉದ್ದೇಶ ಇಂದು ಮಾಯವಾಗಿದೆ. ವಿಶ್ವೇಶ್ವರಭಟ್ಟರ ಕಾಲದಲ್ಲಿ ಶಿಷ್ಯ ಸಮೂಹವಿದ್ದಿತಂತೆ. ಧಾರ್ಮಿಕ ಕೆಲಸಗಳು ಇಲ್ಲಿ ನಡೆಯುತ್ತಿದ್ದವಂತೆ. ನಿಮ್ಮ ಮನೆಯೊಂದು ಧರ್ಮಛತ್ರದಂತೆ ಇದ್ದಿತಂತೆ. ಈಗ ಅವೆಲ್ಲ ನಡೆಯುತ್ತವೆಯೆ ? ಆ ದತ್ತಿಗಳ ಸಾಫಲ್ಯವೇ ಹೋದಮೇಲೆ ಅವುಗಳನ್ನು ಕಾಪಾಡಿಕೊಂಡು ಹೋಗುವದರಲ್ಲಿ ಯಾವ ಅರ್ಥವಿದೆ ? ಕೇವಲ ನಿಮ್ಮ ಹೊಟ್ಟೆ

ಹೊರೆದುಕೊಳ್ಳಲು ಈ ಹೊಲಗಳನ್ನು ನಿಮಗೆ ಇಡಬೇಕೆಂದು ಹೇಳುವಿರಾ? ಈ ಕೆಲಸ ನಮ್ಮಿಂದ ಆಗದು. ನಿಮ್ಮ ಉಪಜೀವನಕ್ಕೆ ಬೇಕಾದರೆ ತುಸು ಕಾಳುಕಡಿಗಳನ್ನು ಕೊಟ್ಟೇವು. ಆದರೆ ಹೊಲಗಳನ್ನು ಮಾತ್ರ ನಾವು ಮರಳಿ ಪಡೆಯಲೇ ಬೇಕು." ನಾಡಗೌಡನು ಸ್ಪಷ್ಟವಾಗಿ ಹೇಳಿದನು. ಅವನ ಮಾತುಗಳಲ್ಲಿ ನಿರ್ಧಾರವಿತ್ತು.

ನಾಡಗೌಡನ ಮಾತುಗಳೆಲ್ಲ ನೀಲಕಂಠಶಾಸ್ತ್ರಿಗಳಿಗೆ ಸರಿಯಾಗಿ ತೋರಿದರೂ ಈ ಹೊಲಗಳು ಕೈಬಿಟ್ಟ ಮೇಲೆ ಉಪಜೀವನದ ಮಾರ್ಗವೇನು ? ತಮ್ಮ ದೊಡ್ಡ ಸಂಸಾರದ ಪಾಡೇನು ? ಎಂಬ ಭಾವ ಕಾಳ್ಗಿಚ್ಚಿನಂತೆ ಎದೆಯನ್ನು ಸುಡತೊಡಗಿತು. ನಾಡಗೌಡನ ಸತ್ಯವಾದ ಮಾತುಗಳ ಅವಮಾನದ ಶಲ್ಯವು ಅವರ ಸಾತ್ವಿಕ ಹೃದಯವನ್ನು ಚುಚ್ಚತೊಡಗಿತು. ಆ ಗಾಯದ ವೇದನೆ ಅವರ್ಣನೀಯವಾಗಿತ್ತು.

ಈ ಮಾತುಗಳನ್ನು ಕೇಳಿ ನರಹರಿಭಟ್ಟನು ಕಿಡಿಕಿಡಿಯಾದನು. ಮುಳುಗುವ ಮನುಷ್ಯನಿಗೆ ಹುಲ್ಲುಕಡ್ಡಿಯ ಆಸರದಂತೆ ಇದ್ದ ಈ ಹೊಲಗಳು ಕೈಬಿಡುವ ಮಾತು ಅವನಿಗೆ ಅಸಹನೀಯವಾಯಿತು. ಈ ಪಾಪಕಾರ್ಯದಲ್ಲಿ ಮೋಹನರಾಯನ ಕೈವಾಡವೇ ಇರುವದೆಂದು ಅವನಿಗೆ ಖಚಿತವಾಗಿ ಅವನು ಉರಿಯತೊಡಗಿದನು. ಅವನ ನಾಲಿಗೆ ಕುಣಿಯತೊಡಗಿತು. ಅವನು ಅಕ್ಕಿದಿಂದ "ಆ ಮೋಹನರಾಯನ ಕುಚೇಷ್ಟೆಯನ್ನು ನಂಬಿ ಮನಸ್ಸಿಗೆ ಬಂದಂತೆ ಕುಣಿಯುತ್ತಿರುವ ನಿಮಗೆ ನಾನು ಹೊಲಗಳನ್ನು ಒಪ್ಪಿಸುವುದು ಸಾಧ್ಯವಿಲ್ಲ. ವಿಶ್ವೇಶ್ವರಭಟ್ಟರಿಗೆ ಬಂದ ಹೊಲಗಳು ಅವರ ಮಕ್ಕಳ ಆಸ್ತಿ. ಇದನ್ನು ನೀವು ಕಸಿದುಕೊಳ್ಳಲಾರಿರಿ. ಇದು ಶುದ್ಧ ಹುಡುಗಾಟ. ಕಾಗದಪತ್ರವಿಲ್ಲವೆಂಬ ಮಾತ್ರಕ್ಕೆ ಪ್ರಾಮಾಣಿಕತನವೂ ಬೇಡವೆ? ಈ ಹೊಲಗಳನ್ನು ನಿಮಗೆ ಒಪ್ಪಿಸಿ ನಾನು ಹಿರಿಯರ ದ್ರೋಹ ಮಾಡಲಾರೆ. ಧರ್ಮಚ್ಯುತಿಯನ್ನು ನಡೆಯಗೊಡಲಾರೆ. ಈ ಹೊಲಗಳನ್ನು ಕಸಿದುಕೊಳ್ಳುವದು ಧರ್ಮದ್ರೋಹವಾಗಿದೆ" ಎಂದು ನಾಲಿಗೆಯನ್ನು ಸಿಕ್ಕಾಪಟ್ಟೆ ಹರಿಬಿಟ್ಟನು.

"ಧರ್ಮದ್ರೋಹವು ನಮ್ಮದಲ್ಲ ಭಟ್ಟರೆ; ಆ ದ್ರೋಹವು ನಿಮ್ಮದು. ಧರ್ಮವನ್ನು ಬಿಟ್ಟವರು ನೀವು, ನಾವಲ್ಲ. ಧಾರ್ಮಿಕ ಕಾರ್ಯಗಳಿಗೆ ಮೀಸಲಾದ ಹೊಲಗಳನ್ನು ಉಪಜೀವನಕ್ಕೆ ಉಪಯೋಗಿಸಿಕೊಳ್ಳುವದು ಅಧರ್ಮ. ಧರ್ಮಚ್ಯುತರಾದ ನಿಮಗೆ ಈ ಹೊಲಗಳನ್ನು ಉಳಿಸಿಕೊಳ್ಳುವ ಅಧಿಕಾರವೇ ಇಲ್ಲ." ನಾಡಗೌಡನು ಇನ್ನೂ ಸ್ಪಷ್ಟವಾಗಿ ಹೇಳಿದನು.

"ಈ ಮಾತುಗಳೆಲ್ಲ ನಿಮಗೆ ಆ ಮೋಹನರಾಯನೇ ಕಲಿಸಿಕೊಟ್ಟರೆ

ಬೇಕು. ಇಲ್ಲಿ ಗಿಳಿಪಾಠ ಒಪ್ಪಿಸಲು ಬಂದಿದ್ದೀರಿ." ನರಹರಿಭಟ್ಟನು ಮತ್ತೆ ಗುಡುಗಿದನು.

"ನೀವು ಸುಮ್ಮನೆ ಇದರಲ್ಲಿ ಮೋಹನರಾಯರನ್ನು ಎಳೆದು ತರುತ್ತೀರಿ! ಅವರು ನಮಗೆ ಸಲಹೆಗಳನ್ನು ಕೊಟ್ಟ ಮಾತ್ರಕ್ಕೆ ಅಪರಾಧ ಮಾಡಿದಂತೆ ಆಗಲಿಲ್ಲ."

"ಆ ಮುಟ್ಠಾಳನ ಸಲಹೆಯನ್ನು ನಾನು ನಡೆಯಗೊಡಲಾರೆ."

"ಇದು ನಿಮ್ಮ ಕೈಯಲ್ಲಿಲ್ಲ ಭಟ್ಟರೆ. ಬಹಳವಾದರೆ ಈಗಿನ ಪೈರನ್ನು ನೀವು ಉಣ್ಣಬಹುದು. ಮುಂದಿನ ವರುಷದಿಂದ ಆ ಹೊಲಗಳನ್ನು ಖಂಡಿತ ವಾಗಿ ವಶಪಡಿಸಿಕೊಳ್ಳಲಾಗುವದು. ಈ ಮಾತನ್ನು ನಿಮ್ಮ ಕಿವಿಯ ಮೇಲಿ ಡಲು ಮಾತ್ರ ಬಂದಿದ್ದೇವೆ. ಈಗ ಹೇಳಬೇಕಾದುದನ್ನು ಹೇಳಿ ಆಯಿತು. ನಮಗಿನ್ನು ಕೆಲಸವಿಲ್ಲ" ಎನ್ನುತ್ತ ಇಬ್ಬರೂ ದಿಗ್ಗನೇ ಎದ್ದು ನಡೆದರು.

"ಸ್ವಲ್ಪ ತಡೆಯುವಿರಾ ನಾಡಗೌಡರೆ!" ಎಂಬ ನೀಲಕಂಠಶಾಸ್ತ್ರಿಗಳ ದನಿಯನ್ನು ಕೇಳಿ ಅವರಿಬ್ಬರೂ ತಟ್ಟನೆ ನಿಂತರು. "ನಾನು ನಿಮ್ಮ ಕಲ್ಯಾಣ ಕ್ಕಾಗಿ ಈ ಮಾತುಗಳನ್ನು ಕೇಳುತ್ತೇನೆ. ಕೊಟ್ಟ ಅನ್ನವನ್ನು ಕಸಿದುಕೊಳ್ಳು ವುದು ನಿಮ್ಮ ವಂಶಾಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯದಲ್ಲ ಮಹಾರಾಯರೆ? ನಿಮ್ಮ ಹಿರಿಯರು ಕೊಟ್ಟ ಈ 'ಹರಿಯದ ಹಚ್ಚಡ'ವನ್ನು ನೀವು ಹರಿಯ ಬೇಡಿರಿ. ಇದರಿಂದ ನಿಮಗೆ ಸುಖವಾಗುವದಿಲ್ಲ. ನಾವಂತೂ ಉಪವಾಸ ಸಾಯಬೇಕಾಗುವದು. ಬ್ರಾಹ್ಮಣರನ್ನು ಮರುಗಿಸುವದು ಧರ್ಮವಲ್ಲ. ಅದು ಮಹಾ ಪಾಪ! ಇನ್ನೊಮ್ಮೆ ವಿಚಾರ ಮಾಡುವಿರಾ?"

"ಪೂರ್ಣ ವಿಚಾರ ಮಾಡಿಯೇ ನಾವು ಈ ನಿರ್ಣಯಕ್ಕೆ ಬಂದಿರುವಾಗ ಮತ್ತೆ ಮತ್ತೆ ವಿಚಾರ ಮಾಡುವ ಅಗತ್ಯವೇ ಇಲ್ಲ. ನೀವು ಅನ್ನುವಂತೆ ಇದ ರಿಂದ ಪಾಪ ಬರುವದಾದರೆ ಅದನ್ನು ಕಟ್ಟಿಕೊಳ್ಳಲು ನಾವು ಸಿದ್ಧರಾಗಿಯೇ ಇರುವೆವು." ಖಂಡತುಂಡವಾಗಿ ನಾಡಗೌಡರು ಹೇಳಿದರು.

ನೀಲಕಂಠಶಾಸ್ತ್ರಿಗಳ ತುಟಿ ನಡುಗತೊಡಗಿದವು. ಎದುರಿಗೆ ನಿಂತ ಆ ವ್ಯಕ್ತಿಗಳು ಅವರಿಗೆ ಯಮದೂತರಂತೆ ಕಾಣತೊಡಗಿದರು. ಅಷ್ಟು ಕರಾಳ ವಾದ ಮೂರ್ತಿಗಳನ್ನು ಅವರು ಈ ಮೊದಲು ಕಂಡಿರಲಿಲ್ಲ. ಅವರಿಗೆ ಅವರ ಮಾತುಗಳು ಅಸಹ್ಯವಾಗಿ ಕಂಡುಬಂದವು. ಆ ಹೊಲಗಳ ಬಗ್ಗೆ ಆಗಲೇ ಅವರಲ್ಲಿ ತೀಕ್ಷ್ಣ ತಿರಸ್ಕಾರವು ಉದಯಿಸಿತು. ಅವರು ನಿರ್ಧಾರದಿಂದ,

"ನಿಮ್ಮ ಮಾತು ನಡೆದುಹೋಗಲಿ. ನಮಗೆ ಆ ಹೊಲಗಳ ಮೇಲಿ ಇಂದಿನಿಂದಲೇ ಸ್ವಾಮಿತ್ವ ಅಳಿದಂತಾಯಿತು. ಈ ಸಲದ ಪೈರು ಕೂಡಾ

ನಿಮ್ಮದು. ಪಾಪದ ಪೈರನ್ನು ನಾವು ಉಣ್ಣಲಾರೆವು" ಎಂದುಬಿಟ್ಟರು.

"ನಾವು ಅದಕ್ಕೂ ಸಿದ್ಧರಾಗಿದ್ದೇವೆ" ಎನ್ನುತ್ತ ಇಬ್ಬರೂ ಬಿರಬಿರನೇ ನಡೆದುಬಿಟ್ಟರು.

ಅವರು ಹೋಗಿ ಬಹಳ ಹೊತ್ತಾದರೂ ಶಾಸ್ತ್ರಿಗಳು ಕುಳಿತಲ್ಲಿಯೇ ಕುಳಿತುಬಿಟ್ಟದ್ದರು. ಅಕಸ್ಮಾತ್ತಾಗಿ ಬಂದ ದುರ್ದೆಸೆಯು ಅವರನ್ನು ದಿಙ್ಮೂಢರನ್ನಾಗಿ ಮಾಡಿತು. ಬಹಳದಿನಗಳ ಹಿಂದೆ ಆರುಯಾತದ ಕಮಾನಿನ ಭವ್ಯವಾದ ಮಂಟಪದಲ್ಲಿ ಗಂಗಪ್ಪ ದೇಸಾಯರೂ, ಹಿರಿಯ ನಾಡಗೌಡರೂ ವಿಶ್ವಾಸಪೂರ್ವಕವಾಗಿ ವಿಶ್ವೇಶ್ವರಭಟ್ಟರಿಗೆ ಈ ಹೊಲಗಳನ್ನು ದಾನವಾಗಿ ಕೊಟ್ಟ ಪುಣ್ಯದ ಸಂದರ್ಭವು ಅವರ ಕಣ್ಣುಮುಂದೆ ಸುಳಿಯಿತು. ಆ ಪುಣ್ಯವಂತರೆಲ್ಲಿ? ಅವರ ಪುಣ್ಯವನ್ನು ಕಾಲಬುಡಕ್ಕೆ ಹಾಕಿ ತುಳಿದ ಅವರ ಮಕ್ಕಳೆಲ್ಲಿ? ಅವರಿಗೆ ಎಲ್ಲವೂ ವಿಚಿತ್ರವೆನ್ನಿಸತೊಡಗಿತು. ಗಂಗನಹಳ್ಳಿಯ ಋಣವು ಇಷ್ಟು ಬೇಗನೇ ಇಷ್ಟು ಅನಿರೀಕ್ಷಿತವಾಗಿ ತೀರಿಹೋಗಬಹುದೆಂದು ಅವರಿಗೆ ಅನ್ನಿಸಿರಲಿಲ್ಲ. ಇನ್ನು ಈ ಹಳ್ಳಿಯಲ್ಲಿ ಬಾಳುವದೆಂತು? ಆದರೆ ಬಾಳಬೇಕು. ವಿಶ್ವೇಶ್ವರಭಟ್ಟರು ನೆಲೆಯಾಗಿ ನಿಂತ ಪುಣ್ಯ ಸ್ಥಳದಲ್ಲಿ ಮುಂದೆಯೂ ಬಾಳಬೇಕು. ಹೇಗೆ ಬಾಳಬೇಕು? ಈ ಭಾರವಾದ ಹೊರೆಯನ್ನು ಹೇಗೆ ನಿರ್ವಹಿಸಬೇಕು ?

ನರಹರಿಭಟ್ಟರನ್ನು ಕೂಡಾ ಈ ಮಾತುಗಳೇ ಕಾಡುತ್ತಿದ್ದವೇನೋ? ಅವರೂ ತಲೆಯ ಮೇಲೆ ಕೈ ಹೊತ್ತುಕೊಂಡು ಸ್ವಸ್ಥವಾಗಿ ಕುಳಿತುಬಿಟ್ಟದ್ದರು. ಈ ಸಂಸಾರದ ಹೊರೆಯೊಂದಿಗೆ ಅವರಿಗೆ ಆ ಕ್ಷಣ ಅಸಾಧ್ಯವಾದ ಸಾಲದ ಭಯವೂ ಮೂಡತೊಡಗಿತು. ಈ ಸಾಲವನ್ನು ಹೇಗೆ ತೀರಿಸಬೇಕು? ಈ ಮಕ್ಕಳ ಹಿಂಡನ್ನು ಹೇಗೆ ಪೋಷಿಸಬೇಕು ? ಈ ದಾರಿದ್ರ್ಯಜೀವನದಿಂದ ಹೇಗೆ ಪಾರಾಗಬೇಕು ?

"ನರಹರೀ !"

"ಹಾ! ಅಣ್ಣ !"

"ಭಾರವಾದ ಈ ಸಂಸಾರರಥವನ್ನು ಕೇವಲ ವೈದಿಕ ವೃತ್ತಿಯಿಂದ ಹೇಗೆ ಸಂಬಾಳಿಸುವಿ ತಮ್ಮ !"

"ವಿಶೂಕಾಕಾನ ಪುಣ್ಯವಿದ್ದಂತೆ ಆಗಲಿ ಅಣ್ಣ !"

"ಆ ಪುಣ್ಯದ ಪ್ರತ್ಯಕ್ಷ ಪ್ರಮಾಣವನ್ನು ಕಂಡ ಹಾಗೆ ಆಯಿತಲ್ಲ ತಮ್ಮ! ಅವರ ಪುಣ್ಯ ಅವರೊಡನೆ ಹೋಗಿಬಿಟ್ಟಿತು."

"ಹೇಗಾದರೂ ಬಾಳಬೇಕಷ್ಟೆ ಅಣ್ಣ !

“ಹೇಗೆ ಬಾಳಬೇಕು ? ಯಾವ ಆಧಾರದಿಂದ? ಈ ದಾರಿದ್ರ್ಯಜೀವನವನ್ನು ಹೊತ್ತುಕೊಂಡು ಭಿಕಾರಿಗಳಂತೆ ತಿರುಗಬೇಕು! ಗಂಗನಹಳ್ಳಿಯನ್ನು ಆಳಿದವನ ಮಕ್ಕಳು ಬೈರಾಗಿಯಂತೆ ತಿರುಗಬೇಕು, ಅಲ್ಲವೆ?”

ಈ ಮಾತುಗಳು ಶಾಸ್ತ್ರಿಗಳ ಸಂಕಟದ ಪ್ರತೀಕಗಳಾಗಿದ್ದವು. ಅನಿಷ್ಟ ಭವಿಷ್ಯದ ಭಯವೇ ಅವುಗಳಲ್ಲಿ ಅಡಗಿತ್ತು. ಶಾಸ್ತ್ರಿಗಳ ಮಾತಿಗೆ ನರಹರಿ ಭಟ್ಟನಾದರೂ ಏನು ಉತ್ತರಿಸಬೇಕು? ಅವನೆಂದೂ ಬಾಗಿ ನಡೆದವನಲ್ಲ. ಈಗ ಪರಿಸ್ಥಿತಿ ಯಾವ ಮಾರ್ಗದಲ್ಲಿ ಸುತ್ತುವದೋ ಎಂಬ ಭಯ ಅವನನ್ನೂ ಆವರಿಸಿತು. ಮೊದಲ ಬಾರಿಗೆ ಅವನ ಕಣ್ಣುಗಳಲ್ಲಿ ನೀರು ಬಂದವು. ಆ ಕಣ್ಣೀರ ಹನಿಗಳು ಅವನ ಅಸಹಾಯಕತೆಯ ಅವಲಕ್ಷಣದ ಹನಿಗಳಾಗಿ ಉರುಳತೊಡಗಿದವು.

ಶಾಸ್ತ್ರಿಗಳು ತಮ್ಮನ ಕಣ್ಣೀರನ್ನು ಕಂಡರು. ಅವರ ದುಃಖ ಒತ್ತರಿಸಿ ಬಂದಿತು. ಜೀವಮಾನದಲ್ಲಿ ನರಹರಿಯು ದುಃಖಪಟ್ಟಿದ್ದನ್ನು ಅವರು ಕಂಡಿರಲಿಲ್ಲ. ಈಗ ಧಾರಾಳವಾಗಿ ಹರಿಯುತ್ತಿದ್ದ ಆ ಹನಿಗಳನ್ನು ಕಂಡಾಗ ಅವರಿಗೆ ಕಸಿವಿಸಿಯಾಯಿತು. ಅವರು ತಮ್ಮನನ್ನು ತಬ್ಬಿಕೊಂಡು ಹೇಳಿದರು :

“ವಿಶ್ವೇಶ್ವರಭಟ್ಟರ ‘ಹಬ್ಬಿದ ಬಳ್ಳಿ’ ಎಂದಿಗೂ ಕಮರಲಾರದು ತಮ್ಮ! ಅದು ವಿಸ್ತಾರವಾಗಿ ಹಬ್ಬುವದು. ಹಬ್ಬಿದ ಬಳ್ಳಿಗೆ ಹಂದರವಾಗುವ ಆಶ್ರಯ ನಮಗೆ ಸಿಕ್ಕೇ ತೀರುವದು” ಎನ್ನುತ್ತ ತಮ್ಮನ ಬೆನ್ನಮೇಲೆ ಕೈಯಾಡಿಸ ತೊಡಗಿದರು.

ಅಣ್ಣನ ತೋಳತೆಕ್ಕೆಯಲ್ಲಿ ಕಣ್ಣೀರು ಹರಿಯಿಸುತ್ತ ನರಹರಿಭಟ್ಟರು ಅದೆಷ್ಟೋ ವೇಳೆ ಮೌನವಾಗಿ ಕಳೆದರು. ಆಗಾಗ ನಿಟ್ಟುಸಿರು ಮಾತ್ರ ಸೂಸುತ್ತಿತ್ತು.

ಬಹಳ ದಿನಗಳ ಹಿಂದೆ ತಾಯಿ ಧರ್ಮಪತ್ನಿ ಮರಣಹೊಂದಿದಾಗ ನೀಲಕಂಠಶಾಸ್ತ್ರಿಗಳು ಇದೇ ರೀತಿ ನರಹರಿಯನ್ನು ತೋಳತೆಕ್ಕೆಯಲ್ಲಿ ಹಿಡಿದಿದ್ದ ನೆನಪಾಯಿತವರಿಗೆ. ನರಹರಿ ಆ ದಿನವೂ ಕಣ್ಣೀರು ಹರಿಸಿದ್ದನು. ಆದರೆ ಅಂದು ಸುರಿಸಿದ ಕಣ್ಣೀರ ಹನಿಗಳಿಗೂ ಇಂದು ಸುರಿಸುತ್ತಿರುವ ಕಣ್ಣೀರ ಹನಿಗಳಿಗೂ ಅದೆಂತಹ ವ್ಯತ್ಯಾಸ!

೮

ಗಂಗನಹಳ್ಳಿಯ ಸಾರ್ವಜನಿಕ ಜೀವನವು ನಷ್ಟವಾಗಿಬಿಟ್ಟದ್ದರಿಂದ ಈಗ

ಆ ಹಳ್ಳಿಯಲ್ಲಿ ಯಾರೂ ಯಾರನ್ನೂ ಕೇಳುವಂತಿರಲಿಲ್ಲ. ಹಳ್ಳಿಯ ವಾತಾವರಣವು ತೀರಾ ಹದಗೆಟ್ಟುಹೋದದ್ದರಿಂದ ಯಾರ ಸಹಾಯವು ಯಾರಿಗೂ ದೊರೆಯುತ್ತಿರಲಿಲ್ಲ. ಒಂದು ಕಾಲಕ್ಕೆ ಏಕಸೂತ್ರತೆಯ ಬಿಗುವಿನಲ್ಲಿ ಸಿರ್ಥಾರದ ಪ್ರಗತಿಯನ್ನು ಹೊಂದಿದ್ದ ಹಳ್ಳಿ ಈಗ ಆ ಒಗ್ಗಟ್ಟನ್ನು ಕಳೆದುಕೊಂಡು ಶಿಥಿಲವಾಗಿಬಿಟ್ಟಿತ್ತು. ಜನರೆಲ್ಲ ಸ್ವಾರ್ಥಪರಾಯಣರಾಗಿ ಜೀವನದ ಆದರ್ಶಗಳನ್ನು ಕೂಡಾ ಮರೆತುಬಿಟ್ಟಿದ್ದರು. ಸ್ವಾಭಿಮಾನಶೂನ್ಯರಾಗಿ ಹೀನವಾದ ಬಾಳನ್ನು ಸಾಗಿಸತೊಡಗಿದ್ದರು. ಇಂತಹ ಜನರು ತನಗೆ ಸಹಾಯ ಮಾಡಬಹುದೆ ? ಎಂದು ನರಹರಿಭಟ್ಟರು ಯೋಚಿಸಿದಾಗ ಅದು ಸಾಧ್ಯವಿಲ್ಲವೆಂಬ ಮಾತು ಅವರಿಗೆ ಸೂರ್ಯಪ್ರಕಾಶದಂತೆ ಸ್ಪಷ್ಟವಾಗಿಬಿಟ್ಟಿತು. ಯಾರನ್ನು ಮೊರೆ ಹೋಗಬೇಕು ? ಯಾರು ತಮಗೆ ಸಹಾಯಮಾಡಿ ಉಳಿಸಬಹುದು? ಎಂದು ಯೋಚಿಸಿ ನರಹರಿಭಟ್ಟರನ್ನು ತೀರಾ ಹತಾಶರನ್ನಾಗಿ ಮಾಡಿತು.

ಗಂಗನಹಳ್ಳಿಯ ವಾತಾವರಣವು ದಿನಗಳೆದಂತೆ ವಿರಾಟಸ್ವರೂಪವನ್ನು ತಳೆಯತೊಡಗಿ ದ್ವೇಷಭಾವನೆಯನ್ನು ತುಂಬಿಕೊಂಡು ಹುಚ್ಚೆದ್ದು ಹರಿಯತೊಡಗಿತು. ಮೋಹನರಾಯರ ಮತ್ಸರ ಬುದ್ಧಿಯು ಉಗ್ರಸ್ವರೂಪ ತಾಳತೊಡಗಿದಂತೆ ಬಸಪ್ಪಶೆಟ್ಟಿಯ ಪ್ರತೀಕಾರ ಭಾವನೆಯು ಕಳಕಳಿಸಿ ನಿಲ್ಲತೊಡಗಿತು. ಈ ದ್ವೇಷಭಾವನೆಯು ಸೇಡಿನಲ್ಲಿ ಪರ್ಯವಸಾನವಾಗಿ ಊರಿನಲ್ಲಿ ಚಿಕ್ಕಪುಟ್ಟ ವ್ಯಾಜ್ಯಗಳು ತಲೆಯೆತ್ತತೊಡಗಿದವು. ಈ ವ್ಯಾಜ್ಯಗಳಿಗೆ ಪುಟ ಸಿಗುವಂತೆ ಬಣಗಳಾಗಿ ಒಂದು ಬಣದವರು ಇನ್ನೊಂದು ಬಣದವರ ಮೇಲೆ ಕತ್ತಿಮಸೆಯಹತ್ತಿದರು. ಚಿಕ್ಕ ಮಾತು ದೊಡ್ಡದಾಗಿ ದೊಡ್ಡ ಮಾತು ಬಡಿದಾಟಕ್ಕಿಳಿಯತೊಡಗಿತು. ಈ ಬಡಿದಾಟ ಹೊಡೆದಾಟಗಳು ಗಂಗನಹಳ್ಳಿಯ ದಿನದ ಮಾತಾಗತೊಡಗಿದವು.

ವಿಶ್ವೇಶ್ವರಭಟ್ಟರ ಕಾಲದಲ್ಲಿಯೂ ಇಂತಹ ಚಿಕ್ಕಪುಟ್ಟ ವ್ಯಾಜ್ಯಗಳು ಏಳುತ್ತಿರಲಿಲ್ಲವೆಂದಲ್ಲ. ಆಗಲೂ ವ್ಯಾಜ್ಯಗಳೇಳುತ್ತಿದ್ದವು. ಆದರೆ ಸಮರ್ಥವಾದ ಮಧ್ಯಸ್ಥಿಕೆಯಿಂದ ಅವು ಅಲ್ಲಿಯೇ ಕರಗಿಹೋಗುತ್ತಿದ್ದವು. ವ್ಯಾಜ್ಯಕ್ಕೆ ನಿಂತ ಇಬ್ಬರೂ ಸಮಾಧಾನ ಹೊಂದಿ ಗೆಳೆಯರಾಗಿಬಿಡುತ್ತಿದ್ದರು. ಆದರೆ ಗಂಗನಹಳ್ಳಿಯಲ್ಲಿ ಇಂದು ಅಂತಹ ಮಾರ್ಗದರ್ಶಕರಿಲ್ಲ. ಹಿರಿಯತನವನ್ನು ಪಾಲಿಸುವ ಮನೋಧರ್ಮವೂ ಈಗ ಮಾಯವಾಗಿಬಿಟ್ಟಿತ್ತು. ಗಂಗನಹಳ್ಳಿಯಲ್ಲಿ ಹಿರಿಯರೇ ಇಲ್ಲವಾಗಿದ್ದರು. ವ್ಯಾಜ್ಯಗಳನ್ನು ಅಲ್ಲಿಯೇ ಚಿವುಟಿಬಿಡುವುದನ್ನು ಬಿಟ್ಟು ಅವು ಸರ್ವವ್ಯಾಪಕವಾಗುವ ದುಷ್ಟ ಚೇತನಗಳು ಹಿರಿಯತನವನ್ನು ಮಾಡತೊಡಗಿದವು. ಹೀಗಾಗಿ ಹಳ್ಳಿಯ ಜನರು ಸಣ್ಣ ಮಾತಿಗಾಗಿ

ಕಚೇರಿಯ ಕಟ್ಟೆಯನ್ನೇರಿ ಅಪಾರವಾದ ಹಣವನ್ನು ಹಾಳುಮಾಡತೊಡಗಿದರು. ಹಳ್ಳಿಯ ರೈತರ ದುಡ್ಡು ಪಟ್ಟಣದ ವಕೀಲರ ಕೈಸೇರತೊಡಗಿತು. ಹಳ್ಳಿಯ ಒಂದು ಮನೆಯುರುಳಿ ಪಟ್ಟಣದಲ್ಲಿ ಪ್ರಾಸಾದಗಳೇಳತೊಡಗಿದವು. ಹಳ್ಳಿ ಹಾಳಾಗತೊಡಗಿತು. ಜನರಲ್ಲಿ ಅನೇಕರು ಸಾಲದ ಹೊರೆಯನ್ನು ಹೊತ್ತುಕೊಂಡು ನಿರ್ವೀರ್ಯರಾಗತೊಡಗಿದರು. ಸೇಡಿಗೆ ಸೇಡು, ಮತ್ಸರಕ್ಕೆ ಮತ್ಸರ, ದ್ವೇಷಕ್ಕೆ ದ್ವೇಷ ಔಷಧವಾಗತೊಡಗಿತು. ದ್ವೇಷಬುದ್ಧಿ ಗಂಗನ ಹಳ್ಳಿಯ ಜೀವನವಾಗಿಬಿಟ್ಟಿತು. ದ್ವೇಷಬುದ್ಧಿಗೆ ಕೊನೆಯೆಲ್ಲಿ?

ಹಳ್ಳಿಯ ಸಾಮಾನ್ಯ ಜೀವನವೇ ಹೀಗೆ ಹುಚ್ಚುಹೊಳೆಯಾಗಿ ಹರಿಯುತ್ತಿರುವಾಗ ಊರ ಮುಂದಾಳುಗಳೆಂದು ಮೆರೆಯುತ್ತಲಿದ್ದ ಬಸಪ್ಪ ಶೆಟ್ಟರೂ, ಮೋಹನರಾಯರೂ ಈ ಮಾತಿಗೆ ಹೊರತಾದಾರೇ? ಹಾಗೆ ನೋಡಿದರೆ ಅವರೇ ಇದಕ್ಕೆ ಮೂಲವಾಗಿದ್ದರು. ಬಣಗಳನ್ನು ಕಟ್ಟಿ ದ್ವೇಷ ಭಾವನೆಯನ್ನು ತುಂಬುತ್ತಿರುವವರೇ ಅವರು. ಅವರ ವೈಯಕ್ತಿಕ ಹುಚ್ಚಾಟಗಳೇನು ಕಡಿಮೆಯಾಗಿರಲಿಲ್ಲ. ಬಸಪ್ಪಶೆಟ್ಟಿಯ ಸೊಂಟ ಮುರಿಯಬೇಕೆಂದು ಮೋಹನರಾಯರೂ, ಮೋಹನರಾಯರನ್ನು ನಿರ್ನಾಮಮಾಡಬೇಕೆಂದು ಬಸಪ್ಪಶೆಟ್ಟರೂ 'ಕಾದಾಟದ ಹುಂಜ'ಗಳಂತೆ ಕಾಲು ಕೆದರತೊಡಗಿದರು.

ಅಂದು ಮೋಹನರಾಯರ ಬಣಿವೆ ಸುಟ್ಟ ಎಂಟು ದಿನಗಳಲ್ಲಿಯೇ ಬಸಪ್ಪಶೆಟ್ಟಿಯ ಎರಡು ಹೋರಿಗಳು ಮಾಯವಾಗಿಬಿಟ್ಟವು. ಹೋರಿಗಳನ್ನು ಕಳೆದುಕೊಂಡ ಶೆಟ್ಟಿ ಸುಮ್ಮನಿದ್ದಾನೆಯೆ? ಮುಂದೆ ಒಂದು ತಿಂಗಳಲ್ಲಿಯೇ ಮೋಹನರಾಯರ ಪೈರು ನಾಶವಾಗಿಬಿಟ್ಟಿತು. ಬಸಪ್ಪಶೆಟ್ಟಿಯ ಮನೆಗೆಬೆಂಕಿ ಹತ್ತಿದುದು ಇದರ ಫಲವಾಗಿಯೇ. ಇಬ್ಬರೂ ವ್ಯಾಜ್ಯ ಹೂಡಿದರು. ಇಬ್ಬರೂ ಕಚೇರಿಯನ್ನೇರಿದರು. ಈ ಮಧ್ಯದಲ್ಲಿ ಒಂದು ಘನಘೋರ ಬಡಿದಾಟವಾಗಿ ಇಬ್ಬಣಗಳ ಜನರ ತಲೆ ಒಡೆದುಹೋದವು. ಮತ್ತೆ ಇಬ್ಬರೂ ಕಚೇರಿಯನ್ನು ಅವಲಂಬಿಸಿದರು. ಹೀಗೆ ಒಂದಿಲ್ಲೊಂದು ಕಾರಣದಿಂದ ಇಬ್ಬರೂ ಕಚೇರಿಗಳಿಗೆ ಎಡತಾಕತೊಡಗಿದರು. ಹಣವನ್ನು ಸೂರೆ ಮಾಡಿ ಒಂದೊಂದಾಗಿ ಹೊಲಗಳನ್ನು ಕಳೆದುಕೊಳ್ಳಹತ್ತಿದರು. ಆದರೂ ಅವರ ಬಡಿದಾಟ ನಿಲ್ಲದಾಯಿತು. ಹಳ್ಳಿಯೊಂದು ಕಾಳಗದ ಕಣವಾಗತೊಡಗಿತು. ಹಳ್ಳಿಯ ನೆಮ್ಮದಿ ಹೇಳಹೆಸರಿಲ್ಲದೆ ಮಾಯವಾಯಿತು.

ಇಂತಹ ಹದಗೆಟ್ಟ ವಾತಾವರಣದಲ್ಲಿ ನರಹರಿಭಟ್ಟರನ್ನು ಯಾರು ಕೇಳಬೇಕು? ಅವರ ಆರ್ಥಿಕ ಪರಿಸ್ಥಿತಿಯ ದುರಂತವನ್ನು ಯಾರು ವಿಚಾರಿಸಬೇಕು?

ಕೈಯಲ್ಲಿ ಹಣವಿರುವಾಗ ನರಹರಿಭಟ್ಟರಿಗೆ ಬೇಕುಬೇಕಾದವರೆಲ್ಲಾ ಸಾಲ ಕೊಟ್ಟಿದ್ದರು. ನರಹರಿಭಟ್ಟರೂ ಬೇಕುಬೇಕಾದಂತೆ ಅದನ್ನು ಪಡೆದು ಕೊಂಡಿದ್ದರು. ಈಗ ಹಣ ಕೊಟ್ಟವರೇ ದರಿದ್ರರಾಗತೊಡಗಿದಂತೆ ಅವರೂ ಹಣವನ್ನು ಕೇಳದೆ ಬಿಟ್ಟಾರೆಯೇ ?

ಹೀಗೆ ಎಲ್ಲರಿಗೂ ಕೊಡಬೇಕಾದ ಹಣವು ಎರಡು ಸಾವಿರಕ್ಕೂ ಮಿಕ್ಕಿ ಆಗುವುದೆಂದು ತಿಳಿದ ನರಹರಿಭಟ್ಟನ ಸಂಕಟವು ಬಣ್ಣಿಸಲಸದಳವಾಗಿ ಬಿಟ್ಟಿತು. ಎಲ್ಲರೂ ಹಣಕ್ಕಾಗಿ ಒತ್ತಾಯ ಮಾಡತೊಡಗಿದರು. ಬಸಪ್ಪಶೆಟ್ಟಿ ನರಹರಿಭಟ್ಟರು ಉಪಯೋಗಬೀಳುವ ಮನುಷ್ಯರೆಂದು ಕೆಲವು ದಿನ ಸುಮ್ಮ ನಿದ್ದರು. ಅವರು ತನ್ನ ಪಕ್ಷವನ್ನು ಬಿಡಬಾರದೆಂಬ ಸ್ವಾರ್ಥ ಅದರಲ್ಲಿತ್ತು. ಆದರೆ ದಿನಗಳೆದಂತೆ ಅವನಿಗೆ ಹಣದ ಅಡಚಣೆಯಾಗತೊಡಗಲು ಅವನು ಅವರನ್ನು ಒಂದೇ ಸಮನೆ ಕಾಡತೊಡಗಿದನು. ಮನೆಗೆ ದಿನಾಲು ಆಳನ್ನು ಕಳಿಸತೊಡಗಿದನು. ಒಂದು ವಾರದಲ್ಲಿ ಕೊಡದಿದ್ದರೆ ಮರ್ಯಾದೆ ಕಳೆದು ಬಿಡುವೆನೆಂಬ ಹೆದರಿಕೆಯನ್ನೂ ಹಾಕತೊಡಗಿದನು. ಉಳಿದವರು ಕೂಡ ಭಟ್ಟರನ್ನು ಹರಿಯತೊಡಗಿದರು. ಇದರಿಂದಲಂತೂ ಭಟ್ಟರ ಪರಿಸ್ಥಿತಿ ತೀರಾ ಶೋಚನೀಯವಾಗತೊಡಗಿತು. ಇಷ್ಟು ಹಣವನ್ನು ಎಲ್ಲಿಂದ ತರ ಬೇಕು ? ನನಗೆ ಯಾರು ಇಷ್ಟು ಹಣವನ್ನು ಕೊಡಬಹುದು ? ಹಣ ಸಿಗದಿದ್ದರೆ ಮುಂದೆ ಮರ್ಯಾದೆಯಿಂದ ಹೇಗೆ ಬಾಳಲು ಸಾಧ್ಯ ? ಈ ವಿಚಾರಗಳಿಂದ ನರಹರಿಭಟ್ಟರಿಗೆ ಹುಚ್ಚೇ ಹಿಡಿದಂತಾಯಿತು.

ಈ ಮಾತುಗಳನ್ನು ನೀಲಕಂಠಶಾಸ್ತ್ರಿಗಳಿಗೆ ಹೇಳಿ ಪ್ರಯೋಜನವಿಲ್ಲ ವೆಂಬುದು ನರಹರಿಭಟ್ಟರಿಗೆ ಗೊತ್ತು. ಈ ವ್ಯವಹಾರ ಪ್ರಪಂಚದಲ್ಲಿ ಅವರು ಹೊಸಬರು. ಇದೆಲ್ಲ ಗಂಡಾಂತರವನ್ನು ಕೇಳಿ ಅವರು ಪ್ರಾಣವನ್ನೇ ಬಿಟ್ಟಾರು ! ಹಾಗಾದರೆ ಇದನ್ನು ಯಾರ ಮುಂದೆ ಹೇಳಬೇಕು ?

ನರಹರಿಭಟ್ಟನಿಗೆ ಏನೂ ತೋಚದಾಯಿತು. ಇದರ ಜೊತೆಗೆ ಪ್ರಪಂ ಚದ ದೈನಂದಿನ ವೆಚ್ಚವೂ ಅವನ ಎದುರು ಧುತ್ತೆಂದು ನಿಲ್ಲಹತ್ತಿತು. ಕೆಲವು ದಿನಗಳಲ್ಲಿಯೇ ತನ್ನ ಕುಟುಂಬವು ಉಪವಾಸಮಾರಿಯನ್ನು ಎದುರಿಸ ಬೇಕಾದ ಪ್ರಸಂಗ ಬರಬಹುದೆಂದು ಅವನಿಗೆ ನಿಶ್ಚಿತವಾಗಿ ಅನ್ನಿಸಿದಾಗ ನರಹರಿಭಟ್ಟನು ಹೌಹಾರಿದನು.

ಅವನ ಕಣ್ಣಮುಂದೆ ಮಕ್ಕಳುಮರಿಗಳ ಚಿತ್ರವು ಮೂಡಿ ಬರತೊಡ ಗಿತು. ಅವರ ಹಸಿದ ಹೊಟ್ಟೆಗೆ ಮುಂದೆ ಗತಿಯೇನು ? ಜೀವನಾಧಾರವಾದ ಹೊಲಗಳು ಕೈಬಿಟ್ಟವು. ಜನರ ಸಹಾಯವೂ ನಿಂತಿತು. ವೈದಿಕವೃತ್ತಿ

ಏತಕ್ಕೂ ಬಾರದಾಯಿತು.

'ವಿಶ್ವೇಶ್ವರಭಟ್ಟ'ರ ಮಕ್ಕಳು, ಮೊಮ್ಮಕ್ಕಳು ಗಂಗನಹಳ್ಳಿಯ ಬೀದಿಗಳಲ್ಲಿ ಭಿಕಾರಿಗಳಾಗಿ ತಿರುಗುವ ಹೊತ್ತು ಬಂದಿತೆ? ಈ ಹಳ್ಳಿಯಲ್ಲಿ ರಾಜನಂತೆ ಮೆರೆದ ಆ ಪುಣ್ಯಪುರುಷನ ವಂಶದ ಗತಿ ಹೀಗಾಗಬೇಕೆ? ಎಂದು ನರಹರಿಭಟ್ಟರು ಮಮ್ಮಲ ಮರುಗತೊಡಗಿದರು.

ಜೀವಮಾನದಲ್ಲಿ ಎಂದಿಗೂ ಇಂತಹ ಆಪತ್ತಿಗೆ ಒಳಗಾಗದ ನರಹರಿಭಟ್ಟರ ಕಣ್ಣುಗಳೊಳಗಿಂದ ಬಳಬಳನೆ ನೀರು ಹರಿಯತೊಡಗಿದವು. ಅಸಹಾಯಕ ಪರಿಸ್ಥಿತಿಯಲ್ಲಿ ಕರುಳನ್ನು ಹಿಂಡಿ ಬರುವ ಕಣ್ಣೀರು ಅವರ ಕಪೋಲಗಳನ್ನು ತೋಯಿಸಿಬಿಟ್ಟಿತು.

"ಸುಮ್ಮನೆ ಅಳುತ್ತ ಕುಳಿತರೆ ಯಾವ ಕಾರ್ಯ ಸಾಧಿಸೀತು ನರಹರಿ!"

"ಹಾಗಾದರೆ ಏನು ಮಾಡಲಿ? ನಾನು ಯಾವ ಮಾರ್ಗದಿಂದ ಹೋಗಲಿ?"

"ಮನವಿದ್ದಲ್ಲಿ ಮಾರ್ಗವಿದ್ದೇ ಇದೆ."

"ನನ್ನ ಮಾರ್ಗಗಳಿಗೆಲ್ಲ ಮುಳ್ಳು ಬಡಿದಂತಾಗಿದೆ. ಹೋಗುವ ದಾರಿಗಳೆಲ್ಲ ಕಟ್ಟಾಗಿವೆ. ಆತ್ಮಹತ್ಯೆಯೊಂದೇ ಸುಲಭ ಮಾರ್ಗವೇನೊ?"

"ಥೂ ಹೇಡಿ! ವಿಶ್ವೇಶ್ವರಭಟ್ಟರ ಮಗನಾದ ನೀನು ಇಂತಹ ಅಭದ್ರ ಮಾತುಗಳನ್ನಾಡಬೇಕೆ?"

"ಅವರ ಪುಣ್ಯ ಸರಿದುಹೋಗಿದೆ. ಅದು ಕನಸಿನ ಮಾತಾಗಿದೆ."

"ಪುಣ್ಯವೆಂದಾದರೂ ಸರಿಯುವ ವಸ್ತುವೇ, ಹುಚ್ಚಾ!"

"ಉಪವಾಸ ಸಾಯುವುದು ಕೂಡ ಪುಣ್ಯದ ಪ್ರತೀಕವಲ್ಲವಷ್ಟೆ?"

"ಪುಣ್ಯದ ಮಹತಿಯನ್ನು ಸುಖದ ಅಳತೆಗೋಲಿನಿಂದ ಅಳೆಯುವದೇ ತಪ್ಪು. ಪುಣ್ಯದ ಬಳ್ಳಿ ಅನಂತವಾಗಿ ಹಬ್ಬುತ್ತದೆ."

"ನಮ್ಮ 'ಹಬ್ಬಿದ ಬಳ್ಳಿ'ಯ ದುರ್ದೆಸೆಯೇ ಅನಂತವಾಗಿ ಹಬ್ಬಿರುವುದು ಆ ಮಾತಿಗೆ ನಿದರ್ಶನವೆ?"

"ಹುಚ್ಚಪ್ಪಾ! ಹಬ್ಬಿದ ಬಳ್ಳಿಗೆ ಒಂದು ಮಳೆಯ ನೀರೇ ಜೀವವಾಹಿನಿಯಾಗಲಾರದು."

"ಅಂದರೆ ನಾವು ಗಂಗನಹಳ್ಳಿಯನ್ನು ತ್ಯಜಿಸಿ ಬಿಡಬೇಕೆ?"

"ಜಗತ್ತು ವಿಶಾಲವಾಗಿರುವಾಗ ಯಾವ ಹಳ್ಳಿಯೇನು?"

"ಗಂಗನಹಳ್ಳಿ ವಿಶ್ವೇಶ್ವರಭಟ್ಟರ ಕರ್ಮಭೂಮಿಯಾಗಿದೆ. ಅವರ ಮಕ್ಕಳ ಜನ್ಮಭೂಮಿಯಾಗಿದೆ. ಜನ್ಮಭೂಮಿಯನ್ನು ತ್ಯಜಿಸಬೇಕೆ?"

"ವೈದಿಕರಿಗೆ ಧರ್ಮಭೂಮಿಯೇ ಜನ್ಮಭೂಮಿ. ಧರ್ಮಕರ್ಮವೇ ಅವರ ಜೀವನವಾಗಿರುವಾಗ ಅವರಿಗೆ ಯಾವ ಭೂಮಿಯೇನು ?"

"ಹಾಗಾದರೆ ನಾವು ಗಂಗನಹಳ್ಳಿಯನ್ನು ಬಿಟ್ಟುಬಿಡಬೇಕು."

ಹೌದು ! ಹೌದು ! ಇದೇ ಮಾರ್ಗ. ಈ ಅಂತಃಪ್ರೇರಣೆ ವಿಶ್ವೇಶ್ವರ ಭಟ್ಟರದೇ ಆಗಿದೆ. ಅವರ ಬಳ್ಳಿ ಎಲ್ಲಿ ಹಬ್ಬಿದರೇನು ! ಹಬ್ಬಿದ ಬಳ್ಳಿಯದು. ಎಲ್ಲಿ ಬೆಳೆದರೇನು? ಆದರೆ....ಆದರೆ....ಗಂಗನಹಳ್ಳಿಯನ್ನು ಕೂಡಲೇ ಬಿಡುವ ದಾದರೂ ಹೇಗೆ ? ಈ ಸಾಲದ ಗತಿಯೇನು ? ಇದನ್ನು ಪರಿಹರಿಸುವ ಬಗೆ ಯಾವುದು ?

ನರಹರಿಭಟ್ಟನಿಗೆ ತಟ್ಟನೆ ಒಂದು ಯೋಚನೆ ಹೊಳೆಯಿತು. ಈ ಯೋಚನೆಯು ಕೂಡ ಅಂತಃಪ್ರೇರಣೆ ಎಂದೇ ಅವನು ತಿಳಿದುಕೊಂಡನು. ಹೆಚ್ಚು ವಿಚಾರಕ್ಕೆ ಆಸ್ಪದ ಕೊಡದೆ ನೇರವಾಗಿ ಗೌಡಶಾನಿಯ ಮನೆಯ ಕಡೆಗೆ ನಡೆದುಬಿಟ್ಟನು.

ಗಂಗನಹಳ್ಳಿಯ ಪ್ರಕ್ಷುಬ್ಧವಾದ ವಾತಾವರಣದಲ್ಲಿ ಕೂಡ ನಿರ್ಲಿಪ್ತ ವಾದ ಮನೆಯೆಂದರೆ ಗೌಡಶಾನಿಯದೊಂದೇ. ಅವಳು ಹಿರಿಯರ ಆಸ್ತಿಯನ್ನು ಕಾಯ್ದುಕೊಂಡು ಯಾವ ಜೊಂಜಾಟದಲ್ಲಿಯೂ ಮನಸ್ಸು ಹಾಕದೆ ಧರ್ಮ ಮಾರ್ಗದಲ್ಲಿ ನಡೆಯುತ್ತಿದ್ದಳು. ಅವಳಿಗೆ ಹೆಚ್ಚಿನ ಆಸೆಯಿರಲಿಲ್ಲ. ಇದ್ದ ಒಬ್ಬ ಮಗನು ಆಯುಷ್ಯವಂತನಾಗಿ ಬಾಳಿದರೆ ಸಾಕೆಂದು ಅವಳು ದಿನ ಕಳೆಯುತ್ತಿದ್ದಳು. ಹೇಮಂತಗೌಡರು ವಿಶ್ವೇಶ್ವರಭಟ್ಟರಿಗೆ ದಯಪಾಲಿಸಿದ ಮನೆಯನ್ನು ಮರಳಿ ಪಡೆದುಕೊಳ್ಳಬೇಕೆಂದು ಅನೇಕರು ಆಗಾಗ ದುರ್ಬೋಧೆ ಮಾಡುತ್ತಿದ್ದರೂ ಅವಳು ಆ ಅನ್ಯಾಯದ ಕೆಲಸಕ್ಕೆ ಮನಸ್ಸು ಮಾಡಿರಲಿಲ್ಲ. ಹಿರಿಯರು ಕೊಟ್ಟ ಪುಣ್ಯದ ಮನೆಯನ್ನು ಕಸಿದುಕೊಳ್ಳುವ ಪಾಪದ ಕೆಲ ಸವು ತನ್ನಿಂದಾಗಬಾರದೆಂದು ಅವಳು ಆ ವಿಚಾರವನ್ನು ಬೆಳೆಯಗೊಡಲಿಲ್ಲ. ದೇವರು ಕೊಟ್ಟ ಆಸ್ತಿಯೇ ಸಾಕಷ್ಟಿರುವಾಗ ಹೆಚ್ಚಿನ ಹವ್ಯಾಸವೇಕೆಂದು ಅವಳು ಭಾವಿಸುತ್ತಿದ್ದಳು. ಸಾಧ್ಯವಾದಷ್ಟು ಬಡವರಿಗೆ ಸಹಾಯ ಸಲ್ಲಿಸು ತ್ತಿದ್ದಳು. ಆ ಓಣಿಯ ಜನರು ಅವಳ ಬಗ್ಗೆ ಹೆಚ್ಚಿನ ಶ್ರದ್ಧೆಯನ್ನು ತಳೆದಿರು ವದು ಕೂಡ ಇದಕ್ಕಾಗಿಯೇ. ಇದಕ್ಕೆ ಅವಳ ಸಾಧು ಸ್ವಭಾವವೇ ಕಾರಣ ವಾಗಿತ್ತೆಂದು ಬೇರೆ ಹೇಳಬೇಕೆ!

ನರಹರಿಭಟ್ಟರು ಗೌಡಶಾನಿಯ ಮನೆಯಲ್ಲಿ ಕಾಲಿಟ್ಟಾಗ ಅವಳು ಪಡಸಾಲೆಯಲ್ಲಿಯೇ ಕುಳಿತಿದ್ದಳು. ಭಟ್ಟರನ್ನು ನೋಡಿ ಅವಳು ಆದರ ಪೂರ್ವಕವಾಗಿ "ಏನು, ಹಾರುವಯ್ಯನವರು ಬಂದಿರಿ?" ಎಂದು ಬರಮಾಡಿ

ಕೊಂಡು ಚಾಪೆಯನ್ನು ಹಾಸಿ ಕುಳ್ಳಿರಿಸಿದಳು.

ಇಂತಹ ಹೊತ್ತಿನಲ್ಲಿ ಬಂದ ನರಹರಿಭಟ್ಟರ ಆಗಮನವು ಅವಳ ಕುತೂಹಲಕ್ಕೆ ಕಾರಣವಾಗಿಬಿಟ್ಟಿತು.

"ನೀವು ಒಂದು ಮಾತನ್ನು ನಡೆಯಿಸಿ ಕೊಡಬೇಕು ಗೌಡಶಾನಿ!" ನರಹರಿಭಟ್ಟರು ನೇರವಾಗಿ ಮಾತು ತೆಗೆದರು.

"ನಾನು ನಡೆಯಿಸಿಕೊಡುವದೆಂದರೇನು? ನನ್ನಿಂದ ಯಾವ ಸಹಾಯ ವಾಗಬೇಕೆಂಬುದನ್ನು ಹೇಳಿಬಿಡಿರಿ" ಗೌಡಶಾನಿ ಸೌಜನ್ಯಪೂರ್ವಕವಾಗಿ ನರಹರಿಭಟ್ಟರಿಗೆ ಹೇಳಿದಳು.

ನರಹರಿಭಟ್ಟರು ಕಷ್ಟದಿಂದ ಹೇಳಿದರು :

"ನಿಮ್ಮ ಮನೆಯನ್ನು ನೀವು ಒಪ್ಪಿಸಿಕೊಳ್ಳಬೇಕು."

"ಯಾವ ಮನೆ ಭಟ್ಟರೆ!"

"ಮತ್ತಾವ ಮನೆ ತಾಯಿ! ಹೇಮಂತಗೌಡರು ನಮ್ಮ ಹಿರಿಯರಿಗೆ ದಾನವಾಗಿ ಕೊಟ್ಟ ಮನೆ. ಈಗ ನಾವು ವಾಸಿಸುವ ಮನೆ."

"ಓ! ಮತ್ತೆ ಈ ಮಾತು ಬಂದಿತೇ? ಮೋಹನರಾಯರೊಮ್ಮೆ ಈ ಮಾತು ಸೂಚಿಸಿದಾಗ ಅವರಿಗೆ ಹೇಳಬೇಕಾದುದನ್ನು ಹೇಳಿಬಿಟ್ಟಿದ್ದೇನೆ. ನಿಮಗೆ ಮತ್ತೇಕೆ ಸಂದೇಹ ಬಂದಿತೋ ತಿಳಿಯದು. ನಾಡಗೌಡರೂ ದೇಸಾಯರೂ ತಮ್ಮ ಹೊಲಗಳನ್ನು ನಿಮ್ಮಿಂದ ಕಸಿದುಕೊಂಡರೆಂದು ಗೌಡಶಾನಿಯೂ ಹಾಗೆ ಮಾಡಿಯಾಳು ಎಂದು ನಿಮಗೆ ಸಂಶಯ ಬರುವುದು ಸ್ವಾಭಾವಿಕ. ಆದರೆ ನಾನೆಂದಿಗೂ ಅಂತಹ ಕೆಲಸ ಮಾಡುವವಳಲ್ಲ ಭಟ್ಟರೆ. ನಿಮಗೆ ಸಂದೇಹವಿದ್ದರೆ ಬೇಕಾದರೆ ದಾನಪತ್ರವನ್ನೂ ಮಾಡಿಕೊಟ್ಟೇನು. ದಯವಿಟ್ಟು ಇಂತಹ ಮಾತುಗಳನ್ನಾಡಬೇಡಿರಿ. ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗಬೇಡಿರಿ." ಗೌಡಶಾನಿ ಗಂಭೀರಳಾಗಿ ಹೇಳಿದಳು.

"ನಿಮ್ಮಿಂದ ನೀವು ಮನೆಯನ್ನು ಕಿತ್ತುಕೊಳ್ಳಬಹುದೆಂಬ ಭಯದಿಂದ ನಾನೀಗ ಬರಲಿಲ್ಲ ತಾಯಿ! ನಿಮ್ಮ ದೊಡ್ಡ ಗುಣಗಳನ್ನು ನಾನು ಅರಿಯೆನೇ? ಮಾತು ಬೇರೆಯೇ ಆಗಿದೆ. ನೀವು ನಿಮ್ಮ ಮನೆಯನ್ನು ಒಪ್ಪಿಸಿಕೊಂಡು ನಮ್ಮ ಮೇಲೆ ಬೇರೊಂದು ಉಪಕಾರ ಮಾಡಬೇಕಾಗಿದೆ. ನಮ್ಮ ಮರ್ಯಾದೆಯನ್ನು ಉಳಿಸಬೇಕಾಗಿದೆ. ಹೆಚ್ಚಿನ ಪುಣ್ಯವನ್ನು ಕಟ್ಟಿಕೊಳ್ಳಬೇಕಾಗಿದೆ."

ಹೀಗೆ ಹೇಳುವ ಭಟ್ಟರ ಕಣ್ಣಂಚಿನಲ್ಲಿ ನೀರೂರಿರುವದನ್ನು ಕಂಡು ಗೌಡಶಾನಿ "ಹೇಳುವ ಮಾತುಗಳನ್ನು ಸ್ಪಷ್ಟವಾಗಿ ಹೇಳಿದರೆ ಯಾವ ಯೋಚನೆಯೆಂಬುದನ್ನು ತಿಳಿದೇನು." ಎಂದು ಮನಕರಗಿದವಳಾಗಿ ಹೇಳಿದಳು.

"ನಿಮ್ಮನ್ನು ಬಿಟ್ಟು ನಮಗೆ ಬೇರೆ ಆಸರವೇ ಇಲ್ಲದ್ದರಿಂದ ನಿಮ್ಮ ಕಡೆಗೆಯೇ ಓಡಿಬಂದಿದ್ದೇನೆ ತಾಯಿ! ಮಾತು ಹೀಗಿದೆ. ನಮಗೆ ಅಪರಿಮಿತ ಸಾಲವಾಗಿಬಿಟ್ಟಿದೆ. ಈ ಸಾಲವನ್ನು ನಾವು ಯಾವ ಅನ್ಯಾಯಕ್ಕೂ ಮಾಡಲಿಲ್ಲ; ಹೊಟ್ಟೆಗಾಗಿ, ಮನೆಯೊಳಗಿನ ಕಾರ್ಯಗಳಿಗಾಗಿ ಮಾಡಿದ್ದೇವೆ. ನಮ್ಮ ವರಮಾನವು ಬಿದ್ದುಹೋಗಿದ್ದರಿಂದ ನಾವು ಹೀಗೆ ಮಾಡಬೇಕಾಯಿತು ತಾಯಿ! ಕಂಡಲ್ಲಿ ಸಾಲಮಾಡಿಯಾಗಿದೆ. ಈಗ ಕೊಟ್ಟವರೆಲ್ಲರೂ ಒಂದೇ ಸಮನೇ ದುಂಬಾಲು ಬಿದ್ದಿದ್ದಾರೆ. ಈಗ ಎರಡು ಸಾವಿರ ರೂಪಾಯಿಗಳನ್ನು ತೀರಿಸದಿದ್ದರೆ ನಾವು ಮರ್ಯಾದೆಯಿಂದ ಬಾಳುವ ಹಾಗಿಲ್ಲ. ಇದಕ್ಕಾಗಿ ನಿಮ್ಮ ಕಡೆಗೆ ಬಂದಿದ್ದೇನೆ. ನೀವು ನಮ್ಮ ಮನೆಯನ್ನು ಕಸಿದುಕೊಳ್ಳಲಾರಿರಿ ಎಂಬುದು ನನಗೂ ಗೊತ್ತು. ಆದರೆ ಈ ಮನೆಯಲ್ಲಿ ನಾವು ಇರುವುದು ಹೇಗೆ ಸಾಧ್ಯ? ನೀವು ಈ ಹಣವನ್ನು ಕೊಟ್ಟು ನಿಮ್ಮ ಮನೆಯನ್ನು ಒಪ್ಪಿಸಿಕೊಂಡರೆ ನೀವು ಉಪಕಾರ ಮಾಡಿದಂತಾಗುತ್ತದೆ."

"ಹಿರಿಯರು ಕೊಟ್ಟ ಮನೆಯನ್ನು ನಾನು ಒಪ್ಪಿಸಿಕೊಳ್ಳಲಾರೆನೆಂದು ನಿಮಗೆ ಈ ಮೊದಲೇ ಹೇಳಿರುವೆನಲ್ಲವೆ?"

"ನೀವು ಈಗ ಒತ್ತಾಯದಿಂದ ಕಿತ್ತುಕೊಳ್ಳುವದಿಲ್ಲ ತಾಯಿ! ನಾವಾಗಿ ನಿಮಗೆ ಒಪ್ಪಿಸುತ್ತೇವೆ. ಮೇಲಾಗಿ ಇದಕ್ಕಾಗಿ ನೀವು ಹಣವನ್ನೂ ಕೊಡುವಿರಿ. ಎಂದಮೇಲೆ ಅನ್ಯಾಯವೆಲ್ಲಿ? ನೀವು ಇಷ್ಟು ಮಾಡಿದರೆ ಒಂದು ಮನೆತನವನ್ನು ಉಳಿಸಿದಂತಾಗುತ್ತದೆ. ಇಲ್ಲದಿದ್ದರೆ ಈ ಮನೆಯನ್ನು ಇದ್ದ ಹಾಗೆ ಬಿಟ್ಟುಹೋಗಬೇಕಾಗುತ್ತದೆ. ಕಟ್ಟೆಯ ಕಲ್ಲು ಕಟ್ಟೆಗೆ ಕುಳಿತಂತಾಗಲಿ ತಾಯಿ. ನಮ್ಮ ಮನೆಯೂ ಉಳಿಯಲಿ. ನನ್ನ ಬಿನ್ನಹವನ್ನು ನಿರಾಕರಿಸಬೇಡ ತಾಯಿ! ಅನರ್ಥವಾದೀತು!"

ಗೌಡಶಾನಿ ಗಂಭೀರಳಾದಳು.

"ನೀವು ಹಣವನ್ನು ಕೊಡದಿದ್ದರೆ ನಮ್ಮ ಬಾಳು ನಾಯಿಯ ಬಾಳಾಗುವದು. ನಿಮ್ಮ ಹಿರಿಯರು ನಮ್ಮನ್ನು ಕಾಪಾಡಿದ್ದಾರೆ. ಆ ಅಭಿಮಾನದಿಂದ ನೀವು ಈ ದಿನ ನಮ್ಮನ್ನು ಪಾರುಮಾಡಿರಿ."

"ಆದರೆ ಮನೆಯನ್ನು ತೆಗೆದುಕೊಂಡು...."

"ಆ ಯೋಚನೆ ಬೇಡ ತಾಯಿ! ನೀವಾಗಿ ನಮ್ಮನ್ನು ಹೊರಗೆ ಹಾಕುವ ಪ್ರಶ್ನೆಯೇ ಉದ್ಭವಿಸುವದಿಲ್ಲ."

"ನೀವು ಗಂಗನಹಳ್ಳಿಯನ್ನು ಬಿಟ್ಟುಬಿಡುವಿರಾ?"

"ಯಾವ ಮರ್ಯಾದೆಗಾಗಿ ನಾವು ಇಲ್ಲಿ ಉಳಿಯಬೇಕು?

"ನೀಲಕಂಠಶಾಸ್ತ್ರಿಗಳು ಒಪ್ಪಿರುವರೆ ?"

"ಮನೆತನದ ಮರ್ಯಾದೆ ಅಣ್ಣನಿಗೆ ನನಗಿಂತಲೂ ಹೆಚ್ಚು."

"ನಿಮಗೆ ಹಣವನ್ನು ಕೊಟ್ಟು ನಿಮ್ಮನ್ನು ಗಂಗನಹಳ್ಳಿಯಿಂದ...."

"ಇದು ನಮಗೆ ಸಂಬಂಧಿಸಿದ ವಿಷಯ ಗೌಡಶಾನಿ! ಗಂಗನಹಳ್ಳಿಯ ಋಣವಿದ್ದರೆ ನಾವು ಇಲ್ಲಿಯೇ ಬಾಳಬಹುದು. ಆದರೆ ಋಣಮುಕ್ತರಾಗದೆ ನಾವು ಬದುಕುವಂತಿಲ್ಲ."

"ಈ ಮಾತನ್ನು ನಿರ್ಧರಿಸಲು ಸ್ವಲ್ಪ ಅವಧಿಯಾದರೂ ಬೇಡವೆ ? ಮಗನನ್ನು ಕೇಳಿ ಹೇಳಬೇಕಲ್ಲವೆ ?"

"ವಿಚಾರಿಸಿರಿ. ಆದರೆ ಇದೆಲ್ಲ ಒಂದು ವಾರದಲ್ಲಿ ನಿರ್ಧಾರವಾಗಬೇಕು. ಆದರೆ ಮಗನು ನಿಮ್ಮ ಮಾತನ್ನು ಮೀರುವವನಲ್ಲ. ನೀವು ನನಗೆ ಆಶ್ವಾಸನ ಕೊಡಬೇಕು. ನಿಮ್ಮ ಆಶ್ವಾಸನ ಸಿಗದಿದ್ದರೆ ನಾನು ಏಳುವಂತೆಯೇ ಇಲ್ಲ."

"ಈ ಗಂಡಾಂತರದಿಂದ ನಿಮ್ಮನ್ನು ಪಾರುಮಾಡಲು ಸಾಧ್ಯವಾಗ ಬಹುದು ಭಟ್ಟರೆ !"

ನರಹರಿಭಟ್ಟನ ಕಣ್ಣುಗಳಲ್ಲಿ ಸಂತೋಷದ ಹನಿಗಳು ಚಿಮ್ಮಿದವು. ಅವನು ಉದ್ವೇಗಪೂರ್ಣನಾಗಿ "ನಿಮ್ಮ ಬಳ್ಳಿ ಸಾವಿರವಾಗಿ ಹಬ್ಬಲಿ ತಾಯಿ" ಎನ್ನುತ್ತ ಹೊರಬಿದ್ದನು.

ಮನೆಗೆ ಬಂದಾಗ ಪಡಸಾಲೆಯಲ್ಲಿ ಬಸಪ್ಪಶೆಟ್ಟಿಯ ಆಳು ಧರಣಿಯಾಗಿ ಕುಳಿತುಬಿಟ್ಟಿದ್ದನು. ಬೇರೆಬೇರೆ ಸಾಲ ಕೊಟ್ಟವರು ಸ್ವಲ್ಪ ಸಿಡುಕಿನಿಂದಲೇ ಕುಳಿತಿದ್ದರು. ಇವರನ್ನು ಶಾಂತಗೊಳಿಸಲು ಆಗದೆ ನೀಲಕಂಠಶಾಸ್ತ್ರಿಗಳು ಹೌಹಾರಿ ಕುಳಿತಿದ್ದರು. ಅವರ ಕಣ್ಣುಗಳೆಲ್ಲ ಹೊರಗೆ ನಿಂತಿದ್ದವು. ನರಹರಿ ಭಟ್ಟನ ಬರವಿಗಾಗಿ ಶಾಸ್ತ್ರಿಗಳು ಆತುರರಾಗಿದ್ದರು.

ನರಹರಿಭಟ್ಟರು ಬಂದವರೇ ಎಲ್ಲರನ್ನೂ ಕುರಿತು "ಇಷ್ಟು ದಿನ ತಾಳಿದ್ದೀರಿ. ಇನ್ನು ನಾಲ್ಕು ದಿನ ತಡೆಯಿರಿ ಮಾರಾಯರೆ! ಎಲ್ಲ ವ್ಯವಸ್ಥೆ ಮಾಡಿದ್ದೇನೆ. ನಿಮ್ಮ ಸಾಲವನ್ನು ಈ ವಾರದಲ್ಲಿ ಬಡ್ಡಿ ಸಹಿತ ತೀರಿಸುತ್ತೇನೆ" ಎನ್ನಲು,

"ಹೀಗೆ ಎಷ್ಟು ವಾರಗಳು ಹೋದವೆಂಬುದನ್ನು ಲೆಕ್ಕ ಮಾಡುವಿರಾ?" ಎಂದು ಕೂಡಿದವರಲ್ಲಿ ಒಬ್ಬನು ಸಿಡುಕಿನಿಂದಲೇ ಕೇಳಿದನು.

"ವಿಶ್ವೇಶ್ವರಭಟ್ಟರ ಆಣೆಮಾಡಿ ಹೇಳುತ್ತೇನೆ. ಈ ವಾರ ನಿಮ್ಮ ಋಣವನ್ನು ತೀರಿಸದಿದ್ದರೆ ಹೇಳಿರಿ" ಎಂದು ನರಹರಿಭಟ್ಟರೆನ್ನಲು ಬಂದ ಜನ ಮಾತನಾಡಲಾರದೆ ಎಚ್ಚರಿಕೆಯನ್ನಿತ್ತು ತೆರಳಿದರು.

೫

ನೀಲಕಂಠಶಾಸ್ತ್ರಿಗಳಿಗೆ ತಮ್ಮ ಪ್ರಪಂಚವು ಅಸಾಧ್ಯವಾದ ಅಡಚಣೆಯನ್ನು ಎದುರಿಸುತ್ತ ಸಾಗಿದೆ ಎಂಬುದು ಗೊತ್ತಿತ್ತೇ ವಿನಃ ನರಹರಿಭಟ್ಟನು ಇದಕ್ಕಾಗಿ ಇಷ್ಟು ಸಾಲಮಾಡಿರಬಹುದೆಂದು ಕನಸುಮನಸಿನಲ್ಲಿಯೂ ಇರಲಿಲ್ಲ. ಏನೋ ಅಲ್ಲಿ ಇಲ್ಲಿ ಅಷ್ಟು ಇಷ್ಟು ಕೈಗಡಮಾಡಿರಬಹುದೆಂದು ಅವರಿಗೆ ಅನ್ನಿಸಿತ್ತು. ಪ್ರಪಂಚದ ವ್ಯವಹಾರವನ್ನೆಲ್ಲ ನರಹರಿಭಟ್ಟನೇ ಮಾಡುತ್ತಿದ್ದರಿಂದ ಅವರು ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತಳೆಯದೆ ಸ್ವಸ್ಥವಾಗಿದ್ದರು. ಆದರೆ ಈ ದಿನ ಸಾಲ ಕೊಟ್ಟವರ ಕಟುಮಾತುಗಳನ್ನು ಕೇಳಿದಾಗ ಅವರಿಗೆ ಮೊದಲಬಾರಿ ಈ ಅಸಾಧ್ಯವಾದ ಸಾಲದ ಕಲ್ಪನೆ ಬಂದಂತಾಗಿ ಅವರ ಜೀವವು ನೆತ್ತಿಯಿಂದಲೇ ಹೋದಂತಾಯಿತು. ಅವರು ಹೌಹಾರಿದರು. ಕಂಗೆಟ್ಟರು. ಭಯಭೀತರಾದರು. ಅವರಿಗೆ ಜಗತ್ತು ಶೂನ್ಯವಾಗಿ ಕಾಣತೊಡಗಿತು. ಈ ಋಣ ತೀರದಿದ್ದರೆ ಹೇಗೆ? ತೀರಿಸುವ ಬಗೆಯಾದರೂ ಯಾವುದು? ಎಂದು ವಿಚಾರಿಸಿ ಬಗೆಹರಿಯದೆ ನಿತ್ರಾಣವಾಗತೊಡಗಿದರು. ಅವರಿಗೆ ತಮ್ಮ ಮನೆತನವೊಂದು ಬಹು ದೊಡ್ಡ ಗಂಡಾಂತರದಲ್ಲಿ ಸಿಕ್ಕುಬಿಟ್ಟಿತೆಂಬ ಕಲ್ಪನೆಯಾಗಿ ದಿಕ್ಕುತೋಚದಾಯಿತು. ಬಂದ ಜನರಿಗೆ "ನರಹರಿ ಬರಲಿ. ಅವನು ಎಲ್ಲವನ್ನೂ ಮಾಡುತ್ತಾನೆ" ಎಂದು ಹೇಳತೊಡಗಿದ್ದರೇ ಹೊರತು ಅವರ ಬಾಯಿಂದ ಹೆಚ್ಚಿನ ಮಾತುಗಳೇ ಏಳದಾದವು. ಇಂತಹ ಹೊತ್ತಿನಲ್ಲಿ ನರಹರಿಭಟ್ಟನು ಬಂದು 'ಒಂದು ವಾರದಲ್ಲಿ ಎಲ್ಲವನ್ನೂ ತೀರಿಸುತ್ತೇನೆ' ಎಂದು ಹೇಳಿದ ಮಾತು ಅಚ್ಚರಿಯಾಗಿದ್ದರೂ ಆ ಮಟ್ಟಿಗೆ ಸಾಲಗಾರರು ಹೋಗಿದ್ದರಿಂದ ಸಮಾಧಾನವಾಯಿತು. ಆದರೆ ಅವರ ಹೃದಯದ ಕಳವಳ ನಿಲ್ಲಲಿಲ್ಲ. ಸಾಲದ ನೋವು ಅವರನ್ನು ಗಾಸಿಮಾಡತೊಡಗಿತು.

"ಇಷ್ಟು ದೊಡ್ಡ ಸಾಲವನ್ನು ಈ ವಾರದಲ್ಲಿ ಹೇಗೆ ತೀರಿಸುತ್ತೀ ತಮ್ಮಾ!" ಎಂದು ನೀಲಕಂಠಶಾಸ್ತ್ರಿಗಳು ಸಜಲನಯನರಾಗಿ ಕೇಳಿದರು. ಹೀಗೆ ಕೇಳುವಾಗ ಅವರ ದನಿ ನಡುಗುತ್ತಿತ್ತು.

"ಇದಕ್ಕೊಂದು ಉಪಾಯ ಯೋಚಿಸಿದ್ದೇನೆ ಅಣ್ಣ! ನಿಮ್ಮ ಸಮ್ಮತಿಯಿಂದ ನಾನಿದನ್ನು ಪೂರೈಸಬಹುದು."

"ನನ್ನ ಸಮ್ಮತಿಯೆಂದರೇನು ತಮ್ಮ! ಈ ಋಣದ ಭಾರವನ್ನು ತಪ್ಪಿಸಲು ನನ್ನಿಂದ ಏನಾಗಬೇಕು ಹೇಳು. ಈ ಅವಮಾನದ ಹೊರೆಯನ್ನು

ನಾನು ತಾಳಲಾರೆ."

"ಇದಕ್ಕಾಗಿ ಈ ಮನೆಯನ್ನು...."

"ಕೊಟ್ಟುಬಿಡಬೇಕೆಂದು ನಿನ್ನ ಅಭಿಪ್ರಾಯವೆ ?"

"ಈಗ ಉಳಿದದ್ದು ಇದೊಂದೇ ಮಾರ್ಗ ಅಣ್ಣ !"

"ಆದರೆ ಈ ಮನೆಯನ್ನು ಕೊಡುವ ಬಿಡುವ ಅಧಿಕಾರವೇ ನಮಗಿಲ್ಲ. ಇದು ದಾನವಾಗಿ ಬಂದ ಮನೆ. ವಿಶ್ವೇಶ್ವರಭಟ್ಟರ ಮಕ್ಕಳು ವಾಸಿಸಬೇಕಾದ ಮನೆ. ಮಾರಿಕೊಳ್ಳುವ ಮನೆಯಲ್ಲವಿದು ತಮ್ಮ ! ಇದನ್ನು ಮಾರಿಕೊಳ್ಳುವದು ಅನ್ಯಾಯ. ರೂಢಿ ಮೆಚ್ಚದು."

"ನಿಮ್ಮ ಮಾತು ಅಕ್ಷರಶಃ ನಿಜವಿದೆ ಅಣ್ಣ ! ಆದರೆ ನಾವು ಈ ಮನೆಯನ್ನು ಅನ್ಯರಿಗೆ ಮಾರುವ ಪ್ರಸ್ತಾಪವೇ ಇಲ್ಲ. ಕೊಟ್ಟವರು ತೆಗೆದುಕೊಂಡರೆ ತಪ್ಪಿಲ್ಲವಷ್ಟೆ. ಈ ಮನೆಯನ್ನು ತೆಗೆದುಕೊಂಡು ಗೌಡಶಾನಿಯೇ ಹಣವನ್ನು ಕೊಡಲು ಸಮ್ಮತಿಸಿದರೆ ತಪ್ಪಿಲ್ಲವಷ್ಟೆ! ಅವರ ಮನೆ ಅವರಿಗೆ ದೊರೆತಂತಾಗಿ ನಮಗೆ ಹಣ ಸಿಕ್ಕು ಸಾಲದಿಂದ ಮುಕ್ತರಾಗುವೆವು."

"ಆದರೆ ಇದರಿಂದ ಹಿರಿಯರ ಉದ್ದೇಶಕ್ಕೆ ಚ್ಯುತಿ ಬಂದಂತಾಗುವದು. ದಾನವಾಗಿ ಕೊಟ್ಟ ಮನೆಯನ್ನು ಗೌಡಶಾನಿಯೂ...."

"ನಿಮ್ಮ ಮಾತುಗಳನ್ನು ಕೇಳಿ ನನಗೆ ನಗೆ ಬರುತ್ತಿದೆ. ಈ ಉದ್ದೇಶ ಧ್ಯೇಯಗಳು ನಮ್ಮನ್ನು ಬದುಕಿಸಲಾರವು ಅಣ್ಣ. ಹೊಲಗಳನ್ನು ಕೂಡ ದಾನವಾಗಿಯೆ ಕೊಟ್ಟಿರಲಿಲ್ಲವೆ ? ಈಗ ಕಸಿದುಕೊಂಡವರೇ ನಮ್ಮನ್ನು ಈ ಪಾಡಿಗೆ ಈಡು ಮಾಡಲಿಲ್ಲವೆ ? ಗೌಡಶಾನಿ ದೊಡ್ಡ ಮನುಷ್ಯಳು. ಅವಳು ನಮ್ಮ ಮನೆಯನ್ನು ಕಿತ್ತುಕೊಳ್ಳಲಾರಳು. ಇದೇನೋ ನಿಜ. ಆದರೆ ಈ ಮಾತು ಕೊನೆಯವರೆಗೂ ಉಳಿಯುವದೆಂಬುದನ್ನು ಹೇಗೆ ಹೇಳಬೇಕು ? ಈಗ ಅವಳು ದೊಡ್ಡ ಮನಸ್ಸು ಮಾಡಿ ಹಣ ಕೊಡಬಹುದು. ಮುಂದೆ ಹಣ ಕೊಡದೇ ನಮ್ಮನ್ನು ಹೊರಗೆ ಹಾಕಬೇಕೆಂದು ಮನಸ್ಸಾದರೆ ನಾವದನ್ನು ತಡೆಯಲಾರೆವು. ಈ ಮನೆ ನಮಗಾಗಿ ದಾನಪತ್ರ ಮಾಡಿಕೊಟ್ಟುದಲ್ಲ, ವಿಶ್ವಾಸದಿಂದ ಕೊಟ್ಟುದು. ಈ ವಿಶ್ವಾಸ ಕೊನೆಯವರೆಗೂ ಉಳಿಯಬೇಕೆಂಬುದೆಲ್ಲಿದೆ? ಈಗಾದ ನಮ್ಮ ಅನುಭವ ಸಾಲದೆ? ಆದುದರಿಂದ ಇದನ್ನು ದಯವಿಟ್ಟು ವ್ಯವಹಾರದ ದೃಷ್ಟಿಯಿಂದ ಯೋಚಿಸಿರಿ. ನಮ್ಮ ಗಂಡಾಂತರವನ್ನು ನೆನೆಯಿರಿ."

"ಆದರೆ ತಮ್ಮ ! ನಮಗೆ ಈ ಮನೆಯ ಆಸರ ತಪ್ಪಿದರೆ ನೆರಳು ಯಾವುದು ?"

"ಗಂಗನಹಳ್ಳಿಯ ಋಣ ತೀರಿದ ಮೇಲೆ ಸಿಗುವ ಆಶ್ರಯದಲ್ಲಿ ಯಾವ ಚಪ್ಪರದಲ್ಲಿ ವಾಸಿಸಿದರೂ ಅಷ್ಟೆ !"

"ಅಂದರೆ ನಾವು ಗಂಗನಹಳ್ಳಿಯಿಂದ ಎದ್ದು ಬಿಡಬೇಕೆ ?"

"ಕುಟುಂಬಸಹಿತವಾಗಿ ಅಣ್ಣ ! ನಮಗೆ ಈ ಹಳ್ಳಿಯಲ್ಲಿ ಇನ್ನುಮೇಲೆ ಸ್ಥಾನವೇ ಇಲ್ಲ."

"ನಾವು ಬೆಳೆದ ನೆಲವನ್ನು ತ್ಯಜಿಸಿ ಬಿಡಬೇಕೇ ತಮ್ಮ !"

"ಇಲ್ಲಿ ಇದ್ದು ಉಪವಾಸ ಸಾಯುವದಕ್ಕಿಂತ ಬೇರೆಡೆಗೆ ಹೋಗಿ ಬದುಕುವದೇ ಮೇಲು. ಇಂದು ಗಂಗನಹಳ್ಳಿ ನಮ್ಮ ಕೈಬಿಟ್ಟಿದೆ. ಅದು ನಮ್ಮನ್ನು ತಳ್ಳಿ ಒಗೆದಿದೆ."

"ವಿಶ್ವೇಶ್ವರಭಟ್ಟರ ಕರ್ಮಭೂಮಿಯಿದು. ಗಂಗನಹಳ್ಳಿಯ ಹಣೆಯ ಬರಹವನ್ನು ಅವರೇ ಬರೆದರು. ಈ ಹಳ್ಳಿ ಅವರಿಂದಲೇ ಉದ್ಧಾರವಾಯಿತು. ಇಂಥವರ ಮಕ್ಕಳಾದ ನಾವು........

"ಅವರ ಹೆಸರನ್ನು ಮೆರೆಯಿಸಲಾರದ ಅಧಮರಾಗಿ ಬಾಳಿದೆವು. ಗಂಗನಹಳ್ಳಿಗಾಗಿ ಅವರು ದುಡಿದರು. ಎಂತಲೇ ಅವರಿಗೊಂದು ಸ್ಥಾನವಿತ್ತು. ನಮ್ಮಿಂದ ಆ ಕೆಲಸವಾಗಲಿಲ್ಲವೆಂದ ಬಳಿಕ ನಾವು ಇಲ್ಲಿರುವದರಲ್ಲಿ ಯಾವ ಅರ್ಥವೂ ಇಲ್ಲ. ಮೇಲಾಗಿ ಕಾಲವೆಲ್ಲ ಬದಲಾಗಿಹೋಗಿದೆ. ಇಂದು ವಿಶ್ವೇಶ್ವರ ಭಟ್ಟರನ್ನು ನೆನೆಯುವ ಒಬ್ಬರೂ ಇಲ್ಲ. ನಾವು ಇಲ್ಲಿ ಬದುಕಲಾರೆವೆಂದ ಬಳಿಕ ಬದುಕುವ ಇನ್ನೊಂದು ಸ್ಥಳವನ್ನು ಆರಿಸುವದು ಬದುಕಿನ ದೃಷ್ಟಿಯಿಂದ ಅಗತ್ಯವಾಗಿದೆ."

"ಆದರೆ ತಮ್ಮ.... ಇದು...."

"ಅನಿವಾರ್ಯವಾಗಿದೆ ಅಣ್ಣ! ನಾವು ವೈದಿಕರು, ಧರ್ಮೋಪದೇಶಕರು. ನಮಗೆ ನಮ್ಮದಾದ ನೆಲವಿಲ್ಲ. ನಾವು ನಿಂತದ್ದೇ ನೆಲ. ನಾವು ಹೊರಟದ್ದೇ ದಾರಿ. ಈ ದೃಷ್ಟಿಯಿಂದಲೇ ತಂದೆ ನಮಗೆ ಶಾಶ್ವತವಾದ ಆಸ್ತಿಯನ್ನು ಮಾಡಿಡಲಿಲ್ಲ. ನಮಗೆ ವಿದ್ಯೆಯೇ ಆಸ್ತಿ. ಇದನ್ನು ಯಾವ ನಾಡಗೌಡನೂ ಕಸಿದುಕೊಳ್ಳಲಾರ, ಯಾವ ದೇಸಾಯಿಯೂ ಇದಕ್ಕೆ ಕೈಹಚ್ಚಲಾರ. ವಿಶ್ವೇಶ್ವರಭಟ್ಟರು ಮಾಡಿಕೊಟ್ಟ ಈ ಆಸ್ತಿ ಸಂಕೇತಪೂರ್ಣವಾಗಿದೆ. ಇದರ ಅರ್ಥವನ್ನು ನಾವು ಗ್ರಹಿಸಬೇಕು.

"ಆದರೆ ತಮ್ಮ! ನಮ್ಮ ವಿದ್ಯೆಯ ಸದುಪಯೋಗ ಮಾಡಿಕೊಂಡ ಜಗತ್ತು ನಮ್ಮನ್ನು ತಳ್ಳಿಬಿಡುವದು ಸೋಜಿಗವಾಗಿದೆ. ಗಂಗನಹಳ್ಳಿಗಾಗಿ ಜೀವವನ್ನೇ ತೇದು ಮರೆಯಾದ ವಿಶ್ವೇಶ್ವರಭಟ್ಟರ ಪರಿವಾರವನ್ನು ನಿರ್ಗತಿಕರ

ನ್ನಾಗಿ ಮಾಡಿಬಿಡುವದು ಕೃತಘ್ನತೆಯ ಪರಮಾವಧಿಯಾಗಿದೆ. ಹಿರಿಯರ ನಿಃಸ್ವಾರ್ಥಬುದ್ಧಿಯ ಸೇವೆಗೆ ಈ ಫಲವೇ ?"

"ಜಗತ್ತಿನಲ್ಲಿ ಸ್ವಾರ್ಥಿಗಳದೇ ಬಹುಮತ ಅಣ್ಣ! ಆದರ್ಶವನ್ನು ಕಟ್ಟಿಕೊಂಡು ಜಗತ್ತಿನ ಉದ್ಧಾರಕ್ಕೆ ನಿಂತ ಜನ ತಮ್ಮ ಉದ್ಧಾರವನ್ನು ಕಡೆಗಣಿಸುತ್ತಾರೆ...."

"ಅವರ ಉದ್ಧಾರ ಅವರ ಆದರ್ಶದ ಸಾಫಲ್ಯದಲ್ಲಿದೆ ಎಂದು ಅವರು ನಂಬುತ್ತಾರೆ. ಜಗತ್ತು ಬಾಳುವದು ಇಂತಹ ಚಿಕ್ಕ ಗುಂಪಿನಿಂದಲೇ ತಮ್ಮ. ಅವರ ವೈಯಕ್ತಿಕ ಜೀವನ ಹೇಗಾದರೇನು ? ಅವರು ಬಡತನದಲ್ಲಿ ತೊಳಲಾಡಿದರೇನು ? ಅವರ ಮಕ್ಕಳು ಮರಿಗಳು ಉಪವಾಸ ಬಿದ್ದರೇನು? ಅವರ ಘನತೆಯನ್ನು ಯಾರು ಕಸಿದುಕೊಂಡಾರು ಹೇಳು ?"

"ಆ ಘನತೆಯ ಪರಿಣಾಮ ಆ ಘನವಂತರು ಮರೆಯಾದ ಮೇಲೆ ತಿಳಿಯುವದು. ಸ್ವಾರ್ಥದ ಜಗತ್ತಿನಲ್ಲಿ ಅವರ ಉಪಕಾರವನ್ನು ಸ್ಮರಿಸುವ ಜನರೆಷ್ಟು ?"

"ಗಂಗನಹಳ್ಳಿಯ ಜನ ಹೀಗಾಗಬಾರದಾಗಿತ್ತು. ಅವರು ನಮ್ಮನ್ನು ಕೈಬಿಡಬಾರದಾಗಿತ್ತು."

"ತಪ್ಪು ನಮ್ಮದು ಅಣ್ಣ. ಒಂದನ್ನು ಗಳಿಸಿ ಹಲವನ್ನು ಕಳೆದುಕೊಂಡಿದ್ದೇವೆ. ಇದು ಕೊನೆಯವರೆಗೆ ಸಾಗಲಾರದು. ನಮಗೆ ಗಂಗನಹಳ್ಳಿಯಲ್ಲಿ ಅನ್ನ ಸಿಗಲಾರದು. ಈ ಅನ್ನಕ್ಕಾಗಿಯಾದರೂ ನಾವು...."

"ಗಂಗನಹಳ್ಳಿಯನ್ನು ತ್ಯಜಿಸಿಬಿಡಬೇಕು ?"

"ನನ್ನ ನಿರ್ಧಾರವು ಇದೇ ಆಗಿದೆ."

"ಆದರೆ ತಮ್ಮ ! ಇದು ನನ್ನಿಂದ ಸಾಧ್ಯವಿಲ್ಲ ನೋಡು ! ವಿಶ್ವೇಶ್ವರಭಟ್ಟರ ಮಗನಾಗಿ ನಾನು ಇಲ್ಲಿಯೇ ಬಾಳಬೇಕು. ಈ ನೆಲದಲ್ಲಿ ನನ್ನ ಎಲುಬು ಕೂಡಬೇಕು. ನಾವೆಲ್ಲ ಈ ಬೀದಿಗಳಲ್ಲಿಯೇ ಉಪವಾಸ ಸಾಯಬೇಕು. ಗಂಗನಹಳ್ಳಿಯ ಜನ ನಮ್ಮ ಹೆಣಗಳನ್ನು ತುಳಿಯಬೇಕು."

"ಅಣ್ಣ ! ಅಣ್ಣ !"

ನೀಲಕಂಠಶಾಸ್ತ್ರಿಗಳ ಎದೆಯಲ್ಲಿ ಹರಡಿ ನಿಂತ ಕಿಚ್ಚಿನ ಅರ್ಥವನ್ನು ನರಹರಿಭಟ್ಟನು ಮಾಡಿಕೊಂಡಾಗ ಅವನ ಎದೆಯೂ ತುಂಬಿ ನಿಂತಿತು. ಅಣ್ಣತಮ್ಮಂದಿರಿಬ್ಬರೂ ಮೌನವಾಗಿ ಕಣ್ಣೀರು ಹಾಕತೊಡಗಿದರು. ಆ ಹೃದಯಗಳಲ್ಲಿ ಮೂಡಿ ನಿಂತ ಭಾವನೆಗಳು ಅವ್ಯಕ್ತವಾಗಿದ್ದರೂ ಅವರಿಬ್ಬರ ಪಾಲಿಗೆ ಅವು ವ್ಯಕ್ತಸ್ವರೂಪವಾಗಿಯೇ ಇದ್ದವು. ಹೃದಯಗಳು ಮಾತನಾಡಿ

ದವು. ತುಟಿಗಳು ಅಲುಗಿದವು. ನರಹರಿಭಟ್ಟನು ಕೆಲ ಸಮಯದ ಮೇಲೆ ಭಾರವಾದ ದನಿಯಲ್ಲಿ,

"ಅಣ್ಣಾ! ವಿಶ್ವೇಶ್ವರಭಟ್ಟರ ಬಳ್ಳಿ ಗಂಗನಹಳ್ಳಿಯಲ್ಲಿಯೇ ಬೆಳೆಯ ಬೇಕೆಂಬುದಿದೆಯೆ? ಅವರದು ಉದಾರ ಹೃದಯ. ಆ ಹೃದಯ ವಿಶ್ವವ್ಯಾಪಕ ವಾದದ್ದು. ಅವರ ಬಳ್ಳಿ ವಿಶಾಲವಾಗಿ ಹರಡಬೇಕು. ನಮ್ಮ ದುರವಸ್ಥೆಯು ಕೂಡ ಸಾಂಕೇತಿಕವಾಗಿದೆಯೆಂದು ನಾನು ನಂಬುತ್ತೇನೆ. ಬೆಳೆಯುವ ಬಳ್ಳಿಯ ಬೀಜ ಯಾವ ನೆಲದಲ್ಲಿ ಬಿದ್ದರೇನು? ವೈದಿಕರಾದ ನಮಗೆ ಇಂಥ ನೆಲ ವೆಂಬುದಿದೆಯೆ? ಆಸೇತುಹಿಮಾಚಲದ ವರೆಗೆ ಬೆಳೆದು ನಿಂತ ನೆಲದಲ್ಲಿ ನಮಗೆ ಯಾವ ನೆಲವಾದರೇನು? ನಮ್ಮ ಬಳ್ಳಿ ಹಬ್ಬಲೇಬೇಕು. ಹೊಸ ನೆಲ, ಹೊಸ ಜಲ ನಮ್ಮದಾಗಬೇಕು. ಹೊಸ ಜಗತ್ತಿನಲ್ಲಿ ನಾವು ಹೊಸಬರಾಗಿ ಬಾಳ ಬೇಕು, ಅಲ್ಲವೆ? ನಮ್ಮ ವಿದ್ಯೆ ಯಾವ ವೃತ್ತಿಯನ್ನು ತೆಗೆದುಕೊಂಡರೇನು? ಪ್ರಾಮಾಣಿಕತನ ನಮ್ಮಲ್ಲಿದ್ದರೆ ಸಾಕು. ಅಲ್ಲವೇ? ಅಣ್ಣಾ!"

ನೀಲಕಂಠಶಾಸ್ತ್ರಿಗಳು ಮುಖ ಮೇಲೆ ಮಾಡಿ ಕಣ್ಣೀರನ್ನು ಕೊಡವಿ ಕೊಂಡು,

"ತಮ್ಮಾ! ಗೌಡಶಾನಿಯನ್ನು ಕಂಡು ಬಾ!" ಎಂದರು.

ನರಹರಿಭಟ್ಟನು ಈ ಮಾತುಗಳನ್ನು ಕೇಳುತ್ತಲೇ ಅಣ್ಣನ ಕಾಲು ಗಳನ್ನು ಗಟ್ಟಿಯಾಗಿ ಹಿಡಿದು,

"ನೀನು ಸಾವಿರದಲ್ಲಿ ಒಬ್ಬ ಅಣ್ಣ! ಇಂಥ ಅಣ್ಣನನ್ನು ಪಡೆದುಕೊಂಡ ಪುಣ್ಯ ನನ್ನದು" ಎಂದು ಬಿಕ್ಕಳಿಸಿದನು.

ನೀಲಕಂಠಶಾಸ್ತ್ರಿಗಳ ಕಣ್ಣೀರು ಅವರ ಸಂಕಟವನ್ನು ಸೂಚಿಸಿತು. ಅವರ ಕಣ್ಣೀರು ಹರಿಯುತ್ತಲೇ ಇತ್ತು, ಹರಿದು ಬಿದ್ದ ನೀರು ನರಹರಿಯ ಬೆನ್ನ ಮೇಲೆ ಉರುಳುತ್ತಲೇ ಇತ್ತು.

ನೀಲಕಂಠಶಾಸ್ತ್ರಿಗಳು ಕುಟುಂಬಸಹಿತರಾಗಿ ಗಂಗನಹಳ್ಳಿಯನ್ನು ಬಿಟ್ಟುಬಿಡುವರೆಂಬ ವಾರ್ತೆಯು ಒಂದಕ್ಕೆ ಎರಡಾಗಿ ಹಬ್ಬತೊಡಗಿತು. ವಿಶ್ವೇಶ್ವರಭಟ್ಟರ ಮನೆತನದ ಪರಿಸ್ಥಿತಿ ಹೀಗಾಗಬಾರದಾಗಿತ್ತು ಎಂದು ಮರುಗುವವರ ಜೊತೆಗೆ, 'ಇದಕ್ಕೆಲ್ಲ ಗೌಡಶಾನಿಯೇ ಕಾರಣಳು, ಇರುವ ಮನೆಯನ್ನು ಕಸಿದುಕೊಂಡು ಹೊರಗೆ ಹಾಕಿದಳು' ಎಂದು ಇದೇ ಹೊತ್ತಿನಲ್ಲಿ ಸುಳ್ಳನ್ನು ಹಬ್ಬಿಸಿ ಗೌಡಶಾನಿಯ ಬಗ್ಗೆ ಇರುವ ವೈರವನ್ನು ಸಾಧಿಸು ವವರೂ ಇದ್ದರು. ಈ ಜನರಿಗೆ ಶಾಸ್ತ್ರಿಗಳು ಊರುಬಿಡುವದರಿಂದ ಉಂಟಾ ಗುವ ಅಸಮಾಧಾನ ಅಷ್ಟರಲ್ಲಿಯೇ ಇದ್ದರೂ ಈ ಸಂದರ್ಭವನ್ನು ಉಪ

ಯೋಗಿಸಿಕೊಂಡು ನೆವ್ಮುದಿಯಾಗಿರುವ ಗೌಡಶಾನಿಯ ಕೀರ್ತಿಗೆ ಕಳಂಕ ಹಚ್ಚುವದು ಬೇಕಾಗಿದ್ದಿತು. ಈ ಅಸಹ್ಯಕರವಾದ ವಾರ್ತೆಯು ಗೌಡಶಾನಿಯ ಕಿವಿಗೂ ಬಿದ್ದಿತು. ಅವಳು ಎಲ್ಲವನ್ನೂ ಈ ಮೊದಲೇ ನಿರ್ಧಾರಮಾಡಿದ್ದುದರಿಂದ ಅವಳಲ್ಲಿ ಯಾವ ಮಾರ್ಪಾಟೂ ಆಗಲಿಲ್ಲ. ಶಾಸ್ತ್ರಿಗಳ ಮನೆತನದ ಮರ್ಯಾದೆ ಉಳಿಯಬೇಕು. ಅವರು ಸಾಲದಿಂದ ಮುಕ್ತರಾಗಬೇಕು. ಅವರು ಮುಂದೆಯೂ ಗಂಗನಹಳ್ಳಿಯಲ್ಲಿಯೇ ಬಾಳಬೇಕು ಎಂದು ಅವಳು ಯೋಚಿಸಿದ್ದಳು. ಈಗ ಬಂದ ವಾರ್ತೆಯಿಂದ ತನ್ನ ಯೋಜನೆ ಕಾರ್ಯಗತವಾಗುವದಿಲ್ಲವೆಂದು ತಿಳಿದದ್ದರಿಂದ ಎಲ್ಲವನ್ನೂ ತಿಳಿದುಕೊಳ್ಳಬೇಕೆಂದು ಸ್ವತಃ ಶಾಸ್ತ್ರಿಗಳ ಮನೆಗೆ ಗೌಡಶಾನಿಯೇ ನಡೆದಳು.

ಎಂದೂ ಯಾರ ಮನೆಗೂ ಹೋಗದ ಗೌಡಶಾನಿ ತಮ್ಮ ಮನೆಗೆ ಬಂದುದನ್ನು ನೋಡಿ ಶಾಸ್ತ್ರಿಗಳಿಗೆ ಪರಮಾಶ್ಚರ್ಯವಾಯಿತು. ಹೇಗಿನ ಮಾತು ಹೇಗೋ ಎಂದು ನರಹರಿಭಟ್ಟನಿಗೂ ಅಚ್ಚರಿ ಮೂಡತೊಡಗಿತು. ಅಣ್ಣತಮ್ಮಂದಿರಿಬ್ಬರೂ ಗೌಡಶಾನಿಯನ್ನು ಆದರದಿಂದ ಬರಮಾಡಿಕೊಂಡು ಚಾಪೆಯ ಮೇಲೆ ಕುಳ್ಳಿರಿಸಿದರು.

"ಏನು ತಾಯಿ! ಬಡವರ ಮನೆಗೆ ಭಾಗೀರಥಿ ಬಂದಂತೆ ಬಂದಿರಲ್ಲ!" ಶಾಸ್ತ್ರಿಗಳು ಮುಗುಳುನಗೆಯೊಂದಿಗೆ ನುಡಿದರು.

"ನೀವೆಲ್ಲ ಗಂಗನಹಳ್ಳಿಯನ್ನು ಬಿಡುವಿರೆಂದು ಕೇಳಿದ ಮೇಲೆ ಮನೆಯಲ್ಲಿರಲು ಆದೀತೆ? ಇಂತಹ ವಿಚಾರವನ್ನು ನೀವೇಕೆ ಮಾಡುತ್ತಿರುವಿರೋ ತಿಳಿಯದು."

"ಈ ನಿರ್ಧಾರಕ್ಕೆ ಬಂದ ಸಂಕಟವನ್ನು ನಿನ್ನ ಮುಂದೆ ಏನೆಂದು ಹೇಳುವದು ತಾಯಿ! ಗಂಗನಹಳ್ಳಿಯಲ್ಲಿ ಉಪಜೀವನವೇ ಸಾಗದ ಮೇಲೆ ಉಪವಾಸ ಸಾಯಲಿಕ್ಕಿದೆಯೆ?"

"ಆದರೆ ಜನರು ನೀವು ಉಪಜೀವನಕ್ಕಾಗಿ ಹೋಗುತ್ತಿರುವಿರೆಂದು ತಿಳಿದಿಲ್ಲ. ನಿಮ್ಮ ಮನೆಯನ್ನು ಕಸಿದುಕೊಂಡು ನಾನೇ ಹೊರಗೆ ಹಾಕಿದೆನೆಂದು ಅನ್ನತೊಡಗಿದ್ದಾರೆ. ನನಗೆ ಈ ಮನೆ ಬೇಡ ಶಾಸ್ತ್ರಿಗಳೇ. ನಾನು ಈ ಅಪವಾದವನ್ನು ಹೊರಲಾರೆ."

"ಜನರ ಬಾಯನ್ನು ಮುಚ್ಚುವದು ಹೇಗೆ ತಾಯಿ! ನೀವು ನಮಗೆ ಹಣವನ್ನು ಕೊಟ್ಟು ಉದ್ಧಾರ ಮಾಡಿರುವಿರಿ. ಅನ್ನುವ ಜನ ನಮ್ಮ ನೆರವಿಗೆ ನಿಲ್ಲುವದಿಲ್ಲ. ಸಮಾಜಕ್ಕೆ ಮೋಜು ಬೇಕು. ನೀವು ಈ ಮಾತನ್ನು ಹಚ್ಚಿಕೊಳ್ಳುವದರಲ್ಲಿ ಯಾವ ಅರ್ಥವೂ ಇಲ್ಲ."

"ಆದರೆ ನೀವು ಗಂಗನಹಳ್ಳಿಯನ್ನು ಬಿಡುವದು ನನ್ನ ಮನಸ್ಸಿನಲ್ಲಿಯೂ ಇಲ್ಲ. ಈ ಮನೆಯಲ್ಲಿ ನೀವು ಇರಲು ಒಪ್ಪದಿದ್ದರೆ ನನ್ನ ಇನ್ನೊಂದು ಚಿಕ್ಕ ಮನೆಯನ್ನು ದಾನಪತ್ರ ಮಾಡಿಕೊಡುವೆನು. ಸಾಧ್ಯವಾದ ಸಹಾಯವನ್ನೂ ಮಾಡುವೆನು. ವಿಶ್ವೇಶ್ವರಭಟ್ಟರ ಮನೆತನವು ಗಂಗನಹಳ್ಳಿಯನ್ನು ಬಿಡಕೂಡದು. ಈ ಮಾತನ್ನು ನೀವು ನಡೆಯಿಸಿಕೊಡಬೇಕು."

"ಅದು ಹೇಗೆ ಸಾಧ್ಯ ತಾಯಿ! ಇಂತಹ ಭಾರವಾದ ಕುಟುಂಬವನ್ನು ಈ ಹಳ್ಳಿಯಲ್ಲಿ ಸಾಗಿಸುವದು ಸಾಧ್ಯವೆ?"

"ಮನವಿದ್ದಲ್ಲಿ ಮಾರ್ಗವಿದ್ದೇ ಇದೆ. ನೀವು ಈ ಮಾತನ್ನು ಒಪ್ಪದಿದ್ದರೆ ನಡೆಯಲಾರದು ಶಾಸ್ತ್ರಿಗಳೇ!"

ಗೌಡಶಾನಿಯ ಮಾತಿಗೆ ಯಾವ ಉತ್ತರವನ್ನು ಕೊಡಬೇಕೆಂದು ಯಾರಿಗೂ ತಿಳಿಯದಾಯಿತು. ಅಣ್ಣತಮ್ಮಂದಿರಿಬ್ಬರೂ ಮೌನವಾಗಿ ಕುಳಿತುಬಿಟ್ಟರು.

ಕೆಲಸಮಯ ಕಳೆದ ಮೇಲೆ ನರಹರಿಭಟ್ಟನು ಮೌನವನ್ನು ಮುರಿದು ಗೌಡಶಾನಿಯನ್ನು ಉದ್ದೇಶಿಸಿ,

"ನಿನ್ನ ಮಾತಿನಂತೆ ಆಗಲಿ ಗೌಡಶಾನಿ! ವಿಶ್ವೇಶ್ವರಭಟ್ಟರ ಮನೆತನವು ಗಂಗನಹಳ್ಳಿಯಲ್ಲಿ ನೆಲೆಯಾಗಿ ನಿಲ್ಲುವದು. ಆಯಿತೇ?" ಎಂದು ಹೇಳಲು ಗೌಡಶಾನಿ ಸಮಾಧಾನದಿಂದ ಹೊರಬಿದ್ದಳು.

ಆ ರಾತ್ರೆ ಅಣ್ಣತಮ್ಮಂದಿರಿಬ್ಬರೂ ನಾನಾಭಟ್ಟನನ್ನೂ ರಾಮಾಶಾಸ್ತ್ರಿಯನ್ನೂ ಮುಂದೆ ಕುಳ್ಳಿರಿಸಿಕೊಂಡು ಅನೇಕ ವಿಷಯಗಳನ್ನು ಚರ್ಚಿಸಿದರು. ಅನೇಕ ಮಾತುಗಳ ನಿಷ್ಕರ್ಷೆಯಾಗಿ ಕೊನೆಗೆ ಒಂದು ನಿರ್ಧಾರಕ್ಕೆ ಬಂದರು. ಈ ನಿರ್ಧಾರವನ್ನು ನೀಲಕಂಠಶಾಸ್ತ್ರಿಗಳು ಒಪ್ಪುವಾಗ ಅವರ ಕಣ್ಣೊಳಗಿಂದ ಎರಡು ದೊಡ್ಡ ಹನಿಗಳುದುರಿದವು. ಅವರ ಹೃದಯ ತುಂಬಿ ನಿಂತಿತು. ಈ ನಿರ್ಧಾರಕ್ಕೆ ಅನುಗುಣವಾಗಿ ನರಹರಿಭಟ್ಟರು ಕುಟುಂಬಸಮೇತರಾಗಿ ಹುಬ್ಬಳ್ಳಿಗೆ ಹೋಗಿ ನೆಲಸಬೇಕೆಂದೂ, ನಾನಾಭಟ್ಟನು ತನ್ನ ಚಿಕ್ಕ ಸಂಸಾರದೊಂದಿಗೆ ಮುಧೋಳದಲ್ಲಿ ವೈದಿಕವೃತ್ತಿಯಿಂದ ಜೀವನ ಸಾಗಿಸಬೇಕೆಂದೂ, ನೀಲಕಂಠಶಾಸ್ತ್ರಿಗಳು ರಾಮಾಶಾಸ್ತ್ರಿಯೊಂದಿಗೆ ಗಂಗನಹಳ್ಳಿಯಲ್ಲಿಯೇ ನೆಲೆಯಾಗಿ ನಿಲ್ಲಬೇಕೆಂದೂ ನಿಶ್ಚಿತವಾಯಿತು. ಈ ನಿಶ್ಚಯವನ್ನು ಎಲ್ಲರೂ ಒಪ್ಪಿದ ಬಳಿಕ ಒಂದು ವಾರದಲ್ಲಿ ಈ ಯೋಜನೆಯನ್ನು ಸಾಧಿಸಿಬಿಡಬೇಕೆಂದು ನಿರ್ಧಾರವಾಯಿತು. ದುಗುಡ ಹೊತ್ತ ಹೃದಯದಿಂದ ಎಲ್ಲರೂ ಮೌನವಾಗಿ ಮಲಗಲು ತೆರಳಿದರು. ಆದರೆ ನಿದ್ರೆ ಯಾರಿಗೆ ಹತ್ತೀತು? ಸುಖವಾದ ನಿದ್ರೆ

ಇಂತಹ ಸಮಯದಲ್ಲಿ ಬಂದೀತೇ ?

ನೀಲಕಂಠಶಾಸ್ತ್ರಿಗಳು ಹಾಸಿಗೆಯ ಮೇಲೆ ಎದ್ದು ಕುಳಿತು ತಲೆಗೆ ಸುತ್ತಿದ ಪಂಚೆಯನ್ನು ಮೊಣಕಾಲುಗಳಿಗೆ ಸುತ್ತಿಕೊಂಡು ಕುಳಿತರು.

"ನಿದ್ದೆ ಹತ್ತಲೊಲ್ಲದೇ ಅಣ್ಣ ?"

"ನೀನೂ ಎಚ್ಚರವಾಗಿಯೇ ಇರುವಿಯಲ್ಲ ನರಹರಿ !"

"ನನಗೆ ನಿದ್ರೆ ಬರುವದರಲ್ಲಿದೆ. ನೀನು ಮಲಗು ಅಣ್ಣ."

"ನಮ್ಮ ಆರ್ಥಿಕ ದುರವಸ್ಥೆ ನಮ್ಮನ್ನು ಕೂಡಿ ಬಾಳಗೊಡಲಿಲ್ಲ ತಮ್ಮ! ಈ ದಾರಿದ್ರ್ಯ ಮಕ್ಕಳುಮರಿಗಳನ್ನೂ ಅಗಲಿಸುತ್ತದೆ ನೋಡು. ಜಗತ್ತಿನಲ್ಲಿ ಬಡವರಾಗಿ ಬಾಳಬಾರದು ತಮ್ಮ !"

"ಜಗತ್ತಿನ ನಿಯಮವೇ ಹೀಗೆಂದು ತೋರುತ್ತದೆ ಅಣ್ಣ. ಕೂಡಿ ಬೆಳೆಯುತ್ತೇವೆ. ಬೆಳೆದು ಅಗಲುತ್ತೇವೆ."

"ಈ ಅಗಲಿಕೆ ಬೇಡವೆನ್ನುವದಿಲ್ಲ. ಆದರೆ ನಮ್ಮ ಅಗಲಿಕೆ ಸ್ವಾಭಾವಿಕವಾಗಿಲ್ಲ ತಮ್ಮ! ಬಡತನದ ಭೂತವು ನಮ್ಮನ್ನು ಈ ದುರಂತಕ್ಕೆ ಈಡು ಮಾಡಿದೆ. ನಾವು ಇಂದು ಯಾವ ಘನಕಾರ್ಯಕ್ಕೆ ಹೊರಟುಹೋಗುತ್ತಿದ್ದೇವೆ ಹೇಳು. ಜೀವನಪೋಷಣೆಗೆ ಮಾತ್ರ ನಮ್ಮ ತಂದೆ ಇಲ್ಲಿಗೆ ಬಂದರು. ಘನವಾಗಿ ಬಾಳು ಸಾಗಿಸಿದರು. ಈ ಘನತೆಯನ್ನು ನಾವು ಕಾಪಾಡಿಕೊಳ್ಳಲಾಗಲಿಲ್ಲ. ಜೀವನ ನಮ್ಮನ್ನು ಹೊಡಮರಳಿ ಹೊಡೆಯಿತು. ಅಂದಿನ ಮಾತು ಕನಸಾಗಿ ಬಿಟ್ಟಿತು."

"ಕಾಲದ ಮಹಿಮೆಯನ್ನು ತಿರುಗಿಸಲು ಯಾರಿಗೆ ಸಾಧ್ಯ ಹೇಳು. ಈ ದುರಂತ ಕೇವಲ ನಮಗೇ ಮೀಸಲಾಗಿಲ್ಲ. ಗಂಗನಹಳ್ಳಿ ಸಿಡಿದುಹೋಗಿದೆ. ಏಕತ್ರ ಕುಟುಂಬಗಳೆಲ್ಲ ಚಲ್ಲಾಪಿಲ್ಲಿಯಾಗಿ ನರಳಹತ್ತಿವೆ. ನೆಮ್ಮದಿ ಮಾಯವಾಗಿಬಿಟ್ಟಿದೆ. ಹರವಿ ಒಡೆದು ಹಂಚಾಗಿ ಬಿಟ್ಟಮೇಲೆ ಅದಕ್ಕೆ ಯಾವ ಬೆಲೆಯಿದೆ? ಆದರೆ ನಮ್ಮ ಹರವಿ ಒಡೆದಿಲ್ಲ ಅಣ್ಣ. ನಾವು ಎಲ್ಲಿ ಹೋದರೂ ಇಡಿಯಾಗಿ ಬಾಳುತ್ತೇವೆ. ನಮ್ಮ ಹೊಲಗಳನ್ನು ಕಸಿದುಕೊಂಡವರು ನಮ್ಮ ಅಂತಃಕರಣವನ್ನು ಸೆಳೆದುಕೊಳ್ಳಲಾರರು, ನಮ್ಮ ವಿದ್ಯೆಯನ್ನು ಹಿಂಡಲಾರರು. ನಾವಿಂದು ವಿದ್ಯೆಯ ಉಪಯೋಗಮಾಡಿಕೊಳ್ಳಲು, ಅದನ್ನೇ ಉಪಜೀವನವನ್ನಾಗಿ ಮಾಡಿಕೊಳ್ಳಲು ಬೇರೆಬೇರೆ ಹೋದರೆ ಅದರಲ್ಲಿ ತಪ್ಪೇನು ಹೇಳು !"

"ವೈದಿಕರ ವಿದ್ಯೆ ಕೇವಲ ಉಪಜೀವನಕ್ಕೆ ನಿಲ್ಲಬಾರದಾಗಿತ್ತು ತಮ್ಮ! ಈ ವಿದ್ಯೆ ಘನವಾದುದು. ಲೋಕೋದ್ಧಾರಕ್ಕೆ ಶಾಶ್ವತವಾಗಿ ನಿಲ್ಲಬೇಕಾದದ್ದು.

ಇದು ಕೇವಲ ಹೊಟ್ಟೆಯ ಪಾಡಿಗೆ ಬಳಕೆಯಾಗುತ್ತಿರುವದೊಂದು ದುರಂತ. ಲೋಕದ ದೃಷ್ಟಿಯಿಂದ ಒಂದು ದೊಡ್ಡ ಅನಾಹುತ."

"ಆದರೆ ವೈದಿಕರು ಬದುಕಬೇಡವೆ ?"

"ಅದಕ್ಕೆ ಸಮಾಜ ಬೆಂಬಲವಾಗಿ ನಿಲ್ಲಬೇಕಾಗಿತ್ತು."

"ಈ ರೀತಿ ಹಳೆಯದಾಯಿತು ಅಣ್ಣ. ಇಂದು ವೈದಿಕವೃತ್ತಿಯು ಕೂಡ ಜೀವನದ ವೃತ್ತಿಯಾಗಬೇಕಾಗಿದೆ."

"ಇದೊಂದು ಸಾಮಾನ್ಯ ವೃತ್ತಿಯಾಗಬೇಕೆ ?"

"ಹೊಟ್ಟೆಗಾಗಿ ಮಾಡುವ ಯಾವ ವೃತ್ತಿಯೂ ಸಾಮಾನ್ಯವಾದುದಲ್ಲ ಅಣ್ಣ. ಮೊದಲು ಬದುಕಬೇಕು ಅಲ್ಲವೆ ?"

"ಬದುಕಬೇಕು....ಬದುಕಬೇಕು....ಲೋಕದ ಧರ್ಮವನ್ನು ಕಾಯುವ ಅಮೋಘವಾದ ವೈದಿಕವು ಬದುಕಿನ ಹೋಮಕುಂಡದಲ್ಲಿ ಭಸ್ಮವಾಗಿ ಬದುಕ ಬೇಕು...."

"ಕಾಲದ ಅಗ್ನಿಕುಂಡದಲ್ಲಿ... "

"ಸಾತ್ವಿಕ ವೃತ್ತಿಯ ಹೋಮವಾಗಬೇಕು. ಬ್ರಾಹ್ಮಣ್ಯವು ಅಳಿದು ಹೋಗಬೇಕು....ಅಲ್ಲವೆ ?"

ನೀಲಕಂಠಶಾಸ್ತ್ರಿಗಳು ಸುತ್ತಿಕೊಂಡ ಪಂಚೆಯನ್ನು ಬಿಡಿಸಿಕೊಂಡು ಪಟಪಟ ಜಾಡಿಸಿದರು. ಅದು ಅವರ ಉದ್ವೇಗದ ಚಡಪಡಿಕೆಯ ಗುರುತಾ ಗಿತ್ತು.

ಮರುದಿನ ನರಹರಿಭಟ್ಟರು ಗೌಡಶಾನಿಯಿಂದ ತಂದ ಹಣವನ್ನು ಸಾಲಗಾರರಿಗೆಲ್ಲ ಹಂಚತೊಡಗಿದರು. ಅವರ ಸಾಲ ಐದು ರೂಪಾಯಿಗಳ ಕೈಗಡದಿಂದ ನೂರಾರು ರೂಪಾಯಿಗಳವರೆಗೆ ಹರಡಿತ್ತು. ಎಲ್ಲರಿಗೂ ನರಹರಿ ಭಟ್ಟರು ನೆನಪಿನಿಂದ ಕೊಡತೊಡಗಿದರು. ಇದರಲ್ಲಿ ಹೆಚ್ಚಾದ ಭಾಗವು ಬಸಪ್ಪ ಶೆಟ್ಟಿಗೆ ಸಲ್ಲಬೇಕಾಗಿದ್ದರಿಂದ ಭಟ್ಟರು ಅವನ ಮನೆಗೆ ಹೋಗಿ ರೂಪಾಯಿ ಗಳನ್ನು ಮುಂದಿಟ್ಟು,

"ಬಹಳ ತಡವಾಗಿ ಕೊಟ್ಟೆ ಶೆಟ್ಟಿ ! ನೀನು ಕ್ಷಮಿಸಬೇಕು. ಈ ಹಣ ವನ್ನು ಎಣಿಸಿಕೋ. ಬಡ್ಡಿಯ ಲೆಕ್ಕಮಾಡಿ ಹೇಳು ಮಾರಾಯಾ, ಅದನ್ನೂ ಕೊಟ್ಟುಬಿಡುತ್ತೇನೆ" ಎಂದರು.

"ನಿಮ್ಮಿಂದ ಬಡ್ಡಿ ತೆಗೆದುಕೊಳ್ಳುವಷ್ಟು ಕಂಗೆಟ್ಟವನು ನಾನಲ್ಲ. ತಿಳಿ ಯಿತೆ ? ಕೊಟ್ಟ ಮನೆಯನ್ನು ಕಸಿದುಕೊಂಡು ಹಣವನ್ನು ಕೊಡುವ ಪಾಪಿ ಯಲ್ಲ ನಾನು."

"ನಿನಗೆ ತಪ್ಪುಗ್ರಹಿಕೆಯಾಗಿದೆ ಶೆಟ್ಟಿ! ಗೌಡಶಾನಿ ಮನೆಯನ್ನು ಕಸಿದುಕೊಳ್ಳಲಿಲ್ಲ. ಅವಳ ಔದಾರ್ಯವನ್ನು ಮೆಚ್ಚಿ ನಾವೇ ಆ ಮನೆಯನ್ನು ಕೊಟ್ಟಿರುವೆವು. ಮನೆಯನ್ನು ಕಸಿದುಕೊಳ್ಳುವ ಗೌಡಶಾನಿ ಇನ್ನೊಂದು ಮನೆಯನ್ನು ದಾನವಾಗಿ ಕೊಡುತ್ತಿರಲಿಲ್ಲ."

"ಇದೆಲ್ಲ ನನಗೆ ತಿಳಿಯುತ್ತದೆ ಭಟ್ಟರೆ! ಆ ಗೌಡಶಾನಿಯ ಗತ್ತನ್ನು ನಾನು ಅರಿಯದಷ್ಟು ಮೂಢನಲ್ಲ. ಹಬ್ಬ ಹಸನವಾಗಬೇಕು, ಗೋಧಿಯ ವೆಚ್ಚ ಉಳಿಯಬೇಕು ಎನ್ನುವ ತತ್ವ ಅವಳದು. ನಿನಗೆ ಮುರುಕು ಮನೆಯೇ ಬೇಕಾಗಿದ್ದರೆ ನಾನು ನಾಲ್ಕೆಂಟು ಮನೆಗಳನ್ನು ಕೊಡಬಹುದಾಗಿತ್ತು. ಆ ದೆವ್ವದ ಮನೆಯನ್ನು ಕೊಟ್ಟು ಪೀಡೆ ಕಳೆದುಕೊಂಡ ಗೌಡಶಾನಿಯ ಔದಾರ್ಯವನ್ನು ನನ್ನ ಮುಂದೆ ಕೊಚ್ಚಬೇಡ."

ನರಹರಿಭಟ್ಟನಿಗೆ ಇಂತಹ ಕಹಿಮಾತುಗಳನ್ನು ಕೇಳುವುದು ಬೇಡವಾಯಿತು. ಅವನು ನೇರವಾಗಿ ಮನೆಯ ಕಡೆಗೆ ನಡೆದನು. ಸಾಲದ ಭಾರವಾದ ಹೊರೆ ಇಳಿದುಬಿಟ್ಟದ್ದರಿಂದ ಅವನಿಗೆ ಅತ್ಯಂತ ಸಮಾಧಾನವಾಗಿತ್ತು. ಎಲ್ಲವನ್ನೂ ಕೊಟ್ಟ ಮೇಲೆ ಅವನ ಹತ್ತಿರ ಮೂರುನೂರು ರೂಪಾಯಿಗಳು ಉಳಿದವು. ಈ ಹಣದ ಗಂಟನ್ನು ನೀಲಕಂಠಶಾಸ್ತ್ರಿಗಳ ಮುಂದಿಟ್ಟು "ನಾವು ಋಣಮುಕ್ತರಾದೆವು ಅಣ್ಣಾ. ಉಳಿದ ಈ ಹಣ ನಿನ್ನದು" ಎಂದು ಕಣ್ಣೊರಿಸಿಕೊಂಡ.

ನಡೆಯುತ್ತಿರುವ ಘಟನೆಗಳನ್ನು ಮೌನವಾಗಿ ನೋಡುತ್ತಿದ್ದ ನೀಲಕಂಠಶಾಸ್ತ್ರಿಗಳು ಈ ದಿನಗಳಲ್ಲಿ ಭ್ರಮೆಯನ್ನೇ ತಾಳಿದಂತಿದ್ದರು. ಅವರ ಮನಸ್ಸು ಉದ್ವಿಗ್ನತೆಯಲ್ಲಿ ಕುದಿಯುತ್ತಿತ್ತು. ಹೃದಯದಲ್ಲಿ ಕಳವಳ ತುಂಬಿ ನಿಂತಿತ್ತು. ಮುಖ ಹಸೆಗೆಟ್ಟು ಹೋಗಿತ್ತು.

ನರಹರಿಭಟ್ಟನು ತಂದ ಹಣವನ್ನು ಅವರು ನಿರ್ಲಕ್ಷ್ಯದಿಂದ ನೋಡಿ "ಈ ಗಂಟಿನಲ್ಲಿ ಎಷ್ಟು ಹಣವಿದೆ ತಮ್ಮಾ!" ಎಂದು ಕೇಳಿದರು.

"ಮೂರುನೂರು ರೂಪಾಯಿಗಳು."

ನೀಲಕಂಠಶಾಸ್ತ್ರಿಗಳು ಆ ಗಂಟನ್ನು ಬಿಚ್ಚಿ ಅದರಲ್ಲಿಯ ಐವತ್ತು ರೂಪಾಯಿಗಳನ್ನು ಬೇರೆಯಾಗಿ ಇರಿಸಿ ಉಳಿದ ಹಣವನ್ನು ಮತ್ತೆ ಗಂಟಿನಲ್ಲಿ ಕಟ್ಟಿ,

"ತಮ್ಮಾ, ನಿನ್ನ ಸಂಸಾರ ಬಹಳ ದೊಡ್ಡದು. ಹುಬ್ಬಳ್ಳಿಗೆ ಹೋದ ಕೂಡಲೇ ನಿನಗೆ ಕಾಮಧೇನು ಸಿಗುವದಿಲ್ಲ. ಈ ಹಣವನ್ನು ತೆಗೆದುಕೋ." ಎಂದು ಗಂಟನ್ನು ಎತ್ತಿ ನರಹರಿಭಟ್ಟನನ್ನು ಕರೆದರು.

"ಅಣ್ಣ! ಆ ಹಣ ನಿನ್ನಲ್ಲಿಯೇ ಇರಲಿ."

"ಹುಚ್ಚಪ್ಪಾ! ಈ ಹಣವನ್ನು ತೆಗೆದುಕೊಂಡು ನಾನೇನು ಮಾಡಲಿ. ತೆಗೆದುಕೋ ತಮ್ಮ!"

"ಆ ಹಣ ನನಗೆ ಬೇಡ ಅಣ್ಣ!"

"ಹಿರಿಯರ ಆಶೀರ್ವಾದವನ್ನು ಕಡೆಗಣಿಸುವದು ನಿನ್ನ ಧರ್ಮವಲ್ಲ. ನಾನು ಹೇಳಿದಂತೆ ಕೇಳು. ಈ ಹಣ ನಿನ್ನದು."

"ಅಣ್ಣ! ಅಣ್ಣ!" ಎನ್ನುತ್ತ ನರಹರಿಭಟ್ಟನು ನೀಲಕಂಠಶಾಸ್ತ್ರಿಗಳನ್ನು ತಬ್ಬಿಕೊಂಡು ಗಳಗಳನೆ ಅತ್ತನು.

"ಮನೆತನದ ಮರ್ಯಾದೆ ಉಳಿಯಿತು. ನಾವು ಋಣಮುಕ್ತರಾದೆವು. ವಿಶ್ವೇಶ್ವರಭಟ್ಟರ ಪುಣ್ಯ" ಎಂದು ಶಾಸ್ತ್ರಿಗಳು ಅನ್ನುವಾಗ, "ಇದಕ್ಕೆ ತೆತ್ತ ಬೆಲೆ ಬಹಳ ದೊಡ್ಡದು ಅಣ್ಣ!" ಎಂದ ನರಹರಿಭಟ್ಟ.

ಗುರುವಾರ ರಾತ್ರಿ ಇನ್ನೂ ಒಂದು ಗಳಿಗೆ ಇರುವಾಗ ಸವಾರಿಯ ಬಂಡಿಯೊಂದು ಸಿದ್ಧವಾಗಿ ಶಾಸ್ತ್ರಿಗಳ ಮನೆ ಎದುರು ಬಂದು ನಿಂತಿತು. ನರಹರಿಭಟ್ಟನು ಕುಟುಂಬ ಸಮೇತವಾಗಿ ಹೊರಡುವ ಮುಹೂರ್ತವದು. ಈ ರಾತ್ರಿ ಯಾರೂ ಕಣ್ಣಿಗೆ ಕಣ್ಣು ಹಚ್ಚಿರಲಿಲ್ಲ. ಅಗಲಿಕೆಯ ವೇದನೆ ಎಲ್ಲ ರಲ್ಲೂ ಅಸಾಧ್ಯವಾಗಿಬಿಟ್ಟಿತ್ತು.

ಗಾಡಿ ಬರುತ್ತಲೇ ನಾನಾಭಟ್ಟನು ಕಕ್ಕನ ಸಾಮಾನುಗಳನ್ನೆಲ್ಲ ಬಂಡಿ ಯಲ್ಲಿರಿಸಿದನು. ರಾಮಾಶಾಸ್ತ್ರಿ ಚಿಕ್ಕಪುಟ್ಟ ಗಂಟುಗಳನ್ನೆಲ್ಲ ಒಂದು ಚೀಲ ದಲ್ಲಿ ತುಂಬಿ ಇಟ್ಟು ಬಂದನು. ಈ ಕೆಲಸ ಯಂತ್ರವತ್ತಾಗಿ ನಡೆಯತೊಡ ಗಿತ್ತು. ಯಾರಿಗೂ ಉತ್ಸಾಹವಿರಲಿಲ್ಲ. ನೀಲಕಂಠಶಾಸ್ತ್ರಿಗಳು ಇದೆಲ್ಲವನ್ನೂ ನೋಡುತ್ತಾ ಧಡಪಡಿಸುತ್ತಿದ್ದರು. ಆ ಗೂಟದ ಮೇಲಿನ ಧೋತರವನ್ನು ತೆಗೆದು ಮಾಡದಲ್ಲಿಟ್ಟು ಮತ್ತೆ ಅದನ್ನು ತೆಗೆದುಕೊಂಡು ಚಟಪಟ ಜಾಡಿಸಿ ಬೇರೊಂದು ಗೂಟಕ್ಕೆ ತಗಲಿಸುತ್ತಿದ್ದರು. ನರಹರಿಭಟ್ಟರ ಪತ್ನಿ ಹೊರಬಿ ದ್ದಾಗ ಮಾತ್ರ ಶಾಸ್ತ್ರಿಗಳ ದುಃಖ ಒತ್ತರಿಸಿ ಬಂದಿತು. ಅವರು ಲಗುಬಗೆ ಯಿಂದ ಒಳಗೆ ಹೋಗಿ ತಾಯಿಯಿತ್ತ ಗಂಟನ್ನು ಬಿಚ್ಚಿ ಐದು ಋಣಗಳನ್ನೂ, ಒಂದು ಸೀರೆಯನ್ನೂ ತಂದು ನಾನಾಭಟ್ಟನ ಹೆಂಡತಿಗೆ

"ಇದನ್ನು ನಿನ್ನ ಚಿಕ್ಕ ಅತ್ತೆಗೆ ಕೊಡು" ಎಂದು ಗದ್ಗದಿತರಾದರು.

"ಇವೆಲ್ಲಾ ಏತಕ್ಕೆ ಭಾವನವರೆ?"

"ತೆಗೆದುಕೋ ಜೀವೂ! ಈ ದರಿದ್ರ ಭಾವನು ಕೊಡುವ ಉಡುಗೊರೆ ಇವು. ತಾಯಿಯ ಆಶೀರ್ವಾದ ನಿನ್ನನ್ನು...."

"ಈ ಕಾಣಿಕೆ ಅಮೂಲ್ಯವಾಗಿದೆ ತೆಗೆದುಕೋ!" ಎಂದು ನರಹರಿ ಭಟ್ಟನು ಒದ್ದೆಯ ಕಣ್ಣುಗಳಿಂದ ಹೇಳಿದನು.

"ದೇವರಿಗೆ ನಮಸ್ಕಾರ ಮಾಡಿ ಬಾ ತಮ್ಮ!"

"ನಾನು ನಿನಗೆಯೇ ವಂದಿಸುತ್ತೇನೆ. ನೀನೇ ನನ್ನ ದೇವರು...."

"ತಮ್ಮ!"

"ಅಣ್ಣ!"

ಅಣ್ಣತಮ್ಮಂದಿರು ಗಾಢವಾದ ಆಲಿಂಗನದಲ್ಲಿ ಬಂಧಿತರಾದರು. ಆ ದೃಶ್ಯವನ್ನು ನೋಡಿದ ಮಕ್ಕಳು ಬಿಕ್ಕಿ ಬಿಕ್ಕಿ ಅಳತೊಡಗಿದವು.

"ಎಲ್ಲರೂ ದೊಡ್ಡಪ್ಪನ ಕಾಲು ಬೀಳಿರಿ."

ಆ ಚಿಕ್ಕ ಮಕ್ಕಳು ಶಾಸ್ತ್ರಿಗಳ ಪಾದ ಮುಟ್ಟಿ ನಮಸ್ಕರಿಸುವಾಗ ಶಾಸ್ತ್ರಿಗಳ ಹೃದಯ ಕರಗಿ ನೀರಾಗಿಬಿಟ್ಟಿತು.

ಮಕ್ಕಳು ಮರಿಗಳೆಲ್ಲ ಬಂಡಿಯನ್ನೇರಲು ಗಾಡಿ ಸಾಗಿತು. ಶಾಸ್ತ್ರಿಗಳು ನರಹರಿಭಟ್ಟನೊಡನೆ ಸ್ವಲ್ಪ ಹಿಂದುಳಿದರು. ಒಂದು ಕ್ಷಣ ಅಣ್ಣತಮ್ಮಂದಿರಿಬ್ಬರೂ ಒಬ್ಬರನ್ನೊಬ್ಬರು ನೋಡಿದರು.

ನರಹರಿಭಟ್ಟನು ಯಾವ ಮಾತನ್ನೂ ಆಡದೆ ಹೊಸ್ತಿಲ ಬಳಿ ನಿಂತವನು ಬೊಗ್ಗಿ ಒಂದು ಹಿಡಿ ಮಣ್ಣನ್ನು ತೆಗೆದುಕೊಂಡು ಧೋತರ ಚುಂಗಿನಲ್ಲಿ ಕಟ್ಟಿಕೊಂಡನು. ಒಂದು ಚಿಮುಟಿಗೆ ತೆಗೆದುಕೊಂಡು ಹಣೆಗೆ ಹಚ್ಚಿಕೊಂಡನು. ಆ ಹೊಸ್ತಿಲಕ್ಕೆ ತಲೆ ಇಟ್ಟು, "ಗಂಗನಹಳ್ಳಿಯ ಋಣ ತೀರಿತು. ಆದರೆ ವಿಶ್ವೇಶ್ವರಭಟ್ಟರ ಬಳ್ಳಿ ಹಬ್ಬಿತು" ಎಂದು ಉದ್ವೇಗಪೂರ್ಣನಾದನು.

ನೀಲಕಂಠಶಾಸ್ತ್ರಿಗಳು ಉಗುಳು ನುಂಗುತ್ತ ನರಹರಿಭಟ್ಟನ ಬೆನ್ನ ಮೇಲೆ ಕೈಯಾಡಿಸತೊಡಗಿದರು. ಹೀಗೆ ಅವರ ದೇಹ ಥರಥರ ನಡುಗುತ್ತಿತ್ತು. ಸತತ ಧಾರೆಯಾಗಿ ಕಣ್ಣೀರು ಹರಿಯುತ್ತಿತ್ತು.

"ಹೋಗಿ ಬರಲೇ ಅಣ್ಣ?"

ನೀಲಕಂಠಶಾಸ್ತ್ರಿಗಳದು ನಿರುತ್ತರ.

"ನೀನು ಹೀಗೆ ಮಾಡಿದರೆ ನನ್ನ ಕಾಲೇ ಏಳುವದಿಲ್ಲ."

"ಹೋಗಿ....ಬಾ....ತಮ್ಮ!"

ನರಹರಿಭಟ್ಟನು ಮತ್ತೊಮ್ಮೆ ಬಾಗಿಲಿಗೆ ಕೈಮುಗಿದು ಮುಂದೆ ನಡೆದನು. ಶಾಸ್ತ್ರಿಗಳಿಗೆ ತಮ್ಮ ಒಂದು ಅವಯವವೇ ದೂರ ಹೋಗುತ್ತಿರುವಂತೆ ಅನ್ನಿಸಿತು. ಹೋಗುತ್ತಿರುವ ತಮ್ಮನನ್ನು ಒಂದೇ ಸಮನೆ ನೋಡತೊಡಗಿದರು.

"ಮಕ್ಕಳು ಮರಿಗಳು ಜೋಕೆ!"

ನರಹರಿಭಟ್ಟನು ಸಮ್ಮತಿ ಸೂಚಿಸುವಂತೆ ಒಮ್ಮೆ ತಿರುಗಿ ನಿಂತು ಕೈ ಯಾಡಿಸಿದನು.

ಶಾಸ್ತ್ರಿಗಳು ಒಂದು ದೀರ್ಘವಾದ ನಿಟ್ಟುಸಿರನ್ನು ಸೂಚಿಸಿ ಒಳಕ್ಕೆ ಸರಿದಾಗ ಆಗಲೇ ಬೆಳಕಾಗಿಬಿಟ್ಟಿತ್ತು. ಅವರು ದಿಙ್ಮೂಢರಾದವರಂತೆ ಪಡಸಾಲೆಯಲ್ಲಿ ಕುಳಿತುಬಿಟ್ಟರು.

ಅವರಿಗೆ ಗಂಗನಹಳ್ಳಿಯ ಮೇಲೆ ಒಂದು ರೀತಿಯ ತಿರಸ್ಕಾರವೇ ತುಂಬಿ ನಿಲ್ಲಹತ್ತಿತು. ತಮ್ಮನನ್ನು ಅಗಲಿಸಿದ, ಮಗನನ್ನು ಹೊರದೂಡಲು ಕಾರಣವಾದ ಗಂಗನಹಳ್ಳಿಯನ್ನು ಅವರು ನಿರಾಶಾಭಾವದಿಂದ ನೋಡ ತೊಡಗಿದರು.

ಆ ನಿರಾಶಾಭಾವವು ಅವರಲ್ಲಿ ಮುಪ್ಪನ್ನೇ ತಂದಿತು. ಅವರ ಆಯುಷ್ಯದಲ್ಲಿಯ ಹತ್ತು ವರುಷಗಳು ಒಮ್ಮೆಲೆ ಸರಿದಂತೆ ಆವರ ಮುಖ ಸುಕ್ಕುಗಟ್ಟಿಬಿಟ್ಟಿತು. ನಿರಾಶೆಗೆ ಪಕ್ಕಾದ ಮಾನವನ ಬಾಳು ಶಾಸ್ತ್ರಿಗಳದಾಗಿಬಿಟ್ಟಿತು. ಅವರ ನಿರಾಶೆ ಭಯಂಕರವಾಗಿ ಹರಿಯತೊಡಗಿತು. ಅವರು ಆಗಾಗ 'ತಮ್ಮನು ಹೋದ! ಮಗನು ಹೋದ! ನಾನಾದರೂ ಏಕೆ ಬದುಕಬೇಕು' ಎನ್ನತೊಡಗಿದರು. ತಂದೆಯ ಈ ಅವಸ್ಥೆಯನ್ನು ಕಂಡ ರಾಮಾಶಾಸ್ತ್ರಿ ಹೌಹಾರಿದನು.

"ಅಪ್ಪಾ ನೀನು ಹೀಗೆಲ್ಲ ಮಾಡಿ ನನ್ನ ಧೈರ್ಯವನ್ನೇ ಕಳೆಯುತ್ತಿ!"

"ಒಮ್ಮೆ ವಿಶ್ವೇಶ್ವರಭಟ್ಟರು ಇಲ್ಲಿ ಬಂದಾಗ ಅವರನ್ನು ಜನ ಸಂತೋಷದಿಂದ ಸ್ವೀಕರಿಸಿತ್ತು ರಾಮಾ! ಈಗ ಅವರದೇ ಜನ ನಮ್ಮನ್ನು ಹೊಡೆದಟ್ಟಿಬಿಟ್ಟಿತು. ಜನರು ಕೃತಘ್ನರು. ಇವರಿಗಾಗಿ ತಂದೆ ಪಟ್ಟ ಕಷ್ಟವೇನು ಕಡಿಮೆಯೆ! ಇವರಿಗಾಗಿ ತಂಗಿ ಆಹುತಿಯಾದಳು, ಇವರಿಗಾಗಿ ತಾಯಿ ದೇಹ ಸವೆಸಿದಳು. ಇವರ ಹಣೆಯಬರಹವನ್ನು ತಿದ್ದಿ ಬರೆದವರು ನನ್ನ ತಂದೆ. ಗಂಗನಹಳ್ಳಿ ತಂದೆಯದು. ತಂದೆಯ ಹಳ್ಳಿ ಮಕ್ಕಳಿಗಿಲ್ಲವಾಯಿತು....ಕಾಲವು ಕೆಟ್ಟು ಹೋಯಿತು ರಾಮಾ! ನಾನಿನ್ನು ಬದುಕಬಾರದು....ಹೊಸ ಜಗತ್ತಿಗೆ ಹೊಸಬರೇ ಬೇಕು. ಹಳೆಯ ಹಣ್ಣುಗಳು ಉದುರಬೇಕು. ಕಾಲ್ತೊಡಕಾಗಬಾರದು."

ರಾಮಾಶಾಸ್ತ್ರಿ ಇಂತಹ ಮಾತುಗಳನ್ನು ಕೇಳಿದಾಗ ಆವನಿಗೆ ಸಂಕಟವಾಗುತ್ತಿತ್ತು. ಆದರೆ ತಂದೆಯ ಸಂಕಟವನ್ನೇನು ಬಲ್ಲನವನು!

೭

ಗಂಗನಹಳ್ಳಿಯ ಮೇಲೆ ಉಂಟಾದ ತೀಕ್ಷ್ಣ ತಿರಸ್ಕಾರದಿಂದಲೂ, ಅಗಲು ವಿಕೆಯ ಅಸಾಧ್ಯ ನೋವಿನಿಂದಲೂ, ತಮ್ಮ ಬಾಳಿನ ಅಸಾರ್ಥಕತೆಯ ಅರಿವಿನಿಂದಲೂ ನೀಲಕಂಠಶಾಸ್ತ್ರಿಗಳಿಗೆ ಹುಚ್ಚು ಮಬ್ಬು ಕೂಡಿದಂತಾಗಿ ಅವರು ಆ ಹಳ್ಳಿಯ 'ಹುಚ್ಚುಮನುಷ್ಯ'ರಾಗಿಬಿಟ್ಟರು. ನರಹರಿಭಟ್ಟರ ನಿರ್ಗಮನದಿಂದ ಗಂಗನಹಳ್ಳಿಯಲ್ಲಿ ಕೆಲವರಿಗಾದರೂ ವಿಷಾದವಾಗದೇ ಇರಲಿಲ್ಲ. ಈ ವಿಷಾದವು ನೀಲಕಂಠಶಾಸ್ತ್ರಿಗಳ ಪರಿಸ್ಥಿತಿಯಿಂದ ಸಹಾನುಭೂತಿಗಿಳಿಯತೊಡಗಿತು. ರಾಮಾಶಾಸ್ತ್ರಿಯನ್ನು ಜನ ಹೆಚ್ಚಿನ ಸಹಾನುಭೂತಿಯಿಂದ ನೋಡತೊಡಗಿತು. ಇದರ ಫಲವಾಗಿ ಅವನಿಗೆ ಗಂಗನಹಳ್ಳಿಯಲ್ಲಿಯೇ ಕನ್ನಡ ಶಿಕ್ಷಕನ ಕೆಲಸ ದೊರಕುವಂತಾಯಿತು. ಸಂಬಳದಿಂದ ಬರುವ ಏಳು ರೂಪಾಯಿಗಳು ರಾಮಾಶಾಸ್ತ್ರಿಗೆ ಕುಬೇರನ ಆಸ್ತಿಯಂತಾಗತೊಡಗಿದವು. ಜೀವನ ಹಾಯಾಗಿ ಸಾಗತೊಡಗಿತು. ಕವಿದ ದುಃಖ ದುಗುಡಗಳು ಮರೆಯಾಗತೊಡಗಿದವು.

ಜೀವನವೇ ಹೀಗೆ. ದುಃಖಪರಂಪರೆಗಳು ಬರಹತ್ತಿದವೆಂದರೆ ಅವು ಗುಂಪುಕಟ್ಟಿಕೊಂಡೇ ಬರುವವು. ಜೀವನದಲ್ಲಿ ದುಃಖದ ವೇದನೆಯನ್ನು ಅನುಭವಿಸುವದು ಕಷ್ಟ. ಈ ಅನುಭವಕ್ಕೆ ಅಸಾಧ್ಯವಾದ ತಾಳ್ಮೆ ಬೇಕು. ದುಃಖಗಳನ್ನು ಹಗುರಾಗಿ ಕಾಣುವ ಮನೋಭೂಮಿಕೆ ಇರಬೇಕು. ಆದರೆ ಸುಖದ ಮಾತು ಹಾಗಲ್ಲ. ಆ ಅನುಭವದಲ್ಲಿರುವ ಆನಂದ ದುಃಖದ ದುಗುಡದ ಮುಂದೆ ಉಪೇಕ್ಷಿತವಾದುದು. ಅಂತೆಯೇ ಜನ ದುಃಖದ ದಿನಗಳನ್ನು ನೆನೆಸುವಷ್ಟು ಆನಂದದ ದಿನಗಳನ್ನು ಗಮನಿಸುವದಿಲ್ಲ. ಈ ಜೀವನಕಾಲ ಚಕ್ರದಲ್ಲಿ ಸುಖದುಃಖಗಳ ಚಕ್ಕ ಸುತ್ತುತ್ತಲೇ ಇದೆ. ಕಾಲಮಾನವು ಬದಲಾಗುತ್ತಲೇ ಇದೆ. ಇಂದಿನದು ನಾಳಿಗಿಲ್ಲ. ನಾಳಿನದು ನಾಡದು ಉಳಿಯುವ ನಿಯಮವಿಲ್ಲ. ಈ ಅನಂತ ಪರಿಭ್ರಮಣದ ಚಕ್ರದ ಗತಿಯ ರೀತಿಯು ಕೂಡ ವೈವಿಧ್ಯಪೂರ್ಣವಾಗಿಯೇ ಹರಿಯುತ್ತಿದೆ. ಚೇತನಾಮಯವಾದ ವೈವಿಧ್ಯವೇ ಕಾಲರಾಯನ ಹೆಗ್ಗುರುತು. ಈ ವೈವಿಧ್ಯಕ್ಕೆ ಅಡ್ಡಿ ಆತಂಕಗಳಿಲ್ಲ. ಅದೊಂದು ರಭಸದ ಪ್ರವಾಹ. ಈ ಪ್ರವಾಹದಲ್ಲಿ ಕೊಚ್ಚಿ ಹೋಗುವದು ಕಾಲಗತಿ. ಈ ಗತಿಯ ಬಾಡದಲ್ಲಿ ಸಿಕ್ಕು ಒಮ್ಮೆ ಮುಳುಗಿ ಮತ್ತೆ ಏಳುವದೇ ಜೀವನ. ಈ ಮಾತಿಗೆ ಯಾರೂ ಹೊರತಾಗಲಾರರು. ಇದು ವಿಶ್ವನಿಯಮ. ಈ

ನಿಯಮಕ್ಕನುಸಾರವಾಗಿಯೇ ವಿಶ್ವೇಶ್ವರಭಟ್ಟರು ಘನವಾಗಿ ಬಾಳಿದರು ಈ ನಿಯಮದಂತೆಯೇ ಅವರ ಮಕ್ಕಳು ಬಾಳಿ ಚಲ್ಲಾಪಿಲ್ಲಿಯಾದರು. ಈ ನಿಯಮವನ್ನು ಅನುಸರಿಸಿಯೇ ಗಂಗನಹಳ್ಳಿ ಒಮ್ಮೆ ಬಾಳಿತು. ಮತ್ತೊಮ್ಮೆ ಇನ್ನೊಂದು ರೀತಿಯಲ್ಲಿ ಬೆಳೆಯಿತು. ಮುಂದೆ ಯಾವ ರೀತಿಯಲ್ಲಿ ಬಾಳಿದರೂ ಅದು ಕಾಲನಿಯಮಕ್ಕನುಗುಣವಾಗಿಯೇ ಆದೀತು. ಸ್ಥಿತ್ಯಂತರವು ಪ್ರಗತಿ ಯೆಂದು ತಿಳಿದುಕೊಂಡರೂ ಅದು ನಿಯಮಬಾಹ್ಯವಲ್ಲ. ಅದು ಕಾಲದ ಕೂಸು. ಮಾನವನ ಬಾಳು ಇದಕ್ಕೆ ಅನುಗುಣವಾಗಿಯೇ ಸಾಗುವದು. ಸುಖದುಃಖದ ಜಂಜಡವನ್ನು ಹೊತ್ತುಕೊಂಡೇ ಈ ಕಾಲಚಕ್ರ ತಿರುಗುವದು. ಇದಕ್ಕೆ ಜಗತ್ತಿನ ರಾಜ್ಯಸಾಮ್ರಾಜ್ಯಗಳೇ ತಲೆಬಾಗಿರುವಾಗ ವಿಶ್ವೇಶ್ವರಭಟ್ಟರ ಮನೆತನವೂ ಹೊರತಾಗಬಹುದೆ?

ರಾಮಾಶಾಸ್ತ್ರಿಯ ಜೀವನದಲ್ಲಿಯೂ ಸ್ಥಿತ್ಯಂತರ ಕಾಣತೊಡಗಿತು. ದುಗುಡದ ದಿನಗಳು ಮರೆಯಾದಂತೆ ಸುಖದ ದಿನಗಳು ಬರತೊಡಗಿದವು. ಶಿಕ್ಷಕನಾದ ಕೆಲವು ದಿನಗಳಲ್ಲಿಯೇ ಸುಪ್ರಸಿದ್ಧರಾದ ಶಂಕರಭಟ್ಟರ ಸಾಕು ಮಗಳು ಸೀತಾ ಮಡದಿಯಾಗಿ ಬಂದು ಮನೆ ತುಂಬಿದಳು. ವೈದಿಕನ ಮಗ ಳಾಗಿ ಆ ಸಂಸ್ಕೃತಿಯಲ್ಲಿಯೇ ಬೆಳೆದು ದೊಡ್ಡವಳಾದ ಸೀತಾ ವೈದಿಕ ಮನೆ ತನಕ್ಕೆ ಸಂಭ್ರಮದಿಂದಲೇ ಬಂದಳು. ರಾಮಾಶಾಸ್ತ್ರಿಯ ಮನೆ ತುಂಬಿತು.

ಈ ಭಾಗ್ಯದಲ್ಲಿ ಹಾಯಾಗಿ ಜೀವಿಸುವ ಪುಣ್ಯ ಮಾತ್ರ ನೀಲಕಂಠ ಶಾಸ್ತ್ರಿಗಳಿಗಿರಲಿಲ್ಲ. ಅವರು ಕೊನೆಯವರೆಗೂ 'ಹುಚ್ಚುಮನುಷ್ಯ'ರಾಗಿಯೇ ಗಂಗನಹಳ್ಳಿಯಲ್ಲಿ ಜೀವನ ಸಾಗಿಸಿದರು. ರಾಮಾಶಾಸ್ತ್ರಿಯ ಮದುವೆ ಯಾದಾಗ ಮಾತ್ರ ಅವರು ಆನಂದದಿಂದ "ವಿಶ್ವೇಶ್ವರಭಟ್ಟರ ಬಳ್ಳಿ ಗಂಗನ ಹಳ್ಳಿಯಲ್ಲಿ ಮತ್ತೆ ನೆಲೆ ನಿಂತಿತು" ಎಂದು ಕುಣಿದಾಡಿದ್ದರು. ಆ ಬಳ್ಳಿಯ ವಿಸ್ತಾರವನ್ನು ನೋಡದೆ ಕೆಲವು ದಿನಗಳಲ್ಲಿಯೇ ಕಣ್ಣು ಮುಚ್ಚಿಬಿಟ್ಟರು.

ಅವರ ಮರಣದಿಂದ ಮನೆತನದಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತೆನ್ನಬೇಕು. ಈ ಹೊಸತನ ಈ ಮನೆತನಕ್ಕೆ ಮಾತ್ರ ಮೀಸಲಾಗಿರಲಿಲ್ಲ. ಗಂಗನಹಳ್ಳಿಗೂ ಇದು ಅನ್ವಯಿಸುವದು.

ಇಂದು ಗಂಗನಹಳ್ಳಿಯಲ್ಲಿ ಬಸಪ್ಪಶೆಟ್ಟಿಯೂ ಇಲ್ಲ, ಮೋಹನ ರಾಯರೂ ಇಲ್ಲ. ಧೀರೇಂದ್ರಾಚಾರ್ಯರ ಸುಳಿವನ್ನು ಗಂಗನಹಳ್ಳಿ ಕಾಣದಾ ಗಿದೆ. ಅವರ ಶಿಷ್ಯಸಮೂಹವು ಕೂಡ ಅವರೊಡನೆ ಮಾಯವಾಗಿದೆ. ಗಂಗನ ಹಳ್ಳಿಯಲ್ಲಿ ತಲೆಯೆತ್ತಿ ನಿಂತ ಪಕ್ಷಪಂಗಡಗಳು ಕೂಡ ಈಗ ನಿರ್ಜೀವವಾಗಿ ಬಿಟ್ಟವೆ. ಇದಕ್ಕೆ ಅವರಲ್ಲಿ ಉದಯಿಸಿದ ವಿವೇಕಬುದ್ಧಿ ಕಾರಣವಾಗಿದೆ. ದಟ್ಟ

ದಾರಿದ್ರ್ಯವು ಕಾರಣವಾಗಿದೆ. ಕೋರ್ಟು ಕಚೇರಿಗಳಿಗೆ ಹಣ ಸುರುವಿ ಕೈ ಸೋತ ಜನರು ಬರಿಕಿಸೆಗಳಿಂದ ಎಷ್ಟು ಬಡಿದಾಡಬಹುದು? ಅವರ ಹಾರಾಟ ಈಗ ಕೇವಲ ಮಾತಿನಲ್ಲಿ ಉಳಿಯುತೊಡಗಿದೆ. ಜೀವನದ ಸಮಸ್ಯೆ ಎಲ್ಲರನ್ನೂ ಕಾಡತೊಡಗಿರುವಾಗ ಹೊಸ ಸಮಸ್ಯೆಗಳನ್ನು ಅವರು ಉಂಟುಮಾಡಲಾರರು. ಅವರ ಲಕ್ಷ್ಯವೆಲ್ಲ ಈಗ ಉಪಜೀವನದ ಮಾರ್ಗಶೋಧನೆಯಲ್ಲಿ ನಿಲ್ಲಹತ್ತಿದೆ. ದಾರಿದ್ರ್ಯದೊಡನೆ ಹೋರಾಟ ಸಾಗತೊಡಗಿದೆ.

ಈ ದಾರಿದ್ರ್ಯಜೀವನವು ಗಂಗನಹಳ್ಳಿಗೆ ಮಾತ್ರ ಮೀಸಲಾಗಿರಲಿಲ್ಲ. ಇದು ಸಾರ್ವತ್ರಿಕವಾಗಿ ನಾಡಿನ ಹೃದಯವನ್ನೆಲ್ಲ ಭೇದಿಸಿತ್ತು. ಬಡತನದ ದವಡೆಯಲ್ಲಿ ಸಿಕ್ಕು ಸಮಗ್ರ ದೇಶವೇ ಒದ್ದಾಡುತ್ತಿತ್ತು. ಪರಕೀಯರ ದುರಾಡಳಿತದ ಪರಿಣಾಮವಾಗಿ ಇದು ದಿನದಿನವೂ ಉಗ್ರಸ್ವರೂಪವನ್ನು ತಾಳತೊಡಗಿತು. ಅವರ ಕೈಗೊಂಬೆಗಳಾದ ಅಧಿಕಾರಿಗಳ ದರ್ಪದ ಜೋರಿನಲ್ಲಿ ನಾಡಿಗೆ ನಾಡೇ ಕಂಗೆಡಹತ್ತಿತು. ಅವರ ಶೋಷಣೆಯಿಂದ ಬೇಸತ್ತ ಜನರು ಕ್ರಿಯಾಹೀನರಾಗಿ ಮೂಕ ಕುರಿಗಳಂತೆ ಬಾಳತೊಡಗಿದರು. ಆ ಉನ್ಮತ್ತ ಹೆಜ್ಜೆಗಳ ತುಳಿತದ ರಭಸಕ್ಕೆ ಭಯಭೀತರಾದ ಜನರು ಭಯಭ್ರಾಂತರಾಗಿ ಬಂದ ದುರಿತಗಳನ್ನು ಸಹಿಸಹತ್ತಿದರು. ಭಯಭೀತರಾದ ಜನರಿಂದ ಯಾವ ಕಾರ್ಯವಾದೀತು? ಬಡತನದ ಬಡಬಾನಲದ ಅಗ್ನಿಸಂಪರ್ಕವು ಜೀವನವನ್ನು ಕಮರಿಸದೆ ಬಿಟ್ಟೀತೇ?

ಜೀವನದ ದುರ್ದೆಶೆಗೆ ಭಯವೇ ಕಾರಣವಾಗಿರುವಂತೆ ಕ್ರಾಂತಿಯ ಬೀಜಕ್ಕೆ ಬಡತನವೇ ಹದಮಾಡಿದ ಹೊಲವೆಂಬ ಮಾತೂ ಸುಳ್ಳಲ್ಲ. ಇಂದು ನಾಡಿನ ಹೊಲ ಹದವಾಗಿತ್ತು. ಘೋರ ದಾರಿದ್ರ್ಯಕ್ಕೆ ಪಕ್ಕಾಗಿತ್ತು. ನಾಡಿನ ಗರ್ಭದಲ್ಲಿ ಅಸಹನೀಯವಾದ ಬೆಂಕಿ ಕತಕತನೆ ಕುದಿಯುತ್ತಿತ್ತು. ಭಯದ ಮುಚ್ಚಳಿಕೆಯು ಅದನ್ನು ಅದುಮಿತ್ತು. ಈ ಮುಚ್ಚಳಿಕೆಯನ್ನು ತೆಗೆದಾಗ ಜ್ವಾಲಾಮುಖಿಯ ಸ್ಫೋಟವಾಗದಿದ್ದೀತೆ? ಆದರೆ ಈ ಭಯದ ಮುಚ್ಚಳಿಕೆಯನ್ನು ತೆಗೆಯುಬೇಕಾರು? ಮೇಕೆಗಳಂತೆ ಅರಚುತ್ತಿರುವ ಜನರಿಂದ ಇದು ಸಾಧ್ಯವಾದೀತೆ? ಇದಕ್ಕೆ ಮಹಾ ಶಕ್ತಿ ಬೇಕು. ಕಾರಣಪುರುಷನೊಬ್ಬನ ದಿವ್ಯವಾಣಿಯ ಅಮೃತಸೇಚನವಾಗಬೇಕು. ಜನಮನದ ಅದ್ಭುತವಾದ ಮಾರ್ಪಾಟು ಆಗಬೇಕು. ಇದು ಹೇಗೆ ಅಸಾಧ್ಯ? ಕಾರಣಪುರುಷನು ಬಂದಾನೆಯೆ? ನಮ್ಮ ಉದ್ಧಾರವಾದೀತೆ? ಎಂದು ವಿಚಾರಿಸುವ ಜನ ಕೂಡ ಇಲ್ಲದಿರುವಾಗ ಈ ಕೆಲಸವೆಷ್ಟು ಗಡಚು? ಈ ಅಜ್ಞಾನದ ದುರ್ಲಾಭದಿಂದ ಜನವನ್ನು ಹಿಂಡುವ ಕ್ರೂರ ಕರ್ಮಿಗಳಿಗೆ ಕೊನೆಯೇ ಇಲ್ಲವೇ?

ರಾಮಾಶಾಸ್ತ್ರಿಗಳು ಜೀವನದಲ್ಲಿ ಕಾಲಿಟ್ಟ ಸಮಯವೇ ಇಂತಹುದು. ದಾರಿದ್ರ್ಯಯುತವಾದ ನಾಡು. ಅಜ್ಞಾನದಲ್ಲಿ ಮುಳುಗಿದ ಜನ. ರಕ್ತಶೋಷಣೆ ಮಾಡುವ ದರ್ಪದ ಅಧಿಕಾರಿಗಳು. ಇದೆಲ್ಲವನ್ನೂ ನೋಡುತ್ತಿದ್ದ ಅವರಿಗೆ ಜೀವನ ಚಮತ್ಕಾರವೆನ್ನಿಸತೊಡಗಿತು. "ಈ ಜನ ಹೀಗೆಯೇ ಬಾಳಿದರೆ ಉದ್ಧಾರವೆಂತಾದೀತು? ಈ ದಾರಿದ್ರ್ಯವೆಂತು ಹೋದೀತು? ಜನರಲ್ಲಿ ಜ್ಞಾನೋದಯವೆಂತಾದೀತು" ಎಂದು ಆಗಾಗ ಯೋಚಿಸುವರು. ಈ ಯೋಚನೆಯನ್ನು ಮಾಡುತ್ತ ಮಾಡುತ್ತ ಅವರು ಕ್ರಿಯಾಶೂನ್ಯರಾಗದೆ ಏನಾದರೂ ಮಾಡಬೇಕೆಂದು ಯೋಚಿಸತೊಡಗಿದರು. ಆದರೆ ಅವರು ಏನು ಮಾಡಬೇಕು? ಅವರ ಶಕ್ತಿ ಎಷ್ಟು? ಹೀಗೆ ಒಮ್ಮೊಮ್ಮೆ ಅವರಿಗೆ ಅಧೈರ್ಯ ವಾದರೂ ಅವರ ವಿಚಾರ ಕುಂಠಿತವಾಗುತ್ತಿರಲಿಲ್ಲ. ವಿಚಾರಗಳಲ್ಲಿ ಗೊಂದಲ ಮಾತ್ರ ಏಳುವದು. ಜನಕ್ಕೆ ಯಾವ ವಿಚಾರವನ್ನು ತಿಳಿಸಬೇಕೆಂಬುದೇ ಅವರಿಗೆ ತಿಳಿಯದಾಯಿತು. ಅವರಿಗೆ ಮಾರ್ಗದರ್ಶನ ಬೇಕಾಗಿದ್ದಿತು. ಸರಿಯಾದ ದಾರಿಯನ್ನು ತೋರುವವರು ಬೇಕಾಗಿದ್ದರು. ಅವರಲ್ಲಿ ಅಪರಿಮಿತ ಉತ್ಸಾಹವಿತ್ತು. ಆದರೆ ಕಾರ್ಯಾಚರಣೆ ತಿಳಿಯದಾಗಿತ್ತು. ಕೇವಲ ನಾಲ್ಕು ಹುಡುಗರಿಗೆ ಅಕ್ಷರಗಳನ್ನು ಕಲಿಸುವುದು ಅವರಿಗೆ ಬೇಸರ ತರಹತ್ತಿತು. ಕ್ರಾಂತಿಯಾಗಬೇಕು! ಜನಜೀವನದಲ್ಲಿ ಕ್ರಾಂತಿಯಾಗಬೇಕು! ಆದರೆ ಹೇಗೆ? ಈ ಭಯವಿಹ್ವಲವಾದ ಮೊಲಗಳಿಂದ ಯಾವ ಗಂಡುಕಾರ್ಯ ವಾದೀತು? ಈ ಭಯದ ಉಚ್ಚಾಟನೆಯು ಆಗಬೇಕೆಂತು?

ಗಂಗನಹಳ್ಳಿಯಲ್ಲಿ ನಡೆದ ಒಂದು ಘಟನೆಯು ರಾಮಾಶಾಸ್ತ್ರಿಗಳ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಮೂಡಿತು. ಜನರ ಭಯವು ಅವರನ್ನೆಷ್ಟು ನಿರ್ವೀರ್ಯರನ್ನಾಗಿ ಮಾಡಿದೆ ಎಂಬುದಕ್ಕೆ ಅದು ಸಾಕ್ಷಿಯಾಯಿತು. ಈ ಘಟನೆ ಅವರ ವಿಚಾರದಲ್ಲಿ ಕ್ರಾಂತಿಯನ್ನೇ ಮಾಡಿತು. ಆ ವಿಚಾರಕ್ರಾಂತಿಯಿಂದ ತಾತ್ಕಾಲಿಕ ಲಾಭವೇನೂ ಆಗದಿದ್ದರೂ ಅವರಿಗೆ ಜನರ ಮನೋಭೂಮಿಕೆಯು ಅದ್ಭುತವಾದ ಅರಿವಾಯಿತು. ಆ ಘಟನೆ ನಡೆದಿದ್ದು ಹೀಗೆ.

ಜಿಲ್ಲಾಧಿಕಾರಿಗಳಾದ 'ಗುಡ್‌ವರ್ತ್' ಸಾಹೇಬರು ಲೆಕ್ಕ ತಪಾಸಣೆಗಾಗಿ ಮಧ್ಯವರ್ತಿ ಹಳ್ಳಿಯಾದ ಗಂಗನಹಳ್ಳಿಯಲ್ಲಿ 'ಕ್ಯಾಂಪು' ಹಾಕಿದರು. ಅವರು ಬರುವದಕ್ಕೆ ನಾಲ್ಕು ದಿನ ಮೊದಲೇ ಹಳ್ಳಿಯಲ್ಲಿ ವಿಲಕ್ಷಣ ಚಟುವಟಿಕೆಗಳಿಗಾರಂಭವಾಯಿತು. 'ರಾಯರ ಬಾವಿ'ಯ ಹಿಂದಿರುವ ಮಾವಿನ ತೋಪಿನಲ್ಲಿ ಅವರ ಬಿಡಾರವಾಗಬೇಕು. ಅದಕ್ಕಾಗಿ ಸರ್ವಸಿದ್ಧತೆಗಳೂ ಆಗತೊಡಗಿದವು. ಎರಡು ದಿನಗಳಲ್ಲಿಯೇ ಆ ಸ್ಥಳವು ಪಡಸಾಲೆಯಂತೆ ಸ್ವಚ್ಛವಾಗಿ ಅಲ್ಲಿ

ಬೇರೆ ಬೇರೆ ತಂಬೂಗಳು ಎದ್ದು ನಿಂತವು. ಮಧ್ಯದಲ್ಲಿಯ ದೊಡ್ಡ 'ಡೇರೆ'ಯೇ ಸಾಹೇಬರದು. ಅದರ ಪಕ್ಕದಲ್ಲಿ ನಿಂತ ಚಿಕ್ಕದಾದ ಡೇರೆ ಅವರ ನಾಯಿಗಳದ್ದು. ಸ್ವಲ್ಪ ದೂರದಲ್ಲಿ ಅವರ ಅಡಿಗೆಗಾಗಿ, ಅದರ ಹತ್ತಿರ ಸಾಹೇಬರ ಪ್ರಾತರ್ವಿಧಿಗಾಗಿ, ಇನ್ನೊಂದು ಅವರ ಸ್ನಾನಕ್ಕಾಗಿ, ಹೀಗೆ ಬೇರೆ ಬೇರೆ ತಂಬೂಗಳು ವಿರಾಜಮಾನವಾದವು. ಅವರ ಕುದುರೆಗಳನ್ನು ಕಟ್ಟಲು ನಿರ್ಮಾಣವಾದ ತಂಬೂ ವಿಶಾಲವಾಗಿತ್ತು. ಈ ತಂಬೂಗಳ ನೋಟವು ಹಳ್ಳಿಗರಿಗೊಂದು ಜಾತ್ರೆಯಾಗಿಬಿಟ್ಟಿತು. ದಿನಾಲು ನೂರಾರು ಜನರು ನೋಡ ಬರತೊಡಗಿದರು. ಹಳ್ಳಿಗರಲ್ಲಿ ಒಂದು ರೀತಿಯ ಭಯವೂ, ಅಸಾಧ್ಯವಾದ ಗೌರವವೂ ಮಿಶ್ರವಾಗಿ ಮೂಡಿದಂತೆ ಅವರ ಮುಖಚರ್ಯೆಗಳಿಂದ ಕಂಡುಕೊಳ್ಳಬಹುದಾಗಿತ್ತು. ಇಷ್ಟು ತಂಬೂಗಳಲ್ಲಿ ವಾಸಮಾಡುವವನು ಅತಿ ಮಾನವನಾಗಿರಬೇಕೆಂಬುದೇ ಅವರ ಅಭಿಪ್ರಾಯ. ಸಾಹೇಬರನ್ನು ನೋಡುವ ಕೌತುಕ ಅದಕ್ಕಾಗಿಯೇ ಅವರಲ್ಲಿ ಬೆಳೆದು ನಿಂತಿತು. ಆದರೆ ಸಾಹೇಬರು ಬರುವ ದಿನ ಜನರಿಗೆ ಅಲ್ಲಿಗೆ ಹೋಗುವದೇ ಅಸಾಧ್ಯವಾಗಿಬಿಟ್ಟಿತು. ಆ ಸ್ಥಳದ ಸುತ್ತಲೂ ಫರ್ಲಾಂಗಿನ ಅಂತರದಲ್ಲಿ ನಾಲ್ಕೂ ದಿಕ್ಕಿಗೆ ಖಾಕೀ ವಸ್ತ್ರ ಧರಿಸಿದ ಬಂದೂಕು ಧಾರಿಯಾದ ಪೋಲೀಸರು ಕಾವಲು ನಿಂತು ಯಾರನ್ನೂ ಒಳಗೆ ಬಿಡದಾದರು. ಇದರಿಂದಲಂತೂ ಬರುವವನ ಘನತೆ ಇನ್ನೂ ಹೆಚ್ಚಾಗಿ ತೋರಿದ್ದರಿಂದ ಹಳ್ಳಿಗರು ದೂರದಿಂದಲೇ ಆ ತಂಬೂಗಳನ್ನು ನೋಡಿ ಆನಂದ ಪಡತೊಡಗಿದರು.

ಗಂಗನಹಳ್ಳಿಯಲ್ಲಿ ಬೀಡಾರ ಹೂಡಿದ ಸಾಹೇಬರು ಪ್ರತಿದಿನ ಮುಂಜಾನೆ ತಮ್ಮ ಎತ್ತರವಾದ ಪುಷ್ಟವಾದ ಕುದುರೆಯನ್ನೇರಿ ವಾಯುಸೇವನೆಗೆ ಹೋಗುವ ಪರಿಪಾಠವನ್ನಿಟ್ಟಿದ್ದರು. ಅವರ ಹಿಂದೆ ಒಂದೆರಡು ದೇಸೀ ಸಾಹೇಬರ ಕುದುರೆಗಳೂ ಹೋಗುತ್ತಿದ್ದವು. ಒಂದು ತಾಸಿನವರೆಗೆ ಸುತ್ತಾಡಿ ಸಾಹೇಬರು ಕುದುರೆಯನ್ನು ಓಡಿಸುತ್ತಲೇ ಹಳ್ಳಿಯ ಓಣಿಗಳಲ್ಲಿ ಹಾದುಹೋಗುತ್ತಿದ್ದರು. ಹೀಗೆ ಹೋಗುವಾಗ ಅನೇಕರು ಮಾಳಿಗೆಯ ಮೇಲೆ ನಿಂತು ಆ ಕೆಂಪು ಮುಖವನ್ನು ಭಯಚಕಿತರಾಗಿ ನೋಡುತ್ತಿದ್ದರು. ಕುದುರೆಯ ಗೊರಸಿನ ಸಪ್ಪಳ ಕೇಳಿ ಚಿಕ್ಕಮಕ್ಕಳು ಬಾಗಿಲಿಗೆ ಬಂದು ನಿಲ್ಲುತ್ತಿದ್ದರು. ಅದು ರಭಸದಿಂದ ದಾಟಿಹೋದ ಕೂಡಲೆ ಮತ್ತೆ ಒಳಗೆ ಹೋಗುತ್ತಿದ್ದರು. ಇದು ದೈನಂದಿನ ಕ್ರಮವಾಗಿಬಿಟ್ಟಿತು. ಸಾಹೇಬರು ಓಣಿಯಲ್ಲಿ ಹಾದುಹೋಗುವ ಸಮಯವನ್ನು ಬಾಲಕರು ದಿನಾಲು ನಿರೀಕ್ಷಿಸುತ್ತಿದ್ದರು.

ಈ ದಿನವೂ ಹುಡುಗರ ಚಿಕ್ಕಮೇಳವೊಂದು ಬಗಲಲ್ಲಿ ಪುಸ್ತಕಪಾಟಿ

ಗಳನ್ನು ಹಿಡಿದುಕೊಂಡು ಸಾಹೇಬರ ಬರವನ್ನು ನಿರೀಕ್ಷಿಸುತ್ತ ಒಂದು ಕಟ್ಟೆಯ ಮೇಲೆ ನಿಂತಿತ್ತು. ಆಚೆಯ ಕಟ್ಟೆಯ ಮೇಲೆ ಇನ್ನೊಂದು ಗುಂಪು. ಗೊರಸಿನ ಸಪ್ಪಳ ಕೇಳಿದ ಕೂಡಲೇ ಒಂದು ಗುಂಪಿನ ಹುಡುಗನೊಬ್ಬನು ಇನ್ನೊಂದು ಗುಂಪಿನಲ್ಲಿರುವ ರೈತ ಶಿವಪ್ಪನ ಮಗ ಸಿದ್ದಪ್ಪನನ್ನು ಕೂಗಿ ಕರೆದನು 'ಇಲ್ಲಿಯೇ ಬಾರೋ' ಎಂದು.

ತನ್ನ ಸ್ನೇಹಿತನ ಕರೆಯನ್ನು ಮನ್ನಿಸಿ ಸಿದ್ದಪ್ಪನು ಆಚೆಯ ಕಡೆಗೆ ದಾಟಲು ಓಣಿಯ ಮಧ್ಯದಲ್ಲಿ ಬರುವದಕ್ಕೂ ಸಾಹೇಬರ ಕುದುರೆಯು ರಭಸ ದಿಂದ ಬರುವದಕ್ಕೂ ತಾಳಮೇಳವಾಗಿ ಬಿಟ್ಟಿತು. ಕುದುರೆಯ ಕಾಲಿಗೆ ಸಿಕ್ಕ ಸಿದ್ದಪ್ಪನು ಚಿಟ್ಟನೇ ಚೀರಿದನು. ಪುಟಿದು ಆ ಕಡೆಗೆ ಬೀಳಲು ತಲೆಯೊಡೆದು ನೆತ್ತರು ಪುಟಿಯಹತ್ತಿತು. ಚಿಕ್ಕಮಕ್ಕಳು ಭಯಭ್ರಾಂತರಾಗಿ ಕೂಗತೊಡ ಗಲು ಸಾಹೇಬರ ಕುದುರೆ ತಟ್ಟನೆ ನಿಂತಿತು. ಹಿಂದಿನಿಂದ ರಭಸದಿಂದಲೇ ಬರುತ್ತಿರುವ ದೇಸೀ ಸಾಹೇಬನ ಕುದುರೆಯೂ ಗಕ್ಕನೆ ನಿಂತಿತು.

ಈ ಅಪಘಾತವನ್ನು ನೋಡಿದ ಶಿವಪ್ಪನು 'ಅಯ್ಯೋ ಮಗನೇ!' ಎನ್ನುತ್ತ ನೆಗೆದು ಬಂದನು. ಸಾಲೆಗೆ ಹೊರಟಿದ್ದ ರಾಮಾಶಾಸ್ತ್ರಿ 'ಅಯ್ಯೋ' ಎನ್ನುತ್ತ ಧಾವಿಸಿದರು. ಆದರೆ ಯಾರಿಗೂ ಹುಡುಗನನ್ನು ಎತ್ತಿಕೊಳ್ಳುವ ಧೈರ್ಯವಾಗಲಿಲ್ಲ. ಎಲ್ಲಿ ಸಾಹೇಬರು ಸಿಟ್ಟಿಗೇಳುವರೋ ಎಂಬ ಭಯವಿರ ಬೇಕು. ರಾಮಾಶಾಸ್ತ್ರಿಗೆ ಇದನ್ನು ತಡೆಯುವದಾಗಲಿಲ್ಲ. ಅವನು ಚಟ್ಟನೇ ಹುಡುಗನ ಹತ್ತಿರ ಹಾರಿ ಹೋಗಿ ತಲೆಯನ್ನು ಒತ್ತಿ ಹಿಡಿದು 'ನೀರು ತನ್ನಿರೋ ಬೇಗ. ಹುಡುಗ ಸಾಯುತ್ತಾನೆ' ಎಂದು ಕೂಗಿದನು.

ಇನ್ನೂ ಕುದುರೆಯ ಮೇಲೆ ಸೆಟೆದು ಕುಳಿತು ಸಾಹೇಬರು ತಮ್ಮ ಕೈ ಕೆಳಗಿನ ಆ ದೇಸೀ ಸಾಹೇಬನನ್ನು ಸನ್ನೆಮಾಡಿ ಕರೆದು ಇಂಗ್ಲಿಷ ಭಾಷೆಯಲ್ಲಿ "ಈ ಅಪಘಾತಕ್ಕಾಗಿ ನನಗೆ ಅತ್ಯಂತ ವಿಷಾದವಾಗಿದೆಯೆಂದು ಅವರಿಗೆ ಹೇಳು. ಆ ಹುಡುಗನಿಗೆ ಯೋಗ್ಯ ವಿಚಾರವಾಗಲಿ. ಆ ವೆಚ್ಚವನ್ನು ನಾನು ಸಹಿಸುತ್ತೇನೆ" ಎಂದು ಹೇಳಿ ಕುದುರೆಯ ಲಗಾಮನ್ನು ಜಗ್ಗಿ ತಂಬೂದ ಕಡೆಗೆ ರಭಸದಿಂದ ಸಾಗಿಬಿಟ್ಟರು.

ಸಾಹೇಬರು ಹೋದ ಕೂಡಲೇ ಅವನು ಬಂದು ಒಳ್ಳೇ ದರ್ಪದಿಂದ ನೆರೆದ ಜನರನ್ನು ಕುರಿತು ಅಬ್ಬರಿಸಿದನು: "ಕುದುರೆಯ ಕಾಲು ಬುಡಕ್ಕೆ ಬಂದು ಬೀಳಲು ಈ ಬದಮಾಷನಿಗೆ ಯಾರು ಹೇಳಿದ್ದರು? ಈ ಹುಡುಗನ ಸಲುವಾಗಿ ಸಾಹೇಬರ ವೇಳೆ ಹಾಳಾಗಿಬಿಟ್ಟಿತು."

ಹುಡುಗನ ವೇದನೆಯನ್ನು ಪೂರಾ ಅಲಕ್ಷಿಸಿ ಮಾತನಾಡುತ್ತಿರುವ

ಇವನ ಮಾತುಗಳನ್ನು ಕೇಳಿ ರಾಮಾಶಾಸ್ತ್ರಿಗೆ ಸಂತಾಪವಾಗಿಬಿಟ್ಟಿತು. ಹುಡುಗನ ಹಣೆಗೆ ಸೀರಿನ ಬಟ್ಟೆಯನ್ನು ಸುತ್ತುವದನ್ನು ಅಷ್ಟಕ್ಕೆ ನಿಲ್ಲಿಸಿ ಇವನನ್ನು ದುರುಗುಟ್ಟಿ ನೋಡಿ "ಈ ಹುಡುಗನು ಕುದುರೆಯ ಕಾಲ ಬುಡಕ್ಕೆ ತಾನಾಗಿಯೇ ಹೋಗಿ ಸಿಕ್ಕನೆಂದು ನಿಮ್ಮ ಅಭಿಪ್ರಾಯವೇ ಸಾಹೇಬರೆ? ಕುದುರೆಯ ಕಾಲ ಬುಡಕ್ಕೆ ಸಿಕ್ಕು ಸಾಯುವದು ಸಂತೋಷದ ವಿಷಯವೆಂದು ತಿಳಿದುಕೊಂಡಿದ್ದೀರಾ" ಎಂದುಬಿಟ್ಟನು.

ಈ ಮಾತುಗಳನ್ನು ಸಹಿಸುವದು ದೇಸೀ ಸಾಹೇಬರಿಗೆ ಅಸಾಧ್ಯವಾಗಿಬಿಟ್ಟಿತು. ಅವರಿಗೆ ತೀರಾ ಅಪಮಾನವೆನ್ನಿಸಿರಬೇಕು. ಆದಕ್ಕೆಂತಲೇ ಅವರು ರಭಸದಿಂದ ಒಂದು ಹೆಜ್ಜೆ ಮುಂದೆ ಬಂದು "ಎದುರು ಮಾತನಾಡುತ್ತೀಯಾ ಬದಮಾಷ್!" ಎಂದು ರಾಮಾಶಾಸ್ತ್ರಿಯ ಕಪಾಳಿಗೊಂದು ಏಟುಕೊಟ್ಟು ಹೇಳಿದರು: "ಈ ಹುಡುಗನನ್ನು ಹೊತ್ತುಕೊಂಡು ಹೋಗಿರಿ. ಏನಾದರೂ ಬೊಬ್ಬಾಟ ಮಾಡಿದರೆ ನಿಮ್ಮನ್ನೆಲ್ಲ ತುರಂಗಕ್ಕೆ ಕಳಿಸಿಬಿಡುತ್ತೇನೆ. ಸಾಹೇಬರು ಏನುಹೇಳಿದರೆಂಬುದು ನಿಮಗೆ ಗೊತ್ತೆ? ನೀವೇನಾದರೂ ಗೊಂದಲ ಹಾಕಿದರೆ ನಿಮ್ಮನ್ನೆಲ್ಲ ಗುಂಡಿನಿಂದ ಸುಟ್ಟುಬಿಡಲು ಹೇಳಿದ್ದಾರೆ. ತಿಳಿಯಿತೆ?" ಎಂದು ಈ ಸಾಹೇಬರು ಆ ಸಾಹೇಬರ ಮಾತುಗಳನ್ನು ವಿಪರ್ಯಸ್ತವಾಗಿ ಹೇಳಿದರು. ಸಾಹೇಬರ ಈ ರೌದ್ರಾವತಾರವನ್ನು ನೋಡಿದ ಆ ಹುಡುಗನ ತಂದೆ "ತಪ್ಪು ನನ್ನ ಮಗನದು ಸಾಹೇಬರೆ! ಅವನು ಹೋಗಿ ಕಾಲುಬಡಕ್ಕೆ ಬೀಳಬಾರದಾಗಿತ್ತು. ಪಾಪ! ಸಾಹೇಬರ ಕುದುರೆಯ ಕಾಲಿಗೆ ನೋವಾಯಿತೇನೋ" ಎನ್ನುತ್ತ ತನ್ನ ಮಗನ ಬೆನ್ನಮೇಲೆ ಗುದ್ದುತ್ತ ಮನೆಯ ಕಡೆಗೆ ಎಳೆಯತೊಡಗಿದನು. ಇದನ್ನು ನೋಡಿದ ರಾಮಾಶಾಸ್ತ್ರಿ

"ಕೂಸನ್ನು ಹೊಡೆಯುತ್ತೀಯಾಕೋ ಸಿವಪ್ಪ! ಸಾಹೇಬರ ಕುದುರೆ ಕೊಲ್ಲಲಿಲ್ಲವೆಂದು ನೀನು ಕೊಲ್ಲುತ್ತೀಯಾ?" ಎನ್ನಲು "ನಿಮಗೆ ತಿಳಿಯುವದಿಲ್ಲ ಬರ್ರಿ ಮಾಸ್ತರರೆ!" ಎಂದು ಸಿವಪ್ಪನು ಕೂಗುತ್ತ ಗುಂಪಿನಿಂದ ಮರೆಯಾಗಿಬಿಟ್ಟನು

ರಾಮಾಶಾಸ್ತ್ರಿಗೆ ಈ ಘಟನೆಯನ್ನು ನೋಡಿದಾಗ ಅವನ ಹೃದಯದಲ್ಲಿ ಅನೇಕ ವಿಚಾರತರಂಗಗಳೆದ್ದವು. "ಏನಿದು ಈ ರೀತಿ? ಆಳುವ ಜನರಿಗೆ ಪ್ರಜೆಗಳ ಜೀವವೆಂದರೆ ಕಾಲುಕಸವೆ? ಸಿವಪ್ಪನು ಹಾಗೆ ಮಾಡಿದ್ದು ಏನನ್ನು ಸೂಚಿಸುತ್ತಿದೆ? ಭಯ! ಭಯವೇ ಇದರ ಮೂಲ. ಈ ಭಯದ ಉಚ್ಚಾಟನೆಯಾಗಲೇಬೇಕು. ಆದರೆ ಹೇಗೆ? ಈ ಭಯನಿವಾರಣೆಯಾಗದಿದ್ದರೆ ಮುಂದಿನ ಪೀಳಿಗೆಯ ಗತಿಯೇನು? ಕಾಲಬುಡಕ್ಕೆ ಸಿಕ್ಕಿ ಸತ್ತುಹೋಗುವದೇ ಅವರ

ಹಣೆಯುಬರಹವಾದೀತು. ಈ ಭಯವನ್ನು ಬೇರುಸಹಿತ ಕಿತ್ತಿ ಒಗೆಯಬೇಕು. ನನ್ನವಿದ್ಯಾರ್ಥಿಗಳಿಗೆ ನಾನು ಕೊಡುವ ಗುರುಮಂತ್ರವು ಇದೇ ಆಗಬೇಕು"

ರಾಮಾಶಾಸ್ತ್ರಿ ಅಂದಿನ ದಿನವೇ ಈ ನಿರ್ಧಾರ ಮಾಡಿದನು. ಆದರೆ ಈ ನಿರ್ಧಾರವು ತನ್ನೊಬ್ಬನಿಂದಲೇ ಹೇಗೆ ಸಾಧ್ಯವಾಗಬಹುದೆಂದು ಅವನಿಗೆ ತಿಳಿಯದಾಯಿತು. ಇದಕ್ಕೊಬ್ಬ ಮಾಂತ್ರಿಕ ಬೇಕು. ಸಮರ್ಥನಾದ ಕಾರಣಿಕ ಪುರುಷ ಬೇಕು. ಜನರ ಜೀವನಾಡಿಯನ್ನು ಹಿಡಿದು ಮಿಡಿಯುವ ಮಹತಿವೆತ್ತ ಮಹಾಪುರುಷನು ಬೇಕು. ಹಳ್ಳಿಯ ಜನಗಳಲ್ಲಿ ಹರಿದುಬಂದ ಭಯದ ರಕ್ತವು ನಾಳನಾಳದಲ್ಲಿ ಹರಿಯುತ್ತಿದೆ. ಜೀವನದ ಕಹಿಗೆ ಇದೇ ಮೂಲವಾಗಿದೆ. ಈ ಕಹಿಯನ್ನು ಸಮೂಲವಾಗಿ ತೊಳೆದುಬಿಡಲು ನನ್ನೊಬ್ಬನ ಕೈಯಿಂದ ಆಗ ಬೇಕಾದುದೆಷ್ಟು ? ಇದಕ್ಕೆ ಜನವೆಲ್ಲ ನಿರ್ಧಾರಮಾಡಬೇಕು. ಜನರ ಹೃದಯ ದಿಂದಲೇ ಇದು ಏಳಬೇಕು. ಎದ್ದೀತೇ ? ಏಳಬಹುದೇ ? ನಮ್ಮ ಜನರು ಮನುಷ್ಯರಾಗಿ ಬಾಳಬಹುದೆ ? ಎಂದು ವಿಚಾರಿಸಿದ ರಾಮಾಶಾಸ್ತ್ರಿಗೆ ದಿನ ದಿನವೂ ಈ ಮಾತು ಮರುಕಳಿಸಿ ಬರಹತ್ತಿತ್ತು.

ಆ ಹೊತ್ತು ರಾಮಾಶಾಸ್ತ್ರಿ ಸಾಲೆಗೆ ಹೋಗಿ ಫಳದ ಮೇಲೆ ದೊಡ್ಡ ಅಕ್ಷರಗಳಿಂದ "ನಾವು ಯಾರಿಗೂ ಅಂಜಬಾರದು. ದೇವರಿಗೆ ಅಂಜಬೇಕು" ಎಂದು ಬರೆದು ಹುಡುಗರಿಗೆ ಅದನ್ನು ಅನೇಕ ಸಲ ಬರೆಯಲು ಹೇಳಿದನು. ಸಾಲೆ ಬಿಟ್ಟ ಕೂಡಲೇ ಹುಡುಗರೆಲ್ಲ "ನಾವು ಯಾರಿಗೂ ಅಂಜಬಾರದು. ದೇವರಿಗೆ ಅಂಜಬೇಕು" ಎನ್ನುತ್ತ ಸಾಗತೊಡಗಿದರು.

ರಾಮಾಶಾಸ್ತ್ರಿಗೆ ಇದರಿಂದ ತುಸು ಸಮಾಧಾನವಾಯಿತು. ತನ್ನ ಮುಂದಿನ ಆಯುಷ್ಯದ ಬೀಜಮಂತ್ರವನ್ನು ಅವನು ಈ ಮಾತುಗಳಲ್ಲಿ ಕಂಡು ಕೊಂಡನು.

೭

"ನಾವು ಮನುಷ್ಯರು. ಕಾಡುಮೃಗಗಳಲ್ಲ. ಆದರೆ ನಾವು ಈ ಮಾತನ್ನು ಮರೆಯತೊಡಗಿದ್ದೇವೆ. ಇದನ್ನು ಮರೆತದ್ದರಿಂದಲೇ ನಾವು ಕಾಡುಪಶು ಗಳಂತೆ ವರ್ತಿಸತೊಡಗಿದ್ದೇವೆ. ಈ ಭಾವ ಸಮೂಲ ನಾಶವಾಗಬೇಕು. ನಾವೆಲ್ಲ ಭಾರತೀಯರು. ನಮಗೊಂದು ದಿವ್ಯ ಸಂಸ್ಕೃತಿಯಿದೆ. ಈ ಸಂಸ್ಕೃತಿ ಯನ್ನು ನಾವು ನೆನೆಯಬೇಕು. ನಾವು ಮಾನವರು ನಮ್ಮನ್ನಾಳುವವರಾದ

ಪರಕೀಯರೂ ಮನುಷ್ಯರು. ಆದರೆ ಅವರು ಇಂದು ಮನುಷ್ಯರಾಗಿ ಮನುಷ್ಯನನ್ನು ಗೌರವಿಸುವದಿಲ್ಲ. ಅವರು ನಮ್ಮ ಸ್ವಾತಂತ್ರ್ಯ ಹರಣಮಾಡಿ ಸ್ವಚ್ಛಂದದಿಂದ ವರ್ತಿಸಹತ್ತಿದ್ದಾರೆ. ದಬ್ಬಾಳಿಕೆಯಿಂದ ಭಾರತೀಯರ ಸತ್ವಹರಣ ಮಾಡತೊಡಗಿದ್ದಾರೆ. ನಮ್ಮ ಆಕಳ ಹಾಲನ್ನು ತಾವೇ ಕುಡಿದು ನಮ್ಮನ್ನು ಬಡವರನ್ನಾಗಿ ಮಾಡತೊಡಗಿದ್ದಾರೆ. ಆಕಳು ನಮ್ಮದು ಹಾಲು ನಮ್ಮದು. ಕುಡಿದು ಪುಷ್ಟರಾಗುವವರು ಬೇರೆಯೆ. ಈ ಶೋಷಣೆ ನಿಲ್ಲಬೇಕು. ಇದು ನಿಲ್ಲಬೇಕಾದರೆ ನಾವೆಲ್ಲ ಒಗ್ಗಟ್ಟಿನಿಂದ ಬಾಳಬೇಕು. ನಾವೆಲ್ಲ ಒಂದು. ನಾವೆಲ್ಲ ಭಾರತೀಯರು. ಭರತಖಂಡದಲ್ಲಿ ಬಾಳುವ ಹಿಂದುವೂ ಭಾರತೀಯನೇ. ಮುಸಲ್ಮಾನನೂ ಭಾರತೀಯನೇ. ಉಳಿದ ಪಂಥ–ಪಂಗಡದವರೂ ಭಾರತೀಯರೇ.

"ನಾವು ಭಯವಿಹ್ವಲರಾಗಿ ಬಾಳಿದರೆ ಏನು ಬಂತು ? ನಾವು ಯಾರಿಗಾಗಿ ಭಯಪಡಬೇಕು ? ಬಣ್ಣ ಬದಲಿದ್ದ ಮನುಷ್ಯನು ನಮ್ಮನ್ನು ಅದು ಮುತ್ತಿರುವದಕ್ಕಾಗಿ ನಾವು ಭಯಪಡಬೇಕೆ? ಈ ಭಯವನ್ನು ತೊರೆಯಿರಿ. ಮನುಷ್ಯರಾಗಿ ಬಾಳಿರಿ. ಭಯದಿಂದ ಭಯನಿವಾರಣೆಯಾಗಲಾರದು. ನೀವೆಲ್ಲ ದರಿದ್ರರಾಗಿರುವಿರೆಂದು ಎದೆಗುಂದುವದು ಬೇಡ. ಈ ದಾರಿದ್ರ್ಯ ಹೋಗಬೇಕಾದರೆ ಶೋಷಣೆ ನಿಲ್ಲಬೇಕು. ಈ ಶೋಷಣೆಯನ್ನು ಪ್ರತಿಭಟಿಸಿರಿ. ನಾವೆಲ್ಲ ಒಂದು ಎಂದು ಘೋಷಿಸಿರಿ. ಒಕ್ಕಟ್ಟೇ ನಾಡಿನ ಬಲ. ಅದೇ ನಮ್ಮನ್ನು ಉದ್ಧಾರ ಮಾಡುವದು. ಮನುಷ್ಯರಾಗಿ ಬಾಳಿರಿ. ಮನುಷ್ಯನನ್ನು ಗೌರವಿಸಿರಿ. ಮಾನವೀಯತೆಯನ್ನು ಅರಿತುಕೊಳ್ಳಿರಿ. ಭಯವನ್ನು ಬೇರು ಸಹಿತ ಕಿತ್ತೊಗೆದು ಧೈರ್ಯವಂತರಾಗಿ ಬಾಳಿರಿ."

ಈ ಸಂದೇಶ ಕಾರಣಪುರುಷನ ದಿವ್ಯವಾಣಿಯಾಗಿತ್ತು. ಈ ವಾಣಿ ಭಾರತದೇಶದ ಮೂಲೆ ಮೂಲೆಗಳಲ್ಲಿ ದುಮಿದುಮಿಸಹತ್ತಿತು. ಜನರು ಮಂತ್ರಮುಗ್ಧರಾದವರಂತೆ ಈ ದಿವ್ಯವಾಣಿಯನ್ನು ಅಂತಃಕರಣದಲ್ಲಿ ಅಳವಡಿಸಿಕೊಳ್ಳಹತ್ತಿದರು.

ಗಂಗನಹಳ್ಳಿಯ ಕನ್ನಡ ಶಿಕ್ಷಕರಾದ ರಾಮಾಶಾಸ್ತ್ರಿಗಳಿಗಂತೂ ಈ ದಿವ್ಯವಾಣಿ ಗುರೂಪದೇಶವೇ ಆಗಿಬಿಟ್ಟಿತು. ಅವರು ಆ ದಿವ್ಯಸಂದೇಶವನ್ನು ಹಳ್ಳಿಯಲ್ಲೆಲ್ಲ ಬೀರತೊಡಗಿದರು. ಮೊದಮೊದಲು ಈ ಹಳ್ಳಿಯ ಜನರಿಗೆ ಇದರಿಂದ ಯಾವ ಪರಿಣಾಮವೂ ಆಗುತ್ತಿರಲಿಲ್ಲ. ಬದಲಾಗಿ ಅವರಲ್ಲಿ ಹೆಚ್ಚಿನ ಭಯವೇ ಮೂಡಹತ್ತಿತು.

"ಇಂತಹ ಮಾತುಗಳಿಂದ ಯಾವ ಪ್ರಯೋಜನವಾದೀತು ಮಾಸ್ತರರೆ?

ಈ ಮಾತುಗಳನ್ನು ಕೇಳಿದ ಸಾಹೇಬಜನ ಸುಮ್ಮನೇ ಕುಳಿತೀತೆ? ಗುಂಡಿನಿಂದ ಸುಟ್ಟುಬಿಟ್ಟಾರು!"

"ಗುಂಡಿನಿಂದ ಎಷ್ಟು ಜನರನ್ನು ಸುಡಬಹುದು ಹೇಳಿರಿ. ಎಲ್ಲರನ್ನೂ ಕೊಂದು ಅವರು ಯಾರನ್ನು ಆಳಬೇಕು? ಕಾಡುನೆಲವನ್ನು ಆಳಿದರೆ ಅವರಿಗೆ ಯಾವ ಫಲ?"

"ಆದರೆ ಇಂತಹ ಮಾತುಗಳಿಂದ ಅವರ ಹಳಿಕೆಯನ್ನು ನಿಲ್ಲಿಸಬಹುದೆ? ಇದು ಹುಚ್ಚತನ. ಇಲ್ಲದ ತೊಂದರೆಯನ್ನು ಮೈಮೇಲೆ ಹಾಕಿಕೊಂಡಂತೆ."

"ಇದು ಕೂಡಲೇ ಸಾಧ್ಯವಾಗಲಾರದೆಂದು ಪ್ರಯತ್ನವನ್ನು ಬಿಡಬೇಕೆ! ನಮ್ಮ ಮುಂದಿನ ಪೀಳಿಗೆಯವರು ನಮ್ಮನ್ನು ನಿರ್ವೀರ್ಯರೆಂದು ಶಪಿಸಬಾರದಷ್ಟೆ. ಅವರ ಆಳಿಕೆ ನಿಲ್ಲಲಿ ಬಿಡಲಿ. ಆ ಮಾತು ನಮಗೆ ಬೇಡ. ಆದರೆ ನಾವು ಮಾನವರಾಗಿ ಬಾಳಬೇಕಲ್ಲವೆ? ಧೈರ್ಯವಂತರಾಗಿ ನಿಲ್ಲಬೇಕಲ್ಲವೆ?"

"ಓ! ಧೈರ್ಯದ ಮಾತೇ! ಬಂದೂಕಿನ ಮುಂದೆ ಯಾವ ಧೈರ್ಯ ನಿಂತೀತು!"

ಇಂತಹ ಮಾತುಗಳಿಗೆ ರಾಮಾಶಾಸ್ತ್ರಿಗಳು ಆ ದಿವ್ಯವಾಣಿಯಿಂದಲೇ ಉತ್ತರ ಕೊಡುತ್ತಿದ್ದರು. ಆ ಮಾತುಗಳನ್ನು ಓದಿ ತೋರಿಸುತ್ತಿದ್ದರು.

"ನಮ್ಮನ್ನಾಳುವವರು ಶಸ್ತ್ರ ಸುಸಜ್ಜಿತರಾಗಿದ್ದಾರೆ. ಶಸ್ತ್ರಗಳ ಬಲದಿಂದ ನಮ್ಮನ್ನು ಹತ್ತಿಕ್ಕಲು ಅವರು ಪ್ರಯತ್ನಿಸುತ್ತಾರೆ. ಆದರೆ ಸತ್ಯದ ಮುಂದೆ ಈ ಬಂದೂಕುಗಳು ನಿಲ್ಲಲಾರವು. ಅವುಗಳಿಂದ ಹಾರುವ ಗುಂಡು ಹುಸಿಯಾಗಿಯೇ ನಿಲ್ಲುವದು. ಸತ್ಯವೆಂಬುದು ಅಬಾಧಿತವಾಗಿ ನಿಲ್ಲುವ ವಸ್ತು, ನಮ್ಮ ಹೋರಾಟವು ಈ ಸತ್ಯಕ್ಕಾಗಿಯೇ ನಡೆದಿದೆ. ಸತ್ಯವೆಂದಿಗೂ ಸತ್ಯ. ಈ ಸತ್ಯವನ್ನು ಸ್ಥಾಪಿಸುವದು ದೇವರ ಆಜ್ಞೆಯನ್ನು ನೆರವೇರಿಸಿದಂತೆಯೆ. ಇದಕ್ಕಾಗಿ ನಮಗೆ ಶಸ್ತ್ರಗಳು ಬೇಡ. ಸತ್ಯದ ಹೋರಾಟದಲ್ಲಿ ಅಹಿಂಸೆಯೇ ದಿವ್ಯವಾದ ಅಸ್ತ್ರ. ಸತ್ಯಾಗ್ರಹವೇ ಬತ್ತಳಿಕೆ. ಇದರ ಮುಂದೆ ಹಿಂಸೆ ನಿಲ್ಲಲಾರದು. ಅದು ಕ್ರೂರವಾಗಬಹುದು. ಆದರೆ ಹಿಂಸೆ ಎಂದಿಗೂ ಸತ್ಯವನ್ನು ಜಯಿಸಲಾರದು. ಆದುದರಿಂದ ನೀವು ಸತ್ಯದ ಬಾವುಟವನ್ನು ಎತ್ತಿ ಹಿಡಿಯಿರಿ. ಅದಕ್ಕಾಗಿ ತ್ಯಾಗ ಮಾಡಲು ಸಿದ್ಧರಾಗಿರಿ. ಬಲಿದಾನ ಮಾಡುವ ಪ್ರಸಂಗ ಬಂದರೆ ಅದು ದೇವನ ಕರೆಯೆಂದು ಮನ್ನಿಸಿರಿ. ಇದಕ್ಕೆ ವಿಪರೀತವಾಗಿ ಆಚರಿಸುವದು ಪಾಪ. ಈ ಪಾಪವನ್ನು ನಿಮ್ಮ ಪೀಳಿಗೆಯೂ ಅನುಭವಿಸೀತು."

ರಾಮಾಶಾಸ್ತ್ರಿಗಳು ಈ ಮಾತುಗಳನ್ನು ಹೇಳುವಾಗ ಆ ಮಟ್ಟಿಗೆ ಜನ

ರಲ್ಲಿ ಒಂದು ಪ್ರಕಾಶ ಬಿದ್ದಂತಾಗುತ್ತಿತ್ತು. ಆದರೆ ಆ ಪ್ರಕಾಶದ ಬೆಳಕು ನೆಲೆಯಾಗಿ ನಿಲ್ಲುತ್ತಿರಲಿಲ್ಲ. ಇಲ್ಲದ ಸಂಶಯ, ಭಯಗಳಿಂದ ಜನರು ಪೀಡಿತ ರಾಗುತ್ತಿದ್ದರು.

ರಾಮಾಶಾಸ್ತ್ರಿಗಳು ಇದರಿಂದ ಹತವೀರ್ಯರಾಗುತ್ತಿರಲಿಲ್ಲ. ಇಂತಹ ಮಾತುಗಳನ್ನು ಕೇಳಿ ಅವರಲ್ಲಿ ಒಂದು ಹಟವೇ ಅರಳಿ ನಿಲ್ಲುತ್ತಿತ್ತು. ಈ ಹಟವನ್ನು ಅವರು ಸಾಧಿಸಹತ್ತಿದರು. ತಮ್ಮ ತತ್ವಗಳನ್ನು ಆ ದಿವ್ಯವಾಣಿ ಅರಗಿಸಿಕೊಂಡು ಅದನ್ನು ತಮ್ಮ ವಿದ್ಯಾರ್ಥಿಗಳಲ್ಲಿ ಬಿಂಬಿಸಹತ್ತಿದರು. ಅವರಿಗೆ ಹಿರಿಯರಿಗಿಂತ ಕಿರಿಯರ ಮೇಲೆಯೇ ಹೆಚ್ಚಿನ ವಿಶ್ವಾಸ ಮೂಡತೊಡಗಿತು. ಅವರು ತಮ್ಮ ಶಕ್ತಿಪ್ರತಿಪಾದನೆಗಳನ್ನೆಲ್ಲ ವಿದ್ಯಾರ್ಥಿಗಳಲ್ಲಿ ಕೇಂದ್ರೀಕರಿಸಹತ್ತಿದರು. ಅವರ ಹೃದಯಗಳನ್ನು ಸಾವಕಾಶವಾಗಿಯಾದರೂ ನಿರ್ಧಾರವಾಗಿ ಮಾರ್ಪಡಿಸಹತ್ತಿದರು. ಅವರ ಹೃದಯದ ನೆಲಗಟ್ಟಣೆ ಶಾಶ್ವತವಾಗಿ ನಿಲ್ಲುವದನ್ನು ಕಂಡು ಅವರಿಗೆ ಬಾಳು ಸಾರ್ಥಕವೆನ್ನಿಸತೊಡಗಿತು.

ರಾಮಾಶಾಸ್ತ್ರಿಗಳ ಈ ಗುರೂಪದೇಶವು ಅವ್ಯಾಹತವಾಗಿ ಅಖಂಡ ಇಪ್ಪತ್ತು ವರ್ಷಗಳವರೆಗೆ ಸಾಗಿತು. ಅವರ ಕೈಯಲ್ಲಿ ಪಳಗಿದ ವಿದ್ಯಾರ್ಥಿಗಳು ಈಗ ಯುವಕರಾಗಿ ನಾಡಿನ ಚಲನವಲನೆಗಳನ್ನು ನಿರೀಕ್ಷಿಸುವ ಧೀರರಾಗಿದ್ದಾರೆ. ಈ ಮಾರ್ಪಾಟವು ಕೇವಲ ಗಂಗನಹಳ್ಳಿಗೇ ಮೀಸಲಾಗಿರಲಿಲ್ಲ. ಅದೊಂದು ನಾಡಿನ ಭಾಗ್ಯವಾಗಿಬಿಟ್ಟಿತು. ಎಲ್ಲಿ ನೋಡಿದಲ್ಲಿ ಯುವಕರು ಚೇತನೆಯ ಹಸಿಗಳಂತೆ ಉತ್ಸಾಹ ತುಂಬಿ ಹರಿದಾಡತೊಡಗಿದರು. ಇದಕ್ಕೆ ಕಾರಣಪುರುಷನ ಅದ್ಭುತವಾಣಿ ಮೂಲಕಾರಣವಾಗಿತ್ತು. ನಾಡಿನ ಜನರ ಹೃದಯಗಳನ್ನು ಸೂರೆಗೊಂಡ ಅವನ ವ್ಯಕ್ತಿತ್ವಕ್ಕೆ ಇಡಿಯ ನಾಡೇ ಶರಣು ಹೋಗಿಬಿಟ್ಟಿತು. ಆ ಉದ್ಧಾರಕರ್ತನು ತುಳಿಯುತ್ತಿರುವ ಹಾದಿಯೇ ರಾಜಮಾರ್ಗವಾಗಿಬಿಟ್ಟಿತು. ಅವನ ಮಾತೇ ವೇದವಾಕ್ಯವಾಗಿಬಿಟ್ಟಿತು. ಮೇಕೆಗಳಂತೆ ಅರಚುತ್ತಿದ್ದ ಜನರು ಅವನ ದಿವ್ಯವಾಣಿಯಲ್ಲಿ ಸ್ಫೂರ್ತಿಗೊಂಡು ಸಿಂಹಗಳಂತೆ ಗರ್ಜಿಸತೊಡಗಿದರು. ಮುದುಕರು ಯುವಕರಾದರು. ಯುವಕರು ಚೈತನ್ಯದ ಹೊಳೆಯಾದರು. ಆ ರಭಸವಾದ ಪ್ರವಾಹದಲ್ಲಿ ಸಮಸ್ತವಾದ ಜನಾಂಗವೇ ತೇಲಿಹೋಗಹತ್ತಿತು.

"ನನ್ನ ನಾಡಿನ ಯುವಕರೆ! ದಾಸ್ಯಶೃಂಖಲೆಯಲ್ಲಿ ಬಂಧಿತಳಾದ ನಿಮ್ಮ ತಾಯಿಯನ್ನು ನೆನೆಯಿರಿ. ಅವಳ ಬಂಧನವಿಮೋಚನೆಗಾಗಿ ತ್ಯಾಗ ಬಲಿದಾನಗಳಿಗೆ ಸಿದ್ಧರಾಗಿರಿ. ನಾಡನ್ನು ಉಳಿಸುವ ಪುಣ್ಯ ನಿಮ್ಮದಾಗಲಿ. ನೀವು ಹಳ್ಳಿಗಳನ್ನು ಕಡೆಗಣಿಸಿದ್ದೀರಿ. ನಮ್ಮ ರಾಷ್ಟ್ರದ ಜೀವನಾಡಿಯು ಹಳ್ಳಿಗಳಲ್ಲಿಯೇ

ಮಿಡಿಯುತ್ತದೆ. ಈ ಹಳ್ಳಿಗಳ ಉದ್ಧಾರವಾಗದೆ ನಮ್ಮ ಮಹಾರಾಷ್ಟ್ರವು ಪ್ರಗತಿಯನ್ನು ಸಾಧಿಸಲಾರದು. ಅಜ್ಞಾನ, ಭಯಗಳಲ್ಲಿ ಮುಳುಗಿದ ಹಳ್ಳಿಗಳನ್ನು ಕಾಪಾಡಿರಿ. ನೀವೆಲ್ಲ ಹಳ್ಳಿಗಳಿಗೆ ಹೋಗಿರಿ. ಸರಳ ಜೀವನವನ್ನು ಸಾಗಿಸಿರಿ. ಈ ವಿದ್ಯೆ ನಿಮ್ಮನ್ನು ಗುಲಾಮರನ್ನಾಗಿ ಮಾಡಿದೆ. ನೀವು ಗುಲಾಮರಾಗಿಯೇ ಬಾಳಬೇಕೆ? ನಿಮ್ಮ ಜೀವನಕ್ಕೆ ಯಾವ ಅರ್ಥವೂ ಇಲ್ಲವೆ? ಈ ವಿದ್ಯೆಯ ಮೋಹವನ್ನು ತೊರೆಯಿರಿ. ಈ ವಿದ್ಯೆ ನಿಮಗೆ ಅಧಿಕಾರವನ್ನು ದಯಪಾಲಿಸಬಹುದು. ಆದರೆ ಈ ಅಧಿಕಾರದಿಂದ ನೀವು ನಿಮ್ಮವರ ರಕ್ತ ಶೋಷಣೆಯನ್ನೇ ಮಾಡುತ್ತಿರುವಿರೆಂಬುದನ್ನು ನೆನೆಯಿರಿ. ಈ ಶೋಷಣೆ ನಿಲ್ಲಬೇಕು. ಇದಕ್ಕಾಗಿ ಇಂದೆಯೇ ಪ್ರತಿಜ್ಞೆಯನ್ನು ತೆಗೆದುಕೊಳ್ಳಿರಿ. ಕಾಲೇಜುಗಳಿಂದ ಹೊರಬಿದ್ದು ಹಳ್ಳಿಗಳಿಗೆ ಹೋಗಿರಿ. ನಿಮ್ಮ ಕಾರ್ಯ ಹಳ್ಳಿಯಲ್ಲಿದೆ. ಸುಖಜೀವನವನ್ನು ಸಾಗಿಸುವದರಲ್ಲಿ ಇಲ್ಲ. ಹಂಗಿನ ಅರಮನೆಯಲ್ಲಿ ನಿಮಗೆ ಯಾವ ಸುಖ ಸಿಕ್ಕೀತು? ರಾಷ್ಟ್ರವು ಯುವಕ ಜನಾಂಗದ ಮೋರೆ ನೋಡುತ್ತಿದೆ. ನೀವು ತಾಯಿಯ ಮೊರೆಯನ್ನು ಕೇಳಲಾರಿರಾ? ರಾಷ್ಟ್ರೀಯ ದೀಕ್ಷೆಯನ್ನು ತೆಗೆದುಕೊಂಡು ಘನವಂತರಾಗಿ ಬಾಳಲಾರಿರಾ? ಪರಕೀಯರ ಉನ್ಮತ್ತ ಹೆಜ್ಜೆಗಳ ತುಳಿತದಲ್ಲಿ ಸಿಕ್ಕ ತಾಯಿ ಜಿಬ್ಬೆಯಾಗಿದ್ದಾಳೆ. ಅವಳ ವಿಮೋಚನೆಯು ನಿಮ್ಮಿಂದ ಆಗಲಾರದೆ? ಖಂಡಿತವಾಗಿ ಆಗುತ್ತದೆ. ನೀವು ನಿರ್ಬಲರಲ್ಲ. ನಿಮ್ಮಲ್ಲಿ ಶಕ್ತಿಯಿದೆ. ಧೈರ್ಯವಿದೆ. ಇವನ್ನು ಬಳಸಿಕೊಂಡರೆ ನಿಮ್ಮಿಂದ ಆಗದ ಕೆಲಸವಿಲ್ಲ. ನೀವು ಇಂದೇ ಪ್ರತಿಜ್ಞಾಬದ್ಧರಾಗಿರಿ."

ಈ ದಿವ್ಯಸಂದೇಶದ ಅಮರವಾಣಿಯನ್ನು ಓದಿದ ರಾಮಾಶಾಸ್ತ್ರಿಗಳಿಗೆ ತಟ್ಟನೇ ತಮ್ಮ ಹಿರಿಯ ಮಗನಾದ ವಾಸುದೇವನ ನೆನಪಾಯಿತು. ತಮ್ಮ ಕೈಯಿಂದ ಈಗಲೇ ರಾಷ್ಟ್ರೀಯ ದೀಕ್ಷೆಯನ್ನು ತೆಗೆದುಕೊಂಡ ಮಗನು ಈ ಮಾತುಗಳನ್ನು ಕೇಳಿ ಕಾಲೇಜದಲ್ಲಿ ಉಳಿಯಬಹುದೇ? ಎಂಬ ಸಂದೇಹ ಬರತೊಡಗಿತು. ಅವನು ಕಾಲೇಜಿನಲ್ಲಿ ನಿಲ್ಲಲಾರನೆಂಬ ಮಾತು ಅವರಿಗೆ ಖಂಡಿತವಾಗಹತ್ತಿತು.

ರಾಮಾಶಾಸ್ತ್ರಿಗಳ ಸಂದೇಹ ನಿಜವೇ ಆಯಿತು.

ಆ ಹೊತ್ತು ಸಾಯಂಕಾಲ ಆರು ಗಂಟೆಯ ಸುಮಾರಿಗೆ ವಾಸುದೇವನು ತನ್ನ ಟ್ರಂಕು, ಹಾಸಿಗೆಯ ಸುರುಳಿಯನ್ನು ತಾನೇ ಹೊತ್ತುಕೊಂಡು ಮನೆಯೊಳಗೆ ಕಾಲಿಟ್ಟಾಗ ರಾಮಾಶಾಸ್ತ್ರಿಗಳು ಚಟ್ಟನೇ ಎದ್ದು,

"ಏನು ವಾಸೂ! ಪತ್ರವನ್ನು ಬರೆಯದೆ ಒಮ್ಮೆಲೇ ಬಂದುಬಿಟ್ಟೆಯಲ್ಲ. ಈ ಸಾಮಾನುಗಳನ್ನು ಯಾರ ಮೇಲಾದರೂ ಹೊರಿಸಿಕೊಂಡು

ಬರಬಾರದೆ ?" ಎನ್ನುತ್ತ ಭಾರವನ್ನು ಇಳಿಸಿಕೊಂಡರು.

"ನಮ್ಮ ಭಾರವನ್ನು ನಾವೇ ಹೊರಬೇಕೆಂದು ನೀನು ಹೇಳಿದ ಮಾತನ್ನು ನಾನು ಇಷ್ಟು ಬೇಗನೆ ಮರೆಯಬೇಕೇ ತಾತ್ಯಾ!" ಎನ್ನುತ್ತ ವಾಸುದೇವನು ತಂದೆಯ ಕಾಲಿಗೆರಗಿದನು.

ಮಗನ ದನಿಯನ್ನು ಕೇಳಿ ಸೀತಮ್ಮನವರು ಒಮ್ಮೆಲೆ ಹೊರಬಂದು "ವಾಸೂ ಬಂದನೇ" ಎನ್ನುತ್ತ ಸಂತೋಷಭರಿತರಾದರು. ಉದ್ದವಾದ ನೆಹರು ಶರ್ಟು, ಬಿಳಿಯ ಟೊಪ್ಪಿಗೆಗಳನ್ನು ಧರಿಸಿದ ಹರಯದ ಮಗನನ್ನು ಕಂಡಾಗ ಅವರಿಗೆ ಬಹಳ ಅಭಿಮಾನವೆನ್ನಿಸಿತು. ಮಗನು ಕಾಲಿಗೆ ಬಿದ್ದಾಗಲಂತೂ ಅವರ ಕಣ್ಣುಗಳಿಂದ ಎರಡು ಹನಿಗಳು ಉದುರಿದವು.

ಅಡಿಗೆಯ ಮನೆಯಲ್ಲಿ ವಾಸುದೇವನು ಫಲಾಹಾರ ತೆಗೆದುಕೊಳ್ಳುತ್ತಿರುವಾಗ ರಾಮಾಶಾಸ್ತ್ರಿಗಳೂ ಹತ್ತಿರ ಕುಳಿತರು. ಅವನ ತಿನಿಸು ಮುಗಿಯುತ್ತಲೇ ಅವರು ಕುತೂಹಲರಾಗಿ "ಒಮ್ಮೆಲೇ ಏನು ಕಾರಣ ಬಂದುಬಿಟ್ಟೆ ವಾಸೂ!" ಎಂದು ಕೇಳಿದರು. ತಮ್ಮ ಸಂದೇಹ ನಿವೃತ್ತಿಗಾಗಿಯೇ ಈ ಪ್ರಶ್ನೆ ಇದ್ದಿತು.

"ಮುಂದಿನ ತಿಂಗಳವೇ ನಿನ್ನ ಪರೀಕ್ಷೆಯೆಂದು ಹೇಳುತ್ತಿದ್ದರು. ನೀನು ಅದನ್ನು ತೀರಿಸಿಕೊಂಡೇ ಬರುತ್ತೀಯೆಂದು ತಿಳಿದಿದ್ದೆ. ಹೀಗೆ ಒಮ್ಮೆಲೇ ಏಕೆ ಬಂದುಬಿಟ್ಟೆ ಬಾಳಾ!" ಸೀತಮ್ಮನವರೂ ಕೇಳಿದರು. ಒಂದು ತಿಂಗಳಾದ ಕೂಡಲೇ ತಮ್ಮ ಮಗನು ಬಿ.ಎ. ಪದವೀಧರನಾಗಿ ದೊಡ್ಡಮನುಷ್ಯನಾಗುವನೆಂಬ ಕನಸಿನಲ್ಲಿ ಅನೇಕ ಗೋಪುರಗಳನ್ನು ಕಟ್ಟಿದ್ದ ತಾಯಿ ಈ ಮಾತುಗಳನ್ನು ಕೇಳುವದು ಸ್ವಾಭಾವಿಕವೇ ಆಗಿತ್ತು.

"ನನ್ನಿಂದ ಪರೀಕ್ಷೆಯನ್ನು ಕಟ್ಟುವದು ಸಾಧ್ಯವಿರಲಿಲ್ಲ ಅವ್ವಾ! ನಾನು ರಾಷ್ಟ್ರದ ಕರೆಯನ್ನು ಮನ್ನಿಸಲೇಬೇಕಾಯಿತು."

"ನೀನು ಬಿ.ಎ. ಆಗುವದೇ ಇಲ್ಲವೇನು ಹಾಗಾದರೆ?"

"ಸದ್ಯಕ್ಕಂತೂ ಆ ವಿಚಾರವನ್ನು ಬಿಟ್ಟ ಹಾಗೆಯೆ. ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರಸಂಗ ಬಂದರೆ ಪ್ರಾಣಾರ್ಪಣವನ್ನು ಮಾಡಲೂ ಹಿಂದೆ ಸರಿಯಲಾಗದೆಂದು ದೃಢಪ್ರತಿಜ್ಞೆ ಮಾಡಿದ್ದೇನೆ. ಇದಕ್ಕೆ ನಿಮ್ಮ ಆಶೀರ್ವಾದವಿದ್ದರೆ ಸಾಕು."

ಮಗನ ಮಾತುಗಳನ್ನು ಕೇಳಿದ ಸೀತಮ್ಮನವರಿಗೆ ಆ ಮಾತುಗಳು ಯಾವ ವಿಶೇಷ ಅರ್ಥವನ್ನೂ ಕೊಡದೆ ಅವನು ಬಿ.ಎ. ಆಗುವದಿಲ್ಲವೆಂಬ ಮಾತು ಖಚಿತವಾಗಿ ಅವರ ಕಣ್ಣುಗಳಲ್ಲಿ ವೇದನೆ ಮಾತ್ರ ತುಂಬಿತು. ಹೆಂಡತಿ

ಯಲ್ಲಿ ಉಂಟಾದ ಈ ಭಾವವನ್ನು ಗ್ರಹಿಸಿದ ರಾಮಾಶಾಸ್ತ್ರಿಗಳು ಸುಮ್ಮನಿರಲಾರದೆ,

“ನೀನು ಮುಂದಿನ ಕಾರ್ಯದ ಹೊಳಹನ್ನು ಹಾಕಿಕೊಂಡೇ ಬಂದಿರುವಿಯಾ?” ಎಂದು ಬೇಕೆಂದೇ ಕೇಳಿದರು.

“ಹೌದು, ತಾತ್ಯಾ! ನನ್ನ ಜೀವನವನ್ನು ಗಂಗನಹಳ್ಳಿಗೆ ವಿನಿಯೋಗಿಸಬೇಕೆಂದು ನಿರ್ಧಾರ ಮಾಡಿಯೇ ಬಂದಿದ್ದೇನೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಗಂಗನಹಳ್ಳಿಯನ್ನು ಸಿದ್ಧಪಡಿಸಲು ಪಣವನ್ನೇ ತೊಟ್ಟಿದ್ದೇನೆ.”

“ಇಂದು ಈ ಹಳ್ಳಿ ಮೊದಲಿನ ಗಂಗನಹಳ್ಳಿಯಾಗಿ ಉಳಿದಿಲ್ಲ ವಾಸೂ! ಒಡೆದು ಚೂರಾಗಿದೆ. ಕೇವಲ ದಾರಿದ್ರ್ಯವೊಂದೇ ಅಲ್ಲ. ಅದರ ಜೊತೆಗೆ ಅಸಹಿಷ್ಣುತೆ, ಮತ್ಸರ ಮೊದಲಾದ ದುರ್ಗುಣಗಳು ತಾಂಡವವಾಡುತ್ತಿವೆ. ಈ ಮಾತು ಈ ಹಳ್ಳಿಗೇ ಅನ್ವಯಿಸುವದಿಲ್ಲ. ಸಮಗ್ರ ದೇಶದ ಇತಿಹಾಸವೇ ಇದು. ಈಗಾಗಲೇ ನಿಮ್ಮ ಸ್ವದೇಶಪ್ರೇಮವನ್ನೂ ದೇಶಕಾರ್ಯವನ್ನೂ ಜನ ಹೇಗೆ ಅರ್ಥ ಮಾಡಿಕೊಳ್ಳಹತ್ತಿದ್ದಾರೆ ಬಲ್ಲೆಯಾ? ಈ ಚಳುವಳಿಯು ಕೆಲಸಗೇಡಿಗಳಾದ ಬ್ರಾಹ್ಮಣರು ಎಬ್ಬಿಸಿದ ಹೂಲಿಯೆಂದು ಅನ್ನಹತ್ತಿದ್ದಾರೆ. ಇದನ್ನು ಯೋಚಿಸಿರುವೆಯಾ?”

“ನಮ್ಮ ಜನರ ಅಜ್ಞಾನಕ್ಕೆ ಈ ಮಾತೂ ಸಾಕ್ಷಿಯಾಗಿದೆ ತಾತ್ಯಾ! ಇದಕ್ಕೆ ಆಳರಸರ ಭೇದನೀತಿಯೂ ಕಾರಣವಾಗಿದೆ. ಒಬ್ಬರನ್ನು ಮೇಲಕ್ಕೇರಿಸಿ ಇನ್ನೊಬ್ಬರನ್ನು ಸದೆಬಡಿದು ವಿಭಾಗಿಸಿ ಆಳುವದು ಇವರ ನೀಚನೀತಿಯಾಗಿದೆ. ಜನರ ಈ ಅಜ್ಞಾನವನ್ನು ಹೋಗಲಾಡಿಸುವುದೂ ಒಂದು ಕೆಲಸವೇ ಆಗಿದೆ.”

“ಜಗತ್ತಿನಲ್ಲಿ ಅಜ್ಞಾನಿಗಳ ಸಂಖ್ಯೆಯೇ ಹೆಚ್ಚಾಗಿರುವಾಗ ನಿಮ್ಮ ಕಾರ್ಯವು ಫಲದಾಯಕವಾಗಬಹುದೆ?”

“ಜಗತ್ತಿನ ಉದ್ಧಾರಕಾರ್ಯವು ಕೆಲವರಿಂದಲೇ ಆಗುತ್ತಿರುತ್ತದೆ ಎಂಬುದನ್ನು ನಾವು ಅರಿಯಬೇಕು. ಈ ಉದ್ಧಾರಕಾರ್ಯದ ಫಲವು ಮಾತ್ರ ಸಾರ್ವಜನಿಕರಿಗಾಗಿ ಇರುತ್ತದೆ. ಜನರು ಅಜ್ಞಾನಿಗಳಿರುವರೆಂದು ಬುದ್ಧಿಯಿದ್ದವರು ಕೈಕಟ್ಟಿಕೊಂಡು ಕುಳಿತು ದೇಶದ ಸರ್ವನಾಶವನ್ನು ಮಾಡಬೇಕೆ? ಹಾಗೆ ಕೇಳಿದರೆ ಬುದ್ಧಿಯ ಉಪಯೋಗವು ವೈಯಕ್ತಿಕವಾಗಿರದೆ ವಿನಿಯೋಗಿಸಲಿರುತ್ತದೆ. ಇದನ್ನು ತಿಳಿಯದ ಬುದ್ಧಿ ಬುದ್ಧಿಯೇ ಅಲ್ಲ. ಈ ಕಾರ್ಯದಲ್ಲಿ ಯಶ ಸಿಗುವದರಲ್ಲಿ ಸಂದೇಹವಿಲ್ಲ. ಸ್ವಲ್ಪ ಅವಧಿ ಹತ್ತಬಹುದು ಅಷ್ಟೆ. ಜನರು ಯಾವಾಗಲೂ ಅಜ್ಞಾನಿಗಳಾಗಿ ಉಳಿಯಲಾರರು. ಕೈಗಡವಾಗಿ ಬಂದ ಭಾವಗಳು ನಿಶ್ಚಿತ ಅಭಿಪ್ರಾಯ ಬಂದೊಡನೆ ಮಾಯವಾಗಿಬಿಡುವುವು. ನಮ್ಮ

ಜನ ನೀಚರಲ್ಲ. ಅವರಲ್ಲಿ ದೇಶಪ್ರೇಮವು ಸಾಕಷ್ಟಿದೆ. ಆದರೆ ಅದಕ್ಕೆ ಯೋಗ್ಯ ಮಾರ್ಗದರ್ಶನ ಬೇಕು ಅಷ್ಟೆ. ಈಗ ಈ ಮಾರ್ಗದರ್ಶನ ಮಾಡಲು ಕಾರಣಿಕ ಪುರುಷನು ಉದಯನಾಗಿದ್ದಾನೆ. ಅವನ ಪ್ರಖರವಾದ ಕಿರಣಗಳ ಕಾವಿನಲ್ಲಿ ಅಜ್ಞಾನತೆಯು ಕೊಳಚೆ ಕರಕಾಗಿ ಹೋಗುವದು."

"ನಿನ್ನ ಮಾತೇನೋ ಸರಿ ವಾಸೂ! ಆದರೆ ಈ ಹೊಣೆಯನ್ನು ಹೊರುವ ಸಾಮರ್ಥ್ಯ ನಿನ್ನಲ್ಲಿದೆಯೇ? ನಿನ್ನ ಆರ್ಥಿಕ ತೊಂದರೆಯನ್ನು ವಿಚಾರಿಸಿರುವಿಯಾ? ಈ ಆರ್ಥಿಕ ದುರಂತದಲ್ಲಿ ನಮ್ಮ ಕುಟುಂಬವು ಕೂಡ ಹರಿದು ಹಂಚಾಗಿ ಬಿಟ್ಟೀತು. ಮೊದಲು ಹೊಟ್ಟೆಯ ಪಾಡನ್ನು ನೋಡಬೇಕು. ಜೀವನಕ್ಕೆ ಇದೇ ಮುಖ್ಯವಾದ ಪ್ರಶ್ನೆ. ಇದಿಲ್ಲದೆ ನೀನು ಯಾವುದನ್ನು ಸಾಧಿಸಲು ಶಕ್ಯವಾದೀತು, ಹೇಳು! ಈ ರಾಷ್ಟ್ರಪ್ರೇಮವು ನಿನ್ನ ಹೊಟ್ಟೆಯನ್ನು ತುಂಬಿಸಬಹುದೆ?"

"ಯುದ್ಧಕ್ಕೆ ಅಭಿಮುಖವಾಗಿ ಹೊರಟ ಸೈನಿಕನು ಪ್ರಾಣದ ಬಗ್ಗೆ ಅತಿಯಾಗಿ ಯೋಚಿಸಿದರೆ ಆಗುವ ಅನರ್ಥವೇ ಈ ಮಾತಿಗೂ ಅನ್ವಯಿಸುವದು ತಾತ್ಯಾ! ಸೈನಿಕನ ಗುರಿ ಯುದ್ಧನಿರ್ವಹಣದಲ್ಲಿದೆ. ನಮ್ಮ ಸೇನಾನಿ ನಮಗೆ ಆಜ್ಞೆಗಳನ್ನು ದಯಪಾಲಿಸಿದ್ದಾನೆ. ಅದನ್ನು ಚಾಚೂ ತಪ್ಪದೇ ಪಾಲಿಸುವುದು ಸೈನಿಕನಾದ ನನ್ನ ಧರ್ಮವಾಗಿದೆ. ಭವಿಷ್ಯಕ್ಕಾಗಿ ಯೋಚಿಸುತ್ತ ಕುಳಿತು ಯಾವ ಕೆಲಸವನ್ನೂ ಮಾಡದೆ ಕೈಕಟ್ಟಿ ಕುಳಿತುಕೊಳ್ಳುವದು ಸೈನಿಕವೃತ್ತಿಯ ಅಪಹಾಸ್ಯ. ನನ್ನ ಜೀವನದಲ್ಲಿ ಎಂತಹ ತೊಂದರೆ ಬಂದರೇನು? ಅವೆಲ್ಲ ನಾಡಿಗಾಗಿ, ಜನಕ್ಕಾಗಿ. ಇದನ್ನು ಸಹಿಸಲು ನಾನು ಸಿದ್ಧನಾಗಿಯೇ ಇದ್ದೇನೆ."

"ಇದರಿಂದ ಆಳರಸರ ಕಣ್ಣುಗಳು ನಿನ್ನ ಮೇಲೆ ಬೀಳಬಹುದೆಂದು ನಿನಗನಿಸುವದಿಲ್ಲವೆ? ಅವರು ಸರ್ವವಿಧದಿಂದಲೂ ನಿನ್ನ ಕಾರ್ಯಗಳಿಗೆ ಮುಟ್ಟುಗೋಲು ಹಾಕಬಹುದು. ನಿನ್ನನ್ನು ದಂಡಿಸಬಹುದು. ನಿನ್ನ ಸರ್ವನಾಶಕ್ಕೆ ಕಾರಣವಾಗಬಹುದು."

"ನನ್ನೊಬ್ಬನ ನಾಶದಿಂದ ಈ ಕಾರ್ಯ ನಿಲ್ಲಬಹುದೆಂದು ನನಗೆ ಅನ್ನಿಸುವದಿಲ್ಲ. ನನ್ನಂತಹ ಹತ್ತು ಮಂದಿ ಮುಂದೆ ಬರಬಹುದು. ನನ್ನ ಕಾರ್ಯದಿಂದ ಜಾಗೃತಿಯಾದರೆ ನನಗೆ ಅಷ್ಟೇ ಸಾಕು. ಜಾಗೃತಿಯ ಮಹಿಮೆ ಘನವಾಗಿ ನಿಂತೀತು. ಒಂದು ವೇಳೆ ಅದು ಆಗದಿದ್ದರೂ ನನ್ನ ಕರ್ತವ್ಯವನ್ನು ಮಾಡಿದ ಸಮಾಧಾನವಾದರೂ ನನಗೆ ಆದೀತು. ಸುಮ್ಮನೆ ಇಲ್ಲದ ಸಮಸ್ಯೆಗಳ ಭವಿಷ್ಯವನ್ನು ಕಲ್ಪಿಸಿಕೊಳ್ಳುವದರಲ್ಲಿ ಯಾವ ಅರ್ಥವೂ ಇಲ್ಲ."

"ಎಂತಹ ಪ್ರಸಂಗ ಬಂದರೂ ಈ ನಿರ್ಧಾರವನ್ನು ಬಿಡಲಾರದಷ್ಟು

ನಿನ್ನ ಎದೆ ಗಟ್ಟಿಯಾಗಿದೆಯೆ ?"

"ತಾತ್ಯಾ! ಈ ದೇಹದ ನರಗಳಲ್ಲಿ ವಿಶ್ವೇಶ್ವರಭಟ್ಟರ ಪುಣ್ಯರಕ್ತವು ಹರಿಯುತ್ತಿರುವಾಗ ನಿಮಗೆ ನನ್ನಲ್ಲಿ ಸಂದೇಹವೆ? ನನ್ನ ನಿರ್ಧಾರವು ಅಚಲವಾಗಿದೆ. ನಮ್ಮ ವಂಶದ ನೆತ್ತರವು ಅಷ್ಟು ತೆಳುವಾಗಿರುವದೆಂದು ನಿಮ್ಮ ಅಭಿಪ್ರಾಯವೆ ?"

ಈ ಮಾತುಗಳನ್ನು ಕೇಳಿ ರಾಮಾಶಾಸ್ತ್ರಿಗಳ ಕಣ್ಣು ಒದ್ದೆಯಾದವು. ಅವರು ಮಗನ ಅಂತರಂಗವನ್ನು ತಿಳಿದುಕೊಳ್ಳಬೇಕೆಂದು ಈ ರೀತಿ ಅನೇಕ ಪ್ರಶ್ನೆಗಳನ್ನು ಹಾಕಿದ್ದರು. ಮಗನ ಈ ಅಚಲವಾದ ನಿರ್ಧಾರವನ್ನು ಕೇಳಿದಾಗ ಅವರಿಗೆ ಹರುಷವೇ ಆಯಿತು.

ಅಲ್ಲಿಯೇ ಕುಳಿತು ಸೀತಮ್ಮನವರು ತಂದೆ-ಮಕ್ಕಳ ಮಾತುಗಳನ್ನು ಆಸ್ಥೆಯಿಂದ ಕೇಳುತ್ತಿದ್ದರು. ಅವರ ಮಾತುಗಳಲ್ಲಿ ಅಡಕವಾದ ವಿಚಾರಗಳು ಅಸ್ಪಷ್ಟವಾಗಿ ಅವರಿಗೆ ತಿಳಿದರೂ ಮಗನು ಈ ಕೆಲಸದಿಂದ ಒಂದು ಗಂಡಾಂತರದಲ್ಲಿ ಬೀಳುವನೆಂಬ ಮಾತು ಸ್ಪಷ್ಟವಾಗಿ ಆ ತಾಯಿಯ ಕರುಳು ಕೊರೆಯಿತು. ಈಗ ಅವರಿಗೆ ಮಗನು ಬಿ.ಎ. ಆಗಬೇಕೆಂಬ ಮಾತು ಮಾಯವಾಗಿ ಅವನು ಸುರಕ್ಷಿತವಾಗಿ ಬಾಳಿದರೆ ಸಾಕೆಂಬ ಮನೋಭಾವವು ಮೂಡಹತ್ತಿತು. ಈ ಮಾತು ತನಗಿಂತ ರಾಮಾಶಾಸ್ತ್ರಿಗಳಿಗೆ ಹೆಚ್ಚು ಹೊಳೆಯುವದೆಂಬುದರಲ್ಲಿ ಅವರಿಗೆ ವಿಶ್ವಾಸವಿತ್ತು. ಅವರು ಮಗನ ಕ್ಷೇಮಚಿಂತನೆಯನ್ನು ಮಾಡತೊಡಗಿದರು.

ಈ ಮನೋಭಾವವನ್ನು ಗುರುತಿಸಿದ ರಾಮಾಶಾಸ್ತ್ರಿಗಳು "ನಿನ್ನ ಮಗನು ಮಾಮಲೇದಾರನಾಗಲಾರನೆಂದು ವ್ಯಸನವೇ?" ಎಂದು ಥಕ್ಕನೇ ಕೇಳಿದರು. ಬಹಳ ದಿನಗಳ ಹಿಂದೆ ಸೀತಮ್ಮನವರು ತಮ್ಮ ಗೆಳತಿಯರ ಮುಂದೆ ವಾಸುದೇವನು ಬಿ.ಎ. ಆಗಿ ಮಾಮಲೇದಾರನಾಗುವನೆಂದು ಹೇಳಿದ ಮಾತೂ ನೆನಪಾಗಿ ಶಾಸ್ತ್ರಿಗಳು ಈ ಮಾತನ್ನು ಕೇಳಿದರೇನೋ !

"ಅವನು ಮಾಮಲೇದಾರನಾಗಲಿ, ಬಿಡಲಿ. ಸುಖವಾಗಿ ಬಾಳಲಿ, ಆಯಿತು. ಸೀತಮ್ಮನವರು ಹನಿದುಂಬಿ ಹೇಳಿದರು.

"ನಿನ್ನ ಪುಣ್ಯವೇ ಪುಣ್ಯ ಸೀತಾ! ಹತ್ತು ಮಾಮಲೇದಾರರನ್ನು ಆಳುವ ಮಗನನ್ನು ಪಡೆದಿದ್ದೀ. ವಾಸುದೇವನಿಗೆ ಆಶೀರ್ವಾದ ಮಾಡು."

ಈ ಮಾತುಗಳನ್ನು ಕೇಳಿ ವಾಸುದೇವನು ತಾಯಿಗೆ ಅಡ್ಡಬಿದ್ದನು.

"ಸಾವಿರ ವರ್ಷ ಬಾಳು ಕಂದಾ!"

ತಾಯಿಯ ಈ ಆಶೀರ್ವಾದದಿಂದ ವಾಸುದೇವನಲ್ಲಿ ವಿಲಕ್ಷಣ ಚೈತನ್ಯ

ಬಂದಂತಾಯಿತು. ಅವನ ಕಾರ್ಯಶಕ್ತಿಗೆ ಸಂಜೀವಿನಿಯನ್ನು ಎರೆದಂತಾಯಿತು.

ವಾಸುದೇವನ ಆಗಮನದಿಂದ ಗಂಗನಹಳ್ಳಿಯ ನಿತ್ಯಜೀವನದಲ್ಲಿ ಮತ್ತೊಂದು ಅಧ್ಯಾಯವೇ ಪ್ರಾರಂಭವಾಯಿತು.

"ಗಂಗನಹಳ್ಳಿಯ ಯುವಕ ಸಮಿತಿ"ಯ ಸ್ಥಾಪನೆಯಾಯಿತು. ರೈತ ಶಿವಪ್ಪನ ಮಗನಾದ ಸಿದ್ದಪ್ಪನು ಈ ಕಾರ್ಯಸಮಿತಿಯ ಕಾರ್ಯದರ್ಶಿಯಾದನು. "ಕುದುರೆಯ ಕಾಲಿಗೆ ಸಿಕ್ಕು ತಲೆಯೊಡೆದುಕೊಂಡ ಕಚ್ಚು ಇನ್ನೂ ಇದೆ ವಾಸೂ! ಈ ಕಚ್ಚನ್ನು ಉಂಟುಮಾಡಿದವರು ಹಾಳಾಗಿಹೋಗಬೇಕು ನೋಡು!" ಎಂದೇ ಅವನು ಕಾರ್ಯಸೂತ್ರವನ್ನು ವಹಿಸಿಕೊಂಡನು. ಊರಲ್ಲಿ ಮೂಲೆಯಲ್ಲಿ ಬಿದ್ದ ರಾಟೆಗಳು ಹೊರಗೆ ಬಂದವು. ಕಾರ್ಯಾಲಯದಲ್ಲಿ ಈ ನೂಲುವ ರಾಟೆಗಳು ತಿರುಗಹತ್ತಿದವು. ಅವು ಮನೆಮನೆಗಳಲ್ಲಿಯೂ ತಿರುಗಹತ್ತಿದವು. ಹಳ್ಳಿಯ ಯುವಕ ಜನಾಂಗವು ದಿನಾಲು ಈ ಕಾರ್ಯಾಲಯದಲ್ಲಿ ಕೂಡಹತ್ತಿತು. ಆ ಜನರಿಗೆಲ್ಲ ವಾಸುದೇವನು ರಾಷ್ಟ್ರೀಯ ಜೀವನವನ್ನೂ. ಸ್ವಾತಂತ್ರ್ಯದ ಜೀವಾಳವನ್ನೂ ಬೋಧಿಸಹತ್ತಿದನು. ಮುಂಜಾನೆ ಚಿಕ್ಕ ಮಕ್ಕಳನ್ನು ಕೂಡಿಸಿ ಹಳ್ಳಿಯ ಓಣಿಗಳಲ್ಲಿ ಪ್ರಭಾತಫೇರಿಯನ್ನು ಹೊರಡಿಸಹತ್ತಿದರು. ಜೈ ಜೈ ಎಂಬ ಘೋಷವು ಹಳ್ಳಿಯಲ್ಲಿ ದುಮಿದುಮಿಸಹತ್ತಿತು. ಇದೆಲ್ಲ ಕಾರ್ಯದ ಸೂತ್ರಧಾರಿಯಾಗಿ ವಾಸುದೇವನು ನಿರ್ಧಾರದಿಂದ ಕಾರ್ಯ ಮಾಡಹತ್ತಿದನು. ಒಕ್ಕಲುಮಕ್ಕಳ ಸಂಪರ್ಕವನ್ನು ಬೆಳೆಸಿಕೊಂಡು ಅವರೊಡನೆ ರಾಷ್ಟ್ರದ ಮಾತುಗಳನ್ನು ಆಡಹತ್ತಿದನು. ಅವನ ವಿಲಕ್ಷಣ ವಾಗ್ಝರಿಗೆ ಮನಸೋತ ಹಳ್ಳಿಯ ಯುವಕರು ತಂಡತಂಡವಾಗಿ ಅವನ ಬೆನ್ನುಹತ್ತ ತೊಡಗಿದರು.

ಸ್ವಲ್ಪ ದಿನಗಳಲ್ಲಿಯೇ ವಾಸುದೇವನು ಗಂಗನಹಳ್ಳಿಯ ಕಣ್ಣುಮಣಿಯಾದನು. ಅವನ ಮಾತೇ ಮಾತಾಗಿಬಿಟ್ಟಿತು. ಅವನ ಆಜ್ಞೆಯೇ ವೇದವಾಕ್ಯವಾಗತೊಡಗಿತು.

ಗಂಗನಹಳ್ಳಿ ಆ ಭಾಗದ ರಣರಂಗವಾಗಿ ಬಿಟ್ಟಿತು. ಅಧಿಕಾರಿಗಳ ಕಣ್ಣನ್ನು ಆ ಹಳ್ಳಿ ಚುಚ್ಚಹತ್ತಿತು.

ಜ್ವಾಲಾಮುಖಿಯ ಮೇಲೆ ನಿಂತ ಹಳ್ಳಿಗೆ ಒಂದು ಕಿಡಿ ಬೇಕಾಗಿದ್ದಿತು. ಆ ಕಿಡಿಯನ್ನು ವಾಸುದೇವನೇ ಹೊತ್ತು ತಂದಾಗ ಅದು ಸ್ಫೋಟವಾಗದಿದ್ದೀತೆ?

ಮೂರನೆಯ ಭಾಗ

೧

ಗಂಗನಹಳ್ಳಿಯ ಜೀವನದಲ್ಲಿ ಚಟುವಟಿಕೆಗಳ ಬಿರುಗಾಳಿಯನ್ನೇ ಎಬ್ಬಿಸಿದ ಹಿರಿಯ ಮಗ ವಾಸುದೇವನ ಅಗಾಧವಾದ ಕರ್ತೃತ್ವಶಕ್ತಿಯನ್ನು ನೋಡ ತೊಡಗಿದಂತೆ ರಾಮಾಶಾಸ್ತ್ರಿಗಳಿಗೆ ಹಿಂದಿನ ದಿನಗಳ ಸ್ಮರಣೆಯಾಗತೊಡಗಿತು. ಹದಿನೈದು-ಇಪ್ಪತ್ತು ವರ್ಷಗಳಿಂದ ತಾವು ಆ ಹಳ್ಳಿಯ ಮಕ್ಕಳಿಗೆ ಬೋಧಿ ಸುತ್ತ ಬಂದ ಮಾತು ಈಗ ಪಕ್ವವಾಗಿ ನಿಂತಿರುವುದನ್ನು ನೋಡಿದಾಗ ಅವ ರಿಗೆ ಬಾಳು ಸಾರ್ಥಕವೆನ್ನಿಸತೊಡಗಿತು. ಆರ್ಥಿಕ ದುರವಸ್ಥೆಯಲ್ಲಿ ತಮ್ಮ ಕುಟುಂಬವೇ ಹರಿದು ಹಂಚಾಗಿಹೋದ ಸನ್ನಿವೇಶವನ್ನು ನೆನೆದಾಗ ಅವರಲ್ಲಿ ಅಪಾರವಾದ ದುಃಖವು ಬುಗ್ಗೆಯಾಗಿ ಏಳುತ್ತಿತ್ತು. ದಾರಿದ್ರ್ಯಜೀವನದ ದುರಂತವು ಅವರ ಎದೆಯ ಮೇಲೆ ಕಾಸಿದ ಬರೆಯನ್ನು ಕೊಟ್ಟಿತು. ಅಂತೆಯೇ ಅವರು ಪರಂಪರೆಯಾಗಿ ಬಂದ ವೈದಿಕವೃತ್ತಿಯನ್ನು ತ್ಯಜಿಸಿ ಶಿಕ್ಷಣವೃತ್ತಿ ಯನ್ನು ಅವಲಂಬಿಸಬೇಕಾಯಿತು. ಅವರು ವೈದಿಕವೃತ್ತಿಯನ್ನು ತ್ಯಜಿಸಿದರೂ ಮಹಾವೈದಿಕರಾಗಿಯೇ ಬಾಳುತ್ತಿದ್ದರು. ಅವರು ಧಾರ್ಮಿಕವೃತ್ತಿಯನ್ನು ತ್ಯಜಿಸಲಿಲ್ಲ. ಮನೆಯಲ್ಲಿ ಆ ಪರಂಪರೆಯನ್ನು ನಿತ್ಯವೂ ಪಾಲಿಸುತ್ತಿದ್ದರು. ಅವರ ಸ್ನಾನ-ಸಂಧ್ಯಾ-ದೇವಪೂಜೆಗಳು ಅನವರತವಾಗಿ ಸಾಗಿದ್ದವು. ಈ ಆಹ್ನೀಕಗಳಿಂದ ಅವರಿಗೆ ಸಮಾಧಾನವಾಗುತ್ತಿತ್ತು. ಶಿಕ್ಷಣಕಾರ್ಯದಲ್ಲಿ ಕೂಡ ಅವರ ರೀತಿಯೇ ಬೇರೆಯಾಗಿದ್ದಿತು. ಕೇವಲ ಅಕ್ಷರಾಭ್ಯಾಸಕ್ಕಾಗಲಿ, ಪಠ್ಯಪುಸ್ತಕಗಳ ಅಭ್ಯಾಸ ಮಾಡಿಸಿ ಪರೀಕ್ಷೆಗಾಗಿ ವಿದ್ಯಾರ್ಥಿಗಳನ್ನು ಸಿದ್ಧ ಪಡಿಸುವದಕ್ಕಾಗಲಿ ಅದು ನಿಲ್ಲಲಿಲ್ಲ. ವಿದ್ಯಾರ್ಥಿಗಳಲ್ಲಿ ಮೂಲವಾಗಿ ಬೆಳೆದು ನಿಂತ ಭಯದ ವಾತಾವರಣವನ್ನು ಸಮೂಲವಾಗಿ ನಾಶಗೊಳಿಸಿ ರಾಷ್ಟ್ರೀಯ ಮನೋವೃತ್ತಿಯನ್ನು ಬೆಳೆಯಿಸುವ ಶಿಕ್ಷಣವೇ ಅವರ ಶಿಕ್ಷಣವಾಗಿತ್ತು.

ವಿಶ್ವೇಶ್ವರಭಟ್ಟರ ಕಾಲದಲ್ಲಿಯೂ ಒಂದು ಶಿಷ್ಯಪರಂಪರೆಯಿತ್ತೆಂಬು ದನ್ನು ನಾವು ಮರೆತಿರಲಾರೆವು. ಆಗ ಅದು ಒಂದು ವಿಶಿಷ್ಟಜನರಿಗಾಗಿ ಮೀಸ ಲಾಗಿತ್ತು. ವೇದಾಭ್ಯಾಸವೇ ಆ ಶಿಷ್ಯರ ಅಭ್ಯಾಸವಾಗಿತ್ತು. ಈಗ ಕಾಲವು ಸಂಪೂರ್ಣವಾಗಿ ಬದಲಾಗಿದ್ದರಿಂದ ಎಲ್ಲವೂ ಬೇರೆಯಾದದ್ದು ಅನಿವಾರ್ಯ ವಾಗಿದೆ. ಇಂದು ರಾಮಾಶಾಸ್ತ್ರಿಗಳ ಶಿಷ್ಯರು ಕೇವಲ ಬ್ರಾಹ್ಮಣ ವಿದ್ಯಾರ್ಥಿ

ಗಳಲ್ಲ. ಸರ್ವಮತ-ಪಂಗಡದವರಿಗೂ ಇಲ್ಲಿ ಸ್ಥಾನವಿದೆ. ವೇದಾಭ್ಯಾಸದ ಬದಲಾಗಿ ಜೀವನದ ವಿವಿಧ ಸಮಸ್ಯೆಗಳಿಗೆ ಯೋಗ್ಯವಾಗುವ ಅಭ್ಯಾಸವು ಕನ್ನಡ ಭಾಷೆಯಲ್ಲಿಯೇ ನಡೆಯುತ್ತಿದೆ. ಆಗ ಭಿಕ್ಷಾನ್ನಗಳಿಂದ ತೃಪ್ತರಾಗುತ್ತಿದ್ದ ಶಿಷ್ಯರು ಈಗ ಆ ಅನ್ನವನ್ನು 'ದಾಸೋಗ'ದಲ್ಲಿಯೂ 'ವಾರದ ಮನೆ'ಗಳಲ್ಲಿಯೂ ಪಡೆಯುತ್ತಿದ್ದಾರೆ. ದೇಶದ ದಾರಿದ್ರ್ಯವನ್ನು ಹೋಗಲಾಡಿಸುವ ಜೋಥೆ ಸಾಗುತ್ತಿದೆ. ರಾಷ್ಟ್ರೀಯ ಜಾಗ್ರತಿಯನ್ನು ಉಂಟುಮಾಡುವ ಕಾರ್ಯ ಒಂದೇ ಸಮನೆ ಸಾಗುತ್ತಿದೆ. ರಾಮಾಶಾಸ್ತ್ರಿಗಳ ಪ್ರೇರಣೆಯಿಂದ ಈ ಶಿಷ್ಯರೆಲ್ಲ ದೇಶಭಕ್ತಿಯ ಪಾಠಗಳನ್ನು ಕಲಿಯಹತ್ತಿದ್ದಾರೆ. ಅವರ ಜೀವನ ರಾಷ್ಟ್ರ ಜೀವನದೊಡನೆ ಮಿಡಿಯತೊಡಗಿದೆ. ರಾಮಾಶಾಸ್ತ್ರಿಗಳು ಅವರ ಎದೆಗಳನ್ನು ಹದಮಾಡತೊಡಗಿದ್ದಾರೆ. ಈ ವಿದ್ಯೆಯನ್ನು ಪಡೆದು ಹೊರಬಿದ್ದು ಹೋದ ವಿದ್ಯಾರ್ಥಿಗಳು ತಮ್ಮ ತಮ್ಮ ಹಳ್ಳಿಗಳಲ್ಲಿ ಈ ಕಿಡಿಯನ್ನು ಹೊತ್ತಿಸುತ್ತಿರುವದು ರಾಮಾಶಾಸ್ತ್ರಿಗಳ ಪ್ರಭಾವಕ್ಕೆ ಸಾಕ್ಷಿಯಾಗಿ ನಿಲ್ಲತೊಡಗಿದೆ.

ಗಂಗನಹಳ್ಳಿಯನ್ನು ತನ್ನ ಹಿಡಿತದಲ್ಲಿ ಹಿಡಿದ ವಾಸುದೇವನು ತನ್ನ ಕಾರ್ಯಕ್ಷೇತ್ರವನ್ನು ಹಳ್ಳಿಗಳಿಗೂ ವಿಸ್ತರಿಸಿದನು. ಈ ಕಾರ್ಯದಲ್ಲಿ ಅವನಿಗೆ ಸಿದ್ದಪ್ಪನಿಂದಲೂ ಕಾಜಿ ಅಬ್ದುಲ್‌ನಿಂದಲೂ ಹೆಚ್ಚಿನ ನೆರವಾಗತೊಡಗಿತು. ಅವರೆಲ್ಲ ಕೂಡಿ ಹಳ್ಳಿಹಳ್ಳಿಗಳನ್ನು ಸುತ್ತತೊಡಗಿದರು. ಕಾರಣಪುರುಷನ ದಿವ್ಯ ಸಂದೇಶವನ್ನು ಬೀರತೊಡಗಿದರು. ಈ ಕಾರ್ಯಕ್ರಮವು ಎಡೆಬಿಡದೆ ಸಾಗಿದಂತೆ ಹಳ್ಳಿಗಳಲ್ಲಿ ಜಾಗೃತಿಯುಂಟಾಗತೊಡಗಿತು.

"ಪರದೇಶದ ಸಾಮಾನುಗಳ ಮೋಹಕ್ಕೆ ಬಿದ್ದು ಅಪವ್ಯಯಮಾಡತೊಡಗಿದ್ದೀರಿ. ನಿಮ್ಮಿಂದ ನಿಮ್ಮ ಹಣದ ಹೊಳೆಯೇ ಪರದೇಶಕ್ಕೆ ಹರಿದು ಹೋಗತೊಡಗಿದೆ. ಆದುದರಿಂದ ನೀವು ದರಿದ್ರರಾಗತೊಡಗಿರುವಿರಿ. ಇದು ನಿಲ್ಲಬೇಕು. ನಿಮ್ಮ ಬಟ್ಟೆಗಳನ್ನು ನೀವೇ ತಯಾರಿಸುವದು ಅಸಾಧ್ಯವೆ? ನಿಮ್ಮ ಹಿರಿಯರು ನೂಲುತ್ತಿದ್ದರು. ನಿಮ್ಮ ಜೇಡರು ನೇಯುತ್ತಿದ್ದರು. ನಿಮಗಾಗಿ ಬಟ್ಟೆ ಇಲ್ಲಿಯೇ ಸಿದ್ಧವಾಗುತ್ತಿತ್ತು. ಈಗ ನೀವು ಜಿನುಗು ಬಟ್ಟೆಗಳ ಮೋಹಕ್ಕೆ ಬಿದ್ದು 'ಮ್ಯಾಂಚೆಸ್ಟರ'ಕ್ಕೆ ಹಣ ಬಡೆಯುತ್ತಿದ್ದೀರಿ. ಇದು ಶುದ್ಧ ಅನ್ಯಾಯ. ನಿಮ್ಮ ರಾಟೆಗಳು ಹೊರಬರಲಿ. ಮೂಲೆಗೆ ಬಿದ್ದ ಮಗ್ಗಗಳು ಮತ್ತೆ ಕೆಲಸಮಾಡಲಿ. ಇದರಿಂದ ನಿಮ್ಮೆಲ್ಲರಿಗೂ ಕೆಲಸ ಸಿಕ್ಕಂತಾಗುವದಲ್ಲದೆ ನಿಮ್ಮ ಹಣ ನಿಮ್ಮಲ್ಲಿಯೇ ಉಳಿಯುವದು" ಎಂದು ಹೇಳುತ್ತಿರುವ ವಾಸುದೇವನ ಮಾತುಗಳು ಹಳ್ಳಿಗರಲ್ಲಿ ಬೇರೂರತೊಡಗಿದಂತೆ ರಾಟೆಗಳು ತಿರುಗತೊಡಗಿದವು. ಮುಗ್ಗರಿಸಿದ ಮಗ್ಗಗಳು ಮತ್ತೆ ಕೆಲಸಮಾಡತೊಡಗಿದವು.

"ಪರದೇಶೀ ಸಕ್ಕರೆಯ ಹೊರಹೊಳಪಿಗೆ ಮನಸೋತು ಬೆಲ್ಲದ ರುಚಿಯನ್ನು ಕೂಡಾ ಕಳೆದುಕೊಂಡುಬಿಟ್ಟದ್ದೀರಿ. ಮೇಲಾಗಿ ಈ ಸಕ್ಕರೆಯನ್ನು ತಿನ್ನುವದು ಅಧರ್ಮವಾಗಿದೆ ಎಂಬುದು ನಿಮಗೆ ತಿಳಿದಿಲ್ಲ. ಹಿಂದೀಯರಾದ ನೀವು ಧರ್ಮಾಭಿಮಾನಿಗಳು. ಆಹಾರಶುದ್ಧತೆಯಲ್ಲಿ ನಿಮ್ಮನ್ನು ಜಗತ್ತಿನಲ್ಲಿ ಯಾರೂ ಸರಿಗಟ್ಟಲಾರರು. ಹೀಗಿರುವಾಗ ಎಲುಬಿನ ಪುಡಿಯಿಂದ ಹೊಳಪು ತಂದ ಸಕ್ಕರೆಯ ರುಚಿಯನ್ನು ನಿಮ್ಮ ಪವಿತ್ರವಾದ ನಾಲಿಗೆಯು ಸವಿಯಬೇಕೆ? ಇದು ಪಾಪಪೂರಿತವಾಗಿದೆ. ಇಂದಿನಿಂದ ಪರದೇಶಿ ಸಕ್ಕರೆಗೆ ಬಹಿಷ್ಕಾರ ಹಾಕಿರಿ. ನಿಮ್ಮ ಧರ್ಮವನ್ನು ಕಾಪಾಡಿಕೊಳ್ಳಿರಿ" ಎಂದು ವಾಸುದೇವನು ಹೇಳುತ್ತಿರುವಾಗ ಸಿದ್ದಪ್ಪನು, "ಧರ್ಮದಲ್ಲಿ ಕೈಹಾಕಿದ ಪರದೇಶೀಯರನ್ನು ಬಗ್ಗುಬಡಿಯಲು ನಮ್ಮ ಹಿರಿಯರಾದ ಸೈನಿಕರು ಬಂಡಾಯವನ್ನೇ ಹೂಡಿದರೆಂಬುದನ್ನು ಮರೆಯಬೇಡಿರಿ. ಸ್ವಾತಂತ್ರ್ಯದ ಮೊದಲನೆಯ ಯುದ್ಧವೇ ಅದು" ಎಂದು ಅಬ್ಬರದಿಂದ ನುಡಿಯುತ್ತಿದ್ದನು. ಈ ಮಾತುಗಳು ಹಳ್ಳಿಗರ ಹೃದಯಗಳನ್ನು ನೇರವಾಗಿ ಭೇದಿಸಿದವು. ಬಿಳೀ ಸಕ್ಕರೆಯನ್ನು ತಿನ್ನುವದು ಕೂಡ ಅವರಿಗೆ ಅಸಹ್ಯವೆನ್ನಿಸತೊಡಗಿತು.

ಮತ್ತೊಮ್ಮೆ ಒಂದು ಪ್ರಚಂಡವಾದ ಸಭೆಯಲ್ಲಿ ನೆರೆದ ಹೆಣ್ಣುಮಕ್ಕಳನ್ನುದ್ದೇಶಿಸಿ ವಾಸುದೇವನು,

"ನನ್ನ ಅಕ್ಕತಂಗೆಂದಿರೆ! ನೀವು ಧರಿಸುತ್ತಿರುವ ಬಳೆಗಳು ನಿಮ್ಮ ಸೌಭಾಗ್ಯದ ಅಮೌಲ್ಯವಾದ ಪ್ರತೀಕಗಳು. ಅವು ಗಟ್ಟಿಮುಟ್ಟಿಯಾಗಿ ಬಾಳಿದಷ್ಟು ನಿಮ್ಮ ಸೌಭಾಗ್ಯ ಭದ್ರವಾಗಿರುತ್ತದೆ. ಆದರೆ ಈಗ ನೀವು ಧರಿಸುತ್ತಿರುವ ಬಳೆಗಳು ಎಷ್ಟು ನಾಜೂಕಾಗಿರುತ್ತಿವೆಯೆಂಬುದನ್ನು ನೋಡಿರುವಿರಾ? ಅವು ಮೇಲೆ ನೋಡಲು ಥಳಕುಪಳಕಾಗಿ ಕಾಣುತ್ತಿರಬಹುದು. ಆದರೆ ಅವುಗಳ ಆಯುಷ್ಯ ಬಹಳ ಕಿರಿದು. ಇಂತಹ ಬಳೆಗಳನ್ನು ಇಟ್ಟುಕೊಂಡರೆ ನಿಮ್ಮ ಸೌಭಾಗ್ಯವೂ ನಾಜೂಕಾಗಿ ನಿಲ್ಲಬಹುದು. ಮೇಲಿನ ಸೌಂದರ್ಯಕ್ಕೆ ಮನಸೋತು ನಿಮ್ಮ ಸೌಭಾಗ್ಯವನ್ನು ನಾಜೂಕಾಗಿ ಮಾಡಿಕೊಳ್ಳುವಿರಾ? ಇಲ್ಲವೆ ಗಟ್ಟಿಮುಟ್ಟಿಯಾದ ದೇಶೀ ಬಳೆಗಳನ್ನು ಧರಿಸಿಕೊಂಡು ನಿಮ್ಮ ಸೌಭಾಗ್ಯವನ್ನು ಭದ್ರಪಡಿಸಿಕೊಳ್ಳುವಿರಾ? ವಿಚಾರಿಸಿರಿ. ನಿಮಗೆ ಸರಿಯೆನ್ನಿಸಿದರೆ ಈಗಲೇ ಈ ಪರದೇಶೀ ಬಳೆಗಳನ್ನು ತೆಗೆದು ಹಾಕಿ ದೇಶೀ ಬಳೆಗಳನ್ನು ಧರಿಸುವ ಪ್ರತಿಜ್ಞೆ ಮಾಡಿರಿ" ಎಂದು ನುಡಿದಾಗ ಸಭೆಯಲ್ಲಿ ಚಟ್.... ಪಟ್.... ಎಂದು ಸಪ್ಪಳವಾಗಿ ಪರದೇಶಿ ಬಳೆಗಳೆಲ್ಲ ಉಮರಿಬಿದ್ದವು. ಇದೇ ಸಮಯವೆಂದು ಸಿದ್ದಪ್ಪನು,

"ಹೀಗೆ ಪರದೇಶೀ ಬಳೆಗಳನ್ನು ತೆಗೆಯುವದರಿಂದ ನಿಮ್ಮ ಕೆಲಸ ಪೂರ್ತಿಯಾಗಲಿಲ್ಲ ತಾಯಂದಿರೆ! ನೀವು ಮಾಡುವ ಅಮೋಘವಾದ ಕೆಲಸಗಳೂ ಇವೆ. ನಿಮ್ಮ ಗಂಡಸರು ಪರದೇಶೀ ಅರಿವೆಗಳನ್ನು ಕೊಂಡು ತಂದರೆ ಅವನ್ನು ಧರಿಸುವದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಡಿರಿ. ಪರದೇಶೀ ಸಕ್ಕರೆಯನ್ನು ತಂದುಕೊಟ್ಟರೆ ಅದನ್ನು ಬೀದಿಗೆ ಬಿಸಾಕಿ ಆ ಪದಾರ್ಥದಿಂದ ಅಡಿಗೆ ಮಾಡುವದಿಲ್ಲವೆಂದು ಸ್ಪಷ್ಟವಾಗಿ ನಿವೇದಿಸಿರಿ. ನಿಮ್ಮ ಕೈಯಲ್ಲಾಡುವ ಗಂಡಸರು ನಿಮ್ಮ ಮಾತನ್ನು ಮೀರಲಾರರು." ಎಂದಾಗ ಸಭೆ ನಗೆಗಡಲಲ್ಲಿ ತೇಲಿತು. ಈ ಮಾತುಗಳ ಪರಿಣಾಮವು ಅದ್ಭುತವಾಗಿ ಆಗತೊಡಗಿತು.

ಮತ್ತೊಂದು ದಿನ ಇನ್ನೊಂದು ಹಳ್ಳಿಯಲ್ಲಿ ಕೂಡಿದ ಸಭೆಯಲ್ಲಿ ಹೆಂಡ ಕುಡುಕರ ಬಗ್ಗೆ ವಾಸುದೇವನು ಹೇಳುವಾಗ ಸ್ವತಃ ಅವನೇ ಅವರ ದುರವಸ್ಥೆಯನ್ನು ಕಂಡು ಕರಗಿಹೋದನು. "ನಿಮ್ಮ ಈ ದುಶ್ಚಟವನ್ನು ಕಂಡು ನನಗೆ ಅತ್ಯಂತ ಸಂಕಟವಾಗುತ್ತಿದೆ ಅಣ್ಣತಮ್ಮಂದಿರೆ! ಈ ಚಟದಿಂದ ನೀವು ಆರೋಗ್ಯವನ್ನು ಕೆಡಿಸಿಕೊಳ್ಳುವುದಲ್ಲದೆ ನಿಮ್ಮ ಸಂತೋಷವನ್ನು ಗಾಳಿಗೆ ತೂರುವಿರಿ. ನಿಮ್ಮ ಹೆಂಡಿರು ಮಕ್ಕಳನ್ನು ಉಪವಾಸ ಬೀಳಗೊಟ್ಟು ಅವರ ಬರಿಯ ಹೊಟ್ಟೆಗಳನ್ನು ತುಳಿಯುತ್ತ ಹೆಂಡ ಕುಡಿಯುತ್ತ ನೀವು ಬೀದಿಗಳಲ್ಲಿ ಹೊರಳಾಡುವದು ಯಾವ ಮರ್ಯಾದೆ ಹೇಳುವಿರಾ? ನೀವು ಏತಕ್ಕಾಗಿ ಮಕ್ಕಳನ್ನು ಪಡೆದಿರಿ? ನಿಮ್ಮಿಂದ ಅವರಿಗೆ ಯಾವ ಸುಖವಿದೆ? ಪಶುಗಳು ಕೂಡ ತಮ್ಮ ಮಕ್ಕಳನ್ನು ಪ್ರೀತಿಯಿಂದ ಕಾಣುತ್ತವೆ. ಪಕ್ಷಿಗಳು ತಮ್ಮ ಮರಿಗಳಿಗೆ ಕಷ್ಟಪಟ್ಟು ತಮ್ಮ ಚುಂಚುಗಳಿಂದ ಆಹಾರ ಸಲ್ಲಿಸುತ್ತವೆ. ನೀವು ಅವುಗಳಿಗೂ ಕಡೆಯಾಗಿ ಬಾಳಬೇಕೆ? ಈ ಕುಡಿತದಿಂದ ನಿಮ್ಮ ಬಡತನ ಇನ್ನೂ ಅಧಿಕವಾಗಿ ಬೆಳೆಯುವದು. ನಿಮ್ಮಲ್ಲಿ ಪಶುವೃತ್ತಿ ಬೆಳೆಯುವದು. ಇದನ್ನು ಬಿಟ್ಟುಬಿಡಿರಿ. ಈ ಪಾಪವನ್ನು ನಿಮ್ಮ ದೇವರು ಮೆಚ್ಚಲಾರರು. ದೇವರ ಕೋಪವನ್ನು ಕಟ್ಟಿಕೊಂಡು ನೀವು ಬಾಳಲಾರಿರಿ. ಇಂದೇ ದೇವರ ಆಣೆ ಮಾಡಿ ಕುಡಿಯುವದನ್ನು ಬಿಟ್ಟುಬಿಡಿರಿ" ಎಂದು ವಾಸುದೇವನು ಮನಕರಗುವಂತೆ ಹೇಳಿದನು.

ಅಖಂಡ ಮೂರು ವರ್ಷಗಳವರೆಗೆ ನಡೆದ ಈ ಪ್ರಚಾರದಿಂದ ಜನಜೀವನದಲ್ಲಿ ಒಂದು ಬಗೆಯ ಕ್ರಾಂತಿಯೇ ಆಗತೊಡಗಿತು. ಸುತ್ತಲಿನ ಹಳ್ಳಿಗಳಲ್ಲಿ ವಾಸುದೇವನೆಂದರೆ ಪೂಜ್ಯನಾಗಿಬಿಟ್ಟನು. ಇದಕ್ಕೆ ಅವನ ನಿರ್ಮಲ ವೃತ್ತಿ, ಶುದ್ಧಾಚರಣೆ, ಹಿಡಿದ ಕೆಲಸವನ್ನು ಪೂರ್ತಿಗೊಳಿಸುವ ಹಟಗಳೇ ಬಹುಮಟ್ಟಿಗೆ ಕಾರಣವಾಗಿದ್ದವು.

೨

ಮೂರು ವರುಷಗಳಲ್ಲಿ ತನ್ನ ಕಾರ್ಯಶಕ್ತಿಯಿಂದ ಜನಾದರಣೆಯನ್ನು ಗಳಿಸಿಕೊಂಡು ಸರ್ವಜನಪ್ರಿಯನಾಗಿ ಬೆಳೆಯುತ್ತಿರುವ ವಾಸುದೇವನನ್ನು ಪ್ರಾಣಪದಕದಂತೆ ಪ್ರೀತಿಸುವ ಜನರ ಮಧ್ಯದಲ್ಲಿ ಕಂಡು ಉರಿದು ಬೀಳುವವರೂ ಇದ್ದರು. ದ್ವೇಷಿಸುವವರೂ ಇದ್ದರು. ಈ ಜನರು ಬೆರಳಿನ ಮೇಲೆ ಎಣಿಸುವಷ್ಟಿದ್ದರೂ ಪ್ರಭಾವಯುತರಾಗಿದ್ದರು. ಇದರಲ್ಲಿ ಮುಖ್ಯವಾಗಿ ಹಳ್ಳಿಗಳ ಗೌಡರೂ ಕುಲಕರ್ಣಿಗಳೂ, ಹಳ್ಳಿಗಳ ಕಾಹಿಮುಪಂಚರೂ ಇದ್ದರಲ್ಲದೆ ಕೆಲವು ಸರಕಾರೀ ಅಧಿಕಾರಿಗಳೂ ಇದ್ದರು. ಗಂಗನಹಳ್ಳಿಗೆ ಮೂರು ವರ್ಷಗಳ ಹಿಂದೆ ಕಾಲೇಜನ್ನು ಬಿಟ್ಟು ಬಂದ ವಾಸುದೇವನನ್ನು ಈ ಜನ ಮೊದಮೊದಲು ಸಹಾನುಭೂತಿಯಿಂದಲೇ ಕಾಣತೊಡಗಿದ್ದರು. ಈಗ ಅವರಿಗೆ ತಾವು ಹಾಗೆ ಕಂಡದ್ದು ಅಪರಾಧವೆನ್ನಿಸಿ ಪಶ್ಚಾತ್ತಾಪವು ಮೂಡತೊಡಗಿತ್ತು. ಈ ಪಶ್ಚಾತ್ತಾಪವು ದ್ವೇಷಭಾವನೆಗೆ ಎಡೆಗೊಟ್ಟಿತ್ತು. ಹೀಗಾಗಲು ಪ್ರಬಲವಾದ ಕಾರಣಗಳೂ ಇದ್ದವು. ವಾಸುದೇವನು ಈ ಪ್ರದೇಶದಲ್ಲಿ ಕಾಲಿಕ್ಕುವ ಮೊದಲು ಇವರೇ ಗಣ್ಯರಾಗಿದ್ದರು. ಹಳ್ಳಿಗರು ಸಲಹೆಗಾಗಿ ಇವರ ಕಡೆಗೆಯೇ ಹೋಗುವ ಪರಿಪಾಠವು ಪರಂಪರೆಯಿಂದಲೂ ಬಂದಿತ್ತು. ಇತ್ತೀಚೆಗೆ ಇದು ಪೂರಾ ನಿಂತುಬಿಟ್ಟಿತ್ತು. ವಾಸುದೇವನ ಸಲಹೆಯಿಲ್ಲದೆ ಹಳ್ಳಿಗರು ಯಾವ ಕಾರ್ಯವನ್ನೂ ಮಾಡದಾದರು. ಇದರಿಂದ ಈ ಗಣ್ಯರಿಗೆ ತಮ್ಮ ವರ್ಚಸ್ಸು ಕಡಿಮೆಯಾಯಿತೆಂದೆನಿಸುವದು ಸ್ವಾಭಾವಿಕವಾಗಿಬಿಟ್ಟಿತು. ಇದಕ್ಕೆ ವಾಸುದೇವನೇ ಕಾರಣನೆಂದು ಅವನ ಮೇಲೆ ಹಲ್ಲು ಕಡಿಯತೊಡಗಿದರು. ಈ ಗಣ್ಯರ ಆದಾಯವೂ ಕಡಿಮೆಯಾದದ್ದರಿಂದ ಅವರು ವಾಸುದೇವನನ್ನು ಕಂಡು ಕೆಂಡವಾಗತೊಡಗಿದರು. ಹಳ್ಳಿಗರ ಸುಲಿಗೆಯೇ ಅವರ ಆದಾಯವಾಗಿತ್ತು. ಅವರ ಅಜ್ಞಾನದೊಡನೆ ಆಟವಾಡುವದೇ ಅವರ ವಿದ್ಯೆಯಾಗಿತ್ತು. ಇದಕ್ಕೆ ವಾಸುದೇವನಿಂದ ಕೊಡಲಿ ಪೆಟ್ಟು ಬಿದ್ದದ್ದರಿಂದ ಈ ಜನರು ಅವನನ್ನು ಹೇಗೆ ಸಹಿಸಿಯಾರು ? ಆದರೆ ವಾಸುದೇವನನ್ನು ಈಗ ಹಗುರಾಗಿ ಕಾಣುವದು ಅವರಿಗೆ ಅಸಾಧ್ಯವಾಗಿತ್ತು. ಅವನನ್ನು ತಡವುವದು ಕೂಡ ಗಂಡಾಂತರದ್ದೆಂದು ಅವರು ಭಾವಿಸಿದ್ದರಿಂದ ಒಳಗೊಳಗೆ ಕುದಿಯತೊಡಗಿದರು. ಬೆಂಕಿ ಹೊತ್ತುತ್ತಿತ್ತು. ಹೊಗೆಯಾಡತೊಡಗಿತ್ತು. ಅದಕ್ಕೆ ಪುಟಹಾಕುವ ಗಾಳಿಗಾಗಿ

ಅವರು ದಾರಿ ಕಾಯುತ್ತಿದ್ದರು. ಮೇಲೆ ಮೇಲೆ ಅವರು ವಾಸುದೇವನ ಗೆಳೆಯ ರಂತೆ ಕಾಣುತ್ತಿದ್ದರೂ ಒಳಗೆ ಅವನ ಬದ್ಧವೈರಿಗಳಾಗಿದ್ದರು. ಇವರ ಸುಳಿವು ರಾಮಾಶಾಸ್ತ್ರಿಗಳಿಗೆ ಹತ್ತಿದಾಗ ಅವರು ಮಗನನ್ನು ಎಚ್ಚರಿಸಿದರು. ಆ ಮಾತಿಗೆ ವಾಸುದೇವನು, "ಸ್ವಾರ್ಥಿಗಳ ಪಣೆಬರಹವೇ ಹೀಗೆ. ಈ ಜನ ರಿಗೆ ಹೆದರಿ, ಸುಮ್ಮನೇ ಕೂಡ್ರಲಿಕ್ಕೆ ಆದೀತೆ? ಈ ಆಂತರಿಕ ವೈರಿಗಳೇ ದೇಶಕ್ಕೆ ಹತ್ತಿದ ಹುಳಗಳು. ಈ ಹುಳಗಳನ್ನು ನಾಶಮಾಡಲು ಪ್ರಯತ್ನಿಸಿದರೆ ವೇಳೆಯ ಅಪವ್ಯಯಮಾಡಿದಂತೆ. ಅವು ತಮ್ಮತಾವೇ ಸತ್ತುಹೋಗುವುವು" ಎಂದುಬಿಡಲು ರಾಮಾಶಾಸ್ತ್ರಿಗಳು ಸುಮ್ಮನಾಗಿಬಿಟ್ಟರು. ಆದರೂ ಅವರ ಕಣ್ಣಿಗೆ ಈ ಜನ ವಿಷಸರ್ಪಗಳಂತೆ ಕಾಣತೊಡಗಿದರು. "ದೇಶಕ್ಕಾಗಿ ಸರ್ವ ತ್ಯಾಗಮಾಡಿ ದುಡಿಯುವವನನ್ನು ದ್ವೇಷದಿಂದ ಕಾಣುವ ಈ ಜನಕ್ಕೆ ಏನನ್ನ ಬೇಕು?" ಎಂದು ಅನೇಕ ಸಾರೆ ನಿಟ್ಟುಸಿರನ್ನೂ ಬಿಡತೊಡಗಿದರು. "ದೇಶ ದ್ರೋಹಿಗಳಾದ ಈ ಜನ ಯಾವ ಹೊತ್ತಿನಲ್ಲಿ ಏನು ಮಾಡೀತು ಎನ್ನುವ ನಿಯಮವಿಲ್ಲ" ಎಂದು ಅನ್ನತೊಡಗಿದರು. ಅವರ ಪಾಲಿಗೆ ಈ ಜನ ಒಂದು ಬಿಡಸಲಾರದ ಸಮಸ್ಯೆ. "ಎಂತಹ ಜನವಿದು ನಮ್ಮ ಜನ! ದೇಶ ನಮ್ಮದು, ಅದಕ್ಕಾಗಿ ದುಡಿಯುವ ಹುಡುಗ ನಮ್ಮವನು. ಅವನ ಕೆಲಸ ದೇಶಹಿತದ್ದು. ಎಂದರೂ ಅವನನ್ನು ದ್ವೇಷಿಸುವದೆಂದರೆ? ಇದು ಸಂಸ್ಕೃತಿವಿಹೀನವಾದ ಮಾತು" ಎಂದು ವಿಚಾರಿಸಿದಂತೆ ಅವರಿಗೆ ಖೇದವೆನ್ನಿಸುತ್ತಿತ್ತು.

ರಾಮಾಶಾಸ್ತ್ರಿಗಳಿಗೆ ಈ ಜನರ ಮನೋಭಾವವು ಸಮಸ್ಯೆಯಾದಂತೆ ವಾಸುದೇವನಿಗೆ ಕಾಜಿ ಅಬ್ದುಲ್‌ನು ಇತ್ತೀಚೆಗೆ ಮಹಾಸಮಸ್ಯೆಯಾಗಿ ಕಾಣಹತ್ತಿದನು. ಈಗೆರಡು ತಿಂಗಳಿಂದಲೂ ಅವನ ರೀತಿಯೇ ವಿಚಿತ್ರವಾ ಗಿತ್ತು. ಮೊದಲಿನಂತೆ ಮನಃಪೂರ್ವಕವಾಗಿ ಕಾರ್ಯಕ್ರಮಗಳಲ್ಲಿ ಅವನು ಭಾಗವಹಿಸುವದು ಅಪರೂಪವಾಗತೊಡಗಿತ್ತು. ಈಗ ತಿಂಗಳಿಂದ ಅವನ ಸುಳಿವೇ ಇಲ್ಲದಿರುವದು ವಾಸುದೇವನಲ್ಲಿ ಅಚ್ಚರಿಯನ್ನು ಮೂಡಿಸಿತ್ತು. ಅಬ್ದುಲ್‌ನು ಇರುವದಾದರೂ ಎಲ್ಲಿ?

ಗಂಗನಹಳ್ಳಿಯಿಂದ ಮೂರು ಮೈಲುಗಳಾಚೆಯಿರುವ ಸಿದ್ದನಹಳ್ಳಿ ಯಲ್ಲಿ ಅಬ್ದುಲ್‌ಸಾಹೇಬನು ತನ್ನದೇ ಆದ ಒಂದು ಕಾರ್ಯಾಲಯವನ್ನಿಟ್ಟು ಕೊಂಡು ಬೇರೆಯಾದ ಸಂಘಟನೆಯನ್ನು ಮಾಡತೊಡಗಿದ್ದನು. ಅವನಿಗೆ ಬೇರೆ ಕಡೆಯಿಂದ ಆದೇಶಗಳು ಬರತೊಡಗಿದ್ದವು. ಆ ಆದೇಶಗಳನ್ನು ಅವನು ಪಾಲಿಸುತ್ತಿದ್ದನು. ಅಬ್ದುಲ್‌ನು ಈಗ ಮೊದಲಿನವನಾಗಿ ಉಳಿದಿರಲಿಲ್ಲ. ಅವನ ಕಾರ್ಯಶಕ್ತಿ ಬೇರೆಯಾಗಿಯೇ ಹರಿಯತೊಡಗಿತ್ತು. ಅವನ ಕಾರ್ಯ

ದಲ್ಲಿ ಸಹಾಯಕರಾಗಿ ಅಧಿಕಾರಿಗಳೂ ಇರುವರೆಂದು ತಿಳಿದಾಗ ವಾಸುದೇವನಿಗೆ ವೇದನೆಯೂಾಯಿತು. ಬಹಳ ದಿನಗಳಿಂದ ಅವನ ಸುಳಿವೇ ಇಲ್ಲದ್ದರಿಂದ ಕಾತರನಾದ ವಾಸುದೇವನು ಒಂದುದಿನ ಕಾರ್ಯಾಲಯದಲ್ಲಿ ಎಲ್ಲರೂ ಕುಳಿತಾಗ ಸಿದ್ದಪ್ಪನನ್ನು ಕುರಿತು,

"ಇತ್ತೀಚಿಗೆ ಅಬ್ದುಲ್ ಸಾಹೇಬನ ಸುಳಿವೇ ಇಲ್ಲವಲ್ಲ ಸಿದ್ದಪ್ಪ, ಅವನ ಸಮಾಚಾರವೇನು ?" ಎಂದು ಕೇಳಿದನು.

"ಅವನ ಸಮಾಚಾರವೇನು ಹೇಳಿಕೊಳ್ಳುವಂತಹದಲ್ಲ ವಾಸಪ್ಪ! ಅವನ ಕೆಲಸವೀಗ ಬೇರೆಯೇ ಆಗಿದೆ."

"ಅಂದರೆ ?"

"ಅವನು ಮುಸಲ್ಮಾನರ ಸಂಘಟನೆ ಮಾಡತೊಡಗಿದ್ದಾನೆ."

"ಈ ಸಂಘಟನೆಯನ್ನು ಅವನು ಸಿಡಿದುಹೋಗಿ ಏತಕ್ಕೆ ಮಾಡಬೇಕು? ನಾವು ಮಾಡುವ ಕೆಲಸದಲ್ಲಿ ಇದು ಅಡಕವಾಗಿರಲಿಲ್ಲವೆ?"

"ಅವನು ಹಾಗೆ ನಂಬುವದಿಲ್ಲ ವಾಸಪ್ಪ! ಈಗ ಅವನ ಮಾತಿನ ರೀತಿಯೇ ಬೇರೆಯಾಗಿಬಿಟ್ಟದೆ. ನಾವೆಲ್ಲ ಹಿಂದುಗಳು. ಹಿಂದುಗಳ ಉದ್ಧಾರ ಕಾರ್ಯವೇ ನಮ್ಮ ಕಾರ್ಯವಾಗಿದೆಯೆಂದು ಅವನು ಸಾರತೊಡಗಿದ್ದಾನೆ."

"ಎಂತಹ ಹುಚ್ಚು ಕಲ್ಪನೆಯಿದು! ಹಿಂದುಸ್ಥಾನದಲ್ಲಿ ಕೇವಲ ಹಿಂದುಗಳೇ ವಾಸಿಸುತ್ತಿರುವರೆಂದು ಅವನು ತಿಳಿದುಕೊಂಡಿರುವನೆ ? ಈಗ ಹಿಂದುಸ್ಥಾನದಲ್ಲಿ ನೆಲೆಸಿರುವ ಎಲ್ಲ ಹಿಂದೀಯರ ಉದ್ಧಾರವಾಗಬೇಕಾಗಿದೆ. ಹಿಂದೀಯರೆಂದರೆ ಕೇವಲ ಹಿಂದುಗಳಲ್ಲವೆಂಬುದನ್ನು ಅವನು ತಿಳಿಯಬೇಡವೆ? ಹಿಂದುಸ್ಥಾನದಲ್ಲಿ ಬೀಡು ಬಿಟ್ಟಿರುವ ಜನಾಂಗಗಳೆಲ್ಲ ಗುಲಾಮಗಿರಿಯಲ್ಲಿ ನರಳುತ್ತಿರುವಾಗ ಅದರಲ್ಲಿ ಜಾತಿಭೇದವಿದೆಯೇ ? ಈ ದಾಸ್ಯತ್ವವು ಸಮಗ್ರ ಹಿಂದುಸ್ಥಾನಕ್ಕೆ ಬಂದ ಶಾಪವಾಗಿದೆ. ಈ ಶಾಪವಿಮೋಚನೆಗಾಗಿ ಎಲ್ಲರೂ ಕಾರ್ಯಮಾಡಬೇಕಾಗಿದೆ. ಹೀಗಿರುವಾಗ ಮುಸಲ್ಮಾನರದೊಂದು ಬೇರೆ ಸಂಘಟನೆಮಾಡುವದರಲ್ಲಿ ಯಾವ ಅರ್ಥವೂ ಇಲ್ಲ. ಇದರಿಂದ ನಮ್ಮನಮ್ಮಲ್ಲಿ ಒಡಕುಂಟಾಗಿ ಶತ್ರುವು ಪ್ರಬಲನಾಗುತ್ತಾನೆ. ಇದನ್ನು ಅಬ್ದುಲ್‌ನು ತಿಳಿಯಬೇಕು. ಈ ಜಾತೀಯತೆಯ ಭೂತವನ್ನೆಬ್ಬಿಸಿ ಚೆಲ್ಲಾಟವಾಡುವದು ಶತ್ರುಗಳ ವ್ಯೂಹರಚನೆಯಾಗಿದೆ. ಈ ಸುಳಿಯಲ್ಲಿ ಸಿಕ್ಕು ಜಿಬ್ಬೆಯಾದ ಅನರ್ಥವು ಈಗ ಸಾಕಷ್ಟಾಗಿರುವಾಗ ಮತ್ತೆ ಅವನ್ನೇ ಹಿಡಿಯುವದು ಅನಾಹುತದ ಮಾರ್ಗವಾಗಿದೆ. ಇದನ್ನು ಅಬ್ದುಲ್‌ನಿಗೆ ಬಿಂಬಿಸಬೇಕು. ನಾಡು ಸ್ವತಂತ್ರವಾಗಿ ನಿಂತಾಗ ಸಿಗುವ ಸುಖವು ಹಿಂದುಗಳಿಗೆ ಬೇರೆ, ಮುಸಲ್ಮಾನರಿಗೆ

ಬೇರೆಯಾಗುವದೆ? ನಾವೆಲ್ಲ ಒಂದು. ನಾವೆಲ್ಲ ಹಿಂದೀಯರು. ನಮ್ಮ ಸುಖ ದುಃಖಗಳೆಲ್ಲ ಒಂದೇ ಎಂಬುದನ್ನು ಅವನು ತಿಳಿಯಬೇಡವೇ? ಅವನಿಗೆ ಯಾರೋ ತಪ್ಪು ಕಲ್ಪನೆ ಮಾಡಿಸಿದ್ದಾರೆ. ಈ ತಪ್ಪನ್ನುಅವನು ತಿದ್ದಿಕೊಳ್ಳು ವಂತೆ ನಾವು ಅವನ ಮನವೊಲಿಸಬೇಕು ಸಿದ್ದಪ್ಪ!"

"ತಾನು ಮಾಡುತ್ತಿರುವ ಕೆಲಸವು ತಪ್ಪೆಂದು ತಿಳಿದರಲ್ಲವೇ ಅವನು ತಿದ್ದಿಕೊಳ್ಳುವದು. ನೀನು ಹೇಳುವ ಮಾತುಗಳನ್ನು ಈಗಾಗಲೇ ನಾನು ಆಡಿ ತೋರಿಸಿದ್ದೇನೆ. ಅದರಿಂದ ಅವನ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಪ್ರತಿಯಾಗಿ ಅವನು ಮತ್ತಷ್ಟು ಮೊಂಡತನವನ್ನೇ ಮಾಡತೊಡಗಿದ್ದಾನೆ. ವಿಷಬೀಜವನ್ನು ಬಿತ್ತತೊಡಗಿದ್ದಾನೆ."

"ನಾಳೆ ಅವನು ಸತ್ತರೆ ಅವನನ್ನು ಮಕ್ಕಾದಲ್ಲಿ ಹುಗಿದು ಬರುವರೆಂದು ತಿಳಿದುಕೊಂಡಿದ್ದಾನೆಯೇ ಆ ಸಾಹೇಬ? ಅವನು ಗೋರಿಯಾಗುವದು ಗಂಗನಹಳ್ಳಿಯಲ್ಲಿಯೇ." ಬಡಿಗರ ಗೋವಿಂದನು ಕಣ್ಣು ಕೆಂಪಗೆ ಮಾಡಿ ನಡುವೆ ಬಾಯಿ ಹಾಕಿದನು.

"ತನ್ನ ಶವವನ್ನು ಮಕ್ಕಾಕ್ಕೆ ಕಳಿಸಬೇಕೆಂದು ಅವನೂ ಇಚ್ಛಿಸುವದಿಲ್ಲ ಗೋವಿಂದ! ಅವನ ತರ್ಕಸರಣಿ ಬೇರೆಯೇ ಆಗಿದೆ. ಅವನಿಗೆ ಈ ದೇಶದಲ್ಲಿ ತಮ್ಮದೇ ಆದ ಬೇರೊಂದು ದೇಶದ ನಿರ್ಮಾಣವಾಗಬೇಕಂತೆ. ಅದು ಮುಸಲ್ಮಾನರದೇ ಆಗಿ ಇರಬೇಕಂತೆ."

"ಇದು ಹೇಗೆ ಸಾಧ್ಯವಾದೀತು ಸಿದ್ದಪ್ಪ! ರಾಷ್ಟ್ರಪುರುಷನ ದೇಹವು ಅಖಂಡವಾಗಿದೆ. ದೇಹದ ಒಂದು ಭಾಗವನ್ನು ಬೇರ್ಪಡಿಸಿ ಆ ದೇಹವನ್ನು ಕಾಪಾಡಲು ಆದೀತೆ? ಈ ವಿಚಾರವೇ ತಿರುವುಮುರುವಾಗಿದೆ. ಇದು ಸಾಧಿಸುವ ಮಾತಲ್ಲ. ಸುಗಮವಾಗಿ ಸಾಗದ ದಾರಿಯಲ್ಲಿ ಕೊರಡವನ್ನು ಒಗೆಯುವ ಕುಹಕತನವೇ ಈ ವಿಚಾರದಲ್ಲಿ ಅಡಕವಾಗಿದೆ. ನಾವು ಆಡಳಿತವನ್ನು ಬದಲು ಮಾಡಬಹುದು. ಆದರೆ ರಾಷ್ಟ್ರವನ್ನು ತುಂಡರಿಸಬಹುದೆ! ಇದು ಅಯೋಗ್ಯವಾದ ವಿಚಾರ. ಅಸಾಧ್ಯವಾದ ಮಾತು."

"ಈ ಮಾತನ್ನು ಸಾಧಿಸಿಕೊಳ್ಳುವ ಸರ್ವಸನ್ನಾಹವೂ ಸಿದ್ಧವಾಗಿದೆಯೆಂದು ಅವನು ನಂಬಿದ್ದಾನೆ. ಅವನಿಗೆ ಆದೇಶಗಳೂ ಬರತೊಡಗಿವೆ. ಆ ಆದೇಶಗಳನ್ನು ಅವನು ಚಾ-ಚೂ ತಪ್ಪದೇ ಪಾಲಿಸುತ್ತಾನೆ. ಈ ಕಾರ್ಯದಲ್ಲಿ ಅಧಿಕಾರಿಗಳೂ ಅವನಿಗೆ ಅನುಕೂಲರಾಗಿದ್ದಾರೆ ವಾಸಪ್ಪ!

"ಇದರಲ್ಲಿ ಶತ್ರುಗಳ ಕೈವಾಡವಿರುವದೆಂದು ನಾನು ಮೊದಲೇ ಹೇಳಲಿಲ್ಲವೆ? ಇದೊಂದು ಅನಿರೀಕ್ಷಿತವಾದ ಆಪತ್ತು ಸಿದ್ದಪ್ಪ! ಶತ್ರುಗಳ ಕೈಗೊಂಬೆ

ಗಳಾದ ಅಧಿಕಾರಿಗಳ ಬೆನ್ನು ಹತ್ತಿ ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳುವದು ಎಂತಹ ಹೀನ ವಿಚಾರ! ಈ ಬೀಸಿದ ಬಲೆಯಿಂದ ಪಾರಾಗದಿದ್ದರೆ ಆಸಿಷ್ಟವು ಖಂಡಿತ. ಅಬ್ದುಲ್‌ನಿಗೆ ಬರುವ ಆದೇಶಗಳನ್ನು ಅವನು ಪಾಲಿಸುವದೆಂದರೆ ದೇಶವನ್ನು ಕಡೆಗಣಿಸಿದಂತೆ. ಈ ದೇಶದ್ರೋಹವನ್ನು ನಾವು ಪ್ರತಿಭಟಿಸ ಬೇಕು. ನಮ್ಮ ಪ್ರಚಾರಕಾರ್ಯ ಭರದಿಂದ ಸಾಗಬೇಕು. ನಮ್ಮ ದೇಶವು ಈಗ ಜ್ವಾಲಾಮುಖಿಯ ಮೇಲೆ ನಿಂತಂತಾಗಿದೆ. ದೇಶವನ್ನು ನಾವು ಉಳಿಸಿ ಕೊಳ್ಳಬೇಕು. ಅಬ್ದುಲ್‌ನು ಅಧಿಕಾರಿಗಳ ಕೈಗೊಂಬೆಯಾಗಿ ಕೆಲಸಮಾಡು ತ್ತಿರುವದು ಎಂಥ ನಾಚಿಕೆಗೇಡು! ಅವನನ್ನು ನಾನೊಮ್ಮೆ ಕಾಣಬೇಕು ಸಿದ್ದಪ್ಪ!"

"ನಿಮ್ಮನ್ನು ಕಾಣಲು ಅವನು ಸಿದ್ಧನಿಲ್ಲವೆಂಬುದು ನನಗೆ ಸ್ಪಷ್ಟವಾಗಿದೆ. ಅವನು ತನ್ನ ಕೆಲಸ ಮಾಡಲಿ. ನಾವು ನಮ್ಮ ಕೆಲಸ ಮಾಡಿದರಾಯಿತು. ಪ್ರಚಂಡವಾದ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವ ಕೊರಡುಗಳನ್ನು ತಡೆಯುವದರಲ್ಲಿ ಯಾವ ಅರ್ಥವೂ ಇಲ್ಲ. ಅವರವರು ತಮ್ಮ ಫಲಭೋಗ ಗಳನ್ನು ಅನುಭೋಗಿಸುತ್ತಾರೆ. ಇರುಳು ಕಂಡ ಬಾವಿಯಲ್ಲಿ ಹಗಲು ಹಾರಿ ಕೊಳ್ಳುವ ಜನರನ್ನು ತಡೆಯುವದು ಸಾಧ್ಯವಾಗಲಾರದು. ತಮ್ಮ ಮೈಯನ್ನು ತಾವೇ ಸುಟ್ಟುಕೊಳ್ಳುವವರು ವೇದನೆಯನ್ನು ಅನುಭೋಗಿಸುತ್ತಾರೆ. ಅದಕ್ಕೆ ಯಾರೇನು ಮಾಡಬೇಕು?"

"ಅವರು ಕೇವಲ ತಮ್ಮ ದೇಹವನ್ನೇ ಸುಟ್ಟುಕೊಳ್ಳುವದಿಲ್ಲ ಸಿದ್ದಪ್ಪ, ದೇಶಕ್ಕೂ ಉರಿ ಹಚ್ಚುತ್ತಾರೆ."

"ಆ ಉರಿಯನ್ನು ನಂದಿಸುವ ಜನವೇನು ಕಡಿಮೆಯಿಲ್ಲ."

"ಸಾಹೇಬರೆಂದರೆ ಸಾಹೇಬರೆ!" ಎನ್ನುತ್ತ ಗೋವಿಂದನು ಕರಕರ ಹಲ್ಲುತಿನ್ನತೊಡಗಿದನು.

ಸಾಮಾನ್ಯ ಜನರ ಶ್ರದ್ಧೆಯು ವಾಸುದೇವನ ಮೇಲೆ ಸ್ಥಿರವಾಗಿ ನಿಲ್ಲ ತೊಡಗಿದಂತೆ ಗಂಗನಹಳ್ಳಿಯ ಗೌಡರೂ, ಊರ ದೇಶಪಾಂಡೆಯವರೂ, ಕೆಲಸಮಾಡುವ ಕುಲಕರ್ಣಿಯೂ ಅವನನ್ನು ಶತ್ರುವೆಂದು ಪರಿಗಣಿಸಹತ್ತಿ ದರು. ಏನಾದರೂ ಸಂಚುಮಾಡಿ ಅವನನ್ನು ಬಲೆಯಲ್ಲಿ ಹಿಡಿಯಬೇಕೆಂದು ಯೋಚಿಸತೊಡಗಿದರು. ವಾಸುದೇವನ ಬಗ್ಗೆ ಇಲ್ಲಸಲ್ಲದ ಅಪಪ್ರಚಾರವನ್ನು ಎಡೆಬಿಡದೆ ಸಾಗಿಸಹತ್ತಿದರು. ಅವರು ಈ ಕೆಲಸವನ್ನು ಈಗ ಸಾರ್ವಜನಿಕ ವಾಗಿಯೇ ಮಾಡತೊಡಗಿದರು. ಅವರ ಮತ್ಸರಬುದ್ಧಿ ತಾಳ ತಪ್ಪಿ ಕುಣಿಯ ತೊಡಗಿತು.

ಒಂದು ದಿನ ವಾಸುದೇವನು ತನ್ನ ಸಂಗಡಿಗರೊಂದಿಗೆ ಬೀದಿಯಲ್ಲಿ ಹೋಗುತ್ತಿರುವಾಗ ಗೌಡರು ನಿಲ್ಲಿಸಿ ಹೇಳಿದರು,

"ಏನೋ ವಾಸೂ! ನಿನ್ನ ಪುಂಡಾಟಿಕೆ ಇತ್ತೀಚೆಗೆ ಬಹಳ ಜೋರಾಗಿರುವಂತೆ ಕಾಣುತ್ತಿದೆಯಲ್ಲ. ಏನೋ ಮಾಸ್ತರರ ಮಗನೆಂದು ಸಡಿಲುಬಿಟ್ಟರೆ ತಲೆಯ ಮೇಲೆಯೇ ಏರಿ ಕುಳಿತುಕೊಳ್ಳುವದೆ?"

"ನಾನು ಯಾವ ಪುಂಡಾಟಿಕೆಯನ್ನೂ ಮಾಡುತ್ತಿರುವದಿಲ್ಲ ಗೌಡರೆ!"

"ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುತ್ತಿದ್ದರೆ ಅದನ್ನು ನೋಡುವ ಕಣ್ಣುಗಳೂ ಕುರುಡಾಗಿರುವವೆಂದು ತಿಳಿದಿರುವೆಯಾ? ನಾನು ಕೊನೆಯ ಸಲ ನಿನಗೆ ಎಚ್ಚರ ಕೊಡುತ್ತಲಿದ್ದೇನೆ. ಇದನ್ನು ಸಾಕುಮಾಡು."

"ನಾನು ಮಾಡುತ್ತಿರುವ ಅಪರಾಧವಾದರೂ ಏನು ಗೌಡರೆ? ನಿಮ್ಮ ಮಾತು ನನಗೆ ಅರ್ಥವಾಗುತ್ತಿರುವದಿಲ್ಲ."

"ಇಂತಹ ಮಾತುಗಳಿಂದ ನೀನು ಇನ್ನು ಮೇಲೆ ಜಾರಿಕೊಳ್ಳಲಾರೆ. ಈ ಗೂಂಡಾಗಿರಿಯನ್ನು ನಿಲ್ಲಿಸು."

"ಸ್ವಾತಂತ್ರ್ಯಪ್ರಾಪ್ತಿಗಾಗಿ ರಾಷ್ಟ್ರದ ಸೇವೆ ಮಾಡುವದು ಗೂಂಡಾಗಿರಿಯೆಂದೇ ನಿಮ್ಮ ಅಭಿಪ್ರಾಯವೇ?"

"ಇದು ಗೂಂಡಾಗಿರಿಯಷ್ಟೇ ಅಲ್ಲ. ರಾಜದ್ರೋಹವೂ ಆಗಿದೆ. ಹಳ್ಳಿಗರ ಮೂಢ ಮನಸ್ಸುಗಳಲ್ಲಿ ಇಲ್ಲದ ವಿಚಾರಗಳನ್ನು ತುಂಬಿ ಅವರ ತಲೆ ತಿರಿಗಿಸುವದು ಬಂಡುಖೋರತನವಾಗಿದೆ."

"ಈ ಬಂಡಾಯವನ್ನೆಬ್ಬಿಸುವದು ನಮ್ಮ ಉದ್ದೇಶವೇ ಆಗಿದೆ ಗೌಡರೆ! ನೀವು ನಿಜವನ್ನೇ ನುಡಿಯುತ್ತಿರುವಿರಿ. ಆದರೆ ಈ ಬಂಡಾಯವು ರಕ್ತರಹಿತವಾಗಿದೆ. ಹಿಂಸೆಯ ಪ್ರಚೋದನೆಯನ್ನು ನಾವು ತಪ್ಪಿ ಕೂಡಾ ಮಾಡುವದಿಲ್ಲ. ರಾಷ್ಟ್ರಕಾರ್ಯಕ್ಕೆ ನಮ್ಮ ಚಟುವಟಿಕೆಗಳು ಅನುಗುಣವಾಗಿ ಸಾಗುತ್ತವೆ. ನೀವು ತಿಳಿದುಕೊಂಡಂತೆ ನಾನು ರಾಜದ್ರೋಹಿಯಾಗಿರಬಹುದು. ಆದರೆ ಇದು ರಾಷ್ಟ್ರಭಕ್ತಿಯಿಂದ ಪ್ರೇರಿತವಾಗಿದೆಯೆಂಬುದನ್ನು ನೀವು ಅರಿಯಬೇಕು. ಸ್ವಾತಂತ್ರ್ಯ ನನ್ನೊಬ್ಬನ ಸೊತ್ತಲ್ಲ ಗೌಡರೆ! ಇದರಲ್ಲಿ ನೀವೂ ಪಾಲುಗಾರರು. ನೀವೂ ನಮಗೆ ಸಹಾಯ ಮಾಡಬೇಕು. ನಿಮ್ಮ ಸಹಾಯದಿಂದ ಈ ಶೋಷಣೆ ನಿಂತರೆ ಭಾರತದ ಭವಿಷ್ಯ ಉಜ್ವಲವಾಗುವದು. ಸ್ವಾತಂತ್ರ್ಯವನ್ನು ಗಳಿಸಿಕೊಡುವ ಪುಣ್ಯದ ಕೆಲಸದಲ್ಲಿ ನೀವು ಸಿದ್ಧರಾಗಿ ನಿಂತರೆ ನಿಮ್ಮ ಪೀಳಿಗೆಯ ಉದ್ಧಾರವಾಗುವದು. ನಾಡು ನಿಮ್ಮ ಋಣದಲ್ಲಿ ನಿಲ್ಲುವದು. ಇದನ್ನು ನಾನು ನಿಮಗೆ ಹೇಳಬೇಕೆ? ಸ್ವಾರ್ಥ ಯಾರನ್ನೂ

ಬಿಟ್ಟಿಲ್ಲವೆಂಬುದನ್ನು ನಾನು ಬಲ್ಲೆ. ಆದರೆ ವಿವೇಚನೆ ನಿಲ್ಲಬಾರದು. ಕೇವಲ ಸ್ವಾರ್ಥವು ಯಾವ ದೇಶವನ್ನು ಉದ್ಧಾರಮಾಡಬಹುದು ಹೇಳಿರಿ. ಈ ಸ್ವಾರ್ಥಿಗಳಿಂದ ನಾನು ಕಂಗೆಟ್ಟುಹೋಗಿರುವದನ್ನು ನೀವು ಗಂಭೀರವಾಗಿ ವಿಚಾರಿಸಬೇಡವೆ ?"

"ಹೌದು! ಹೌದು! ನಾವು ಸ್ವಾರ್ಥಿಗಳು. ನೀನು ಮಾತ್ರ ಪರಮಾತ್ಮ ಸಾಧಕ. ಉಂಡಮನೆ ಗಳ ಎಣಿಸುವ ಪಾಪವನ್ನು ಮಾತ್ರ ನಾವು ಮಾಡ ಲಾರೆವು. ತಿಳಿಯಿತೆ ?"

"ಉಣ್ಣುವ ಮನೆ ನಿಮ್ಮದೇ ಆದಾಗ ಈ ಮಾತು ಒಳ್ಳೆಯದು ಗೌಡರೆ! ನಿಮ್ಮ ಮನೆಯಲ್ಲಿಯೇ ನೀವು ಪರದೇಶಿಗಳಾಗಿದ್ದೀರಿ. ನಿಮ್ಮ ಮನೆಗೆ ಬೆಂಕಿ ಹತ್ತಿರುವಾಗ ಆ ಜ್ವಾಲೆಯಿಂದ ಬೆನ್ನು ಕಾಸಿಕೊಳ್ಳುವುದು ಹೇಸಿತನವಾಗಲಾರದೆ ?"

"ಹಳ್ಳಿಹಳ್ಳಿಗಳಿಗೆ ಬೆಂಕಿ ಹಚ್ಚುತ್ತಿರುವ ನೀನು ಈ ಮಾತನ್ನು ಆಡಬಾರದು."

"ನಾನು ಬೆಂಕಿ ಹಚ್ಚುತ್ತಿರುವದಿಲ್ಲ ಗೌಡರೆ! ದೀಪಗಳನ್ನು ಉರಿಸು ತ್ತಿದ್ದೇನೆ. ನಮ್ಮ ಕಾರಣಿಕ ಪುರುಷನು ನಮಗೊಂದು ಬೆಳಕನ್ನು ಕೊಟ್ಟಿ ದ್ದಾನೆ. ಈ ಬೆಳಕು ನಾಡ ಮೂಲೆಮೂಲೆಗಳಲ್ಲಿ ಸೇರಿಕೊಂಡ ಕತ್ತಲೆಯನ್ನು ಓಡಿಸುವಂತೆ ಸಾವಿರಾರು ದೀಪಗಳನ್ನು ಹಚ್ಚಬೇಕಾಗಿದೆ."

"ಇಂತಹ ಮಾತನ್ನು ಹಳ್ಳಿಯ ಹುಂಬರ ಮುಂದೆ ಹೇಳು. ನನಗೆ ನಿನ್ನ ಆಟವೆಲ್ಲ ಗೊತ್ತಾಗಿದೆ. ತಿಳಿಯಿತಿಲ್ಲೊ ?"

"ನಾನು ಯಾರಿಗಾಗಿ ಈ ಕೆಲಸವನ್ನು ಮಾಡುತ್ತಿರುತ್ತೇನೆ ಹೇಳ ಬಹುದೇ ಗೌಡರೆ ?"

"ಯಾರಿಗಾಗಿ ಎಂದರೆ! ನಿನಗಾಗಿ, ನಿನ್ನ ಪ್ರತಿಷ್ಠೆಗಾಗಿ, ನಿನ್ನ ಸ್ವಾರ್ಥಕ್ಕಾಗಿ. ಪರಂಪರೆಯಾಗಿ ಬಂದ ಪ್ರತಿಷ್ಠಿತರನ್ನು ತಳ್ಳಿ ನಿನ್ನ ಲಬ್ಧ ಪ್ರತಿಷ್ಠೆಯನ್ನು ಬೆಳೆಯಿಸಿಕೊಳ್ಳಲು ರಾಷ್ಟ್ರಸೇವೆಯ ಸೋಗು ಹಾಕಿರುವಿ."

ಅಲ್ಲಿಯೇ ನಿಂತು ಈ ಮಾತುಗಳನ್ನು ಕೇಳುತ್ತಿದ್ದ ಗೋವಿಂದನ ಸಹನೆ ಮೀರತೊಡಗಿತು. ಈ ಮಾತುಗಳನ್ನು ಆಡುತ್ತಿದ್ದ ಗೌಡನ ಹೃದಯದಲ್ಲಿ ಆಡತೊಡಗಿದ್ದ ಹೊಗೆಯ ಕಲ್ಪನೆ ಆಗಲೇ ಅವನಿಗೆ ಆಗಿಬಿಟ್ಟಿತ್ತು. ಅವನ ಹೊಟ್ಟೆಯುರಿಯೇ ಇದಕ್ಕೆ ಕಾರಣವೆಂದು ಅವನಿಗೆ ಹೊಳೆದುಹೋಯಿತು. ಇಂತಹವರೊಡನೆ ತರ್ಕಕ್ಕೆ ನಿಂತು ತಲೆ ಕೆಡಿಸಿಕೊಳ್ಳುವ ವಾಸುದೇವನ ಸಹನೆಯನ್ನು ಅವನು ಕಂಡುಕೊಂಡನು. ಅದರ ನಿಷ್ಪ್ರಯೋಜಕತೆಯು

ಅವನಿಗೆ ಮನದಟ್ಟೂ ಆಯಿತು.

ಆಗಲೇ ಅನೇಕ ಜನರು ಸುತ್ತಲೂ ನೆರೆದು ಈ ವಾಗ್ವಾದಗಳನ್ನು ಕೇಳುತ್ತಿದ್ದರು ಬಡಿಗೇರ ಗೋವಿಂದನಿಗೆ ಈ ಜನರ ಎದುರಿನಲ್ಲಿಯೇ ಗೌಡನನ್ನು ಮಾತನಾಡಿಸಬೇಕೆಂದು ಅನ್ನಿಸಿದ್ದರಿಂದ ಅವನು ಗಡುಸಾದ ದನಿಯಲ್ಲಿ ಅಡ್ಡಬಾಯಿ ಹಾಕಿದನು.

"ಏನು ಗೌಡಾ! ವಾಸಪ್ಪನಿಗೆ ಪ್ರತಿಷ್ಠೆ ಬೇಕಾಗಿರುವದೆಂದು ನಿನ್ನ ನಾಲಿಗೆಯನ್ನು ಹರಿಬಿಡುವಿಯಾ? ನಿನ್ನಂತಹ ನಾಯಿಗೆ ಅವನ ಪರಿಚಯವು ಆಗುವದು ಸಾಧ್ಯವೇ ಇಲ್ಲ. ವಾಸಪ್ಪನಿಗೆ ಪ್ರತಿಷ್ಠೆ ಬೇಕಾಗಿದ್ದರೆ, ಅವನು ಬಿ.ಎ. ಪಾಸುಮಾಡಿ ಮಾಮಲೇದಾರನಾಗಿ ಬಂದು ನಿನ್ನಂತಹ ನಾಯಿಗಳನ್ನು ಬಗ್ಗಿಸಿ ಸಲಾಮು ತೆಗೆದುಕೊಳ್ಳುತ್ತಿದ್ದ. ಆಗ ನೀವು ಕುಂಯಿಗುಡುತ್ತ ಡೊಗ್ಗಿ ಮುಜುರೆಯನ್ನು ಮಾಡುತ್ತಿದ್ದಿರಿ. ಅವನ ರಾಷ್ಟ್ರಭಕ್ತಿಯನ್ನು ಹಗುರಾಗಿ ಕಾಣುವ ನೀನು ಮನುಷ್ಯನೇ ಅಲ್ಲ." ಎಂದು ಅಬ್ಬರಿಸಿದನು.

ನಾಲ್ಕು ಜನರಲ್ಲಿ ತನ್ನ ಮುಖಭಂಗಿಸಿದ ಗೋವಿಂದನನ್ನು ಕೆರಳಿದ ಕಣ್ಣುಗಳಿಂದ ನೋಡುತ್ತ ಗೌಡನು,

"ಯಾರಿಗೆ ನಾಯಿಯೆಂದು ಬೊಗಳುತ್ತೀಯೋ ಬಾಚಿಯ ಕುನ್ನೀ! ನಿಮ್ಮನ್ನು ಹಿಡಿದು ಸಾಲುಬೇಡಿ ಹಾಕಿಸೇನು."

"ಬೊಗಳುವ ನಾಯಿ ಕಚ್ಚುತ್ತಿರುವದಿಲ್ಲ ಸುಮ್ಮನೆ ಹೋಗು. ನಿನ್ನ ಹೊಟ್ಟೇಕಿಚ್ಚು ನನಗೆ ತಿಳಿಯದ ವಿಷಯವಲ್ಲ. ಹಳ್ಳಿಗರ ಸುಲಿಗೆ ನಿಂತಿತೆಂದು ಒದರಾಡುತ್ತೀ. ಇಲ್ಲದ ಆರೋಪಗಳನ್ನು ವಾಸಪ್ಪನ ಮೇಲೆ ಮಾಡುತ್ತೀ. ಬೇಡಿಯ ಬೆದರಿಕೆ ಹಾಕಿ ನಮ್ಮನ್ನು ಅಂಜಿಸಬೇಕೆಂದು ಮಾಡಿದ್ದೀಯಾ? ಬಪ್ಪರೆ ಬಂಟ! ನಿನ್ನ ಕೈಗೆ ಬಂಗಾರದ ಬಳೆಗಳನ್ನು ತೊಡಿಸಬೇಕು ನೋಡು. ಬಲಾಢ್ಯ ಬ್ರಿಟಿಷ ಸರಕಾರದ ಮದ್ದುಗುಂಡುಗಳನ್ನು ಲೆಕ್ಕಿಸದ ನಮ್ಮನ್ನು ಈ ಬೇಡಿಯಿಂದ ಹೆದರಿಸಬಂದೆಯಾ? ನಿನ್ನ ತಮ್ಮಂದಿರನ್ನು. ನಿನ್ನ ಅಣ್ಣಂದಿರನ್ನು, ನಿನ್ನ ಕೂಸುಕುನ್ನಿಗಳನ್ನು ಬೇಡಿಯಿಂದ ಬಿಗಿಯದೇ ನೀನು ಇನ್ನಾರನ್ನು ಬಿಗಿಯಬಹುದು! ನಿನ್ನಲ್ಲಿ ಗಂಡಸುತನವಿದ್ದರೆ ನಿನ್ನ ಗಂಟಲ ಹಿಚಕುತ್ತಿರುವ ಆಳರಸರನ್ನು ಕೆಣಕಿ ನೋಡು! ಆಗ ನಿನ್ನ ಧೈರ್ಯ ಪ್ರಕಟವಾಗುತ್ತದೆ. ಸಾಹೇಬರ ಬಟ್ಲರನ ಬೂಟು ನೆಕ್ಕುವ ನಾಯಿಗಳು ದರ್ಪದ ಮಾತಾಡಬಾರದು." ಎಂದು ಗದರಿದನು.

ನಿಂತ ಜನ ಈ ಮಾತುಗಳನ್ನು ಕೇಳಿ ಖೊಳ್ಳನೇ ನಕ್ಕುಬಿಟ್ಟಿತು. ಗೌಡ ಹೆಡೆತುಳಿದ ಹಾವಿನಂತೆ ಭುಸುಗುಟ್ಟತೊಡಗಿದ. ಗೋವಿಂದನ ಮಾತಿನ

ರೀತಿಯಿಂದ ವಾಸುದೇವನಿಗೂ ವೇದನೆಯಾಯಿತು. ಅವನು ಶಾಂತಸ್ವರದಲ್ಲಿ,

"ಇಂತಹ ಮಾತುಗಳನ್ನು ಸ್ವಯಂಸೇವಕರಾದ ನಾವು ಆಡಬಾರದು ಗೋವಿಂದ. ಗೌಡರು ಹೊರಗಿನವರೆ? ಅವರೂ ನಮ್ಮವರು."

"ಹಾಗೆ ಅವರೆಲ್ಲಿ ತಿಳಿದುಕೊಂಡಿದ್ದಾರೆ ವಾಸಪ್ಪ? ಅವರ ಹಣವನ್ನು ಸಾಹೇಬರು ಇಂಗ್ಲಂಡಕ್ಕೆ ರವಾನಿಸುತ್ತಾರೆಂದು ಇವರು ನಂಬಿದ್ದಾರೆ" ಎಂದು ಗೋವಿಂದನೆನ್ನಲು ಜನ ಮತ್ತೆ ಘೊಳ್ಳನೇ ನಕ್ಕಿತು.

"ಅವರಲ್ಲಿ ಏನೋ ತಪ್ಪು ಗ್ರಹಿಕೆಯಾಗಿದೆ. ಅದನ್ನು ಸರಿಪಡಿಸುವದನ್ನು ಬಿಟ್ಟು ನೀನೇಕೆ ಹೀಗೆ ಹುಚ್ಚನಂತೆ ಚೀರಾಡುತ್ತೀ. ಚೀರಾಡಿ ಕೆಣಕುವುದರಿಂದ ಯಾವ ಕಾರ್ಯವೂ ಆಗುವುದಿಲ್ಲ. ಇದರಿಂದ ನಮ್ಮನಮ್ಮಲ್ಲಿ ಒಡಕುಂಟಾಗಿ ವೈರಿಗಳು ಪ್ರಬಲರಾಗುವರೆಂದು ನಾನು ನಿನಗೆ ಎಷ್ಟುಸಾರೆ ಹೇಳಲಿ?" ವಾಸುದೇವನು ಗಂಭೀರನಾಗಿ ಹೇಳಿದ.

"ಹೊರಗಿನ ವೈರಿಗಳಿಗಿಂತ ನಮಗೆ ಈ ಒಳಗಿನ ವೈರಿಗಳದೇ ಉಪದ್ರವ ಹೆಚ್ಚಾಗಿದೆ. ನಾವು ಮೊದಲು ಇವರನ್ನು ಹಾದಿಗೆ ತರಬೇಕು." ಗೋವಿಂದ ಮತ್ತೆ ಮಾತು ಎಳೆದ.

ಆ ವೇಳೆಗೆ ಅಲ್ಲಿಗೆ ಧಾವಿಸಿ ಬಂದ ಕುಲಕರ್ಣಿಯು ಈ ಮಾತನ್ನು ಕೇಳಿ "ತಲೆಯಮೇಲೆ ಬಿಳಿಯ ಟೊಪ್ಪಿಗೆ ಬಂದಿತೆಂದು ನೀನೂ ಉಪದೇಶಕ್ಕಿಳಿದಿಯಾ ಬಡಿಗಾ! ಊರಗೌಡ ಕುಲಕರ್ಣಿಯವರೆಂದರೆ ನಿನಗೆ ನೊರಜಿನಂತೆ ಕಾಣುವೆವಲ್ಲವೆ? ಬಹಳ ಎಚ್ಚರಿಕೆಯಿಂದಿರು. ನಿನ್ನ ಚಮರ್ಾ ಸುಲಿಸಿಬಿಟ್ಟೇನು. ಸೂರ್ಯನು ಮೂಡಿ ಮುಳಗದ ಬಲಾಢ್ಯ ಬ್ರಿಟಿಷ್ ಸರಕಾರದ ಬುಡಮೇಲು ಮಾಡುತ್ತಾರಂತೆ ಈ ಟಕಳಿಯ ಬಾಹದ್ದರರು. ನೀವು ಹಾಳಾಗಿ ಏನು ಮಾಡುತ್ತೀರೋ ಮಾಡಿಕೊಳ್ಳಿರಿ. ನಮ್ಮ ಹೆಸರು ತೆಗೆದರೆ ನಿಮ್ಮ ಹೆಡಮುರಿಕೆ ಬಿಗಿಸೇವು. ಬ್ರಿಟಿಷ್ ಸರಕಾರದ ಗೌಡಕುಲಕರ್ಣಿಯವರು ಕೈಯಲ್ಲಿ ಬಳೆತೊಟ್ಟುಕೊಂಡಿಲ್ಲ. ತಿಳಿಯಿತೇ ಬದಮಾಷ್! ಈ ಹುಚ್ಚರೊಡನೆ, ಯಾಕೆ ಕಾದಾಡುತ್ತೀರಿ ಗೌಡರೆ, ನಡೆಯಿರಿ. ಈ ಬದಮಾಷರ ಹುಟ್ಟಡಗಿಸುವ ಸಾಮರ್ಥ್ಯ ಈ ಕುಲಕರ್ಣಿಯಲ್ಲಿದೆ" ಎಂದು ಗೌಡರ ಕೈ ಹಿಡಿದು ಎಳೆಯತೊಡಗಿದನು.

"ಬದಮಾಷರ ಕಣ್ಣಿಗೆ ಎಲ್ಲರೂ ಬದಮಾಷರಂತೆ ಕಾಣುವದು ಸ್ವಾಭಾವಿಕ"ವೆಂದು ಗೋವಿಂದನು ಮತ್ತೆ ನುಡಿದನು.

"ನೀವು ತಪ್ಪುಹಾದೀ ಹಿಡಿಯುತ್ತಿರುವಿರಿ ಹಿರಿಯರೆ!..." ವಾಸುದೇವನು ಶಾಂತನಾಗಿ ಹೇಳುವದನ್ನು ಸಹಿಸದೆ ದೇಶಪಾಂಡೆಯು.

"ನಾವು ಹಿಡಿದದ್ದು ತಪ್ಪುದಾರಿಯಪ್ಪ. ನಿನ್ನ ದಾರಿ ಮಾತ್ರ ಬಹಳ ಪವಿತ್ರವಾದದ್ದು. ವಿಶ್ವೇಶ್ವರಭಟ್ಟರ ಮನೆತನದಲ್ಲಿ ಹುಟ್ಟಿ ಸೂಳೆಯರ ಮನೆಯಲ್ಲಿ ಬೀಳುವ ನಿನ್ನ ದಾರಿ ಒಳ್ಳೆಯದಲ್ಲದೇ ಮತ್ತೇನು? ಧರ್ಮವಂತರ ಮನೆಯಲ್ಲಿ ಜನ್ಮತಾಳಿ ಎಂತಹ ಧಾರ್ಮಿಕ ಭಾವನೆಗಳನ್ನು ಬೆಳೆಸಿಕೊಂಡಿರುವಿ ನೋಡು. ದೇಶಭಕ್ತರ ಸೋಗಿನಲ್ಲಿ ಮಾಡಬಾರದ ಕೆಲಸಮಾಡಿ, ಆಡಬಾರದ್ದನ್ನು ಆಡುವ ನಿನ್ನ ಅಪರಾಧವನ್ನು ನೋಡಿ ವಿಶ್ವೇಶ್ವರಭಟ್ಟರು ಸ್ವರ್ಗದಿಂದ ಕಣ್ಣೀರು ಸುರಿಸುವಂತೆ ಮಾಡುತ್ತಿರುವಿ. ಆ ಮನೆತನದಲ್ಲಿ ಹುಟ್ಟಿ ಹೊಲೆಯರ ಪಾಲಾದ ನೀನು ನಮ್ಮ ದಾರಿ ತಪ್ಪೆಂದು ಹೇಳುವ ಸಾಹಸ ಮಾಡುವಿಯಾ?"

ದೇಶಪಾಂಡೆಯ ಈ ಮಾತುಗಳನ್ನು ಕೇಳಿ ಕೂಡಿದ ಜನರು ಒಮ್ಮೆಲೇ ವಾಸುದೇವನ ಕಡೆಗೆ ನೋಡಿದರು. ಗೋವಿಂದನು

"ಏನು ಮಾತಾಡುತ್ತೀರಿ ದೇಶಪಾಂಡೆಯವರೆ! ನಿಮ್ಮ ನಾಲಿಗೆ ಹುಳ ಬಿದ್ದು ಕೊಳೆತು ಹೋದೀತು." ಎಂದು ಅಬ್ಬರಿಸಿದನು.

ವಾಸುದೇವನು ಗೋವಿಂದನನ್ನು ಸಂತಯಿಸುತ್ತ ಮುಗುಳುನಗೆಯಲ್ಲಿ,

"ಅವರು ನಿಜವನ್ನೇ ನುಡಿಯತೊಡಗಿದ್ದಾರೆ ಗೋವಿಂದ. ಈ ಮಾತುಗಳಿಂದ ನಾವೇಕೆ ಸಿಟ್ಟಿಗೇಳಬೇಕು ಹೇಳು? ನಾನು ಹೊಲಗೇರಿಯಲ್ಲಿ ಹೋಗಿ ಬರುವದು ಸುಳ್ಳೇ ಹೇಳು. ಹೊಲಗೇರಿ ಹೊಲಗೇರಿಯಾಗಿಯೇ ಉಳಿಯಬಾರದೆಂದು ನಾವು ಶ್ರಮಿಸುತ್ತಿರುವದನ್ನೇ ಮೆಚ್ಚಿ ದೇಶಪಾಂಡೆಯವರು ಅದನ್ನು ಬೇರೆ ರೀತಿಯಿಂದ ವ್ಯಕ್ತಮಾಡತೊಡಗಿದ್ದಾರೆ, ಅಷ್ಟೆ. ಮೇಲಾಗಿ ಅವರಿಗೆ ನನ್ನ ಮನೆತನದ ಕೀರ್ತಿಯೂ ಕಾಡತೊಡಗಿದೆ. ವಿಶ್ವೇಶ್ವರ ಭಟ್ಟರ ಕತೆಯನ್ನು ಕೇಳಿ ಅವರು ನನ್ನ ಸಲುವಾಗಿ ಕನಿಕರ ತುಂಬಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಕೃತಜ್ಞನೇ ಆಗಿದ್ದೇನೆ. ಆದರೆ ಒಂದು ಮಾತು ಗೋವಿಂದ, ನಮ್ಮ ಪೂರ್ವಜರಾದ ವಿಶ್ವೇಶ್ವರಭಟ್ಟರು ಕೊನೆಯವರೆಗೂ ತಮ್ಮ 'ಬಳ್ಳಿ ಹಬ್ಬಲಿ' ಎಂದು ಹೇಳುತ್ತಿದ್ದರಂತೆ. ಆ ಬಳ್ಳಿ ವಿಶಿಷ್ಟವಾಗಿರಲಿಲ್ಲ. ಅದು ಗಂಗನಹಳ್ಳಿಗೆ ವ್ಯಾಪಕವಾಗಿತ್ತು. ಅವರ ಕೆಲಸವನ್ನೇ ನಾನು ಮಾಡುತ್ತಿರುವೆನೆಂಬುದನ್ನು ದೇಶಪಾಂಡೆಯವರು ಏನು ಬಲ್ಲರು? ಸೂಳೆಯರಾಗಲಿ, ಹೊಲೆಯರಾಗಲಿ, ಗಂಗನಹಳ್ಳಿಯ ಮಕ್ಕಳೆಂಬುದನ್ನು ನಾನು ಅರಿತಿದ್ದೇನೆ. ಅವರಿಗಾಗಿ ದುಡಿಯುತ್ತೇನೆ. ಪ್ರಸಂಗ ಬಂದರೆ ಅವರಿಗಾಗಿ ಸಾಯುತ್ತೇನೆ. ಈ ಮಾತನ್ನು ನೀನು ಅರಿತಷ್ಟು ಅವರು ಅರಿಯಲಾರರು. ಈ ಜನರೊಡನೆ ಮಾತು ಬೆಳೆಸುವದೂ ವೇಳೆಯ ಅಪವ್ಯಯ ಅಲ್ಲವೆ?"

"ಆ ದೇಶಪಾಂಡೆಯು ಕೆನ್ನೆ ಬಾಯಿಸಬೇಕಾಗಿತ್ತು." ಕೂಡಿದವರಲ್ಲಿ ಒಬ್ಬನು ಮನಃಪೂರ್ವಕವಾಗಿ ನುಡಿದ.

"ಹಾಂ! ಹಾಗೆ ನೀವೇನಾದರೂ ಮಾಡಿದರೆ ನಾನು ಪ್ರಾಣವನ್ನೇ ಕೊಡಬೇಕಾದೀತು. ದ್ವೇಷವನ್ನು ಹಿಂಸೆಯಿಂದ ನಾವೆಂದಿಗೂ ನದೆಬಡಿಯು ಲಾರೆವು. ಅದನ್ನು ಪ್ರೀತಿಯಿಂದ ಸಮೂಲವಾಗಿ ನಾಶಪಡಿಸಬೇಕು. ಹಿಂಸೆ ಎಂದಿಗೂ ಸಾಹಸವಲ್ಲ, ತಿಳಿಯಿತೇ? ನಮ್ಮ ಚಳವಳಿಯ ಮೂಲಮಂತ್ರವೇ ಅಹಿಂಸೆಯಾಗಿದೆ. ನಮ್ಮಲ್ಲಿ ಅಪಾರವಾದ ಸಹನೆ ಬೆಳೆಯಬೇಕು. ಅವರು ಏನೇ ಅಂದರೂ ನಮ್ಮವರು. ಅವರ ಅಜ್ಞಾನಕ್ಕಾಗಿ ನಾವು ಕನಿಕರಪಡ ಬೇಕು. ಅವರಿಗೆ ಒಳ್ಳೆಯ ಬುದ್ಧಿಯನ್ನು ದಯಪಾಲಿಸೆಂದು ದೇವರಿಗೆ ಪ್ರಾರ್ಥನೆ ಸಲ್ಲಿಸಬೇಕು" ಎಂದು ನುಡಿದ ವಾಸುದೇವನ ಕಣ್ಣುಗಳಲ್ಲಿ ಮಿನು ಗಿದ ಕಾಂತಿಯನ್ನು ಕಂಡ ಅವನ ಗೆಳೆಯರು ತೆಪ್ಪಗಾದರು. ವಾಸುದೇವನ ಎದುರುಹೇಳುವ ಧೈರ್ಯ ಯಾರಿಗೂ ಆಗುತ್ತಿರಲಿಲ್ಲವೆಂಬುದು ಸ್ಪಷ್ಟವೇ ಇತ್ತು. ತನ್ನ ಸದಾಚಾರವರ್ತನೆಯ ಸಂಪನ್ನತೆಯಿಂದ ವಾಸುದೇವನು ಗೆಳೆಯರ ಹೃದಯಸಿಂಹಾಸನವನ್ನು ಆಗಲೇ ಆಕ್ರಮಿಸಿಬಿಟ್ಟಿದ್ದ.

೩

ನಾಲ್ಕುಜನರ ಎದುರಿಗೆ ತಮಗಾದ ಮುಖಭಂಗವನ್ನು ಗೌಡರು ಸಹಿಸ ಬಹುದೆ? ದೇಶಪಾಂಡೆಯವರು ತಾಳಿಕೊಂಡಾರೆ? ಕುಲಕರ್ಣಿಗಂತೂ ಇದು ಪ್ರತ್ಯಕ್ಷ ಅಪಮಾನವೆನ್ನಿಸಿಬಿಟ್ಟಿತು. ಈ ಪುಂಡರನ್ನು ಗಂಗನಹಳ್ಳಿಯಿಂದ ಓಡಿಸದಿದ್ದರೆ ನಾವೇಕೆ ಬಾಳಬೇಕು ಎಂದವರು ಪ್ರತಿಜ್ಞೆಯನ್ನೇ ಮಾಡಿದರು. ಈ ಕೆಲಸಕ್ಕಾಗಿ ಅನುಕೂಲ ಕಾಲವನ್ನು ಅವರು ನಿರೀಕ್ಷಿಸತೊಡಗಿದರು.

ಗಂಗನಹಳ್ಳಿಯ ಸನಿಯದಲ್ಲಿರುವ ಯಮನೂರುಪೀರನ ಉರುಸನ್ನು ಈ ಸಲ ಒಳ್ಳೇ ವಿಜೃಂಭಣೆಯಿಂದ ಜರುಗಿಸಬೇಕೆಂದು ಕಾಜಿ ಅಬ್ದುಲ್‌ನು ಸುತ್ತಲೂ ಪ್ರಚಾರಮಾಡತೊಡಗಿದನು. ತನ್ನ ಸಂಘಟನಾಕಾರ್ಯಕ್ಕೆ ಈ ಪರಸೆಯು ಬಹಳಅನುಕೂಲವಾಗಬಹುದೆಂದೂ, ಇದರಿಂದ ತನ್ನಪ್ರತಿಷ್ಠೆಯೂ ಬೆಳೆಯಬಹುದೆಂದೂ ಅವನು ಯೋಚಿಸಿದನು. ಅದಕ್ಕಾಗಿ ದೂರಿನಿಂದ ಕೆಲವು ಪ್ರಚಾರಕರನ್ನೂ ಕರೆಯಿಸಿದನು. ಆ ಗುಡಿಯ ಆವಾರದಲ್ಲಿರುವ ಬಸವಣ್ಣನ ಮೂರ್ತಿಯು ಮೊದಲಿನಿಂದಲೂ ಅವನ ಕಣ್ಣು ಚುಚ್ಚುತ್ತಿತ್ತು. ವಿಶ್ವೇಶ್ವರ

ಭಟ್ಟರ ಕಾಲದಲ್ಲಿ ಪ್ರತಿಷ್ಠಾಪನೆಗೊಂಡ ಆ ಮೂರ್ತಿ ಹಿಂದೂ ಮುಸಲ್ಮಾನರ ನೆಮ್ಮದಿಯ ಗುರುತಾಗಿ ಈವರೆಗೆ ಗೌರವವನ್ನು ಪಡೆಯುತ್ತಿತ್ತು. ಅದಕ್ಕೊಂದು ಇತಿಹಾಸವಿತ್ತೆಂಬುದನ್ನು ನಾವು ಮರೆಯಲಾರೆವು. ಕಾಜಿ ಅಬ್ದುಲ್‌ನಿಗೆ ಈ ಮೂರ್ತಿಯನ್ನು ಸಹಿಸುವುದಾಗಲಿಲ್ಲ. ಮುಸಲ್ಮಾನರ ಧರ್ಮಮಂದಿರದಲ್ಲಿ ಹಿಂದೂ ಮೂರ್ತಿಯೇಕೆಂದವನು ಅದನ್ನು ಅಲ್ಲಿಂದ ಕೀಳಲು ಮನಸ್ಸುಮಾಡಿದನು. ಈ ಮಾತನ್ನು ತನ್ನ ಕಾರ್ಯಕರ್ತರೊಡನೆ ಚರ್ಚಿಸಿದಾಗ ಅವರಿಂದಲೂ ವಿಶೇಷವಾದ ಪ್ರೋತ್ಸಾಹವೇ ದೊರಕಿದ್ದರಿಂದ ಅವನ ಉತ್ಸಾಹವು ಇಮ್ಮಡಿಸಿತು. ಅವನು ಅದಕ್ಕಾಗಿ ಸರ್ವಸಿದ್ಧತೆಯನ್ನು ಮಾಡತೊಡಗಿದನು.

ಇಂತಹ ಜಾತ್ರೆಗಳಲ್ಲಿ ಪ್ರಚಾರಕಾರ್ಯವನ್ನು ಸಾಗಿಸುವದು ವಾಸುದೇವನ ಕಾರ್ಯಕ್ರಮವಾಗಿದ್ದರಿಂದ ಅವನು ಉರುಸು ಸನಿಯಕ್ಕೆ ಬರತೊಡಗಿದಂತೆ ತನ್ನ ಮೇಳದವರನ್ನು ಕೂಡಿಸತೊಡಗಿದನು. ಲಾವಣಿಕಾರರನ್ನು ಬರಮಾಡಿಕೊಂಡನು. ರೈತರ ಸಮಸ್ಯೆ, ಕುಡುಕತನದ ಅನಾಹುತ, ರಾಟೆಯ ಮಹತ್ವ ಮೊದಲಾದ ವಿಷಯುಗಳನ್ನು ಕುರಿತು ಬೇರೆಬೇರೆ ಗುಂಪುಗಳಲ್ಲಿ ಉಪನ್ಯಾಸ ಸಾಗಿಸಲು ಸಿದ್ಧಮಾಡಿಕೊಂಡನು. ಒಂದು ಸ್ವಯಂಸೇವಕದಳವನ್ನು ನಿರ್ಮಿಸಿದನು.

ಕಾಜಿ ಅಬ್ದುಲ್‌ನ ಚಟುವಟಿಕೆಗಳೆಲ್ಲ ಗಂಗನಹಳ್ಳಿಯ ಗೌಡಕುಲಕರ್ಣಿಯವರಿಗೆ ಈ ಮೊದಲೇ ಅಧಿಕಾರಿಗಳಿಂದ ಗೊತ್ತಾಗಿದ್ದವು. ಅವನಿಗೆ ಸಾಧ್ಯವಾದ ಎಲ್ಲ ಸಹಾಯವನ್ನೂ ನೀಡಬೇಕೆಂಬ ಆದೇಶವೂ ಅವರಿಗೆ ಬಂದಿತ್ತು. ಈ ಸನ್ನಿವೇಶವನ್ನು ವ್ಯರ್ಥವಾಗಿ ಹೋಗಗೊಡಬಾರದೆಂದು ಅವರೂ ನಿಶ್ಚಯಿಸಿದರು. ಪ್ರಚಾರಕ್ಕಾಗಿ ವಾಸುದೇವನು ತನ್ನ ಮೇಳದೊಂದಿಗೆ ಅಲ್ಲಿಗೆ ಬರುವದಂತೂ ಖಂಡಿತ. ಅವನ ಪ್ರಚಾರವನ್ನು ವಿಪರ್ಯಸ್ತಗೊಳಿಸಿ ಅನಾಹುತವನ್ನು ತಂದೊಡ್ಡಿ ಅವನನ್ನು ಪೇಚಿನಲ್ಲಿ ಕೆಡವುವದು ಅವರಿಗೆ ಸುಲಭಸಾಧ್ಯವೆನ್ನಿಸಿತು. ಇದರಿಂದ ಗಂಗನಹಳ್ಳಿಯ ನೆಮ್ಮದಿಯು ಹಾಳಾಗಿ ಹೋಗುವದೆಂಬ ವಿಚಾರವು ತಪ್ಪಿ ಕೂಡ ಅವರಲ್ಲಿ ಸುಳಿಯಲಿಲ್ಲ. ವಾಸುದೇವನಿಗೆ ತಕ್ಕ ಶಾಸ್ತಿಯನ್ನು ಮಾಡುವದೇ ಅವರ ಗುರಿಯಾಗಿಬಿಟ್ಟಿತು ಈ ಕಾರ್ಯಕ್ಕಾಗಿ ಅವರು ಅಧಿಕಾರಿಗಳನ್ನು ಕಂಡುಬಂದರು. ಆ ದಿನ ಒಂದು ಪೋಲೀಸಪಾರ್ಟಿ ಬರುವಂತೆ ಏರ್ಪಾಡು ಮಾಡಿಕೊಂಡರು. ಇಂತಹ ಪ್ರಸಂಗಗಳನ್ನೇ ಎದುರು ನೋಡುತ್ತಿದ್ದ ಅಧಿಕಾರಿಗಳು ಈ ಕೆಲಸವನ್ನು ಸಂತೋಷದಿಂದ ಒಪ್ಪಿಕೊಂಡರು.

ಇಷ್ಟೆಲ್ಲ ಸಿದ್ಧತೆಯಾದ ಬಳಿಕ ಗೌಡಕುಲಕರ್ಣಿಯವರು ಗುಪ್ತವಾಗಿ

ಕಾಜಿ ಅಬ್ದುಲ್‌ನನ್ನು ಕಂಡು ಬಂದರು. ಕಾಜಿ ಅಬ್ದುಲ್‌ನು ಅವರ ಮೇಲೆ ಇಲ್ಲದ ದರ್ಪವನ್ನು ತೋರಿಸುತ್ತ 'ನೀವೆಲ್ಲ ಹಿಂದುಗಳು, ಕೊನೆಯ ಗಳಿಗೆಯಲ್ಲಿ ತಿರುಗಿ ಬೀಳಬಹುದು. ಹಾಗೇನಾದರೂ ಮಾಡಿದರೆ ನಿಮ್ಮ ವತನವನ್ನು ಖಾಲಸಾತಮಾಡಿಸಿಬಿಡುತ್ತೇನೆಂಬುದನ್ನು ಲಕ್ಷ್ಯದಲ್ಲಿಡಿರಿ." ಎಂದು ಬೆದರಿಸಿದನು.

ಉರುಸಿನ ದಿನ ಸಂಜೆಯ ಐದು ಗಂಟೆಯ ಸುಮಾರಿಗೆ ವಾಸುದೇವನ ಸ್ವಯಂಸೇವಕ ದಳವೂ, ಲಾವಣಿಕಾರರ ಮೇಳವೂ ದರ್ಗಾವನ್ನು ಸಮೀಪಿಸಿತು. ಅವರು ದಾರಿಗುಂಟ "ಪ್ರಾಣಿವಧೆಯನ್ನು ಮಾಡಬೇಡಿರಿ, ಮೂಕ ಪ್ರಾಣಿಗಳನ್ನು ರಕ್ಷಿಸಿರಿ, ಸಿಂದಿಸರಾಯಿಗಳನ್ನು ಕುಡಿಯಬೇಡಿರಿ, ರಾಟೆಯನ್ನು ತಿರುಗಿಸಿರಿ, ಪರದೇಶಿ ವಸ್ತುಗಳಿಗೆ ಬಹಿಷ್ಕಾರ ಹಾಕಿರಿ, ಸ್ವದೇಶೀ ಸಾಮಾನುಗಳನ್ನು ಕೊಂಡುಕೊಳ್ಳಿರಿ, ಒಕ್ಕಟ್ಟನ್ನು ಕಾಪಾಡಿಕೊಳ್ಳಿರಿ. ನಾವೆಲ್ಲ ಒಂದು, ಹಿಂದುಗಳು ಮುಸಲ್ಮಾನರು ಎಲ್ಲರೂ ಹಿಂದಮಾತೆಯ ಮಕ್ಕಳು, ಹಿಂದೂ ಮುಸ್ಲೀಮ್ ಜಿಂದಾಬಾದ" ಮೊದಲಾದ ಘೋಷಣೆಗಳನ್ನು ಮಾಡುತ್ತಲೇ ಸಾಗಿದ್ದರು. ಬಡಿಗೇರ ಗೋವಿಂದನು ಅಪರಿಮಿತ ಉತ್ಸಾಹದಿಂದ ಎಲ್ಲರ ಮುಂದೆ ಸಾಗಿದ್ದನು. ಅವನ ಸುತ್ತಲೂ ನೂರಾರು ಜನರು ಮೆರವಣಿಗೆಯಲ್ಲಿ ಸಾಗಿದಂತೆ ಸಾಗತೊಡಗಿದ್ದರು. ಇವರೆಲ್ಲ ದರ್ಗಾದ ತೀರ ಸಮೀಪಕ್ಕೆ ಬರುವ ಹೊತ್ತಿಗೆ ಆ ಬಯಲಿನಲ್ಲಿ ಒಂದು ಕೋಲಾಹಲವೇ ಕೇಳಿಸತೊಡಗಿತು. ಇದೇನಿರಬಹುದೆಂದು ವಾಸುದೇವನು ವಿಚಾರಿಸುವ ಹೊತ್ತಿಗೆ ಸ್ವಯಂಸೇವಕನೊಬ್ಬನು ಧಾವಿಸುತ್ತ ಬಂದು "ಇಲ್ಲಿ ಎಲ್ಲವೂ ಅನರ್ಥವಾಗತೊಡಗಿದೆ ವಾಸಪ್ಪನವರೆ! ಬಡಿದಾಡಿ ತಲೆಯೊಡೆದುಕೊಳ್ಳಹತ್ತಿದ್ದಾರೆ. ನಾವು ಏನಾದರೂ ಮಾಡದಿದ್ದರೆ ರಕ್ತದ ಕಾಲುವೆಯೇ ಹರಿಯುವಂತೆ ಕಾಣುತ್ತದೆ" ಎನ್ನಲು ವಾಸುದೇವನು ಏನೂ ತಿಳಿಯದೆ ಗಡಬಡಿಸಿ "ಆದದ್ದಾದರೂ ಏನು ಹೇಳಬಾರದೆ?" ಎಂದು ಆತುರದಿಂದ ಕೇಳಿದನು.

"ಹಿಂದೂ ಮುಸಲ್ಮಾನರ ವ್ಯಾಜ್ಯವು ಪ್ರಕೋಪಕ್ಕೆ ಹೋಗಿಬಿಟ್ಟದೆ. ಬಹಳ ದಿನಗಳಿಂದ ಪೂಜೆಗೊಳ್ಳುತ್ತಲಿದ್ದ ಬಸವಣ್ಣನ ಮೂರ್ತಿಯನ್ನು ಕಿತ್ತಿ ಒಗೆಯಲಾಗಿದೆ. ಆ ಮೂರ್ತಿಗಾಗಿ ಜನರು ಹಟಹಿಡಿದದ್ದರಿಂದ ಬಾಯಿಗೆ ಬಾಯಿ ಹತ್ತಿ ಈಗ ಕೈಗೆ ಕೈಹತ್ತಿದೆ. ಅನೇಕರು ತಲೆಯೊಡೆದುಕೊಂಡಿದ್ದಾರೆ." ಎಂದು ಹೇಳಲು ವಾಸುದೇವನು ಟಣ್ಣನೇ ಹಾರಿ ಬಡಿದಾಟವಾಗುವ ಸ್ಥಳಕ್ಕೆ ಓಡಿಬಿಟ್ಟನು. ಸ್ವಯಂಸೇವಕರು ಧಾವಿಸಿದರು. ಗೋವಿಂದನಂತೂ ವಾಸು

ದೇವನ ಹಿಂದೆಯೇ ಓಡಿಹೋದ.

ವಾಸುದೇವನು ಗಂಟಲು ಬಿರಿಯುವಂತೆ "ಬಂಧುಗಳೇ, ಈಬಡಿದಾಟ ನಿಲ್ಲಿಸಿರಿ. ಏತಕ್ಕಾಗಿ ಹೊಡೆದಾಡುತ್ತೀರಿ?" ಎಂದು ಚೀರತೊಡಗಿದ. ಅವನ ಧ್ವನಿ ಅನೇಕ ಧ್ವನಿಗಳ ಸಮೂಹದಲ್ಲಿ ಮಾಯವಾಗಿಬಿಟ್ಟದ್ದರಿಂದ ಅವನೊಂದು ಎತ್ತರವಾದ ಕಟ್ಟೆಯ ಮೇಲೆ ಹತ್ತಿ ಮತ್ತೆ ಉಚ್ಚ ಸ್ವರದಿಂದ ಕೂಗತೊಡಗಿದ. ಅವನ ಎದುರಿಗೆ ಅನೇಕ ಒಡೆದ ತಲೆಗಳು ಕಾಣಿಸಹತ್ತಿದ್ದರಿಂದ ಅವನ ದನಿಯು ಇನ್ನೂ ಏರತೊಡಗಿತು. "ಬಡಿದಾಟವನ್ನು ನಿಲ್ಲಿಸಿರಿ! ಏತಕ್ಕಾಗಿ ತಲೆಯೊಡೆದುಕೊಳ್ಳುತ್ತೀರಿ? ಸಾವಧಾನವಾಗಿರಿ" ಎಂದು ಕೈಮಾಡಿ ಕೂಗತೊಡಗಿದ. ಒಮ್ಮೆಲೇ ಎಲ್ಲ ಕಡೆಗೂ ಸ್ತಬ್ಧವಾಯಿತು.

"ಏನಿದು ಈ ಅನರ್ಥ? ಅಣ್ಣತಮ್ಮಂದಿರಾದ ನೀವುಹೊಡೆದಾಡಬೇಕೆ?"

"ನಮ್ಮ ಬಸವಣ್ಣನನ್ನು ಕಿತ್ತಿ ಒಗೆದಿದ್ದಾರೆ!"

"ನಿಮ್ಮ ಬಸವಣ್ಣನದು ದರ್ಗಾದಲ್ಲಿ ಏನು ಕೆಲಸ!"

"ಅದು ಮೊದಲಿನಿಂದಲೂ ಇತ್ತು."

"ಅಂತೇ ಈಗ ಕಿತ್ತಿ ಒಗೆದಿದ್ದೇವೆ."

"ಅದು ತಿರುಗಿ ಬರದಿದ್ದರೆ ಅನರ್ಥವಾದೀತು!"

"ಏನು ಮಾಡುತ್ತೀರಿ ನೋಡೇ ಬಿಡುತ್ತೇವೆ."

"ಬಸವಣ್ಣ ನಮ್ಮದು"

"ದರ್ಗಾ ಯಾರದು?"

"ಅದೂ ನಮ್ಮದು."

ಹೀಗೆಂದವನ ತಲೆಯ ಮೇಲೆ ಎಲ್ಲಿಂದಲೋ ಲಾಠೀ ಪ್ರಹಾರವಾದದ್ದರಿಂದ ಅವನು ಕಿಟ್ಟನೇ ಕಿರುಚಿದನು. ವಾಸುದೇವನು ಅವನನ್ನು ಬಳಸಿ ಹಿಡಿದಾಗ ಅವನ ತಲೆಯ ನೆತ್ತರವು ಅವನ ಅಂಗಿಯನ್ನು ತೋಯಿಸತೊಡಗಿತು. ಒಂದು ಕೈಯಿಂದ ಅವನ ತಲೆಯನ್ನು ಗಟ್ಟಿಯಾಗಿ ಹಿಡಿದು ಕೂಗತೊಡಗಿದ. "ನನ್ನಲ್ಲಿ ವಿಶ್ವಾಸವಿದ್ದವರು ಕೂಡಲೇ ಇಲ್ಲಿಂದ ಸರಿಯಿರಿ. ಈ ನೆತ್ತರವನ್ನು ನಾನು ಹರಿಯಗೊಡಲಾರೆ. ಏನೋ ತಪ್ಪು ಕಲ್ಪನೆಯಾಗಿದೆ. ನಾನು ಇದನ್ನು ಬಗೆಹರಿಸುತ್ತೇನೆ. ನೀವು ದೂರ ಹೋಗಿರಿ. ಈ ಬಸವಣ್ಣದೇವರು ನಮ್ಮ ನೆಮ್ಮದಿಯ ಗುರುತಾಗಿತ್ತೆಂಬುದನ್ನು ನಾನೂ ಬಲ್ಲೆ. ಹಿರಿಯರೇ ಅದನ್ನು ಸ್ಥಾಪಿಸಿದ್ದರೆಂಬುದೂ ನನಗೆ ಗೊತ್ತು. ಈ ನೆಮ್ಮದಿಯನ್ನು ನಾವು ಕಾಯ್ದುಕೊಳ್ಳೋಣ. ನೀವು ದಂಗೆ ಮಾಡದೆ ದೂರ ಹೋಗಿರಿ."

"ನಮ್ಮ ಬಸವಣ್ಣನನ್ನು ಕಾಣದೆ ನಾವು ಹೋಗಲಾರೆವು."

"ಬದಿದಾಡಿದರೆ ಬಸವಣ್ಣ ಬಂದಂತಾಯಿತೇ ಸೋದರರೆ! ಸ್ವಲ್ಪ ಸಮಾಧಾನದಿಂದ ವಿಚಾರಿಸಿರಿ. ಬಸವಣ್ಣ ಬಂದೇ ಬರುವದು. ನೀವು ಈಗಲೇ ದೂರ ಮಾತ್ರ ಹೋಗಬೇಕು. ನೀವು ಕೈಯೆತ್ತಿದರೆ ನನ್ನ ಆಣೆಯಾಗಿದೆ. ಅದನ್ನು ಸಹಿಸುವದಕ್ಕಿಂತ ನಿಮ್ಮ ಎದುರಿನಲ್ಲಿಯೇ ಪ್ರಾಣ ಬಿಡುವೆನು. ಹೂಂ, ದೂರ ಹೋಗಿರಿ."

ವಾಸುದೇವನ ಮಾತುಗಳಿಂದ ಅಲ್ಲಿ ಕೂಡಿದ ಹಿಂದೂ ಜನರು ಚದುರತೊಡಗಿದರು. ಇದು ಅವರು ವಾಸುದೇವನ ಮೇಲೆ ಇಟ್ಟ ವಿಶ್ವಾಸದ ಪ್ರತೀಕವಾಗಿತ್ತು.

ಅಷ್ಟರಲ್ಲಿ ತಳವಾರನೊಬ್ಬನು ಅಲ್ಲಿಯೇ ನಿಂತು,

"ಏನು ವಾಸಪ್ಪನವರೆ! ಇದನ್ನೆಲ್ಲ ಮಾಡಲು ಹೇಳಿದ ನೀವೇ ಈಗ ಹೀಗೆ ಹೇಳಿದರೆ ಹೇಗೆ? ನಮಗೆ ಲಾಠಿಗಳನ್ನು ಕೊಟ್ಟು ಕಳಿಸಿದ ನೀವು ಈಗ ದೂರ ಹೋಗೆಂದು ಹೇಳಿದರೆ ನಾವೆಂತು ಕೇಳಬೇಕು? ಎರಡರಲ್ಲಿ ಒಂದು ಆಗಿಹೋಗಲಿ" ಎಂದು ಮೊದಲೇ ಕಲಿಸಿದ ಮಾತುಗಳನ್ನು ಪಳಪಳನೇ ಉಚ್ಚರಿಸಿದನು. ಈ ಮಾತುಗಳನ್ನು ಕೇಳಿ ವಾಸುದೇವನು ಅವಾಕ್ಕಾದನು. ಅವನು ತಳವಾರನನ್ನು ದುರುಗುಟ್ಟಿ ನೋಡುತ್ತ,

"ಈ ದಂಗೆ ಎಬ್ಬಿಸಲು ನಿನಗೆ ನಾನು ಹೇಳಿದೆನೇ?"

"ಬರೇ ಹೇಳುವದೇಕೆ ವಾಸಪ್ಪನವರೇ? ಲಾಠಿಗಳನ್ನೂ ಕೊಟ್ಟು ಕಳುಹಿದಿರಲ್ಲ."

"ಏನು ಹೇಳುತ್ತೀಯೋ ಕಾಸಿನ ಕುನ್ನಿ!" ಎಂದು ಗೋವಿಂದನು ಅಬ್ಬರಿಸಿದನು.

"ನಾನು ಕಾಸಿನ ಕುನ್ನಿ? ನೋಡಿರಿ ಗೌಡರೆ, ಈ ಗೋವಿಂದನೇ ಲಾಠಿಗಳನ್ನು ಹಂಚಿ ಈಗ ಬಾಯಿ ಬಡೆಯುತ್ತಾನೆ."

"ಇನ್ನೊಮ್ಮೆ ಅಂದೆಯಾದರೆ ನಿನ್ನ ಬಾಯಿಯನ್ನು ನಾನೇ ಬಡಿಯುತ್ತೇನೆ." ಎನ್ನುತ್ತ ಗೋವಿಂದನು ಒಂದು ಹೆಜ್ಜೆ ಮುಂದೆ ಸರಿದನು.

"ಹಾಂ ಗೋವಿಂದ! ನೀನು ಕೈಯೆತ್ತಿದರೆ...."

"ವಾಸಪ್ಪ! ಈ ಸುಳ್ಳನ್ನು ನಾನು ಹೇಗೆ ತಡೆಯಲಿ?"

ಅದೇ ಹೊತ್ತಿಗೆ ಪೋಲೀಸರ ಪಡೆಯೊಂದು ಜಾಳಿಗೆಯ ಮೋಟಾರದಲ್ಲಿ ಬಂದಿಳಿದು ಈ ಗುಂಪಿನತ್ತ ಧಾವಿಸಿತು. ಅಲ್ಲಿಯೇ ನಿಂತ ಗೌಡರು "ಈ ಬವಮಾಸರ ಕೈಗೆ ಬೇಡೀ ಬಡಿಯಿರಿ. ದಂಗೆ ಎಬ್ಬಿಸಿದ್ದಾರೆ ನೀಚರು" ಎಂದು ವಾಸುದೇವನನ್ನು ಕರ್ಕಶವಾಗಿ ನೋಡಿದನು. ಹಾಂ-ಹಾಂ ಅನ್ನುವಷ್ಟರಲ್ಲಿ

ವಾಸುದೇವನ ಕೈಗೂ, ಗೋವಿಂದನ ಕೈಗೂ, ಇನ್ನುಳಿದ ಕೆಲವು ಸ್ವಯಂ ಸೇವಕರ ಕೈಗಳಿಗೂ ಕೋಳಗಳನ್ನು ತೊಡಿಸಲಾಯಿತು.

ಇದನ್ನು ನೋಡುತ್ತಲಿದ್ದ ಗುಂಪಿನವರಲ್ಲಿ ಒಬ್ಬನು, "ಅವರ ಕೈಗಳಿಗೇಕೆ ಬೇಡಿ ತೊಡಿಸುತ್ತಿದ್ದೀರಿ. ಅವರೇನು ಮಾಡಿದ್ದಾರೆ? ಬಡಿದಾಡಿದವರು ನಾವು, ತಲೆಯೊಡೆದುಕೊಂಡವರು ನಾವು. ತಲೆ ಒಡೆದವರು ನಾವು. ನಮ್ಮನ್ನು ಹಿಡಿದೊಯ್ಯಿರಿ. ಅವರೇನೂ ಮಾಡಿಲ್ಲ" ಎಂದು ಕೂಗಲು ಅವನನ್ನು ಪೋಲೀಸರು ದೂರ ದಬ್ಬಿ "ಇವನ ಮೈ ರಕ್ತದಿಂದ ತುಂಬಿದೆ. ಇಷ್ಟೇ ಸಾಕು ನಮಗೆ" ಎನ್ನುತ್ತ ವಾಸುದೇವನನ್ನು ಹಿಡಿದು ಎಳೆದು ಮೋಟಾರಿನಲ್ಲಿ ನುಗಿಸಿದರು. ಉಳಿದ ಅಪರಾಧಿಗಳನ್ನೂ ಅದರಲ್ಲಿ ತುಂಬಿದರು. ವಾಸುದೇವನು ಒಳಗಿನಿಂದಲೇ "ನೀವು ಶಾಂತರಾಗಿ ಮನೆಗೆ ಹೋಗಿರಿ ಬಂಧುಗಳೆ! ಸತ್ಯವೆಂದಿಗೂ ಸತ್ಯವಾಗಿಯೇ ಉಳಿಯುತ್ತದೆ." ಎಂದು ಒದರುತ್ತಿರುವಾಗಲೇ ಮೋಟಾರು ಸಾಗಿಬಿಟ್ಟಿತು.

ಈ ಅನ್ಯಾಯವನ್ನು ಅನುಭವಿಸಿದ ಜನ ಗೌಡರ ಕಾರಸ್ಥಾನವನ್ನು ಹೀನಾಯವಾಗಿ ಕಾಣುತ್ತ ಈ ಸುದ್ದಿಯನ್ನು ರಾಮಾಶಾಸ್ತ್ರಿಗಳಿಗೆ ಹೇಳಲು ಗಂಗನಹಳ್ಳಿಯತ್ತ ಸಾಗಿಬಿಟ್ಟರು. ಅವರಿಂದ ಈಗ ಯಾವ ಪ್ರತೀಕಾರವನ್ನು ಮಾಡಲೂ ಸಾಧ್ಯವಿರಲಿಲ್ಲ. ವಾಸುದೇವನ ಆದೇಶದಂತೆ ಶಾಂತತೆಯನ್ನು ಕಾಯ್ದುಕೊಳ್ಳುವದೇ ಅವರಿಗೆ ಅನಿವಾರ್ಯವಾಗಿಬಿಟ್ಟಿತು. ವಾಸುದೇವನನ್ನು ಗಂಗನಹಳ್ಳಿಗೆ ಕೂಡ ತರದೆ ನೇರವಾಗಿ ಪಟ್ಟಣಕ್ಕೆ ತೆಗೆದುಕೊಂಡು ಹೋದದ್ದರಿಂದ ಜನರ ಮನಸ್ಸು ತೀರಾ ಪ್ರಕ್ಷುಬ್ಧವಾಗತೊಡಗಿತು. ಮರುದಿನ ಗಂಗನಹಳ್ಳಿಯ ಅನೇಕ ಯುವಕರು ಪಟ್ಟಣಕ್ಕೆ ತೆರಳಿಬಿಟ್ಟರು.

ವಾಸುದೇವನನ್ನು ಪೋಲೀಸರು ತೆಗೆದುಕೊಂಡು ಹೋದರೆಂಬ ಸುದ್ದಿಯನ್ನು ಕೇಳಿ ಸೀತಮ್ಮನವರ ಕಣ್ಣುಗಳೊಳಗಿಂದ ಪಳಕ್ಕನೇ ನೀರು ಚಿಮ್ಮಿದವು. ಆ ತಾಯಿ ಗೋಳಾಡತೊಡಗಿದಳು. ಅವರಿಗೆ ಮಗನ ಕ್ಷೇಮಚಿಂತನೆಗಾಗಿ ಬಹಳ ಕಳವಳವಾಗತೊಡಗಿತು. ಅವರು ನಡುಗುತ್ತಿರುವಂತೆಯೇ "ಇನ್ನೇನು ಗತಿ?" ಎಂದು ರಾಮಾಶಾಸ್ತ್ರಿಗಳನ್ನು ದೈನ್ಯದಿಂದ ಕೇಳಹತ್ತಿದರು.

ರಾಮಾಶಾಸ್ತ್ರಿಗಳಿಗೆ ಆಗಲೇ ನಡೆದುಹೋದ ಸಂಗತಿಗಳ ಯಥಾರ್ಥ ಕಲ್ಪನೆಯಾಗಿಬಿಟ್ಟಿತ್ತು. ಇಂತಹ ಯಾವುದಾದರೂ ಘಟನೆ ಆಗಬಹುದೆಂಬ ಸಂದೇಹ ಅವರಿಗೆ ಮೊದಲಿನಿಂದಲೂ ಇತ್ತು. ಆದರೆ ಅದು ಹೀಗೆ ಆಗಬಹುದೆಂದು ಅವರು ತಿಳಿದಿರಲಿಲ್ಲ. ಗೌಡರು ಇಂತಹ ನೀಚತನಕ್ಕೆ ಇಳಿದದ್ದು ಅವರ ಹೃದಯದಲ್ಲಿ ಅತ್ಯಂತ ನೋವನ್ನುಂಟುಮಾಡಿತ್ತು. ಈಗ ಹೆಂಡತಿ

ಮಗನ ಬಗ್ಗೆ ಕೇಳಿದ ಪ್ರಶ್ನೆಯಲ್ಲಿ ಅಡಕವಾದ ಅಂತಃಕರಣವನ್ನು ಅವರು ಗುರುತಿಸಿ ಸಮಾಧಾನವನ್ನು ಹೇಳತೊಡಗಿದರು.

"ಅವನಿಗೇನಾಗುವದೆಂದು ನೀನು ಇಷ್ಟು ಹೆದರಿದ್ದೀ ಸೀತಾ? ನಿನ್ನ ಮಗನು ಯಾವ ಅಪರಾಧವನ್ನೂ ಮಾಡಲಿಲ್ಲ."

"ಹಾಗಾದರೆ ಪೋಲೀಸರು ಅವನನ್ನು ಸುಮ್ಮನೇ ಒಯ್ದು ಬಿಟ್ಟರೆ ?"

"ಸ್ವಾರ್ಥಿಗಳ ಕೈವಾಡವೇ ಇದಕ್ಕೆ ಕಾರಣವಾಗಿದೆ. ಸತ್ಯಸಾಧನೆಯಲ್ಲಿ ಇಂಥ ತೊಡಕುಗಳು ಬರುವದು ಅನಿವಾರ್ಯವಾಗಿದೆ. ಇದರಿಂದ ನಿನ್ನ ಮಗನ ಕೀರ್ತಿ ಇನ್ನೂ ಬೆಳೆಯುತ್ತಿದೆ ನೋಡು. ಅವನೊಂದು ಮಹಾ ಕಾರ್ಯ ಮಾಡಿದ್ದಾನೆ. ಬಹಳ ವರುಷಗಳ ಹಿಂದೆ ಈ ಹಳ್ಳಿಯಲ್ಲಿ ಈ ಯಮನೂರು ದೇವರ ಸಲುವಾಗಿಯೇ ಹಿಂದೂ ಮುಸಲ್ಮಾನರಲ್ಲಿ ವೈಮನಸ್ಸು ಉಂಟಾಗಿ ಕೊನೆಗೆ ವಿಶ್ವೇಶ್ವರಭಟ್ಟರ ಮಧ್ಯಸ್ತಿಕೆಯಿಂದ ಪುನಃ ನೆಮ್ಮದಿ ನೆಲೆಗೊಂಡಿತೆಂಬುದನ್ನು ರಕುಮಾಕಕ್ಕಿ ಕತೆ ಮಾಡಿ ಹೇಳುತ್ತಿದ್ದುದು ನಿನ್ನ ನೆನಪಿನಲ್ಲಿರಬೇಕು. ಅಂದು ವಿಶ್ವೇಶ್ವರಭಟ್ಟರು ತಮ್ಮ ವ್ಯಕ್ತಿತ್ವದಿಂದ ನೆಮ್ಮದಿಯನ್ನು ಸಾಧಿಸಿ ಐತಿಹಾಸಿಕ ಪುರುಷರಾದರು. ಈಗ ನಿನ್ನ ಮಗನು ಆ ಕಾರ್ಯದಲ್ಲಿ ಹಿರಿಯರನ್ನೂ ಮೀರಿಸಿದ್ದಾನೆ. ವಾಸುದೇವನು ಆ ದಿನ ಅಲ್ಲಿ ಹೋಗಿರದಿದ್ದರೆ ಬಹು ದೊಡ್ಡ ಅನರ್ಥವಾಗುತ್ತಿತ್ತು. ರಕ್ತದ ಕಾಲುವೆ ಹರಿಯುತ್ತಿತ್ತು. ಪ್ರಸಂಗ ಇನ್ನೂ ವಿಕೋಪಕ್ಕೆ ಹೋಗಿ ಕೊಲೆಗಳು ಕೂಡಾ ಆಗಬಹುದಾಗಿದ್ದವು. ನಿನ್ನ ಮಗನು ಎಲ್ಲರಿಗೂ ಶಾಂತವಾಗಿರಲು ಬೋಧಿಸಿದನು. ಅವನ ಮಾತನ್ನು ಜನ ಕೇಳಿದ್ದರಿಂದ ಯಾವ ಹೆಚ್ಚಿನ ಅನಾಹುತವೂ ನಡೆಯಲಿಲ್ಲ. ಇದು ಸಾಮಾನ್ಯವಾದ ಸಿದ್ಧಿಯೆ ? ಅನೇಕರ ಸಾವು-ನೋವುಗಳನ್ನು ತಪ್ಪಿಸಿದುದು ಎಂತಹ ಮಹತ್ಕಾರ್ಯ ನೋಡು. ಅವನನ್ನು ಪೋಲೀಸರು ತೆಗೆದುಕೊಂಡು ಹೋಗಿ ಏನು ಮಾಡುತ್ತಾರೆ? ಬಹಳವಾದರೆ ಸುಳ್ಳಿನ ಕಂತೆಯಮೇಲೆ ತಾಳ ಹಾಕಿ ಅವನನ್ನು ಜೇಲಿಗೆ ಕಳಿಸಬಹುದು. ಇದರಿಂದ ವಾಸುದೇವನೇ ಗೆದ್ದಂತಾಗುವದು. ಅನ್ಯಾಯವೆಂದಿಗೂ ಕೊನೆಯವರೆಗೆ ಸಲ್ಲಲಾರದು. ಸತ್ಯಪಕ್ಷಕ್ಕೆ ವಿಜಯವು ಕಟ್ಟಿಟ್ಟದ್ದು. ಇಂತಹ ಮಗನನ್ನು ಪಡೆದ ನೀನೇ ಭಾಗ್ಯವಂತೆ. ಹೋಗು, ಅವನಿಗಾಗಿ ದೇವರ ಮುಂದೆ ಸಾಲು ದೀಪಗಳನ್ನು ಹಚ್ಚು. ಅವನಿಗೆ ಏನೂ ಆಗಲಾರದು. ಅಧಿಕಾರಿಗಳ ಸಂರಕ್ಷಣೆಯಲ್ಲಿ ಅವನು ಸುರಕ್ಷಿತನಾಗಿ ಬಾಳುವನು. ಸರಕಾರದ ಅತಿಥಿಯಾಗಿ ಕೀರ್ತಿ ಪಡೆದುಕೊಳ್ಳುವನು. ನಿನ್ನ ಹೊಟ್ಟೆಯ ಪುಣ್ಯ ಬಹಳ ದೊಡ್ಡದು" ಎಂದಾಗ ಸೀತಮ್ಮನವರು ಮುಳುಮುಳು ಅಳುತ್ತ "ನನ್ನ ಮಗನು ಸುಖವಾಗಿ ಬರಲಿ

ತಾಯಿ! ಈ ಗೌಡರೇಕೆ ಇಂತಹ ಕಾರ್ಯ ಮಾಡಬೇಕು. ಅವರಿಗೆ ಹಳ್ಳಿಯ ನೆಮ್ಮದಿಯು ಬೇಡವಾಗಿತ್ತೆ ?" ಎಂದು ಜೀವ ಸಿಲ್ಲದೇ ಕೇಳಿದರು.

ರಾಮಾಶಾಸ್ತ್ರಿಗಳು ಹೆಂಡತಿಯನ್ನು ಅಭಿಮಾನದಿಂದ ನೋಡಿ ಒಂದು ದೀರ್ಘವಾದ ನಿಟ್ಟುಸಿರನ್ನು ಬಿಟ್ಟರು. ಜಗತ್ತಿನಲ್ಲಿ ನಡೆಯುತ್ತಿರುವ ಅನ್ಯಾಯ ವನ್ನು ನೋಡಿ ನೊಂದ ಉಸಿರೇ ಆ ನಿಟ್ಟುಸಿರಾಗಿತ್ತು. ಅದು ಅವರ ಅಂತ ರಂಗದ ವೇದನೆಯ ಬಾಹ್ಯಪ್ರತೀಕವಾಗಿತ್ತು.

೪

ಯಮಸೂರು ಉರುಸಿನ ದಿನ ನಡೆದ ಪ್ರಕರಣವು ಗಂಗನಹಳ್ಳಿಯಲ್ಲಿ ಬಿರುಗಾಳಿಯನ್ನೇ ಎಬ್ಬಿಸಿತು. ವಾಸುದೇವನನ್ನು ಊರಗೌಡರು ಅನ್ಯಾಯ ವಾಗಿ ಪೋಲೀಸರ ವಶಕ್ಕೆ ಕೊಟ್ಟಿದ್ದನ್ನು ನೋಡಿ ಅವರು ಉರಿದು ಬೀಳಹತ್ತಿ ದರು. ಕಾಜೀ ಅಬ್ದುಲ್‌ನಿಗೆ ಬೆಂಬಲವಾಗಿ ನಿಂತ ಗೌಡರನ್ನು ಅವರು ಪೂರಾ ತಿರಸ್ಕರಿಸತೊಡಗಿದರು. ಸುಳ್ಳು ಮಾತಾಡಿದ ತಳವಾರನ ಮೇಲೆ ಊರ ಯುವಕರು ಹಲ್ಲು ತಿನ್ನಹತ್ತಿದರು. ವಾಸುದೇವನ ಶಾಂತಿಯ ಆದೇಶ ವಿಲ್ಲದಿದ್ದರೆ ಈಗಾಗಲೇ ಗಂಗನಹಳ್ಳಿಯಲ್ಲಿಯೂ ಒಂದು ಹಗರಣ ನಡೆದು ಹೋಗಬಹುದಾಗಿತ್ತು.

ಗೌಡರ ಆದೇಶದಂತೆ ಗಂಗನಹಳ್ಳಿಯ ಓಣಿಓಣಿಗಳಲ್ಲಿ ಪೋಲೀಸರು ಸಮವಸ್ತ್ರಧಾರಿಗಳಾಗಿ ತಿರುಗಹತ್ತಿದರು. ಇದರಿಂದ ಜನರಲ್ಲಿ ಭಯಮೂಡಿ ತಾದರೂ ಇದಕ್ಕೆ ಗೌಡರೇ ಕಾರಣವಾಗಿರುವರೆಂದು ಜನ ಅವರನ್ನು ಹಳಿಯ ಹತ್ತಿದರು. ಗೌಡರು ಇಂತಹ ಅನ್ಯಾಯ ಮಾಡಬಾರದಾಗಿತ್ತೆಂದು ಹಳ್ಳಿಯ ಚಿಕ್ಕಮಕ್ಕಳು ಕೂಡ ಮಾತನಾಡತೊಡಗಿದರು. ಅವರೆಲ್ಲರಿಗೆ ವಾಸುದೇವನು ಅತ್ಯಂತ ಪೂಜ್ಯನಾಗಿ ಕಾಣತೊಡಗಿದನು. ಅವನ ಧೈರ್ಯವನ್ನೂ ಸ್ವಾರ್ಥ ತ್ಯಾಗವನ್ನೂ ಕೊಂಡಾಡದವರೇ ಇಲ್ಲವಾಯಿತು.

ಎಂಟು ದಿನಗಳ ಮೇಲೆ ವಾಸುದೇವನಿಗೂ ಅವನ ಅನುಯಾಯಿ ಗಳಿಗೂ ತಲಾ ಆರು ತಿಂಗಳ ಸಶ್ರಮ ಶಿಕ್ಷೆಯಾದ ವರ್ತಮಾನವು ಗಂಗನ ಹಳ್ಳಿಯ ಮೇಲೆ ಬರಸಿಡಿಲಿನಂತೆ ಎರಗಲು ಜನರು ಚಡಪಡಿಸತೊಡಗಿದರು. ಅವರಲ್ಲಿ ಪ್ರತಿಭಟನೆ ಮೂಡತೊಡಗಿತು. ನೂರಾರು ಜನರು ರಾಮಾಶಾಸ್ತ್ರಿ ಗಳ ಮನೆಯ ಮುಂದೆ ಕೂಡಿಬಿಟ್ಟರು. ರಾಮಾಶಾಸ್ತ್ರಿಗಳು ಈ ಸುದ್ದಿಯನ್ನು ಕೇಳಿ ತಳಮಳಗೊಂಡರೂ ಅದನ್ನು ಬಹಿರಂಗವಾಗಿ ತೋರಿಸದೆ ಕೂಡಿದ

ಜನರನ್ನು ಕುರಿತು "ಇದು ಅನ್ಯಾಯವಾದ ಶಿಕ್ಷೆ ಎಂಬುದರಲ್ಲಿ ಸಂದೇಹವಿಲ್ಲ ಬಂಧುಗಳೇ. ಆದರೆ ಮಾತು ಮಿಂಚಿ ಹೋಗಿದೆ. ಸತ್ಯಮಾರ್ಗಗಳಿಗೆ ಇಂತಹ ಆಪತ್ತುಗಳು ಬರತಕ್ಕವೇ. ಇದರಿಂದ ವಾಸುದೇವನ ಶಕ್ತಿ ಹೆಚ್ಚಾಗುವದೇ ವಿನಃ ಕಡಿಮೆಯಾಗಲಾರದು. ನೀವು ಶಾಂತರಾಗಿಯೇ ಇರಬೇಕು."

"ಇದು ಹೇಡಿಗಳ ಶಾಂತಿ ಮಾಸ್ತರರೇ! ಈ ಶಾಂತಿಯಿಂದ ನಾವು ನಮ್ಮ ಬಸವಣ್ಣನನ್ನು ತಿರುಗಿ ತರಲು ಸಾಧ್ಯವೆ ?"

"ನಮ್ಮಿಂದ ಸಧ್ಯದ ಪರಿಸ್ಥಿತಿಯಲ್ಲಿ ಏನೂ ಮಾಡಲು ಸಾಧ್ಯವಿಲ್ಲ. ಸರಕಾರವು ಇದನ್ನು ನೋಡುವ ದೃಷ್ಟಿಯೇ ಬೇರೆಯಾಗಿದೆ. ನಮ್ಮನ್ನು ಕೆರಳಿಸಿ ಸರಕಾರಕ್ಕೆ ಮೋಜು ನೋಡಬೇಕಾಗಿದೆ. ನಾವು ಕೆರಳಿದರೆ ಕೆಲಸ ಪೂರಾ ಕೆಟ್ಟುಹೋಗುವದು. ಸಧ್ಯ ಈ ಪ್ರಶ್ನೆಯನ್ನು ಬಿಟ್ಟುಬಿಡಿರಿ. ವಾಸುದೇವನು ಬರಲಿ. ಈ ಉದ್ವೇಗ ಕಡಿಮೆಯಾಗಲಿ. ಸತ್ಯಕ್ಕೆ ವಿಜಯವು ಕಟ್ಟಿಟ್ಟದ್ದು. ವಾಸುದೇವನು ನಿಮಗೆ ಶಾಂತಿಯನ್ನು ಕಾಪಾಡಿಕೊಂಡು ಹೋಗಲು ಆದೇಶವಿತ್ತಿಲ್ಲವೆ? ನೀವು ಆ ಕೆಲಸಗಳಲ್ಲಿ ನಿರತರಾಗಿರಿ. ಇಲ್ಲದ ಗೊಂದಲವನ್ನೆಬ್ಬಿಸಿ ಸರಕಾರದ ಸಂಶಯವನ್ನು ಬಲಪಡಿಸಬೇಡಿರಿ. ಗೌಡರನ್ನೂ ಕೆಣಕಬೇಡಿರಿ. ಸುಳ್ಳು ಹೇಳಿದ ತಳವಾರನೂ ನಮ್ಮವನು. ಅವನು ಹಾಯಾಗಿ ಬದುಕಲಿ. ನಮ್ಮ ಶಕ್ತಿ ನಮ್ಮ ಸಂಯಮದಲ್ಲಿದೆ. ವಿಧಾಯಕ ಕಾರ್ಯಪ್ರವೃತ್ತಿಯಲ್ಲಿದೆ" ಎಂದು ಹೇಳಿದ ರಾಮಾಶಾಸ್ತ್ರಿಗಳ ಸಮಾಧಾನವು ಜನರನ್ನು ಬೆರಗುಗೊಳಿಸಿತು.

ಯಾವ ಕಾರ್ಯವನ್ನು ಮಾಡಿ ಗೌಡರು ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬೇಕೆಂದು ಮಾಡಿದ್ದರೋ ಆ ಕಾರ್ಯವೇ ಅವರಿಗೆ ಮುಳುವಾಗಿ ಬಿಟ್ಟಿತೆಂದು ಅವರಿಗೆ ಅನ್ನಿಸತೊಡಗಿತು. ಅವರನ್ನು ಕಂಡು ದೂರಹಾಯುವ ಜನರ ಮಧ್ಯದಲ್ಲಿ ಬಾಳುವೆ ಸಾಗಿಸುವದು ಅವರಿಗೆ ಕಠಿಣವಾಗಿ ತೋರ ತೊಡಗಿತು. ಆದರೂ ಅಭಿಮಾನದ ದರ್ಪದಲ್ಲಿ ಅವರು ಅಧಿಕಾರಿಗಳ ಕವಚದಲ್ಲಿ ಮೆರೆಯುತೊಡಗಿದರು. ಜನರ ಹೃದಯಸಿಂಹಾಸನದಿಂದ ಪದಚ್ಯುತರಾದ ಗೌಡರು ಅಧಿಕಾರಿಗಳ ಕೈಗೋಲಿನಾಶ್ರಯದ ಜೀವನ ಸಾಗಿಸತೊಡಗಿದರು. ಊರ ಕುಲಕರ್ಣಿ-ದೇಶಪಾಂಡೆಯರೇ ಅವರ ಕೈವಾರಿಗಳಾಗಿಬಿಟ್ಟರು. ಆದರೂ ಅವರ ಅಂತರಂಗದಲ್ಲಿ ಭಯ ಮಾತ್ರ ಮೂಡದೇ ಇರಲಿಲ್ಲ.

'ಆರು ತಿಂಗಳ ಸಶ್ರಮ ಶಿಕ್ಷೆ! ಯಾವ ಅನ್ಯಾಯ ಮಾಡಿದನೆಂದು ವಾಸುದೇವನಿಗೆ ಈ ಶಿಕ್ಷೆಯಾಯಿತು? ಅವನು ಮಾಡಿದ ಅಪರಾಧವಾವುದು? ಸಾರ್ವಜನಿಕ ಶಾಂತಿಯನ್ನು ಕಾಪಾಡಿಕೊಂಡನೆಂದು ಅವನಿಗೆ ಈ ಬಹು

ಮಾನವೆ ? ರಕ್ತದ ಕಾಲುವೆ ಹರಿಯುವವನ್ನು ನಿಲ್ಲಿಸಿದನೆಂದು ಅವನಿಗೆ ಈ ಉಡುಗೊರೆಯೇ ?' ಎಂದು ವಿಚಾರಿಸತೊಡಗಿದ ರಾಮಾಶಾಸ್ತ್ರಿಗಳಿಗೆ ಈ ರಾಜನೀತಿಯು ಅರ್ಥವಾಗದಾಯಿತು. ಈ ಘಟನೆಯ ಸುತ್ತಲೂ ಆವರಿಸಿಕೊಂಡಿದ್ದ ಕೌಟಿಲ್ಯವನ್ನು ಕಂಡು ಅವರಿಗೆ ಯೋಚನೆ ಇರಲಿಲ್ಲ. ಅವನ ಮೇಲೆ ರಾಜದ್ರೋಹದ ಆಪಾದನೆಯನ್ನು ಹೊರಿಸಿ ಇದಕ್ಕೂ ಹೆಚ್ಚಿನ ಘೋರ ಶಿಕ್ಷೆಯನ್ನು ವಿಧಿಸಿದ್ದರೂ ಅವರಿಗೆ ತೃಪ್ತಿಯಾಗುತ್ತಿತ್ತು. ಆದರೆ ಈಗ ಅವನಿಗೆ ವಿಧಿಸಿದ ಶಿಕ್ಷೆಯ ರೀತಿಯೇ ಬೇರೆಯಾಗಿದ್ದು ಅವರ ಮನಸ್ಸನ್ನು ಕೊರೆಯಿತು. ಸರಕಾರದ ದೃಷ್ಟಿಯಲ್ಲಿ ಅವನೊಬ್ಬ ಸಾಮಾನ್ಯ ದಂಗೆಖೋರನಾಗಿಬಿಟ್ಟಿದ್ದನು. ಬಡಿದಾಡಿದ ಉಡಾಳನಾಗಿದ್ದನು. ಇದು ತೀರಾ ಅಸಂಬದ್ಧವೆಂದು ಅವರು ಗ್ರಹಿಸಿ ಚಡಪಡಿಸತೊಡಗಿದರು. ಇದು ಶುದ್ಧ ಅನ್ಯಾಯ. ಕಾಯಿದೆಯನ್ನು ಹೊಲಸಿಗೆಳೆದು ದುರ್ಗಂಧವನ್ನು ಹರಡುತ್ತಿರುವ ಅಧಿಕಾರಿಗಳ ವ್ಯಭಿಚಾರವಿದು ಎಂದು ಅವರು ಮರುಗತೊಡಗಿದರು. ಸುಳ್ಳಿನ ಹಂದರವನ್ನು ಹಬ್ಬಿಸಿದ ಕುತಂತ್ರದ ಪರಮಾವಧಿಯಿದು ಎಂದೇ ಅವರು ಬಗೆಯತೊಡಗಿದರು. ಆದುದರಿಂದಲೇ ರಾಮಾಶಾಸ್ತ್ರಿಗಳಿಗೆ ಈ ಶಿಕ್ಷೆಯು ನೋವನ್ನು ಉಂಟುಮಾಡಿತ್ತು. ಈ ನೋವಿನ ಹತ್ತುಪಟ್ಟು ಹೆಚ್ಚಾದ ನೋವು ಅವರಿಗೆ ಗೌಡನ ಆಚರಣೆಯಿಂದ ಉಂಟಾಗಿತ್ತು. ಕೋರ್ಟಿನಲ್ಲಿ ಗೌಡನು ತಾನು ವಾಸುದೇವನು ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಅನೇಕರ ತಲೆಯೊಡೆದುದನ್ನು ಪ್ರತ್ಯಕ್ಷವಾಗಿ ಕಂಡಿದ್ದಾಗಿ ಸಾಕ್ಷಿ ಹೇಳಿದ್ದ ವರ್ತಮಾನವೇ ಶಾಸ್ತ್ರಿಗಳ ಹೃದಯವನ್ನು ಬಿರಿಸಿತ್ತು. 'ಇಂತಹ ಸುಳ್ಳನ್ನು ಹೇಳಿ ನಾಲಿಗೆಯನ್ನು ಸವರಬೇಕೆಂದರೆ—?' ತಾನು ಮಾಡಿದ್ದು ತಪ್ಪೆಂದು ಗೌಡನಿಗೆ ತಿಳಿಯಬೇಕು. ಇದನ್ನು ನಾನು ನಂಬಿಸಬೇಕು. ಅವನು ನನ್ನನ್ನು ಕಡೆಗಣಿಸಿದರೂ ಸರಿ. ಮಗನ ಸಲುವಾಗಿಯಾದರೂ ನಾನು ಗೌಡನನ್ನು ಕಾಣಬೇಕು! ಈ ಭಾವ ಬರುತ್ತಲೇ ರಾಮಾಶಾಸ್ತ್ರಿಗಳು ದಿಗ್ಗನೇ ಎದ್ದುಬಿಟ್ಟರು.

ಅದೀಗ ಹೊತ್ತು ಮುಳುಗಿ ಕತ್ತಲಾಗತೊಡಗಿತ್ತು. ಅಮಾವಾಸ್ಯೆಯ ಕಾಳು ಸಂದಿಗೊಂದಿಗಳಲ್ಲಿ ದಟ್ಟವಾಗಿಯೇ ಬಿದ್ದಿತ್ತು. ರಾಮಾಶಾಸ್ತ್ರಿಗಳು ಒಂದು ಶಾಲನ್ನು ಹೊದ್ದುಕೊಂಡು ಕೈಯಲ್ಲಿ ಕೋಲನ್ನು ತೆಗೆದುಕೊಂಡು ಗೌಡನ ಮನೆಗೆ ನಡೆದೇಬಿಟ್ಟರು.

ಗೌಡನ ಮನೆಯಲ್ಲಿ ದೇಶಪಾಂಡೆಯವರೂ, ಕುಲಕರ್ಣಿಯವರೂ ಕೂಡಿ ಹರಟೆ ಕೊಚ್ಚುತ್ತಿದ್ದರು.

ರಾಮಾಶಾಸ್ತ್ರಿಗಳು ನೇರವಾಗಿ ಅವರ ಎದುರಿಗೆ ನಿಂತುಬಿಟ್ಟು,

"ಗೌಡರೆ!" ಎಂದರು.

"ಓಹೋ! ಮಾಸ್ತರರು! ಸಾಲೆಯ ಕೆಲಸದ ಸಲುವಾಗಿ ಬಂದಂತೆ ತೋರುತ್ತದೆ ಮಾಸ್ತರರು."

"ನೀವು ಸಾಲೆಯ ಪಂಚರೆಂದು ನಿಮ್ಮ ಭೆಟ್ಟಿಗೆ ಬರಲಿಲ್ಲ ಗೌಡರೆ! ಕೆಲವು ಮಾತುಗಳ ಸ್ಪಷ್ಟೀಕರಣಕ್ಕಾಗಿ ಬಂದಿರುವೆ."

"ಅದಾವ ಮಾತುಗಳು ಮತ್ತೆ ?"

"ವಾಸುದೇವನು ಜನರ ತಲೆಯೊಡೆದನೆಂದು ಕೋರ್ಟಿನಲ್ಲಿ ಸಾಕ್ಷಿ ಹೇಳಿದಿರಲ್ಲ. ಅದು ನಿಜವೆ ?"

"ಕೋರ್ಟಿನಲ್ಲಿ ದೇವರಾಣೆಮಾಡಿ ಖರೇ ಹೇಳಬೇಕಾಗುತ್ತದೆ ಮಾಸ್ತರರೆ!"

"ನನಗೆ ನಿಮ್ಮ ಕೋರ್ಟಿನ ಸತ್ಯ ಬೇಕಾಗಿಲ್ಲ. ಗೌಡರೆ! ನಿಮ್ಮ ಕೊರಳಲ್ಲಿ ಶಿವಲಿಂಗವಿದೆ. ನಿಮಗೆರಡು ಅಕ್ಷರ ಕಲಿಸಿದ ಗುರುವಾದ ನಾನು ಎದುರಿಗೆ ಕುಳಿತಿದ್ದೇನೆ. ಈಗ ನನ್ನೆದರೂ ಆ ದೇವರನ್ನು ಸ್ಮರಿಸಿ ವಾಸುದೇವನು ತಲೆಯೊಡೆದದ್ದು ನಿಜವೆಂದು ಪ್ರಮಾಣಮಾಡಿ ಹೇಳುವಿರಾ? ನನಗೆ ನಿಜವಾದ ಸತ್ಯವನ್ನು ಕೇಳಬೇಕಾಗಿದೆ."

"ಇದರಲ್ಲಿಯ ರಾಜಕೀಯ ನಿಮಗೆ ಅರ್ಥವಾಗದು ಮಾಸ್ತರರೆ!" ಗೌಡನು ಆ ಮಾತನ್ನು ಬೇರೆಯಾಗಿ ಮರೆಮಾಡಲು ಹವಣಿಸಿದನು.

"ಹೌದಪ್ಪಾ! ಕನ್ನಡ ಶಿಕ್ಷಕನಾದ ನನಗೆ ನಿಮ್ಮ ರಾಜಕೀಯವು ತಿಳಿಯದ ವಿಷಯ. ಆದರೆ ಅನ್ಯಾಯವನ್ನು ನ್ಯಾಯವೆಂದು ಪ್ರತಿಪಾದಿಸಿ ಸರಳ ಹೃದಯರನ್ನು ಜೇಲಿಗೆ ಕಳಿಸುವ ಕುಟಿಲ ಕಾರಸ್ಥಾನವನ್ನು ತಿಳಿಯದಷ್ಟು ಮೂಢತನವಿನ್ನೂ ಬರಲಿಲ್ಲ ನೋಡು."

"ಇದರಲ್ಲಿ ಅನ್ಯಾಯದ ಮಾತೇ ಇಲ್ಲ ಮಾಸ್ತರರೆ!"

"ವಾಸುದೇವನನ್ನು ಜೇಲಿಗೆ ಕಳುಹಿಸಿದ್ದು ನ್ಯಾಯಸಮ್ಮತವೆಂದು ಇನ್ನೂ ಹೇಳುತ್ತಿರುವಿರಾ ?"

"ನಾವು ಸರಕಾರದ ನೌಕರರು ಮಾಸ್ತರರೆ! ಶಾಂತತೆಯನ್ನು ಕಾಯ್ದುಕೊಳ್ಳಲು ಏನೆಲ್ಲವನ್ನೂ ಮಾಡಬೇಕಾಗುತ್ತದೆ. ಶಾಂತತೆಯನ್ನು ಕಾಪಾಡಿಕೊಳ್ಳುವದು ನ್ಯಾಯವಲ್ಲವೆ ?"

"ಈ ಮಾತಿಗೆ ನಾವೆಲ್ಲಿ ಪ್ರತಿಹೇಳುತ್ತೇವೆ? ಆದರೆ ಈ ಶಾಂತತೆಯನ್ನು ಕಾಪಾಡಿದವನನ್ನು ಜೇಲಿಗೆ ಕಳಿಸುವದು ಯಾವ ನ್ಯಾಯವೆಂಬುದನ್ನು ಗೌಡರು ಹೇಳುವರೆ? ನಿಜವಾಗಿಯೂ ಶಾಂತತೆಯನ್ನು ಕಾಯ್ದುಕೊಟ್ಟವರು

ಸರಕಾರೀ ಅಧಿಕಾರಿಗಳೆಂದು ನಂಬುತ್ತೀರಾ ? ಆ ದಿನ ವಾಸುದೇವನು ಅಲ್ಲಿ ಇರದಿದ್ದರೆ ನಿಮ್ಮ ಗತಿ ಏನಾಗುತ್ತಿತ್ತು ? ಈಗ ಅವನು ಹೋದ ಮೇಲೂ ಶಾಂತತೆ ನೆಲೆಯಾಗಿ ನಿಂತಿರುವುದನ್ನು ಯಾರ ಪುಣ್ಯವೆಂದು ತಿಳಿದಿದ್ದೀರಿ ? ಇದು ಅಧಿಕಾರಿಗಳಿಂದ ಸಾಧಿಸಿಲ್ಲ ಗೌಡರೆ! ನಿಮ್ಮಿಂದ ಸಾಧಿಸಲಿಲ್ಲ. ಅದು ಸಾಧಿಸಿದ್ದು ವಾಸುದೇವನ ದಯೆಯಿಂದ, ಅವನ ತತ್ವದಿಂದ.

"ಇದಕ್ಕೆ ಯಾರು ಹೊಣೆ ಎಂಬುದನ್ನು ಸರಕಾರ ತಿಳಿದುಕೊಂಡಿದೆ."

"ವಾಸುದೇವನೇ ಈ ಶಾಂತಿಸ್ಥಾಪನೆಗೆ ಹೊಣೆಗಾರನೆಂದು ಜನರೂ ತಿಳಿದುಕೊಂಡಿದ್ದಾರೆ ಗೌಡರೆ! ನಿಮ್ಮ ಸರಕಾರಕ್ಕಿಂತ ನನಗೆ ಜನರ ಅಭಿಪ್ರಾಯವೇ ಬೆಲೆಯುಳ್ಳದ್ದಾಗಿದೆ. ನೀವು ವಾಸುದೇವನನ್ನು ಏತಕ್ಕಾಗಿ ಜೇಲಿಗೆ ಕಳಿಸಿದಿರೆಂಬುದು ಜನರಿಗೆ ಮನದಟ್ಟಾಗಿದೆ. ನೀವು ನಿಮ್ಮ ಜನರನ್ನು ಕಡೆಗಣಿಸಿ ಬಾಳಲಾರಿರಿ ಗೌಡರೆ! ನನಗೆ ನನ್ನ ಮಗನ ಬಗ್ಗೆ ಚಿಂತೆಯಿಲ್ಲ. ನಿಮ್ಮ ಮನೋವೃತ್ತಿಯ ಬಗ್ಗೆ ಅತ್ಯಂತ ಖೇದವಾಗಿದೆ. ಸರಕಾರದ ಶಿಕ್ಷೆಗಿಂತ ದೇವರ ಶಿಕ್ಷೆ ಬಹಳ ದೊಡ್ಡದು ಗೌಡರೆ! ನೀವು ಅನ್ಯಾಯ ಮಾಡಿ ದೇವರ ಕಣ್ಣು ತಪ್ಪಿಸಲಾರಿರಿ. ಒಂದಿಲ್ಲೊಂದು ದಿನ ನೀವು ಈ ಅನ್ಯಾಯಕ್ಕಾಗಿ ದೇವರ ನ್ಯಾಯಾಲಯದಲ್ಲಿ ಉತ್ತರ ಕೊಡಬೇಕಾಗಿ ಬಂದೀತು. ನಿಮ್ಮ ಕೋರ್ಟಿನಕಿಂತ ಆ ಕೋರ್ಟು ಶಾಶ್ವತವಾದದ್ದು. ತಿಳಿಯಿತೆ?"

"ಇದೇನು ಮಾಸ್ತರರೆ! ಸರಕಾರದ ಉಪ್ಪುಣ್ಣುತ್ತಿರುವ ನೀವೂ ಹೀಗೆ ಮಾತಾಡುವಿರಾ ? ಉಂಡಮನೆಯ ಗಳ ಎಣಿಸುವಿರಾ ?"

"ಸರಕಾರವೇ ನಮ್ಮ ಉಪ್ಪು ಉಂಡು ಕೊಬ್ಬಿಬಿಟ್ಟಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ನಿಮ್ಮ ಉಪದೇಶವಾಗಲಿ ಹೆದರಿಕೆಯಾಗಲಿ ಅಡ್ಡ ಬರಲಾರದು. ನಾನು ಉಂಡ ಮನೆಯ ಗಳ ಎಣಿಸುವದಿಲ್ಲ ಗೌಡರೆ! ಉಂಡ ಮನೆಗೆ ಉರಿಹಚ್ಚಿ ಮೋಜು ನೋಡುವವರನ್ನು ಕಂಡಾಗ ಸಂತಾಪವಾಗುತ್ತದೆ."

"ನಿಮ್ಮ ಮಾತುಗಳು ರಾಜದ್ರೋಹದಿಂದ ತುಂಬಿವೆ. ನೀವು ಒಬ್ಬ ಸರಕಾರೀ ಅಧಿಕಾರಿಯ ಮುಂದೆ ಮಾತಾಡುತ್ತಿರುವಿರೆಂಬ ಎಚ್ಚರವಿದೆಯಲ್ಲವೆ ಮಾಸ್ತರರೆ ?"

"ರಾಜನೇ ಇಲ್ಲದ ದೇಶದಲ್ಲಿ ರಾಜದ್ರೋಹವೆಲ್ಲಿಯದು? ನಿಮ್ಮ ಕೃತಿಗಳು ಮಾತ್ರ ರಾಷ್ಟ್ರವಿಘಾತಕವಾಗಿವೆ. ನೀವು ರಾಷ್ಟ್ರದ್ರೋಹಿಗಳಾಗಿ ಪಾಪ ಕಟ್ಟಿಕೊಳ್ಳಹತ್ತಿರುವಿರಿ. ಈ ಅಧಿಕಾರ ಶಾಶ್ವತವೆಂದು ನಂಬಿ ಕೆಡಹತ್ತಿರುವಿರಿ. ದೇಶದಲ್ಲಿ ನಡೆಯುತ್ತಿರುವುದನ್ನು ಕಣ್ಣುಮುಚ್ಚಿ ಕಾಣುತ್ತಿರುವಿರಿ.

ಸ್ವಾರ್ಥಕ್ಕಾಗಿ ದೇಶದ ಸತ್ವವನ್ನೇ ಹೀರತೊಡಗಿದ್ದೀರಿ. ನಿಮ್ಮ ಉದ್ಧಾರವನ್ನು ನೀವೇ ಮಾಡಿಕೊಳ್ಳಬೇಕಲ್ಲದೆ ಅನ್ಯರು ಮಾಡಲಾರರೆಂದು ತಿಳಿದುಕೊಳ್ಳದೆ ಮದೋನ್ಮತ್ತರಾಗಿ ವರ್ತಿಸತೊಡಗಿರುವಿರಿ. ಒಬ್ಬ ವಾಸುದೇವನನ್ನು ಮರೆ ಮಾಡಿದರೆ ಹತ್ತು ವಾಸುದೇವರು ಹುಟ್ಟಿಕೊಳ್ಳುತ್ತಾರೆಂಬುದನ್ನು ತಿಳಿಯ ಲಾರಿರಿ. ದೇಶ ನಿಮ್ಮದು ಗೌಡರೆ. ಅದನ್ನು ಆಳುವವರು ಯಾರು? ಗುಲಾಮಗಿರಿಯಲ್ಲಿ ಗೌಡರಾಗಿ ಮೆರೆಯುವ ನೀವು, ಸ್ವತಂತ್ರಭಾರತದ ಗೌಡರಾಗಬೇಕಾದ ನಿಮ್ಮ ಕೃತಿ ರಾಷ್ಟ್ರಕಾರ್ಯಕ್ಕೆ ಪೋಷಕವಾಗಿರಬೇಕು. ಈ ಸರಕಾರ ಸ್ಥಿರವಲ್ಲ ಗೌಡರೆ. ನಿಮ್ಮ ಜನ ಸ್ಥಿರ. ನೀವು ಜನರಿಂದ ಸಿಡಿದರೆ ಸುಟ್ಟು ಅರಳಾಗುವಿರಿ. ಈಗೇನೋ ಮಾತು ಮಿಂಚಿಹೋಗಿದೆ. ಇನ್ನು ಮೇಲಾದರೂ ಇಂತಹ ಅನುಚಿತ ಕಾರ್ಯವನ್ನು ಮಾಡಬೇಡಿರಿ. ರಾಷ್ಟ್ರ ದ್ರೋಹವನ್ನು ಬಗೆಯಬೇಡಿರಿ. ಅನ್ನನೀರಿನ ಪರಿವೆಯಿಲ್ಲದೆ ರಾಷ್ಟ್ರದಲ್ಲಿ ಅನೇಕರು ಮಡಿಯತೊಡಗಿದ್ದಾರೆ. ಸರ್ವತ್ಯಾಗಮಾಡಿ ನಿಂತಿದ್ದಾರೆ. ಪ್ರಸಂಗ ಬಂದರೆ ಬಲಿದಾನವಾಗಿ ತಮ್ಮ ದೇಹಗಳನ್ನು ನೀಡಲು ಸಿದ್ಧರಾಗಿದ್ದಾರೆ. ಇವರು ಯಾರು? ಯಾವ ಜನ? ಏತಕ್ಕಾಗಿ ದುಡಿಯುತ್ತಿದ್ದಾರೆ? ಎಂಬ ಕಲ್ಪನೆ ನಿಮಗೆ ಬೇಡವೆ? ನೀವು ಈಗ ಎಂತಹ ಅನುಚಿತ ಧೋರಣೆಯನ್ನು ತಳೆದಿದ್ದೀರಿ ಗೌಡರೆ! ಇಂದು ಶಾಂತಿಯಿಲ್ಲ ಗೌಡರೇ! ಕ್ರಾಂತಿಗೆ ಆಹ್ವಾನ. ತಿಳಿಯಿತೆ? ಇಂತಹ ಹುಚ್ಚತನ ನಿಲ್ಲಲಿ. ನಾನು ನಿಮ್ಮವನೆಂದು ಈ ಮಾತನ್ನು ಹೇಳತೊಡಗಿದ್ದೇನೆ. ನನ್ನ ಮಗನಾದ ವಾಸುದೇವನು ಜೇಲಿಗೆ ಹೋದರೇನಾಯಿತು! ಊರಗೌಡರಾದ ನೀವು ನನ್ನ ಹಿರಿಯ ಮಗನೆಂದೇ ನಾನು ತಿಳಿದುಕೊಂಡಿದ್ದೇನೆ. ಈ ಅಣ್ಣತಮ್ಮಂದಿರ ಗೊಡಗು ಏಳಬಾರದು. ನಾನು ಯಾವ ಮಾತನ್ನು ಕೇಳಲು ಬಂದಿದ್ದೆನೋ ಆ ಮಾತನ್ನು ತಿಳಿದು ಕೊಂಡೆ. ನನ್ನ ವಾಸುದೇವನು ನಿರಪರಾಧಿಯಾಗಿದ್ದಾನೆ."

ಇಷ್ಟು ದೀರ್ಘವಾಗಿ ಮಾತನಾಡಿ ರಾಮಾಶಾಸ್ತ್ರಿಗಳು ಬಿರಬಿರನೆ ನಡೆದುಬಿಟ್ಟರು. ಅವರ ಹೆಜ್ಜೆಗಳಲ್ಲಿ ಸ್ಫೂರ್ತಿ ತುಂಬಿತ್ತು. ವಾಸುದೇವನ ಬಗ್ಗೆ ಅಪ್ರತಿಮವಾದ ಭಕ್ತಿ ಮೂಡಿದ್ದು ಅವರಮುಖದಿಂದ ವ್ಯಕ್ತವಾಗಿತ್ತು.

ರಾಮಾಶಾಸ್ತ್ರಿಗಳು ಹೋದ ಬಹಳ ಹೊತ್ತಿನವರೆಗೆ ಗೌಡನಾಗಲಿ. ಕುಲಕರ್ಣಿಯಾಗಲಿ ಪಿಟ್ಟೆಂದು ಮಿಸುಕಲಿಲ್ಲ. ರಾಷ್ಟ್ರೀಯ ಮನೋವೃತ್ತಿ ಯಲ್ಲಿ ಬೆಳೆದು ಮರವಾಗಿ ನಿಂತ ರಾಮಾಶಾಸ್ತ್ರಿಗಳ ವ್ಯಕ್ತಿತ್ವದ ಪ್ರಭೆಯಲ್ಲಿ ಅವರು ಕೆಲವು ಹೊತ್ತಿನವರೆಗೆ ದಿಙ್ಮೂಢರಾಗಿಬಿಟ್ಟರು. ಅವರು ಹೇಳಿದ ಮಾತುಗಳೆಲ್ಲ ಅವರ ಹೃದಯದಲ್ಲಿ ನಟ್ಟು ಬಾಧಿಸತೊಡಗಿದ್ದೇ ಈ ಮೌನಕ್ಕೆ

ಕಾರಣವಾಗಿರಬೇಕು.

"ಏನು ಗೌಡರೆ! ಒಬ್ಬ ಕ್ಷುಲ್ಲಕ ಮಾಸ್ತರನೊಬ್ಬ ಹೀಗೆ ಮನಸ್ಸಿಗೆ ಬಂದಂತೆ ಮಾತಾಡಿ ಹೋದರೆ ಊರ ಗೌಡರಾದ ನೀವು ಸುಣ್ಣ ತಿಂದ ಮಂಗನಂತಾಗಬೇಕೇ ? ಮಗನ ಮೇಲಿನ ಮೋಹದಿಂದ ಅವನು ಬೊಗಳುತ್ತಿದ್ದಾನೆಂಬುದನ್ನು ನೀವು ತಿಳಿಯಬೇಡವೆ?" ಮೌನವನ್ನು ಮುರಿದು ದೇಶಪಾಂಡೆ ಹೇಳಿದನು.

"ಅದೆಲ್ಲಾ ಸರಿ ದೇಶಪಾಂಡೆ! ಆದರೆ ಈ ಮಾಸ್ತರನು ಸುಮ್ಮನೆ ಕೂಡ್ರುವ ಆಸಾಮಿಯಲ್ಲ."

"ಏನು ಮಾಡುತ್ತಾನೆ? ಅವನ ಮಾತನ್ನು ಯಾರು ಕೇಳುತ್ತಾರೆ?" ದೇಶಪಾಂಡೆ ಅಬ್ಬರದಿಂದ ನುಡಿದನು.

"ಅವನು ವಾಸುದೇವನ ಅಪ್ಪನಾಗಿದ್ದಾನೆಂಬುದನ್ನು ನೀವು ಮರೆತಂತೆ ಕಾಣುತ್ತದೆ. ವಾಸುದೇವನಿಗಿದ್ದ ಗೌರವಕ್ಕೆ ಈಗ ಅವರಪ್ಪನು ಪಾತ್ರನಾಗುತ್ತಾನೆ. ಜನರು ಅವನ ಮಾತನ್ನು ಕೇಳದೇ ಯಾರ ಮಾತು ಕೇಳಬೇಕು?" ಕುಲಕರ್ಣಿ ಸತ್ಯವಾದದ್ದನ್ನು ಹೇಳಿದನು.

"ಒಂದು ಮುಳ್ಳು ಕಿತ್ತಿ ಒಗೆಯುವದರಲ್ಲಿಯೇ ಇನ್ನೊಂದು ದೊಡ್ಡ ಮುಳ್ಳನ್ನು ನಾವು ಅನುಭವಿಸಬೇಕಾಗುವದೇನೋ?"

"ಇವು ಅಂಥಿಂಥ ಮುಳ್ಳುಗಳಲ್ಲ ಗೌಡಾ? ಈ ಮುಳ್ಳಿನ ಜಾತಿ ಬೇರೆಯೇ ಆಗಿದೆ. ಈ ಮುಳ್ಳುಗಳಿಂದ ನಮಗೆ ಕ್ಷೇಮವಿಲ್ಲ."

"ಒಂದು ದೊಡ್ಡ ಮುಳ್ಳನ್ನೇ ಎಸೆದುಬಿಟ್ಟಿದ್ದೇನೆ. ಈ ಮುಳ್ಳನ್ನು ಕೀಳುವದೇನು ಅಸಾಧ್ಯವೆ?" ಗೌಡ ವಿಚಾರಿಸಿ ಹೇಳಿದ.

ಕರ್ನಾಟಕ ಕಾಲೇಜದ ಭವ್ಯವಾದ ವಾಚನಮಂದಿರದ ಒಂದು ತುದಿಯಲ್ಲಿ ಮಂಡಿತವಾದ ಒಂದು ಕುರ್ಚಿಯ ಮೇಲೆ ಕುಳಿತು ಜಯದೇವನು ಅದೀಗ ಬಂದ ರಾಮಾಶಾಸ್ತ್ರಿಗಳ ಪತ್ರವನ್ನು ಓದತೊಡಗಿದನು. ಓದತೊಡಗಿದಂತೆ ಅವನ ಮುಖವು ಉದ್ವೇಗಪೂರ್ಣವಾಗತೊಡಗಿತು. ಕೊನೆಗೆ ಬರೆದ 'ಈ ಘಟನೆಯನ್ನು ನಿನ್ನ ತಾಯಿ ಬಹಳ ಹಚ್ಚಿಕೊಂಡಿರುವಂತೆ ಕಾಣುತ್ತದೆ. ನೀನು ಬಂದು ಅವಳಿಗೆ ಸಮಾಧಾನ ಹೇಳಿ ಹೋಗುವದು ವಿಹಿತವೆಂದು ತೋರುತ್ತದೆ. ನಿನಗೆ ಸಧ್ಯ ಅಭ್ಯಾಸದ ಒತ್ತಡವಿಲ್ಲದಿದ್ದರೆ ಒಂದು ದಿನದ

ಮಟ್ಟಿಗಾದರೂ ಬಂದು ಹೋಗಬೇಕು.' ಎಂಬುದನ್ನು ಓದಿದಾಗ ಅವನ ಕಣ್ಣಂಚಿನಲ್ಲಿ ನೀರಾಡಿತು. ತಾಯಿಯನ್ನು ಯಾವಾಗ ಕಂಡೇನೋ ಎಂದು ಅವನು ಹಾತೊರೆಯತೊಡಗಿದನು.

'ಯುವಕ ಸಂಘ'ದ ಕಾರ್ಯದರ್ಶಿಯಾದ ಜಯದೇವನು ಆ ವಾರದಲ್ಲಿ ಒಂದು ಸಂಘಟನಾ ಕಾರ್ಯವನ್ನು ಮಾಡಬೇಕಿತ್ತು. ಆ ಬಗ್ಗೆ ಎಲ್ಲ ಕಡೆಗೂ ಪರಿಪತ್ರಗಳನ್ನು ಕಳಿಸಿ ಆಗಿತ್ತು. ಈ ಕಾರ್ಯ ಬಹಳ ಗುಪ್ತವಾಗಿಯೇ ನಡೆಯಬೇಕಾಗಿದ್ದರಿಂದ ಅವನು ಧಾರವಾಡವನ್ನು ಕೂಡಲೇ ಬಿಡುವದು ಸಾಧ್ಯವಿರಲಿಲ್ಲ. ಈಗ ಬಂದ ಈ ಪತ್ರವನ್ನು ಓದಿ ದೀರ್ಘಾಲೋಚನೆಗೆ ಒಳಗಾಗಬೇಕಾಯಿತು. ತಾಯಿಯನ್ನು ಕೂಡಲೇ ಭೆಟ್ಟಿಯಾಗಲೇಬೇಕು, ಆದರೆ ಈ ಸಂಘಟನೆಯ ಕಾರ್ಯವೂ ನಡೆಯಬೇಕು. ಹೇಗೆಂಬುದು ಅವನಿಗೆ ತಿಳಿಯದಾಯಿತು. ಪತ್ರವನ್ನು ಹಿಡಿದುಕೊಂಡು ಜಯದೇವನು ಶೂನ್ಯ ಮನಸ್ಕನಾಗಿ ಕುಳಿತುಬಿಟ್ಟನು. ಕಾಲೇಜದ ದೊಡ್ಡ ಗಡಿಯಾರ ಎರಡು ಸಾರೆ ಢಣ್ ಢಣ್ ಎಂದ ಅರಿವೂ ಅವನಿಗಿರಲಿಲ್ಲ. ಇಂತಹ ಹೊತ್ತಿನಲ್ಲಿ ಬಂದ ಸುಂದರಾ ಅವನ ಲಕ್ಷ್ಯವನ್ನೆಂತು ಸೆಳೆಯಬೇಕು! ಅವಳು ಅವನ ಎದುರಿಗೆ ನಿಂತರೂ ಅವನು ಕಣ್ಣೆತ್ತಿ ನೋಡದಿರುವದು ಅವಳಲ್ಲಿ ಅಚ್ಚರಿಯನ್ನುಂಟು ಮಾಡಿತು. ಅವಳು ಮಂದಹಾಸದಿಂದ

"ಕಾರ್ಯದರ್ಶಿಗಳು ಯಾವುದೋ ದೀರ್ಘಾಲೋಚನೆಯಲ್ಲಿ ಮುಳುಗಿದಂತೆ ಕಾಣುತ್ತದೆ" ಎಂದು ನಗುತ್ತ ನುಡಿದಾಗ ಜಯದೇವನು ಮುಖವನ್ನು ಮೇಲೆತ್ತಿ

"ಹೌದು ಸುಂದರಾ! ಒಂದು ಆಲೋಚನೆ ನನ್ನನ್ನು ಕಾಡತೊಡಗಿದ್ದು ನಿಜ. ಇದನ್ನು ನಿನ್ನೊಡನೆ ವಿಚಾರಿಸುವದಕ್ಕಾಗಿ ನಿನ್ನ ಹಾದಿಯನ್ನೇ ನೋಡುತ್ತಿದ್ದೆ." ಎಂದು ಜಯದೇವನು ಅವಳನ್ನು ವಾಚನಮಂದಿರದ ಹೊರಗಿನ 'ಬಾಲ್ಕನಿ'ಯ ಹತ್ತಿರ ಕರೆದುಕೊಂಡು ಹೋಗಿ ಅವಳ ಕೈಗೆ ತಂದೆಯ ಪತ್ರವನ್ನಿತ್ತನು.

ಸುಂದರಾ ಪತ್ರವನ್ನು ಸಂಪೂರ್ಣವಾಗಿ ಓದಿದಾಗ ಅವಳ ಕೆನ್ನೆಗಳಲ್ಲಿ ಕೆಂಪು ಮೂಡಿತು. ಒಂದೆರಡು ಬೆವರ ಹನಿಗಳು ಅವಳ ಹಣೆಯ ಮೇಲೆ ಕಾಣಿಸಿಕೊಂಡವು. ಅವಳು ಆಕ್ರೋಶದಿಂದ "ನಿರಪರಾಧಿಯನ್ನು ಜೇಲಿಗೆ ಕಳಿಸುವ ನೀಚರೂ ನಮ್ಮಲ್ಲಿದ್ದಾರೆ. ಇದರ ಪಾರುಪತ್ಯವನ್ನು ಮೊದಲು ಮಾಡಬೇಕು" ಎಂದಳು.

"ಆ ನೀಚತನ ಎರವು ತಂದದ್ದು ಸುಂದರಾ! ಅವರೆಲ್ಲ ಸರಕಾರದ

ಸೂತ್ರದ ಗೊಂಬೆಗಳು. ಅಣ್ಣಾನ ಸತ್ವವನ್ನು ಅವರು ಅರಿಯಲಾರರು. ಒಂದು ರೀತಿಯಿಂದ ಇದೂ ಒಳ್ಳೆಯದೇ ಆಯಿತೆನ್ನು. ನಮ್ಮ ಜನರಿಗೆ ಇದರಿಂದಲಾದರೂ ಬುದ್ಧಿ ಬಂದೀತು. ಆದರೆ ನೀನು ಕೊನೆಯ ಸಾಲುಗಳನ್ನು ಓದಿದೆಯಷ್ಟೆ ?"

"ಆ ಮಾತುಗಳಂತೆ ನೀವು ನಿಮ್ಮ ತಾಯಿಯನ್ನು ಕಾಣಲು ಕೂಡಲೇ ಹೊರಡಬೇಕು. ಮತ್ತೇನು ?"

"ಆದರೆ..."

"ಈ ವಾರದಲ್ಲಿ ಕೂಡಬೇಕಾದ ಸಭೆಗಾಗಿ ಚಿಂತಿಸುವಿರಾ ?"

"ಅದೇ ಚಿಂತೆ ನನ್ನನ್ನು ಬಹಳ ಕಾಡತೊಡಗಿದೆ. ಆ ಸಭೆಯಲ್ಲಿ ಅನೇಕ ಸಂಗತಿಗಳ ನಿರ್ಧಾರವಾಗಬೇಕಾಗಿದೆ."

"ಅದರ ಹೊಣೆ ನನಗಿರಲಿ. ನೀವು ಒಂದು ಕ್ಷಣವೂ ನಿಲ್ಲಬೇಡಿರಿ. ಸಭೆಗೆ ಇನ್ನೂ ಎಂಟು ದಿನಗಳ ಅವಕಾಶವಿದೆ. ಗೆಳೆಯರು ಉಳಿದ ಕೆಲಸಗಳನ್ನು ಮಾಡುತ್ತಾರೆ. ಸಾಧ್ಯವಾದರೆ ನೀವು ಆ ದಿನ ಬನ್ನಿರಿ. ಇಲ್ಲದಿದ್ದರೆ ನಿಮ್ಮ ಭಾರವನ್ನು ನಾನು ಹೊರುತ್ತೇನೆ."

ಈ ಮಾತುಗಳನ್ನು ಕೇಳಿದ ಜಯದೇವನು ವಿಶ್ವಾಸದಿಂದ ಆ ತರುಣಿಯನ್ನು ನೋಡಿದನು. ಅವಳ ಕರ್ತೃತ್ವ ಶಕ್ತಿಯ ಅರಿವು ಅವನಿಗೆ ತುಂಬಾ ಇತ್ತು. ಅವನು ಚೇಷ್ಟೆಯ ದನಿಯಲ್ಲಿ

"ನಿಮ್ಮನ್ನು ಹೇಗೆ ನಂಬುವುದು ಹೇಳಿರಿ. ನೀವು ಎಷ್ಟೆಂದರೂ ಜಿಲ್ಹಾ ಪೋಲೀಸ ಅಧಿಕಾರಿಯ ಮಗಳು" ಎಂದು ನಕ್ಕಾಗ,

"ನಾನು ಡಿ. ಎಸ್. ಪಿ. ಯ ಮಗಳಾದರೂ ಭಾರತ ಪುತ್ರಿಯಾಗಿದ್ದೇನೆಂದು ಮನವೊಲಿಸಿದ ನೀವೇ...."

"ಈ ದಿನ ಎಲ್ಲ ಕಾರ್ಯಭಾರವನ್ನು ನಿನ್ನ ಮೇಲೆ ಹೊರಿಸಿ ಹೋಗುತ್ತಿದ್ದೇನೆ ಸುಂದರಾ! ನಾನು ತಪ್ಪದೇ ಬರುತ್ತೇನೆ. ಮುಂಬರುವ ಮಹಾಕಾರ್ಯಕ್ಕೆ ತಳಹದಿಯಾಗಬೇಕಾದ ಸಭೆಗೆ ನಾನಿರುವುದು ಅಗತ್ಯವಾಗಿದೆ. ಒಂದು ವೇಳೆ ನಾನು ಬರದಿದ್ದರೆ ನಾನೇ ನೀನಾಗಿ...."

"ನಿಮ್ಮ ಕೆಲಸವನ್ನು ಮಾಡೆಂದು ಆಜ್ಞಾಪಿಸುವಿರಲ್ಲವೆ ?"

"ಆಜ್ಞೆಯಲ್ಲ ಸುಂದರಾ, ಬಿನ್ನಹ."

ಸುಂದರಾ ಬಾಯಿತುಂಬಾ ನಕ್ಕಳು.

ಸಹಕಾರ್ಯಕರ್ತರಿಗೆಲ್ಲ ಹೇಳಬೇಕಾದುದನ್ನು ಹೇಳಿ ತಿಳಿಸಿ ಅದೇ ದಿನ ಜಯದೇವನು ಗಂಗನಹಳ್ಳಿಗೆ ಧಾವಿಸಿದನು.

ಗಂಗನಹಳ್ಳಿಯನ್ನು ಮುಟ್ಟುವವರೆಗೆ ಅವನನ್ನು ಅನೇಕ ವಿಚಾರಗಳು ಮುತ್ತತೊಡಗಿದವು. ತಾಯಿಯನ್ನು ಕಾಣುವ ಆತುರವೊಂದು ಕಡೆ. ತಾನಿಲ್ಲದಾಗ ಸಂಘಟನಾಕಾರ್ಯವೆಂತು ನೆರವೇರುವದೋ ಎಂಬ ಚಿಂತೆಯೊಂದು ಕಡೆ. ಈ ಚಿಂತೆಯ ಸುಳಿಯಲ್ಲಿ ಸಿಕ್ಕ ಜಯದೇವನ ಕಣ್ಣೆದುರು ಕಾಲೇಜಜೀವನದ ಚಿತ್ರಗಳು ಒಂದೊಂದಾಗಿ ತೇಲಿ ಬರತೊಡಗಿದವು. ಆ ಚಿತ್ರಗಳಲ್ಲಿ ಸುಂದರಾನೊಡನೆ ಬಂದ ಸಂಬಂಧವು ಬಹಳ ಸ್ಪಷ್ಟವಾಗಿ ಮೂಡತೊಡಗಿತು.

ಕಾರಣಿಕಪುರುಷನ ವರ್ಚಸ್ಸಿನಲ್ಲಿ ತಾನು ಸಿಕ್ಕಿದ್ದು, ಕಾಲೇಜದಲ್ಲಿ ಕ್ರಾಂತಿಕಾರಕ ಯುವಕ ಸಂಘಟನೆ ಮಾಡಿದ್ದು. ಒಮ್ಮೆ ಕಾಲೇಜದ ಪಟಾಂಗಣದಲ್ಲಿ 'ಸ್ವಾತಂತ್ರ್ಯ ಸಮರದಲ್ಲಿ ಯುವಕರ ಕರ್ತವ್ಯ' ಎಂಬ ವಿಷಯದಮೇಲೆ ತಾನು ಮಾತನಾಡಿದ್ದು—ಉಪನ್ಯಾಸ ಮುಗಿದ ಮೇಲೆ ಸುಂದರಾ ಭೆಟ್ಟಿಯಾಗಿ ಅಭಿನಂದಿಸಿದ್ದು—ಚಹಕ್ಕಾಗಿ ಮನೆಗೆ ಬರಲು ಔತಣ ಕೊಟ್ಟದ್ದು—ಅವರ ಮನೆಯಲ್ಲಿ ಅನೇಕ ವಿಷಯಗಳನ್ನು ಚರ್ಚಿಸಿದ್ದು—ಅವಳ ತಂದೆ ಡಿ. ಎಸ್. ಪಿ. ಅವರು ಬಂದದ್ದು—ಸ್ವಾತಂತ್ರ್ಯ ಚಳವಳಿಯನ್ನು ಅವರು ಹೀನಾಯವಾಗಿ ಹಳಿದದ್ದು ತಾನು ಪ್ರತಿಭಟಿಸಿದ್ದು—ಅವರು ಅಷ್ಟೇ ತಿರಸ್ಕಾರದಿಂದ ನೋಡಿದ್ದು—ಮಗಳಿಗೆ ಎಚ್ಚರಿಕೆ ಕೊಟ್ಟದ್ದು—ನಾವು ಭಾರತೀಯರಲ್ಲವೇ ಅಪ್ಪಾ! ಎಂದು ಸುಂದರಾ ದಿಟ್ಟತನದಿಂದ ನುಡಿದದ್ದು—ತಂದೆ ಅಟ್ಟಹಾಸದಿಂದ ನಕ್ಕದ್ದು—ಸುಂದರಾ ಆಮೇಲೆ ದಿನಾಲು ತನ್ನನ್ನು ಸಂಧಿಸುತ್ತಿದ್ದದ್ದು—ಕ್ರಾಂತಿಕಾರಕ ಯುವಕ ಸಂಘದಲ್ಲಿ ಅವಳು ಸೇರಿಕೊಂಡು ಅದ್ಭುತವಾದ ಕಾರ್ಯ ಮಾಡತೊಡಗಿದ್ದು—

ಕೊನೆಯ ಚಿತ್ರ ಬಂದಾಗ ಜಯದೇವನಿಗೆ ತುಸು ಸಮಾಧಾನವಾಯಿತು. ಸುಂದರಾ ಎಲ್ಲ ಕೆಲಸವನ್ನೂ ಚಾಕಚಕ್ಯತೆಯಿಂದ ಮಾಡುವಳೆಂಬ ಭರವಸೆ ಅವನಲ್ಲಿ ನೆಮ್ಮದಿಯನ್ನೇ ತಂದಿತು. ಈ ನೆಮ್ಮದಿಯಲ್ಲಿ ಹರುಷದಿಂದ ಅವನು ಮನೆಯಲ್ಲಿ ಕಾಲಿಟ್ಟಾಗ ಸೀತಮ್ಮನವರು ಅದೇ ಊಟಮಾಡಿ ಕೈ ತೊಳೆದುಕೊಂಡು ಪಡಸಾಲೆಗೆ ಬಂದಿದ್ದರು. ರಾಮಾಶಾಸ್ತ್ರಿಗಳು ದೀರ್ಘಾಲೋಚನೆಯಲ್ಲಿ ಮುಳುಗಿದವರಂತೆ ಅಲ್ಲಿಯೇ ಕುಳಿತುಕೊಂಡಿದ್ದರು. ಮಂದವಾದ ದೀಪವೊಂದು ಅಲ್ಲಿಯೇ ಉರಿಯುತ್ತಿತ್ತು. ಅದಕ್ಕೆ ಬಂದ ಕುಡಿ ಆ ಮನೆಯ ದುಗುಡದ ಪ್ರತೀಕವಾಗಿ ಹೊಗೆಯನ್ನು ಕಾರುತ್ತಿತ್ತು.

"ಅವ್ವಾ!"

"ಎಲಾ ಇವನ! ಎಷ್ಟು ರಾತ್ರಿ ಮಾಡಿ ಬಂದೆಯೋ ಜಯದೇವ!" ಎಂದು ರಾಮಾಶಾಸ್ತ್ರಿಗಳು ಚಟಕ್ಕನೆ ಎದ್ದು ನುಡಿಯುತ್ತಿರುವಾಗಲೇ ಜಯ

ದೇವನ ಹಣೆಯು ಸೀತಮ್ಮನವರ ಪಾದದ ಮೇಲಿತ್ತು.

ಅನಿರೀಕ್ಷಿತವಾಗಿ ಬಂದ ಮಗನನ್ನು ನೋಡಿ ಸೀತಮ್ಮನವರ ಕಣ್ಣುಗಳಲ್ಲಿ ನೀರು ಮೂಡಿದವು. ಪಾದಗಳ ಮೇಲೆ ಹಣೆಯಿಟ್ಟವನು ವಾಸುದೇವನೋ ಎಂಬ ಭ್ರಮೆಯೂ ಆಯಿತವರಿಗೆ. ಆದರೆ ಆ ಭ್ರಮೆ ಕ್ಷಣಿಕವಾಗಿತ್ತು. ಅವರು ಜಯದೇವನ ಬೆನ್ನಮೇಲೆ ಕೈಯಾಡಿಸುತ್ತ ಗದ್ಗದಿತರಾಗಿ,

"ಜಯಾ! ನಿನ್ನ ಅಣ್ಣನನ್ನು ಹಿಡಿದುಕೊಂಡು ಹೋದರಪ್ಪಾ" ಎಂದರು.

ಈ ಮಾತುಗಳಲ್ಲಿ ಅಡಕವಾದ ತಾಯಿಯ ಅಂತಃಕರಣದ ಬುಗ್ಗೆಯನ್ನು ಕಂಡಾಗ ಜಯದೇವನಿಗೆ ಸೀತಮ್ಮನವರ ವೇದನೆಯ ಅರ್ಥವಾಯಿತು. ಅವರಿಗೆ ಮಗನ ಬಗ್ಗೆ ಇಲ್ಲದ ಭೀತಿಯು ಆವರಿಸಿದೆಯೆಂಬುದು ಸ್ಪಷ್ಟವಾಯಿತು. ಇದನ್ನು ತೊಡೆದು ಹಾಕಬೇಕೆಂದು "ಅಣ್ಣನಿಗೆ ವಿಶ್ರಾಂತಿಯ ಅವಶ್ಯಕತೆ ಬಹಳವಾಗಿತ್ತು. ಅವ್ವಾ, ಅವರು ಹಿಡಿದುಕೊಂಡು ಹೋಗಿ ಉಪಕಾರವನ್ನೇ ಮಾಡಿದರು" ಎಂದ.

"ಜೇಲು ವಿಶ್ರಾಂತಿಯ ಸ್ಥಳವೇನೋ ಹುಚ್ಚಾ!"

"ಅಲ್ಲವೆಂದು ನಿನಗಾರು ಹೇಳಿದರು ಹೇಳು! ಅಣ್ಣನು ಹೊರಗಿದ್ದಾಗ ಎಷ್ಟು ದುಡಿಯುತ್ತಿದ್ದನೆಂಬ ಕಲ್ಪನೆ ನಿನಗಿರಬೇಕು. ಹಳ್ಳಿ ಹಳ್ಳಿ ತಿರುಗುವುದು. ಸಭೆ ಜರುಗಿಸುವುದು, ಭಾಷಣ ಮಾಡುವದು, ವಿಧಾಯಕ ಕಾರ್ಯಗಳ ಸಂಘಟನೆ ಮಾಡುವುದು, ಒಂದೇ ಎರಡೇ? ಹೀಗಾಗಿ ಅವನು ಬಳಲಿ ಹೋಗಿದ್ದನು. ಈಗ ಜೇಲಿನಲ್ಲಿ ಅವನು ಏನೂ ಮಾಡುವಂತಿಲ್ಲ. ಅವನ ದಣಿದ ದೇಹಕ್ಕೆ ಸಾಕಷ್ಟು ವಿಶ್ರಾಂತಿ ಸಿಕ್ಕುತ್ತದೆ. ಮತ್ತೆ ಹೊರಗೆ ಬಂದಾಗ ಚೈತನ್ಯ ತುಂಬಿಯೇ ಬರುತ್ತಾನೆ."

"ಜೇಲಿನಲ್ಲಿ ಕೈಕಾಲುಗಳಿಗೆ ಬೇಡಿ ಹಾಕುತ್ತಾರಂತೆ. ಬೀಸಲು ಹಚ್ಚುತ್ತಾರಂತೆ. ಆಗಾಗ ಬಾರಕೋಲಿನಿಂದ ಸೆಳೆಯುತ್ತಾರಂತೆ. ಸುಡುಗಾಡು ಆಹಾರ ಕೊಡುತ್ತಾರಂತೆ. ದಪ್ಪಗಿನ ರೊಟ್ಟಿ, ನೀರಬೇಳೆ ಅವರ ಆಹಾರವಂತೆ. ಇದನ್ನು ವಾಸುದೇವನು ತಡೆದುಕೊಳ್ಳಬಹುದೇ?"

"ಇದನ್ನೆಲ್ಲಾ ನಿನಗೆ ಯಾರು ಹೇಳಿದರೇ ಅವ್ವಾ! ಇದೆಲ್ಲ ಅತಿರಂಜಿತ ಸುದ್ದಿ. ಅಣ್ಣನ ಆರೋಗ್ಯವನ್ನು ಕಾಪಾಡಿಕೊಳ್ಳುವದು ಸರಕಾರದ ಹೊಣೆಯಾಗಿದೆ. ಅವನ ಕೂದಲವೂ ಕೊಂಕಲಾರದು. ಮೊನ್ನೆಮೊನ್ನೆ ನನ್ನ ಗೆಳೆಯರು ಹೋಗಿ ಬಂದಿದ್ದಾರೆ. ಹೋಗುವ ಮುಂದೆ ಬಡಕಲಾಗಿದ್ದವರು ಬಂದಾಗ ತುಂಬಿಕೊಂಡೇ ಬಂದಿದ್ದಾರೆ. ಅಣ್ಣನ ಬಗ್ಗೆ ನೀನು ಚಿಂತಿಸುವುದೇ

ಬೇಡ ಅವ್ವಾ!"

"ಹಾಗಾದರೆ ವಾಸುದೇವನಿಗೆ ಏನೂ ಆಗುವುದಿಲ್ಲವೆ?"

"ಅದರ ಚಿಂತೆಯೇ ಬೇಡ. ಅವನಿಗೆ ವಿಶ್ರಾಂತಿ ಸಿಕ್ಕು ಅವನ ಆರೋಗ್ಯವು ಸುಧಾರಿಸುತ್ತದೆ. ಅಣ್ಣನ ಖ್ಯಾತಿಯನ್ನು ಹೆಚ್ಚಿಸಲು ಈ ಜೇಲುವಾಸವು ಅತ್ಯಂತ ಸಹಾಯ ಮಾಡಿದೆ ಅವ್ವಾ. ಈಗಾಗಲೇ ಅವನ ಹೆಸರು ಜನಜನಿತವಾಗಿದೆ. ಇಡಿಯ ದೇಶದಲ್ಲಿ ಅವನು ಮಾಡುತ್ತಿರುವ ಕಾರ್ಯದ ಹೆಸರಾಗಿದೆ. ಅವನ ಬಗ್ಗೆ ಇರುವ ಗೌರವಕ್ಕೆ ಅಳತೆ ಇಲ್ಲ. ಅವನ ತಮ್ಮನೆಂದು ನನಗೆಷ್ಟು ಮರ್ಯಾದೆಯಿದೆ ಎಂಬುದನ್ನು ಏನು ಹೇಳಲಿ? ನಿನ್ನ ಹೊಟ್ಟೆಯ ಪುಣ್ಯ ಬಹಳ ದೊಡ್ಡದು ಅವ್ವ! ಅಣ್ಣನಂಥ ಸುಪುತ್ರನನ್ನು ಪಡೆದಿದ್ದೀ. ನಿನ್ನಂತಹ ತಾಯಿ ಅಣ್ಣನಿಗೆ ಸ್ಫೂರ್ತಿದೇವತೆಯಾಗಿರುವಾಕೆ. ನಿನ್ನ ಆಶೀರ್ವಾದವೇ ಅವನನ್ನು ಕಾಪಾಡುತ್ತಿರುವಾಗ, ನೀನೇ ಅವನ ಬಗ್ಗೆ ಚಿಂತಿಸುವದೆ?"

"ಆದರೆ ಇದೆಲ್ಲಾ ಏನು ಜಯದೇವ! ಈ ದುಡಿತ ಯಾರಿಗಾಗಿ? ವಾಸುದೇವನನ್ನು ಕಂಡರೆ ಅಧಿಕಾರಿಗಳಿಗೆ ತಲೆಬೇನೆ ಏಕೆ? ನಮ್ಮ ಗೌಡ-ಕುಲಕರ್ಣಿಯವರೂ ವಾಸುದೇವನನ್ನು ಕಂಡರೆ ಗುರುಗುರು ಮಾಡುತ್ತಾರೆ"

"ಇದು ಅವರ ತಪ್ಪಲ್ಲ ಅವ್ವಾ. ಪರಿಸ್ಥಿತಿಯೇ ಹಾಗಿದೆ. ನಮ್ಮ ಜನರಿಗೆ ನಮ್ಮ ದೇಶದ ಬಗ್ಗೆ ಅಭಿಮಾನವಿಲ್ಲದಾಗಿದೆ. ಪಾರತಂತ್ರ್ಯದ ಕೊಳೆಯಲ್ಲಿ ಬಿದ್ದು ಉರುಳಾಡುವವರಿಗೆ ತಿಳಿಯಾದ ನೀರು ರುಚಿಸದಾಗಿದೆ. ಪರಕೀಯರು ಬೀಸಿದ ಯಮಪಾಶವು ಅವರ ಕೊರಳ ಸುತ್ತಲೂ ಬಿಗಿಯಾಗತೊಡಗಿದೆ. ಈ ಪಾಶವನ್ನು ಅವರಿಂದ ಹರಿಯಲಾಗುವುದಿಲ್ಲ. ಇದನ್ನು ಬಿಡಿಸುವದೇ ಇಂದಿನ ಜನರ ಕಾರ್ಯವಾಗಿದೆ."

"ಬಲಾಢ್ಯ ಸರಕಾರದ ಮುಂದೆ ನಿಮ್ಮ ಆಟ ಹೇಗೆ ಸಾಗಬೇಕೋ ಜಯದೇವ!"

"ಸರಕಾರವು ಬಲಾಢ್ಯವಾಗಿರುವದೇನೋ ನಿಜ. ಆದರೆ ನಮ್ಮ ಶಕ್ತಿಯೇನು ಕಡಿಮೆ ಇಲ್ಲ ಅವ್ವಾ! ನಮ್ಮಲ್ಲಿ ಆ ಶಕ್ತಿಯ ಅರಿವು ಇಲ್ಲ ಅಷ್ಟೆ. ನಮ್ಮ ಕಾರಣಿಕಪುರುಷನು ಅದನ್ನೀಗ ಮಾಡಿಕೊಟ್ಟಿದ್ದಾನೆ. ಇಪ್ಪತ್ತು-ಇಪ್ಪತ್ತೈದು ವರುಷಗಳಿಂದ ಈ ತಪಸ್ಸನ್ನು ಮಾಡಿ ಈಗ ಸಾಧಿಸಿದ್ದಾನೆ. ಅವನ ತಪಸ್ಸು ಫಲಿಸುವ ಕಾಲ ಸನಿಯದಲ್ಲಿಯೇ ಬಂದಿದೆ. ನಾಲ್ಕಾರು ತಿಂಗಳಲ್ಲಿ ಒಂದು ಮಹಾಕಾರ್ಯ ಜರಗುವದಿದೆ ಅವ್ವಾ! ಅದರ ಸಿದ್ಧತೆ ಈಗಿನಿಂದಲೇ ನಡೆದಿದೆ."

"ಹಿಂದಕ್ಕೇನು ಈ ಕಾರ್ಯಗಳು ಆಗಿಲ್ಲವೇನು? ಜೇಲಿಗೆ ಹೋಗಿ

ಬಂದರೆ ಮಹಾಕಾರ್ಯವಾದಂತಾಯಿತೆ ?"

"ಇದು ಕೊನೆಯ ಕಾರ್ಯ ಅವ್ವಾ! ಹಿಂದಕ್ಕೆ ಜೇಲಿಗೆ ಹೋಗಿ ಬಂದದ್ದು ಅಸಾರ್ಥಕವಾಗಿಲ್ಲ. ಅದು ರಾಷ್ಟ್ರದಲ್ಲಿ ಮಹಾಧೈರ್ಯವನ್ನು ಉಂಟುಮಾಡಿದೆ. ಸ್ವಾತಂತ್ರ್ಯದ ಹೆಜ್ಜೆಗಳನ್ನು ಅದು ಸ್ಥಿರಪಡಿಸಿದೆ. ಈಗ ರಾಷ್ಟ್ರದಲ್ಲಿ ಸಂಪೂರ್ಣ ಜಾಗೃತಿಯಾಗಿದೆ. ಸ್ವಾತಂತ್ರ್ಯದ ಅಭಿಲಾಷೆಯು ಪ್ರಚಂಡ ಪ್ರವಾಹದಂತೆ ಹರಿಯತೊಡಗಿದೆ. ಈ ಕೆಲಸದಲ್ಲಿ ಎಲ್ಲರೂ ಪಾಲುಗಾರರಾಗಿದ್ದಾರೆ. ಯುವಕರು ಮುಂದೆ ಬಂದು ಬಲಿದಾನ ಮಾಡಲು ಸಿದ್ಧರಾಗಿದ್ದಾರೆ. ಯುವತಿಯರೂ ಹಿಂದೆ ಉಳಿದಿಲ್ಲ. ನಮ್ಮ ಕಾಲೇಜಿನಲ್ಲಿ ಸುಂದರಾ ಎಂಬ ಹುಡುಗಿಯಿದ್ದಾಳೆ. ಅವ್ವಾ, ಅವಳೆಂದರೆ ಸ್ವಾತಂತ್ರ್ಯದೇವತೆಯೇ ಆಗಿದ್ದಾಳೆ. ಎಂತಹ ಗಂಡಾಂತರ ಬಂದರೂ ಅವಳು ಮುಂದೆ ಇಟ್ಟ ಹೆಜ್ಜೆ ಹಿಂದೆ ಸರಿಯಲಾರದು. ಅವಳು ನನ್ನೊಡನೆ ಕೆಲಸ ಮಾಡುತ್ತಿರುವಾಗ!"

"ಯಾರು ಈ ಸುಂದರಾ ಜಯದೇವ !"

"ಅವಳೊಬ್ಬ ಪೋಲೀಸ ಅಧಿಕಾರಿಯ ಮಗಳು ಯುರೋಪಿಯನ್ ಸಾಹೇಬನು ರಜೆಯಲ್ಲಿರುವನೆಂದು ಅವಳ ತಂದೆ ಈಗ ಧಾರವಾಡದ ಜಿಲ್ಹಾ ಪೋಲೀಸ ಅಧಿಕಾರಿಗಳಾಗಿದ್ದಾರೆ. ಪೋಲೀಸ ಅಧಿಕಾರಿಯ ಮಗಳಾದರೂ ಸ್ವಾತಂತ್ರ್ಯಸಮರದಲ್ಲಿ ಧುಮುಕಿದ್ದಾಳೆ. ಸುಖದ ಸುಪ್ಪತ್ತಿಗೆಯಲ್ಲಿ ಹೊರಳಾಡುವದು ಅವಳಿಗೆ ಸಾಧ್ಯವಿದ್ದರೂ ದೇಶದ ಸಲುವಾಗಿ ಕಷ್ಟವನ್ನು ಅನುಭವಿಸಲು ಹಾತೊರೆಯುತ್ತಿದ್ದಾಳೆ. ಬರುವ ಮಹಾಕಾರ್ಯದಲ್ಲಿ ಅವಳು ಮಾಡಬೇಕಾದ ಕೆಲಸ ಬಹಳವಿದೆಯೆಂದು ಅವಳು ನಂಬಿದ್ದಾಳೆ."

ಈ ಮಾತುಗಳಿಂದ ಸೀತಮ್ಮನವರಿಗೆ ಜಯದೇವನು ಕೂಡ ಅಣ್ಣನ ಹಾದಿಯನ್ನೇ ಹಿಡಿಯತಕ್ಕವನೆಂಬುದು ಸ್ಪಷ್ಟವಾಯಿತು. ಆ ಬಗ್ಗೆ ಅವರಿಗೆ ತುಸು ಭೀತಿ ಎನಿಸಿದರೂ ತನ್ನ ಮಕ್ಕಳು ಈ ಮಹಾಕಾರ್ಯದಲ್ಲಿ ಕೀರ್ತಿಶಾಲಿಗಳಾಗಿ ಬಾಳುವರೆಂದೆನ್ನಿಸಿದಾಗ ಆ ದುಗುಡವು ತುಸು ಕಡಿಮೆಯಾಯಿತು. ಸುಂದರಾಸಂತಹ ಹೆಣ್ಣು ಹುಡುಗಿಯು ಈ ಕೆಲಸ ಮಾಡುತ್ತಿರುವಾಗ ಜಯದೇವನಂತಹ ಗಂಡು ಮಗನಿಗೆ ಬೇಡವೆಂದು ಹೇಳುವದು ಆ ತಾಯಿಯ ಅಭಿಮಾನಕ್ಕೆ ಸಾಲದಾಯಿತು. ಅಲ್ಲದೆ ಈಗ ಅವಳು ಮನಃಪೂರ್ವಕವಾಗಿ ಈ ಕೆಲಸಕ್ಕೆ ತಾನೂ ಕೂಡ ಸಹಾಯಮಾಡಬೇಕೆಂದು ವಿಚಾರಿಸತೊಡಗಿದಳು. ರಾಮಾಶಾಸ್ತ್ರಿಗಳ ಸಹವಾಸದಿಂದ ಅವರಲ್ಲಿ ಈ ಕೆಚ್ಚು ಮೂಡತೊಡಗಿದ್ದುದು ಅಚ್ಚರಿಯ ಮಾತೇನಲ್ಲ. ಅವರ ಶಿಕ್ಷಣವೇ ಅಷ್ಟು ಅದ್ಭುತವಾಗಿತ್ತು. ಅವರ ಸಹವಾಸ ಅಷ್ಟು ಪವಿತ್ರವಾಗಿತ್ತು. ಈ

ಮಾತನ್ನೇ ಇನ್ನಷ್ಟು ಕೇಳಬೇಕೆಂದು ಬಯಸಿದ ಸೀತಮ್ಮನವರು ಗಂಭೀರ ರಾಗಿ ಜಯದೇವನನ್ನು ಕೇಳಿದರು.

"ನಿನ್ನ ಮಾತನ್ನು ಕೇಳಿದರೆ ಮುಂಬರುವ ಮಹಾಕಾರ್ಯದಲ್ಲಿ ನೀನು ಕೂಡ ಭಾಗವಹಿಸುವಂತೆ ತೋರುತ್ತದೆ ಜಯದೇವ !"

"ನಾನೊಬ್ಬನೇ ಅಲ್ಲ ಅವ್ವಾ! ಭಾರತಜನಾಂಗವೇ ಭಾಗವಹಿಸುವದು. ಇದರಲ್ಲಿ ಮೈ ಉಳಿಸಿಕೊಳ್ಳುವವರು ಪಾಪಿಗಳಾಗುತ್ತಾರೆ."

"ವಾಸುದೇವನ ತಮ್ಮನಲ್ಲವೇ ನೀನು !"

"ನಾನು ವಾಸುದೇವನ ತಮ್ಮನಷ್ಟೆ ಅಲ್ಲ. ಅವ್ವಾ! ನಿನ್ನಂತಹ ವೀರ ಮಾತೆಯ ಮಗನಾಗಿದ್ದೇನೆ." ತಾಯಿಯ ಮನವೊಲಿಸುವ ಕಾಲ ಬಂದಿದೆಯೆಂದೇ ಜಯದೇವನು ಒಳ್ಳೆ ಹುರುಪಿನಿಂದ ಹೇಳತೊಡಗಿದನು. "ನಮ್ಮ ವಂಶವು ಹೇಡಿಗಳ ಬಳಗವನ್ನು ತುಂಬಿ ನಿಂತಿಲ್ಲ ಅವ್ವಾ! ಸಿಡಿಮದ್ದುಗಳನ್ನು ಸಿದ್ಧಮಾಡಿದೆ."

ಮಗನ ಈ ವೀರಾವೇಶದ ಮಾತುಗಳನ್ನು ರಾಮಾಶಾಸ್ತ್ರಿಗಳು ತೃಪ್ತಿಭಾವದಿಂದ ಕೇಳಿಕೊಂಡರು. ವಾಸುದೇವನ ಜೇಲುಯಾತ್ರೆಯ ಪರಿಣಾಮವಾಗಿ ಹೆಂಡತಿಯ ಹೃದಯದಲ್ಲಿ ಬಂದ ದುಗುಡದ ಭಾವವನ್ನು ಜಯದೇವನು ಇಷ್ಟು ಬೇಗನೇ ಸರಾಗವಾಗಿ ತೊಡೆದುಹಾಕಿದುದನ್ನು ಕಂಡಾಗ ಅವರ ಸಂತೋಷವು ಮೇರೆದಪ್ಪಿ ಹರಿಯತೊಡಗಿತು. ಈ ಸಂತೋಷವನ್ನು ವ್ಯಕ್ತಪಡಿಸುತ್ತ ಅವರು ಸೀತಮ್ಮನವರನ್ನು ಉದ್ದೇಶಿಸಿ "ನಿನ್ನ ಮಗನ ಮಾತುಗಳನ್ನು ಕೇಳಿ ತೃಪ್ತಿಯಾಯಿತೆ? ಸುಮ್ಮನೇ ದುಗುಡದಿಂದ ಕೊರಗುತ್ತಿದ್ದಿ" ಎನ್ನಲು "ಅವನು ಎಷ್ಟೆಂದರೂ ನಿಮ್ಮ ಮಗನಲ್ಲವೆ ?" ಎಂದು ಸೀತಮ್ಮನವರು ರಾಮಾಶಾಸ್ತ್ರಿಗಳನ್ನು ಅಭಿಮಾನದಿಂದ ನೋಡಿದರು.

"ಅವನು ಹಾಗೆಲ್ಲಿ ಅನ್ನುತ್ತಾನೆ ಹೇಳಬಾರದೆ? ತಾನು ವೀರ ಮಾತೆಯ ಮಗನೆಂದು ಅವನಿಗೆ ಅಭಿಮಾನ" ರಾಮಾಶಾಸ್ತ್ರಿಗಳು ನಗುತ್ತಲೇ ಹೇಳಿದರು.

"ಇದೆಲ್ಲವೂ ವಿಶ್ವೇಶ್ವರಭಟ್ಟರ ಪುಣ್ಯವೆಂದು ಅವನೇ ಅಂದಿದ್ದಾನೆ. ಅವನ ಮಾತೇ ನಿಜ. ಅವರ 'ಹಬ್ಬಿದ ಬಳ್ಳಿ' ಪುಣ್ಯದ ಬಳ್ಳಿಯಾಗಿ ನಿಂತಿದೆ."

"ನಾನು ಅದನ್ನೇ ಹೇಳಬೇಕಾಗಿದೆ ತಾತ್ಯಾ! ವಿಶ್ವೇಶ್ವರಭಟ್ಟರ ಬಳ್ಳಿ ಬಹುವಾಗಿ ಹಬ್ಬಿ ನಿಂತಿದೆ. ಹುಬ್ಬಳ್ಳಿಯಲ್ಲಿ ನಮ್ಮ ಸುಬ್ಬಣ್ಣನು ಕಾರ್ಮಿಕರ ಮುಖಂಡನಾಗಿದ್ದಾನೆ. ಅವನ ಮಾತೆಂದರೆ ಅವರಿಗೆ ವೇದವಾಕ್ಯವಾಗಿದೆ. ನಾನೊಮ್ಮೆ 'ದುರ್ಗದಬೈಲಿ'ನಲ್ಲಿ ಅವನ ಭಾಷಣ ಕೇಳಿದೆ. ಅದೆಂತಹ

ಅಮೋಘವಾದ ಭಾಷಣವೆಂದಿ! ಆ ಸ್ಫೂರ್ತಿ ಅನಂತವಾಗಿ ಹರಿಯಿತು. ಕೇಳಿದವರನ್ನೆಲ್ಲ ಮೋಹಗೊಳಿಸಿತು."

"ನಮ್ಮ ಸುಬ್ಬೂ ಅಷ್ಟು ಪ್ರಬಲನಾಗಿದ್ದಾನೆಯೇ? ಎಷ್ಟೆಂದರೂ ನರಹರಿ ಕಾಕಾನ ಮೊಮ್ಮಗನವನು."

"ನನ್ನನ್ನು ನೋಡಿಯಂತೂ ಅವನಿಗೆ ಸಂಭ್ರಮವೇ ಆಯಿತು. ಈಗ ನನಗೂ ಅವನೇ ಗುರುವಾಗಿದ್ದಾನೆ. ಒಮ್ಮೆ ಯಾವುದೋ ಕೆಲಸಕ್ಕಾಗಿ ಒಮ್ಮೆಲೇ ಮಧ್ಯರಾತ್ರಿಯಲ್ಲಿ ನನ್ನ ಕೋಣೆಗೆ ಬಂದು 'ಮಹಾಲಿಂಗಪುರಕ್ಕೆ ಬರುವಿಯಾ?' ಎಂದು ಕೇಳಿ ನನ್ನ ಉತ್ತರವನ್ನು ನಿರೀಕ್ಷಿಸದೇ ನನ್ನ ಕೈಚೀಲವನ್ನು ತೆಗೆದುಕೊಂಡುಬಿಟ್ಟ. ಅವನು ತಂದ ಮೋಟಾರಿನಲ್ಲಿ ಇಡೀ ರಾತ್ರಿ ಪ್ರವಾಸಮಾಡಿ ಮಹಾಲಿಂಗಪುರಕ್ಕೆ ಹೋದೆವು. ಅಲ್ಲಿ ಬೆಳಗಾಗುವದರಲ್ಲಿಯೇ ಜನ ಜಾತ್ರೆಯಂತೆ ಸುಬ್ಬಣ್ಣನಿಗಾಗಿ ಕಾದು ಕುಳಿತಿತ್ತು. ಅವನು ಅಲ್ಲಿ ಕೊಟ್ಟ ಭಾಷಣ ಕಿಡಿಗಳ ಸುರಿಮಳೆಯೇ ಆಗಿತ್ತು. ಅದೇ ಹೊತ್ತಿನಲ್ಲಿ ಆ ಸಭೆಯನ್ನು ಅಲ್ಲಿ ಜರುಗಿಸಿದ ವ್ಯಕ್ತಿ ಮಾಡಿದ ಉಪನ್ಯಾಸವು ರಾಷ್ಟ್ರೀಯತೆಯ ಮುಕ್ತಾಫಲವಾಗಿತ್ತು. ಸುಬ್ಬಣ್ಣನು ನಾನು ತೆಪ್ಪಗೆ ಕುಳಿತು ಆ ಭಾಷಣ ಕೇಳುತ್ತಿರುವುದನ್ನು ನೋಡಿ, 'ಇವರು ಯಾರೆಂದು ತಿಳಿದಿರುವಿ ಜಯಾ?' ಎಂದು ಕೇಳಿದಾಗ ನಾನು ಬೆಚ್ಚಿಬಿದ್ದೆ. ಆ ಭಾಷಣ ಮಾಡಿದವನು ನಾನಾ ಕಾಕಾನ ಮಗನಾದ ಕಾಶೀನಾಥನೇ ಆಗಿದ್ದನು. ಅಂದು ಊಟಕ್ಕೆ ಕುಳಿತಾಗ ಸುಬ್ಬಣ್ಣನು ನಗುತ್ತ 'ಈ ಬಳ್ಳಿ ವಿಶ್ವೇಶ್ವರಭಟ್ಟರದು. ನಾವೆಲ್ಲ ಒಂದೇ ಬಳ್ಳಿಯ ಕುಡಿಗಳು. ಅವರ ಕೀರ್ತಿಯನ್ನು ಶಾಶ್ವತಗೊಳಿಸುವಂತೆ ರಾಷ್ಟ್ರಕ್ಕಾಗಿ ಹೋರಾಡಲು ನಾವು ಪ್ರತಿಜ್ಞೆ ಮಾಡಬೇಕು' ಎಂದಾಗ ನಮ್ಮೆಲ್ಲರಲ್ಲಿ ಒಂದೇ ರಕ್ತ ಹರಿದ ಅನುಭವವಾಯಿತು" ಎಂದು ಜಯದೇವನು ಮಾತು ಮುಗಿಸಲು, ರಾಮಾಶಾಸ್ತ್ರಿಗಳು—

"ಈ ಚಳವಳಿಯಲ್ಲಿ ಕಾಶೀನಾಥನೂ ಧುಮುಕಿದ್ದಾನೆಯೇ?" ಎಂದು ಉದ್ಗಾರ ತೆಗೆದರು.

"ಅವನೆಂದರೆ ಮುಧೋಳ ಮಹಾರಾಜರು ಥರ ಥರ ನಡುಗುತ್ತಾರೆ. ಅವನ ಕೀರ್ತಿಯೇ ಕೀರ್ತಿ" ಎಂದು ಜಯದೇವನೆನ್ನಲು, ರಾಮಾಶಾಸ್ತ್ರಿಗಳ ಕಣ್ಣಂಚಿನಲ್ಲಿ ನೀರು ಮೂಡಿತು.

"ವಾಸುದೇವನು ಬಂದ ಕೂಡಲೆ ಮತ್ತೆ ಜೇಲಿಗೆ ಹೋಗಬೇಕಾಗುವದೇನೋ ಜಯದೇವ!" ಸೀತಮ್ಮನವರು ಒಮ್ಮೆಲೇ ಕೇಳಿದರು.

"ಈ ಸಾರೆ ಜೇಲಿಗೆ ಮಾತ್ರ ಹೋಗುವ ಕಾರ್ಯಕ್ರಮವಿಲ್ಲವೇ ಇಲ್ಲ

ಅವ್ವಾ! ಬದಲಾಗಿ ಅಡಗಿ ಕುಳಿತು, ಆಳರಸರ ಕಣ್ಣು ತಪ್ಪಿಸಿ ಕಾರ್ಯ ಮಾಡ ಬೇಕಾಗುವ ಸಂದರ್ಭ ಬರಬಹುದು. ಈ ಸಾರೆ ಜೇಲಿನಲ್ಲಿ ಹೋಗುವ ಜನ ಕ್ಕಿಂತ ಜೇಲಿನಲ್ಲಿರುವವರನ್ನು ಹೊರಕ್ಕೆ ತರುವ ಜನರೇ ಹೆಚ್ಚಾಗಬಹುದು. ಇದು ಕೊನೆಯ ಕಾಳಗ. ರಾಷ್ಟ್ರದ ಬಂಧನೆಯನ್ನು ಶಾಶ್ವತವಾಗಿ ಹರಿಯುವ ಕಾಳಗ. ಆದ್ದರಿಂದ ಜೇಲಿನಲ್ಲಿ ಕೊಳೆಯುವ ಪ್ರಸಂಗವೇ ಇಲ್ಲ. ಈ ಮಾತನ್ನು ಅಣ್ಣನಿಗೆ ಆ ಕಾಲದಲ್ಲಿ ತಿಳಿಸಲು ಯೋಜನೆಯೂ ನಡೆದಿದೆ."

ಸೀತಮ್ಮನವರು ಏನೋ ವಿಚಾರಿಸಿ,

"ಇದರಲ್ಲಿ ಯಾರ ಜೀವಕ್ಕೂ ಅಪಾಯವಿಲ್ಲವಷ್ಟೇ" ಎಂದು ಕೇಳಿ ಶೂನ್ಯದೃಷ್ಟಿಯಿಂದ ನೋಡತೊಡಗಿದರು.

"ನಮ್ಮ ಕಾಳಗದಲ್ಲಿ ಹಿಂಸೆಯ ಪ್ರಶ್ನೆಯೇ ಇಲ್ಲವೆಂದಮೇಲೆ ಸಾಯುವ ಪ್ರಶ್ನೆಯೇ ಏಳಲಾರದು. ಒಮ್ಮೊಮ್ಮೆ ನೀಚತನದಿಂದ ಏನಾದರೂ ಅನಾಹುತ ಸಂಭವಿಸಿ, ಕೆಲವರು ಹುತಾತ್ಮರಾಗುವ ಸಂಭವವೂ ಇದೆ. ಆದರೆ ಇದು ಕ್ವಚಿತ್ತವಾಗಿ ಆದೀತು."

ಜಯದೇವನ ಈ ಮಾತುಗಳನ್ನು ಕೇಳಿದಾಗ ಸೀತಮ್ಮನವರಲ್ಲಿ ನಡುಕವುಂಟಾಯಿತು. ಇದನ್ನು ನೋಡಿ ಜಯದೇವನು,

"ನಿನಗೆ ಹೆದರಿಕೆಯೆ ? ಅವ್ವಾ!"

"ಹೆದರಿಕೆಯ ಮಾತಲ್ಲ ಜಯದೇವ. ನಮ್ಮ ದೇಶದಲ್ಲಿ ನೀಚರೇ ಬಹಳವಾಗಿದ್ದಾರೆ. ಈ ನೀಚರಿಂದ...."

"ನೀನು ಗಾಬರಿಯಾಗಬೇಡ ಅವ್ವಾ. ನಿನ್ನ ಅಂತಃಕರಣಕ್ಕೆ ನೋವಾಗದಂತೆ ನಾವು ನಡೆದುಕೊಳ್ಳುತ್ತೇವೆ. ನಿನ್ನ ಆಶೀರ್ವಾದದ ಕವಚವಿರುವವರೆಗೆ ನಮಗೇನಾದೀತು ?"

"ಸಾವಿರ ವರುಷ ಬಾಳಿರಿ....!" ಎಂದು ಸೀತಮ್ಮ ಜಯದೇವನ ಬೆನ್ನಮೇಲೆ ಕೈಯಾಡಿಸಿದರು.

೭

ಒಂದು ತಿಂಗಳಾದ ಮೇಲೆ ರಾಮಾಶಾಸ್ತ್ರಿಗಳಿಗೆ ಬಂದ ಜಯದೇವನ ಪತ್ರದ ಒಕ್ಕಣಿಕೆ ಹೀಗೆ ಇದ್ದಿತು.

"ಹಿರಿಯರ ಅಡಿದಾವರೆಗಳಿಗೆ ಶಿರಸಾಷ್ಟಾಂಗ ನಮಸ್ಕಾರಗಳು.

"ಇಲ್ಲಿಯ ಯುರೋಪಿಯನ್ ಡಿ. ಎಸ್. ಪಿ.ಯು ಕೆಲವು ದಿನ ರಜೆ ತೆಗೆದುಕೊಂಡಿದ್ದರಿಂದ ಆ ಸ್ಥಳದಲ್ಲಿ ತಾತ್ಪೂರ್ತಿಕವಾಗಿ ಕೆಲಸ ಮಾಡುತ್ತಿದ್ದ ಸುಂದರಾನ ತಂದೆಗೆ ನಮ್ಮ ಜಿಲ್ಹೆಯ ಡಿ. ವಾಯ್. ಎಸ್. ಪಿ. ಯೆಂದು ವರ್ಗವಾದದ್ದರಿಂದ ಜೇಲಿನಲ್ಲಿ ಅಣ್ಣನನ್ನು ಕಾಣುವದು. ಸುಲಭ ಸಾಧ್ಯವಾಯಿತು. ನಾನು ಮೊನ್ನಿನ ದಿನವೇ ಅವನನ್ನು ಸುಂದರಾನೊಂದಿಗೆ ಹೋಗಿ ಕಂಡುಬಂದೆ. ಅಣ್ಣನು ಉಲ್ಲಸಿತನಾಗಿದ್ದಾನೆ. ಅವನ ಆರೋಗ್ಯವೂ ಸುಧಾರಿಸಿದೆ. ಜೇಲಿನವರೆಲ್ಲ ಅವನನ್ನು ಭಯಭಕ್ತಿಗಳಿಂದ ಕಾಣುತ್ತಾರೆ. ಎಲ್ಲರೂ ಅವನನ್ನು 'ಅಣ್ಣಾಜಿ' ಎಂದು ಸಂಬೋಧಿಸುತ್ತಾರೆ. ಅವನ ಬಗ್ಗೆ ನೀವು ಯಾವ ರೀತಿಯಿಂದಲೂ ಕಾಳಜಿ ಮಾಡಬೇಡಿರಿ. ಈ ಸಂಗತಿಯನ್ನು ಅವ್ವನಿಗೂ ತಿಳಿಸಿ ನಿಶ್ಚಿಂತೆಯಿಂದಿರಲು ಹೇಳಿರಿ.

"ಕೆಲವು ತಿಂಗಳಲ್ಲಿಯೇ ಒಂದು ಮಹಾಕಾರ್ಯವನ್ನು ಸಾಧಿಸಲು ಈಗಿನಿಂದಲೇ ಸಿದ್ಧತೆ ನಡೆದಿದೆ. ಆ ಕಾರ್ಯನಿಮಿತ್ತವಾಗಿ ನನಗೆ ಇನ್ನು ಮೇಲೆ ಬರೆಯುವದಾಗದಿದ್ದರೂ ನನ್ನ ಬಗ್ಗೆ ನೀವು ಚಿಂತಿಸಬೇಡಿರಿ. ಭಾರತ ಮಾತೆಯು ತನ್ನ ಬೇಡಿಗಳನ್ನು ಕಳಚುವ ಸಮಯವು ಪ್ರಾಪ್ತವಾಗಿದೆ. ಆ ಮಂಗಳ ದಿನವನ್ನು ಎಲ್ಲರೂ ಎದುರು ನೋಡಿರಿ.

"ನಿಮ್ಮ ಪ್ರೀತಿಯ ಮಗ,

ಜಯದೇವ."

ರಾಮಾಶಾಸ್ತ್ರಿಗಳು ಪತ್ರವನ್ನು ಓದಿ ಸಂತೋಷಭರಿತರಾದರು. ಸೀತಮ್ಮನವರನ್ನು ಕರೆದು ಅವರ ಮುಂದೆಯೂ ಓದಿ ತೋರಿಸಿದರು.

"ಹಾಗಾದರೆ ವಾಸುದೇವನು ಇನ್ನು ಎಂದು ಬರುತ್ತಾನೆ?"

"ಈಗ ಒಂದೂವರೆ ತಿಂಗಳು ಮಾತ್ರ ಆಗಿದೆ ಶಿಕ್ಷೆಯಾಗಿ."

"ಅವನು ಬರಬೇಕಾದರೆ ಇನ್ನೂ ನಾಲ್ಕು ತಿಂಗಳು ಬೇಕು."

"ದಿನಗಳು ಉರುಳುವದೇನು ತಡವೇ?"

ಅಪ್ರಿಯವಾದ ದಿನಗಳು ಕೂಡಲೇ ಉರುಳುವದಿಲ್ಲವೆಂಬ ಅನುಭವ ಸೀತಮ್ಮನವರ ಮಾತೃಹೃದಯಕ್ಕೆ ಉಂಟಾಗಿರಬೇಕು. ಅವರು ದಿನಗಳನ್ನು ಎಣಿಸತೊಡಗಿದಂತೆ ದಿನಗಳು ಸರಿಯದಾದವು. ಆ ತಾಯಿಯ ಹೃದಯವು ಇದನ್ನು ಮೌನವಾಗಿ ಸಹಿಸುತ್ತಿತ್ತು.

ದಿನಗಳು ಉರುಳತೊಡಗಿದಂತೆ ದೇಶದ ವಾತಾವರಣವು ಪ್ರಕ್ಷುಬ್ಧವಾಗತೊಡಗಿರುವದು ರಾಮಾಶಾಸ್ತ್ರಿಗಳಿಗೆ ಸ್ಪಷ್ಟವಾಗತೊಡಗಿತು. ಜಯದೇವನ ಪತ್ರದಲ್ಲಿ ಸೂಚಿತವಾದ ಮಹಾಕಾರ್ಯಕ್ಕಾಗಿ ಸಮಗ್ರ ರಾಷ್ಟ್ರವೇ

ಸಿದ್ಧವಾಗತೊಡಗಿದಂತೆ ಅವರಿಗೆ ಅನ್ನಿಸತೊಡಗಿತು. ವೃತ್ತಪತ್ರದಲ್ಲಿ ಬರುವ ಉಗ್ರಲೇಖನಗಳೂ, ಎಲ್ಲಿಂದಲೋ ಬಂದು ಬೀಳುತ್ತಿರುವ ಕರಪತ್ರಿಕೆಗಳೂ ಈ ಮಾತಿಗೆ ಸಾಕ್ಷಿಯಾಗಿ ನಿಲ್ಲತೊಡಗಿದವು. ದೇಶದ ಗರ್ಭದಲ್ಲಿ ಅದುಮಿ ನಿಂತ ಜ್ವಾಲಾಮುಖಿಯು ಸ್ಫೋಟವಾಗುವ ದಾರಿಯನ್ನೇ ನೋಡುತ್ತಿರುವದು ಸೂರ್ಯಪ್ರಕಾಶದಂತೆ ಸ್ಪಷ್ಟವಾಗತೊಡಗಿತು. ಪರಕೀಯ ಆಡಳಿತವನ್ನು ನೆಚ್ಚಿ ನಿಂತ ಅಧಿಕಾರಿಗಳು ಈ ಜ್ವಾಲಾಮುಖಿಯ ಮೇಲೆ ತಣ್ಣೀರನ್ನೆರಚಲು ಸರ್ವಸಿದ್ಧತೆಯನ್ನು ನಡೆಸಿರುವರೆಂಬುದನ್ನು ಅವರು ಕಂಡುಕೊಂಡರು. ಈ ಸಮಯವನ್ನು ಸಾಧಿಸಿಕೊಂಡು ಸ್ವಾರ್ಥಿಗಳಾದವರು ದೇಶದ ಅಹಿತವನ್ನು ಹೇಗೆ ಉಂಟುಮಾಡತೊಡಗಿರುವರೆಂಬುದನ್ನು ತಿಳಿದ ಅವರು ಮರುಗತೊಡಗಿದರು. ಗಂಗನಹಳ್ಳಿಯ ಗೌಡನ ಉದಾಹರಣೆಯಿಂದಲೇ ಅವರಿಗೆ ಈ ಭಾವ ಬಂದಿರಬೇಕು. ಇತ್ತೀಚೆಗೆ ಅವನ ಓಡಾಟವು ಅಧಿಕಾರಿಗಳೊಡನೆ ವಿಪರೀತವಾಗಿ ಬೆಳೆದಿತ್ತು. ರಾಮಾಶಾಸ್ತ್ರಿಯ ದೊಡ್ಡ ಮುಳ್ಳನ್ನು ಬಿಸಾಡಿಬಿಡಲು ಇದೇ ತಕ್ಕ ಸಮಯವೆಂದು ಗೌಡನಿಗೆ ಅನ್ನಿಸಿದ್ದರಿಂದ ಅವನು ಹೊಂಚು ಹಾಕತೊಡಗಿದ್ದನು.

ಒಂದು ದಿನ ರಾಮಾಶಾಸ್ತ್ರಿಗಳು ಸಾಲೆ ಬಿಟ್ಟಬಳಿಕ ಮನೆಗೆ ಬಂದು ವಿಶ್ರಾಂತಿ ತೆಗೆದುಕೊಳ್ಳುವಷ್ಟರಲ್ಲಿಯೇ ಖಾಕೀ ವಸ್ತ್ರಧಾರಿಯಾದ ಪೋಲೀಸನೊಬ್ಬನು ಬಂದು,

"ರಾಮಾಶಾಸ್ತ್ರಿ ಮಾಸ್ತರರೆಂದರೆ ನೀವೇ ಏನು?" ಎಂದು ಕೇಳಿದನು.

"ಹೌದಪ್ಪಾ. ಯಾಕೆ?"

"ನಿಮ್ಮನ್ನು ಫೌಜದಾರ ಸಾಹೇಬರು ಕರೆಯುತ್ತಾರೆ."

"ಫೌಜದಾರ ಸಾಹೇಬರು ನನ್ನನ್ನು ಕರೆಯುತ್ತಾರೆಯೇ? ನನ್ನಲ್ಲಿ ಅವರದೇನು ಕೆಲಸ? ಇಗೋ ಬಂದೆ." ಎನ್ನುತ್ತ ಶಾಸ್ತ್ರಿಗಳು ಚಟ್ಟನೆ ಎದ್ದು ನಿಂತರು.

ಸೀತಮ್ಮನವರಿಗೆ ಬಹಳ ಗಾಬರಿಯಾಯಿತು.

"ಏನಾದರೂ ಸಾಲೆಯ ಕೆಲಸವಿರಬೇಕು ಬಿಡು. ನೀನೇತಕ್ಕೆ ಹೀಗೆ ಗಾಬರಿಯಾಗಿರುವಿ? ಫೌಜದಾರರೇನು ನನಗೆ ಅರಿಯದವರೆ?" ಎಂದು ಹೆಂಡತಿಗೆ ಸಮಾಧಾನ ಹೇಳಿ ರಾಮಾಶಾಸ್ತ್ರಿಗಳು ಹೊರಬಿದ್ದರು.

ಊರ ಚಾವಡಿಯಲ್ಲಿ ಫೌಜದಾರರು ಗೌಡ ಕುಲಕರ್ಣಿಯವರೊಡನೆ ವಿರಾಜಮಾನರಾಗಿದ್ದರು. ದೇಶಪಾಂಡೆಯ ಮಗ್ಗುಲಲ್ಲಿ ಇನ್ನೊಬ್ಬ ಖಾಕೀ ಉಡುಪನ್ನು ಧರಿಸಿದ ಅಧಿಕಾರಿಯು ಸಿಗರೇಟಿನ ಹೊಗೆಯನ್ನು ದುಂಡಾಕಾರ

ವಾಗಿ ಬಿಡುತ್ತ ಕುಳಿತಿದ್ದನು. ಅವನು ಸಿ. ಆಯ್. ಡಿ ಇನಸ್ಪೆಕ್ಟರನಾಗಿದ್ದ ನೆಂದು ರಾಮಾಶಾಸ್ತ್ರಿಗಳಿಗೆ ಆಮೇಲೆ ತಿಳಿದುಬಂದಿತು. ಇವರೆಲ್ಲ ರಾಮಾ ಶಾಸ್ತ್ರಿಗಳ ಬರವನ್ನೇ ಕಾಯುತ್ತಿದ್ದರು. ಅವರಿಗಾಗಿ ಸ್ವಲ್ಪ ದೂರವಲ್ಲಿ ತೆರ ವಾದ ಕುರ್ಚಿಯೊಂದು ಕಾಣಿಸಿತು. ರಾಮಾಶಾಸ್ತ್ರಿಗಳಿಗೆ ಆ ಕುರ್ಚಿ ತಮ್ಮ ಸಲುವಾಗಿಯೆಂದು ತಿಳಿದರೂ ಅವರಿಗೆ ಅದರ ಮೇಲೆ ಕುಳಿತು ಕೊಳ್ಳುವ ಧೈರ್ಯವಾಗಲಿಲ್ಲ.

"ಈ ಹಳ್ಳಿಯ ಕನ್ನಡ ಮಾಸ್ತರನು ನೀನೇ ಏನು?" ಎಂದು ಕೇಳಿದ ಆಗಂತುಕ ಅಧಿಕಾರಿಯ ದನಿಯು ಕರ್ಣಕಠೋರವಾಗಿ ಕೇಳಿಸಿತು. ರಾಮಾ ಶಾಸ್ತ್ರಿಗಳನ್ನು ಅವರ ಜೀವಮಾನದಲ್ಲಿ ಯಾರೂ ಹೀಗೆ ಏಕವಚನದಲ್ಲಿ ಸಂಬೋಧಿಸಿರಲಿಲ್ಲ. ಅವರಿಗೆ ಬಹಳ ವಿಚಿತ್ರವೆನ್ನಿಸಿತು. ಆದರೂ ಅದನ್ನು ಗಣನೆಗೆ ತರದೆ ಶಾಸ್ತ್ರಿಗಳು,

"ಹೌದು ಸಾಹೇಬರೇ!" ಎಂದು ಸಮಾಧಾನದಿಂದ ಹೇಳಿದರು.

"ಆ ಚಾಪ್ಟರ್ ವಾಸುದೇವನ ತಂದೆ ನೀನೇ ಅಲ್ಲವೆ?"

ರಾಮಾಶಾಸ್ತ್ರಿಗಳು ಆ ಅಧಿಕಾರಿಯನ್ನು ದುರುಗುಟ್ಟಿನೋಡಿ ಹೇಳಿ ದರು:

"ಅಲ್ಲ!"

"ಹಾಂ, ಹಾಂ, ಮಾಸ್ತರರೆ! ನೀವು ಇದನ್ನೇನು ಹೇಳುವಿರಿ? ಅಧಿ ಕಾರಿಗಳ ಮುಂದೆ ಸರಿಯಾದ ಉತ್ತರ ಹೇಳಬೇಕು. ಸುಳ್ಳು ಹೇಳಿದರೆ ದಕ್ಕಲಾರದು." ಎಂದು ಗೌಡನು ಮಾಸ್ತರರನ್ನು ಎಚ್ಚರಿಸಿದನು.

"ಜೀವಮಾನದಲ್ಲಿ ನಾನು ಎಲ್ಲಿಯೂ, ಯಾರ ಮುಂದೆಯೂ ಸುಳ್ಳು ಹೇಳಿಲ್ಲ ಗೌಡರೆ! ಈಗಲೂ ನಾನು ಸರಿಯಾದುದನ್ನೇ ಹೇಳಿದ್ದೇನೆ. ನಾನು ಚಾಪ್ಟರ್ ವಾಸುದೇವನ ತಂದೆಯಲ್ಲವೆಂದು ಇನ್ನೂ ಹತ್ತುಸಾರೆ ಹೇಳು ತ್ತೇನೆ."

"ಮಾಸ್ತರರ ಮಾತು ನಿಮಗೆ ಹೊಳೆದಂತೆ ತೋರಲಿಲ್ಲ. ಆ ವಾಸು ದೇವನು ಚಾಪ್ಟರನೆಂದು ಅವರು ಹೇಳಿಕೊಳ್ಳಲಾರರು. ಅವನು ಮಹಾ ದೇಶಭಕ್ತನೆಂದೇ ಅವರು ನಂಬಿದ್ದಾರೆ. ಈಗಲಾದರೂ ಹೇಳಿರಿ ಮಾಸ್ತರರೆ! ಮಹಾದೇಶಭಕ್ತನೆಂದು ಹೆಸರಾದ ರಾಷ್ಟ್ರೋದ್ಧಾರಕ ವಾಸುದೇವನ ತಂದೆ ಗಳಲ್ಲವೆ ತಾವು?" ಎಂದು ದೇಶಪಾಂಡೆಯು ನಡುವೆ ಬಾಯಿಹಾಕಿ ಖೊಳ್ಳನೇ ನಕ್ಕನು.

ದೇಶಪಾಂಡೆಯ ಮಾತಿನಲ್ಲಿ ಅಡಕವಾದ ವ್ಯಂಗ್ಯವನ್ನು ಶಾಸ್ತ್ರಿಗಳು

ಅರ್ಥಮಾಡಿಕೊಂಡರೂ ಆ ಮಾತನ್ನು ಸ್ವೀಕರಿಸಿ ಹೇಳಿದರು.

"ದೇಶಪಾಂಡೆಯವರ ಬಾಯಿಂದ ಬರುವ ಮಗನ ವರ್ಣನೆಯನ್ನು ಕೇಳಿದರೆ ಅವರು ಅವನನ್ನು ಅರ್ಥಮಾಡಿಕೊಂಡಂತೆ ಕಾಣುತ್ತದೆ!"

"ಇವನ ಮಗನು ದೇಶಭಕ್ತನೆ ?"

"ಹಾಗೆ ಮಾಸ್ತರರು ತಿಳಿದಿದ್ದಾರೆ."

"ಇದರಲ್ಲಿ ತಿಳಿದುಕೊಳ್ಳುವಂಥ ಗಡಚು ವಿಷಯವೇ ಇಲ್ಲ. ದೇಶದ ಸೇವೆ ಮಾಡುವವರೆಲ್ಲ ದೇಶಭಕ್ತರು. ನನ್ನ ಮಗನು ದೇಶಕ್ಕಾಗಿ ದುಡಿಯುತ್ತಾನೆಂದ ಬಳಿಕ ಅವನು ದೇಶಭಕ್ತನೇ ಸರಿ."

"ಈ ದೇಶಭಕ್ತನು ತಾನೊಬ್ಬ ಸರಕಾರಿ ನೌಕರನ ಮಗನೆಂಬುದನ್ನು ತಿಳಿದಿದ್ದಾನೆಯೇ ?"

"ಸರಕಾರೀ ನೌಕರರ ಮಕ್ಕಳು ದೇಶಕ್ಕಾಗಿ ದುಡಿಯಬಾರದೆಂದು ನಿಮ್ಮ ಅಭಿಪ್ರಾಯವೆ?"

"ಅವರು ಹಾಗೆ ಮಾಡಿದರೆ ಅಪರಾಧವಾಗುವದೆಂದು ನಿಮಗೆ ತಿಳಿಸಬೇಕಾಗಿದೆ ಮಾಸ್ತರರೆ !"

"ದೇಶಸೇವೆಯು ಅಪರಾಧವೆಂದು ಯಾವ ಕಾನೂನೂ ಹೇಳುವದಿಲ್ಲವಲ್ಲ."

"ನಮಗೆ ಕಾಯಿದೆಗಳನ್ನು ತಿಳಿಸಿ ಹೇಳುವ ಸಾಹಸ ಮಾಡಬೇಡಿರಿ ಮಾಸ್ತರರೆ! ಸರಕಾರದ ಉಪ್ಪನ್ನುಂಡು ಸರಕಾರದ ಮೇಲೆ ತಿರುಗಿ ಬೀಳುವ ಉಡಾಳರನ್ನು ದಂಡಿಸಬೇಕಾಗುತ್ತದೆ. ನಿಮ್ಮ ಮಗನು ಈ ಅಪರಾಧದಲ್ಲಿ ಸಿಕ್ಕಿಬಿದ್ದಿದ್ದಾನೆ. ತಿಳಿಯಿತೆ?"

"ಅವನನ್ನು ದಂಡಿಸಲು ನೀವು ಸಮರ್ಥರಾಗಿರುವಾಗ ನನ್ನನ್ನೇಕೆ ಕರೆಸಿದಿರೋ ತಿಳಿಯದು."

"ಅದಕ್ಕೆ ಕಾರಣವಿಲ್ಲದಿಲ್ಲ ಮಾಸ್ತರ್. ನೀವು ಸರಕಾರೀ ನೌಕರರೆಂಬುದನ್ನು ಬಲ್ಲಿರಷ್ಟೆ?"

"ನನ್ನ ದುಡಿತಕ್ಕೆ ಸರಕಾರವು ಸಂಬಳ ಕೊಡುತ್ತದೆಯೆಂಬುದನ್ನು ನಾನು ಅರಿಯದಷ್ಟು ಮೂಢನೆ ?"

"ನೀವು ಅರಿತಿದ್ದರೆ ಇಂತಹ ಮಗನನ್ನು ಕಟ್ಟಿಕೊಂಡು ಬಾಳುತ್ತಿರಲಿಲ್ಲ. ನಿಮ್ಮ ಮಗನು ಬಂಡುಖೋರನಾಗಿದ್ದಾನೆ. ಸರಕಾರದ ವಿರುದ್ಧ ಚಳವಳಿಯನ್ನು ಸಾಗಿಸಿದ್ದಾನೆ. ಅವನ ಪೋಷಣೆಯನ್ನು ಮಾಡಿ ನೀವು ಅಪರಾಧಿಗಳಾಗಿದ್ದೀರಿ. ನಿಮ್ಮ ಗತ್ತುಗಾರಿಕೆ ನಮಗೆಲ್ಲ ಗೊತ್ತಾಗಿದೆ. ಅವನು ಜೇಲಿಗೆ

ಹೋದರೂ ಅವನ ಕಾರ್ಯ ನೀವು ಸಾಗಿಸುತ್ತಿರುವಿರೆಂಬ ಬಲವಾದ ಸಂಶಯ ನಮಗೆ ಬಂದಿದೆ."

"ನಿಮ್ಮ ಸಂಶಯವು ನಿರಾಧಾರವಾಗಿದೆ. ನಾನು ಸಾಲೆಯ ಕೆಲಸವನ್ನು ಬಿಟ್ಟು ಯಾವ ಕೆಲಸವನ್ನೂ ಮಾಡುತ್ತಿರುವದಿಲ್ಲ. ಇದಕ್ಕೆ ಗಂಗನಹಳ್ಳಿಯಲ್ಲಿ ಯಾರು ಬೇಕಾದರೂ ಸಾಕ್ಷಿ ಹೇಳಬಹುದು".

"ನಿಮ್ಮ ಮಗನ ಸಂಬಂಧವಿಲ್ಲವೆಂದು ಹೇಳುವಿರಾ ?"

"ಹಾಗೆಂದು ನಾನು ಹೇಳಲಾರೆ. ವಾಸುದೇವನ ತಂದೆಯೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ."

"ಮಗನ ಸಂಬಂಧಕ್ಕಾಗಿ ಈ ನೌಕರಿಯನ್ನು ಕಳೆದುಕೊಳ್ಳಲು ನೀವು ಸಿದ್ಧರಿರುವಿರಾ ?"

"ನೌಕರಿಗೂ ಮಗನ ಸಂಬಂಧಕ್ಕೂ ಯಾವ ಸಂಬಂಧವೂ ಇಲ್ಲ. ನಿಮ್ಮ ಮಾತು ನನಗೆ ವಿಚಿತ್ರವೆನ್ನಿಸತೊಡಗಿದೆ."

"ಬಂಡುಖೋರ ಮಕ್ಕಳನ್ನು ಪೋಷಿಸುವ ಸರಕಾರಿ ನೌಕರರನ್ನೂ ನಮ್ಮ ಸರಕಾರವು ಸಹನ ಮಾಡಲಾರದು."

"ನೌಕರಿಯನ್ನು ಉಳಿಸಿಕೊಳ್ಳಲು ಮಗನ ಸಂಬಂಧವನ್ನು ಕಡಿದುಕೊಳ್ಳಬೇಕೆಂದು ಸರಕಾರವು ಹೇಳುವದೆ ?"

"ನಮಗೆ ಹೆಚ್ಚು ಮಾತು ಬೆಳೆಸುವದು ಬೇಡವಾಗಿದೆ. ನಿಮಗೆ ನೌಕರಿ ಬೇಕಾಗಿದ್ದರೆ ಮಗನ ಸಂಬಂಧವನ್ನು ಕಡಿದುಕೊಳ್ಳಬೇಕು. ನೀವು ಮಗನ ಸಂಬಂಧವನ್ನು ಕಡಿದುಕೊಂಡು ನಿಮ್ಮ ರಾಜನಿಷ್ಠೆಯನ್ನು ವ್ಯಕ್ತಪಡಿಸಿದರೆ ಸರಕಾರವು ನಿಮ್ಮನ್ನು ಕ್ಷಮಿಸಬಹುದು."

"ಈ ರಕ್ತಸಂಬಂಧವನ್ನು ಕಡಿದುಕೊಳ್ಳುವದು ಅಷ್ಟು ಸುಲಭವೆಂದು ನೀವು ತಿಳಿದಿದ್ದೀರಾ? ಒಂದು ನೌಕರಿಯನ್ನು ಸಂಬಾಳಿಸಿಕೊಳ್ಳಲು ಮಗನನ್ನು ದೂರಮಾಡಬೇಕೆಂದು ಹೇಳುವಿರಾ? ನನ್ನ ಮಗನು ಮಾಡಿದ ಅಪರಾಧವಾದರೂ ಯಾವುದು? ದೇಶಕ್ಕೆ ಸ್ವಾತಂತ್ರ್ಯವನ್ನು ಬೇಡುವದು ಅಪರಾಧವೇ? ಅದಕ್ಕಾಗಿ ಕೂಳುನೀರಿನ ಪರಿವೆಯಿಲ್ಲದೆ ಜನಜಾಗೃತಿಯನ್ನು ಮಾಡುವದು ಅಪರಾಧವೆ? ಅಹಿಂಸಾವ್ರತವನ್ನು ಪಾಲಿಸಿರೆಂದು ಹೇಳುವದು ಪಾಪವೆ? ಸತ್ಯಸಂಧರಾಗಿ ಭಾರತವನ್ನು ಉಜ್ವಲಗೊಳಿಸಿರೆಂದು ಕೂಗಿಕೊಳ್ಳುವದು ಯಾವ ಪಾಪ? ಸೆರೆಯನ್ನು ಕುಡಿಯಬೇಡಿರಿ, ಖಾದೀಧಾರಿಗಳಾಗಿರಿ. ನೂಲಿರಿ, ನಿಮ್ಮ ಕಾಲಮೇಲೆ ನೀವೇ ನಿಲ್ಲಿರಿ—ಎಂದು ಹೇಳುವ ವಾಸುದೇವನು ನಿಮ್ಮ ಪಾಲಿಗೆ ಅಪರಾಧಿಯಾದನೆ? ಸಾಹೇಬರೆ! ನೀವು ಯಾವ ಸರಕಾರದ

ಸೇವೆ ಮಾಡುತ್ತಿರುವಿರೊ ಆ ಸರಕಾರವು ಯಾರದೆಂದು ಯೋಚಿಸಿರುವಿರಾ ? ಈ ಸರಕಾರ ಸ್ಥಿರವೆಂದು ದಬ್ಬಾಳಿಕೆ ಸಾಗಿಸಿದರೆ ಅನರ್ಥವಾದೀತು. ನಿಮಗೆ ಭಾರತವೇ ಗತಿಯಲ್ಲವೇ? ಗೌಡರು ಹೇಳಿದರೆಂದು ನೀವು ಕೇಳುತ್ತೀರಿ.ಅವರು ನನ್ನನ್ನು ಕರೆಸಿ ಬೆದರಿಕೆ ಹಾಕಬೇಕೆಂದು ಮಾಡಿದ್ದಾರೆಂಬುದನ್ನು ನಾನರಿಯೆನೆ? ಈ ಬೆದರಿಕೆಗೆ ಬೆದರುವಷ್ಟು ಅಧೀರನಾದ ಶಿಕ್ಷಕನು ನಾನಲ್ಲ. ನೀವು ಏನು ಬೇಕಾದ್ದು ಹೇಳಿದರೂ ನಾನು ನನ್ನ ಮಗನ ಸಂಬಂಧವನ್ನು ಕಡಿದುಕೊಳ್ಳಲಾರೆ!"

ರಾಮಾಶಾಸ್ತ್ರಿಗಳು ಹಿಂದುಮುಂದೆ ನೋಡದೆ ಬರಬರನೆ ಮಾತನಾಡಿಬಿಟ್ಟರು. ಅವರಲ್ಲಿ ಒಂದು ರೀತಿಯ ಸ್ಫೂರ್ತಿಯೇ ಬಂದಿತು.

ಈ ಶಿಕ್ಷಕನ ಮಾತುಗಳನ್ನು ಕೇಳಿ ಅಧಿಕಾರಿಗಳು ಕೆಲವು ಸಮಯ ಸ್ತಬ್ಧರಾದರು. ಅವರಿಗೆ ಮಾತನ್ನು ಮುಂದುವರಿಸಲು ತೋಚದಾಯಿತು. ಕೊನೆಗೆ ಆ ಸಿ. ಆಯ್. ಡಿ. ಅಧಿಕಾರಿಯೇ ಕೆರಳಿ-ನುಡಿದನು :

"ಈ ಮಾತುಗಳು ರಾಜದ್ರೋಹಾತ್ಮಕವಾಗಿವೆ."

"ನಿಮ್ಮ ಮಾತುಗಳು ತಂದೆಯ ಹೃದಯವನ್ನು ಸೀಳಿರುತ್ತವೆ."

"ಇಂಥ ವಿಚಾರಗಳಿಂದ ನೀವು ಗಂಗನಹಳ್ಳಿಯಲ್ಲಿ ಬಾಳಲಾರಿರಿ. ನಮಗೆ ನಿಮ್ಮ ವಿರುದ್ಧ ಸಾಕಷ್ಟು ತಕರಾರುಗಳು ಈಗಾಗಲೇ ಬಂದಿವೆ. ಪ್ರಸಂಗ ಬಂದರೆ ನಿಮ್ಮನ್ನು ನೌಕರಿಯಿಂದ ಕಡಿಮೆಮಾಡಿ ಹದ್ದುಪಾರು ಮಾಡಲಾಗುವುದು. ತಿಳಿಯಿತೆ?"

"ಗೌಡರಿಗೆ ಬೇಕಾದ ಮಾತುಗಳನ್ನು ನೀವೇ ಹೇಳಹತ್ತಿರುವಿರಿ. ನಾನು ಈ ಊರಲ್ಲಿಯೇ ಬಾಳಬೇಕೆಂಬ ನಿಯಮವಿಲ್ಲ. ಈ ಊರಿನ ಋಣ ತೀರಿದರೆ ನಾನು ಇಲ್ಲಿ ಕ್ಷಣಹೊತ್ತೂ ನಿಲ್ಲಲಾರೆ. ಆದರೆ ಗೌಡರು ಈ ಮಾತನ್ನು ಇನ್ನೂ ಸೂಕ್ಷ್ಮವಾಗಿ ವಿಚಾರಿಸಲಿ. ನನ್ನ ನಿರಪರಾಧಿ ಮಗನನ್ನು ಜೇಲಿಗೆ ಕಳಿಸಿ, ಈಗಾಗಲೇ ಜನರಿಂದ ದೂರವಾಗಿದ್ದಾರೆ. ನನ್ನನ್ನೂ ಊರ ಹೊರಗಟ್ಟಿ ಯಾವ ಪುಣ್ಯಕಾರ್ಯ ಮಾಡುತ್ತಾರೋ ಮಾಡಲಿ. ಅವರಿಗೆ ಜನರು ಯೋಗ್ಯವಾದ ಉತ್ತರ ಕೊಟ್ಟಾರು!"

ರಾಮಾಶಾಸ್ತ್ರಿಗಳ ಈ ನಿರ್ಭೀತಿಪರವಾದ ಉತ್ತರವನ್ನು ಕೇಳಿ ಗೌಡರು ಕುಳಿತಲ್ಲಿಯೇ ನಡುಗಿದರು. ಅವರಿಗೆ ಶಾಸ್ತ್ರಿಗಳ ಯೋಗ್ಯತೆಯ ಅರಿವು ಚೆನ್ನಾಗಿತ್ತು. ಅವರು ಉಗುಳು ನುಂಗುತ್ತ—

"ನೀವು ಹೋಗಬೇಕೆಂದು ನಾನು ಇಚ್ಛಿಸುವುದಿಲ್ಲ ಮಾಸ್ತರರೆ! ಆದರೆ ದಿನಗಳು ಸೂಕ್ಷ್ಮವಾಗಿವೆ. ಹೊಣೆಗಾರನಾದ ನಾನು ನಿಮ್ಮ ಮುಂಪೆ

ಅಧಿಕಾರಿಗಳ ಬಯಕೆಯನ್ನು ಪ್ರತ್ಯಕ್ಷವಾಗಿ ತಿಳಿಸಲೆಂದೇ ಕರೆಸಿದೆ. ನನ್ನ ಮೇಲೆ ಹರಿಹಾಯ್ದರೆ ನಾನೇನು ಮಾಡಬಲ್ಲೆ."

"ನೀನು ಮಾಡಬೇಕಾದ ಅನರ್ಥವು ಸಾಕಷ್ಟಿರುವಾಗ ಹೆಚ್ಚಿನ ಅನರ್ಥವನ್ನೇನು ಮಾಡುವಿ? ಈ ಅನರ್ಥಪರಂಪರೆಯನ್ನು ಎದುರಿಸುವ ಸಾಮರ್ಥ್ಯವು ನನ್ನಲ್ಲಿ ಸಾಕಷ್ಟಿದೆ."

"ನೀನು ಹೆಚ್ಚು ಮಾತನಾಡುವ ಕಾರಣವಿಲ್ಲ ಮಾಸ್ತರ್. ನಿನ್ನ ವಿರುದ್ಧವಾಗಿ ನಿಮ್ಮ ಮೇಲಧಿಕಾರಿಗಳಿಗೆ ಬರೆದು ತಿಳಿಸಿ, ಆಮೇಲೆ ನಾವು ಮಾಡಬೇಕಾದ ಶಾಸನವನ್ನು ಮಾಡುತ್ತೇವೆ. ತಿಳಿಯಿತೆ ?"

"ಸಾಹೇಬರೆ! ಖಾಕಿ ವಸ್ತ್ರ ಧರಿಸಿದ ಕೂಡಲೇ ಸೌಜನ್ಯವೂ ಮಾಯ ವಾಗಬೇಕೆ? ನನ್ನ ಕಿರಿಯ ಮಗನ ವಯಸ್ಸು ನಿಮ್ಮದು. ಆದರೂ ನನ್ನನ್ನು ಅವಮರ್ಯಾದೆಯಿಂದ ಮಾತನಾಡಿಸುತ್ತಿದ್ದೀರಿ. ಮಾಡಬೇಕಾದ್ದನ್ನು ಮಾಡಿರಿ. ಅದನ್ನು ನನ್ನ ಮುಂದೇಕೆ ತಿಳಿಸುವಿರಿ."

"ನಿನ್ನ ತಲೆ ತಿರುಗಿದೆ."

"ತಲೆತಿರುಕರ ಮುಂದೆ ಯಾರ ತಲೆಯೂ ಸಮನಾಗಿರಲಾರದು."

"ಇದು ಉದ್ಧಟತನ."

"ಯಾರದು ?" ರಾಮಾಶಾಸ್ತ್ರಿಗಳು ನಡುಗಹತ್ತಿದರು.

"ನಿನ್ನನ್ನು ಈಗಲೇ ಬಂಧಿಸಿ ಜೇಲಿಗೆ ಕಳಿಸುವೆನು. ತಿಳಿಯಿತೆ?"

"ಈಗ ನಾನಿರುವುದು ಜೇಲು ಅಲ್ಲವೆಂದು ನಿಮಗಾರು ಹೇಳಿದರು ಸಾಹೇಬರೇ ? ನಾನೊಬ್ಬನೇ ಅಲ್ಲ. ಭಾರತನಿವಾಸಿಗಳಾದ ನೀವು ಕೂಡ ಬಂಧನದಲ್ಲಿಯೇ ಇರುವಿರಿ."

"ನೀನು ನನ್ನ ಅಧಿಕಾರವನ್ನು ಕೆಣಕುತ್ತಿರುವಿ. ತಿಳಿಯಿತೆ ?"

"ಇಲ್ಲ ಸಾಹೇಬರೆ! ನಿಮ್ಮ ಹಣೆಯಬರಹಕ್ಕಾಗಿ ಮರುಗುತ್ತಿದ್ದೇನೆ. ಒಂದೇ ನಾಡಿನ ಮಕ್ಕಳಾದ ನೀವು ಆ ನಾಡಿನ ಹೃದಯವನ್ನೇ ತುಳಿಯು ತ್ತಿರುವದನ್ನು ಕಂಡು ಕನಿಕರವಾಗುತ್ತದೆ. ನೀವು ನಾಡನ್ನು ತುಳಿಯಬಹುದು. ಆದರೆ ನಾಡಿನ ಹೃದಯ ಬಹಳ ಗಟ್ಟಿಮುಟ್ಟಿಯಾಗಿದೆ ! ಇದು ನಿಮ್ಮ ದೇಶ. ಈ ತಾಯಿ ನಿಮ್ಮವಳು. ನಿಮಗೆ ಜನ್ಮ ಕೊಟ್ಟಿದ್ದಾಳೆ. ನೀವು ತಾಯಿಯ ಋಣವನ್ನು ತೀರಿಸಬೇಕಾದದ್ದು ನಿಮ್ಮ ಧರ್ಮ. ಅದನ್ನು ಬಿಟ್ಟು ಆ ತಾಯಿಯ ಕುತ್ತಿಗೆಯನ್ನೇ ಹಿಚುಕಲು ಹೊರಟಿದ್ದೀರಿ. ಇದು ಮಹಾ ಪಾಪ! ಈ ಪಾಪವನ್ನು ಕಟ್ಟಿಕೊಳ್ಳಬೇಡಿರಿ. ನಿಮಗೆ ಕಲ್ಯಾಣವಾಗುವದಿಲ್ಲ. ಸ್ವಾತಂತ್ರ್ಯ ಬಂದರೆ ಅದು ನಿಮಗೂ ಬರುತ್ತದೆ. ಇಂದು ಗುಲಾಮರಾಗಿ

ಬಾಳುವ ನೀವು ನಾಳೆ ಸ್ವಾತಂತ್ರ್ಯ ಭಾರತದ ಗೌರವದ ಅಧಿಕಾರಿಗಳಾಗುವಿರಿ. ಇದನ್ನು ಯೋಚಿಸಿ ಸಾಹೇಬರೆ! ನಿಮ್ಮ ಓರಿಗೆಯ ಜನ ಈಗಾಗಲೇ ಈ ರಣರಂಗದಲ್ಲಿ ಧುಮಿಕಿದ್ದಾರೆ. ನಿಮ್ಮ ಅಣ್ಣತಮ್ಮಂದಿರೂ, ನೀವೂ ಅವರನ್ನು ತುಳಿಯುತ್ತೀರಾ? ಅವರ ನೆತ್ತರವು ಹರಿಯುತ್ತಿರುವಾಗ ನೀವು ಅದರಲ್ಲಿ ಸ್ನಾನ ಮಾಡುವಿರಾ ? ಏನಿದು ? ನಿಮ್ಮ ದರ್ಪ ! ಯಾರಿಗಿದು ಈ ಅಧಿಕಾರ ?"

ಇಷ್ಟು ಮಾತು ಹೇಳಿದ ರಾಮಾಶಾಸ್ತ್ರಿಗಳ ಕಣ್ಣುಗಳೊಳಗಿಂದ ಧಾರಾಕಾರವಾಗಿ ನೀರು ಹರಿಯತೊಡಗಿತು. ಅವರು ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕುಸಿದು ಕುಳಿತುಬಿಟ್ಟರು.

ಅಲ್ಲಿ ಕೂಡಿದ ಜನರ ನರಗಳನ್ನು ಯಾರೋ ಹಿಡಿದು ಜಗ್ಗಿದಂತಾಯಿತು. ಅವರು ಅಪ್ರತಿಭರಾದರು. ಆ ಚಿಕ್ಕ ಅಧಿಕಾರಿಯೊಮ್ಮೆ ರಾಮಾಶಾಸ್ತ್ರಿಗಳನ್ನು ನೇರವಾಗಿ ನೋಡಿ, "ಗೌಡರೇ, ಈ ಮಾಸ್ತರ ಸಾಹೇಬರನ್ನು ಮನೆಗೆ ಕಳಿಸಿಬಿಡಿರಿ. ಇನ್ನೊಮ್ಮೆ ಬಂದಾಗ ವಿಚಾರಿಸೋಣ" ಎಂದುಬಿಟ್ಟರು.

ಗೌಡರು ಆ ಅಧಿಕಾರಿಯ ಮುಖವನ್ನು ನೋಡಿದಾಗ ಅವರ ಮುಖ ಕೆಂಪಗಾಗಿತ್ತು. ಕಣ್ಣು ಬಾಡಿದ್ದವು. ಇದನ್ನು ನೋಡಿದ ಗೌಡನ ಪರಿಸ್ಥಿತಿಯು ತೀರಾ ಶೋಚನೀಯವಾಗಿಬಿಟ್ಟಿತು.

ರಾಮಾಶಾಸ್ತ್ರಿಗಳನ್ನು ಚಾವಡಿಗೆ ಕರೆಯಕಳಿಸಿ ಗೌಡನು ಅಪಮಾನ ಮಾಡಿದನಲ್ಲದೆ ಅವರ ನೌಕರಿಗೂ ನೀರು ತರುವ ಪ್ರಯತ್ನದಲ್ಲಿದ್ದಾನೆಂಬ ವಾರ್ತೆಯು ಗಂಗನಹಳ್ಳಿಯಲ್ಲೆಲ್ಲ ವ್ಯಾಪಿಸಿದಾಗ ಜನರು ಸಿಡಿಮಿಡಿಗೊಂಡರು. ಮಗನನ್ನು ಜೇಲಿಗೆ ಕಳಿಸಿ, ತಂದೆಯನ್ನು ಈರೀತಿ ಕಾಡತೊಡಗಿದ ಈ 'ಸಾಡೇಸಾತ'ನನ್ನು ಜನರು ಹಳಿಯತೊಡಗಿದರು. ಇದಕ್ಕೆ ಸಾರ್ವಜನಿಕ ಬಹಿಷ್ಕಾರವೇ ಮದ್ದೆಂದು ಹಳ್ಳಿಯ ಜನ ವಿಚಾರ ಮಾಡತೊಡಗಿತು. ಇದನ್ನು ಕಾರ್ಯರೂಪದಲ್ಲಿ ತರಲು ಅವರು ಯೋಚಿಸತೊಡಗಿದರು. ಈ ವಿಷಯವನ್ನು ಕುರಿತು ಕೆಲವು ಜನರು ರಾಮಾಶಾಸ್ತ್ರಿಗಳನ್ನು ಕೇಳಿದಾಗ ಅವರು "ಗೌಡನು ನಮ್ಮವನಲ್ಲವೇ ? ಅವನಿಗೆ ಅಧಿಕಾರದ ಮದ ಬಂದಿದೆ. ಸ್ವಾರ್ಥಸಾಧನೆಯಿಂದ ಅವನ ಕಣ್ಣು ಕುರುಡಾಗಿವೆ. ಈ ಅಜ್ಞಾನಕ್ಕೆ ಅವನೇ ಪ್ರಾಯಶ್ಚಿತ್ತಪಡುವ ಪ್ರಸಂಗ ಬಂದೀತು. ಸಧ್ಯ ನೀವು ಅವನನ್ನು ಅವನ ಪಾಡಿಗೆ ಬಿಟ್ಟುಬಿಡಿರಿ. ಸರ್ಪದ ಸಹವಾಸ ಒಳ್ಳೆಯದಲ್ಲ. ನೀವು ನನಗಾಗಿ ಚಿಂತಿಸಬೇಡಿರಿ. ದೇಶಕ್ಕಾಗಿ ಎಂಥ ಪ್ರಸಂಗ ಬಂದರೂ ನಾವು

ಎದುರಿಸಬೇಕು. ಅವನನ್ನು ಕೆಣಕಿ ಇಲ್ಲದ ಸಂಗತಿಗಳನ್ನು ಮೈಮೇಲೆ ಹಾಕಿಕೊಳ್ಳುವದಕ್ಕಿಂತ ನಾವು ನಮ್ಮ ಕೆಲಸದಲ್ಲಿ ನಿರತರಾಗುವದೇ ಲೇಸು" ಎಂದು ಉಪದೇಶ ಹೇಳಿದರು.

ಈ ಉಪದೇಶದಿಂದ ಜನರಿಗೆ ಯಾವ ಸಮಾಧಾನವೂ ಆಗಲಿಲ್ಲ. ಅವರು ಗೌಡನನ್ನು ದಂಡಿಸುವ ಸಮಯವನ್ನು ಕಾಯತೊಡಗಿದರು.

ಒಂದೆರಡು ತಿಂಗಳು ಕಳೆಯುವಷ್ಟರಲ್ಲಿಯೇ ದೇಶದಾದ್ಯಂತ ಚಳವಳಿಯೊಂದು ಇಷ್ಟರಲ್ಲಿಯೇ ಸನ್ನಿಹಿತವಾಗುವ ಲಕ್ಷಣಗಳು ಕಂಡುಬರಹತ್ತಿದ್ದವು. ಅಲ್ಲಲ್ಲಿ ಗುಜುಗುಜು ಪ್ರಾರಂಭವಾಗಿಬಿಟ್ಟಿತು. ಈ ಚಳವಳಿಯ ಸ್ವರೂಪವು ಬಹಳ ಭೀಕರವಾಗುವಂತೆ ಸರಕಾರದ ಸಿದ್ಧತೆಯೂ ಜನರಲ್ಲಿ ಸಂದೇಹವನ್ನು ಬೀರಹತ್ತಿತು. ಹಳ್ಳಿಗಳಿಗೆ ಪೋಲೀಸ ಪಡೆಗಳು ಬರತೊಡಗಿದವು. ಸ್ಥಳೀಯ ಅಧಿಕಾರಿಗಳನ್ನು ವರ್ಗಮಾಡಿದ್ದರಿಂದ ಆ ಸ್ಥಳದಲ್ಲಿ ಅಪರಿಚಿತ ಅಧಿಕಾರಿಗಳು ಬರತೊಡಗಿದರು. ಏನೋ ಒಂದು ಮಹಾ ಆಂದೋಲನ ನಡೆಯುವದಿದೆ ಎಂಬುದು ಸ್ಪಷ್ಟವಾಯಿತು. ಜನರು ಆ ಮಹಾದಿನವನ್ನು ಎದುರು ನೋಡತೊಡಗಿದರು. ಅವರ ಸಹಾನುಭೂತಿ ಈ ಚಳವಳಿಯ ಕಡೆಗೆ ಹರಿಯತೊಡಗಿತು. ಇದಕ್ಕೆ ಗಂಗನಹಳ್ಳಿಯೂ ಅಪವಾದವಾಗಿರಲಿಲ್ಲ. ಇನ್ನೊಂದು ತಿಂಗಳಲ್ಲಿಯೇ ಬಿಡುಗಡೆಯಾಗಿ ಬರುವ ವಾಸುದೇವನನ್ನು ಹಳ್ಳಿಯ ಜನ ಆತುರದಿಂದ ನಿರೀಕ್ಷಿಸತೊಡಗಿತು.

ಆ ದಿನ ರಾಮಾಶಾಸ್ತ್ರಿಗಳಿಗೆ ಟಪಾಲಿನಿಂದ ಎರಡು ಪಾಕೀಟುಗಳು ಬಂದವು. ಮೇಲಧಿಕಾರಿಗಳಿಂದ ಬಂದ ಒಂದು ಪತ್ರವನ್ನು ಓದಿದಾಗ ಅವರು ನಕ್ಕುಬಿಟ್ಟರು.

ಆ ಪತ್ರದಲ್ಲಿ ವಿದ್ಯಾಧಿಕಾರಿಗಳು ರಾಮಾಶಾಸ್ತ್ರಿಗಳಿಗೆ ಎಚ್ಚರಿಕೆ ಕೊಟ್ಟಿದ್ದರು.

"ನಿಮ್ಮ ಮಗನಾದ ವಾಸುದೇವನು ರಾಜದ್ರೋಹದಲ್ಲಿ ತೊಡಗಿರುವದಾಗಿ ಪೋಲೀಸ ಅಧಿಕಾರಿಗಳಿಂದಲೂ, ಊರ ಗೌಡರಿಂದಲೂ ತಿಳಿದು ಬಂದಿದೆ. ನೀವು ಅವನ ಕೆಲಸದಲ್ಲಿ ಸಹಾಯ ಮಾಡುತ್ತಿರುವ ವಿಷಯವನ್ನು ವಿದ್ಯಾಖಾತೆಯು ಗಂಭೀರವಾಗಿ ವಿಚಾರಿಸುತ್ತಿದೆ. ಒಂದು ವಾರದಲ್ಲಿ ನಿಮ್ಮಿಂದ ಸದ್ವರ್ತನೆಯ ಪತ್ರವು ಬರದಿದ್ದರೆ ನಿಮ್ಮನ್ನು ಕೆಲಸದಿಂದ ಕಡಮೆ ಮಾಡಲಾಗುವದು." ಎಂಬುದು ಆ ಒಕ್ಕಣೆಯ ಅಭಿಪ್ರಾಯವಾಗಿದ್ದಿತು. ರಾಮಾಶಾಸ್ತ್ರಿಗಳು ಪತ್ರವನ್ನು ಕೆಳಗಿಟ್ಟು ಗಂಭೀರವಾಗಿ ಯೋಚಿಸತೊಡಗಿದರು. "ನಾನು ಉತ್ತರ ಕೊಡುವದೂ ಬೇಡ, ಈ ನೌಕರಿಯೂ ಬೇಡ"

ವೆಂದು ಅವರು ವಿಚಾರಿಸಿದರು. "ವಿದ್ಯಾಖಾತೆಯವರು ನನ್ನನ್ನು ಬೇಕೆಂದೇ ಈ ಆಂದೋಲನದಲ್ಲಿ ನೂಕುವಂತೆ ಮಾಡುತ್ತಿದ್ದಾರೆ. ರಾಷ್ಟ್ರದ ಕೆಲಸದಲ್ಲಿ ದುಡಿದರೆ ನನ್ನಿಂದ ಇವರಿಗೆ ಸದ್ವರ್ತನೆಯ ಆಶ್ವಾಸನ ಬೇಕಂತೆ! ಸ್ವಾತಂತ್ರ್ಯ ಕ್ಕಾಗಿ ದುಡಿಯುವದು ವಿಪರೀತ ವರ್ತನೆಯೇ ?" ಎಂದು ಉದ್ಗಾರ ತೆಗೆದು ರಾಮಾಶಾಸ್ತ್ರಿಗಳು ಆ ಪತ್ರವನ್ನು ದೂರ ಬಿಸಾಡಿದರು.

ಇನ್ನೊಂದು ಪತ್ರವು ಅವರಲ್ಲಿ ಉದ್ವೇಗವನ್ನು ಉಂಟುಮಾಡಿತು. ಅದು ಜಯದೇವನ ಪತ್ರವಾಗಿತ್ತು. ಅದು ಯಾವ ಊರಿನಿಂದ ಬಂದಿದೆ ಯೆಂದು ಹೇಳಲು ಸಾಧ್ಯವಿರಲಿಲ್ಲ. ಶುಭಮುಹೂರ್ತವು ಸನ್ನಿಹಿತವಾಗಿದೆ ಯೆಂದೂ, ಈ ಮುಹೂರ್ತವನ್ನು ಸಾಧಿಸಲು ವಿಶ್ವೇಶ್ವರಭಟ್ಟರ ಹಬ್ಬಿದ ಬಳ್ಳಿ ಸರ್ವವಿಧದಿಂದ ಪ್ರಯತ್ನಿಸುವದೆಂತಲೂ, ಒಂದೆರಡು ದಿನಗಳಲ್ಲಿ ಅಣ್ಣನ ಬಗ್ಗೆ ಕೇಳುವ ವಿಚಿತ್ರ ಸುದ್ದಿಗೆ ಗಾಬರಿಯಾಗಬಾರದೆಂತಲೂ, ಎಲ್ಲವೂ ಕ್ರಮಬದ್ಧವಾಗಿ ಸಾಗುವದೆಂತಲೂ, ನಿಮ್ಮ ಆಶೀರ್ವಾದದ ರಕ್ಷೆ ಯಲ್ಲಿ ಎಲ್ಲವೂ ಸುಸೂತ್ರವಾಗಿ ಸಾಗುವದೆಂದೂ, ಕಾಲೇಜಿನ ವಿದ್ಯಾರ್ಥಿ ಗಳಲ್ಲಿ ರಾಷ್ಟ್ರಪ್ರೇಮಿಗಳಾದವರೆಲ್ಲ ಕೂಡಲೇ ಹೊರಬೀಳುವರೆಂತಲೂ, ಆ ಪತ್ರದ ಸಾರಾಂಶವಾಗಿದ್ದಿತು. ರಾಮಾಶಾಸ್ತ್ರಿಗಳು ಪತ್ರವನ್ನು ಕೆಳಗಿಟ್ಟು ಉದ್ವೇಗಪೂರ್ಣರಾದರು.

"ವಾಸುದೇವನ ಬಗ್ಗೆ ಬರುವ ವಿಚಿತ್ರ ಸುದ್ದಿಯು ಯಾವುದಿರ ಬಹುದು ?" ಎಂಬುದನ್ನು ಅವರು ಅನೇಕಸಾರೆ ಉಚ್ಚರಿಸತೊಡಗಿದರು. ಅವರಲ್ಲಿ ಒಂದು ರೀತಿಯ ಕಳವಳವೇ ಮೂಡಿತು. "ಜೇಲಿನಲ್ಲಿ ಅವನು ಕ್ಷೇಮವಾಗಿರಬಹುದಷ್ಟೆ. ಗಾಬರಿಯಾಗುವ ಕಾರಣವಿಲ್ಲವೆಂದು ಬರೆದ ಸಂಗತಿಯನ್ನು ಓದಿದರೆ ಏನೋ ಗಾಬರಿಯಾಗುವಂತಹ ಸುದ್ದಿ ಬರಬಹುದು. ಅದು ಯಾವ ಸುದ್ದಿಯಾಗಿರಬಹುದು?" ರಾಮಾಶಾಸ್ತ್ರಿಗಳಿಗೆ ಯಾವ ವಿಚಾ ರವೂ ಬಗೆಹರಿಯಲಿಲ್ಲ. ಅವರು ಮತ್ತೆ ಮತ್ತೆ ಆ ಪತ್ರವನ್ನು ಮಾತ್ರ ಓದ ತೊಡಗಿದರು.

ಇದಾದ ಆರುದಿನಗಳ ಮೇಲೆ ಒಂದು ದಿನ ಸೀತಮ್ಮನವರು ಚುಮು ಚುಮು ನಸುಕಿನಲ್ಲೆದ್ದು ತಲೆಬಾಗಿಲ ಹೊಸ್ತಿಲ ಸಾರಣೆ ಮಾಡಿ ರಂಗವಲ್ಲಿಯ ನ್ನಿಡಲು ಬಾಗಿಲ ತೆಗೆದಾಗ ಸುಸಜ್ಜಿತವಾದ ಪೋಲೀಸ ಪಡೆಯೊಂದು ಅಜ್ಜ ಗಾವಲು ನಿಂತದ್ದನ್ನು ನೋಡಿ ಬೆದರಿದರು. ಅವರ ಕೈ ಥರಥರ ನಡುಗತೊಡಗಿ ದವು. ಅವರು ಕೂಡಲೇ ಬಾಗಿಲು ಹಾಕಿ ಒಳಗೆ ಹೋಗಬೇಕೆಂದು ಒಂದು ಕದವನ್ನು ಮುಚ್ಚುತ್ತಿರುವಾಗಲೇ "ಬಾಗಿಲನ್ನು ಹಾಕಬೇಡಿರಿ. ನನಗೆ ಈ

ಮನೆಯನ್ನು ಶೋಧಿಸಬೇಕಾಗಿದೆ" ಎಂಬ ಕರ್ಕಶ ದನಿಯನ್ನು ಕೇಳಿದರು. ಇದರಿಂದಲಂತೂ ಅವರು ತೀರಾ ಹೌಹಾರಿದರು. ಅವರು ಗಟ್ಟಿಯಾದ ದನಿಯಲ್ಲಿ "ಪೋಲೀಸರು ಬಂದಿದಾರೆ. ಹೊರಗೆ ಬರಬಾರದೇ" ಎಂದು ರಾಮಾಶಾಸ್ತ್ರಿಗಳನ್ನು ಕೂಗಿದರು. ಈ ದನಿಯನ್ನು ಕೇಳಿ ಹಾಸಿಗೆಯಲ್ಲಿ ಮಲಗಿದ್ದ ಶಾಸ್ತ್ರಿಗಳು ಗಡಿಬಿಡಿಯಿಂದ ಹೊರಕ್ಕೆಬಂದು ಅಲ್ಲಿ ನಿಂತ ಪೋಲೀಸ ಅಧಿಕಾರಿಯನ್ನು ಕಂಡು ದಿಗ್ಭ್ರಾಂತರಾದರು. ಅವರಿಗೆ ಪೋಲೀಸರ ಬರವು ಅಚ್ಚರಿಯನ್ನೇ ಉಂಟುಮಾಡಿತು. ಅವರು ಸ್ವಾಭಾವಿಕವಾದ ತಮ್ಮ ದನಿಯಲ್ಲಿ,

"ತಮಗೆ ಏನು ಬೇಕಾಗಿದೆ ?" ಎಂದು ಕೇಳಿದರು.

"ನಮಗೆ ನಿಮ್ಮ ಮಗನು ಬೇಕಾಗಿದ್ದಾನೆ" ಅಧಿಕಾರಿಯ ದನಿ.

"ನನಗೆ ನಿಮ್ಮ ಮಾತು ಅರ್ಥವಾಗುವದಿಲ್ಲ ಸಾಹೇಬರೆ! ಜೇಲಿನಲ್ಲಿರುವ ಮಗನನ್ನು ಮನೆಯಿಂದ ಎಲ್ಲಿಂದ ತಂದುಕೊಡಲಿ ?

"ಗೊತ್ತಿರುವ ಸಂಗತಿಯನ್ನು ಬಚ್ಚಿಡುವದರಲ್ಲಿ ಯಾವ ಅರ್ಥವೂ ಇಲ್ಲ.

"ನಿಮ್ಮ ಮಾತು ನನಗೆ ಅರ್ಥವಾಗುವದೇ ಇಲ್ಲ."

"ಸೊಂಟದಮೇಲೆ ಎರಡು ವದೆಗಳು ಬಿದ್ದಾಗ ಎಲ್ಲವೂ ಅರ್ಥವಾಗುವದು. ಇಷ್ಟು ಬೇಗನೆ ಹೇಗೆ ಆದೀತು?"

"ನೀವು ಅನ್ನುವುದಾದರೂ ಏನು ಸಾಹೇಬರೆ!"

"ನಿಮ್ಮ ಮಗನನ್ನು ಸುಸೂತ್ರವಾಗಿ ಒಪ್ಪಿಸಿರಿ."

"ಯಾವ ಮಗನನ್ನು ಹೇಳಬಾರದೆ?"

"ಅದೇ ಆ ವಾಸುದೇವನನ್ನು. ಜೇಲಿನಿಂದ ಪಾರಾಗಿ ಓಡಿಹೋದ ಆ ಬದಮಾಷನನ್ನು."

"ವಾಸುದೇವನು ಜೇಲಿನಿಂದ ಪಾರಾಗಿ ಹೋಗಿರುವನೆ ?"

"ಗೊತ್ತಿಲ್ಲದಂತೆ ಕೇಳುವ ನಿಮ್ಮ ಕೆನ್ನೆ ಬಾಯಿಸಬೇಕು."

"ದೇವರಾಣೆಗೂ ಗೊತ್ತಿಲ್ಲ ಸಾಹೇಬರೆ! ಈ ಸುದ್ದಿಯನ್ನು ಮೊದಲು ಹೇಳಿದವರೇ ನೀವು!"

"ಮತ್ತೆ ಅದೇ ಮಾತು."

"ನಾನು ಸತ್ಯವನ್ನೇ ನುಡಿಯುತ್ತೇನೆ. ಬೇಕಾದರೆ ನೀವು ನಮ್ಮ ಮನೆಯನ್ನು ಆಮೂಲಾಗ್ರವಾಗಿ ಶೋಧಿಸಬಹುದು."

ಹೀಗೆಂದು ರಾಮಾಶಾಸ್ತ್ರಿಗಳು ಕದವನ್ನು ಪೂರಾ ತೆಗೆದು ಅಧಿಕಾರಿಯನ್ನು ಒಳಗೆ ಬರಮಾಡಿಕೊಂಡರು. ಆ ಅಧಿಕಾರಿಯು ಬೂಟುಗಾಲಿನಿಂದ

ಮನೆಯ ಕೋಣೆಗಳನ್ನೆಲ್ಲ ಶೋಧಿಸತೊಡಗಿದನು. ಅವನ ಸಹಾಯಕರಾಗಿ ಪೋಲೀಸರು ಮನೆಯ ಸಾಮಾನುಗಳನ್ನು ಚೆಲ್ಲಾಪಿಲ್ಲಿ ಮಾಡತೊಡಗಿದರು. ಇದನ್ನು ಸಹಿಸಲಾರದೆ ರಾಮಾಶಾಸ್ತ್ರಿಗಳು,

"ಹೀಗೇಕೆ ಸಾಮಾನುಗಳನ್ನು ಬಿಸಾಕುತ್ತಿದ್ದೀರಿ. ಮನುಷ್ಯನನ್ನು ಹುಡುಕುವ ಪದ್ಧತಿಯೇ ಇದು? ವಾಸುದೇವನು ಬೆಕ್ಕಿನ ಮರಿಯೆಂದು ತಿಳಿದು ಗಡಿಗೆಮಡಿಕೆಗಳನ್ನು ಒಡೆಯುವಿರಾ? ನಿಮ್ಮ ಈ ರೌದ್ರಾಕಾರವನ್ನು ನೋಡಿ ಮನೆಯ ಹೆಂಗಸು ಹೌಹಾರಿ ಹೋಗಿದ್ದಾಳೆ. ನಮ್ಮ ಜನರಾದ ನೀವು ಬ್ರಾಹ್ಮಣ ಮನೆಯ ಗೌರವವನ್ನು ದಯವಿಟ್ಟು ಕಾಪಾಡಿಕೊಳ್ಳಿರಿ ಮಹಾರಾಯರೆ!" ಎನ್ನಲು ಅಧಿಕಾರಿಯು ಅವರನ್ನು ಗದ್ದರಿಸಿದನು.

ಬೂಟುಗಾಲಿನಿಂದ ದೇವರ ಮನೆಗೆ ನಡೆದ ಅಧಿಕಾರಿಯನ್ನು ನೋಡಿ ಸೀತಮ್ಮನವರಿಗೆ ಸಂತಾಪವಾಯಿತು. ಅವರು ಸರ್‍ರನೇ ಓಡಿ ಬಂದು ಬಾಗಿಲಿಗೆ ಅಡ್ಡ ನಿಂತು ಹೇಳಿದರು :

"ನೀವು ಬೂಟುಗಾಲಿನಿಂದ ಒಳಗೆ ಹೋಗಲಾರಿರಿ. ಒಳಗೆ ದೇವರ ಮಂಟಪವಿದೆ" ಎನ್ನಲು ಅಧಿಕಾರಿಗಳು ಬೆದರಿದರು.

"ನಿಮ್ಮ ಮಗನನ್ನು ಒಳಗೆ ಅಡಗಿಸಿಟ್ಟಿರಬಹುದು."

"ನನ್ನ ಮಗನು ಸಾಲಿಗ್ರಾಮವಾಗಿ ಸಂಪುಷ್ಟದಲ್ಲಿ ಕುಳಿತುಕೊಳ್ಳಲಾರನಷ್ಟೆ. ನೀವು ಏನು ಹೇಳಿದರೂ ನಾನು ನಿಮ್ಮನ್ನು ಒಳಗೆ ಬಿಡಲಾರೆ." ಸೀತಮ್ಮ ಉಬ್ಬಸದಿಂದ ಹೇಳಿದರು.

"ನಾನು ಒಳಗೆ ಹೋಗಲೇಬೇಕು."

"ಆ ಬೂಟುಗಳನ್ನು ಕಳಚಿರಿ. ಕಾಲುತೊಳೆಯಲು ನೀರು ಕೊಡುತ್ತೇನೆ. ನೀವು ಕೈಕಾಲು ತೊಳೆದುಕೊಂಡು ಬೇಕಾದರೆ ಒಳಗೆ ಹೋಗಬಹುದು."

"ಇದು ಸಾಧ್ಯವಿಲ್ಲ."

"ಹಾಗಾದರೆ ನೀವು ಒಳಗೆ ಹೋಗುವುದೂ ಸಾಧ್ಯವಿಲ್ಲ. ನೀವು ನನ್ನ ಹೆಣದ ಮೇಲಿಂದಲೇ ದಾಟಿ ಹೋಗಬೇಕಾದೀತು." ಸೀತಮ್ಮ ಥರಥರ ನಡುಗಹತ್ತಿದರು.

ಆ ವೇಳೆಗೆ ರಾಮಾಶಾಸ್ತ್ರಿಗಳು ಅಲ್ಲಿಗೆ ಬಂದು "ಸಾಹೇಬರೇ! ನೀವು ಹಿಂದುಗಳಲ್ಲವೆ? ದೇವರ ಅವಮಾನ ಮಾಡಿ ಯಾವ ಹಿಂದುವೂ ಬಾಳಲಾರನು. ನೀವು ನಮ್ಮನ್ನು ನಂಬಬೇಡಿರಿ. ದೇವರನ್ನಾದರೂ ನಂಬಬೇಕಷ್ಟೆ. ಈ ಸಾಧ್ವಿ ದೇವರಿಗಾಗಿ ಪ್ರಾಣವನ್ನೇ ಅರ್ಪಿಸಲು ಸಿದ್ಧವಾಗಿ

ದ್ದಾಳೆ. ಇದನ್ನು ನೀವು ಮೆಚ್ಚಬೇಕು. ನಾನು ಇಲ್ಲಿಯೇ ಇರುತ್ತೇನೆ. ಇಲ್ಲಿ ಯಾವ ಮೋಸವೂ ಆಗಲಾರದು. ಹೋಗಿರಿ, ಬೂಟುಗಳನ್ನು ಕಳಚಿ ಬನ್ನಿರಿ. ಇಲ್ಲಿಯೊಬ್ಬ ಸಿಪಾಯಿಯನ್ನು ನಿಲ್ಲಿಸಿರಿ. ನಾನು ನೀರು ಕೊಡುತ್ತೇನೆ ಬನ್ನಿರಿ." ಎಂದು ಆ ಅಧಿಕಾರಿಯನ್ನು ಎಳೆದುಕೊಂಡು ನಡೆದರು.

ಅಧಿಕಾರಿ ಅನಿವಾರ್ಯವಾಗಿ ಅವರು ಹೇಳಿದಂತೆ ಕೇಳಿ ದೇವರ ಮನೆಯನ್ನು ಹೊಕ್ಕಾಗ ಅಲ್ಲಿ ದೀಪ ಉರಿಯುತ್ತಿತ್ತು. ಅಲ್ಲಿ ಒಂದು ಬೆಕ್ಕಿನ ಪಿಳ್ಳೆಯೂ ಇರಲಿಲ್ಲ. ಜನ್ಮತಃ ಹಿಂದುವಾಗಿದ್ದ ಆ ಅಧಿಕಾರಿಗೆ ತಿಳಿಯದಂತೆ ಅವನ ಕರಗಳು ದೇವರ ಎದುರು ಒಂದುಗೂಡಿದವು. ಅವನು ದೇವರನ್ನು ನಮಸ್ಕರಿಸಿ ಹೊರಬಿದ್ದನು. "ನಿಮಗೆ ತೊಂದರೆ ಕೊಟ್ಟೆ ತಾಯಿ!"

ಸೀತಮ್ಮನವರು ಆ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಅವರು ಆಗಲೇ ವಾಸುದೇವನ ಕ್ಷೇಮಚಿಂತನೆಯಲ್ಲಿ ಮಗ್ನರಾಗಿಬಿಟ್ಟಿದ್ದರು.

ಪೋಲೀಸ ಅಧಿಕಾರಿಯು ಆ ಮನೆಯ ಮುಂದೆ ಇಬ್ಬರು ಸಿಪಾಯಿಗಳನ್ನು ಅಜ್ಜಗಾವಲು ನಿಲ್ಲಿಸಿ ಬಡಿಗೇರ ಗೋವಿಂದನ ಮನೆಯ ಕಡೆಗೆ ಧಾವಿಸಿದನು. ಗೋವಿಂದನೂ ಫರಾರಿ!

ರಾಮಾಶಾಸ್ತ್ರಿಗಳಿಗೆ ಜಯದೇವನು ಬರೆದ ವಿಚಿತ್ರಸುದ್ದಿಯ ಅರ್ಥವು ಈ ದಿನ ಆದಂತಾಯಿತು.

"ಇನ್ನೇನು ಗತಿ? ಈ ಪೋಲೀಸರ ದವಡೆಯೊಳಗಿಂದ ವಾಸುದೇವನು ಪಾರಾದನೆ?" ಸೀತಮ್ಮ ಅಳುತ್ತಲೇ ಕೇಳಿದರು.

"ನಿನ್ನ ಮಗನು ಖಂಬೀರನಾಗಿದ್ದಾನೆ. ನಿನ್ನ ಮಗನಲ್ಲವೇ ಅವನು? ಈ ಹೊತ್ತು ಆ ಪೋಲೀಸ ಅಧಿಕಾರಿಯನ್ನೂ ಹೆದರಿಸಿದವಳು ನೀನು" ರಾಮಾಶಾಸ್ತ್ರಿಗಳು ಹೆಂಡತಿಯನ್ನು ಅಭಿಮಾನದಿಂದ ನೋಡಿ ಹೇಳಿದರು.

ವಾಸುದೇವನು ಜೇಲಿನಿಂದ ಪಾರಾಗಿ ಪೋಲೀಸರ ಕಣ್ಣಿಗೆ ಇಂಗು ಹಚ್ಚಿರುವ ಸುದ್ದಿ ಗಂಗನಹಳ್ಳಿಯಲ್ಲಿ ವ್ಯಾಪಿಸಿಬಿಟ್ಟಿತು. ಅವನೊಡನೆ ಬಡಿಗೇರ ಗೋವಿಂದನೂ ಪಾರಾಗಿ ಹೋಗಿರುವ ಸುದ್ದಿಯನ್ನು ಕೇಳಿಯಂತೂ ಜನರ ಕುತೂಹಲ ಕೆರಳಿ ನಿಂತಿತು. ಪೋಲೀಸರು ಶಾಸ್ತ್ರಿಗಳ ಮನೆಯ ಎದುರಿಗೂ ಗೋವಿಂದನ ಮನೆಯ ಎದುರಿಗೂ ನಿಂತು ಕಾಯುತ್ತಿರುವದೂ, ಗಂಗನಹಳ್ಳಿಯ ಚಾವಡಿಯಲ್ಲಿ ಪೋಲೀಸ ಪಡೆಯೇ ತಳ ಊರಿದುದೂ ವಾಸುದೇವನ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದವು. ಏನಾದರೂ ಮಾಡಿ ಅವನನ್ನು ಕಂಡು ಈ ಆಂದೋಲನದಲ್ಲಿ ಭಾಗವಹಿಸಬೇಕೆಂದು ತರುಣರು ಕಾತರರಾಗತೊಡಗಿದರು.

ಆದರೆ ವಾಸುದೇವನ ಸುದ್ದಿಯೇ ಇಲ್ಲ. ಹದಿನೈದು ದಿನಗಳು ಸಂದು ಹೋದರೂ ಅವನ ಸುದ್ದಿಯೇ ಇಲ್ಲ. ಇದರಿಂದ ರಾಮಾಶಾಸ್ತ್ರಿಗಳ ಚಿಂತೆಯೂ ಹೆಚ್ಚಾಗತೊಡಗಿತು. ಅವನ ಶೋಧನೆಗಾಗಿ ಹುಚ್ಚೆದ್ದು ಹರಿಯುತ್ತಿರುವ ಪೋಲೀಸ ಪಡೆಯನ್ನು ಕಂಡು ಅವರಿಗೆ ಭೀತಿಯೂ ಆಗತೊಡಗಿತು. ಒಮ್ಮೆಯಂತೂ ಒಂದು ವಿಲಕ್ಷಣ ಪ್ರಸಂಗವೇ ಆಯಿತು. ಆ ಪ್ರಸಂಗದಿಂದ ರಾಮಾಶಾಸ್ತ್ರಿಗಳಲ್ಲಿ ಹೆಚ್ಚಿನ ನೆಮ್ಮದಿಯುಂಟಾಯಿತೆಂಬ ಮಾತು ಬೇರೆ.

ಜಿಲ್ಹಾ ಪೋಲೀಸ್ ಸೂಪರಿಂಟೆಂಡೆಂಟರಾದ ಯುರೋಪಿಯನ್ ಅಧಿಕಾರಿಗಳು ಡಿ. ವಾಯ್. ಎಸ್. ಪಿ. ಅವರೊಡನೆ ಹೆಚ್ಚಿನ ಶೋಧನೆಗಾಗಿ ಸ್ವತಃ ಗಂಗನಹಳ್ಳಿಗೆ ಬಂದರು. ಅವರಿಗೆ ಯಾವ ಎಳೆಯೂ ಸಿಕ್ಕದ್ದರಿಂದ ವಾಸುದೇವನ ತಂದೆಯನ್ನು ಬೆದರಿಸಿ ಹೋಗಲು ಡಿ. ವಾಯ್. ಎಸ್. ಪಿ. ಅವರೊಡನೆ ನೇರವಾಗಿ ಶಾಸ್ತ್ರಿಗಳ ಮನೆಗೆ ಬಂದರು. ಶಾಸ್ತ್ರಿಗಳು ಗಾಬರಿಯಿಂದ ಹೊರಗೆ ಬಂದಾಗ ಆ ಅಧಿಕಾರಿಯು ಇಂಗ್ಲಿಷ ಭಾಷೆಯಲ್ಲಿ ಶಾಸ್ತ್ರಿಗಳಿಗೆ ಪ್ರಶ್ನೆ ಕೇಳಹತ್ತಿದನು. ಅವನು ಕೇಳಿದ ಪ್ರಶ್ನೆಗಳೇ ಬೇರೆ. ಅದರ ಭಾಷಾಂತರವೇ ಬೇರೆ. ಯುರೋಪಿಯನ್ನನು ಕೇಳುವ ಪ್ರಶ್ನೆಗಳನ್ನು ಡಿ. ವಾಯ್. ಎಸ್. ಪಿ. ಅವರು ಈ ರೀತಿ ಭಾಷಾಂತರಿಸತೊಡಗಿದರು. ಹೀಗೆ ಮಾಡುವ ಮೊದಲು ಅವರೊಮ್ಮೆ ರಾಮಾಶಾಸ್ತ್ರಿಗಳನ್ನು ನೋಡಿ ಕಣ್ಣು ಮಿಟುಕಿಸಿದರು. ಶಾಸ್ತ್ರಿಗಳು ಅದನ್ನು ಗ್ರಹಿಸಿದರು.

ಯುರೋಪಿಯನ್ನನು "ವಾಸುದೇವನ ಬಗ್ಗೆ ಗೊತ್ತಿರುವುದನ್ನು ಬಚ್ಚಿಡದೆ ಹೇಳಲು ಕೇಳಿ"ರೆಂದು ಇಂಗ್ಲಿಷಿನಲ್ಲಿ ಹೇಳಿದುದನ್ನೇ ಅವರು,

"ನಿಮ್ಮ ವಾಸುದೇವನು ಜಯದೇವನ ಅಣ್ಣನೆಂದು ನನಗೆ ಗೊತ್ತಾಗಿದೆ. ನಿಮ್ಮ ಜಯದೇವನು ನನ್ನ ಮಗಳ ಸ್ನೇಹಿತನಾಗಿದ್ದಾನೆ" ಎಂದು ದರ್ಪದ ದನಿಯಲ್ಲಿಯೇ ಭಾಷಾಂತರಿಸಿದರು.

"ನೀವು ಸುಂದರಾನ ತಂದೆಗಳೇ? ಜಯದೇವ ಆಗಾಗ ಆ ಹೆಸರನ್ನು ಹೇಳುತ್ತಿದ್ದ. ಈಗ ಜಯದೇವನು ಎಲ್ಲಿರುವ ? ವಾಸುದೇವನ ಬಗ್ಗೆ ನನಗೆ ಕಾಳಜಿಯಾಗಿದೆ" ಎಂದು ಶಾಸ್ತ್ರಿಗಳು ಹೇಳಿದುದನ್ನು

"ನನಗೆ ವಾಸುದೇವನ ಬಗ್ಗೆ ಬೇಸರಿಕೆಯಾಗಿದೆ. ಅವನನ್ನು ಕಂಡರೆ ನನಗೆ ಆಗುವದಿಲ್ಲ. ಅವನು ಸಿಕ್ಕರೆ ಅವನಿಗೆ ಯೋಗ್ಯ ಶಿಕ್ಷೆಮಾಡಿರಿ. ನಾನು ಸರಕಾರಿ ನೌಕರ. ನಾನು ರಾಜನಿಷ್ಠನಾಗಿದ್ದೇನೆ" ಎಂದು ಭಾಷಾಂತರ ಮಾಡಲಾಯಿತು.

"ಅವನನ್ನು ಹಿಡಿದು ಕೊಟ್ಟರೆ ಯೋಗ್ಯ ಬಹುಮಾನ ಕೊಡಲಾಗುವ

ದೆಂಬುದನ್ನು ತಿಳಿಸಿರಿ" ಎಂದುಹೇಳಿದ ಯೂರೋಪಿಯನ್ನನ ಮಾತುಗಳನ್ನು "ಜಯದೇವನು ಸುರಕ್ಷಿತನಾಗಿದ್ದಾನೆ. ವಾಸುದೇವನ ಬಗ್ಗೆ ಕಾಳಜಿ ಮಾಡಬೇಡಿರಿ. ಅವನು ಭೂಗತನಾಗಿ ಕೆಲಸ ಮಾಡುತ್ತಾನೆ." ಎಂದು ಭಾಷಾಂತರಿಸಲಾಯಿತು.

"ಒಂದು ವೇಳೆ ಮೋಸ ಮಾಡಿದರೆ ಭಯಂಕರ ಶಿಕ್ಷೆಗೆ ಗುರಿಯಾಗಬೇಕಾದೀತೆಂಬುದನ್ನು ಅವರಿಗೆ ಹೇಳಿರಿ." ಎಂದು ಹೇಳಿದ ಮಾತುಗಳನ್ನು "ನೀವು ಏನೇನೂ ಕಾಳಜಿ ಮಾಡಬೇಡಿರಿ. ಜಯದೇವನ ಸಂರಕ್ಷಣೆಯನ್ನು ಸುಂದರಾ ವಹಿಸಿದ್ದಾಳೆ. ವಾಸುದೇವನ ಕಾರ್ಯದಲ್ಲಿ ಜನವೇ ಬೆಂಬಲವಾಗಿ ನಿಂತಿದೆ. ಕಾಳಜಿ ಮಾಡಬೇಡಿರಿ. ಸ್ವಸ್ಥವಾಗಿರ್ರಿ. ನಿಮ್ಮನ್ನು ಕಂಡು ನನಗೆ ಸಂತೋಷವಾಗಿದೆ." ಎಂದು ದರ್ಪದ ಧ್ವನಿಯಲ್ಲಿ ಭಾಷಾಂತರಿಸಲಾಯಿತು.

ಸಾಹೇಬರು ಹೋದ ಬಳಿಕ ರಾಮಾಶಾಸ್ತ್ರಿಗಳಿಗೆ ನಗೆಯನ್ನು ತಡೆಯಲಾಗಲಿಲ್ಲ. ಸೀತಮ್ಮನವರು ಬಾಗಿಲ ಹಿಂದಿನಿಂದ ಎಲ್ಲವನ್ನೂ ಕೇಳಿದಾಗ ಅವರಿಗೆ ಮಾತಿನ ರೀತಿಯೇ ವಿಚಿತ್ರವಾಗಿರುವಂತೆ ಕಂಡು ಬಂದಿತ್ತು. ಅವರು ಹೋದ ಕೂಡಲೇ, "ಇದೇನಿದು ಅಸಂಬದ್ಧ ಮಾತು ?" ಎಂದು ಕೇಳಿದಳು.

"ಎಲ್ಲವೂ ಸುಸಂಬದ್ಧವಾಗಿದೆ. ಅವರು ಸುಂದರಾನ ತಂದೆ, ತಿಳಿಯಿತೆ? ನಿನ್ನ ಮಕ್ಕಳು ಸುರಕ್ಷಿತರಾಗಿದ್ದಾರೆಂದು ತಿಳಿಸಿದರು. ಪಾಪ! ಆ ಯೂರೋಪಿಯನ್ನನನ್ನು ಚೆಳ್ಳುಹಣ್ಣು ತಿನ್ನಿಸುತ್ತಿರುವ ಈ ಅಧಿಕಾರಿಗಳ ದೇಶಭಕ್ತಿಯು ಕಡಿಮೆಯದಲ್ಲ ನೋಡು. ಈ ಸಲ ನಮಗೆ ವಿಜಯವು ಕಟ್ಟಿಟ್ಟದ್ದು" ಎಂದು ಶಾಸ್ತ್ರಿಗಳು ಸಂತೋಷಭರಿತರಾದರು.

ಸೀತಮ್ಮನವರ ಮುಖದ ಮೇಲೆ ಮುಗುಳುನಗೆಯ ಸುಳಿಯೊಂದು ತೇಲಿಹೋಯಿತು.

ಇನ್ನೂ ವಾಸುದೇವನ ಸುದ್ದಿ ಬಾರದ್ದರಿಂದ ರಾಮಾಶಾಸ್ತ್ರಿಗಳಿಗೆ ವಿವಂಚನೆಯಾಗತೊಡಗಿತು. ಅವನ ಮೌನವನ್ನು ಅವರು ಅರ್ಥಮಾಡಿಕೊಂಡರೂ ಅವರಿಗೆ ಸಮಾಧಾನವಾಗದಾಯಿತು. ಆದರೆ ಅವರು ಏನು ಮಾಡಬಲ್ಲರು. ಅವನನ್ನು ಹುಡುಕಲು ಅವರಿಗೆ ಸಾಧ್ಯವೇ ?

ದೇಶದ ತುಂಬ ಹಬ್ಬಿದ ದಾವಾನಲದಲ್ಲಿ ವಾಸುದೇವನು ಯಾವ ಕಾರ್ಯ ಮಾಡತೊಡಗಿದ್ದಾನೆ ? ಸಾವಿರಾರು ಮುಖಂಡರು ಭೂಗತವಾಗಿ ಏನು ಮಾಡತೊಡಗಿದ್ದಾರೆ ? ಪಟ್ಟಣದ ಸ್ಟೇಷನ್ನನ್ನು ಯಾರು ಸುಟ್ಟರು?

ಏತಕ್ಕಾಗಿ ಸುಟ್ಟರು? ಅಂಚೆಯ ಚೀಲಗಳನ್ನು ಯಾರು ಕಸಿದುಕೊಳ್ಳು ತ್ತಿರುವರು? ತಂತಿಯನ್ನು ಯಾರು ಕಡಿಯುತ್ತಿರುವರು? ಇದರಿಂದ ಸರ ಕಾರಕ್ಕೆ ಯಾವ ಹಾನಿಯಾಗಬಹುದು? ಇವೆಲ್ಲ ವಿಚಾರಗಳನ್ನು ರಾಮಾ ಶಾಸ್ತ್ರಿಗಳು ಮಾಡತೊಡಗಿದಂತೆ, ವಾಸುದೇವನು ಇರುವದಾದರೂ ಎಲ್ಲಿ? ಎಂಬ ಭಾವವು ಬಲಿಯತೊಡಗಿತು.

ವಾಸುದೇವನು ಇರುವದಾದರೂ ಎಲ್ಲಿ?

೭

ವಾಸುದೇವನು ಇರುವದಾದರೂ ಎಲ್ಲಿ?

"ನನ್ನ ರೈತಬಾಂಧವರೆ! ದುಡಿಯುವವರು ನೀವು, ದುಡಿದು ಹಣ್ಣಾಗು ವವರು ನೀವು. ಆದರೆ ನಿಮ್ಮ ದುಡಿತದ ಫಲ ಮಾತ್ರ ಅನ್ಯರಿಗೆ, ಇದು ಯಾವ ನ್ಯಾಯ ಹೇಳಿರಿ. ಈ ಸರಕಾರವು ನಿಮ್ಮಿಂದ ಕರ ಮಾತ್ರ ವಸೂಲು ಮಾಡುತ್ತದೆ. ನಿಮ್ಮನ್ನು ಪೂರಾ ಅಲಕ್ಷಿಸುತ್ತದೆ. ನಿಮ್ಮ ರಕ್ತವನ್ನು ಹೀರು ತ್ತದೆ. ನಿಮ್ಮ ಎಲುಬು ತೊಗಲುಗಳನ್ನು ಸುಲಿಯುತ್ತದೆ. ಈ ಸುಲಿಗೆ ಯನ್ನು ನಿಲ್ಲಿಸುವ ಕಾಲವೀಗ ಬಂದಿದೆ. ಈ ಪರಕೀಯ ಆಡಳಿತವನ್ನು ಕಿತ್ತು ಒಗೆಯಬೇಕಾಗಿದೆ. ನೀವು ಯಾವ ಸರಕಾರಕ್ಕೆ ನಿಮ್ಮ ಬೆವರಿನಿಂದ ಹಣ ಸುರಿಯುತ್ತಿರುವಿರೋ ಆ ಸರಕಾರವನ್ನು ನಡೆಯಿಸುವವರು ರಾಕ್ಷಸ ರಾಗಿದ್ದಾರೆ. ಅವರು ನಿಮ್ಮ ಜನರ ತಲೆಯೊಡೆಯಹತ್ತಿದ್ದಾರೆ. ನಿಮ್ಮ ಮುಂದಾಳುಗಳನ್ನು ಜೇಲಿಗೆ ಕಳಿಸತೊಡಗಿದ್ದಾರೆ. ಇದನ್ನು ನೀವು ಸಹಿಸ ಬೇಕೆ? ನೀವು ಕೊಡುವ ಹಣದಿಂದ ಪುಷ್ಟರಾಗಿ ಅವರು ನಿಮ್ಮನ್ನೇ ಮುರಿದು ತಿನ್ನಹತ್ತಿದ್ದಾರೆ. ಇಂತಹ ಸರಕಾರಕ್ಕೆ ನೀವು ಕರವನ್ನು ಸಲ್ಲಿಸ ಬೇಡಿರಿ. ನಮ್ಮ ಸರಕಾರ ಬರುವದಿದೆ. ಆ ಸರಕಾರಕ್ಕೆ ಮಾತ್ರ ನೀವು ಕರ ಸಲ್ಲಿಸಿರಿ. ಗೌಡ ಕುಲಕರ್ಣಿಯರು ಈ ಆಡಳಿತದ ಕೈಗೊಂಬೆಗಳಾಗಿದ್ದಾರೆ. ಅವರು ನಮ್ಮವರಾದರೂ ದೇಶದ್ರೋಹಿಗಳಾಗಿದ್ದಾರೆ. ಅವರೊಡನೆ ಸಹ ಕರಿಸಬೇಡಿರಿ. ಅವರು ಒತ್ತಾಯದಿಂದ ಕರ ವಸೂಲು ಮಾಡಲು ಬಂದರೆ, ಸ್ಪಷ್ಟವಾಗಿ ಕೊಡುವದಿಲ್ಲವೆಂದು ಹೇಳಿರಿ. ಒತ್ತಾಯ ಇನ್ನೂ ಹೆಚ್ಚಾದರೆ ಅವರ ದಫ್ತರಗಳನ್ನೇ ಕಸಿದುಕೊಳ್ಳಿರಿ. ಆದರೆ ಅವರ ಮೇಲೆ ಯಾವ ಹಿಂಸೆಯನ್ನೂ ಮಾಡಬೇಡಿರಿ. ಅವರೂ ನಮ್ಮವರಾಗಿದ್ದಾರೆ. ಈ ಆಡಳಿತವನ್ನು ಕುಸಿಯುವದೇ ನಮ್ಮ ಗುರಿಯಾಗಿದೆ. ಸ್ವಾತಂತ್ರ್ಯಸಾಧನೆಗೆ

ಇದೇ ಸಾಧನವಾಗಿದೆ. ಈ ಕೋರ್ಟುಕಚೇರಿಗಳೆಲ್ಲ ಶೋಷಣೆಯ ತವರೂರು ಗಳಾಗಿವೆ. ಇವುಗಳ ವ್ಯವಹಾರವನ್ನು ನಾವು ಕೂಡಲೇ ಬಂದುಮಾಡ ಬೇಕಾಗಿದೆ. ಈ ಕಾರ್ಯದಲ್ಲಿ ನೀವು ನಮಗೆ ನೆರವಾಗಿರಿ. ದೇಶದ ಅನಂತ ಭಕ್ತರು ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡತೊಡಗಿದ್ದಾರೆ. ಇದು ಯಾರಿ ಗಾಗಿ? ನಿಮಗಾಗಿ, ಬಡವರ ಉದ್ಧಾರಕ್ಕಾಗಿ, ಸ್ವಾತಂತ್ರ್ಯಪ್ರಾಪ್ತಿಗಾಗಿ. ನನ್ನ ಮೇಲೆ ಗಂಡಾಂತರವನ್ನು ಹೊತ್ತುಕೊಂಡೇ ಜೈಲಿನಿಂದ ಪಾರಾಗಿ ಬಂದಿದ್ದೇನೆ. ನನ್ನನ್ನು ಹಿಡಿಯಲು ಪೋಲೀಸರೆಲ್ಲ ಹಾತೊರೆಯಹತ್ತಿದ್ದಾರೆ. ಅವರು ನನ್ನನ್ನು ಹಿಡಿಯಬಹುದು. ಪ್ರಸಂಗ ಬಂದರೆ ಅವರು ನನ್ನನ್ನು ಗಲ್ಲಿಗೂ ಏರಿಸಬಹುದು. ಆದರೆ ನನ್ನಂತಹ ಸಾವಿರ ಜನರು ಬದುಕಿ ಕೆಲಸ ಮಾಡುತ್ತಿದ್ದಾರೆ. ನೀವೆಲ್ಲ ಅವರಿಗೆ ಸಹಾಯ ಮಾಡಿದರೆ ಸ್ವಾತಂತ್ರ್ಯ ಪ್ರಾಪ್ತಿಯಾಗುವುದು. ಆ ಸ್ವಾತಂತ್ರ್ಯದ ಹಿರಿಮೆಯಲ್ಲಿ ನಿಮ್ಮ ಸುಖ ರೂಪ ಗೊಳ್ಳುವುದು ಈ ರಾಷ್ಟ್ರ ನಿಮ್ಮದಾಗಲಿ. ಪರಕೀಯರ ಆಡಳಿತವು ಕುಸಿದು ಬೀಳಲಿ" ಎಂದು ಗರ್ಜಿಸುತ್ತಾ ವಾಸುದೇವನು ಮಿಂಚಿನಂತೆ ಹಳ್ಳಿಹಳ್ಳಿ ಗಳಲ್ಲಿ ಅಲೆಯತೊಡಗಿದ್ದಾನೆ. ಬಡಿಗೇರ ಗೋವಿಂದನೂ, ಮುಜಾವರ ಖಾದ ರನೂ ಅವನ ಕೈವಾರಿಗಳಾಗಿದ್ದಾರೆ. ಈ ಅಲೆಯುವ ಕೆಲಸವನ್ನು ಅವನು ಎಚ್ಚರಿಕೆಯಿಂದಲೇ ಮಾಡಬೇಕಾಗಿದೆ. ಅವನ ಶೋಧನೆಗಾಗಿ ಪೋಲೀಸರು ಹುಚ್ಚೆದ್ದು ಹರಿಯತೊಡಗಿದ್ದಾರೆ. ಅವರ ಕಣ್ಣುತಪ್ಪಿಸಲು ಅವನು ಅನೇಕ ವೇಷಾಂತರ ಮಾಡಿಕೊಳ್ಳುತ್ತಾನೆ. ಭಿಕ್ಷುಕನಾಗುತ್ತಾನೆ. ಒಮ್ಮೊಮ್ಮೆ ಹೆಂಗಸೂ ಆಗುತ್ತಾನೆ.

ಅವರ ಪರಿಶ್ರಮದಿಂದ ಹಳ್ಳಿಗಳಲ್ಲಿ ಜಾಗ್ರತವಾಗಿಬಿಟ್ಟಿದೆ. ಅವನನ್ನು ಕಾಯಲು ಅವು ದಕ್ಷವಾಗಿಬಿಟ್ಟಿವೆ. ಅಂಚೆಯ ಚೀಲವನ್ನು ಕಸಿದುಕೊಳ್ಳು ವಾಗ, ಪಟ್ಟಣದ ನಿಲ್ದಾಣಕ್ಕೆ ಬೆಂಕಿ ಹಚ್ಚುವಾಗ, ತಾರಿನ ಕಂಬಗಳನ್ನು ನೆಲಕ್ಕೆ ಒರಗಿಸಿ ತಂತಿಗಳನ್ನು ಕಡಿಯುವಾಗ ಈ ಜನ ಬಹಳ ಜಾಗರೂಕತೆ ಯಿಂದ ಇವನೊಡನೆ ಕೆಲಸಮಾಡತೊಡಗಿದೆ. ಹಳ್ಳಿಯ ಕುಲಕರ್ಣಿಗಳ ದಪ್ತರುಗಳೆಲ್ಲ ಈಗಾಗಲೇ ವಾಸುದೇವನ ವಶದಲ್ಲಿ ಭದ್ರವಾಗಿ ಬಂದು ಕುಳಿತುಬಿಟ್ಟಿದೆ. ಈ ಕಾರ್ಯವನ್ನು ಮಾಡುವವನು ವಾಸುದೇವನೊಬ್ಬನೇ ಅಲ್ಲ. ದೇಶದ ಹಳ್ಳಿಹಳ್ಳಿಯಲ್ಲಿಯೂ ಈ ಕಾರ್ಯ ಎಡೆಬಿಡದೆ ಸಾಗತೊಡ ಗಿದೆ. ಜನರ ಉತ್ಸಾಹಕ್ಕೆ ಮಿತಿ ಇಲ್ಲ. ಅವರ ಸಹಾನುಭೂತಿಗೆ ಅಳತೆಯಿಲ್ಲ.

ಹಳ್ಳಿಗಳಲ್ಲೆಲ್ಲ ವಾಸುದೇವನ ಹಾವಳಿಯು ಹೆಚ್ಚಾಗತೊಡಗಿದಂತೆ ಪೋಲೀಸರ ದಬ್ಬಾಳಿಕೆಯೂ ಮಿತಿಮೀರತೊಡಗಿತು. ಅವನ ಶೋಧನೆಗಾಗಿ

ಅವರು ಹಗಲುರಾತ್ರಿ ತಿರುಗತೊಡಗಿದರು. ಮಧ್ಯರಾತ್ರಿಯಲ್ಲಿ ಮನೆಮನೆಗಳನ್ನು ನುಗ್ಗಿ ತೊಂದರೆ ಕೊಡಹತ್ತಿದರು. ಬೆದರಿಸುವುದೂ, ಬಡೆಯುವುದೂ ನಿತ್ಯಕ್ರಮವಾಗಿಬಿಟ್ಟಿತು. ಆದರೆ ಏನು ಮಾಡಿದರೂ ಅವರಿಗೆ ವಾಸುದೇವನ ಸುಳಿವೇ ಹತ್ತದಾಯಿತು. ಅವರು ಹತಾಶರಾಗತೊಡಗಿದರು. ಅವರಿಗೆ ಮೇಲಧಿಕಾರಿಗಳ ಒದೆಗಳನ್ನು ತಿನ್ನುವುದು ಸಾಕುಸಾಕಾಗಿಬಿಟ್ಟಿತು. ವಾಸುದೇವನನ್ನು ಹೇಗೆ ಶೋಧಿಸಬೇಕೆಂಬುದು ಸಮಸ್ಯೆಯಾಗಿಬಿಟ್ಟಿತು. ವಾಸುದೇವನು ಪೋಲೀಸರ ಪಾಲಿಗೆ 'ಕನಸಿನ ಭೂತ'ವಾಗಿಬಿಟ್ಟನು.

ಪರಿಸ್ಥಿತಿಯನ್ನು ಪ್ರತ್ಯಕ್ಷಪರಿಚಯ ಮಾಡಿಕೊಳ್ಳಲು ಯೂರೋಪಿಯನ್ ಪೋಲೀಸ ಅಧಿಕಾರಿಯು ಗಂಗನಹಳ್ಳಿಯಲ್ಲಿಯೇ ತನ್ನ ಬಿಡಾರ ಹೂಡಿದನು. ಪೋಲೀಸರ ಹೆಚ್ಚಿನ ಪಡೆಯೂ, ಗುಪ್ತಪೋಲೀಸರ ತಂಡವೂ ಅವರಿಗೆ ಸಹಾಯಕವಾಗಿ ಗಂಗನಹಳ್ಳಿಯ ಚಾವಡಿಯಲ್ಲಿ ನೆಲೆಯೂರಿಬಿಟ್ಟಿತು.

ಅಮಾವಾಸ್ಯೆಯ ಕತ್ತಲು ದಟ್ಟವಾಗಿ ಬಿದ್ದಿತ್ತು. ಆಕಾಶದಲ್ಲಿ ಮೋಡಗಳು ಅವಿತಿದ್ದುದರಿಂದ ಆ ಕತ್ತಲು ಇನ್ನೂ ಭಯಾನಕವಾಗಿತ್ತು. ಗಂಗನಹಳ್ಳಿಯ ಜನವೆಲ್ಲ ಆ ಮಧ್ಯರಾತ್ರಿಯಲ್ಲಿ ಗೊರಕೆ ಹೊಡೆಯುತ್ತಿತ್ತು. ಗೌಡರೊಬ್ಬರು ಮಾತ್ರ ಕುಲಕರ್ಣಿಯೊಂದಿಗೆ ತಮ್ಮ ಮನೆಯಲ್ಲಿ ಆಲೋಚನಾಪರರಾಗಿ ದೀಪದ ಬೆಳಕಿನಲ್ಲಿ ನಿಟ್ಟುಸಿರು ಬಿಡುತ್ತ ಕುಳಿತಿದ್ದರು. ಸಂಜೆಯ ಮುಂದೆಯೇ ಕುಲಕರ್ಣಿ ತನ್ನ ದಪ್ತರುಗಳನ್ನೆಲ್ಲ ಗೌಡರ ಮನೆಗೆ ಸಾಗಿಸಿಬಿಟ್ಟಿದ್ದನು. ಗೌಡರ ಮನೆಯಲ್ಲಿರುವ ಕಬ್ಬಿಣದ ಪೆಟ್ಟಿಗೆಯೇ ಅವಕ್ಕೆ ಸುರಕ್ಷಿತವಾದ ಸ್ಥಳವೆಂದು ಈ ನಿರ್ಣಯವನ್ನು ಕೈಕೊಳ್ಳಲಾಗಿತ್ತು. ಸುತ್ತಲಿನ ಹಳ್ಳಿಗಳಲ್ಲಿಯ ಗೌಡ ಕುಲಕರ್ಣಿಗಳ ಅವಸ್ಥೆಗಳನ್ನು ಕೇಳಿದ ಸುದ್ದಿಯೇ ಈ ದಿನ ಅವರ ಚಿಂತೆಗೆ ಕಾರಣವಾಗಿತ್ತು. ಅಲ್ಲದೆ ವಾಸುದೇವನ ಭೀತಿಯಂತೂ ಅವರಿಗೆ ಮೊದಲಿನಿಂದಲೂ ಇತ್ತು. ಒಂದಲ್ಲ ಒಂದು ದಿನ ಅವನು ತಮ್ಮನ್ನು ಪೇಚಿನಲ್ಲಿ ಹಾಕಬಹುದೆಂದು ಅವರಿಗೆ ಮನವರಿಕೆಯಾಗಿತ್ತು. ಆದರೂ ಈ ಹಳ್ಳಿಯಲ್ಲಿ ಪೋಲೀಸ ಬೀಡಾರವಿದ್ದುದರಿಂದ ಅವರು ತಕ್ಕಮಟ್ಟಿಗೆ ನೆಮ್ಮದಿಯಿಂದಲೇ ಇದ್ದರು.

ಕಚೇರಿಯಲ್ಲಿ ಹನ್ನೆರಡು ಗಂಟೆಗಳನ್ನು ಬಾರಿಸಿದ ಸದ್ದಾಯಿತು. ಯೂರೋಪಿಯನ್ ಸಾಹೇಬರು ಇಳಿದ ಸ್ಥಳವೇ ಸದ್ಯಕ್ಕೆ ಹಳ್ಳಿಯ ಕಚೇರಿಯಾದ್ದರಿಂದ ಅಲ್ಲಿ ಪಹರೆಯ ವ್ಯವಸ್ಥೆಯಾಗಿದ್ದಿತು. ತಾಸುತಾಸಿಗೆ ಘಂಟೆ

ಬಾರಿಸಲು ವ್ಯವಸ್ಥೆ ಮಾಡಲಾಗಿತ್ತು. ಈ ಘಂಟೆಯನ್ನು ಕೇಳಿ ಕುಲಕರ್ಣಿಯು ಮನೆಗೆ ಹೋಗುವ ಸಿದ್ಧತೆ ಮಾಡತೊಡಗಿದನು. ಆ ವೇಳೆಯಲ್ಲಿ ಹಳಬರ ಹನುಮನು ಅಕಸ್ಮಾತ್ತಾಗಿ ಬಂದು ಮುಜುರೆ ಮಾಡಿ "ಪೋಲೀಸರೊಡನೆ ಫೌಜದಾರ ಸಾಹೇಬರು ಬರುತ್ತಿದ್ದಾರೆ. ಈ ಫೌಜದಾರರು ಹೊಸಬರಂತೆ ಕಾಣುತ್ತಾರೆ" ಎಂದು ಹೇಳಲು ಗೌಡರು ಅವರನ್ನು ಕರೆತರಲು ಬಾಗಿಲಕಡೆಗೆ ಧಾವಿಸಿದರು. ಬಾಗಿಲಲ್ಲಿ ಖಾಕಿ ವಸ್ತ್ರಧಾರಿಗಳಾಗಿ ಬಂದೂಕು ಹೊತ್ತು ಕೊಂಡು ನಾಲ್ವರು ಪೊಲೀಸರು ದಕ್ಷತೆಯಲ್ಲಿ ನಿಂತಿದ್ದರು. ಅವರ ಬಳಿಯಲ್ಲಿ ಫೌಜದಾರರು ಕೈಯಲ್ಲಿ ಪಿಸ್ತೂಲನ್ನು ಹಿಡಿದುಕೊಂಡು ನಿಂತಿದ್ದರು. ಗೌಡರು ಫೌಜದಾರರನ್ನು ನೋಡಿ ಭಯಭಕ್ತಿಯಿಂದ ಮುಜುರೆ ಮಾಡಿ "ಒಳಗೆ ಬರಬೇಕು ಸಾಹೇಬರೇ" ಎಂದು ಹಲ್ಲು ಕಿರಿದರು.

"ಈಗ ಸಮಯವಿಲ್ಲ. ನನಗೆ ನಮ್ಮ ಸಾಹೇಬರ ಆಜ್ಞೆಯಾಗಿದೆ. ಈಗಲೇ ನಿಮ್ಮ ದಪ್ತರುಗಳನ್ನೆಲ್ಲ ಕಚೇರಿಗೆ ಸಾಗಿಸಿರಿ. ಕುಲಕರ್ಣಿಯನ್ನೂ ಕರೆಸಿರಿ," ಫೌಜದಾರರು ಆಜ್ಞೆಯ ದನಿಯಲ್ಲಿ ಹೇಳಿದರು.

"ಕುಲಕರ್ಣಿಯವರೂ ಒಳಗಿದ್ದಾರೆ. ಅವರ ದಪ್ತರಗಳೂ ಇಲ್ಲಿಯೇ ಇವೆ" ಎಂದು ಗೌಡನು ಭಾರವಿಳಿದಂತೆ ಉಸುರು ಹಾಕಿದನು.

"ಬಹಳ ಒಳ್ಳೆಯದಾಯಿತು. ಈಗಲೇ ತನ್ನಿರಿ. ಆ ವಾಸುದೇವನ ಹಾವಳಿ ಹೆಚ್ಚಾಗಿಬಿಟ್ಟದೆ. ಸಾಹೇಬರ 'ಕ್ಯಾಂಪ್' ಇಲ್ಲಿದ್ದಾಗಲೇ ಏನಾದರೂ ಆದರೆ ಅನರ್ಥವಾದೀತು. ಅದರಿಂದ ನಮ್ಮ ನಿಮ್ಮ ನೌಕರಿಯ ಮೇಲೂ ಗದೆ ಬಂದೀತು." ಫೌಜದಾರರು ಗೌಡನನ್ನು ನೋಡಿದರು.

"ಆದರೆ ಸಾಹೇಬರ........"

"ದಪ್ತರಗಳನ್ನು ಕೂಡಲೇ ಹೊರಗೆ ತನ್ನಿರಿ. ನಾಲ್ಕು ಜನಬಂದೂಕಿನ ಸಿಪಾಯಿಗಳಿದ್ದಾರೆ. ನನ್ನ ಬಳಿಗೆ ಗಂಗನಹಳ್ಳಿಯನ್ನೇ ಸುಡುವಂಥ ರಿವ್ಹಾಲ್ವರ ಸಜ್ಜಾಗಿದೆ. ಭಯಪಡುವ ಕಾರಣವಿಲ್ಲ."

ಗೌಡರು ಪಿಟ್ಟೆನ್ನದೆ ಹಳಬರ ಹನುಮನಿಗೆ ಹಿಂಬಾಲಿಸಲು ಹೇಳಿದರು. ಹನುಮನು ಆಜ್ಞಾನುವರ್ತಿಯಾಗಿ ಗೌಡರೊಡನೆ ಹೋಗಿ ಕಾಗದ ಪತ್ರಗಳ ಮೂರು ದೊಡ್ಡ ಗಂಟುಗಳನ್ನು ಹೊತ್ತುಕೊಂಡು ಹೊರಬಂದನು. ಕೂಡಲೇ ಫೌಜದಾರರು ಹನುಮನ ಸುತ್ತಲೂ ಪೋಲೀಸರಿಗೆ ನಿಲ್ಲಲು ಹೇಳಿ ಗೌಡರಿಗೆ ನಾಳಿನದಿನ ಬಂದು ಚಾವಡಿಯಲ್ಲಿ ಭೆಟ್ಟಿಯಾಗಲು ಹೇಳಿ ಹೊರಟುಬಿಟ್ಟರು.

"ಸಾಹೇಬರೇ! ದಪ್ತರಿನ ಕೆಲಸ. ನಾನು ನಿಮ್ಮೊಡನೆ ಕಚೇರಿಯ

ವರೆಗೆ ಬಂದು ಹೋದರೆ ಒಳಿತಲ್ಲವೇ?" ಗೌಡನು ಕೇಳಿದನು.

"ಅವಶ್ಯವಿಲ್ಲ. ಈ ಹಳಬನು ಬಂದು ನಿಮಗೆ ಸುದ್ದಿ ಮುಟ್ಟಿಸುವನು" ಎಂದು ದರ್ಪದಿಂದಲೇ ಹೇಳಿ ಫೌಜದಾರರು ಆ ಪೋಲೀಸರಿಗೆ "ನೀವು ಕೂಡಲೇ ಹೊರಡಿರಿ. ನಾನು ಗಸ್ತೀ ಸಿಪಾಯರ 'ಚೆಕ್ಕು' ಮಾಡಿ ಈಗಲೇ ಬರುವೆ" ಎಂದು ಇನ್ನೊಂದು ಮಾರ್ಗವನ್ನು ಹಿಡಿದುಬಿಟ್ಟರು. ಪೋಲೀಸರು ಆ ದಪ್ತರಗಳ ಗಂಟುಗಳೊಂದಿಗೆ ಕಚೇರಿಯ ಮಾರ್ಗವನ್ನು ಹಿಡಿದರು.

ತಲೆಯ ಮೇಲಿನ ಬಹು ದೊಡ್ಡ ಭಾರವಿಳಿದ ಹರುಷದಲ್ಲಿ ಗೌಡರು ಬಾಗಿಲನ್ನು ಇಕ್ಕಿಕೊಂಡರು.

ಫೌಜದಾರರು ಇನ್ನೊಂದು ಮಾರ್ಗದಿಂದ ಸಾಗಿ ಬೇರೊಂದು ಸಂದಿಯಲ್ಲಿ ಹೊರಳುವ ಹೊತ್ತಿಗೆ ಪೋಲೀಸರ ಗಸ್ತೀ ದಳವೊಂದು ಬಂದಿತು. ಅವರು 'ಟಾರ್ಚ'ದ ಬೆಳಕಿನಲ್ಲಿ ಫೌಜದಾರರನ್ನು ಕಂಡು ದಕ್ಷರಾದರು. ಫೌಜದಾರರು ಅವರ ಸನಿಯಕ್ಕೆ ಹೋಗಿ 'ದೀಪವನ್ನಾರಿಸು' ಎಂದು ಗದ್ದರಿಸಿದ ಕೂಡಲೇ ಬೆಳಕು ಮಾಯವಾಯಿತು. ಅವರು ಆ ಕತ್ತಲಲ್ಲಿಯೇ "ಕತ್ತೆಗಳೆ! ಸಿಗರೇಟನ್ನು ಸೇದುತ್ತ ಸಿಳ್ಳು ಹಾಕುತ್ತ ಈ ಸಂದಿಗಳಲ್ಲಿ ತಿರುಗಾಡುವದಕ್ಕೆ 'ಗಸ್ತಿ' ಎನ್ನುತ್ತಾರೆಯೇ? ಈ ಹಳ್ಳಿಯ ಹೊರಗಿನ ಅಂಚಿನ ಸುತ್ತಲೂ ಪಹರೆ ಮಾಡ ಹೋಗಿರಿ. ಈ ಸಂದಿಗೊಂದಿಗಳಲ್ಲಿ ತಿರುಗಾಡಲಿಕ್ಕೆ ವಾಸುದೇವನೇನು ತುಡುಗ ಬೆಕ್ಕೆ? ಹೂಂ. ಕೂಡಲೇ ಹೊರಡಿರಿ" ಎಂದು ಗರ್ಜಿಸಿದ ಕೂಡಲೇ ಆ ಪೋಲೀಸ ಪಡೆಯು ಹಳ್ಳಿಯ ಹೊರಮಗ್ಗಲು ಪಹರೆ ಮಾಡಲು ಹೊರಟುಹೋಯಿತು.

ಫೌಜದಾರರು ಮುಗುಳುನಗೆಯಿಂದ ಮುಂದೆ ಸಾಗಿ ರಾಮಾಶಾಸ್ತ್ರಿಗಳ ಮನೆಯ ತಲೆಬಾಗಿಲನ್ನು ಬಡಿಯತೊಡಗಿದರು.

"ಯಾರು?" ರಾಮಾಶಾಸ್ತ್ರಿಗಳ ದನಿ.

"ಬಾಗಿಲು ತೆರೆಯಿರಿ."

ರಾಮಾಶಾಸ್ತ್ರಿಗಳ ದನಿಗೆ ಎಚ್ಚತ್ತ ಸೀತಮ್ಮನವರು ದೀಪ ದೊಡ್ಡದು ಮಾಡಿದರು.

"ಯಾರೋ ಬಾಗಿಲು ಬಡಿಯಹತ್ತಿದ್ದಾರೆ."

"ಇದು ನಿಮ್ಮ ಭ್ರಮೆಯಾಗಿರಬೇಕು. ಈ ಅಪರಾತ್ರಿಯಲ್ಲಿ ಯಾರು ಬಾಗಿಲು ಬಡಿದಾರು?" ಎಂದು ಸೀತಮ್ಮನವರು ಅನ್ನುವ ಹೊತ್ತಿಗೆ ಮತ್ತೆ ಬಾಗಿಲ ಸಪ್ಪಳಾಯಿತು.

"ಅಪ್ಪಾ!"

"ಹಾಂ" ಎನ್ನುತ್ತ ರಾಮಾಶಾಸ್ತ್ರಿಗಳು ಚಂಗನೆ ನೆಗೆದು ಬಾಗಿಲ ತೆಗೆದಾಗ ಪೋಲೀಸ ಅಧಿಕಾರಿಯೊಬ್ಬನು ನಿಂತಿದ್ದನ್ನು ನೋಡಿ ಗಾಬರಿಯಾದರು. ಆ ಅಧಿಕಾರಿಯು ಸರ್ರನೇ ಒಳಗೆ ಬಂದು ಬಾಗಿಲ ಹಾಕಿ

"ಗುರುತು ಹತ್ತಲಿಲ್ಲವೆ ?" ಎಂದು ಖೊಳ್ಳನೆ ನಕ್ಕನು.

"ವಾಸೂ" ಎಂದು ಸೀತಮ್ಮನವರು ಅನ್ನುತ್ತಿರುವಾಗಲೇ ಅಧಿಕಾರಿಯು ಅವರ ಬಾಯನ್ನು ಮುಚ್ಚಿ,

"ಒಳಗೆ ನಡೆ ಅವ್ವಾ! ನನಗೆ ಹಸಿವೆಯಾಗಿದೆ. ಮೊದಲು ಏನಾದರೂ ತಿನ್ನಲಿಕ್ಕೆ ಕೊಡು" ಎಂದನು.

ಸೀತಮ್ಮ ಕೂಡಲೇ ಒಂದು ಬೋಗೋಣಿಯಲ್ಲಿ ಮೊಸರು ಅವಲಕ್ಕಿ ಕಲಸಿ ತಂದರು. ಒಂದು ಚೊಂಬಿನಲ್ಲಿ 'ರಾಯರಬಾವಿ'ಯ ಸವಿನೀರನ್ನೂ ತುಂಬಿ ಅದನ್ನು ಮಗನ ಮುಂದೆ ಇರಿಸಿ,

"ಅಲ್ಲೋ ವಾಸೂ! ನಿನ್ನನ್ನು ಹಿಡಿಯಲು ಪೋಲೀಸ ದಳವೇ ಇಲ್ಲಿ ಕಾದು ನಿಂತಿರುವಾಗ ನೀನು ಹೀಗೆ ಜೀವವನ್ನು ಗಂಡಾಂತರದಲ್ಲಿ ನೂಕಬಹುದೆ? ನೀನು ಇಲ್ಲಿಗೇಕೆ ಬಂದೆ ಹೇಳು." ಎಂದು ಆ ತಾಯಿ ಗಾಬರಿಯಿಂದ ಕೇಳಿದಳು.

"ಜೀವ ನೆನೆಸಿತು ಅವ್ವಾ! ಈ ಪೋಲೀಸರ ಕಣ್ಣಿಗೆ ಇಂಗು ಹಚ್ಚುವುದು ಸುಲಭವಾದ ಕೆಲಸ. ಅವರು ಯಂತ್ರದ ಗೊಂಬೆಗಳಿದ್ದಂತೆ. ಸಜೀವ ಚೇತನರನ್ನು ಅವರು ಕೆಣಕಲಾರರು."

ಮಗನ ಮಾತುಗಳನ್ನು ಕೇಳಿ ಸೀತಮ್ಮನವರ ಕಣ್ಣು ತುಂಬಿದವು. "ಅದೇನೇ ಇದ್ದರೂ ನೀನು ಬಹಳ ಹುಷಾರಾಗಿರಬೇಕು ವಾಸೂ! ನಿನಗೆ ಸುತ್ತಲೂ ವೈರಿಗಳಿದ್ದಾರೆ. ನೀನು ಇಲ್ಲಿ ಈಗ ಸಮಯ ಕಳೆಯಬೇಡ. ಭೆಟ್ಟಿಯಾದೆಯಲ್ಲ, ಇನ್ನು ಹೋಗಿಬಿಡು. ನಿನ್ನ ಕಾರ್ಯಕ್ಕಾಗಿ ನನಗೆ ಅಭಿಮಾನವಿದೆ. ಬೇಗನೆ ಹೋಗಿಬಿಡು ಮಾರಾಯ!" ರಾಮಾಶಾಸ್ತ್ರಿಗಳು ಹೊಣೆಯರಿತು ಹೇಳಿದರು. ಗಂಗನಹಳ್ಳಿಯಲ್ಲಿ ಅದೆಂತಹ ಗಂಡಾಂತರವಿದೆ ಮಗನಿಗೆ ಎಂಬುದು ಅವರಿಗೆ ತಿಳಿದ ಮಾತಾಗಿತ್ತು.

"ನಿಮ್ಮ ಆಶೀರ್ವಾದದಿಂದ ನನ್ನ ಕೂದಲು ಎಳೆಗೂ ಧಕ್ಕೆಯಾಗುವದಿಲ್ಲ ತಾತ್ಯಾ! ನೀವು ಚಿಂತಿಸಬೇಡಿರಿ."

"ಈ ಮಾತು ನನಗೆ ಸುಂದರಾನ ತಂದೆಯಿಂದ ಗೊತ್ತಾಗಿದೆ, ವಾಸೂ! ಅವರಿಂದ ನಿಮಗೆ ಬಹಳ ಸಹಾಯವಾಗುತ್ತಿರಬೇಕು ಅಲ್ಲವೆ?"

"ಅವರೊಬ್ಬರಿಂದಲ್ಲ ತಾತ್ಯಾ! ಅನೇಕ ಅಧಿಕಾರಿಗಳು ನಮಗೆ

ಗುಪ್ತವಾಗಿ ಸಹಾಯ ಸಲ್ಲಿಸುತ್ತಾರೆ. ಭೂಗತವಾಗಿರುವ ಅನೇಕ ಕಾರ್ಯಕರ್ತರು ಅಧಿಕಾರಿಗಳ ಆಶ್ರಯದಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಜಯದೇವನ ಮಾತಂತೂ ಬೇರೆಯೇ ಇದೆ. ಸುಂದರಾ ಅವನನ್ನು ಪ್ರೇಮಮಾಡುತ್ತಾಳೆ. ಅವನಿಗಾಗಿ ಎಲ್ಲ ದಕ್ಷತೆಯನ್ನೂ ವಹಿಸತೊಡಗಿದ್ದಾಳೆ. ಅವ್ವಾ! ಈ ಮಹಾಕಾರ್ಯ ಮುಗಿದ ಕೂಡಲೇ ನಿನಗೊಬ್ಬ ಸೊಸೆಯೂ ದೊರಕುತ್ತಾಳೆ" ಎಂದು ವಾಸುದೇವನು ಮುಗುಳುನಗೆ ತೇಲಿಸಿದನು.

"ಆ ದಿನ ಎಂದು ಬಂದೀತೋ ಬಾಳಾ! ನೀವೆಲ್ಲ ಎಂದು ಹಾಯಾಗಿ ನಿದ್ದೆ ಮಾಡುವಿರಿ? ನನ್ನ ಕರುಳು........"

"ಆ ದಿನ ಬೇಗನೇ ಬರಲಿದೆ. ಸ್ವಾತಂತ್ರ್ಯಸಾಧನೆಯೆಂದರೆ ಹೂವಿನ ಹಾಸಿಗೆಯಲ್ಲ ಅವ್ವಾ! ಎರಡನೆಯ ದೇಶದಲ್ಲಿ ಇದನ್ನು ಪಡೆಯಲು ರಕ್ತದ ಕಾಲುವೆ ಹರಿದಿದೆ. ನಾವು ಈ ತೊಂದರೆಯನ್ನು ಸಹಿಸಿಕೊಳ್ಳುವದೇನು ಹೆಚ್ಚಿನದು ಹೇಳು."

"ನೀವೆಲ್ಲ ಕ್ಷೇಮದಿಂದ ತಿರುಗಿ ಬನ್ನಿರಿ ಮಕ್ಕಳೆ! ದೇವರಲ್ಲಿ ಹಗಲಿರುಳೂ ಸಲ್ಲಿಸುವ ಪ್ರಾರ್ಥನೆ ನನ್ನದಿದು."

"ನಮಗೇನೂ ಆಗುವದಿಲ್ಲ. ಹಬ್ಬಿದ ಬಳ್ಳಿ ಹೂ ಬಿಟ್ಟದೆ. ಒಂದು ಹೂ ಉದುರಿದರೆ ಆ ಬಳ್ಳಿಯ ಸಂಪತ್ತು ಕಡಿಮೆಯಾಗುವದಿಲ್ಲ."

"ಹುಚ್ಚಪ್ಪ! ಇಂತಹ ಅಮಂಗಳ ನುಡಿಯಬಾರದು. ಎಲ್ಲ ಹೂವುಗಳೂ ಅರಳಬೇಕು ಅಂದರೆ ಆ ಬಳ್ಳಿಗೆ ಚೆಂದ."

"ನಿನ್ನ ಹೊಟ್ಟೆಯ ಪುಣ್ಯದಿಂದ ನಿನ್ನ ಹೂಗಳು ಈಗಾಗಲೇ ಅರಳಿನಿಂತಿರುವವು ಅವ್ವಾ! ಸ್ವಾತಂತ್ರ್ಯದ ಧ್ವಜವನ್ನು ಹಾರಿಸಲು ನಾವು ಪಣತೊಟ್ಟಿರುವೆವು. ಆ ವೀರ ಬಾವುಟವನ್ನು ಹಿಡಿದುಕೊಂಡು ನಿನ್ನ ಪಾದಕ್ಕೆ ಮಣಿಯುವೆವು. ಇನ್ನು ಹೆಚ್ಚು ಮಾತು ಬೆಳೆಸುವದು ಬೇಡ. ನಾಳೆ ನಾಡದು ಯಾರಾದರೂ ಬಂದು 'ವಾಸುದೇವಾಯನಮಃ' ಎಂದರೆ ಅವರ ಉಡಿಯಲ್ಲಿ ಬಕ್ಕರಿಗಳನ್ನಷ್ಟು ಹಾಕು. ಕಾಯಿಪಲ್ಲೆಗಳನ್ನು ತುಂಬು. ಆ ಜನ ನಾಲ್ಕೆಂಟು ಸಲ ಬರಬಹುದು. ಬೇರೆ ಬೇರೆ ವೇಷದಲ್ಲಿ ಬರಬಹುದು. ನಿನ್ನ ಪಾತ್ರೆ ಸದಾ ಸಿದ್ಧವಾಗಿರಲಿ. ನಾವೆಲ್ಲ ಇಲ್ಲಿಯೇ ಸುಳಿಯುತ್ತಿರುತ್ತೇವೆ" ಎಂದು ವಾಸುದೇವನು ಅನ್ನಲು,

"ಸಾವಿರ ರೊಟ್ಟಿಗಳನ್ನಾದರೂ ಬಡಿಯುತ್ತೇನೆ ನನ್ನ ಕಂದ! ನೀನು ಮಾತ್ರ ಗಂಡಾಂತರದಲ್ಲಿ ಮುನ್ನುಗ್ಗಬೇಡ."

"ಆಗಲಿ. ನಾನು ಹೊರಡುತ್ತೇನೆ. ನಾಳೆ ಬೆಳಗಾಗುವದರೊಳಗೆ ನೀವು ವಿಚಿತ್ರ ಸಮಾಚಾರ ಕೇಳುವಿರಿ. ನಿಮ್ಮನ್ನು ಪೋಲೀಸರು ಹಿಡಿಸಬಹುದು. ಅವರ ಮುಂದೆ ನೀವು ನನ್ನನ್ನು ದ್ವೇಷಿಸುವ ನಟನೆ ಮಾಡಿರಿ. ಹೋಗಿಬರುತ್ತೇನೆ." ಎಂದು ಫೌಜದಾರ ಸಾಹೇಬರು ತಾಯಿಯ ಕಾಲಿಗೆ ಬಿದ್ದರು.

ಸೀತಮ್ಮನವರು ಕಣ್ಣೊರಸಿಕೊಂಡು ಮಗನನ್ನು ಬೀಳ್ಕೊಟ್ಟರು. ರಾಮಾಶಾಸ್ತ್ರಿಗಳು ಅವನ ಬೆನ್ನು ಚಪ್ಪರಿಸಿದರು.

ಈ ದಂಪತಿಗಳು ನೋಡುತ್ತಿದ್ದಂತೆಯೇ ವಾಸುದೇವನು ಆ ಕರಾಳವಾದ ಕತ್ತಲೆಯಲ್ಲಿ ಮಾಯವಾಗಿಬಿಟ್ಟನು.

ಮನೆಯಿಂದ ಹೊರಬಿದ್ದ ವಾಸುದೇವನು ನೇರವಾಗಿ ಚಾವಡಿಯ ಕಡೆಗೆ ಹೊರಟನು. ಅಲ್ಲಿ ಪಹರೆಯವನೊಬ್ಬನು ಬಾಗಿಲ ಹತ್ತಿರ ಅತ್ತಿತ್ತ ಎಡೆಯಾಡುತ್ತ ಕಾವಲು ಮಾಡುತ್ತಿದ್ದನು. ಸನಿಯಕ್ಕೆ ಬರುತ್ತಲೇ ವಾಸುದೇವನು ಒಳ್ಳೇ ರಭಸದಿಂದ ಓಡುತ್ತಹೋಗಿ 'ಯಾರಲ್ಲಿ? ಪೋಲೀಸ್! ಕೂಡಲೇ 'ಬ್ಯೂಗಿಲ್ಲ'ನ್ನು ಊದಿ ಎಲ್ಲರನ್ನೂ ಎಚ್ಚರಿಸು. ವಾಸುದೇವನ ತಂಡವು ಗೌಡರ ಮನೆಗೆ ಮುತ್ತಿಗೆ ಹಾಕಿದೆ. ಹೂಂ! ಬೇಗನೇ ಊದು" ಎಂದು ಜೋರಿನಿಂದಲೇ ಕೂಗಿದನು.

ಒಮ್ಮೆಲೆ ಆ ಕಾಳರಾತ್ರಿಯನ್ನು ಭೇದಿಸುವಂತೆ ಆ ತುತ್ತೂರಿಯ ಸಪ್ಪಳವು ಸುತ್ತಲೂ ಕೇಳಿಸತೊಡಗಿತು. ಮಲಗಿದ ಸಿಪಾಯಿಗಳು ಗಡಬಡಿಸಿ ಎದ್ದರು. 'ಬೇಗನೆ ಗೌಡರ ಮನೆಗೆ ಧಾವಿಸಿರಿ. ಅಲ್ಲಿ ಬೇಟೆ ಸಿಕ್ಕುಬಿಟ್ಟದೆ' ಎಂದು ಕೂಗುತ್ತ ಈ ಫೌಜದಾರರು ಅಲ್ಲಿ ನಿಲ್ಲದೆ ಗೌಡರ ಮನೆಯ ಕಡೆಗೆ ಎಂಬಂತೆ ಧಾವಿಸತೊಡಗಿದರು. ಕ್ಷಣಹೊತ್ತಿನಲ್ಲಿ ಭಾರವಾದ ಬೂಟುಗಳನ್ನು ತುಳಿಯುತ್ತ ಅನೇಕ ಸಿಪಾಯಿಗಳು ಗೌಡರ ಓಣಿಯಲ್ಲಿ ಓಡತೊಡಗಿದರು. ಅವರ ಬೂಟಿನ ಸಪ್ಪಳಕ್ಕೆ ರಾತ್ರಿಯೇ ನಡುಗತೊಡಗಿತು.

ಒಳಗಿನಿಂದಲೇ ಈ ಹೆಜ್ಜೆ ಸಪ್ಪಳವನ್ನು ಕೇಳತೊಡಗಿದ ರಾಮಾಶಾಸ್ತ್ರಿಗಳಿಗೆ ಹೇಗಿನ ಮಾತು ಹೇಗೋ ಎಂಬ ಸಂಶಯ ಬರತೊಡಗಿತು. ತುತ್ತೂರಿಯ ಸಪ್ಪಳವು ಅವರ ಮನಸ್ಸನ್ನು ಕದಡಿಬಿಟ್ಟಿತು.

"ವಾಸೂ ಸುರಕ್ಷಿತವಾಗಿ ಪಾರಾಗಿ ಹೋಗಿರಬಹುದಲ್ಲವೆ?" ಎಂದು ಸೀತಮ್ಮನವರು ಕಾತರದಿಂದ ಕೇಳಿದರು.

"ಅವನು ಸುರಕ್ಷಿತವಾಗಿ ಪಾರಾಗಿರಬಹುದು. ಆದರೆ ಈ ಗೊಂದಲದ ಅರ್ಥವೇನೆಂಬುದೇ ತಿಳಿಯದು." ಎಂದು ರಾಮಾಶಾಸ್ತ್ರಿಗಳು ಚಿಂತೆಯಿಂದಲೇ ಹೇಳಿದರು.

ಓಡಿ ಬಂದ ಪೋಲೀಸರು ಗೌಡರ ಹೆಬ್ಬಾಗಿಲ ಬಳಿ ನಿಂತಾಗ ಅಲ್ಲಿ ಎಲ್ಲವೂ ಶಾಂತವಿತ್ತು. ಅವರೊಡನೆ ಧಾವಿಸಿ ಬಂದ 'ಸ್ಪೆಷಲ್ ಡ್ಯೂಟಿ'ಯ ಫೌಜುದಾರರು ಪಿಸುಮಾತಿನಲ್ಲಿ ಪೋಲೀಸರಲ್ಲಿ ಕೆಲವರಿಗೆ ಗೌಡರ ಮನೆಯ ಸುತ್ತಲೂ ಹರವಿಕೊಳ್ಳಲು ಹೇಳಿ ತಾನು 'ರಿವ್ಹಾಲ್ವರ'ನ್ನು ಹಿಡಿದುಕೊಂಡು ತನ್ನ ಪಡೆಯೊಂದಿಗೆ ಹೆಬ್ಬಾಗಿಲ ಬಳಿ ಸಜ್ಜಾಗಿ ನಿಂತನು. ಗೌಡರ ಮನೆಯಿಂದ ಯಾವ ಶಬ್ದವೂ ಬಾರದ್ದರಿಂದ ಅವನೊಮ್ಮೆ 'ಗೌಡರೇ' ಎಂದು ಕೂಗಿದನು.

ಧುಡುಧುಡು ಹೆಜ್ಜೆ ಸಪ್ಪಳ ಮಾಡುತ್ತ ಧಾವಿಸಿ ಬಂದ ಗೌಡರು ಕದವನ್ನು ತೆಗೆದಾಗ ಅಲ್ಲಿ ನಿಂತ ಈ ಅಧಿಕಾರಿಯನ್ನು ನೋಡಿ ಮುಖದಲ್ಲಿ ಯಾವ ವಿಸ್ಮಯವನ್ನೂ ತೋರದೆ "ಹಳಬರ ಹನುಮನು ಬಂದು ಸುದ್ದಿ ಹೇಳುತ್ತಿರುವಾಗ ಮತ್ತೆ ತಾವೇ ಏಕೆ ಬಂದಿರಿ ಸಾಹೇಬರೆ!" ಎಂದರು.

"ಯಾವ ಸುದ್ದಿಯನ್ನು ಯಾವ ಹನುಮನಿಂದ ನೀವು ಅಪೇಕ್ಷಿಸುತ್ತಿದ್ದಿರಿ ಗೌಡರೇ!" ಫೌಜುದಾರರು ಸಂದೇಹದಿಂದ ಅಬ್ಬರಿಸಿದರು.

"ಇದನ್ನೇನು ಹೀಗೆ ಕೇಳುತ್ತಿರುವಿರಿ. ದಪ್ತರಗಳ ಗಂಟುಗಳನ್ನು ಇದೀಗ ನೀವೇ ಒಯ್ದಿರಲ್ಲವೆ?"

"ನಿಮ್ಮ ತಲೆ ಸಮನಾಗಿ ಇರುವಂತೆ ತೋರುವುದಿಲ್ಲ. ಇನ್ನೂ ನಿದ್ದೆಯಲ್ಲಿಯೇ ಮಾತಾಡುತ್ತಿರುವಂತೆ ಕಾಣುತ್ತಿದೆ. ನಿಮ್ಮ ಕಣ್ಣುಗಳನ್ನು ತಿಕ್ಕಿಕೊಂಡು ಸಮನಾಗಿ ನೋಡಿ ಹೇಳಿರಿ. ನಿಮ್ಮ ದಪ್ತರ ಗಂಟುಗಳನ್ನು ನಾನು ಒಯ್ದಿರುವೆನೆ?"

ಈ ಮಾತುಗಳನ್ನು ಕೇಳಿ ಗೌಡರ ಜಂಘಾಬಲವೇ ಕುಸಿದು ಬಿದ್ದಂತಾಯಿತು. ಅವರು ಗಾಬರಿಯ ದನಿಯಲ್ಲಿ,

"ಇದರಲ್ಲಿ ಏನೋ ಮೋಸವಾಗಿದೆ ಸಾಹೇಬರೆ! ಫೌಜುದಾರರ ವೇಷದಲ್ಲಿ ಯಾರೋ ನನ್ನನ್ನು ಮೋಸಗೊಳಿಸಿ ದಪ್ತರಗಳನ್ನು ಅಪಹರಿಸಿದ್ದಾರೆ. ನಮ್ಮ ಹಳಬರ ಹನುಮನನ್ನು ನಾನು ನಂಬಿದೆ."

"ಎಲ್ಲಿದ್ದಾನೆ ಆ ಹಳಬ?" ಫೌಜುದಾರರು ಗದರಿಸಿ ಕೇಳಿದರು.

"ಎಲ್ಲಿದ್ದಾನೆ ಆ ಹನುಮಾ?" ಗೌಡರು ಕೂಗಿಕೊಂಡರು.

ಹನುಮನು ಎಲ್ಲಿಯೂ ಇರಲಿಲ್ಲ.

ಅದೇ ವೇಳೆಗೆ ಬ್ಯೂಗಲ್ಲಿನ ಸಪ್ಪಳ ಕೇಳಿ ಗಂಗನಹಳ್ಳಿಯ ಹೊರವಲಯದಲ್ಲಿ ಗಸ್ತೀ ತಿರುಗುತ್ತಿದ್ದ ಪೋಲೀಸರು ಇಲ್ಲಿಗೆ ಧಾವಿಸಿ ಬಂದರು. ಅವರನ್ನು ನೋಡಿ ಅಧಿಕಾರಿಯೂ ಗದರಿಸುತ್ತ,

"ಇಲ್ಲಿ ಗಸ್ತೀ ತಿರುಗುವದನ್ನು ಬಿಟ್ಟು ನೀವೆಲ್ಲಿ ಹೋಗಿದ್ದಿರಿ ಕತ್ತೆಯ ಮರಿಗಳೇ !" ಎಂದು ಕೇಳಿದರು.

"ಹಳ್ಳಿಯ ಹೊರಗೆ 'ಡ್ಯೂಟಿ' ಮಾಡಲು ನಮ್ಮನ್ನು ಕಳಿಸಲಾಗಿತ್ತು" ವಿನಯದಿಂದ ಆ ತಂಡದ ಮುಖ್ಯಸ್ಥನು ಹೇಳಿ 'ಶೆಲ್ಯೂಟ್' ಮಾಡಿದನು.

"ಯಾರು ? ನಿಮ್ಮನ್ನು ಹೊರಗೆ ಕಳಿಸಿದವರು ಯಾರು ?"

"ಫೌಜದಾರ ಸಾಹೇಬರು."

"ಯಾವ ಫೌಜದಾರ ಸಾಹೇಬರು ? ಎಲ್ಲಿದ್ದಾರೆ ಆ ಸಾಹೇಬರು ?" ಪೋಲೀಸರು ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು.

"ದನಕಾಯುವ ನಿಮಗೆ ಬುದ್ಧಿಯಾದರೂ ಎಲ್ಲಿಂದ ಬಂದೀತು ? ಇದೆಲ್ಲ ಆ ವಾಸುದೇವನ ಮೋಸವೇ ಸರಿ. ಈ ಮೋಸವು ಪೋಲೀಸಸಾಹೇಬರು ಇಲ್ಲಿರುವಾಗಲೇ ನಡೆದುಹೋಯಿತು. ಭೋಗಿಸಿರಿ." ಎಂದು ಗದ್ದರಿಸುತ್ತಿರುವಾಗಲೇ ಪೋಲೀಸನೊಬ್ಬನು ಓಡಿಬಂದು,

"ಎಲ್ಲವೂ ಅನರ್ಥವಾಯಿತು. ಸಾಹೇಬರೆ ! ಪಹರೆಯ ಸಿಪಾಯಿಯನ್ನು ಕಟ್ಟಿಹಾಕಿ ಇದ್ದುಬಿದ್ದ ಬಂದೂಕುಗಳನ್ನು ಯಾರೋ ದೋಚಿಕೊಂಡು ಹೋಗಿದ್ದಾರೆ. ಅಗಸೆಯ ಬಾಗಿಲಲ್ಲಿ ಕಾವಲು ನಿಂತ ಪೋಲೀಸನೊಬ್ಬನು ಈ ಸುದ್ದಿಯನ್ನು ತಿಳಿಸಿದ್ದರಿಂದ ಚಾವಡಿಗೆ ಹೋಗಿ ನಿಜ ಸಂಗತಿಯನ್ನು ತಿಳಿದುಕೊಂಡು ಇತ್ತ ಬಂದೆ. ಪಹರೆಯವನು ಇನ್ನೂ ಅಲ್ಲಿಯೇ ಬಂಧಿತನಾಗಿ ಬಿದ್ದಿದ್ದಾನೆ" ಎಂದು ಒಂದೇ ಉಸುರಿನಲ್ಲಿ ಹೇಳಿದನು.

ಫೌಜದಾರರ ಪಿತ್ತವು ನೆತ್ತಿಗೇರಿತು. ಅವರು ಅವನನ್ನು ಅಲುಗಿಸುತ್ತ "ನಿನಗೆ ಸುದ್ದಿ ಕೊಟ್ಟ ಪೋಲೀಸನು ಎಲ್ಲಿದ್ದಾನೆ ?"

"ಅವನು........ಅವನು........"

ಫೌಜದಾರ ಸಾಹೇಬರು ಫಳೀರನೆ ಅವನ ಕೆನ್ನೆಗೊಂದು ಬಿಗಿದು "ಆ ಪೋಲೀಸನು ಪೋಲೀಸನಿರದೆ ವಾಸುದೇವನ ತಂಡದವನೆಂದು ನಿನಗೆ ತಿಳಿಯಬಾರದೆ ?" ಎಂದು ಗರ್ಜಿಸಿದರು. "ಹೋಗಿರಿ. ಈಗಲೇ ಶೋಧನೆಗೆ ತೊಡಗಿರಿ. ಹಲವರು ಸಿದ್ದೇಶ್ವರ ಕೊಳ್ಳದ ಕಡೆಗೆ ಓಡಿರಿ. ಬೇರೆ ಕೆಲವರು ಕೆರೆಯ ಆಚೆಗಿರುವ ಸುಡುಗಾಡು ಕಟ್ಟೆಯ ದಾರಿ ಹಿಡಿಯಿರಿ. ಮತ್ತೆ ಬೇರೆಯವರು ಆರುಯಾತದ ಬಾವಿಯ ಹಿಮ್ಮಗ್ಗಲು ಹಾದು ಹೋಗುತ್ತಿರುವ ದಾರಿಗುಂಟ ಓಡಿರಿ. ನೀವು ಅವರಲ್ಲಿ ಒಬ್ಬನನ್ನಾದರೂ ಬಂಧಿಸಿ ತರದಿದ್ದರೆ ನಿಮ್ಮ ನೌಕರಿಯನ್ನು ಕಳೆಮುಕೊಳ್ಳುವಿರಿ. ಹೋಗಿರಿ ಕತ್ತೆಗಳೆ !" ಎಂಬ

ಫೌಜದಾರರ ಹುಕುಮನ್ನು ಪಾಲಿಸಲು ಪೋಲೀಸರೆಲ್ಲ ಚದುರಿಬಿಟ್ಟರು.

ಆ ವೇಳೆಗೆ ಬೆಳ್ಳನೆ ಬೆಳಕಾಗಿಬಿಟ್ಟಿತು.

ಮರುದಿನ ಗಂಗನಹಳ್ಳಿಯಲ್ಲೆಲ್ಲ ಇದೇ ಸುದ್ದಿ. ಪ್ರತ್ಯಕ್ಷ ಯೂರೋಪಿಯನ್ ಸಾಹೇಬನ ಎದುರಿನಲ್ಲಿ ಮಾಡಿದ ಈ ಸಾಹಸಕಾರ್ಯವನ್ನು ಅವರು ತುಂಬಾ ಹೊಗಳತೊಡಗಿದರು. ವಾಸುದೇವನು ಪೋಲೀಸರ ಕಣ್ಣಿಗೆ ಇಂಗು ಹಚ್ಚಿ ಗೌಡರ ದಪ್ತರದ ಗಂಟನ್ನು ಕಸಿದುಕೊಂಡು ಹೋಗುವದಲ್ಲದೆ ಚಾವಡಿಯೊಳಗಿನ ಬಂದೂಕುಗಳನ್ನೂ ದೋಚಿಕೊಂಡು ಹೋದನೆಂಬ ಮಾತು ಎಲ್ಲರಲ್ಲಿಯೂ ಬೆರಗನ್ನೇ ಉಂಟುಮಾಡಿತು. ವಾಸುದೇವನ ಧೈರ್ಯ ಯುಕ್ತಿಗಳಿಂದ ಅವನ ಬಗ್ಗೆ ಜನರಲ್ಲಿ ಎಲ್ಲಿಲ್ಲದ ಆದರವು ಉಂಟಾಗಿಬಿಟ್ಟಿತು. ದೇಶದಲ್ಲಿ ನಡೆಯುತ್ತಿರುವ ಇಂತಹ ಕಾರ್ಯಗಳನ್ನು ಸಾಶಂಕರಾಗಿ ನೋಡುತ್ತಿರುವ ಜನರಿಗೆ ಈ ದೃಷ್ಟಾಂತವು ಕಣ್ಣು ತೆರೆಯಿಸಿತು. ಇಂತಹ ಮಹಾಶಕ್ತಿಯ ಎದುರು ಬಲಾಢ್ಯವೆಂದು ಕೊಚ್ಚಿಕೊಳ್ಳುವ ಸರಕಾರವು ಕುಸಿದುಬೀಳುವದರಲ್ಲಿ ಸಂದೇಹವಿಲ್ಲವೆಂದು ಅವರು ಮನಸಾ ತಿಳಿಯತೊಡಗಿದರು. ವಾಸುದೇವನನ್ನು ಅವರು ಗಂಗನಹಳ್ಳಿಯ ಅವತಾರ ಪುರುಷನೆಂದೇ ಬಗೆದರು.

ಮಗನ ಬಗ್ಗೆ ಜನರು ತೋರತೊಡಗಿದ ಗೌರವವನ್ನು ಕೇಳಿ ರಾಮಾಶಾಸ್ತ್ರಿಗಳಿಗೆ ಹೆಮ್ಮೆ ಎನಿಸಿದರೂ ಅವರ ಹೃದಯದ ಕಳವಳವು ಮಾತ್ರ ದ್ವಿಗುಣಿತವಾಗಿ ಹರಿಯತೊಡಗಿತು. ಈಗ ಆಗಿಹೋದ ಘಟನೆಯು ಸಾಮಾನ್ಯ ಘಟನೆಯಲ್ಲವೆಂದು ಅವರು ನಂಬಿದರು. ಇದೊಂದು ವಾಸುದೇವನು ಸರಕಾರಕ್ಕೆ ಕೊಟ್ಟ ಆಹ್ವಾನವೇ ಆಗಿದೆಯೆಂದು ಅವರು ಭಾವಿಸಿದಾಗ ಅವರಿಗೆ ಗಂಡಾಂತರದ ಅರಿವಾಗಿಬಿಟ್ಟಿತು. "ಇದರಿಂದ ಪೋಲೀಸರು ಕೆರಳಿದ್ದಾರೆ. ಈ ಕೆರಳಿಕೆ ಬೇಕಾದ ಅನರ್ಥವನ್ನೂ ಉಂಟುಮಾಡಬಹುದು. ಅವರು ಏನೆಲ್ಲವನ್ನೂ ಮಾಡಿ ವಾಸುದೇವನನ್ನು ಬಂಧಿಸಲು ಹೆಣಗುವರು. ಕಂಡಕಂಡವನನ್ನು ಕೆಣಕುವರು. ಸರಕಾರವು ಈ ಅವಮಾನವನ್ನು ಸಹಿಸಲಾರದು. ಅದರಲ್ಲಿಯೂ ಇದು ಯೂರೋಪಿಯನ್ ಸಾಹೇಬನ ಎದುರಿನಲ್ಲಿಯೇ ನಡೆದದ್ದರಿಂದ ಅವನ ಮೂಗನ್ನೇ ಕೊಯ್ದಂತಾಗಿರುವದು. ಅವನು ಈ ಅವಮಾನವನ್ನು ಹಗುರಾಗಿ ಕಾಣಲಾರ. ಪ್ರಸಂಗ ಬಂದರೆ ವಾಸುದೇವನನ್ನು........" ರಾಮಾಶಾಸ್ತ್ರಿಗಳ ಮನಸ್ಸಿನಲ್ಲಿ ಇಲ್ಲದ ವಿಚಾರಗಳು ಸುಳಿಯತೊಡಗಿದ್ದರಿಂದ ಅವರ ಮನಸ್ಸಿನ ಚಿಂತೆ ಭೋರೆಂದು ಹರಿಯತೊಡಗಿತು. ವಾಸುದೇವನು ಆಗಾಗ ಅನ್ನುತ್ತಲಿದ್ದ ಬಲಿದಾನದ

ನೆನಪಾಗಿ ಅವರ ಮೈಮೇಲೆ ನವಿರುಗಳೆದ್ದವು. "ಸ್ವಾತಂತ್ರ್ಯದೇವಿಗೆ ಆತ್ಮ ಬಲಿದಾನವನ್ನು ಕೊಡುವದೇನು ಹೆಚ್ಚಿನ ವಿಷಯವಲ್ಲ. ಅದೊಂದು ಧೀರ ವೃತ್ತಿ; ತ್ಯಾಗಪ್ರವೃತ್ತಿ" ಎಂದು ಅನ್ನುತ್ತಲಿದ್ದ ವಾಸುದೇವನ ಮಾತು ಗಳು ರಾಮಾಶಾಸ್ತ್ರಿಗಳ ಹೃದಯದಲ್ಲಿ ಗುಡುಗಾಡತೊಡಗಿದವು.

ಈ ಘಟನೆಯ ಪರಿಣಾಮವಾಗಿ ಘೋರವಾದ ದಬ್ಬಾಳಿಕೆಯು ಪ್ರಾರಂಭವಾಗುವದರಲ್ಲಿ ಸಂದೇಹವಿಲ್ಲವೆಂಬುದು ಅವರಿಗೆ ಸೂರ್ಯಪ್ರಕಾಶ ದಂತೆ ಸ್ಪಷ್ಟವಾಗತೊಡಗಿತು.

ರಾಮಾಶಾಸ್ತ್ರಿಗಳ ಊಹೆ ನಿಜವಾಯಿತು.

ಈ ಸಂಗತಿಯನ್ನು ಕೇಳಿದ ಸಾಹೇಬನು ವಾಸುದೇವನ ಮೇಲೆ ಕರ ಕರ ಹಲ್ಲು ತಿನ್ನತೊಡಗಿದನು. ಎದುರಿಗೆ ನಿಂತ ಫೌಜದಾರನನ್ನೂ, ಗೌಡ ನನ್ನೂ ನೋಡಿದಾಗ ಅವರ ಕಣ್ಣುಗಳು ಕೆಂಪಗಾದವು. ಅವನು ರಾಕ್ಷಸ ನಂತೆ ಕುಣಿದಾಡಹತ್ತಿದನು. ಅವರನ್ನು ಹರಿದು ತಿನ್ನುವಂತೆ ಕ್ರೂರವಾದ ಕಣ್ಣುಗಳಿಂದ ಕಿಡಿ ಕಾರಿಸುತ್ತ ನೋಡತೊಡಗಿದನು.

"ನೀವಿಷ್ಟು ಜನರು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತಿರುವಾಗ ವಾಸುದೇವನು ಈ ಕೆಲಸವನ್ನು ಹೇಗೆ ಮಾಡಿದನು ? ನೀವು ಗೊರಕೆ ಹೊಡೆಯುತ್ತ ಮಲಗಿದ್ದಿರಾ ನಾಯಿಗಳೆ! ನನಗೆಲ್ಲಾ ಗೊತ್ತಾಗಿದೆ. ನೀವು ಪಿತೂರಿಯಾಗಿದ್ದೀರಿ. ಅವನನ್ನು ಪಾರು ಮಾಡಿದ್ದೀರಿ. ಸುಮ್ಮನೆ ನನ್ನ ಕಣ್ಣಲ್ಲಿ ಮಣ್ಣು ತೂರಲು ಸುದ್ದಿಯನ್ನು ತಂದಿದ್ದೀರಿ. ಇದನ್ನು ನಾನು ಸಹಿಸಲಾರೆ. ನಿಮ್ಮನ್ನೆಲ್ಲ ಸಾಲುಹಿಡಿದು ಗುಂಡು ಹಾಕಿಸುತ್ತೇನೆ. ನಿಮ್ಮ ಚರ್ಮ ಸುಲಿಸುತ್ತೇನೆ. ಆ ಬದಮಾಷನು ನನ್ನ ಅಪಮಾನ ಮಾಡಿದ್ದಾನೆ. ಇದನ್ನು ಹೇಡಿಯಂತೆ ನಾನು ಸಹಿಸಬೇಕೆ? ಸಾಧ್ಯವಿಲ್ಲ. ನಿಮಗೆ ಕೊನೆಯ ಎಚ್ಚರಿಕೆಯನ್ನು ಕೊಡುತ್ತೇನೆ. ಈ ವಾರದಲ್ಲಿ ಅವನನ್ನು ಹಿಡಿದುಕೊಡದಿದ್ದರೆ ನಿಮ್ಮನ್ನು ಪಿತೂರಿಯ ಆಪಾದನೆಗೆ ಗುರಿಮಾಡು ತ್ತೇನೆ." ಎಂದು ಯೂರೋಪಿಯನ್ನನು ಸಿಕ್ಕಾಪಟ್ಟೆ ಒದರಹತ್ತಿದನು. ಮೊದಲೇ ಕೆಂಪಗಿರುವ ಈ ಮುಖವು ಈಗ ಕೆಂಡದ ಕರಣಿಯಂತೆ ತೋರ ಹತ್ತಿತು.

"ನಾನು ಫಿತೂರಿಯಾಗಿಲ್ಲ ಖಾವಂದರೇ ?" ಗೌಡ ನಡುಗುತ್ತ ಹೇಳಿದ.

"ಬದಮಾಷ್! ನಿನ್ನನ್ನು ಬೂಟನಿಂದ ಹೊಡೆಯಬೇಕು. ನೀನು ಫಿತೂರಿಯಾಗದಿದ್ದರೆ ದಪ್ತರಗಳನ್ನೇಕೆ ಕೊಡುತ್ತಿದ್ದಿ ?"

"ಇದು ಮೋಸದ ಕೆಲಸ ಹುಜೂರ್!"

ಸಾಹೇಬನ ಸಹನೆ ಮೀರಿದ್ದರಿಂದ ಅವನು ಧಡಾರೆಂದು ಗೌಡನನ್ನು ಬೂಟುಕಾಲಿನಿಂದಲೇ ನೂಕಿದನು. ಗೌಡನು ಧೊಪ್ಪನೆ ಬಿದ್ದು ಸಾವರಿಸಿಕೊಂಡು ಏಳುವ ಹೊತ್ತಿಗೆ ಸಾಹೇಬನು,

"ನೀನು ಫಿತೂರಿಯಾಗಿಲ್ಲವೆಂಬುದನ್ನು ಕಾರ್ಯಮಾಡಿ ತೋರಿಸದಿದ್ದರೆ ನಿನ್ನ ವತನವನ್ನೇ ಖಾಲಸಾ ಮಾಡಿಸಿಬಿಡುವೆನು." ಎಂದು ಗದ್ದರಿಸಿ ಪೋಲೀಸ ಅಧಿಕಾರಿಯನ್ನು ಕುರಿತು,

"ನಿನಗೆ ನೌಕರಿಯಲ್ಲಿ ಬಡತಿ ಬೇಕಾಗಿದ್ದರೆ ವಾಸುದೇವನನ್ನು ಕೂಡಲೆ ಹಿಡಿದುಕೊಡು. ನಿನ್ನನ್ನು ಇನ್ಸಪೆಕ್ಟರನನ್ನಾಗಿ ಏರಿಸುವೆನು. ಇಲ್ಲದಿದ್ದರೆ ನಿನಗೆ ಮನೆಗಪ್ಪಣೆಯೇ. ಅವನನ್ನು ಜೀವಂತ ಬಂಧಿಸುವದು ಸಾಧ್ಯವಾಗದಿದ್ದರೆ ಗುಂಡಿಕ್ಕಿ ತಂದರೂ ನಡೆದೀತು. Shoot that scoundrel at sight." ಎಂದು ಹೊಸ ಆಜ್ಞೆಯನ್ನೇ ದಯಪಾಲಿಸಿದನು.

ಈ ಆಜ್ಞೆಯ ರಕ್ಷಾಕವಚದಲ್ಲಿ ಫೌಜದಾರರು ಹೊರಬಿದ್ದರು. ಗೌಡನು ಅವರನ್ನು ಹಿಂಬಾಲಿಸಿದನು.

ಗಂಗನಹಳ್ಳಿಯಲ್ಲಿಯೇ ಇದ್ದುಕೊಂಡು ಹೆಚ್ಚಿನ ಅವಮಾನವನ್ನು ಸಹಿಸುವದು ಸಾಹೇಬರಿಗೆ ಬೇಡವಾಯಿತೇನೋ! ಅವರು ಅಧಿಕಾರಿಗಳಿಗೆ ಹೇಳಬೇಕಾದದ್ದನ್ನು ಹೇಳಿ ಅಂದೇ ತಳಕಿತ್ತಿದರು. ಹೊಸ ಪೋಲೀಸ ಪಡೆಯನ್ನೂ ಚತುರನಾದ ಬೇರೊಬ್ಬ ಅಧಿಕಾರಿಯನ್ನೂ ಕಳಿಸಿಕೊಡುವ ನಿರ್ಧಾರದಿಂದಲೇ ಅವರು ತಮ್ಮ ಪ್ರಯಾಣವನ್ನು ಕೂಡಲೇ ಸಾಗಿಸಿದರು.

ಗಂಗನಹಳ್ಳಿಯ ಸುತ್ತಲೂ ಪೋಲೀಸರು ಕಾವಲು ನಿಂತರು. ರಾಮಾಶಾಸ್ತ್ರಿಗಳ ಊಹೆ ನಿಜವಾಗಿ ಪರಿಣಮಿಸಿತು.

ಪೋಲೀಸರ ರಾಜ್ಯದಲ್ಲಿ ಗಂಗನಹಳ್ಳಿ ಹುರುಪಳಿಸಹತ್ತಿತು. ಹಳ್ಳಿಯ ನೆಮ್ಮದಿ ತಲೆಕೆಳಕಾಗಿಬಿಟ್ಟಿತು.

೮

ಪೋಲೀಸ ಸಾಹೇಬನ ಬೂಟುಗಾಲಿನ ಒದೆಯ ಪೆಟ್ಟನ್ನು ತಿಂದ ಗೌಡರು ಸಂತಾಪದಿಂದಲೇ ಮನೆಗೆ ಬಂದರು. ಆ ಅವಮಾನವನ್ನು ಸಹಿಸಿಕೊಂಡ ಅವರ ಎದೆಯು ಒಂದೇಸಮನೆ ಕುದಿಯತೊಡಗಿತು. "ಮಂಗನ ಮೋರೆಯವನಿಗೆ ನನ್ನನ್ನು ಒದೆಯುವಷ್ಟು ಸೊಕ್ಕು ಬಂದಿತೇ ?" ಎಂದು

ಕರ ಕರ ಹಲ್ಲು ತಿನ್ನತೊಡಗಿದರು. ಸುಳ್ಳುಸುಳ್ಳೇ ನಾನು ಫಿತೂರಿಯೆಂದು ಅರಚಿಕೊಂಡ ಸಾಹೇಬನೊಂದು ನನಗೆ ಸೂಚನೆಯನ್ನೇ ಕೊಟ್ಟಂತಾಯಿತು. ಈ ಮಕ್ಕಳು ವಾಸುದೇವನನ್ನು ಹೇಗೆ ಹಿಡಿಯುತ್ತಾರೋ ನೋಡುತ್ತೇನೆ." ಎಂದು ಏನನ್ನೋ ನಿರ್ಧರಿಸಿಕೊಳ್ಳತೊಡಗಿದ. ಗೌಡರಿಗೆ ಆವೇಶದಿಂದ ವಾಸುದೇವನು ಒಮ್ಮೆ ಹೇಳಿದ್ದ, "ಇವರು ಎಷ್ಟೆಂದರೂ ಪರಕೀಯರು, ಗೌಡರೆ! ನಿಮ್ಮಿಂದ ಕೆಲಸ ತೆಗೆದುಕೊಳ್ಳುತ್ತಾರೆ. ಅದು ನಿಮ್ಮಿಂದ ಆಗ ದಿದ್ದರೆ ಒದ್ದು ಬಿಡುತ್ತಾರೆ. ಈ ದೇಶ ನಿಮ್ಮದು, ಈ ರಾಷ್ಟ್ರ ನಿಮ್ಮದು. ಈ ರಾಷ್ಟ್ರದ ಎದೆಯನ್ನು ಸೀಳುವಂತಹ ರಾಷ್ಟ್ರದ್ರೋಹದ ಪಾಪವನ್ನು ಕಟ್ಟಿ ಕೊಳ್ಳಬೇಡಿರಿ. ಈ ಸಾಹೇಬರು ಒಂದಿಲ್ಲೊಂದು ದಿನ ಗುಡಿಚಾಪಿ ಕಟ್ಟುವುದು ಖಂಡಿತ. ನೀವು ಮಾತ್ರ ಇಲ್ಲಿಯೇ ಉಳಿಯುವಿರಿ. ಈ ನೆಲ ನಿಮ್ಮದು. ಈ ಜಲ ನಿಮ್ಮದು. ಈ ನಾಡೇ ನಿಮ್ಮದು. ಈ ನಾಡನ್ನು ಉಳಿಸಿಕೊಳ್ಳು ವುದು ನಿಮ್ಮ ಹೊಣೆ. ನೀವೂ ಭಾರತಪುತ್ರರು" ಈ ಮಾತುಗಳು ತೇಲಿ ತೇಲಿ ಬರತೊಡಗಿದವು. ವಾಸುದೇವನ ಮಾತುಗಳು ಆಗ ಗೌಡರಿಗೆ ಕಹಿಯಾಗಿ ಕಂಡಿದ್ದವು. ಈಗ ಆ ಮಾತುಗಳನ್ನು ನೆನೆಸಿ ಗೌಡರು ಕಣ್ಣೀರು ಸುರಿಸಹತ್ತಿದರು. "ನಾನು ನನ್ನ ಸ್ವಾರ್ಥಕ್ಕಾಗಿ ವಾಸುದೇವನನ್ನು ಸುಮ್ಮನೆ ಜೇಲಿಗೆ ಕಳಿಸಿ ಪಾಪಿಯಾದೆ. ಆ ಪಾಪವನ್ನು ನಾನು ತೊಳೆದು ಕೊಳ್ಳಬೇಕು. ಅವನನ್ನು ರಕ್ಷಿಸಬೇಕು. ಆದರೆ ಈ ಕೆಲಸ ನನ್ನಿಂದ ಹೇಗೆ ಸಾಧ್ಯವಾದೀತು. ಈಗಾಗಲೇ ಗಂಗನಹಳ್ಳಿಯಲ್ಲಿ ಪೋಲೀಸರ ಬೇರೆ ಪಡೆಯೇ ಬಂದಿದೆ. ಅವರ ಹಾವಳಿ ಹೆಚ್ಚಾಗತೊಡಗಿದೆ. ಏನು ಮಾಡಲಿ?" ಎಂದು ಗೌಡರು ಅತ್ತಿತ್ತ ಎಡೆಯಾಡತೊಡಗಿದರು. ತಮ್ಮ ಎದುರಿನಲ್ಲಿಯೇ ಗಂಗನಹಳ್ಳಿ ಹುರುಪಳಿಸುತ್ತಿರುವದಲ್ಲಾ ಎಂದು ಮರಮರನೆ ಮರುಗ ತೊಡಗಿದರು. "ನಾನೆಂತಹ ಊರ ಗೌಡನು! ನಾನೆಂತಹ ನೀಚ ಗೌಡನು!" ಎಂದು ಉಸಿರು ಹಾಕತೊಡಗಿದರು.

ಎರಡು ದಿನಗಳಿಂದ ನಡೆದ ದಬ್ಬಾಳಿಕೆಯ ಸತ್ರವನ್ನು ನೋಡಿದ ಮೇಲಂತೂ ಗೌಡರು ಪೂರಾ ಕಂಗೆಡಹತ್ತಿದರು. "ಏನು ಅನ್ಯಾಯವಿದು! ಈ ಜನರು ವಾಸುದೇವನ ಶೋಧ ಮಾಡುವರೋ ಇಲ್ಲವೆ ಗಂಗನಹಳ್ಳಿಯ ಲೂಟಿ ಮಾಡುವರೋ ತಿಳಿಯದಾಗಿದೆ. ಕಂಡ ಕಂಡ ಮನೆಗಳನ್ನು ನುಗ್ಗುವ ದೇನು? ಸಾಮಾನುಗಳನ್ನೆಲ್ಲ ಹೊರಗೆ ಬಿಸಾಡುವದೇನು? 'ವಾಸುದೇವನು ಎಲ್ಲಿದ್ದಾನೆ ಹೇಳಿರಿ' ಎಂದು ಸಿಕ್ಕಸಿಕ್ಕವರನ್ನು ಥಳಿಸುವದೇನು? ಈ ಅಕಾಂಡ ತಾಂಡವದಿಂದ ವಾಸುದೇವನ ಶೋಧನೆಯಾಗಬಹುದೆ? ಇವರಿಗೆ

ಶೋಧನೆ ಬೇಕಾಗಿಲ್ಲ. ದಬ್ಬಾಳಿಕೆಯನ್ನು ಸಾಗಿಸಬೇಕಾಗಿದೆ. ನಮ್ಮ ಜನರ ಎಲುಬನ್ನು ಕಿತ್ತಿ ಅಂಜಿಕೆಯನ್ನು ಬಿಂಬಿಸಬೇಕಾಗಿದೆ. ಅಯ್ಯೋ! ಈ ಅನರ್ಥವನ್ನು ಹೇಗೆ ನಿಲ್ಲಿಸಲಿ? ಗಂಗನಹಳ್ಳಿಯನ್ನು ಈ ಪಶುಗಳ ಕೈಯಿಂದ ಹೇಗೆ ಪಾರುಮಾಡಲಿ?" ಎಂದು ಗೌಡರು ಉರಿಯುವ ಎದೆಯಲ್ಲಿ ಚಿಂತೆಯನ್ನು ತುಂಬಿಕೊಳ್ಳಹತ್ತಿದರು.

ಮೂರನೆಯ ದಿನ ನಡೆದ ಅತ್ಯಾಚಾರವನ್ನು ಕೇಳಿ ಗೌಡರು ಸಂತಾಪ ದಿಂದ ಕುದಿಯತೊಡಗಿದರು. ಅವರ ನೆತ್ತರವು ರಭಸದಿಂದ ಹರಿಯತೊಡಗಿತು.

ಆ ದಿನ ಪೋಲೀಸರು ರಾಮಾಶಾಸ್ತ್ರಿಗಳನ್ನು ಚಾವಡಿಗೆ ಕರೆಯಿಸಿ ಕೊಂಡು ಒಂದೇ ಸಮನೆ ಪೀಡಿಸತೊಡಗಿದರು. ಅವರ ಮುಖಂಡನಾದ ಅಧಿಕಾರಿಯು ಅವರನ್ನು ದರ್ಪದಿಂದ,

"ನಿಮ್ಮ ಮಗನು ಎಲ್ಲಿರುವನೆಂಬುದು ನಿಮಗೆ ಗೊತ್ತಿದೆ. ನೀವು ನಿಜ ಸಂಗತಿಯನ್ನು ಹೇಳದಿದ್ದರೆ ನಿಮ್ಮ ಕೈಕಾಲು ಮುರಿಯುವೆವು. ಸುಮ್ಮನೇ ಹೇಳಿರಿ" ಎಂದು ಬಂದೂಕದಿಂದ ತಿವಿದು ಕೇಳಿದನು.

"ನಿಜವಾಗಿಯೂ ನನಗೆ ಗೊತ್ತಿಲ್ಲದ ಸಂಗತಿಯನ್ನು ಹೇಗೆ ಹೇಳಲಿ?"

"ಸುಮ್ಮನೆ ಪಂಟು ಬಡೆಯಬೇಡ. ನಿನಗೆಲ್ಲವೂ ಗೊತ್ತಿದೆ."

"ಖಂಡಿತವಾಗಿಯೂ ಗೊತ್ತಿಲ್ಲ. ದೇವರಾಣೆಗೂ ನಾನರಿಯೆ."

"ಒದೆದ ಬಳಿಕ ನೀನು ಬಾಯಿ ಬಿಡುವಂತೆ ತೋರುತ್ತದೆ," ಎನ್ನುತ್ತ ಆ ಅಧಿಕಾರಿಯು ಶಾಸ್ತ್ರಿಗಳನ್ನು ಕೋಲಿನಿಂದ ಥಳಿಸಹತ್ತಿದನು. ಪೆಟ್ಟುಗಳು ಎದೆಯ ಮೇಲೆ, ಬೆನ್ನಮೇಲೆ ಬೀಳತೊಡಗಿದವು.

"ಇನ್ನಾದರೂ ಹೇಳು."

"ನನಗೆ ಯಾವುದೂ ಗೊತ್ತಿಲ್ಲ........" ಬಾಯಿಗೊಂದು ಏಟು ಬಿದ್ದದ್ದರಿಂದ ಅಲ್ಲಿ ನೆತ್ತರ ಕಾಣಿಸಿಕೊಂಡಿತು.

"ನೀವು ನನ್ನನ್ನು ಕೊಂದರೂ ಸರಿ, ಸತ್ಯವನ್ನೇ ಹೇಳುತ್ತೇನೆ. ನನ್ನ ಮಗನು ಎಲ್ಲಿರುವನೆಂಬುದು ನನಗೆ ಗೊತ್ತಿಲ್ಲ."

"ನಿನಗೆ ಗೊತ್ತಿದೆ" ಎಂದು ಅಧಿಕಾರಿಯು ಮತ್ತೊಂದು ಗುದ್ದು ಕೊಟ್ಟನು.

"ನನಗೆ ಗೊತ್ತಿದೆ. ನಾನು ಹೇಳುವುದಿಲ್ಲ. ಏನು ಮಾಡುತ್ತೀರೋ ಮಾಡಿಕೊಳ್ಳಿರಿ." ಎಂದು ಶಾಸ್ತ್ರಿಗಳು ನಡುಗುತ್ತಲೇ ಹೇಳಿ. ಮಂದವಾದ ದನಿಯಲ್ಲಿ "ನೀವು ಎಂಥವರಪ್ಪಾ. ನೀವು ಯಾರ ರಕ್ತವನ್ನು ಚಿಮ್ಮುತ್ತಿರುವಿರಿ. ಈ ದೇಶ ಯಾರದು? ಈ ಬಾಂಧವರು ಯಾರು? ಈ ಅನಾಹುತ

ವನ್ನು ನಿಲ್ಲಿಸಿರಿ. ನೀವೂ ಭಾರತದೇವಿಯ ಮಕ್ಕಳು. ಭಾರತ ನಾಡಿನ ಪುತ್ರರಾದ ನೀವು ಭಾರತೀಯ ಸ್ವಾತಂತ್ರ್ಯದ ಸದವಕಾಶದಲ್ಲಿ ದೂರ ಉಳಿಯುವಿರಾ ? ಇದು ಪಾಪ........ನೀವು ಯಾರು ಹೇಳಿರಿ ?" ಎನ್ನುವ ಹೊತ್ತಿಗೆ ರಾಮಾಶಾಸ್ತ್ರಿಗಳಿಗೆ ಮೂರ್ಛೆ ಬಂದುಬಿಟ್ಟಿತು.

ಚಾವಡಿಯಲ್ಲಿ ಇವರು ಸತ್ತು ಹೋದಾರೆಂದು ಅಂಜಿದ ಅಧಿಕಾರಿಯು ಅವರನ್ನು ನೇರವಾಗಿ ಮನೆಗೆ ಹೊರಿಸಿ ಕಳಿಸಿದನು. ರಾಮಾಶಾಸ್ತ್ರಿಗಳಿಗೆ ಮೂರ್ಛೆ ತಿಳಿಯಲು ಬಹಳ ಕಾಲ ಹಿಡಿಯಿತು. ಅವರಿಗೆ ಎಚ್ಚರವಾದಾಗ ಅವರ ಮೈಕೈ ನೋಯತೊಡಗಿದ್ದವು. ಮೈಮೇಲೆಲ್ಲ ಬಾಸುಂಡೆಗಳೆದ್ದಿದ್ದವು.

ಈ ಸಂಗತಿಯನ್ನು ಕೇಳಿದ ಗೌಡನಿಗೆ ತಡೆಯುವದಾಗಲಿಲ್ಲ. ಅವನು ನೇರವಾಗಿ ಚಾವಡಿಗೆ ಹೋಗಿ ಆ ಅಧಿಕಾರಿಗೆ ಹೇಳಿದನು :

"ಈ ದಬ್ಬಾಳಿಕೆಯನ್ನು ನಿಲ್ಲಿಸಿರಿ. ಎಂಟು ದಿನಗಳಲ್ಲಿ ವಾಸುದೇವನನ್ನು ಹಿಡಿದು ತರುತ್ತೇನೆ."

ಅಧಿಕಾರಿಯು ಖೊಳ್ಳನೇ ನಕ್ಕು ಕೇಳಿದನು :

"ನಿನ್ನಿಂದ ಈ ಕೆಲಸ ಸಾಧ್ಯವಾಗುವದೇ ಗೌಡಾ !"

"ನಾನು ಗಂಗನಹಳ್ಳಿಯ ಗೌಡನೆಂಬುವದನ್ನು ಮರೆಯಬೇಡಿರಿ. ನಿಮ್ಮಿಂದ ಸಾಧ್ಯವಾಗದ ಕೆಲಸ ಯಾರಿಂದಲೂ ಸಾಧ್ಯವಾಗುವದಿಲ್ಲವೆಂದು ತಿಳಿಯುವದು ಒಳ್ಳೆಯದಲ್ಲ. ಪರೀಕ್ಷೆ ಮಾಡಿ ನೋಡಿರಿ. ನಾನೂ ಸರ್ಕಾರದ ಉಪ್ಪನ್ನು ಉಂಡಿದ್ದೇನೆ."

"ಒಂದು ವೇಳೆ ನೀನು ತಪ್ಪಿದರೆ........"

"ನನ್ನನ್ನು ಹಿಡಿದು ಶೂಲಕ್ಕೇರಿಸಿರಿ."

"ನೋಡು ಹಾಗಾದರೆ........"

"ಈ ಗೌಡನ ಸಾಮರ್ಥ್ಯವನ್ನಾದರೂ ನೋಡಿರಿ. ಆದರೆ ಒಂದು ಮಾತು. ಈ ದಬ್ಬಾಳಿಕೆ ಮಾತ್ರ ನಿಲ್ಲಬೇಕು."

"ಆಗಲಿ. ನಾವು ತಟಸ್ಥರಾಗಿ ಶೋಧಕ್ಕೆ ತೊಡಗುತ್ತೇವೆ. ನಿನಗೆ ಬೇಕಾದ ಸಹಾಯವನ್ನು ತೆಗೆದುಕೊ."

"ನಿಮ್ಮನ್ನು ಬಿಟ್ಟರೆ ನನಗೆ ಗತಿ ಯಾರು ?" ಎನ್ನುತ್ತ ಗೌಡನು ಅವರ ಅಪ್ಪಣೆ ಪಡೆದುಕೊಂಡು ಮನೆಗೆ ನಡೆದನು.

ಗೌಡನು ವಾಸುದೇವನನ್ನು ಹಿಡಿದುಕೊಡಲು ಸಿದ್ಧನಾಗಿರುವನೆಂಬ ಮಾತು ಹಾ ಹಾ ಅನ್ನುವಷ್ಟರಲ್ಲಿ ಗಂಗನಹಳ್ಳಿಯ ತುಂಬೆಲ್ಲ ಹಬ್ಬಿತು. ಈ ಸುದ್ದಿಯನ್ನು ಕೇಳಿ ಜನರು ಸಂತಪ್ತರಾದರು. ರಾಮಾಶಾಸ್ತ್ರಿಗಳ ಮೇಲೆ

ಎಸಗಿದ ಅಧಿಕಾರಿಗಳ ಅತ್ಯಾಚಾರವನ್ನು ಕೇಳಿ ಕುದಿಗೊಂಡ ಅವರ ಮನಸ್ಸಿನ ಮೇಲೆ ಈ ಸುದ್ದಿಯು ಕಾದ ಬರೆಯನ್ನೇ ಎಳೆಯಿತು. ಗೌಡನ ಪಾರುಪತ್ಯವನ್ನು ಮಟಕುಮಾಡಲು ಅವರಿಗೆ ಅಸಾಧ್ಯವೇನಿರಲಿಲ್ಲ. ಆದರೆ ವಾಸುದೇವನ ಅಂಕಿತದಲ್ಲಿ ದಿನಬೆಳಗು ಬರುತ್ತಿರುವ 'ಪರಿಪತ್ರ'ಗಳು ಆ ಕೆಲಸವನ್ನು ಮಾಡಗೊಡಲಿಲ್ಲ. 'ಎಂತಹ ಪ್ರಸಂಗದಲ್ಲಿಯೂ ನೀವು ಶಾಂತತೆಯನ್ನು ಕಾಯ್ದುಕೊಳ್ಳಿರಿ. ಇದು ನಿಮ್ಮ ಸತ್ವಪರೀಕ್ಷೆಯ ಕಾಲವಾಗಿದೆ. ನಿಮ್ಮ ಬಿಡುಗಡೆಯ ದಿನವು ಸಮೀಪದಲ್ಲಿಯೇ ಬಂದಿದೆ. ಅಶಾಂತತೆಯನ್ನು ಹರಡಿ ನೀವು ಹಿಂಸಾಪ್ರವೃತ್ತರಾದರೆ ಎಲ್ಲವೂ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತಾಗುವದು. ನೀವು ಪಡುತ್ತಿರುವ ಸಂಕಟಗಳನ್ನು ನಾನು ಸೂಕ್ಷ್ಮವಾಗಿ ಪರಿಶೀಲಿಸುತ್ತಿರುತ್ತೇನೆ. ಈ ಸಂಕಟಗಳ ಸಹನೆಯಲ್ಲಿಯೇ ಮಹಾಶಕ್ತಿ ತುಂಬಿದೆ. ಆದುದರಿಂದ ನೀವು ಶಾಂತತೆಯನ್ನು ಕಾಯ್ದುಕೊಳ್ಳಿರಿ.' ಎಂಬ ಪರಿಪತ್ರಗಳು ಎಲ್ಲಿಂದಲೋ ಬೆಳಗಾಗುವ ಮುನ್ನವೇ ಮನೆಮನೆಗಳಲ್ಲಿ ಬೀಳುತ್ತಿದ್ದವು. ಈ ಪರಿಪತ್ರಗಳ ಶೋಧನೆಯನ್ನು ಮಾಡಲು ಅಧಿಕಾರಿಗಳು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾಗಿದ್ದವು. ಜನರು ಈ ಆಜ್ಞೆಯನ್ನು ಶಿರಸಾ ವಹಿಸಬೇಕಾಯಿತು. ಇಲ್ಲದಿದ್ದರೆ ಗಂಗನಹಳ್ಳಿ ಮಸಣದ ಬೀಡಾಗಿ ಎಂದೋ ಹುರಿದುಹೋಗಬಹುದಾಗಿತ್ತು.

ಮನೆಗೆ ಬಂದ ಗೌಡನಿಗೆ ರಾಮಾಶಾಸ್ತ್ರಿಗಳನ್ನು ಕಾಣದೆ ಸಮಾಧಾನವಾಗದೆಂದು ತೋರಿತು. ಅವರೆದುರು ತನ್ನ ತಪ್ಪನ್ನೆಲ್ಲ ಒಪ್ಪಿ ತನ್ನ ಯೋಜನೆಯನ್ನು ತಿಳಿಯಪಡಿಸಬೇಕೆಂದು ಅವನು ಹಾತೊರೆಯತೊಡಗಿದನು. ಅವನ ಮನಸ್ಸು ಆಗಲೇ ಪಶ್ಚಾತ್ತಾಪದಿಂದ ದಗ್ಧವಾಗತೊಡಗಿತ್ತು. ತಾನು ಮಾಡಿದ ಅನ್ಯಾಯಗಳ ಪರಿಮಾರ್ಜನೆಯನ್ನು ಮಾಡಿಕೊಂಡು ಕೃತಾರ್ಥನಾಗಬೇಕೆಂದು ಅವನು ರಾಮಾಶಾಸ್ತ್ರಿಗಳನ್ನು ಕಾಣಲು ನಿಶ್ಚಯಿಸಿದನು. ಈ ನಿಶ್ಚಯವೇ ಅವನನ್ನು ಮೂರುಸಂಜೆಯ ಮುಂದೆ ರಾಮಾಶಾಸ್ತ್ರಿಗಳ ಮನೆಯ ಕಡೆಗೆ ಒಯ್ದಿತು. ಪಶ್ಚಾತ್ತಾಪದಿಂದ ತೊಳೆದು ತಿಳಿಯಾದ ಅವನ ಹೃದಯದಲ್ಲಿ ದುರಭಿಮಾನವು ಕರಗಿ ನೀರಾದ ಭಾವವು ಮುಖದ ಮೇಲೆ ಮೂಡಿ ನಿಂತಿತ್ತು.

ರಾಮಾಶಾಸ್ತ್ರಿಗಳು ನಡುಮನೆಯಲ್ಲಿ ಹಾಸಿಗೆಯ ಮೇಲೆ ನರಳುತ್ತ ಪವಡಿಸಿದ್ದರು. ಮಗ್ಗುಲಲ್ಲಿಯೇ ಸೀತಮ್ಮನವರು ಇದ್ದಲು ಒಲೆಯನ್ನಿಟ್ಟುಕೊಂಡು ಶಾಸ್ತ್ರಿಗಳ ಬಾಸುಂಡೆಗಳಿಗೆ 'ಮುರಿಗೆಯ ಕಾವು' ಕೊಡುತ್ತಿದ್ದರು.

ಗಾಯಗಳ ನೋವನ್ನು ತಾಳಲಾರದೆ ಶಾಸ್ತ್ರಿಗಳು ಒಂದೇ ಸಮನೆ

ನರಳುತ್ತಿದ್ದರು. ಭಯಾನಕವಾಗಿ ನಿಟ್ಟುಸಿರು ಬಿಡುತ್ತಿದ್ದರು.

"ಮಾಸ್ತರರೆ!"

"ಯಾರು?" ಶಾಸ್ತ್ರಿಗಳ ದನಿ ಕ್ಷೀಣವಾಗಿ ಬಂದಿತು.

"ಗೌಡರು ಬಂದಿದ್ದಾರೆ!" ಸೀತಮ್ಮ ಗಾಬರಿಯಿಂದಲೇ ಹೇಳಿದರು.

ಶಾಸ್ತ್ರಿಗಳು ಮಗ್ಗುಲಾಗಿ ಗೌಡನನ್ನೊಮ್ಮೆ ಆಪಾದಮಸ್ತಕ ನೋಡಿ ಮುಖ ಕಿವಿಚಿಕೊಂಡರು.

"ನನ್ನನ್ನು ನೋಡಿ ಮುಖ ಕಿವಿಚಿಕೊಳ್ಳುವದು ನಿಮಗೆ ಸ್ವಾಭಾವಿಕ ವಾಗಿದೆ ಮಾಸ್ತರರೆ! ಆದರೆ ಇಂದು ನಾನು ಮೊದಲಿನ ಗೌಡನಲ್ಲ. ನನಗೆ ಬಹಳ ಪಶ್ಚಾತ್ತಾಪವಾಗಿದೆ. ನೀವು ಕ್ಷಮಿಸಬೇಕು ಮಾಸ್ತರರೆ! ನಾನು ಬಹಳ ಅನ್ಯಾಯಮಾಡಿದ್ದೇನೆ." ಸನಿಯಕ್ಕೆ ಹೋಗಿ ಗೌಡ ಹೇಳಿದ.

"ಈಗ ಮಾಡಿದ ಅನ್ಯಾಯವು ಪೂರ್ಣವಾಗಲಿಲ್ಲವೆಂದು ವಾಸುದೇವ ನನ್ನು ಹಿಡಿದುಕೊಡುವ ಪ್ರತಿಜ್ಞೆ ಮಾಡಿರುವೆಯಾ?"

"ನಾನು ಅದನ್ನೇ ಹೇಳಲು ಬಂದಿದ್ದೇನೆ ಮಾಸ್ತರರೆ! ನೀವು ನನ್ನನ್ನು ನಂಬಬೇಕು. ನಾನು ವಾಸುದೇವನನ್ನು ಹಿಡಿದುಕೊಡುವೆನೆಂಬ ಮಾತು ಹಂಚಿಕೆಯ ಮಾತಾಗಿದೆ. ಗಂಗನಹಳ್ಳಿಯಲ್ಲಿ ನಡೆಯುತ್ತಿರುವ ಅತ್ಯಾಚಾರ ಗಳನ್ನು ನಿಲ್ಲಿಸಬೇಕೆಂದು ಈ ಹಂಚಿಕೆಯನ್ನು ಹಾಕಿರುವೆ. ಕಾಲಹರಣದಿಂದ ಲಾಭವಾಗುವದಿದೆ. ಈಗಾಗಲೇ ಮುಖಂಡರಲ್ಲಿ ಒಡಂಬಡಿಕೆಯ ಮಾತುಗಳು ನಡೆದಿವೆಯಂತೆ. ನಾನು ಅಧಿಕಾರಿಗಳ ಮನವೊಲಿಸಿ ಅವರನ್ನು ತಟಸ್ಥ ರನ್ನಾಗಿ ಮಾಡಿದ್ದೇನೆ. ವಾಸುದೇವನನ್ನು ಹಿಡಿದುಕೊಡುವ ಮಾತೇ ಸುಳ್ಳು. ಅದರ ಬದಲು ಅವನನ್ನು ಸಂರಕ್ಷಿಸಲು ಹೆಣಗಲು ನನ್ನ ಜೀವವನ್ನೂ ಪಣಕ್ಕೆ ಒಡ್ಡುತ್ತೇನೆ. ನಾನು ಮಾಡಿದ ಪಾಪಗಳಿಂದ ವಿಮುಕ್ತನಾಗಲು ನನಗೆ ವಾಸುದೇವನ ಕೃಪೆಯೇ ಬೇಕು. ನಾನು ಇದನ್ನು ಸಾಧಿಸುತ್ತೇನೆ. ನಿಮ್ಮ ಮೇಲೆ ಆದ ಈ ಅತ್ಯಾಚಾರವನ್ನು ಕಂಡು ನನ್ನ ಎದೆ ಸೀಳಿ ಹೋಗಿದೆ ಮಾಸ್ತರರೆ! ಈ ಕುನ್ನಿಗಳ ಮೇಲೆ ಸೇಡನ್ನು ತೀರಿಸಿಕೊಳ್ಳದಿದ್ದರೆ ನಾನು ಗೌಡನೇ ಅಲ್ಲ. ನೀವು ನನ್ನನ್ನು ನಂಬಿ ಆಶೀರ್ವಾದ ಮಾಡಬೇಕು ಮಾಸ್ತರರೆ!" ಎಂದು ಗೌಡನು ಶಾಸ್ತ್ರಿಗಳ ಕಾಲು ಹಿಡಿದುಕೊಂಡನು.

ಶಾಸ್ತ್ರಿಗಳಿಗೆ ಈ ಮಾತುಗಳಿಂದ ದಿಗ್ಭ್ರಮೆಯಾಯಿತು. ಗೌಡನನ್ನು ನಂಬುವದು ಅವರಿಗೆ ದುಸ್ತರವಾಗಿಬಿಟ್ಟಿತು.

"ನಿನ್ನ ಹೃದಯ ಪರಿವರ್ತನೆಯಾಗಿದೆಯೆಂದು ನಾನು ಹೇಗೆ ನಂಬಲಿ, ಗೌಡಾ!"

"ನನ್ನ ಕೃತಿಗಳೇ ಇದನ್ನು ಸಮರ್ಥಿಸುವವು ಮಾಸ್ತರರೆ. ನಾನು ನನ್ನ ಹೃದಯವನ್ನು ಹೇಗೆ ಬಿಚ್ಚಿ ತೋರಿಸಲಿ ಹೇಳಿರಿ."

"ನಿನ್ನಲ್ಲಿ ಹೃದಯವಿದೆಯೇ ?

"ನನ್ನ ಮೊದಲಿನ ಹೃದಯವು ಚೂರುಚೂರಾಗಿ ಸಿಡಿದು ಹೋಗಿ ಆ ಸ್ಥಳವನ್ನು ಇನ್ನೊಂದು ಪರಿಶುದ್ಧವಾದ ಹೃದಯವು ವ್ಯಾಪಿಸಿದೆಯೆಂದು ದೇವರ ಸಾಕ್ಷಿಯಾಗಿ ಹೇಳುತ್ತೇನೆ ಮಾಸ್ತರರೆ!"

ರಾಮಾಶಾಸ್ತ್ರಿಗಳು ಮತ್ತೊಮ್ಮೆ ಗೌಡನನ್ನು ಬಿರುಸಾಗಿ ನೋಡಿದರು. ಆ ನೋಟವು ಗೌಡನ ಹೃದಯವನ್ನು ಚುಚ್ಚಿ ಒಳಹೊಕ್ಕು ಬರತೊಡಗಿತು.

"ಗೌಡಾ !"

"ಇಲ್ಲದ ಸಂದೇಹಕ್ಕೆ ಎಡೆಗೊಡಬೇಡಿರಿ ಗುರುಗಳೆ! ತಂದೆಯಂತಿರುವ ನಿಮ್ಮ ಕಾಲು ಮುಟ್ಟಿ ಹೇಳುತ್ತೇನೆ. ತಾಯಿಯಾಗಿರುವ ಸೀತಮ್ಮನವರ ಪಾದತಲದಲ್ಲಿ ಹಣೆಯಿಟ್ಟು ಆಣೆ ಮಾಡುತ್ತೇನೆ. ನನ್ನ ಹೃದಯ ಪರಿವರ್ತನೆ ಯಾಗಿದೆ. ಇದರಲ್ಲಿ ಏನಾದರೂ ವ್ಯತ್ಯಯವಾದರೆ ನನ್ನ ವಂಶವೇ ಹಾಳಾಗಿ ಹೋಗಲಿ. ನನ್ನ ಮಕ್ಕಳು ಮರಣ ಹೊಂದಲಿ." ಎಂದು ಉದ್ವೇಗದಿಂದ ಗೌಡನು ಶಾಸ್ತ್ರಿಗಳ ಪಾದಗಳನ್ನು ಹಿಡಿದನು.

"ಒಳಿತೆನ್ನಿರಿ ಗೌಡರೆ! ಹೀಗೆಲ್ಲ ಅಮಂಗಳ ಮಾತಾಡಬೇಡಿರಿ" ಎಂದು ಸೀತಮ್ಮ ದಯಾಮಯಳಾಗಿ ಹೇಳಿದರು.

ಶಾಸ್ತ್ರಿಗಳ ಕಣ್ಣುಗಳು ಒದ್ದೆಯಾದವು.

"ನೀನೂ ನನ್ನ ಮಗನಲ್ಲವೇ ಗೌಡಾ!"

"ಈ ಮಗನು ತಮ್ಮನನ್ನು ರಕ್ಷಿಸುವನು ತಂದೆ!"

"ಸಾವಿರ ವರುಷ ಬಾಳು ನನ್ನಪ್ಪಾ!"

ಗೌಡನ ಎದೆಯ ಮೇಲಿನ ಭಾರವಿಳಿದದ್ದರಿಂದ ಅವನು ಆನಂದ ಪುಳಕಿತನಾದನು.

"ಅಲ್ಲ ಗೌಡರೆ! ವಾಸುದೇವನನ್ನು ಸಿಕ್ಕಲ್ಲಿ ಗುಂಡಿಕ್ಕಲು ಆಜ್ಞೆಯಾಗಿ ದೆಯಂತೆ ಇದು ನಿಜವೆ ?" ಸೀತಮ್ಮ ಹೌಹಾರಿ ಕೇಳಿದಳು.

"ಅವನು ಕಂಡರಲ್ಲವೇ ಅವನಿಗೆ ಗುಂಡು ಹಾಕುವದು. ನೀವು ಬೆದರುವ ಕಾರಣವಿಲ್ಲ. ಇಂದೇ ನಾನು ಮನೆಯವರನ್ನೆಲ್ಲ ತವರುಮನೆಗೆ ಕಳಿಸಿಬಿಟ್ಟು ಸ್ವತಂತ್ರನಾಗಿದ್ದೇನೆ. ವಾಸುದೇವನ ಬೆಂಗಾವಲಾಗಿ ನಿಂತು ಅವನನ್ನು ರಕ್ಷಿಸುತ್ತೇನೆ. ಅಧಿಕಾರಿಗಳು ನನ್ನನ್ನು ನಂಬಿರುವದರಿಂದ ಈ ಕೆಲಸ ನನಗೆ ಸುಲಭವಾಗುತ್ತದೆ. ಇನ್ನು ಮೇಲೆ ನಾನು ಅಧಿಕಾರಿಗಳ ಸುತ್ತಲೂ ಇದ್ದು

ಎಲ್ಲವನ್ನೂ ನೋಡಿಕೊಳ್ಳುತ್ತೇನೆ. ಈ ಚಳವಳಿ ಇನ್ನು ಬಹಳ ದಿವಸ ನಡೆಯಲಾರದು ಸೀತಮ್ಮನವರೆ! ಈ ವಾರದಲ್ಲಿ ನಿಲ್ಲಬಹುದೆಂದು ಅಧಿಕಾರಿಗಳೇ ಹೇಳುತ್ತಾರೆ. ಈ ಅವಧಿಯಲ್ಲಿ ವಾಸುದೇವನ ಕೂದಲು ಕೊಂಕದಂತೆ ನಾನು ನೋಡಿಕೊಳ್ಳುತ್ತೇನೆ. ನಿಮ್ಮ ಮಗನಾದ ವಾಸುದೇವನು ನನ್ನ ತಮ್ಮನಲ್ಲವೆ?"

"ನೋಡಿರಿ ಗೌಡರೆ! ನನ್ನ ಮಗನನ್ನು ರಕ್ಷಿಸುವ ಭಾರ ನಿಮ್ಮದು" ಎಂದು ಸೀತಮ್ಮನವರು ಭಾರವಾದ ದನಿಯಲ್ಲಿಯೇ ಹೇಳಿದರು.

"ದೇವರಿದ್ದಾನೆ ತಾಯಿ!" ಎನ್ನುತ್ತ ಗೌಡನು ಹೊರಟು ನಿಂತನು.

"ಗೌಡನ ಕೈಯಲ್ಲಿ ಪ್ರಸಾದವನ್ನು ಹಾಕು. ಅವನು ಆ ಶಿವನೆದುರು ಇನ್ನೊಮ್ಮೆ ಪ್ರತಿಜ್ಞೆ ಮಾಡಲಿ." ಶಾಸ್ತ್ರಿಗಳು ಸೀತಮ್ಮನವರಿಗೆ ಆಜ್ಞೆ ಮಾಡಿದರು.

ಸೀತಮ್ಮನವರು ಒಳಗೆ ಹೋಗಿ ಭಸ್ಮವನ್ನು ತಂದರು. ಆ ಭಸ್ಮವನ್ನು ಗೌಡನು ಆದರಪೂರ್ವಕವಾಗಿ ತೆಗೆದುಕೊಂಡು "ನಾನು ನಿಮಗೆ ವಂಚನೆಯನ್ನು ಮಾಡಿದೆನಾದರೆ ಈ ಶಿವನ ಭಸ್ಮವು ನನ್ನ ದೇಹವನ್ನು ಬೂದಿ ಮಾಡಲಿ" ಎನ್ನುತ್ತ ಹಣೆಗೆ ಹಚ್ಚಿಕೊಂಡು ಶಾಸ್ತ್ರಿಗಳ ಪಾದಗಳಿಗೆ ಹಣೆಯಿಟ್ಟು ಸೀತಮ್ಮನವರ ಕಾಲುಬಿದ್ದು ನಡೆದುಬಿಟ್ಟನು.

"ಈ ಸರ್ಪವನ್ನು ನಂಬುವುದು ಕಷ್ಟ ನೋಡು."

"ಇದೇನು ಮಾತು. ಅವನು ಆಣೆ ಮಾಡಿದ್ದಾನೆ."

"ಈ ಜನರಿಗೆ ಆಣೆಗಳ ಬೆಲೆ ಇರುವದಿಲ್ಲ. ನನ್ನ ಕಲ್ಪನೆಯೇ ಬೇರೆಯಾಗಿದೆ. ನಮ್ಮನ್ನು ಒಲಿಸಿಕೊಂಡಂತೆ ತೋರುತ್ತದೆ. ವಾಸುದೇವನು ಅಕಸ್ಮಾತ್ತಾಗಿ ನಮ್ಮ ಭೆಟ್ಟಿಗೆ ಬರಬಹುದೆಂದು ಅವನ ಊಹೆ ಇರಬೇಕು. ಹೀಗೆ ಬಂದ ವಾಸುದೇವನನ್ನು ಹಿಡಿದುಕೊಡಲು ಅವನಿಗೆ ಸುಲಭವಾಗದಿದ್ದೀತೆ?" ಎಂದು ಶಾಸ್ತ್ರಿಗಳು ಉಸಿರು ಹಾಕಿದರು.

ಈ ಮಾತುಗಳನ್ನು ಕೇಳಿ ಸೀತಮ್ಮನವರ ಹೃದಯ ಕಲಕಿ ಹೋಯಿತು. ಇಷ್ಟು ದಿನಗಳವರೆಗೆ ಮಗನನ್ನು ಕಾಣಬೇಕೆಂಬ ಹಂಬಲವನ್ನಿಟ್ಟುಕೊಂಡ ಆ ತಾಯಿಗೆ ಅವನು ಇಲ್ಲಿ ಬರುವುದೇ ಬೇಡವೆನ್ನಿಸಹತ್ತಿತು. ಆದರೆ ಈ ಮಾತನ್ನು ಅವನಿಗೆ ಹೇಗೆ ತಲುಪಿಸಬೇಕು? ಅವನು ಅಕಸ್ಮಾತ್ತಾಗಿ ಬಂದರೆ....ಗೌಡನು ಅವನನ್ನು ಹಿಡಿದು ಕೊಟ್ಟರೆ.... ಸೀತಮ್ಮ ಬೆದರಿದರು. "ದೇವರೆ! ನನ್ನ ಮಗನಿಗೆ ಮನೆಗೆ ಬರುವ ಬುದ್ಧಿಯನ್ನು ಕೊಡಬೇಡ. ಅವನು ಇದ್ದಲ್ಲಿ ಸುರಕ್ಷಿತನಾಗಿ ಇರಲಿ. ಮನೆಗೆ ಬರುವುದೇ ಬೇಡ." ಎಂದು ಪ್ರಾರ್ಥಿಸಿದರು.

೬

ವಾಸುದೇವನನ್ನು ಹಿಡಿದುಕೊಟ್ಟವರಿಗೆ ಐದು ಸಾವಿರ ರೂಪಾಯಿಗಳ ಬಹುಮಾನವನ್ನು ಕೊಡಲಾಗುವುದೆಂದು ಭಿತ್ತಿಪತ್ರಗಳು ಹಳ್ಳಿಗಳ ಗೋಡೆಗಳನ್ನಲಂಕರಿಸಿದರೂ ಅದರಿಂದ ಯಾವ ಪ್ರಯೋಜನವೂ ಆಗದಿರುವುದನ್ನು ಕಂಡ ಅಧಿಕಾರಿಗಳಿಗೆ ಏನು ಮಾಡಬೇಕೋ ತಿಳಿಯದಾಯಿತು. ಮೇಲಿಂದ ಮೇಲೆ ಬರುವ ಯೂರೋಪಿಯನ್ ಅಧಿಕಾರಿಯ ಎಚ್ಚರಿಕೆಗಳನ್ನು ಓದಿದ ಮೇಲಂತೂ ಅವರು ಹೌಹಾರಿದರು. ವಾಸುದೇವನನ್ನು ಹಿಡಿದುಕೊಡುವ ಭರವಸೆ ಕೊಟ್ಟ ಗೌಡನೂ ಮಾಯವಾಗಿದ್ದರಿಂದ ಅವರಲ್ಲಿ ನಿರಾಶೆಯೇ ಮೂಡತೊಡಗಿತು. ಗೌಡನು ವಾಸುದೇವನ ಶೋಧನೆಗಾಗಿಯೇ ಹೀಗೆ ಮಾಯವಾಗಿರಬೇಕೆಂಬ ನಂಬಿಕೆಯಾಗದಿದ್ದರೆ ಗಂಗನಹಳ್ಳಿಯಲ್ಲಿ ಮತ್ತೆ ದಬ್ಬಾಳಿಕೆಯ ಸತ್ರವು ಪ್ರಾರಂಭವಾಗಬಹುದಿತ್ತು. ಅವನಿಗೆ ಕೊಟ್ಟ ಆಶ್ವಾಸನದಂತೆ ಗಂಗನಹಳ್ಳಿಯಲ್ಲಿ ದಬ್ಬಾಳಿಕೆ ನಿಂತಂತೆ ತೋರಿದರೂ ಅದು ಬೇರೆ ಹಳ್ಳಿಯಲ್ಲಿ ಇಮ್ಮಡಿಯಾಗಿ ಹರಿಯತೊಡಗಿತು. ಇದಕ್ಕೆ ವಾಸುದೇವನ ಚಟುವಟಿಕೆಗಳೇ ಮುಖ್ಯ ಕಾರಣವಾಗಿದ್ದವು.

ಇಂದು ಒಂದು ಹಳ್ಳಿಯಲ್ಲಿ ಸಿಂದಿ, ಸರಾಯಿಗಳ ಪೀಪಾಯಿಗಳು ಉರುಳಿಹೋದರೆ ಇನ್ನೊಂದು ಹಳ್ಳಿಯ ಚಾವಡಿಯು ಸುಟ್ಟು ಭಸ್ಮವಾಗುತ್ತಿತ್ತು. ಹಳ್ಳಿಗಳಲ್ಲಿ ಲಾಯಿಸೆನ್ಸ ಪಡೆದುಕೊಂಡು ಬಂದೂಕುಗಳನ್ನಿಟ್ಟುಕೊಂಡವರ ಬಂದೂಕುಗಳೆಲ್ಲ ವಾಸುದೇವನ ಪಾಲಾಗಿಬಿಟ್ಟದ್ದವು. ಗೌಡ-ಕುಲಕರ್ಣಿಯರ 'ದಪ್ತರ'ಗಳೆಲ್ಲ ದಿನದಿನವೂ ಮಾಯವಾಗತೊಡಗಿದವು. ಒಮ್ಮೆಯಂತೂ ಶೋಧನೆಗಾಗಿ ಒಂದು ಹಳ್ಳಿಗೆ ಬಂದ ಏಳು ಜನ ಪೋಲೀಸರು ಚಾವಡಿಯಲ್ಲಿ ತಂಗಿ ತಮ್ಮ ಸಮವಸ್ತ್ರಗಳನ್ನೂ, ಬಂದೂಕುಗಳನ್ನೂ ತೆಗೆದಿರಿಸಿ ಒಬ್ಬನನ್ನು ಕಾವಲಿಟ್ಟು ಒಳಗಿನ ಕೋಣೆಯಲ್ಲಿ ಊಟಕ್ಕೆ ಕುಳಿತಾಗ ಕಾವಲುಗಾರನನ್ನು ಕಟ್ಟಿಹಾಕಿ ಆ ಪೋಲೀಸರನ್ನು ಕೋಣೆಯಲ್ಲಿಯೇ ಬಂಧಿಸಿ ಹೊರಚಿಲಕ ಹಾಕಿ ಬಂದೂಕುಗಳನ್ನೂ, ಸಮವಸ್ತ್ರಗಳನ್ನೂ ದೋಚಿಕೊಳ್ಳಲಾಯಿತು. ಈ ಸಂಗತಿ ಹಗಲಿನಲ್ಲಿಯೇ ನಡೆಯಿತು. ಇದನ್ನು ಅರಿತ ಪೋಲೀಸರ ಪಿತ್ತವು ನೆತ್ತಿಗೇರಿಬಿಟ್ಟಿತು. ಈ ಜನರಿಗೆ ಹಳ್ಳಿಗರೇ ಸಹಾಯವಾಗಿ ನಿಂತಿದ್ದುದು ಸ್ಪಷ್ಟವಾದದ್ದರಿಂದ ಅವರಿಗೆ ಕೊಡುವ ಪೀಡೆಯು ಸಹಿಸಲಸದಳವಾಯಿತು. ಏನಾದರೂ ಅವರಿಂದ ಒಂದು ಎಳೆಯೂ

ಸಿಗುತ್ತಿರಲಿಲ್ಲ. 'ಯಾರೋ ಬಂದರು, ಕಟ್ಟಿಹಾಕಿದರು, ದೋಚಿಕೊಂಡು ಹೋದರು' ಎಂದು ಹೇಳುತ್ತಿದ್ದರೇ ಹೊರತು ಯಾವ ಮಾತನ್ನೂ ತಿಳಿಯು ವಂತೆ ಹೇಳುತ್ತಿರಲಿಲ್ಲ. ಪೋಲೀಸರ ಹೊಡೆತಬಡೆತಗಳೆಲ್ಲ ನಿಷ್ಪ್ರಯೋಜಕ ವಾಗತೊಡಗಿದ್ದರಿಂದ ಅವರಲ್ಲಿ ಸೇಡಿನ ಬುದ್ಧಿಯು ಕಳಕಳಿಸಹತ್ತಿತು. ವಾಸುದೇವನ ಜನರು ಎಲ್ಲಿಂದ ಬರುವರು, ಎಲ್ಲಿ ಹೋಗುವರು ಎಂಬು ವದನ್ನು ತಿಳಿಯುವುದೇ ಕಷ್ಟವಾಗತೊಡಗಿತು. "ಈ ಬದಮಾಷರು ಭೂಮಿ ಯನ್ನು ಒಡೆದು ಬಂದು, ಭೂಮಿಯಲ್ಲಿಯೇ ಅಡಗುವಂತೆ ತೋರುತ್ತದೆ" ಎಂದು ಹಲ್ಲು ತಿನ್ನತೊಡಗಿದರು. ಒಂದು ದಿನ ಟಪಾಲು ಮೋಟಾರನ್ನು ನಿಲ್ಲಿಸಿ ಟಪಾಲು ಚೀಲಗಳನ್ನು ಕಸಿದುಕೊಂಡು ಹೋದದ್ದು ಸರಕಾರಕ್ಕೆ ಕೊಟ್ಟ ಆಹ್ವಾನವೇ ಆಗಿಬಿಟ್ಟಿತು. ಹಳ್ಳಿಗಳಲ್ಲಿ ಸರಕಾರದ ಆಡಳಿತವೇ ನಿಂತುಹೋಯಿತೇನೋ ಅನ್ನುವಂತಾಯಿತು. ತೆರಿಗೆ ವಸೂಲಿಗೆ ಬಂದ ಅಧಿಕಾರಿಗಳಿಗೆ ಅನ್ನನೀರು ಸಿಗದಂತೆ ವ್ಯವಸ್ಥೆಯಾಯಿತು. ತೆರಿಗೆಯನ್ನು ಕೊಡುವ ರೈತರು ಅಧಿಕಾರಿಗಳು ಬಂದಾಗ ಹಳ್ಳಿಯನ್ನೇ ಬಿಟ್ಟು ಹೋಗುತ್ತಿ ದ್ದುದರಿಂದ ವಸೂಲಿಯಾದರೂ ಹೇಗಾಗಬೇಕು? ಇದೆಲ್ಲಕ್ಕೂ ವಾಸುದೇವನೇ ಮೂಲ. ಈ ವಾಸುದೇವನನ್ನು ಹೇಗೆ ಹಿಡಿಯಬೇಕೆಂದು ಅಧಿಕಾರಿಗಳ ತಲೆ ತಿನ್ನಹತ್ತಿತು.

ಆ ವೇಳೆಗೆ ಸರಕಾರದಿಂದಲೂ ಒಂದು ವಿಲಕ್ಷಣ ಆಜ್ಞೆ ಬಂದಿತು. ಮುಖಂಡರು ಸರಕಾರದೊಡನೆ ಉಚ್ಚಮಟ್ಟದ ಚರ್ಚೆ ಸಾಗಿಸಿರುವರೆಂತಲೂ ಕಟುವಾದ ದಬ್ಬಾಳಿಕೆಯನ್ನು ನಿಲ್ಲಿಸಿ ಕೇವಲ ತೋರಿಕೆಯ ದಬ್ಬಾಳಿಕೆ ಯನ್ನು ಸಾಗಿಸಬೇಕೆಂತಲೂ ಅದರ ಅರ್ಥವಾಗಿತ್ತು. ಜೊತೆಗೆ ಸರಕಾರಕ್ಕೆ ಅವಮಾನವಾಗುವಂತಹ ಸಂಗತಿಗಳನ್ನು ನಿರ್ದಾಕ್ಷಿಣ್ಯದಿಂದ ಹತ್ತಿಕ್ಕ ಬೇಕೆಂದೂ ಕಾಣಿಸಲಾಗಿತ್ತು. ಈ ವಿಲಕ್ಷಣ ಆಜ್ಞೆಯಿಂದ ಹೇಗೆ ಕೆಲಸ ಮಾಡಬೇಕೆಂಬುದೇ ತಿಳಿಯದಾಯಿತು.

ಅದೇ ವೇಳೆಗೆ ಯೂರೋಪಿಯನ್ ಅಧಿಕಾರಿಯಿಂದ ಇನ್ನೊಂದು ಎಚ್ಚರಿಕೆ ಬಂದಿತು. ವಾಸುದೇವನ ಪ್ರಶ್ನೆ ಸರಕಾರದ ಹಾಗೂ ಪೋಲೀಸರ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಅವನನ್ನು ಹಿಡಿಯದಿದ್ದರೆ ಹೇಡಿತನವೇ ವ್ಯಕ್ತ ವಾದಂತೆ ಆಗುತ್ತದೆ. ಆದ್ದರಿಂದ ಸರ್ವಪ್ರಯತ್ನ ಮಾಡಿ ಅವನನ್ನು ಬಂಧಿಸ ಬೇಕೆಂಬುದೇ ಆ ಎಚ್ಚರಿಕೆಯ ತಿರುಳಾಗಿತ್ತು. ಅವನ ಬಂಧನದ ಸಮಯ ದಲ್ಲಿ ಏನಾದರೂ ಹಿಂಸೆಯನ್ನು ಮಾಡುವ ಪ್ರಸಂಗ ಬಂದರೂ ಸರಕಾರವು ಅದನ್ನು ಕ್ಷಮಿಸುವದು, ಎಂದೂ ಅದರಲ್ಲಿ ಕಾಣಿಸಲಾಗಿತ್ತು. ಕೊನೆಯ

ಎಚ್ಚರಿಕೆಯಾಗಿ ಈ ವಾರದಲ್ಲಿ ಏನಾದರೂ ವಾಸುದೇವನ ಇತ್ಯರ್ಥವಾಗ ದಿದ್ದರೆ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳ ಬಗ್ಗೆ ಗಂಭೀರವಾಗಿ ವಿಚಾರ ಮಾಡುವ ಪ್ರಸಂಗವೂ ಬರಬಹುದು, ಎಂಬ ಬೆದರಿಕೆ.

ಗಂಗನಹಳ್ಳಿಯ ಚಾವಡಿಯಲ್ಲಿ ಕುಳಿತು ಈ ಆಜ್ಞೆಗಳನ್ನೂ. ಎಚ್ಚರಿಕೆಯನ್ನೂ ಅಧಿಕಾರಿಗಳು ಗಂಭೀರವಾಗಿ ವಿಚಾರಿಸತೊಡಗಿದರು. ಮಾಯೆಯಾದ ಗೌಡನು ಒಂದೆರಡು ದಿನಗಳಲ್ಲಿ ಏನಾದರೂ ಸುದ್ದಿ ತರುವನೆಂಬ ಭರವಸೆಯೂ ಮಾಯವಾಗತೊಡಗಿದ್ದರಿಂದ ಅವರು ಗಂಗನಹಳ್ಳಿಯ ಸುತ್ತಲೂ ಭದ್ರವಾದ ಕಾವಲನ್ನಿಡಲು ನಿರ್ಧರಿಸಿದರು. ಗಂಗನಹಳ್ಳಿಯೇ ಮಧ್ಯವರ್ತಿ ಸ್ಥಳವಾದ್ದರಿಂದ ಹೆಚ್ಚಿನ ಪೋಲೀಸ್ ಪಡೆಯು ಈ ಚಾವಡಿಯಲ್ಲಿಯೇ ಇರುತ್ತಿತ್ತು. ಅವರಲ್ಲಿ ಕೆಲವರನ್ನು ಹಳ್ಳಿಯ ಸುತ್ತಲೂ ಕಾವಲಾಗಿ ಇರಿಸಲಾಯಿತು. ರಾಮಾಶಾಸ್ತ್ರಿಗಳ ಮನೆಗೆ ಹೋಗಿ ಬರುವವರನ್ನು ಸೂಕ್ಷ್ಮವಾಗಿ ಪರಿಶೀಲಿಸುವ ವ್ಯವಸ್ಥೆ ಮಾಡಲಾಯಿತು. ಅವರ ಮನೆಯ ಮುಂದೆ ಅಜ್ಜಗಾವಲು ಪೋಲೀಸನೊಬ್ಬನು ಕಾವಲು ನಿಲ್ಲತೊಡಗಿದನು. ಮೂರು ತಾಸುಗಳಿಗೊಮ್ಮೆ ಈ ಪೋಲೀಸನು ಬದಲಾಗುತ್ತಿದ್ದನು.

ಹಳ್ಳಿಯ ಜನರಿಗೆ ಅದೇನೋ ಹೆಚ್ಚಿನ ಗಂಡಾಂತರವು ಬರಲಿದೆಯೆಂಬುದು ಇದರಿಂದ ಸ್ಪಷ್ಟವಾಯಿತು. ಅವರಿಗೆ ತುಸು ಭಯವೂ ಆಗತೊಡಗಿತು.

ಪೋಲೀಸರು ಹೆಚ್ಚಿನ ಕಾವಲನ್ನು ಮಾಡುತ್ತಿದ್ದರೇ ಹೊರತು ಇಲ್ಲದ ಉಸಾಬರಿಯನ್ನು ಮಾಡುತ್ತಿರಲಿಲ್ಲ. ಹಳ್ಳಿಗರಿಗೆ ಈ ಪ್ರವೃತ್ತಿಯಿಂದ ತುಸು ಸಮಾಧಾನವಾದರೂ ಯಾವ ಹೊತ್ತಿನಲ್ಲಿ ದಬ್ಬಾಳಿಕೆ ಸ್ಫೋಟವಾಗಬಹುದೋ ಮತ್ತೆ ಎಂದು ಸಂದೇಹವನ್ನೂ ತಾಳತೊಡಗಿದರು. ಈ ಸಂದೇಹಕ್ಕೆ ಗೌಡನು ಕಾರಣವಿರುವದೂ ಒಂದು ಕಾರಣವಾಗಿತ್ತು.

ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ರಾಮಾಶಾಸ್ತ್ರಿಗಳ ಮನೆಯ ಮುಂದೆ ಅಜ್ಜಗಾವಲು ಮಾಡುತ್ತಿದ್ದ ಪಹರೆಯವನು ಬದಲಾಗಿ ಆ ಸ್ಥಳವನ್ನು ಇನ್ನೊಬ್ಬ ಯುವಕ ಪೋಲೀಸನು ಕಾಯತೊಡಗಿದನು. ಅದೇ ವೇಳೆಗೆ ಸರಿಯಾಗಿ ಭಿಕ್ಷುಕನೊಬ್ಬನು ಶಾಸ್ತ್ರಿಗಳ ಮನೆಯ ಎದುರು ಬಂದು ನಿಂತನು. ಆ ಭಿಕ್ಷುಕನು ಕೊಳಕು ಬಟ್ಟೆಗಳನ್ನು ಧರಿಸಿದ್ದನು. ಮುಖದ ಮೇಲಿನ ಹರಕು ಗಡ್ಡಗಳನ್ನು ನೋಡಿದರೆ ಮುಖವೇ ಅಸಹ್ಯ ಬರುವಂತಿತ್ತು. ಕೈಯಲ್ಲಿ ಹಿಡಿದ ಅಲ್ಯೂಮಿನಿಯಮ್ ತಟ್ಟೆಯು ಮಾಸಲು ಬಣ್ಣಕ್ಕೆ ತಿರುಗಿದ್ದಿತು. ಕಾಲಲ್ಲಿ ಧರಿಸಿಕೊಂಡ ಚಪ್ಪಲಿಗಳನ್ನೂ ಬೇರೆ ಬೇರೆ ಕಡೆಯಲ್ಲಿ

ಅರಿವೆಯ ತುಂಡುಗಳಿಂದ ಕಟ್ಟಿಕೊಂಡಿದ್ದನು. ತೀರ ಅಸಹ್ಯ ಬರುವಂಥ ಭಿಕ್ಷುಕನಿವನು.

ಈ ಭಿಕ್ಷುಕನನ್ನು ನೋಡಿದ ಕೂಡಲೇ ಪೋಲೀಸಿನವನು ಮುಂದೆ ಬಂದು ಕಣ್ಣು ಮಿಟುಕಿಸಿದನು. ಭಿಕ್ಷುಕನು 'ವಾಸುದೇವಾಯನಮಃ' ಎಂದ ಕೂಡಲೇ ಪೋಲೀಸನು ಸುತ್ತಲೂ ನೋಡಿ ಯಾರೂ ಇಲ್ಲದ್ದನ್ನು ಗಟ್ಟ ಮಾಡಿಕೊಂಡು ಅವನನ್ನು ಶಾಸ್ತ್ರಿಗಳ ಮನೆಯೊಳಕ್ಕೆ ತಳ್ಳಿ ಬಾಗಿಲು ಹಾಕಿಕೊಂಡನು.

ಭಿಕ್ಷುಕನು ನೇರವಾಗಿ ನಡುಮನೆಗೆ ಹೋದಾಗ ಅಲ್ಲಿ ರಾಮಾಶಾಸ್ತ್ರಿಗಳು ಹಾಸಿಗೆಯ ಮೇಲೆ ಅಂಗತ್ತಲಾಗಿ ಮಲಗಿದ್ದರು. ಅವರ ಗಾಯಗಳು ಮಾಯತೊಡಗಿದ್ದರಿಂದ ಹಾಗೆ ಮಲಗಲು ಅವರಿಗೆ ಸಾಧ್ಯವಾಗಿತ್ತು. ಆದರೂ ದೇಹದ ಬೇರೆಬೇರೆ ಭಾಗಗಳಲ್ಲಿ ಎದ್ದ ಬಾಸುಂಡೆಗಳು ಹಸಿರುಗಟ್ಟಿ ಭಯಾನಕವಾಗಿಯೇ ಇದ್ದವು. ಅವರ ಮಗ್ಗುಲಲ್ಲಿ ಸೀತಮ್ಮನವರು ಹಣೆಗೆ ಕೈಹಚ್ಚಿಕೊಂಡು ಶೂನ್ಯಮನಸ್ಕರಾಗಿ ಕುಳಿತಿದ್ದರು. ಮಕ್ಕಳ ಚಿಂತೆಯಿಂದ ಸುಕ್ಕುಗಟ್ಟಿದ ಅವರ ಮುಖವು ಕಳಾಹೀನವಾಗಿತ್ತು. ಆಳವಾದ ಚಿಂತೆಯಲ್ಲಿ ಮುಳುಗಿದ ಆ ಮನೆಯ ದುಗುಡವು ನಡುಮನೆಯಲ್ಲಿ ಕೇಂದ್ರೀಕೃತವಾದಂತಿತ್ತು.

"ತಾತ್ಯಾ!"

ದನಿಯನ್ನು ಗುರುತಿಸಿದ ಸೀತಮ್ಮನವರು ಚಟಕ್ಕನೆ ಎದ್ದು. "ನೀನೇಕೆ ಬಂದೆಯೋ? ಜಯದೇವ! ನನ್ನಪ್ಪಾ!" ಎನ್ನುತ್ತ ನಡುಮನೆಯ ಬಾಗಿಲವನ್ನು ಭದ್ರವಾಗಿ ಇಕ್ಕಿ "ಸುತ್ತಲೂ ಪೋಲೀಸರು ಕಾವಲಿದ್ದಾರೆ. ನೀನು ಸಿಕ್ಕುಬೀಳುವದು ಖಂಡಿತ. ಪೋಲೀಸರ ಕಣ್ಣು ತಪ್ಪಿಸಿ ಹಗಲು ಹೊತ್ತಿನಲ್ಲಿ ಹೀಗೆ ಬರಬಹುದೆ?" ಎಂದು ಗಾಬರಿಯಾದ ದನಿಯಲ್ಲಿ ಹೇಳಿದ ಸೀತಮ್ಮನವರನ್ನು ಅನುಮೋದಿಸುವಂತೆ ರಾಮಾಶಾಸ್ತ್ರಿಗಳು "ಈ ಅಗ್ನಿ ಕುಂಡದಲ್ಲಿ ಹಾರಿಕೊಳ್ಳಲು ಬರುವಂತಹ ಕೆಲಸವೇನಿತ್ತು ಜಯದೇವ? ನೀನು ಬಂದು ಒಳ್ಳೆಯ ಕೆಲಸ ಮಾಡಲಿಲ್ಲ ಮಗೂ! ಕೂಡಲೇ ಹೊರಟು ಹೋಗು." ನಡುಗುವ ದನಿಯಲ್ಲಿ ಹೇಳಿ ಗಂಡಾಂತರವನ್ನು ಸೂಚಿಸಿದರು. ತಂದೆಯ ಅವಸ್ಥೆಯನ್ನು ಕಣ್ಣಾರೆ ಕಂಡ ಜಯದೇವನ ಎದೆಯು ಝಲ್ಲೆಂದಿತು. ಅವನು ತಂದೆಯನ್ನು ತಬ್ಬಿಕೊಂಡು ಬಿಕ್ಕಳಿಸಿಬಿಟ್ಟನು.

"ಹಾಗೆ ಅಪ್ಪಿಕೊಳ್ಳಬೇಡ ಜಯದೇವ! ಗಾಯಗಳಿನ್ನೂ ಮಾಯ್ದಿಲ್ಲ. ನೀನು ಇಲ್ಲಿಗೇಕೆ ಬಂದಿ ಹೇಳು?"

ತಂದೆತಾಯಿಗಳು ತನಗಾಗಿ ಬಹಳ ಗಾಬರಿಯಾಗಿರುವದನ್ನು ನೋಡಿ ಜಯದೇವನು ಕಣ್ಣೊರಿಸಿಕೊಂಡು, "ಗಾಬರಿಯಾಗುವ ಕಾರಣವಿಲ್ಲ ತಾತ್ಯಾ! ಕಾವಲಿನ ಪೋಲೀಸನು ನಮ್ಮವನಾಗಿದ್ದಾನೆ. ಇನ್ನು ಮೂರು ತಾಸುಗಳವರೆಗೆ ಈ ಕಡೆಗೆ ಯಾರೂ ಸುಳಿಯುವಂತಿಲ್ಲ."

"ಅದೇನೇ ಇದ್ದರೂ ನೀನು ಬರಬಾರದಾಗಿತ್ತು."

"ಗೌಡನ ಬಾಯಿಂದ ನಿಮ್ಮ ಪರಿಸ್ಥಿತಿಯನ್ನು ಕೇಳಿ ತಿಳಿದ ನಮ್ಮ ಜೀವ ಹೇಗೆ ನಿಂತೀತು ಹೇಳಿರಿ ತಾತ್ಯಾ! ಈ ಕಟುಕರು ನಿಮ್ಮ ಚರ್ಮವನ್ನೇ ಸುಲಿದಿದ್ದಾರೆ" ಎಂದು ಜಯದೇವನು ಆ ಗಾಯುಗಳ ಮೇಲೆ ಕೈಯಾಡಿಸುತ್ತ ಉದ್ವೇಗದುಂಬಿದನು.

"ಗೌಡನ ಬಲೆಯಲ್ಲಿ ನೀವು ಸಿಕ್ಕುಬಿಟ್ಟಿರಾ?" ರಾಮಾಶಾಸ್ತ್ರಿಗಳು ಸಂದೇಹ ಮನಸ್ಕರಾಗಿ ಆತುರದಿಂದ ಕೇಳಿದರು.

"ಅವನೇ ನಮ್ಮ ಬಲೆಯಲ್ಲಿ ಬಂದು ಬಿದ್ದಿದ್ದಾನೆ. ಅವನೀಗ ನಮ್ಮ ತಂಡವನ್ನು ಸೇರಿ ಅದ್ಭುತ ಕಾರ್ಯ ಮಾಡತೊಡಗಿದ್ದಾನೆ. ಅಣ್ಣನ ಪರಮ ಭಕ್ತನಾಗಿದ್ದಾನೆ. ಅಣ್ಣನ ಪ್ರಭಾವಲಯದಲ್ಲಿ ಸಿಕ್ಕುಬಿದ್ದ ಅವನು ಯಾವ ಮೋಸವನ್ನೂ ಮಾಡಲಾರ. ಅವನೀಗ ಸಂದೇಹಾತೀತನಾಗಿಬಿಟ್ಟಿದ್ದಾನೆ."

"ಅಂತೂ ಗೌಡನು ತನ್ನ ಪ್ರತಿಜ್ಞೆಯನ್ನು ಕಾಯ್ದುಕೊಂಡನು." ಎಂದು ರಾಮಾಶಾಸ್ತ್ರಿಗಳು ಸಮಾಧಾನದಿಂದ ನುಡಿದರು.

"ಅವನೀಗ ಪೂರಾ ವಿಶ್ವಾಸಿಕ ತಾತ್ಯಾ! ಆ ದಿನ ಅವನು ನಿಮ್ಮ ದೇಹಾರೋಗ್ಯದ ಪರಿಸ್ಥಿತಿಯನ್ನು ಕಲ್ಲು ಕರಗುವಂತೆ ಹೇಳಿದಾಗ ಅಣ್ಣನಂತೂ ಪೂರಾ ಕರಗಿಹೋದ. ಅಣ್ಣನ ಕಣ್ಣೊಳಗಿಂದ ನೀರು ಬಳಬಳನೆ ಸುರಿಯತೊಡಗಿದವು.

"ನಮ್ಮಿಂದ ತಂದೆಗೆ ಬಹಳ ತೊಂದರೆಯಾಯಿತು ಗೌಡರೇ! ಎಂದು ಉದ್ಗಾರ ತೆಗೆದು ಒಮ್ಮೆ ಗಟ್ಟಿಯಾಗಿ ಬಿಕ್ಕಳಿಸಿಬಿಟ್ಟನು."

ಈ ಮಾತನ್ನು ಕೇಳಿ ದಂಪತಿಗಳು ಹನಿದುಂಬಿದರು. ರಾಮಾಶಾಸ್ತ್ರಿಗಳು ಗದ್ಗದಿತರಾಗಿ "ಅವನಿಂದ ನನಗೆ ತೊಂದರೆಯೆ? ಅವನು ಹಾಗೆ ತಿಳಿದುಕೊಂಡದ್ದೇ ತಪ್ಪು. ಇಂತಹ ಮಗನು ಪೂರ್ವಜನ್ಮದ ಪುಣ್ಯದಿಂದ ದೊರಕುತ್ತಾನೆ" ಎಂದು ಅಂದುಕೊಂಡರು.

"ಕೆಲ ಸಮಯ ಅಣ್ಣನು ಮೌನವಾಗಿದ್ದುಕೊಂಡು ಒಮ್ಮೆಲೆ ಎದ್ದು ನಿಂತು, ನಾನು ಗಂಗನಹಳ್ಳಿಗೆ ಬರುತ್ತೇನೆ. ಅವ್ವನು ಗಾಬರಿಯಾಗಿದ್ದಾಳು. ತಾತ್ಯಾನ ವೇದನೆಯನ್ನು ನಾನೊಮ್ಮೆ ನೋಡಿ ಬಂದೆನೆಂದರೆ ನನ್ನೆದೆಯೂ

ಹಗುರಾಗುವದು. ಅವರಿಗೂ ಧೈರ್ಯ ಬರುವದು, ಎಂದು."

"ನೀನು ಹೋಗಕೂಡದು ವಾಸಪ್ಪ! ನಿನ್ನ ಮೇಲೆ ಎಂತಹ ಆಜ್ಞೆ ಯಿದೆ ಎಂಬುದನ್ನು ಬಲ್ಲೆಯಾ? ನಾನು ನಿನ್ನನ್ನು ಹೋಗಗೊಡುವದಿಲ್ಲ. ನಾನೇ ಹೋಗಿ ಮಾಸ್ತರರನ್ನು ನೋಡಿಕೊಂಡು ಬರುತ್ತೇನೆ, ಎಂದು ಗೋವಿಂದನು ತಡೆದನು. ಕೊನೆಗೆ ಚರ್ಚೆಯಾಗಿ ಗೋವಿಂದನೊಡನೆ ನಾನೂ ಬರಬೇಕೆಂದು ಹಟ ಹಿಡಿಯಲು ಗೋವಿಂದನು ಒಪ್ಪಿದನು."

"ಗೋವಿಂದನೂ ಬಂದಿರುವನೆ?" ಸೀತಮ್ಮ ಕೇಳಿದರು.

"ವೇಷಾಂತರದಿಂದ ಇಲ್ಲಿಯೇ ಸುತ್ತುತ್ತಿರುವನು. ಮಾಸ್ತರರ ಮೇಲೆ ಕೈಮಾಡಿದ ಆ ಅಧಿಕಾರಿಗಳ ಮೂಗು ಕೊಯ್ಯದಿದ್ದರೆ ನಾನೇಕೆ ಬಾಳ ಬೇಕು? ಎಂದು ಹಟವನ್ನೇ ತೊಟ್ಟಿರುವನು."

ಈ ಮಾತನ್ನು ಕೇಳಿ ರಾಮಾಶಾಸ್ತ್ರಿಗಳು ನಡುಗಿದರು. ಗೋವಿಂದನು ಹುಂಬತನದಿಂದ ಪೋಲೀಸರನ್ನು ಕೆರಳಿಸಿ ಯಾವ ಅನಾಹುತವನ್ನು ಉಂಟು ಮಾಡುವನೋ ಎಂಬುದು ಅವರ ಚಿಂತೆಗೆ ಕಾರಣವಾಯಿತು.

"ಗೋವಿಂದನನ್ನು ಹಾಗೆ ಸಡಿಲು ಬಿಡಬಾರದು ಜಯದೇವ!"

"ಅವನು ಅಣ್ಣನ ಆಜ್ಞೆಯನ್ನು ಮೀರಿ ನಡೆಯುತ್ತಿರುವುದಿಲ್ಲ ತಾತ್ಯಾ!"

"ಅಲ್ಲವೋ ಜಯದೇವ. ಈ ಚಳವಳಿ ಬೇಗನೇ ಮುಗಿಯುವದಿದೆ ಯೆಂದು ಗೌಡನು ಹೇಳಿದನಲ್ಲ, ಇದು ನಿಜವೆ?" ಎಂದು ಸೀತಮ್ಮ ಜೀವ ನಿಲ್ಲಲಾರದೆ ಕೇಳಿದರು.

"ಅದನ್ನು ನಿಶ್ಚಿತವಾಗಿ ಹೇಳಲು ಬರುವದಿಲ್ಲ ಅವ್ವಾ! ಏನೋ ಉಚ್ಚ ಮಟ್ಟದ ಮಾತುಕತೆಗಳು ನಡೆದಿವೆ. ಆದರೆ ಅವೆಲ್ಲ ಒಮ್ಮೆಲೇ ಮುರಿದು ಹೋಗುವ ಸಂಭವವೇ ಹೆಚ್ಚಾಗಿರುವದರಿಂದ ನಾವು ನಮ್ಮ ಕಾರ್ಯವನ್ನು ಸಡಿಲು ಬಿಡುವದಿಲ್ಲ" ಎಂದು ಜಯದೇವನು ಹೇಳಲು ಸೀತಮ್ಮನವರು ನಿಟ್ಟುಸಿರು ಹಾಕಿದರು.

"ನಿನಗೆ ಚಿಂತೆಯೇ ಅವ್ವಾ!"

"ಮಕ್ಕಳು ಅಗ್ನಿಕುಂಡದಲ್ಲಿ ಹಾರಿ ನಿಂತಿರುವಾಗ ನನಗೆ ಹೇಗೆ ಸಮಾ ಧಾನವಿರಬೇಕು ಹೇಳು. ಪ್ರಸಂಗ ಬಂದರೆ ವಾಸುದೇವನನ್ನು ಗುಂಡಿಕ್ಕಲೂ ಆಜ್ಞೆಯಾಗಿದೆಯಂತೆ" ಎಂದು ಹೇಳಿದ ಸೀತಮ್ಮನವರ ದನಿ ನಡುಗುತ್ತಿತ್ತು.

"ಅಣ್ಣನ ಬಗ್ಗೆ ನೀನು ಎಳ್ಳಷ್ಟೂ ಕಾಳಜಿ ಮಾಡುವ ಕಾರಣವಿಲ್ಲ. ಅವನನ್ನು ಹೂವಿನಂತೆ ಜೋಪಾನ ಮಾಡತೊಡಗಿದ್ದಾರೆ ಅವನ ಭಕ್ತರು.

ಅವನನ್ನು ಒಂಟಿಯಾಗಿ ಎಲ್ಲಿಯೂ ಬಿಡುತ್ತಿರುವದಿಲ್ಲ. ಈ ಜನರು ತಿಪ್ಪರ ಲಾಗ ಹಾಕಿದರೂ ಅಣ್ಣನ ಸುಳಿವು ಸಿಕ್ಕಲಾರದು. ನೀನು ನಿಶ್ಚಿಂತೆಯಾಗಿರ ಬೇಕು."

"ಅವನನ್ನು ಜಾಗ್ರತೆಯಿಂದ ಕಾಪಾಡಬೇಕು ಮಗೂ! ಅವನನ್ನು ನೆನೆದು ನನ್ನ ಕರುಳು ಮುದುಡಿಯಾಗುತ್ತವೆ."

"ಅವನನ್ನು ಕಾಪಾಡಲು ಕಂಕಣಬದ್ಧರಾಗಿದ್ದೇವೆ. ಅವನು ಎಲ್ಲರ ಕಣ್ಣು. ಎಲ್ಲರ ಬೆಳಕು."

"ಅಧಿಕಾರಿಗಳ ತಲೆಸೂಲಿ. ಅಲ್ಲವೇ ಜಯದೇವ!"

ಜಯದೇವನು ಮುಗುಳುನಗೆಯಿಂದ

"ಅವರ ಕನಸಿನ ಭೂತ"ವೆಂದನು.

ಆ ವೇಳೆಗೆ ಸೀತಮ್ಮನವರು ಒಳಗೆ ಹೋಗಿ ಇದ್ದಲು ವಲಿಯನ್ನು ತಂದರು. ಶಾಸ್ತ್ರಿಗಳ ನೋವುಗಳಿಗೆ ಶಾಖ ಕೊಡುವ ವೇಳೆಯಾಗಿದ್ದರಿಂದ ನಿಗಿನಿಗಿಯಾದ ಕೆಂಡವನ್ನು ಮಾಡಿಕೊಂಡು ಬಂದರು.

"ಜಯದೇವನ ಭೆಟ್ಟಿಯಾಗಿದ್ದರಿಂದ ನನ್ನ ನೋವೇ ಮಾಯ ವಾಗಿದೆ. ನೀನು ಯಾತಕ್ಕೆ ಇಷ್ಟು ಬಳಲುತ್ತೀಯೆ?" ಎಂದು ರಾಮಾ ಶಾಸ್ತ್ರಿಗಳು ಹೆಂಡತಿಯನ್ನು ನೋಡುತ್ತ ಹೇಳಿದರು.

"ಅವ್ವಾ! ಅಣ್ಣನು ಔಷಧ ಕಳಿಸಿದ್ದಾನೆ. ಈ ಪುಡಿಯನ್ನು ನೀರಿನಲ್ಲಿ ಕುದಿಸಿ ಆ ನೀರಿನಿಂದ ಗಾಯಗಳನ್ನು ತೊಳೆಯಬೇಕು. ಆಮೇಲೆ ಈ ಔಷಧ ದಿಂದ ಅವಕ್ಕೆ ಲೇಪನ ಮಾಡಬೇಕು." ಎಂದು ಹೇಳಿ ಜಯದೇವನು ಎರಡು ಪೊಟ್ಟಣಗಳನ್ನು ಹೊರಕ್ಕೆ ತೆಗೆದನು.

"ವಾಸುದೇವನು ಔಷಧ ಕಳಿಸಿರುವನೆ?"

"ಹೌದು ತಾತ್ಯಾ!"

ದಂಪತಿಗಳಿಬ್ಬರ ಕಣ್ಣಂಚಿನಲ್ಲಿ ನೀರಾಡಿತು.

"ಇಂತಹ ಮಗನನ್ನು ಪಡೆದ ನಿನ್ನ ಹೊಟ್ಟೆಯ ಪುಣ್ಯ ಬಹಳ ದೊಡ್ಡದು" ಎಂದು ಶಾಸ್ತ್ರಿಗಳು ಧೋತರ ಚುಂಗಿನಿಂದ ಕಣ್ಣೊರಸಿಕೊಂಡರು.

ಜಯದೇವನು ಶಾಸ್ತ್ರಿಗಳ ನೋವನ್ನು ತೊಳೆಯುತ್ತಿರುವಾಗ ಅವರ ದೇಹದ ಮೇಲೆ ಎದ್ದ ಬಾಸುಂಡೆಗಳನ್ನು ಕಂಡು ಕರಗಿಹೋದನು. ಅವನು ಕಣ್ಣೀರನ್ನು ಸೂಸುತ್ತ

"ಏನು ಬಾಸುಂಡೆಗಳಿವು ತಾತ್ಯಾ! ಈ ನೀಚರ ಕಟುಕತನಕ್ಕೆ ಎಂತಹ ಘೋರ ನಿದರ್ಶನವಿದು?" ಎನ್ನಲು

"ಇವು ನನ್ನ ದೇಹದ ಮೇಲೆ ಎದ್ದ ಬಾಸುಂಡೆಗಳಲ್ಲವಪ್ಪಾ ಜಯ ದೇವ! ಇವು ದೇಶದ ಬೆನ್ನ ಮೇಲೆ ಮೂಡಿದ ಬಾಸುಂಡೆಗಳು. ಈ ನೋವು ನನ್ನದಲ್ಲ; ದೇಶದ್ದು."

"ತಾತ್ಯಾ! ತಾತ್ಯಾ!" ಎಂದು ಜಯದೇವನು ವಿಹ್ವಲನಾದನು.

ಆ ಬಾಸುಂಡೆಗಳನ್ನೂ, ಆ ಹಚ್ಚಗೆ ಹಸುರಾಗಿ ತೋರುವ ನೋವಿನ ಗುರುತುಗಳನ್ನೂ, ಆ ನೋವನ್ನು ಶಾಂತಚಿತ್ತದಿಂದ ಸಹಿಸುತ್ತಿರುವ ತಂದೆ ಯನ್ನೂ ಕಂಡು ಜಯದೇವನು ಒಂದು ನಿರ್ಧಾರಕ್ಕೆ ಬಂದನು. ಇಂತಹ ವಿಷಮ ಪರಿಸ್ಥಿತಿಯಲ್ಲಿ ತಂದೆಯನ್ನು ಅವನ ಪಾಡಿಗೆ ಬಿಟ್ಟು ಹೋಗುವದ ಕ್ಕಿಂತ ಕೆಲವು ದಿನ ಇಲ್ಲಿಯೇ ನಿಂತು ಸೇವೆ ಮಾಡಬೇಕೆಂಬ ಅವನ ಇಚ್ಛೆಯು ಆ ಕ್ಷಣ ಪ್ರಬಲವಾಗತೊಡಗಿತು. ಅವನು ಆ ಮಾತನ್ನು ತಂದೆಗೆ ಹೇಳಿ ಅವರಿಂದ ಸಮ್ಮತಿ ಪಡೆಯಲು ಹಾತೊರೆಯತೊಡಗಿದನು.

"ನಿಮ್ಮ ಗಾಯಗಳೆಲ್ಲ ಸಂಪೂರ್ಣ ಮಾಯುವವರೆಗೆ ನಾನಿಲ್ಲಿಯೇ ಇದ್ದು ಬಿಡುತ್ತೇನೆ ತಾತ್ಯಾ! ನಿಮ್ಮ ಈ ವೇದನೆಯನ್ನು ಕಂಡ ಮೇಲೆ ನನ್ನ ಕಾಲುಗಳಾದರೂ ಹೇಗೆ ಎದ್ದಾವು? ಹೇಗಿದ್ದರೂ ಗೋವಿಂದನೂ ಇಲ್ಲಿ ಬಂದಿದ್ದಾನೆ. ಅವನೊಡನೆ ಅಣ್ಣನಿಗೆ ಹೇಳಿಕಳಿಸುತ್ತೇನೆ. ಬಾಸುಂಡೆ ಗಳನ್ನು ನೋಡಿ ನನ್ನ ಹೃದಯವೇ ಇಬ್ಭಾಗವಾಗಿದೆ." ಎಂದು ಔಷಧ ಸವರ ತೊಡಗಿದನು.

ರಾಮಾಶಾಸ್ತ್ರಿಗಳು ಮಗನನ್ನು ತಡೆದು ಹೇಳಿದರು:

"ದೇಶದ ಕಾರ್ಯದಲ್ಲಿ ಅಂತಃಕರಣವು ಅಡ್ಡಬರಬಾರದು ಮಗೂ! ನನಗೆ ಅಂತಹುದು ಆಗಿದೆಯಾದರೂ ಏನು? ಒಂದೆರಡು ದಿನಗಳಲ್ಲಿ ಈ ನೋವುಗಳೆಲ್ಲ ಮಾಯವಾಗಿಬಿಡುತ್ತವೆ. ನನ್ನ ಸಲುವಾಗಿ ನೀನು ಗಂಡಾಂ ತರದಲ್ಲಿ ಬೀಳುವುದು ಬೇಡ. ನನ್ನ ಸೇವೆಗಿಂತಲೂ ದೇಶದ ಸೇವೆ ಹೆಚ್ಚಿ ನದು."

"ಆದರೆ ತಾತ್ಯಾ........"

"ದೇಶದ ಕಾರ್ಯದಲ್ಲಿ ಅಡ್ಡಬಂದ ಪಾಪವನ್ನು ನನ್ನ ಕೊರಳಿಗೆ ಕಟ್ಟಬೇಡ ಜಯದೇವ! ನಾನೊಂದು ಕ್ಷುದ್ರಜೀವಿ........"

"ನಿಮ್ಮ ಘನತೆ ಯಾರಿಗೆ ಬಂದೀತು ತಾತ್ಯಾ!"

"ಆ ಮಾತಿರಲಿ ಬಿಡು. ನೀನು ಈಗಲೇ ಹೊರಟುಬಿಡು. ಸುತ್ತಲೂ ಪೋಲೀಸರಿದ್ದಾರೆ. ನೀನು ಸಿಕ್ಕುಬಿದ್ದೆಯೆಂದರೆ ಆಗಬೇಕಾದ ಕೆಲಸಕ್ಕೆ ಹಾನಿಯಾಗುವುದು. ನನ್ನ ರಕ್ಷಣೆಗಿಂತ ನೀನು ವಾಸುದೇವನ ರಕ್ಷಣೆ

ಮಾಡುಹೋಗು. ವಾಸುದೇವನ ರಕ್ಷಣೆಮಾಡುವದೆಂದರೆ ದೇಶದ ರಕ್ಷಣೆ ಮಾಡಿದಂತೆ."

"ನಿಮ್ಮನ್ನು ಈ ಪರಿಸ್ಥಿತಿಯಲ್ಲಿ ಬಿಟ್ಟು ಹೋಗಲು........"

"ಈ ಭಾರ ನನ್ನ ಮೇಲಿದೆ ಮಗೂ! ಅವರ ಸೇವೆಗೆ ನಾನಿಲ್ಲವೆ? ನೀನಿಲ್ಲಿ ಉಳಿದರೆ ವಾಸುದೇವನ ಗತಿಯೇನು? ಅವನಿಗೆ ಹೆದರಿಬಿದ್ದು ಹೋಗಬೇಡವೆಂದು ಹೇಳು." ಸೀತಮ್ಮನವರು ವಾಸುದೇವನ ಬಗ್ಗೆ ಚಿಂತಿಸುತ್ತ ಜಯದೇವನಿಗೆ ಅಲ್ಲಿ ನಿಲ್ಲದಿರುವಂತೆ ಮನವೊಲಿಸಿದರು.

"ಅವ್ವಾ, ನಿನ್ನ ಧೈರ್ಯ ಎಂತಹುದೇ ತಾಯಿ!"

ಜಯದೇವನು ತಾಯಿಯ ಪಾದಗಳನ್ನು ಕಣ್ಣೀರಿನಿಂದ ತೋಯಿಸಿದನು. ಆ ವೇಳೆಗೆ ಆಗಲೇ ಮಬ್ಬುಗತ್ತಲಾಗತೊಡಗಿತು. ಸೀತಮ್ಮನವರು ದೀಪ ಹಚ್ಚಿ ತಂದರು. ಆ ದೀಪದ ಬೆಳಕಿನಲ್ಲಿ ತಾಯಿಯ ಮುಖವನ್ನು ನೋಡಿದಾಗ ಹರಿದ ಕಣ್ಣೀರುಗಳ ಗುರುತು ಅಲ್ಲಿ ಕಾಣಿಸಿತು.

"ಅವ್ವಾ!"

"ನೀನು ಹೊರಟುಬಿಡು" ತುಟಿ ಕಚ್ಚಿ ಹೇಳಿದರು ಸೀತಮ್ಮ!

ಆ ಹೊತ್ತಿಗೆ ಹೊರಗೆ ಕಾವಲು ನಿಂತ ಪೋಲೀಸನು ಒಮ್ಮೆ ಜೋರಾಗಿ ಕೆಮ್ಮಿದನು. ಅದು ವೇಳೆಯಾದ ಸಂಕೇತವಾಗಿತ್ತು.

"ನಾನು ಹೋಗಿಬರಲೇ ತಾತ್ಯಾ!"

"ಸಂತೋಷದಿಂದ ಹೋಗಿಬಾ! ಹೀಗೆ ಕಣ್ಣೀರು ಹಾಕಬಾರದು. ನನಗೆ ಏನೂ ಆಗಿಲ್ಲವೆಂದು ವಾಸುದೇವನಿಗೆ ಹೇಳು. ಅವನ ಬಗ್ಗೆ ನನ್ನ ಮನಸ್ಸು ಕೊರೆಯುತ್ತದೆ. ಗಂಡಾಂತರದ ಸನ್ನಿವೇಶಗಳಿಂದ ದೂರವಿರಲು ಹೇಳು. ಈ ರಾಷ್ಟ್ರಯಜ್ಞವು ಕೊನೆಗೊಳ್ಳುವುದರಲ್ಲಿದೆ; ದುಡುಕದಿರಲು ಹೇಳು. ಅವನಿಂದ ರಾಷ್ಟ್ರಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಬೇಕಾಗಿದೆ. ಉದ್ವೇಗದಿಂದ ಕೆಲಸ ಮಾಡಬೇಡಿರಿ. ಯಾರನ್ನೂ ನೀವಾಗಿ ಕೆಣಕಬೇಡಿರಿ. ನಿಮ್ಮಲ್ಲಿ ಸಹನೆಯಿರಲಿ. ಒಂದು ಚಿಕ್ಕ ಕೆಲಸಕ್ಕಾಗಿ ಹಾತೊರೆದು ದೊಡ್ಡ ಕೆಲಸವನ್ನು ಹಾಳುಮಾಡಬೇಡಿರಿ. ನಿಮಗೆ ನನ್ನ ಆಶೀರ್ವಾದವಿದೆ. ಹೋಗಿಬಿಡು ಜಯದೇವ!" ಎಂದು ರಾಮಾಶಾಸ್ತ್ರಿಗಳು ಅನ್ನುತ್ತಿರುವಾಗಲೇ ಜಯದೇವನ ಹಣೆಯು ಅವರ ಪಾದದ ಮೇಲಿತ್ತು.

"ಮಗೂ ಜೋಕೆ! ವಾಸುದೇವನನ್ನು.............."

"ಅಣ್ಣನ ಬಗ್ಗೆ ಚಿಂತಿಸಬೇಡ ಅವ್ವ."

"..............."

"ಹೋಗಿ ಬರಲೇ........"

"....................."

ಸೀತಮ್ಮನವರು ತುಟಿಬಿಗಿದುಕೊಂಡು ಜಯದೇವನ ಬೆನ್ನಮೇಲೆ ಕೈಯಾಡಿಸಿದರು. ಅವನು ಹೋಗುತ್ತಿರುವುದನ್ನು ಲಕ್ಷ್ಯಪೂರ್ವಕವಾಗಿ ನೋಡಿ ಬಂದರು. ಪೋಲೀಸನು ಅವರಿಗೆ ಕಣ್ಣು ಸನ್ನೆಯಿಂದ ಕೂಡಲೇ ಒಳಗೆ ಹೋಗಲು ಸೂಚಿಸದಿದ್ದರೆ ಅವರು ಜಯದೇವನ ಬೆನ್ನಹಿಂದೆಯೇ ಹೋಗುತಿದ್ದರೇನೋ!

ಹೊರಗೆ ಕತ್ತಲಾಗಿದ್ದರಿಂದ ಒಬ್ಬರ ಮುಖ ಒಬ್ಬರಿಗೆ ಕಾಣುತ್ತಿರಲಿಲ್ಲ. ಜಯದೇವನು ತನ್ನ ಭಿಕ್ಷುಕ ವೇಷವನ್ನು ಸಾವರಿಸಿಕೊಳ್ಳುತ್ತ ಲುಟುಲುಟು ಹೆಜ್ಜೆ ಹಾಕತೊಡಗಿದನು. ಅವನು ಆ ದಾರಿಯಿಂದ ತುಸು ನಡೆದು ಸಂದಿಯನ್ನು ದಾಟುವ ಹೊತ್ತಿಗೆ ಅವ್ಯಕ್ತವಾದ ಆಕೃತಿಯೊಂದು ಸರ್‍ರನೆ ಬಂದು ಅವನ ಕಿವಿಯಲ್ಲಿ ಏನನ್ನೋ ಪಿಸುಗುಟ್ಟಿ, ಒಂದು ಚೀಟಿಯನ್ನು ಕೊಟ್ಟು ಆ ಕರಾಳವಾದ ಕತ್ತಲಲ್ಲಿ ಮಾಯವಾಗಿಬಿಟ್ಟಿತು. ಜಯದೇವನು ಆ ಚೀಟಿಯೊಂದಿಗೆ ನೇರವಾಗಿ ಚಾವಡಿಯ ಕಡೆಗೆ ಹೊರಳಿದನು. ಹೀಗೆ ಹೊರಟ ಜಯದೇವನು ಒಮ್ಮೆಲೇ ಕುಂಟತೊಡಗಿದನು. ಚಾವಡಿಯ ಸನಿಯಕ್ಕೆ ಬಂದಂತೆ ಅವನ ಕುಂಟುವಿಕೆಯು ಇನ್ನೂ ಹೆಚ್ಚಾಗತೊಡಗಿತು.

ವಾಸುದೇವನ ಶೋಧನೆಗಾಗಿ ಕಾಡುಮೇಡುಗಳನ್ನು ಸುತ್ತಾಡಿ ಆಯಾಸಗೊಂಡ ಪೋಲೀಸರು ಅದೇ ಬಂದು ಚಾವಡಿಯಲ್ಲಿ ಕಾಲು ಚಾಚಿಕೊಂಡಿದ್ದರು. ಬಟ್ಟೆಗಳನ್ನು ಕಳಚುವಷ್ಟು ಸಹ ಅವರಲ್ಲಿ ಶಕ್ತಿ ಇರಲಿಲ್ಲ. ಅಷ್ಟು ದಣಿವಾಗಿತ್ತು ಅವರಿಗೆ. ಬೂಟುಕಾಲಿನಿಂದಲೇ ಅಲ್ಲಲ್ಲಿ ಅಸ್ತವ್ಯಸ್ತವಾಗಿ ಹರಡಿಕೊಂಡಿದ್ದರು.

ಹಿರಿಯ ಅಧಿಕಾರಿಯೊಬ್ಬನು ಅಲ್ಲಿಯೇ ವಿರಾಮಾಸನದ ಮೇಲೆ ಬಿದ್ದುಕೊಂಡು 'ಚುರೂಟ'ವನ್ನು ಸೇದುತ್ತಿದ್ದನು. ಶೋಧನೆಯಲ್ಲಿ ಸೋತು ಹೋದ ದಣಿವು ಅವನ ಮುಖದ ಮೇಲೆ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಕತ್ತಲಲ್ಲಿ ಬರುತ್ತಿರುವ ಕುಂಟನನ್ನು ನೋಡಿದವನು ಅವನೇ. ಅವನು ಕೂಡಲೇ ಎದ್ದು ಕುಳಿತು ಗದ್ದರಿಸಿದನು.

"ರಾಮಸಿಂಗ! ಅಲ್ಲಿ ಬರುವವರು ಯಾರು ನೋಡು!" ರಾಮಸಿಂಗನು ಗರ್ಜಿಸಿದನು.

"ಯಾರು?"

"ಫೌಜುದಾರಸಾಬ್!" ಎನ್ನುತ್ತ ಕುಂಟನು ಬಂದೇಬಿಟ್ಟನು.

"ನನ್ನಲ್ಲೇನು ಕೆಲಸ" ಫೌಜುದಾರರು ಕೇಳಿದರು.

ಕುಂಟನು ಏನೂ ಮಾತನಾಡದೆ ಸುತ್ತಲೂ ನೋಡಿ ಜೋಳಿಗೆಯಲ್ಲಿನ ಚೀಟಿಯನ್ನು ಬಹುಪ್ರಯಾಸದಿಂದ ತೆಗೆದು ಫೌಜುದಾರರ ಕೈಗೆ ಕೊಟ್ಟನು. ಕೂಡಲೇ ರಾಮುಸಿಂಗ ಹವಾಲ್ದಾರನು ಕಂದೀಲನ್ನು ತೆಗೆದುಕೊಂಡು ಹತ್ತಿರ ಹಿಡಿದನು.

ಫೌಜುದಾರನು ಪತ್ರವನ್ನು ಓದಿ ಆ ಕುಂಟನನ್ನು ಸೂಕ್ಷ್ಮವಾಗಿ ನೋಡತೊಡಗಿದನು. ಆ ಕುಂಟನು ಗಾಬರಿಯಾದವನಂತೆ, "ನನಗೇನು ಗೊತ್ತು ಸಾಬರೆ! ಈ ಊರ ಗೌಡನೆಂದು ಹೇಳಿ ಈ ಚೀಟಿಯನ್ನು ಕೂಡಲೇ ನಿಮಗೆ ಕೊಡಲು ಹೇಳಿದನು. ಕೊಡದಿದ್ದರೆ ನಿನ್ನ ಚರ್ಮವನ್ನೇ ಸುಲಿಯುವೆನೆಂದು ಹೆದರಿಕೆ ಹಾಕಿದನು. ನಾನು ಚೀಟಿಯನ್ನು ಕೊಟ್ಟಿರುವೆ. ನನ್ನ ಕೆಲಸ ಮುಗಿದಂತಾಯಿತು." ಎಂದು ಕುಂಟನು ಹೊರಡುವವನಂತೆ ಒಂದು ಬಾರಿ ಕುಂಟಿದನು.

"ಎಲ್ಲಿ ಹೋಗುವಿ ನಿಲ್ಲು" ಎಂದು ಫೌಜುದಾರನು ಗದ್ದರಿಸಿ ಉಳಿದವರಿಗೆ ಆ ಚೀಟಿಯನ್ನು ಓದಿ ತೋರಿಸಿದನು. ಅದರ ಒಕ್ಕಣಿಕೆ ಹೀಗೆ ಇತ್ತು : 'ಸರಿಯಾಗಿ ಒಂಬತ್ತು ಗಂಟೆಗೆ ಬೇಟೆಗಳೆಲ್ಲ ಸಿದ್ಧೇಶ್ವರ ಗುಡಿಯ ಹಿಮ್ಮಗ್ಗಲು ಇರುವ ಹಲಭಾವಿ ದಂಡೆಯ ಮೇಲೆ ಕೂಳು ತಿನ್ನುತ್ತವೆ. ಈ ಸುದ್ದಿಯನ್ನು ಬಹಳ ಪ್ರಯಾಸದಿಂದ ಸಂಗ್ರಹಿಸಿರುವೆ. ನೀವು ಕೂಡಲೇ ಹೆಚ್ಚಿನ ಪಡೆಯನ್ನು ತೆಗೆದುಕೊಂಡು ಹೊರಟು ಬರಬೇಕು. ಇಂತಹ ಸಂದರ್ಭ ಮತ್ತೆ ಸಿಕ್ಕಲಾರದು. ಈ ಸುದ್ದಿಯನ್ನು ತೆಗೆದುಕೊಂಡು ನಾನೇ ಬರುತ್ತಿದ್ದೆ. ಆದರೆ ಊರಲ್ಲಿ ನನ್ನನ್ನು ಕಂಡರೆ ಹರಿದು ತಿನ್ನುತ್ತಾರೆಂಬುದನ್ನು ನೀವು ಬಲ್ಲಿರಿ. ನೀವು ಈ ಪತ್ರವನ್ನು ಅಮಾನ್ಯಮಾಡಿ ಅಲಕ್ಷ್ಯ ಮಾಡಿದರೆ ಬೇಟೆಯನ್ನು ತಪ್ಪಿಸಿಕೊಂಡ ಹೊಣೆ ನಿಮ್ಮದೇ ಆಗುವದು. ಈ ಸಂಗತಿಯನ್ನು ನಾನು ಜಿಲ್ಲಾ ಅಧಿಕಾರಿಗಳಿಗೆ ತಿಳಿಸಬೇಕಾದೀತು. ನಿಮ್ಮನ್ನು ನಾನು 'ಜಾರಗುಂಡಿಯ ಘಡಿ'ಯ ಹತ್ತಿರ ಕಾಣುತ್ತೇನೆ. ವಿ. ಸೂ. ಸಾಧ್ಯವಾದಷ್ಟು ಹೆಚ್ಚಿನ ಪಡೆಯೊಂದಿಗೆ ಬರಬೇಕು.... × .... × ಗೌ × ಡ..... "ನಾವು ಈಗಲೇ ಹೊರಡಬೇಕು ಸಾಹೇಬರೆ!" ರಾಮುಸಿಂಗ ಹುರುಪಿನಿಂದ ಹೇಳಿದ.

"ನೀನು ಈ ಚೀಟಿಯನ್ನು ನಂಬುತ್ತೀಯಾ ?"

"ನಂಬದಿದ್ದರೆ ಆ ಗೌಡನು ಜಿಲ್ಲೆಗೆ ತಿಳಿಸುತ್ತಾನಲ್ಲ...."

ಫೌಜುದಾರ ಸಾಹೇಬರು ಸೀಟಿಯನ್ನು ಊದಿದರು. "ರಾಮುಸಿಂಗ!

ನೀನು ಇನ್ನೊಬ್ಬ ಪೋಲೀಸನೊಂದಿಗೆ ಚಾವಡಿಯಲ್ಲಿಯೇ ಇರು. ನಾವು ಬರುವವರೆಗೆ ಈ ಕುಂಟನನ್ನು ಬಿಡಬೇಡ." ಎಂದರು.

"ನನಗೇನು ಇಲ್ಲಿಯೇ ಮಲಗುತ್ತೇನೆ" ಎಂದು ಆ ಕುಂಟನು ಅಲ್ಲಿ ಕುಳಿತೇಬಿಟ್ಟನು.

ಹತ್ತು ನಿಮಿಷಗಳಲ್ಲಿ ಆ ಚಾವಡಿಯಲ್ಲಿ ರಾಮಸಿಂಗನೊಡನೆ ಪೋಲೀಸನೊಬ್ಬನೇ ಉಳಿದನು. ಕುಂಟನು ಅಲ್ಲಿಯೇ ಕಂಬಕ್ಕೊರಗಿ ಕೊಂಡು ಕುಳಿತಿದ್ದ. ಮಿಣುಕು ದೀಪವೊಂದು ಹೊಗೆಯನ್ನು ಕಾರುತ್ತ ಅಸಹ್ಯವಾಗಿ ಉರಿಯುತ್ತಿತ್ತು.

"ಈ ಬದಮಾಷರಿಂದ ನಮಗೆ ಉಳಿಗಾಲವಿಲ್ಲ ರಾಮಸಿಂಗ! ಅವರು ಎಲ್ಲಿಂದ ಬರುತ್ತಾರೋ ಎಲ್ಲಿಗೆ ಹೋಗುತ್ತಾರೋ ತಿಳಿಯದು. ಇವರ ಹಾವಳಿಯಿಂದ ನಮಗೆ ಹೊಟ್ಟೆ ತುಂಬಾ ಊಟವಿಲ್ಲ, ಕಣ್ಣು ತುಂಬಾ ನಿದ್ದೆ ಯಿಲ್ಲ ಸೈತಾನನ ಮಕ್ಕಳು" ಎಂದು ಪೋಲೀಸನೆಂದು ಬೀಡಿಯನ್ನು ಹಚ್ಚಿದ.

"ಅರ್ಥವಿಲ್ಲದ ಹಾವಳಿ ಇವರದು. ತಮ್ಮ ದೇಶವನ್ನು ತಾವೇ ಸುಡ ಹತ್ತಿದ್ದಾರೆ. ಮತ್ತೆ ಸ್ವಾತಂತ್ರ್ಯವನ್ನು ಗಳಿಸುತ್ತಾರಂತೆ" ಎಂದು ಅವನೂ ಬೀಡಿಯನ್ನು ಹೊತ್ತಿಸಿದ.

"ನಮ್ಮ ದೇಶವನ್ನು ನಾವೇ ಸುಡಬೇಕೆ?" ಪೋಲೀಸನು ಕೆಮ್ಮುತ್ತ ಒಮ್ಮೆ ಖೇಕರಿಸಿ ಉಗುಳಿದ.

"ದೇಶ ನಮ್ಮದು, ಆದರೆ ಅದನ್ನು ಆಳುವವರು ಯಾರು?" ಕುಂಟ ನಡುವೆ ಬಾಯಿ ಹಾಕಿದ.

"ಸುಮ್ಮನೇ ಬೀಳು. ಇದರಲ್ಲಿ ನಿನಗೇನು ತಿಳಿಯುತ್ತದೆ?"

"ನನಗೇನೂ ತಿಳಿಯುವದಿಲ್ಲ. ಆದರೆ ನಮ್ಮ ದೇಶವನ್ನು ನಮ್ಮವರೇ ಆದವರು ತುಳಿಯುತ್ತಿದ್ದಾರೆ ಎಂಬುದು ಮಾತ್ರ ತಿಳಿಯುತ್ತದೆ. ಪಾಪ! ಆ ವಾಸಪ್ಪನನ್ನು ಹಿಡಿಯಲು ಅವನ ದೇಶದವರೇ ಸಿದ್ಧರಾಗಿದ್ದಾರೆ. ಈ ದೇಶದ್ರೋಹಿಗಳಿಗೆ ಏನೆನ್ನಬೇಕು? ದೇಶವನ್ನು ಈ ಜನರು ಸುಡುತ್ತಿರುವದಿಲ್ಲ ಹವಾಲ್ದಾರಸಾಹೇಬ, ಆಡಳಿತವನ್ನು ನುಚ್ಚುನುರಿ ಮಾಡಿ ಭಸ್ಮಮಾಡಲು ಪಣ ತೊಟ್ಟಿದ್ದಾರೆ. ನೀವು ಅವರಿಗೆ ಸಹಾಯ ಮಾಡಬೇಕು. ಪೋಲೀಸರಾದ ರೇನಾಯಿತು? ನೀವೇನು ಹಿಂದೀಯರಲ್ಲವೆ? ಸ್ವರಾಜ್ಯ ಸಿಕ್ಕರೆ ನಿಮ್ಮನ್ನು ಲಂಡನ್ನಿಗೆ ಹೊತ್ತು ಹಾಕುವರೆಂದು ತಿಳಿದಿದ್ದೀರಾ? ಈ ದೇಶ ನಿಮ್ಮದು. ನಿಮ್ಮ ದೇಶವನ್ನು ನೀವೇ ಆಳಬೇಕು...." ಎಂದು ನುಡಿದ ಮಾತುಗಳನ್ನು

ಕೇಳಿ ರಾಮುಸಿಂಗನು ಕಕ್ಕಾಬಿಕ್ಕಿಯಾಗಿ ಮಿಣುಕಾಗಿ ಉರಿಯುತ್ತಿರುವ ದೀಪವನ್ನು ತಂದು ಕುಂಟನ ಮೋರೆಗೆ ಹಿಡಿಯಲು ಅವನು ಖೊಳ್ಳೆಂದು ನಕ್ಕುಬಿಟ್ಟನು.

ಆ ಹೊತ್ತಿಗೆ ಕತ್ತಲೆಯನ್ನು ಒಡೆದು ಬಂದಂತೆ ಅನೇಕ ರೂಪಗಳು ಕಾಣಿಸಿಕೊಂಡವು. ಒಂದು ವ್ಯಕ್ತಿ ಹವಾಲ್ದಾರನನ್ನು ಗಟ್ಟಿಯಾಗಿ ಹಿಡಿದು ಬಿಟ್ಟಿತು. ಪೋಲೀಸನ ಬಾಯಿಯಲ್ಲಿ ಆಗಲೇ ಚೆಂಡು ಬಿದ್ದುಬಿಟ್ಟಿತ್ತು.

ಹವಾಲ್ದಾರಸಾಹೇಬ! ನೀವು ನಮ್ಮವರು. ನಿಮಗೆ ನಾವು ನೋಯಿಸುವದಿಲ್ಲ. ದಯವಿಟ್ಟು ಪಿಟ್ಟೆನ್ನದೆ ಆ ಆಲದಕಟ್ಟೆಯ ಕಡೆಗೆ ನಡೆಯಿರಿ. ಅಲ್ಲಿ ನಿಮ್ಮನ್ನು ಕಟ್ಟಿಹಾಕುತ್ತೇವೆ. ಗೋವಿಂದ! ಆ ಪೋಲೀಸನ ಬಾಯಿ ಚೆಂಡು ತೆಗೆ. ಪಾಪ! ಅವನನ್ನೂ ಆ ಆಲದ ಮರಕ್ಕೆ ಬಿಗಿದುಬಿಡಿರಿ." ಹೀಗೆಂದ ಕುಂಟನ ಕೈಯಲ್ಲಿರುವ ಪಿಸ್ತೂಲನ್ನು ನೋಡಿ ಹವಾಲ್ದಾರ ಸಾಹೇಬರು ಗದಗುಟ್ಟಿ ನಡುಗಿದರು. ಅವರ ನಾಲಿಗೆ ಗಂಟಲಕ್ಕೆ ಹತ್ತಿ ಬಿಟ್ಟಿತು.

ಗಂಗನಹಳ್ಳಿಯ ಚಾವಡಿಯಿಂದ ಎದ್ದ ಉರಿಯ ಕೆನ್ನಾಲಗೆಗಳಿಂದ ಆಕಾಶವೂ ಬೆಳಗಿತು.

ಇಡೀ ರಾತ್ರಿ 'ಹಾಲಭಾವಿ'ಯ ಸುತ್ತು ಗರಡಿ ಹಾಕಿ ಕಾವಲು ನಿಂತ ಪೋಲೀಸರು ನಿರಾಶರಾಗಿ ಗಂಗನಹಳ್ಳಿಗೆ ಬೆಳಗು ಮುಂಜಾನೆ ಬಂದಾಗ ಚಾವಡಿಯು ಭಸ್ಮವಾಗಿ ಹೋಗಿತ್ತು. ಈ ಅಸಾಧ್ಯವಾದ ಮೋಸವನ್ನರಿತ ಅಧಿಕಾರಿಯು ದಿಗ್ಭ್ರಮೆಗೊಂಡವನಂತೆ ಹುಚ್ಚೆದ್ದು ಹರಿಯತೊಡಗಿದನು.

"ಅಯ್ಯೋ! ರಾಮುಸಿಂಗನೂ ಸತ್ತುಹೋದನೆ?"

"ಸತ್ತುಹೋಗಿದ್ದರೆ ಕ್ಷೇಮವಾಗಿತ್ತು ಸಾಹೇಬರೆ! ಇಡೀ ರಾತ್ರೆ ಇಲ್ಲಿ ಕಟ್ಟಿಸಿಕೊಂಡು ಬಳಲುತ್ತಿದ್ದೇನೆ." ಎಂಬ ದನಿಯನ್ನು ಕೇಳಿ ಪೋಲೀಸರು ಅವನ ಕಟ್ಟುಗಳನ್ನು ಬಿಚ್ಚಿದರು. ರಾಮುಸಿಂಗನು ಉಸ್ಸೆಂದು ಕುಸಿಕೂತನು. ಅದು ನಟನೆಯಾಗಿತ್ತು. ಅವನು ಈ ಜನ ಬರುವ ಮೊದಲು ಹತ್ತು ನಿಮಿಷ ತನ್ನನ್ನು ತಾನೇ ಕಟ್ಟಿಕೊಂಡಿದ್ದನೆಂಬುವನ್ನು ಇವರೇನು ಬಲ್ಲರು?

"ಆ ಕುಂಟನೆಲ್ಲಿ ರಾಮುಸಿಂಗ್!"

"ಅವನು ಕುಂಟನಲ್ಲ ಸಾಹೇಬ! ಅವನು ಸೈತಾನನ ಕುನ್ನಿ! ಅವನಿಂದಲೇ ನನಗೆ ಈ ಪಾಡಾಯಿತು." ಎಂದು ಸಾದ್ಯಂತವಾಗಿ ಎಲ್ಲವನ್ನೂ ಹೇಳಲು ಸಾಹೇಬರ ಮುಖವು ಬೆಳ್ಳಗಾಯಿತು.

"ಆ ಗೌಡನು ಬದಮಾಷನಾಗಿದ್ದಾನೆ."

"ಅವನೂ ಗಂಗನಹಳ್ಳಿಯ ಪುಂಡನಷ್ಟೆ!"

"ಈ ಪುಂಡರ ಹುಟ್ಟನ್ನು ಅಡಗಿಸದಿದ್ದರೆ........"

ಅಧಿಕಾರಿಯು ಕರಕರ ಹಲ್ಲು ತಿನ್ನತೊಡಗಿದನು.

ಗಂಗನಹಳ್ಳಿಯ ಚಾವಡಿಯು ಸುಟ್ಟು ಭಸ್ಮವಾದ ಸಮಾಚಾರವನ್ನು ಕೇಳಿ ರಾಮಾಶಾಸ್ತ್ರಿಗಳು ದೀರ್ಘವಾದ ನಿಟ್ಟುಸಿರನ್ನೆಳೆದರು. ಮೊದಲೇ ಗಾಯಗೊಂಡ ನೋವಿನ ಮೇಲೆ ಇವರು ಹೀಗೆ ಬರೆ ಎಳೆಯಬಾರದಾಗಿತ್ತು ಎಂದವರು ವಿಚಾರಿಸಿದರು. ಇದರಿಂದ ದಬ್ಬಾಳಿಕೆ ಮತ್ತೆ ಪ್ರಾರಂಭವಾಗುವದರಲ್ಲಿ ಸಂದೇಹವಿಲ್ಲ. ಈ ದಬ್ಬಾಳಿಕೆಯಿಂದ ಗಂಗನಹಳ್ಳಿಯೇ ಹುರಪಳಿಸಿ ಹೋಗಬಹುದು. ವಾಸುದೇವನ ಬಗ್ಗೆ ತೀವ್ರವಾದ ಶೋಧ ನಡೆದು ಯಾವುದಾದರೂ ಅನಾಹುತವಾಗಬಹುದು. ಈ ಜನ ಹೀಗೇಕೆ ಮಾಡಿದರು?

ಪೋಲೀಸರನ್ನು ಕೆಣಕುವದರಲ್ಲಿ ಇವರೇಕೆ ಸಂತೋಷಪಡಬೇಕು? ಪೋಲೀಸರ ಸಿಡುಕಿಗೆ ವಾಸುದೇವನು ತುತ್ತಾಗುವ ಕೆಲಸವನ್ನೇಕೆ ಮಾಡಬೇಕು? ಅವನಿಗೆ ಬೇರೆ ವಿಧಾಯಕ ಕೆಲಸಗಳಿರಲಿಲ್ಲವೆ?

ಈ ಸುದ್ದಿಯನ್ನು ಕೇಳಿ ಸೀತಮ್ಮನವರೂ ಹೌಹಾರಿಹೋದರು. ಅವರ ಹೃದಯದಲ್ಲಿ ಇಲ್ಲದ ಭೀತಿ ತಲೆದೋರಹತ್ತಿತು. ಅವರು ನಿಟ್ಟುಸಿರಿನ ತಿದಿಯಾಗಿ ಬಿಟ್ಟರು.

ಗಂಗನಹಳ್ಳಿಯ ಜನ ಮಾತ್ರ ಈ ಕೃತಿಯಲ್ಲಿ ವಾಸುದೇವನ ಧೈರ್ಯವನ್ನು ಕಂಡುಕೊಂಡರು. ಬಲಾಢ್ಯವಾದ ಸರಕಾರದ ಮೂಗನ್ನೇ ಕೊಯ್ದು ವಾಸುದೇವನು ಅವರ ಪಾಲಿಗೆ ಧೀರನಾಯಕನಾಗಿಬಿಟ್ಟನು. ಈ ಸುದ್ದಿ ಹಳ್ಳಿಗಳಲ್ಲೆಲ್ಲ ಬೇಗೆಯಂತೆ ಹಬ್ಬಿಬಿಟ್ಟಿತು.

೧೦

ಗಂಗನಹಳ್ಳಿಯ ಚಾವಡಿಯು ಸುಟ್ಟು ಭಸ್ಮವಾದ ಸಮಾಚಾರವು ಅಧಿಕಾರಿಗಳಲ್ಲಿ ಹೆಚ್ಚಿನ ವಿಪಂಚನೆಯನ್ನು ಹುಟ್ಟಿಸಿತು. ಪೋಲೀಸರನ್ನು ಮೋಸಗೊಳಿಸಿ, ಅವರನ್ನು ಕಟ್ಟಿಹಾಕಿ ಚಾವಡಿಯನ್ನು ಸುಟ್ಟ ಧೈರ್ಯಕ್ಕಾಗಿ ಅವರಿಗೆ ಬಹಳ ಸಂತಾಪವಾಗತೊಡಗಿತು. ಇತ್ತೀಚೆಗೆ ನಡೆಯತೊಡಗಿದ ವಾಸುದೇವನ ಚಟುವಟಿಕೆಗಳಿಂದಲಂತೂ ಅವರು ಪೂರಾ ಬೇಸತ್ತಿದ್ದರು. ಇಂತಹ ಹೊತ್ತಿನಲ್ಲಿ ಬಂದ ಗಂಗನಹಳ್ಳಿಯ ಸಮಾಚಾರವನ್ನು ಕೇಳಿ ಅವರು ಕುದಿಯತೊಡಗಿದರು. ಪೋಲೀಸ ಕೇಂದ್ರದಲ್ಲಿಯೇ ಹೀಗಾಗಿದ್ದುದು

ಇಡೀ ಸರಕಾರಕ್ಕೇ ಒಂದು ಅವಮರ್ಯಾದೆ ಎಂದೇ ಅವರು ತಿಳಿಯ ತೊಡಗಿದರು.

ಜಿಲ್ಹಾಧಿಕಾರಿಯಾದ ಯೂರೋಪಿಯನ್‌ನಂತೂ ಇದನ್ನು ಕೇಳಿ ಕಾಲು ಅಪ್ಪಳಿಸತೊಡಗಿದನು. 'ಈ ಬದಮಾಷರೆಲ್ಲ ಒಂದಾಗಿದ್ದಾರೆ. ಅಂತಲೇ ವಾಸುದೇವನು ಬಲಿಷ್ಠನಾಗಿದ್ದಾನೆ. ಇದಕ್ಕೆ ಹೀಗೆಯೇ ಮಾಡ ಬೇಕು' ಎಂದು ನಿರ್ಧಾರದಿಂದ ಹುಕುಮನ್ನು ಬರೆಯತೊಡಗಿದನು.

ಈ ಹುಕುಮಿನ ಅಮಲಿನಂತೆ ಗಂಗನಹಳ್ಳಿಯಲ್ಲಿ ಈಗಿದ್ದ ಪೋಲೀಸ ರೆಲ್ಲ ಹೋಗಿ ಬೇರೆ ಪ್ರಾಂತದ ಸಿಪಾಯಿಗಳು ಬಂದರು. ಅಧಿಕಾರಿಗಳಿಗೆ ಹಿಂಬಡತಿಯಾಗಿ ಅವರ ಮುಖ್ಯಸ್ಥನಾಗಿ ಮಹಾಕ್ರೂರನೆಂದು ಪ್ರಸಿದ್ಧನಾಗಿದ್ದ ಹೊಸಬನೊಬ್ಬ ಅಧಿಕಾರಿಯನ್ನು ನಿಯಮಿಸಲಾಯಿತು. ಅವನಿಗೆ ಕೊಟ್ಟ ಆದೇಶದಲ್ಲಿ ವಾಸುದೇವನ ಹಾವಳಿಯನ್ನು ಅಡಗಿಸಬೇಕೆಂಬುದೇ ಮುಖ್ಯ ವಾಗಿತ್ತು. ಇಷ್ಟಕ್ಕೂ ಸಮಾಧಾನವಾಗದೆ ಒಬ್ಬ ಡಿ.ವಾಯ್.ಎಸ್.ಪಿ. ಯನ್ನು ಮೇಲ್ವಿಚಾರಕನನ್ನಾಗಿ ಗಂಗನಹಳ್ಳಿಗೆ ಕಳಿಸಲಾಯಿತು ಅವನು ಯೂರೋಪಿಯನ್ ಅಧಿಕಾರಿಗೆ ಬಹಳ ಪ್ರೀತ್ಯಾಸ್ಪದನಾಗಿದ್ದನು. ಅವನು ಮತ್ತಾರೂ ಆಗಿರದೆ ಜಯದೇವನ ಪ್ರೀತಿಯವಳಾದ ಸುಂದರಾನ ತಂದೆ ಯಾಗಿದ್ದನು.

ತಂದೆಯು ಗಂಗನಹಳ್ಳಿಯ ವಿಭಾಗಕ್ಕೆ ಮೇಲ್ವಿಚಾರಕನಾಗಿ ಕೆಲಸ ಮಾಡಲು ಹೋಗುವದನ್ನು ತಿಳಿದ ಸುಂದರಾನ ಮನಸ್ಸಿನಲ್ಲಿ ಜಯದೇವನ ತಂದೆತಾಯಿಗಳನ್ನು ನೋಡುವ ಕುತೂಹಲವು ಮೊಳೆತು ನಿಂತಿತು. ರಾಮಾ ಶಾಸ್ತ್ರಿಗಳ ಮೇಲೆ ಆದ ಅತ್ಯಾಚಾರವನ್ನು ಅವಳು ಜಯದೇವನ ಬಾಯಿಂದ ಕೇಳಿದ್ದಳು. ಅದಕ್ಕಾಗಿ ಅವನು ಪಡುತ್ತಿರುವ ಕಳವಳವನ್ನು ಗ್ರಹಿಸಿದ್ದಳು. ಅವನೀಗ ಗುಪ್ತನಾಗಿ ಕೆಲಸ ಮಾಡುತ್ತಿರುವಾಗ ಅವನ ದುಗುಡವನ್ನು ಕಳೆಯಲು ತಾನೇಕೆ ಅಲ್ಲಿ ಹೋಗಬಾರದು ಎಂದು ಯೋಚಿಸಿದಳು. ಸಾಧ್ಯ ವಾದರೆ ಶಾಸ್ತ್ರಿಗಳ ಸೇವೆಯಲ್ಲಿ ಅಲ್ಲಿಯೇ ನಿಲ್ಲಬೇಕು, ಜಯದೇವನ ಕಾರ್ಯ ದಲ್ಲಿ ಬೆಂಬಲ ನೀಡಬೇಕು ಎಂದು ಬಗೆದಳು. ಈ ಮಾತನ್ನೊಮ್ಮೆ ತಂದೆಯ ಮುಂದೆ ಆಡಿಬಿಟ್ಟಳು. ಪ್ರಬುದ್ಧಳಾದ ಮಗಳ ಬೇಡಿಕೆಯನ್ನು ತಂದೆ ಮಾನ್ಯ ಮಾಡಿದರು.

ಗಂಗನಹಳ್ಳಿಯ ಸಮೀಪದಲ್ಲಿರುವ ಕೃಷ್ಣಾತೀರದ ವಿಶಾಲವಾದ ಬಂಗಲೆಯಲ್ಲಿ ಸುಂದರಾನ ತಂದೆ ಬೀಡಾರ ಹೂಡಿದರು. ಹೊಸ ಅಧಿಕಾರಿ ಯನ್ನು ಕಂಡು ಸಾಧ್ಯವಿದ್ದ ಪ್ರಯತ್ನಮಾಡಿ ವಾಸುದೇವನನ್ನು ಬಂಧಿಸ

ಬೇಕೇ ಹೊರತು ಹೆಚ್ಚಿನ ಅನಾಹುತವಾಗದಂತೆ ನೋಡಿಕೊಳ್ಳಬೇಕೆಂದು ಎಚ್ಚರಿಸಿದರು. 'ವಾಸುದೇವನನ್ನು ಗುಂಡಿಕ್ಕಿ ತಂದರೂ ನಡೆದೀತು' ಎಂಬ ಆದೇಶಕ್ಕೆ ಇದು ಪ್ರತಿ ಆದೇಶವಾಗಿತ್ತು. ಈ ಮಾತನ್ನು ಆ ಅಧಿಕಾರಿ ಸುಮ್ಮನೇ ಕೇಳಿದನು. ಮೇಲಧಿಕಾರಿಯ ಕಣ್ಣಲ್ಲಿ ಮಣ್ಣು ತೂರುವ ಸೂಚನೆಯೇ ಈ ಸಮ್ಮತಿಯಲ್ಲಿತ್ತು.

ಈ ಹೊಸ ಪೋಲೀಸ ಪಡೆಯು ಗಂಗನಹಳ್ಳಿಯ ಸುತ್ತಲೂ ಪಸರಿಸಿತು. ಹಳ್ಳಿಗರ ಗೋಳಿಗೆ ಮೊದಲಾಯಿತು. ಅಕ್ಕಪಕ್ಕದ ಹಳ್ಳಿಗಳಲ್ಲಿ ದಬ್ಬಾಳಿಕೆಯು ಘೋರವಾಗಿ ನಡೆಯತೊಡಗಿತು. ಹಾಂ—ಹಾಂ, ಅನ್ನುವಷ್ಟರಲ್ಲಿ ವಾಸುದೇವನನ್ನು ಹಿಡಿಯುವೆನೆಂಬ ಹುಮ್ಮಸವು ಆ ಅಧಿಕಾರಿಯಲ್ಲಿ ಜಾಗ್ರತವಾಗಿಬಿಟ್ಟಿತು. ಅವನು ಗಾಳಿಯಂತೆ ಹಗಲಿರುಳು ಪಡೆಯೊಂದಿಗೆ ತಿರುಗತೊಡಗಿದನು.

ಈ ದಿನ ರಾಮಾಶಾಸ್ತ್ರಿಗಳು ಅರುಣೋದಯವಾಗುವ ಮುನ್ನವೇ ಎದ್ದು ಕುಳಿತು "ಭಜಗೋವಿಂದಂ ಭಜಗೋವಿಂದಂ ಮೂಢಮತೇ" ಎಂಬ ಶ್ಲೋಕವನ್ನು ಪಾಲಿಸತೊಡಗಿದರು. ಈ ದಿನಗಳಲ್ಲಿ ನರಳುತ್ತ ಏಳುವದೇ ಅವರ ಪರಿಪಾಠವಾಗಿತ್ತು. ಈ ದಿನ ಮಾತ್ರ ಅವರಲ್ಲಿ ಎಲ್ಲಿಲ್ಲದ ಉತ್ಸಾಹವು ತಲೆದೋರಿತ್ತು. ಇದಕ್ಕೆ ಅವರ ನೋವು ಕಡಿಮೆಯಾಗಿದ್ದು ಕಾರಣವಾಗಿದ್ದಿತೋ ಇಲ್ಲವೇ ಮುನ್ನಾದಿನ ಬಂದ ವೃತ್ತಪತ್ರದಲ್ಲಿ ಈ ಚಳವಳಿ ಬೇಗನೇ ನಿಲ್ಲಬಹುದೆಂಬುವದನ್ನು ಓದಿ ಮಕ್ಕಳು ಬೇಗನೇ ಮನೆಗೆ ಬರುವಂತಾಗುವದೆಂಬ ಸಂತೋಷವು ಅಧಿಕವಾಗಿದ್ದಿತೋ ಹೇಳುವದು ಕಠಿಣ. ಅವರ ಕಂಠದಿಂದ ಗೋವಿಂದನ ನಾಮಸ್ಮರಣೆಯು ಒಂದೇ ಸಮನೆ ಸಾಗತೊಡಗಿತು. ಆ ದನಿ ಮನೆಯನ್ನೇ ತುಂಬಿತು. ರಾಮಾಶಾಸ್ತ್ರಿಗಳದು ಮೊದಲೇ ಕಂಚಿನಂತಹ ದನಿ. ಅದರಲ್ಲಿ ಈ ದಿನವದ್ದು ಉತ್ಸಾಹ ತುಂಬಿ ಹೊರಸೂಸುವ ದನಿ. ಸೀತಮ್ಮನವರು ಕೇಳಿ ಎಚ್ಚರಾದರು. ಪತಿಯ ಈ ಉತ್ಸಾಹದಿಂದ ಅವರ ಹೋದ ಜೀವ ಬಂದಂತಾಯಿತು. ಅವರು ಚಟಕ್ಕನೆ ಎದ್ದು ಬಂದು

"ನೀರನ್ನು ಕುದಿಸಿ ತರಲೇ ಗಾಯಗಳನ್ನು ತೊಳೆಯುವುದಕ್ಕೆ" ಎಂದು ಮುಗುಳುನಗೆಯಲ್ಲಿ ಕೇಳಿದರು.

"ಇಂದು ಆ ಅವಶ್ಯಕತೆ ಇಲ್ಲ ನೋಡು. ನನ್ನ ನೋವು ಮಾಯವಾಗಿದೆ. ನನ್ನ ಗಾಯಗಳೆಲ್ಲ ಹಕ್ಕಳಿಗಟ್ಟಿಬಿಟ್ಟಿವೆ." ಎಂದು ರಾಮಾಶಾಸ್ತ್ರಿಗಳು ಉತ್ಸಾಹದಿಂದಲೇ ಹೇಳಿದರು.

"ಇದು ವಾಸುದೇವನು ಕೊಟ್ಟ ಔಷಧದ ಪರಿಣಾಮವೆನ್ನುವುದರಲ್ಲಿ

ಸಂದೇಹವೇ ಇಲ್ಲ. ಎಂತಹ ಅದ್ಭುತ ಔಷಧ ಕಳಿಸಿದ್ದಾನೆ ಮಗೂ !"

"ಇದು ಔಷಧಲೇಪನದ ಪರಿಣಾಮವಲ್ಲ. ತಿಳಿಯಿತೆ?"

"ಮತ್ತೆ ?

"ಅವನ ಅಂತಃಕರಣ ಲೇಪನದ ಪರಿಣಾಮವಿದು. ಔಷಧಲೇಪನ ವೊಂದು ಕಾರಣ: ಕಾರ್ಯವಾದದ್ದು ಅಂತಃಕರಣದಿಂದ" ಎಂದು ತೃಪ್ತಿ ಭಾವದಿಂದ ಶಾಸ್ತ್ರಿಗಳು ಬಾಯಿತುಂಬಾ ಹೇಳಿದರು.

ಸೀತಮ್ಮನವರಿಗೆ ಈ ಮಾತನ್ನು ಕೇಳಿ ಹೃದಯ ತುಂಬಿತು.

"ನನ್ನ ಕಂದಮ್ಮನ ಗುಣ ಚಿನ್ನದಂತಹುದು. ಅವನು ಎಂದು ಬಂದಾನು ದೇವರೆ!"

"ಇಲ್ಲಿ ಬಾ. ನಿನಗೆ ಅದನ್ನೇ ಹೇಳುವದಿದೆ. ನಿನ್ನಿನ ವೃತ್ತಪತ್ರದ ಸುದ್ದಿ ನಿಜವಾದರೆ ನಿನ್ನ ಮಕ್ಕಳು ಬೇಗನೆ ಬಂದಾರು."

"ಆ ವೃತ್ತಪತ್ರದ ಬಾಯಲ್ಲಿ ಸಕ್ಕರೆ ಬೀಳಲಿ ತಾಯಿ! ನನ್ನ ಕಂದಮ್ಮಗಳು ಎಂದು ಬಂದಾರು!"

"ಇಂದೇ ಬರಬಹುದು. ನಾಳೆ ಬರಬಹುದು. ನಾಡಿದು ಬರಬಹುದು. ಒಂದು ವಾರದಲ್ಲಿ ಬರುವುದಂತೂ ನಿಶ್ಚಿತ."

"ದೇವರು ಪಾರುಮಾಡಿದನು ತಾಯಿ!" ಎಂದು ಸೀತಮ್ಮನವರು ಉತ್ಸಾಹದಿಂದ ಅನ್ನುವ ಹೊತ್ತಿಗೆ ಚೌಕಟ್ಟಿನ ಮೇಲೆ ಹಲ್ಲಿಯೊಂದು ಲೊಟಗುಟ್ಟಿತು.

"ಕೃಷ್ಣ ! ಕೃಷ್ಣ ! ಕೃಷ್ಣ !" ಎಂದು ರಾಮಾಶಾಸ್ತ್ರಿಗಳು ಚಿಟಿಕೆಗಳ ಸಪ್ಪಳ ಮಾಡಿ ಚೌಕಟ್ಟಿನ ಕಡೆಗೆ ಕೆಕ್ಕರಿಸಿ ನೋಡಿದರು.

"ಸುಟ್ಟ ಬಲ್ಲಿ ! ಈ ಹಲ್ಲಿ ಏಕೆ ಲೊಟಗುಟ್ಟಿತು ಮತ್ತೆ ?"

"ಅದು ಅದರ ಧರ್ಮ. ಆ ಹುಳ ನುಡಿದರೇನು ಅಪಶಕುನವೆ ? ಇಲ್ಲಿ ಕೇಳು. ಈ ಸಲ ಬರುವ ನಿನ್ನ ಹಿರಿಯ ಮಗನು ಕೀರ್ತಿಯ ಹೊರೆಯನ್ನೇ ತರುವನು. ಆಡಳಿತದಲ್ಲಿ ಅವನಿಗೆ ಸ್ಥಾನ ಸಿಕ್ಕರೂ ಸಿಗಬಹುದು. ಅವನ ಕೀರ್ತಿ ಈಗಾಗಲೇ ಹಬ್ಬಿಬಿಟ್ಟಿದೆ. ಅವನ ಕರ್ತೃತ್ವಶಕ್ತಿಗೆ ಎಲ್ಲರೂ ಬೆರಗಾಗಿದ್ದಾರೆ, ಮೆಚ್ಚಿದ್ದಾರೆ."

"ಅವನು ಪಡುತ್ತಿರುವ ಕಷ್ಟವೇನು ಕಡಿಮೆಯದೆ ?"

"ದೇಶದ ಕಷ್ಟದಲ್ಲಿ ನಿನ್ನ ಮಗನು ಪಡುತ್ತಿರುವ ತೊಂದರೆಗೆ ಯಾವ ಬೆಲೆ ಇದೆ ಹೇಳು. ಆದರೂ ಅವನ ಕಾರ್ಯಶಕ್ತಿ ಅನುಪಮವಾಗಿದೆ. ಅವನ ದೇಶವಾತ್ಸಲ್ಯ ಅದ್ಭುತವಾಗಿದೆ."

"ಇನ್ನಾದರೂ ಸುಖದಿಂದ ಮನೆಯಲ್ಲಿರಲಿ ಕಂದಮ್ಮ!"

"ಈ ಚಳವಳಿ ನಿಂತ ಮಾತ್ರಕ್ಕೆ ಸುಖದ ದಿನಗಳು ಬಂದವೆಂದು ತಿಳಿಯುವುದೇ ತಪ್ಪು. ಇನ್ನು ಮೇಲೆ ಮಾಡುವ ಕಾರ್ಯ ಅಪಾರವಾಗಿದೆ. ಈ ಜನಗಳಲ್ಲಿ ಈಗ ವಿಧ್ವಂಸಕ ಪ್ರವೃತ್ತಿಯೇ ಹೆಚ್ಚಾಗಿದೆ. ಈಗಿನ ಸಂದರ್ಭ ದಲ್ಲಿ ಇದು ಅನಿವಾರ್ಯವಾಗಿದೆಯೆನ್ನು. ಇದು ಮಾಯವಾಗಿ ವಿಧಾಯಕ ಪ್ರವೃತ್ತಿ ಬೆಳೆಯಬೇಕು. ಸಮಗ್ರ ರಾಷ್ಟ್ರದ ಕಟ್ಟಡವು ಸ್ಥಿರವಾಗಿ ನಿಲ್ಲ ಬೇಕು. ಈಗ ನಮ್ಮ ದೇಶವು ದರಿದ್ರವಾಗಿದೆ. ಈ ಆಕಳನ್ನು ಬಿಳಿಯರು ಹಿಂಡಿ ಹಿಪ್ಪೆ ಮಾಡಿದ್ದಾರೆ. ನಮ್ಮ ಈ ಆಕಳು ಮತ್ತೆ ಪುಷ್ಟವಾದರೆ ಮಾತ್ರ ನಮಗೆ ಹಾಲು ಸಿಕ್ಕೀತು. ವಿಧ್ವಂಸಕ ಪ್ರವೃತ್ತಿಯೆಂದಿಗೂ ವಿಧಾಯಕವಾದುದಲ್ಲ."

"ವಾಸುದೇವನು ಇದನ್ನು ಅರಿಯನೆ ?"

"ಅವನು ಜನ್ಮತಃ ವಿಧಾಯಕ ಪ್ರವೃತ್ತಿಯವನು. ವಿಶ್ವೇಶ್ವರ ಭಟ್ಟರ ವಿಧಾಯಕ ಪ್ರವೃತ್ತಿಯ ರಕ್ತ ಅವನ ನಾಡಿಗಳಲ್ಲಿ ಬಲವಾಗಿ ಹರಿ ಯುತ್ತಿದೆ. ನಾನು ಅವನ ಮಾತು ಹೇಳಲಿಲ್ಲ. ಈಗ ಅವನಂಥ ಜನ ಬಹಳ ಕಡಿಮೆ. ಸ್ವಾತಂತ್ರ್ಯಸಮರದಲ್ಲಿ ಪುಂಡರೂ ಸೇರಿಕೊಂಡಿದ್ದಾರೆ. ಇವರ ಕೈ ಮೇಲಾದರೆ ಅಧೋಗತಿ ತಪ್ಪಿದ್ದಲ್ಲ. ಈ ಮಾತನ್ನೇ ನಾನು ಒತ್ತಿ ಹೇಳಬೇಕಾಗಿದೆ ವಾಸುದೇವನಿಗೆ."

"ಅವನು ಬಂದ ಮೇಲೆ ನೀವು ಅವನಿಗೆ ವಿಶ್ರಾಂತಿಯನ್ನೇ ಕೊಡುವ ದಿಲ್ಲೆಂದು ತೋರುತ್ತದೆ. ಪಾಪ! ಎಷ್ಟು ಬಳಲಿ ಬರುವನೋ ?"

"ವಾಸುದೇವನಂತಹ ವೀರರಿಗೆ ವಿಶ್ರಾಂತಿಯ ಅವಶ್ಯಕತೆ ಇರುವು ದಿಲ್ಲ. ದುಡಿತದ ಜೀವನದಲ್ಲಿ ಬರುವ ವೈವಿಧ್ಯವೇ ಅವರಿಗೆ ವಿಶ್ರಾಂತಿ. ಅವನು ದೇಶಕ್ಕಾಗಿ ದುಡಿಯಲಿ. ಈ ದುಡಿಮೆ ವಿಧಾಯಕವಾಗಿ ನಿಲ್ಲಲಿ ಎಂಬುದನ್ನು ಹೇಳುವ ಆತುರವೇ ನನಗೆ. ಅವನ ಸುತ್ತಲೂ ವಿಧ್ವಂಸಕ ಪ್ರವೃತ್ತಿಯ ಉಡಾಳರೇ ಹೆಚ್ಚಾಗಿದ್ದಾರೆ. ಇವರನ್ನೆಲ್ಲ ನಿಯಂತ್ರಿಸಲು ನಾನು ಹೇಳಬೇಕು. ಶಾಶ್ವತವಾದ ರಾಷ್ಟ್ರನಿರ್ಮಾಣದ ತಳಹದಿ ವಿಧಾ ಯಕ ಕಾರ್ಯದಲ್ಲಿದೆ ಎಂಬುದನ್ನು ಅವರು ತಿಳಿಯಬೇಕು. ಸ್ವಾತಂತ್ರ್ಯ ಗಳಿಸುವುದು ಕಠಿಣವೆಂದು ನಾನು ಒಪ್ಪುತ್ತೇನೆ. ಆದರೆ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಅದಕ್ಕಿಂತಲೂ ಕಠಿಣ."

"ನೀವು ಸುಮ್ಮನೆ ಉಪನ್ಯಾಸಕ್ಕೆ ತೊಡಗಿರುವಿರಿ. ಮೊದಲು ಸ್ವಾತಂತ್ರ್ಯವಂತೂ ಬರಲಿ."

"ಅದು ಸತ್ಯಸಿದ್ಧವಾದ ಸತ್ಯವಾಗಿದೆ. ಅದು ಬಂದೇ ತೀರುವುದು. ಕೊನೆಯವರೆಗೆ ಯಾವ ರಾಷ್ಟ್ರವೂ ಗುಲಾಮಗಿರಿಯಲ್ಲಿ ಇರಲಾರದು. ಅದು ಅಸ್ವಾಭಾವಿಕ, ನಿಸರ್ಗದ ವಿರುದ್ಧ. ಬರುವ ಸ್ವಾತಂತ್ರ್ಯವನ್ನು ಧೀರತನ ದಿಂದ ಕಾಯ್ದುಕೊಳ್ಳಲು ವಾಸುದೇವನು ಇನ್ನುಮೇಲೆ ದುಡಿಯಬೇಕಾಗು ತ್ತದೆ."

"ಈ ಜನ್ಮದಲ್ಲಿ ವಾಸುದೇವನು ಸುಖವನ್ನು ಬೇಡಿ ಬಂದಿಲ್ಲವೋ ಏನೋ?"

"ಇದಕ್ಕಿಂತ ಹೆಚ್ಚಿನ ಸುಖ ಯಾವುದು? ರಾಷ್ಟ್ರನಿರ್ಮಾಣ ಕಾರ್ಯ ದಲ್ಲಿ ದೇಹ ಸವೆಸುವ ಸುಖವು ಎಷ್ಟು ಜನಕ್ಕೆ ಲಭಿಸೀತು? ಮುಂಬರುವ ಪೀಳಿಗೆಯ ಪುಣ್ಯದಾತನು ವಾಸುದೇವನೇ ಆಗಬೇಕಾಗಿರುವ ಸುಖವೇನು ಸಾಮಾನ್ಯವೆ? ಅವನ ಸುಖ ದೇಶೋದ್ಧಾರದಲ್ಲಿದೆ. ಆದರ ಸಂಪತ್ತಿ ಯಲ್ಲಿದೆ."

"ಅವನ ದಾಂಪತ್ಯಜೀವನದಲ್ಲಿ ಅವನು ಸುಖವನ್ನು ಕಾಣಬಾರದೆ? ಇನ್ನೂ ಎಳೆಯ ಹುಡುಗ."

"ನೀನು ಮರೆತಂತೆ ಕಾಣುತ್ತದೆ. ಹಿಂದಕ್ಕೊಮ್ಮೆ ನೀನು ಇದೇ ಮಾತನ್ನು ಆಡಿದ್ದು ನಿನಗೆ ನೆನಪಿದೆಯೇ? ಆಗ ವಾಸುದೇವನು ಏನಂ ದಿದ್ದ? ನನ್ನ ಮದುವೆ ರಾಜಕೀಯದೊಡನೆ ಎಂದೋ ಆಗಿಹೋಗಿದೆ. ಇನ್ನೊಂದು ಮದುವೆಯ ಅಗತ್ಯವೇ ಇಲ್ಲ ಎಂದದ್ದು ಇಷ್ಟು ಬೇಗನೆ ಮರೆತೆಯಾ? ಈಗ ಅವನು ಸ್ವಾತಂತ್ರ್ಯಕನ್ನಿಕೆಯನ್ನು ಪಡೆದು ತಂದರೂ ರಾಷ್ಟ್ರಜೀವನದೊಡನೆ ಅವನ ಇನ್ನೊಂದು ಮದುವೆಯು ನೆರವೇರುವದು. ಇಂತಹ ಸೊಸೆಯನ್ನು ಪಡೆಯುವ ನೀನು ಧನ್ಯಳೇ ಸರಿ!"

"ಈ ಮಾತನ್ನು ನಿಮ್ಮ ಹತ್ತಿರಾನೆ ಇಟ್ಟುಕೊಳ್ಳಿರಿ ದಯಮಾಡಿ. ಈ ವರುಷ ತುಂಬುವುದರಲ್ಲಿ ನಾನು ವಾಸುದೇವನ ಮದುವೆ ಮಾಡದಿ ದ್ದರೆ........"

ರಾಮಾಶಾಸ್ತ್ರಿಗಳು ಖೊಳ್ಳನೆ ನಕ್ಕರು.

"ನಿನಗೆ ಮಗನ ಪರಿಚಯವಿಲ್ಲ. ಆಗಲಿ, ಅವನು ಬಂದಮೇಲೆ ಮದುವೆಯನ್ನೇ ಮಾಡುವಿಯಂತೆ! ನನಗೇನು ಹೋಳಿಗೆಯೂಟ ಬೇಡವೆ?"

ಸೀತಮ್ಮನವರ ಮುಖವು ಪ್ರಫುಲ್ಲವಾಯಿತು.

"ಇದು ನೋಡು! ಬಹಳ ದಿನಗಳಿಂದ ಕೂಳೇ ಸವಿ ಹತ್ತುತ್ತಿರಲಿಲ್ಲ. ಇಂದು ನಾಲಿಗೆ ಸವಿಯಾದಂತೆ ತೋರುತ್ತದೆ. ಏನಾದರೂ ಸವಿಯಾಗಿ

ಅಡಿಗೆ ಮಾಡು. ಏಕೋ ಮುಂಜಾವಿನಿಂದ ಹಸಿವೆಯೇ ತಲೆದೋರ ತೊಡಗಿದೆ."

"ನೀವು ಉಣ್ಣುವುದಾದರೆ ಬೇಕಾದ್ದನ್ನು ಮಾಡುವೆನು. ನನಗೂ ಮುಂಜಾವಿನಿಂದ ಹಸಿವೆಯ ಸಂಕಟವೇ ಆಗತೊಡಗಿದೆ. ಬೇಗ ಮೈತೊಳೆದು ಕೊಂಡು ಅಡಿಗೆಗೇ ಇಟ್ಟುಬಿಡುವೆನು. ?"

"ಪಾಯಸವನ್ನು ಮಾಡುತ್ತೀಯಾ ? ಶಾವಿಗೆಯದು ?"

"ಒಂದು ಹಿಡಿ ಶಾವಿಗೆ ಮಾತ್ರ ಇದೆ. ಮಕ್ಕಳಿಗಾಗಿ ಅವನ್ನು ಮೀಸ ಲಿಟ್ಟದ್ದೇನೆ. ನಿಮಗೆ ಬೇಕಾದರೆ ಸಜ್ಜಿಗೆಯ ಪಾಯಸ ಮಾಡುತ್ತೇನೆ. ಆಕಳ ಹಾಲು ಬೇಕಾದಷ್ಟು ಸಿಗುತ್ತದೆ."

"ಹಾಗೇ ಮಾಡು. ನನಗೇಕೋ ಸಂಕಟವೇ ಆಗತೊಡಗಿದೆ. ಬೇಗನೆ ಅಡಿಗೆಯನ್ನು ಪೂರೈಸಿಬಿಡು."

"ನನಗೂ ಪಿತ್ತವಾದಂತೆ ಹೊಟ್ಟೆಯಲ್ಲಿ ಕಸಿವಿಸಿಯೇ ಆಗತೊಡ ಗಿದೆ, ಉಂಡಮೇಲೆ ಕಡಿಮೆಯಾಗಬಹುದು."

"ಮಕ್ಕಳು ಬರುವ ಸಂತೋಷದಲ್ಲಿ ಹೊಟ್ಟೆತುಂಬಾ ಊಟಮಾಡು. ಈ ಹೊತ್ತು."

"ನೀವು ?"

"ನೀನು ಬೇರೆ, ನಾನು ಬೇರೆಯೇ ?"

ಇಬ್ಬರೂ ನಕ್ಕರು.

ಸೀತಮ್ಮನವರು ಲಗುಬಗೆಯಿಂದ ಸ್ನಾನಮಾಡಿ ಅಡಿಗೆಗೆ ಇಟ್ಟರು. ಬೇಳೆಗೆ ಎಸರು ಇಟ್ಟು ದೇವರಪೂಜೆಗೆ ಆರಂಭಿಸಿದರು. ಇದು ಅವರ ನಿತ್ಯನಿಯಮವಾಗಿತ್ತು. ಆಗಲೂ ಹಲ್ಲಿಯೊಂದು 'ಚಿಪ್—ಚಿಪ್' ಎಂದಿತು. 'ಇದಕ್ಕೇನು ಧಾಡಿ ಬಂದಿದೆ ಈ ಹೊತ್ತು' ಎನ್ನುತ್ತ ಸೀತಮ್ಮ ಪೂಜೆಯನ್ನು ಪೂರೈಸಿ ದೇವರ ಮುಂದೆ ಎರಡು ದೊಡ್ಡ ನೀಲಾಂಜನಗಳಲ್ಲಿ ತುಪ್ಪದ ದೀವಿಗೆಗಳನ್ನು ಹಚ್ಚಿ ಇಟ್ಟರು. ಮಕ್ಕಳ ಸುಖಾಗಮನಕ್ಕಾಗಿ ಈ ವ್ರತವನ್ನು ಅವರು ಕೈಕೊಂಡಿದ್ದರು.

ಶಾಸ್ತ್ರಿಗಳು ಬಹಳ ಮಾತಾಡಿದ್ದರಿಂದ ಅವರಿಗೆ ದಣಿವು ತಲೆದೋರಿತು. ಅವರು ದಿಂಬಿಗೆ ಒರಗಿಕೊಂಡು ಗಂಭೀರ ವಿಚಾರಗಳಲ್ಲಿ ಮಗ್ನರಾದರು. ರಾಷ್ಟ್ರದ ಪುನರ್ರಚನೆಗೆ ಯಾವ ಹೊಳಹನ್ನು ಹಾಕಬೇಕೆಂದು ವಿಚಾರಿಸ ತೊಡಗಿದರೇನೋ! ಆಗಾಗ ವಿಚಾರಭರದಲ್ಲಿ ತಲೆ ಕೊಡಹುತ್ತಿದ್ದರು.

ದೇವರ ಪೂಜೆಯನ್ನು ಮುಗಿಸಿಕೊಂಡು ಸೀತಮ್ಮನವರು ತಲೆಬಾಗಿಲ

ಹತ್ತಿರಿರುವ ತುಳಸೀ ಪೂಜೆಯನ್ನು ಮಾಡಲು ಹೊರಬಂದರು. ಹಣೆತುಂಬ ಕುಂಕುಮ, ಎರಡೂ ಗಲ್ಲಗಳ ಮೇಲೆ ಲೇಪಿಸಿಕೊಂಡ ಅರಿಷಣ ಇವುಗಳಿಂದ ಸುಶೋಭಿತವಾದ ಮುಖದಿಂದ ಪವಿತ್ರತೆಯೇ ಹೊರಸೂಸುವಂತೆ ಕಾಣುತ್ತಿತ್ತು. ಅವರು ತುಳಸೀಕಟ್ಟೆಗೆ ಪ್ರದಕ್ಷಿಣೆ ಹಾಕಿ ನಿಲ್ಲುವ ಹೊತ್ತಿಗೆ ಹತ್ತಿರದಲ್ಲಿ ಎರಡು ಹಣ್ಣಿನ ಕರಂಡಿಗಳನ್ನು ಹೊತ್ತುಕೊಂಡು ಬರುವವನ ಹಿಂದೆ ನವಯುವತಿಯೊಬ್ಬಳು ಬರುವದನ್ನು ಕಂಡರು. ಅವರ ಕುತೂಹಲ ಕೆರಳಿತು. ಸಂಪೂರ್ಣ ಖಾದೀ ಸೀರೆಯನ್ನುಟ್ಟುಕೊಂಡು ಅದರದೇ ರಾಕೆಯನ್ನು ತೊಟ್ಟುಕೊಂಡ ಅವಳು ಸೀತಮ್ಮನವರ ಕಣ್ಣಿಗೆ ಮನಮೋಹಕವಾಗಿ ಕಂಡಳು. ಅವರು ಸನಿಯಕ್ಕೆ ಬರುತ್ತಲೇ ಸೀತಮ್ಮ ಕಟ್ಟೆಯನ್ನಿಳಿದು ಒಳಗೆ ಹೊರಡಲು ಸಿದ್ಧವಾದರು. ಹೋಗುವಾಗ ಇನ್ನೊಮ್ಮೆ ಆ ಯುವತಿಯನ್ನು ನೋಡಬೇಕೆಂಬ ಕುತೂಹಲ ಉಂಟಾದ್ದರಿಂದ ಸೀತಮ್ಮ ಕಣ್ಣರಳಿಸಿ ಮತ್ತೊಮ್ಮೆ ನೋಡಿದರು.

ಆ ಯುವತಿ ಸೀತಮ್ಮನವರನ್ನು ಕಾಣುವ ಹೊತ್ತಿಗೂ ಆಳು ಅಲ್ಲಿಯೇ ನಿಂತು 'ಇದೇ ಮನೆ' ಅನ್ನುವುದಕ್ಕೂ ಮೇಳವೇ ಬಿದ್ದಿತು. ಸೀತಮ್ಮನವರನ್ನು ನೋಡಿದ ಯುವತಿಗೆ ಅವರು ಜಯದೇವನ ತಾಯಿಯಾಗಿರಲೇಬೇಕೆಂಬುದು ದೃಢವಾಯಿತು. ಅವಳು ವಿನಯದಿಂದ "ತಾಯೀ!" ಎಂದು ಕರೆದಳು.

ಸೀತಮ್ಮನವರಿಗೆ ಬಹಳ ಅಚ್ಚರಿಯಾಯಿತು. ಅವರು ತಡೆದು ನಿಂತು ಕರೆದ ಯುವತಿಯನ್ನು ಹುಳುಹುಳು ನೋಡತೊಡಗಿದರು.

"ಸ್ವಲ್ಪ ನೀರು ತೆಗೆದುಕೊಂಡು ಬನ್ನಿರಿ. ಕಾಲುಗಳನ್ನು ತೊಳೆದುಕೊಂಡೇ ಒಳಗೆ ಬರುತ್ತೇನೆ." ಎಂದ ಆ ಮಾತುಗಳನ್ನು ಕೇಳಿ ಸೀತಮ್ಮನವರಿಗೆ ಇನ್ನೂ ಹೆಚ್ಚಿನ ಅಚ್ಚರಿಯಾಯಿತು. ಆ ಕ್ಷಣ ಅವರಿಗೆ ವಾಸುದೇವನ ಮಾತುಗಳು ನೆನಪಾದವು. ಅವರ ಮುಖದ ಮೇಲೆ ಹರುಷವೇರಿ ಬಂದಿತು. ಅವರು ಲಗುಬಗೆಯಿಂದ ಒಳಕ್ಕೆ ಹೋಗಿ ಒಂದು ತಂಬಿಗೆಯಲ್ಲಿ ನೀರು ತುಂಬಿಕೊಂಡು ರಾಮಾಶಾಸ್ತ್ರಿಗಳಿಗೆ "ಹೊರಗೆ ಯಾರೋ ಬಂದಿದ್ದಾರೆ ನೋಡಬಾರದೆ?"ಎಂದು ಪಡಸಾಲೆಗೆ ಬಂದರು. ಆ ವೇಳೆಗೆ ಆ ಆಳುಮಗನು ಹೂ, ಹಣ್ಣು, ಕಾಯಿಪಲ್ಯಗಳ ಬುಟ್ಟಿಗಳನ್ನು ಕೆಳಗಿರಿಸಿ ನಿಂತಿದ್ದನು.

ರಾಮಾಶಾಸ್ತ್ರಿಗಳು ಅಚ್ಚರಿಯಿಂದ ಹೊರಗೆ ಬರುವ ಹೊತ್ತಿಗೆ ಆ ಯುವತಿ ಕಾಲು ತೊಳೆದುಕೊಂಡು ಒಳಬಾಗಿಲಲ್ಲಿ ಹೆಜ್ಜೆ ಇಕ್ಕಿದ್ದಳು. ಅವಳನ್ನು ನೋಡಿ ಶಾಸ್ತ್ರಿಗಳು

"ಒಳಗೆ ಬನ್ನಿರಿ" ಎಂದರು. ಅದು ಸಾಂಪ್ರದಾಯಿಕವಾಗಿತ್ತು.

ಈ ದಂಪತಿಗಳ ಸಂದೇಹವನ್ನು ಕೂಡಲೇ ಹೊಡೆದೋಡಿಸಬೇಕೆಂದು ಆ ಯುವತಿ ಆ ಆಳುಮಗನನ್ನು ಕುರಿತು "ನೀನು ನನ್ನ ಮನೆಗೆ ಮುಟ್ಟಿಸಿ ಆಯಿತು. ಹೋಗಲಡ್ಡಿಯಿಲ್ಲ. ಸುಂದರಾ ಸುಖರೂಪವಾಗಿ ಮುಟ್ಟಿದಳೆಂದು ತಂದೆಗೆ ತಿಳಿಸು" ಎಂದು ಹೇಳುವಾಗ ಬೇಕೆಂದೇ ತನ್ನ ಹೆಸರನ್ನು ಸೂಚಿಸಿದಳು.

"ಸುಂದರಾ !"

"ಅವರಿಂದ ನಿಮಗೆ ಈ ಹೆಸರಿನ ಪರಿಚಯವಾಗಿದೆಯೆಂದು........"

"ನಿನ್ನ 'ಅವರು' ಈ ಹೆಸರಿನ ಪರಿಚಯ ಮಾಡಿಕೊಡಲಿಲ್ಲವಾದರೂ ವಾಸುದೇವನಿಂದ ನಾನು ಎಲ್ಲವನ್ನೂ ತಿಳಿದಿದ್ದೇನೆ ಮಗಳೆ! ಒಳಗೆಬಾ! ಈ ಮನೆ ನಿನ್ನದು." ಎಂದು ರಾಮಾಶಾಸ್ತ್ರಿಗಳು ಹರುಷನಿರ್ಭರರಾಗಿ ನುಡಿದರು.

"ಬಾ ತಾಯಿ! ಒಳಗೆ. ನೀನೊಬ್ಬಳೇ ಹೇಗೆ ಬಂದೆ" ಎಂದು ಸೀತಮ್ಮನವರು ಅಕ್ಕರೆಯಿಂದ ಕೇಳಿದರು.

ಸುಂದರಾ ಒಳಕ್ಕೆ ಹೋಗಿ ದೇವರಿಗೆ ನಮಿಸಿದಳು. ಸೀತಮ್ಮನವರ ಕಾಲು ಬಿದ್ದಳು. ರಾಮಾಶಾಸ್ತ್ರಿಗಳಿಗೆ ವಂದಿಸಿದಳು.

"ಕುಳಿತುಕೋ ಮಗಳೆ! ಒಬ್ಬಳೇ ಬಂದೆಯಾ ?" ಸೀತಮ್ಮ ಮತ್ತೆ ಕೇಳಿದರು.

ಸುಂದರಾ ಅಲ್ಲಿಯೇ ಕುಳಿತು ಹೇಳಿದಳು, "ಈ ಭಾಗದ ಪೋಲೀಸ ಪಡೆಯ ಮೇಲ್ವಿಚಾರಕರಾಗಿ ತಂದೆ ಕೃಷ್ಣಾತೀರದ ಬಂಗಲೆಯಲ್ಲಿ ಬಿಡಾರ ಹಾಕಿದ್ದಾರೆ. ನಾನು ಅವರ ಜೊತೆಯಲ್ಲಿಯೇ ಬಂದಿರುವೆ. ಮೊನ್ನೆ 'ಅವರ' ಭೆಟ್ಟಿಯಾದಾಗ ನಿಮ್ಮ ಗಾಯಗಳ ಬಗ್ಗೆ ಕಳವಳವನ್ನು ತೋರಿ ಕಣ್ಣೀರಿಟ್ಟರು. ಅವರ ಸೇವೆ ನನಗೆ ಇಲ್ಲದೇ ಹೋಯಿತಲ್ಲಾ ಎಂದು ಮರುಗಿದರು. ಆ ವೇಳೆಗೆ ತಂದೆಯವರು ಇತ್ತ ಹೋಗಬೇಕೆಂಬ ಆದೇಶ ಬಂದಿತು. ಅವರಿಗೆ ಸಿಗದ ಸೇವೆ ನನಗಾದರೂ ಸಿಗಲಿ ಎಂದು ನಾನು ಬಂದೆ. ಈಗ ನಿಮ್ಮ ಗಾಯಗಳು ಮಾಯ್ದಿವೆಯಷ್ಟೆ ?"

"ಕಡಿಮೆಯಾಗಿವೆ ಮಗಳೆ! ನಿನ್ನ ಧೈರ್ಯ ಸಾಹಸಗಳನ್ನು ಕೇಳಿ ತಿಳಿದಿದ್ದೆ. ಈಗ ನಿನ್ನ ಸೇವಾಬುದ್ಧಿಯ ಪರಿಚಯವೂ ಆಯಿತು. ಜಯದೇವನೇ ಧನ್ಯ! ಅದಿರಲಿ, ಈ ಭಾಗದ ಮೇಲ್ವಿಚಾರಕನಾಗಿ ನಿಮ್ಮ ತಂದೆಯವರು ಬಂದಿರುವರೆಂದು ಹೇಳಿದೆಯಲ್ಲ, ಇದೂ ಒಂದು ಸಂತೋಷದ ಸಂಗತಿ. ನನ್ನ ವಾಸುದೇವನನ್ನು ಅವರು ಸರ್ವಪ್ರಯತ್ನದಿಂದ ಕಾಪಾಡುವರು."

"ಇದರಲ್ಲಿ ಸಂದೇಹವೇ ಇಲ್ಲ. ಹಾಗೆ ಕೇಳಿದರೆ ಈ ಚಳವಳಿಯಲ್ಲಿ ತಲೆ ಮರೆಸಿಕೊಂಡು ಕೆಲಸಮಾಡುವ ಕಾರ್ಯಕರ್ತರಿಗೆಲ್ಲ ನಮ್ಮ ಮನೆಯೇ ರಕ್ಷಣೆಯ ಬೀಡಾಗಿದೆ."

"ಎಂತಹ ರಾಷ್ಟ್ರಭಕ್ತಿಯಿದು. ನಿನ್ನ ತಂದೆ ಮಾಡುತ್ತಿರುವ ಕೆಲಸ ಅಸಾಮಾನ್ಯವಾಗಿದೆ."

"ಅವರೂ ಹಿಂದೀಯರಷ್ಟೆ ?"

"ಈ ಬುದ್ಧಿ ಎಷ್ಟು ಅಧಿಕಾರಿಗಳಿಗಿದೆ—ಹೇಳು. ವಾಸುದೇವನಿಗಾಗಿ ಇವರು ಪಡುತ್ತಿರುವ ಹಟವನ್ನು ನೋಡಿದರೆ ಈ ದ್ರೋಹಿಗಳಿಗೆ ಯಾವ ಶಾಸನ ಕೊಡಬೇಕೋ ತಿಳಿಯದು."

"ಈ ಚಳವಳಿ ಕೂಡಲೇ ನಿಲ್ಲುವದೆಂದು ಹೇಳುತ್ತಾರಲ್ಲ. ಸುಂದರಾ, ಇದು ನಿಜವೇ?" ಸೀತಮ್ಮ ಆತುರದಿಂದ ಕೇಳಿದರು.

"ಹಾಗೇನೋ ಮೊದಲು ಕಂಡಿತು. ಆದರೆ ಪರಿಸ್ಥಿತಿ ಕೂಡಲೇ ಬದಲಾದಂತೆ ತೋರುತ್ತದೆ. ಅದಕ್ಕಾಗಿಯೇ ತಂದೆಯುವರನ್ನು ಜಿಲ್ಲಾ ಅಧಿಕಾರಿಗಳು ಕರೆಸಿಕೊಂಡಂತೆ ತೋರುತ್ತದೆ."

"ಮತ್ತೆ ದಬ್ಬಾಳಿಕೆಯೆ?"

"ಕಟುತರವಾದ ದಬ್ಬಾಳಿಕೆಯಾದರೂ ನಮ್ಮ ಜನ ಹಣಿಯುವದಿಲ್ಲ. ಈಗ ವಾಸುದೇವರಂಥವರನ್ನು ಹಿಡಿಯಲು ಅವರು ಪಡುತ್ತಿರುವ ಸಾಹಸವು ಗಾಳಿಗೆ ತೂರಿ ಹೋಗುತ್ತಿರುವದು ಏನನ್ನು ಸೂಚಿಸುತ್ತದೆ? ಈ ಚಳವಳಿ ಜನತೆಯಲ್ಲಿ ಬೇರೂರಿಬಿಟ್ಟಿದೆ."

ನಿಮ್ಮ ತಂದೆ ಬೇಗನೇ ಬರುವರಲ್ಲ! ಇಲ್ಲಿ ಬಂದ ಅಧಿಕಾರಿಯು ಬಹಳ ಉತಾವಳಿಯಾಗಿರುವನೆಂದು ಕೇಳಿರುವೆ."

"ಅದು ನಿಜ. ಆದರೆ ತಂದೆಯವರು ಹೋಗುವ ಮುಂದೆ ಅವನನ್ನು ಕರೆಸಿಕೊಂಡು ಸಾವಧಾನದ ಹೆಜ್ಜೆಯಿಡಲು ಎಚ್ಚರಿಸಿದ್ದಾರೆ. ಅವರು ಒಂದೆರಡು ದಿನಗಳಲ್ಲಿ ಬರಬಹುದು. ಯಾವ ಸಂಧರ್ಭದಲ್ಲಿಯೂ ನಿಮ್ಮ ಹಿರಿಯ ಮಗನಿಗೆ ಗಂಡಾಂತರವೇ ಇಲ್ಲ. ಅವರ ರಕ್ಷಣೆಗೆ ದಕ್ಷರಾದವರು ಬಹಳ ಜನ."

"ಅವನಿಗೆ ಏನೂ ಆಗುವದಿಲ್ಲವಷ್ಟೆ ಸುಂದರಾ!"

"ಅವರಿಗೇನಾಗುತ್ತದೆ ?"

"ನೀನು ಬಂದದ್ದು ಬಹಳ ಒಳಿತಾಯಿತಪ್ಪಾ. ನನಗೆ ಧೈರ್ಯ ಬಂದಿತು."

"ಹಾಗೆ ಕೇಳಿದರೆ ಭಾವನ ರಕ್ಷಣೆಗೆ ಬದ್ಧಕಂಕಣಳಾಗಿಯೇ ಬಂದಿ

ದ್ದಾಳೆ ಸುಂದರಾ !"

ಈ ಮಾತನ್ನು ಕೇಳಿ ಸುಂದರಾ ಲಜ್ಜಿತಳಾದಳು.

"ಈ ಕಟುಕರ ರಾಜ್ಯವೆಂದು ಹಾಳಾಗಿ ಹೋದೀತು. ಸುಂದರಾ !

"ಸಮಯ ಬಂದಿದೆ ತಾಯಿ."

"ನನ್ನ ವಾಸುದೇವನಿಗೆ ಭಯವಿಲ್ಲವಷ್ಟೆ."

"ನೀವು ಸುಮ್ಮನೆ ಅಂಜುತ್ತಿರುವಿರಿ."

"ಅವನಿಗೆ ಗುಂಡಿಕ್ಕಲು ಆಜ್ಞೆಯಾಗಿದೆಯಂತೆ !

"ಅದು ಪೂರಾ ಸುಳ್ಳು. ಜನರಲ್ಲಿ ಭೀತಿ ಹರಡಲಿ ಎಂದು ಆ ರೀತಿಯ ಪ್ರಚಾರ ಮಾಡಲಾಗಿದೆ."

"ನಿನ್ನ ಬಾಯಲ್ಲಿ ಸಕ್ಕರಿ ಬೀಳಲಿ, ಮಗಳೆ !"

ಮಧ್ಯಾಹ್ನ ರಾಮಾಶಾಸ್ತ್ರಿಗಳ ಊಟವಾದ ಮೇಲೆ ತಾನು ಊಟಕ್ಕೆ ಕುಳಿತುಕೊಳ್ಳುವೆನೆಂದು ಸುಂದರಾ ಎಷ್ಟು ಹಟ ಹಿಡಿದರೂ ದಂಪತಿಗಳು ಕೇಳಲಿಲ್ಲ.

ಊಟಕ್ಕೆ ಕುಳಿತಾಗ ಮೊದಲಿಗೆ ಬಡಿಸಿದ ಶೇವಿಗೆಯ ಪಾಯಸವನ್ನು ನೋಡಿ ರಾಮಾಶಾಸ್ತ್ರಿಗಳು ಮುಗುಳುನಗೆ ನಕ್ಕು ಹೇಳಿದರು.

"ನನಗಾಗಿ ಸಜ್ಜಿಗೆ ಪಾಯಸ ಮಾಡುವೆನೆಂದು ಹೇಳಿದ್ದಿ. ಮಕ್ಕಳಿಗಾಗಿ ಈ ಶೇವಿಗೆ ಮಾಸಲೆಂದು ಹೇಳಿದ್ದಿ. ಈಗ........'

"ಮೊದಲದಿನ ಬಂದ ಸೊಸೆಗೆ ಅದು ಪಕ್ವಾನ್ನವಲ್ಲವೇ ?" ಎಂದು ಸೀತಮ್ಮನವರು ನಗುತ್ತಾ ನುಡಿಯಲು, ಸುಂದರಾನ ಗಲ್ಲಗಳ ಮೇಲೆ ಕೆಂಪು ಸುಳಿ ತೋರಿತು."

೧೧

ಸುಂದರಾನ ಬರುವಿಕೆಯಿಂದ ಈ ದಂಪತಿಗಳಲ್ಲಿ ಒಂದು ಹೊಸ ಚೈತನ್ಯವೇ ಮೂಡಿ ಬಂದಂತಾಯಿತು. ಸೀತಮ್ಮನವರಂತೂ ಹಿಗ್ಗಿ ಹೋದರು. ಅವರ ಹಿಗ್ಗಿಗೆ ಅವಳು ಬಂದುದಷ್ಟೇ ಕಾರಣವಾಗಿರದೆ ಅವಳು ವಾಸುದೇವನ ರಕ್ಷಣೆಯಲ್ಲಿ ದಕ್ಷಳಾಗಿದ್ದಾಳೆ ಎಂಬುದೂ ಕಾರಣವಾಗಿತ್ತು. ರಾಮಾಶಾಸ್ತ್ರಿಗಳಿಗಂತೂ ಸುಂದರಾನ ಮುಂದೆ ಮಾತಾಡಿದಷ್ಟೂ ಕಡಿಮೆ ಎನ್ನಿಸಹತ್ತಿತು. ಅವಳಿಂದ ಅವಳ ಮನೆತನದ ಇತಿಹಾಸವನ್ನು ಚಾತುರ್ಯದಿಂದ ಕೇಳಿಕೊಂಡರು. ಸೂಕ್ಷ್ಮವಾಗಿ ಜಯದೇವನ ಬಗ್ಗೆ ಅವಳಲ್ಲಿ ಅಡಕವಾದ ನಿಸ್ಸೀಮ

ಭಕ್ತಿಯನ್ನು ಕಂಡುಕೊಂಡರು. ತಮ್ಮ ಮನೆತನಕ್ಕೆ ಯೋಗ್ಯಳಾದ ಕನ್ನಿಕೆಯೆಂದು ಅವರಿಗೆ ಮನವರಿಕೆಯಾದಾಗ ಅವರ ಹಿಗ್ಗು ಹಿಡಿಸದಾಯಿತು. ಅವಳ ಮುಂದೆ ಏನೆಲ್ಲವನ್ನೂ ಹೇಳಬೇಕೆಂದು ಹಾತೊರೆಯುತೊಡಗಿದರು.

ಆ ವೇಳೆಗೆ ಸಾದಾ ಉಡುಪಿನಲ್ಲಿ ಬಂದ ಪೋಲೀಸನೊಬ್ಬನು ಸುಂದರಾಸಿಗಾಗಿ ಆ ದಿನದ ವೃತ್ತಪತ್ರವನ್ನು ಕೊಟ್ಟುಹೋದನು. ಹಾಗೆ ಮಾಡಲು ಅವಳು ಮೊದಲೇ ಹೇಳಿದಂತೆ ತೋರುತ್ತದೆ. ಅವಳು ಲಗುಬಗೆಯಿಂದ ಕಣ್ಣು ಹಾಯಿಸಿದಾಗ ಅವಳು ಓದಿದ ಸುದ್ದಿಯಿಂದ ಅವಳಿಗೆ ಅಚ್ಚರಿಯೇ ಆಯಿತು. ವೇದನೆಯೂ ಆಯಿತು. "ರಾಮಾಶಾಸ್ತ್ರಿಗಳು ಅವಳ ಮುಖಭಾವವನ್ನು ಕಂಡು "ಏನು ಸುದ್ದಿಯಿದೆ ಸುಂದರಾ!" ಎಂದು ಕೇಳಿದರು.

"ಸುಬ್ಬಾಭಟ್ಟರನ್ನು ಹುಬ್ಬಳ್ಳಿಯಲ್ಲಿ ಕೈದುಮಾಡಿದರಂತೆ? ತೇರದಾಳದಲ್ಲಿ ಕಾಶೀನಾಥರನ್ನು ಹಿಡಿದುಬಿಟ್ಟರಂತೆ! ಎಲ್ಲವೂ ಮೋಸ. ಇವರು ಹಾಗೆ ಸರಳವಾಗಿ ಸಿಗುವ ಜನರಾಗಿಲ್ಲ" ಎಂದು ಸುಂದರಾ ದೀರ್ಘವಾದ ನಿಟ್ಟುಸಿರನ್ನೆಳೆದಳು.

"ಏನು? ನಮ್ಮ ಸುಬ್ಬನನ್ನು ಹಿಡಿದುಬಿಟ್ಟರೆ? ಕಾಶೀನಾಥನು ಹೀಗೆ ಸಿಗಬಾರದಾಗಿತ್ತು. ಇವರು ಯಾರೆಂದು ತಿಳಿದಿರುವಿ ಸುಂದರಾ?"

"ನಿಮ್ಮ ಸಂಬಂಧಿಕರೆಂದು ತಿಳಿದಿರುವೆ."

"ದೂರದ ಸಂಬಂಧವಲ್ಲ ಸುಂದರಾ! ತೀರಾ ಹತ್ತಿರದವರು."

ಈ ಮಾತುಗಳನ್ನು ಕೇಳಿ ಸೀತಮ್ಮನವರಿಗೆ ಬಹಳ ಗಾಬರಿ. "ವಾಸುದೇವನ ಬಗ್ಗೆ, ಜಯದೇವನ ಬಗ್ಗೆ ಏನಾದರೂ ಛಾಪಿಸಿರುವರೇನು ನೋಡು ಸುಂದರಾ! ಏಕೋ ನನ್ನ ಬಲಗಣ್ಣು ಹಾರಹತ್ತಿದೆ."

"ಛೆ! ಛೆ! ಅವರ ಸುದ್ದಿ ಹೇಗೆ ಬಂದೀತು ಹೇಳಿರಿ. ಅವರು ಸುರಕ್ಷಿತರಾಗಿದ್ದಾರೆ."

"ಆದರೆ....ನಿಮ್ಮ....ತಂದೆಯವರು ಹೋಗಿಬಿಟ್ಟಿದ್ದಾರೆ. ಸುಂದರಾ!"

"ಅವರೇನು ಅತ್ತಲೇ ಹೋಗುವರೆ? ಈ ದಿನವೇ ಬಂದಾರು! ಈ ಸುಬ್ಬಾಭಟ್ಟರು ಸಿಗಬಾರದಾಗಿತ್ತು. ಅವರನ್ನು ಹಿಡಿದುಕೊಟ್ಟವರಿಗೆ ಐದು ಸಾವಿರ ರೂಪಾಯಿಗಳ ಬಹುಮಾನವನ್ನು ಸಾರಲಾಗಿತ್ತು. ಹಣದ ಆಸೆ ಈ ಕೆಲಸವನ್ನು ಮಾಡಿಸಿದಂತೆ ತೋರುತ್ತದೆ. ನಮ್ಮ ಜನ ಹೀನರಾಗಿದ್ದಾರೆ. ರಾಷ್ಟ್ರದ್ರೋಹಿಗಳಾಗಿದ್ದಾರೆ."ಸುಂದರಾ ಅವಡುಗಚ್ಚಿ ನುಡಿಯತೊಡಗಿದಳು.

"ವಾಸುದೇವನನ್ನು ಹಿಡಿದುಕೊಟ್ಟವರಿಗೂ ಬಹುಮಾನವನ್ನಿಟ್ಟಿದ್ದಾರೆ ಸುಂದರಾ!" ಸೀತಮ್ಮ ಕಾತರದಿಂದ ಹೇಳಿದರು.

"ಅವರನ್ನು ಹಿಡಿಯುವದು ಬ್ರಹ್ಮದೇವರಿಗೂ ಸಾಧ್ಯವಿಲ್ಲ ಬಿಡಿರಿ."

"ನಿನಗೆಂತಹ ಧೈರ್ಯವೇ ಸುಂದರಾ !"

"ನನ್ನ ಧೈರ್ಯದಿಂದ ನಾನು ಈ ಮಾತು ಆಡುತ್ತಿರುವುದಿಲ್ಲ. ಅವರ ಕರ್ತವ್ಯಶಕ್ತಿಯ ಅರಿವಿನಿಂದ ಈ ಮಾತನ್ನು ಆಡುತ್ತೇನೆ. ಅವರ ಸಾಮರ್ಥ್ಯಕ್ಕೆ ಸರಕಾರದ ಅಡಿಗಲ್ಲು ಅಲುಗಾಡತೊಡಗಿದೆ. ಹುಬ್ಬಳ್ಳಿಯ ಕಾರ್ಯಕರ್ತರು ಸುಬ್ಬಾಭಟ್ಟರ ನೆರವಿಲ್ಲದೆ ಸಾಗಬೇಕಾಯಿತಲ್ಲಾ ಎಂಬ ಕಳವಳ. ಅವರು ಅದ್ಭುತ ಸಾಹಸಿಗಳಾಗಿದ್ದರು...." ಎಂದು ಗಂಭೀರಳಾದಳು.

ಸಂಜೆ ಸನ್ನಿಹಿತವಾಗತೊಡಗಿದಂತೆ ರಾಮಾಶಾಸ್ತ್ರಿಗಳ ಹೃದಯದಲ್ಲಿ ಅಶಾಂತತೆ ಪಸರಿಸತೊಡಗಿತು. ಅದೇತಕ್ಕೋ ಕಳವಳ ತುಂಬಹತ್ತಿತು. ಹೊಟ್ಟೆ ತುಂಬಾ ಕಸಿವಿಸಿಯಾಗತೊಡಗಿತು.

ಸೀತಮ್ಮನವರಿಗೂ ದುಗುಡ ತುಂಬಹತ್ತಿತು. ಪಿತ್ತವಿಕಾರವಾದಂತೆ ಹೊಟ್ಟೆಯಲ್ಲಿ ಏನೋ ಒಂದು ರೀತಿಯ ಸಂಕಟವಾಗತೊಡಗಿತು. ಅವರು ಈ ವೇದನೆಯನ್ನು ಹತ್ತಿಕ್ಕಿಕೊಂಡ ಭಾವ ಮುಖದಲ್ಲಿ ಮೂಡಿತ್ತು.

"ಸ್ವಲ್ಪ ಸಿಹಿಯಾದ ಅಳ್ಳಿಟ್ಟನ್ನು ಕಲಸಿ ಕೊಡಬಾರದೆ ? ಏಕೋ ಸಂಕಟವಾಗುತ್ತಿದೆ." ಎಂದು ರಾಮಾಶಾಸ್ತ್ರಿಗಳು ಅನ್ನಲು ಸೀತಮ್ಮನವರಿಗೆ ಪತಿಯು ತನ್ನ ಅಪೇಕ್ಷೆಯನ್ನೇ ಕೇಳಿಕೊಂಡಂತೆ ಅನ್ನಿಸಿತು.

"ಪಿತ್ತವಿಕಾರದಿಂದ ಒಮ್ಮೊಮ್ಮೆ ಹೀಗಾಗುತ್ತದೆ. ಸ್ವಲ್ಪ ಪಾನಕ ಮಾಡಿ ಕೊಡಲಾ ?" ಸುಂದರಾ ಕೇಳಿದಳು.

"ಪಾನಕ ಹುಳಿಯಾಗಿರುತ್ತದೆ. ಅದು ಬೇಡ ಸುಂದರಾ ! ಅಳ್ಳಿಟ್ಟೇ ಯೋಗ್ಯವಾಗಿರುತ್ತದೆ."

ಸೀತಮ್ಮನವರು ಪತಿಗೆ ಅಳ್ಳಿಟ್ಟನ್ನು ಕೊಟ್ಟು ತಾವಷ್ಟು ತಿಂದು ನೀರು ಕುಡಿದರೂ ಅವರ ಸಂಕಟ ನಿಲ್ಲದಾಯಿತು. ರಾಮಾಶಾಸ್ತ್ರಿಗಳಿಗೂ ಹೀಗೆಯೇ.

"ಈ ವಾರದಲ್ಲಿ ಚಳವಳಿ ನಿಲ್ಲಬಹುದಲ್ಲವೇ ಸುಂದರಾ !"

"ಇಂದಿನ ಸುದ್ದಿಗಳನ್ನು ನೋಡಿದರೆ ನನಗಂತೂ ಹಾಗೆ ತೋರುವದಿಲ್ಲ. ಇನ್ನೂ ಹೆಚ್ಚಿನ ದಬ್ಬಾಳಿಕೆ ಪ್ರಾರಂಭವಾಗುವಂತೆ ತೋರುತ್ತದೆ."

ಸುಂದರಾನ ಮಾತುಗಳನ್ನು ಕೇಳಿ ಶಾಸ್ತ್ರಿಗಳು ನಿಟ್ಟುಸಿರಿಟ್ಟರು. "ಆಕಳ ಹಾಲು ಇದ್ದರೆ ಕಾಸಿ ಕಲ್ಲುಸಕ್ಕರೆ ಬೆರೆಸಿ ಕೊಡುತ್ತೀಯೇನು ನೋಡು."

"ಹಾಂ ! ಕಾಸಿಕೊಡುತ್ತೇನೆ." ಈ ವೇದನೆಯು ಪತಿಯಲ್ಲಿಯೂ

ಸಮಾನವಾಗಿರುವದನ್ನು ಕಂಡು ಸೀತಮ್ಮ ಗಾಬರಿಯಾಗತೊಡಗಿದರು.

ಹಾಲನ್ನು ಕುಡಿದ ಮೇಲೆ ತುಸು ಸಮಾಧಾನವಾಯಿತೇನೊ? ಶಾಸ್ತ್ರಿಗಳು ಮತ್ತೆ ಆ ಮಾತು ಈ ಮಾತು ಆಡತೊಡಗಿದರು. ಎಲ್ಲ ಮಾತುಗಳೂ ವಾಸುದೇವನ ಸುತ್ತಲೇ ತಿರುಗುತ್ತಿದ್ದವು.

ಕತ್ತಲಾಗತೊಡಗಿದ್ದರಿಂದ ಸೀತಮ್ಮನವರು ದೀಪ ಹಚ್ಚಿದರು. ಹೊಸ್ತಿಲಕ್ಕೆ ತನುವಿನ ನೀರು ಹಾಕಿ ಎಡಬಲದ ಕಲ್ಲುಗಳನ್ನು ವಿಾಯಿಸಿ ಕುಂಕುಮ ಹಚ್ಚಿದರು. ಒಂದು ಬೊಟ್ಟನ್ನು ತಾವಿಟ್ಟುಕೊಂಡು ಸುಂದರಾನ ಹಣೆಗೆ ಅದನ್ನು ಲೇಪಿಸಿದರು.

ಅವರ ಕೈ ನಡುಗುತ್ತಿದ್ದವು. ಏತಕ್ಕೆ ಹೀಗಾಗುತ್ತಿದೆ ಎಂಬುದು ಅವರಿಗೆ ತಿಳಿಯದಾಯಿತು.

"ನಿನ್ನ ತಂದೆ ಈ ಹೊತ್ತು ಬಂದೇ ತೀರುವರಲ್ಲ? ಸುಂದರಾ!"

"ಹಾಗೆ ಕಾಣುತ್ತದೆ. ಆದರೆ ಖಂಡಿತವಾಗಿ ಹೇಳಬರುವದಿಲ್ಲ."

ರಾಮಾಶಾಸ್ತ್ರಿಗಳು ಮತ್ತೊಂದು ದೀರ್ಘವಾದ ಉಸಿರೆಳೆದರು.

"ದೇವರ ಮುಂದೆ ಸಾಲುದೀಪಗಳನ್ನು ಹಚ್ಚಿದೆಯಾ?"

"ಹೂಂ!"

"ಮಕ್ಕಳ ವಿಾಸಲದ ತುಪ್ಪದ ದೀವಿಗೆಗಳಿಗೆ ಈ ದಿನ ಇನ್ನಷ್ಟು ತುಪ್ಪ ಹಾಕು. ಅವು ಜಗ್ಗನೆ ಬೆಳಗಲಿ."

"ಅದೇತಕ್ಕೆ ಹೀಗೆ ಮಾತನಾಡುತ್ತಿದ್ದೀರಿ."

"ಹೇಳಿದಷ್ಟು ಕೇಳು ನಾರಾಯಣಿ!"

ಸೀತಮ್ಮನವರಿಗೆ ಪತಿಯ ಕಳವಳದ ಅರ್ಥವಾಗದಾಯಿತು. ಅವರು ಎಲ್ಲ ಕಡೆಗೂ ದೀಪಗಳುರಿಯುವಂತೆ ನೋಡಿ ಬಂದು "ಎಲ್ಲ ದೀಪಗಳೂ ಉರಿಯುತ್ತಿವೆ" ಎಂದು ಹೇಳಿದರು.

"ಈ ದೀಪಗಳು ಹೀಗೆ ಉರಿಯಬೇಕು. ರಾಷ್ಟ್ರೋದಯದ ನಂದಾದೀಪಗಳಿವು."

ದಂಪತಿಗಳಿಬ್ಬರೂ ಆ ರಾತ್ರಿ ಊಟ ಮಾಡಲಿಲ್ಲ. ಸುಂದರಾ ಒಬ್ಬಳು ಮಾತ್ರ ಬಾಯಿಮುಸುರೆ ಮಾಡಿದಳು. ಅವಳು ದಾಕ್ಷಿಣ್ಯಕ್ಕಾಗಿ ಹಾಗೆ ಮಾಡಿದಳೇ ಹೊರತು ಹಸಿವೆಯಿಂದಲ್ಲ. ಅನಿರೀಕ್ಷಿತವಾದ ದುಗುಡವು ಮನೆಯಲ್ಲಿ ವ್ಯಾಪಿಸಿ ನಿಂತಾಗ ಅವಳ ಗಂಟಲಲ್ಲಿ ತುತ್ತಾದರೂ ಹೇಗೆ ಇಳಿದೀತು?

ಏತಕ್ಕೆ ಈ ದುಗುಡ?

ಏತಕ್ಕೆ ಈ ಸಂಕಟ?

ದಂಪತಿಗಳು ಈ ಪ್ರಶ್ನೆಯನ್ನು ತಾವೇ ಹಾಕಿಕೊಳ್ಳುತ್ತಿದ್ದರು.

ರಾತ್ರಿ ಸರಿಯುತೊಡಗಿದಂತೆ ಈ ಜೀವಿಗಳಿಂದ ನಿದ್ರೆಯೂ ದೂರ ಹೋಗತೊಡಗಿತೇನೊ ?

"ಈ ಅಪರಾತ್ರಿಯಲ್ಲಿ ದೇವರ ಮನೆಯಲ್ಲಿ ಏನು ಮಾಡುತ್ತೀ ?"

"ದೀಪ ಶಾಂತವಾಗತೊಡಗಿದ್ದವು........"

"ಅವಕ್ಕೆ ಇನ್ನಷ್ಟು ತುಪ್ಪ ಹಾಕು."

"ಅದನ್ನೇ ಮಾಡಲು ಬಂದಿದ್ದೇನೆ."

ರಾಮಾಶಾಸ್ತ್ರಿಗಳು ದೇವರ ಮನೆಗೆ ಹೋಗಿ ನೋಡುವಾಗ ಸೀತಮ್ಮನವರು ತಲೆಯ ಮೇಲೆ ಕೈಹೊತ್ತುಕೊಂಡು ದೇವರ ಮುಂದೆ ಸ್ವಸ್ಥವಾಗಿ ಕುಳಿತುಬಿಟ್ಟಿದ್ದರು. ಅವರ ಕಣ್ಣುಗಳೊಳಗಿಂದ ಹರಿದ ನೀರು ಗುರುತಾಗಿ ನಿಂತಿದ್ದವು.

"ನಿನಗೇನಾಗಿದೆಯೇ ಈ ಹೊತ್ತು ?"

ಸೀತಮ್ಮನವರು ಬಾಷ್ಪಲೋಚನರಾಗಿ ಹೇಳಿದರು,

"ಏನೋ ಸಂಕಟ! ಯಾವುದೋ ದುಗುಡ!"

"ಹುಚ್ಚಿಯ ಹಾಗೆ ಮಾಡಬೇಡ. ಇಲ್ಲದ ಚಿಂತೆಯನ್ನು ಹೊತ್ತುಕೊಂಡು ಸುಮ್ಮನೆ ಕೊರಗುತ್ತೀ. ನಿನ್ನ ಮಕ್ಕಳಿಗಾಗಿ ಚಿಂತೆಯೆ ? ರಾತ್ರಿ ಏರತೊಡಗಿದೆ. ಮಲಗು ಹೋಗು" ಎಂದು ರಾಮಾಶಾಸ್ತ್ರಿಗಳು ಹೊರಗೆ ಬಂದರು. ತಮಗೇಕೆ ನಿದ್ರೆ ಬರಲೊಲ್ಲದು. ತಮಗೂ ಏತಕ್ಕೆ ಈ ದುಗುಡ ಎಂಬ ಪ್ರಶ್ನೆ ಅವರ ಅಂತರಂಗವನ್ನೂ ಕೊರೆಯುತೊಡಗಿತು.

"ನಿದ್ರೆ ಹತ್ತಲೊಲ್ಲದೆ ಮಗಳೆ ?"

"ಹೊಸ ಸ್ಥಳವೆಂದು ಹೀಗಾಗಿರಬಹುದು. ನೀವೂ ಮಲಗಿಲ್ಲವಲ್ಲ ?"

"ಪಾನಕವನ್ನು ಕುಡಿದರೆ ಸಂಕಟವು ಶಾಂತವಾಗುತ್ತದೆಯೆಂದು ಹೇಳಿದ್ದೆಯಲ್ಲ ಸುಂದರಾ ? ಸ್ವಲ್ಪ ಪಾನಕವನ್ನು ಮಾಡಿಕೊಡುವಿಯಾ ಮಗಳೆ ?"

ಆ ವೇಳೆಗೆ ಮಧ್ಯರಾತ್ರಿಯಾಗಿಬಿಟ್ಟಿತ್ತು. ಗಂಗನಹಳ್ಳಿ ಸ್ತಬ್ಧವಾಗಿತ್ತು. ದೂರದಲ್ಲಿ ಬೊಗಳುತ್ತಿರುವ ನಾಯಿಯ ಸ್ವರವೊಂದು ಮಾತ್ರ ಆಗಾಗ ಆ ಗಭೀರ ನೀರವತೆಯನ್ನು ಭೇದಿಸುತ್ತಿತ್ತು.

ರಾಮಾಶಾಸ್ತ್ರಿಗಳ ಮಾತುಗಳನ್ನು ಕೇಳಿ ಸುಂದರಾ ಚಟಕ್ಕನೆ ಎದ್ದು ನಿಂತಳು. ಅವಳು ಏಳುವ ಹೊತ್ತಿಗೆ ಓಣಿಯಲ್ಲಿ ದುಡುದುಡು ಎಂದು ಓಡುವ ಹೆಜ್ಜೆಗಳ ಸಪ್ಪಳ ಕೇಳಿಸತೊಡಗಿತು. ಇಂತಹ ರಾತ್ರಿಯಲ್ಲಿ ಯಾರು ಓಡು

ತ್ತಿರಬಹುದು ಎಂದು ಇವರು ಯೋಚಿಸುತ್ತಿರುವಾಗಲೇ ಆ ಸಪ್ಪಳ ಈ ಮನೆಯ ಬಾಗಿಲಲ್ಲಿಯೇ ನಿಂತಿತು.

"ಬಾಗಿಲು ತೆಗೆಯಿರಿ" ಎಂಬ ಘೋರ ಸ್ವರದೊಡನೆ ಯಾರೋ ಧಡ ಧಡ ಬಾಗಿಲು ಬಡೆಯಹತ್ತಿದರು.

ರಾಮಾಶಾಸ್ತ್ರಿಗಳಿಗೆ ಯಾರೋ ಎದೆಯ ಮೇಲೆ 'ಧಡ್' ಎಂದು ಬಡಿದಂತಾಯಿತು. ಅವರು ಒಂದೇ ನೆಗೆತದಿಂದ ಹಾರಿ ಬಾಗಿಲು ತೆರೆದರು. ಅದೊಂದು ಘೋರ ದೃಶ್ಯ !

ನೆತ್ತರು ಮುಳುಗಿದ ವಾಸುದೇವನನ್ನು ಹೊತ್ತುಕೊಂಡು ಹತ್ತೆಂಟು ಜನರು ಒಳನುಗ್ಗಿದರು. ಅವರ ಮೌನ ಹೃದಯವಿದ್ರಾವಕವಾಗಿತ್ತು.

"ಏನಾಗಿದೆ ವಾಸುದೇವನಿಗೆ ?" ಶಾಸ್ತ್ರಿಗಳು ಚಿಟ್ಟನೆ ಚೀರಿದರು.

ದೇವರ ಮನೆಯಲ್ಲಿ ಕುಳಿತ ಸೀತಮ್ಮನವರು ಪತಿಯ ಚೀತ್ಕಾರವನ್ನು ಕೇಳಿ ಕುಳಿತಲ್ಲಿಯೇ ಧೊಪ್ಪನೆ ಬಿದ್ದು ಬಿಟ್ಟರು.

"ಮೋಸವಾಗಿ ಹೋಯಿತು ಮಾಸ್ತರರೆ! ಅನ್ಯಾಯವಾಗಿಬಿಟ್ಟಿತು !" ಅದು ಗೌಡನ ಆಕ್ರಂದನ.

"ನಮಗರಿಯದಂತೆ ಗುಂಡು ಬಂದಿತು" ಎಂಬ ಸ್ವರ ಗೋವಿಂದನ ರೋದನಸ್ವರವಾಗಿತ್ತು.

ತೊಡೆಯ ಮೇಲೆ ವಾಸುದೇವನನ್ನು ಮಲಗಿಸಿಕೊಂಡ ರಾಮಾಶಾಸ್ತ್ರಿಗಳ ಕಿವಿಗಳಿಗೆ ಯಾವ ದನಿಯೂ ಕೇಳುತ್ತಿರಲಿಲ್ಲ.

"ಅವ್ವಾ !" ಎನ್ನುತ್ತ ಜಯದೇವನು ಒಳಕ್ಕೆ ಧಾವಿಸಿದಾಗ ಸುಂದರಾ ಸೀತಮ್ಮನವರ ನೆತ್ತಿಗೆ ನೀರು ಬಡಿಯುತ್ತಿದ್ದಳು.

ಜಯದೇವನನ್ನು ನೋಡುತ್ತಲೇ ಸುಂದರಾ "ತಾಯಿಗೆ ಮೂರ್ಛೆ ಬಂದಿದೆ. ಸಾವಧಾನವಾಗಿರ್ರಿ" ಎನ್ನಲು

"ಸುಂದರಾ ! ಸುಂದರಾ! ಅಣ್ಣನನ್ನು ಉಳಿಸಿಕೊಳ್ಳುವದಾಗಲಿಲ್ಲ. ಕಪಟಿಗಳು ಗುಂಡೆಸೆದರು."

ಸುಂದರಾ ಮಾತನಾಡದಿರಲು ಸೂಚಿಸಿದಳು.

ಜಯದೇವನು ಬಾಯಿತೆರೆಗೆ ಬಂದ ಬಿಕ್ಕನ್ನು ಗಟ್ಟಿಯಾಗಿ ಹಿಡಿದನು.

ತುಸು ಹೊತ್ತಿನಲ್ಲಿ ಸೀತಮ್ಮನವರ ಮೂರ್ಛೆ ತಿಳಿಯಿತು. ಅವರು ಬಿರಬಿರನೆ ಸುತ್ತಲೂ ನೋಡತೊಡಗಿದರು. ಜಯದೇವನನ್ನು ಕಂಡು "ಅಣ್ಣ ಬಂದನೇ ಜಯಾ !" ಎಂದು ಕ್ಷೀಣಸ್ವರದಲ್ಲಿ ಕೇಳಿದರು.

"ಅವ್ವಾ ! ಅವ್ವಾ !"

“ವಾಸುದೇವನು ನರಳುತ್ತಾನಲ್ಲೋ ಜಯದೇವ!” ಎನ್ನುತ್ತ ಚಟ್ಟನೆ ಎದ್ದು ಕುಳಿತ ತಾಯಿ ಹೊರಗೆ ಧಾವಿಸಿದರು. ತಂದೆಯ ತೊಡೆಯ ಮೇಲೆ ಪವಡಿಸಿದ ಮಗನನ್ನೂ, ಅವನ ರಕ್ತಮುಳುಗಿದ ದೇಹವನ್ನೂ ಕಂಡು ಸೀತಮ್ಮ ಅಲ್ಲಿಯೇ ಕುಸಿದುಬಿಟ್ಟರು. ಸುಂದರಾ ಅವರನ್ನು ಗಟ್ಟಿಯಾಗಿ ಹಿಡಿಯದಿದ್ದರೆ ಅವರು ಧೊಪ್ಪನೆ ಬೀಳಬಹುದಾಗಿತ್ತು.

“ಅವ್ವಾ! ಅವ್ವಾ!”

“ಅವ್ವಾ! ಅಣ್ಣನು ಕರೆಯುತ್ತಾನೆ, ನೋಡೇ ಅವ್ವ!”

ಸೀತಮ್ಮನವರು ತಮ್ಮ ಸರ್ವಶಕ್ತಿಯನ್ನು ಕೇಂದ್ರೀಕರಿಸಿ ಮಗನ ಮುಖವನ್ನು ನೋಡಿದರು.

ವಾಸುದೇವನ ಕಣ್ಣುಗಳಲ್ಲಿ ಹನಿಯಾಡಿತು. ಸೀತಮ್ಮನವರ ಕೈ ಅವರಿಗೆ ತಿಳಿಯದಂತೆ ಆ ಹನಿಗಳನ್ನು ಒರೆಸಿತು.

ರಾಮಾಶಾಸ್ತ್ರಿಗಳು ಕಲ್ಲಿನಂತೆ ಕುಳಿತುಬಿಟ್ಟಿದ್ದರು.

“ತಾತ್ಯಾ!”

“ಮಗೂ!”

“ಅವ್ವ! ನೀನು ಕಣ್ಣೀರು ಹರಿಸಬಾರದು ತಾಯಿ! ವೀರಸ್ವರ್ಗವನ್ನೇರುತ್ತಿರುವ ಮಗನನ್ನು ವೀರಮಾತೆಯು ಪೂಮಾಲೆಗಳಿಂದ ಅಲಂಕರಿಸಿ ಕಳಿಸಬೇಕು ತಾಯಿ! ಕಣ್ಣೀರುಗಳ ಹನಿಗಳಿಂದ ಕಳಿಸಬಾರದು.”

ಸೀತಮ್ಮನವರು ಎದೆ ಕಲ್ಲುಮಾಡಿ ಮಗನ ಹೃದಯದ ಮೇಲೆ ಕೈಯಾಡಿಸತೊಡಗಿದರು.

“ನೀನು ಎಷ್ಟೆಂದರೂ ವೀರಮಾತೆ ನೋಡು. ತಾತ್ಯಾ! ಈ ರಾಷ್ಟ್ರಕಾರ್ಯವನ್ನು ಪೂರ್ಣಮಾಡುವದು ನನ್ನ ಹಣೆಯಬರಹದಲ್ಲಿರಲಿಲ್ಲ. ಹೀಗಾಗಿಹೋಯಿತು. ಇದರಿಂದ ನನಗೆ ವ್ಯಥೆಯಿಲ್ಲ. ನಾನು ಹಿಡಿದ ಪಂಜನ್ನು ಸಾವಿರ ಕೈಗಳು ಹಿಡಿದಾವು. ನನ್ನ ಜೀವ ನಂದಿಹೋದರೆ ಸಾವಿರ ಕಿಡಿಗಳು ಜನ್ಮ ತಾಳುವವು........”

ಜಯದೇವನ ಹೃದಯದ ಒಡ್ಡು ಒಡೆದುಬಿಟ್ಟಿತು.

“........ಹುಚ್ಚನಂತೆ ಅಳಬೇಕೆ ಜಯಾ! ನೀನು ಅತ್ತರೆ ಅವ್ವನನ್ನು ಸಂತೈಸುವವರಾರು? ನನ್ನ ಕಾರ್ಯವನ್ನು, ದೇಶದ ಕಾರ್ಯವನ್ನು ಮುಂದುವರಿಸುವವರಾರು? ಈ ರಣಯಜ್ಞದಲ್ಲಿ ಆಹುತಿಯಾದವರು ಧನ್ಯರು ಜಯಾ! ದೇಶದ ಶಕ್ತಿ ಈ ಆಹುತಿಗಳಿಂದ ಅಪಾರವಾಗಿ ಬೆಳೆಯುತ್ತಿದೆ. ಕಾರಣಿಕಪುರುಷನ ಸಂದೇಶವನ್ನು ಮರೆತೆಯಾ........?”

"ಅಣ್ಣಾ! ಅಣ್ಣಾ! ನಿನ್ನ ಆಜ್ಞೆ ನನಗೆ ಪವಿತ್ರವಾಗಿದೆ........"

"........ಹೀಗನ್ನು ಮುದ್ದು ತಮ್ಮ! ಓಹೋ! ಇದೇನು ಆಕಸ್ಮಿಕ ಯೋಗಾಯೋಗ! ಸುಂದರಾ ಬಂದಿದ್ದಾಳಲ್ಲ! ಬಾ ತಂಗಿ, ನಿನ್ನಿಂದ ನಮ್ಮ ಮನೆ, ದೇಶದ ಮನೆ ಬೆಳಗಬೇಕಾಗಿದೆ. ಈ ಭಾರತಪುತ್ರಿ ನಿನ್ನ ಸೊಸೆಯಾಗುವುದು ಸಂಭ್ರಮವಲ್ಲವೇ ಅವ್ವಾ!........" ಆ ವೇದನಾ ಪೂರ್ಣ ಮುಖದಲ್ಲಿ ಮುಗುಳುನಗೆಯು ಮಿಂಚು ಮೂಡಿತು.

"........ಎಲ್ಲಿ ಗೋವಿಂದ?....ಗೌಡರೆಲ್ಲಿ....? ಖಾದರಸಾಹೇಬರು ಇಲ್ಲಿಯೇ ಇರುವರಷ್ಟೆ!....ಬಂಧುಗಳೇ! ಎಂತಹ ಪ್ರಸಂಗದಲ್ಲಿಯೂ ಧೃತಿ ಗೆಡಬೇಡಿರಿ....ಹಳ್ಳಿಗಳನ್ನು ಕಡೆಗಣಿಸಬೇಡಿರಿ....ವಿಧಾಯಕ ವೃತ್ತಿ ಯನ್ನು ಮೈಗೂಡಿಸಿಕೊಳ್ಳಿರಿ....ಛೇ! ಇದೇನಿದು ಗೋವಿಂದ........ಚಿಕ್ಕ ಮಗುವಿನಂತೆ............"

"ವಾಸೂ!............"

"ಹಾಂ........ಅವ್ವಾ! ನಿನ್ನ ಪಾದಗಳನ್ನು ತಾ! ನೀನು ಭಾರತ ಮಾತೆಯಾಗಿರುವಿ .... ತಾತ್ಯಾ .... ಇದೇನಿದು? .... ನನ್ನ ಹಣೆಯ ಮೇಲೆ ನಿಮ್ಮ ಬಿಸಿ ಹನಿಗಳೆ?........ನನ್ನನ್ನು ರೂಪಿಸಿದ ಮಹಾ ದೇಶಭಕ್ತರು ನೀವು........ಅವ್ವಾ ...... ನೀನು ಒಬ್ಬ ಮಗನನ್ನು ಕಳೆದು ಕೊಂಡು............ಸಾವಿರ ಸಂತಾನಗಳನ್ನು ಪಡೆದಿ.... ...ನಿಮ್ಮ ಬಳ್ಳಿ ವಿಶ್ವೇಶ್ವರಭಟ್ಟರ ಬಳ್ಳಿ........ದೇಶದ ಹಂದರದ ಮೇಲೆ........ವ್ಯಾಪಿಸಿ ....ಅವ್ವಾ! ನಿನ್ನ ಕೈಯಿಂದ ನನಗೆ ನೀರು ಕುಡಿಸು........ಜಯಾ! ....ಸುಂದರಾ........ಹೀಗೆ ಬನ್ನಿರಿ........ಅವ್ವಾ, ಈ ಜೋಡಿ ಎಷ್ಟು ಸುಂದರವಾಗಿದೆ........ಹಾಂ........ಹಾಗೆ ಕೈ ಹಿಡಿಯಿರಿ........ತಾತ್ಯಾ.... ....ಅವರನ್ನು ಆಶೀರ್ವದಿಸಿರಿ........ಭಾರತದ ವೀರ ಸಂತಾನವಿದು........ ನಮ್ಮ ಮನೆಯ ಬೆಳಕು........ನಮ್ಮ ಹಬ್ಬುವ ಬಳ್ಳಿ........ಭಾರತಮಾತೆಗೆ ಜಯವಾಗಲಿ........"

ಅರುಣೋದಯದ ಪ್ರಶಾಂತ ಸಮಯದಲ್ಲಿ ಸೀತಮ್ಮನವರ ಆಕ್ರಂದನ ಗಂಗನಹಳ್ಳಿಯ ಹೃದಯವನ್ನೇ ಭೇದಿಸಿತು. ಹಳ್ಳಿಗೆ ಹಳ್ಳಿಯೇ ಅಲ್ಲಿ ಬಂದು ನಿಂತಿತು.

"ಶವಸಂಸ್ಕಾರವು ಬೇಗನೆ ಆಗಬೇಕು ಗೌಡರೆ! ಪೋಲೀಸರು ಬಂದರೆ ತಡೆಯುಂಟಾಗಿ ಅನರ್ಥವಾದೀತು." ಕೂಡಿದವರಲ್ಲಿ ಒಬ್ಬ ಕಣ್ಣೀರಿನ ಕೋಡಿ ಹರಿಯಿಸುತ್ತ ಹೇಳಿದ.

"ಈ ಪುಣ್ಯದೇಹದ ಸಂಸ್ಕಾರವು ಸಾವಧಾನದಿಂದಲೇ ಸಾಗಲಿ. ಪ್ರೋಲೀಸರು ಬಂದು ಇನ್ನೇನು ಮಾಡಬೇಕಾಗಿದೆ ? ಈ ಶವವನ್ನು ಕಸಿದು ಕೊಂಡು ಹೋದಾರೆಂದು ಹೆದರಿಕೆಯೇ ? ಒಂದು ಶವವನ್ನುಕಸಿದುಕೊಂಡರೆ ಸಾವಿರ ಶವಗಳನ್ನು ಪ್ರೇತಭೂಮಿಗೆ ಕಳಿಸಬೇಕಾದೀತು ! ಈ ಮಾತು ಅವರಿಗೆ ಗೊತ್ತಿದೆ. ಅವರು ಹುಚ್ಚರಲ್ಲ. ಎಲ್ಲವೂ ಸಾವಧಾನದಿಂದ ಸಾಗಲಿ." ಗೌಡರು ಸ್ಪಷ್ಟವಾಗಿ ಹೇಳಿದರು.

ಸೂರ್ಯೋದಯವಾಯಿತು. ಹಕ್ಕಿಪಕ್ಕಿಗಳು ಚಿಲಿಪಿಲಿಗೊಡಹತ್ತಿದವು. ನಭೋಮಂಡಲದಿಂದ ತೂರಿಬಂದ ಭಾನುದೇವರ ಸಹಸ್ರ ಕಿರಣಗಳು ಅದೇ ಚಿತೆಯನ್ನೇರಿದ ರಾಷ್ಟ್ರವೀರನ ಕಳೇಬರವನ್ನು ಬೆಳಗತೊಡಗಿದವು.

ಚಿತೆಯ ಬೆಳಕು ಬಳ್ಳಿಯನ್ನು ಹಬ್ಬಿಸಿತು.

ಹಬ್ಬಿದ ಬಳ್ಳಿ ಹೂ ಬಿಟ್ಟಿತು.

ಜೈ ಹಿಂದ್ ! ಜೈ ಭಾರತ !

ರೂ. 2.75